
ಭಾರತೀಯ ಸಂಸ್ಕೃತಿ ಸರ್ವಸ್ವಕೋಶ-ಯೋಜನೆ



ಕಲ್ಪತರು ಸಂಶೋಧನಾ ಪ್ರತಿಷ್ಠಾನದ ಪ್ರಕಟಣೆ

ನಿರ್ದೇಶಕರು ಮತ್ತು ಪ್ರಧಾನ ಸಂಪಾದಕರು : ಕುಡಿನಲ್ಲಿ ನರಸಿಂಹ ಸೋಮಯಾಜಿ ದೈವಜ್ಞ

ಮುಮ್ಮಡಿ ಕೃಷ್ಣರಾಜ ವಡೆಯರ

ಶ್ರೀ ತತ್ವನಿಧಿ

(ಸಮಗ್ರ ವಿವೇಚನೆ)



ಸಾ. ಕೃ. ರಾಮಚಂದ್ರರಾವ್

ಕಲ್ಪತರು ಸಂಶೋಧನಾ ಪ್ರತಿಷ್ಠಾನ

(ಶ್ರೀ ಶೃಂಗೇರಿ ಶಾರದಾ ಪೀಠದ ಅಂಗಸಂಸ್ಥೆ)

ನಂ. 1, ಶಂಕರಮಠ, ಶಂಕರಪುರಂ,


ಬೆಂಗಳೂರು-560 004 ದೂರವಾಣಿ : 624847

ಮುಮ್ಮಡಿ ಕೃಷ್ಣರಾಜ ವಡೆಯರ

ಶ್ರೀ ತತ್ವನಿಧಿ

(ಸಮಗ್ರ ವಿವೇಚನೆ)

ಭಾರತೀಯ ಸಂಸ್ಕೃತಿ ಸರ್ವಸ್ವಕೋಶ-ಯೋಜನೆ



ಕಲ್ಪತರು ಸಂಶೋಧನಾ ಪ್ರತಿಷ್ಠಾನದ ಪ್ರಕಟಣೆ

ನಿರ್ದೇಶಕರು ಮತ್ತು ಪ್ರಧಾನ ಸಂಪಾದಕರು : ಕುಡಿನಲ್ಲಿ ನರಸಿಂಹ ಸೋಮಯಾಜಿ ದೈವಜ್ಞ

ಮುಮ್ಮಡಿ ಕೃಷ್ಣರಾಜ ವಡೆಯರ

ಶ್ರೀ ತತ್ವನಿಧಿ

(ಸಮಗ್ರ ವಿವೇಚನೆ)

ಸಾ. ಕೃ. ರಾಮಚಂದ್ರರಾವ್

ಕಲ್ಪತರು ಸಂಶೋಧನಾ ಪ್ರತಿಷ್ಠಾನ

(ಶ್ರೀ ಶೃಂಗೇರಿ ಶಾರದಾ ಪೀಠದ ಅಂಗಸಂಸ್ಥೆ)

ನಂ. 1, ಶಂಕರಮಠ, ಶಂಕರಪುರಂ,

ಬೆಂಗಳೂರು-560 004 ದೂರವಾಣಿ : 624847

SRI-TATTVA-NIDHI OF KRISHNARAJA WODEYAR III, by Vidyalankara, Sastra-Chudamani, Sangita Kalaratna, Prof. S.K. Ramachandra Rao, and Published by Daivajna K.N. Somayaji, Chief Editor and Director, Kalpatharu Research Academy, No. 1, Shankarmutt, Shankarapuram, Bangalore- 560 004, Phone: 624847

Published with the generous Financial Assistance from the Ministry of Human Resources Development, Department of Education, Govt. of India, New Delhi, and Dept. of Education, Govt. of Karnataka, Bangalore.

© **First Edition:** 1998 Kalpatharu Research Academy

Price: Rupees Two Hundred Only (Subsidized)

The Publications of Kalpatharu Research Academy are meant to reach all sections of the society, and hence are sold at highly subsidized prices. An appeal is hereby made to Booksellers to adhere to the price indicated in each volume by the Publishers and not to enhance them on any account.

UBS PUBLISHERS DISTRIBUTORS LIMITED

No. 10, Ist Main Road, Gandhinagar,
P.B. No. 9713, Bangalore - 560 009
Phones : 2263901, 2263902, 2253903, 2263904
Branches : New Delhi - Bombay - Bangalore - Chennai - Patna - Calcutta
Kanpur - London

Printed by : **P.S. Venkatesh Babu**
Omkar Offset Printers, N.T. Pet, Bangalore - 560 002,
Telefax : 6709026, 6708186, e-mail: omkar@blr.vsnl.net.in

ಪ್ರಕಾಶಕರ ಮುನ್ನುಡಿ

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ 'ಶ್ರೀ ತತ್ವನಿಧಿ' ಯೆಂಬುದೊಂದು ವಿಶಿಷ್ಟವಾದ ಗ್ರಂಥ. ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ಮುಮ್ಮಡಿ ಕೃಷ್ಣರಾಜ ವಡೆಯರು ರಚಿಸಿರುವ ಈ ಗ್ರಂಥವು ವಿಶ್ವಕೋಶದಂತಿದೆ. ಭಾರತದ ಯಾವ ಭಾಷೆಯಲ್ಲೂ ಇಂಥ ಇನ್ನೊಂದು ಗ್ರಂಥ ಇದ್ದಂತೆ ತೋರುವುದಿಲ್ಲ. ಭಾರತೀಯ ಸಂಸ್ಕೃತಿಗೆ ಮೂಲಾಧಾರವೆಂಬಂಥ ವಿವರಗಳನ್ನೆಲ್ಲಾ ಇಲ್ಲಿ ಸಂಕಲನ ಮಾಡಿದ್ದಾರೆ. ಇಂಥದೊಂದು ಅಪೂರ್ವವಾದ ಗ್ರಂಥದ ಪ್ರಕಟಣೆಯನ್ನು ಈವರೆಗೆ ಯಾವ ಸಂಸ್ಥೆಯೂ ಕೈಗೊಳ್ಳದಿರುವುದು ಶೋಚನೀಯ. ಕಲ್ಪತರು ಸಂಶೋಧನಾ ಪ್ರತಿಷ್ಠಾನವು ಇದನ್ನು ಹೊರತರಲು ನಿರ್ಧರಿಸಿ, ಇದನ್ನು ಸಂಪಾದಿಸಿ ಕೊಡಲು ಸುಪ್ರಸಿದ್ಧವಿದ್ವಾಂಸರಾದ ವಿದ್ಯಾಲಂಕಾರ, ಶಾಸ್ತ್ರಚೂಡಾಮಣಿ, ಸಂಗೀತಕಲಾರತ್ನ, ವೇದಾಂತನಿಧಿ, ಪ್ರೊ।। ಎಸ್.ಕೆ. ರಾಮಚಂದ್ರರಾಯರನ್ನು ಪ್ರಾರ್ಥಿಸಲು, ಅವರು ಸಮ್ಮತಿಸಿ ಇದನ್ನು ಸಿದ್ಧಪಡಿಸಿಕೊಟ್ಟು ಉಪಕರಿಸಿದ್ದಾರೆ. ಅವರ ಬಳಿಯೇ ಈ ಗ್ರಂಥದ ಹಸ್ತಪ್ರತಿಯೊಂದು ಇದ್ದದು ನಾವು ಅವರನ್ನು ಕೇಳಿಕೊಳ್ಳಲು ಕಾರಣವಾಯಿತು.

ಈ ವರೆಗೆ ಹಲವಾರು ಉಪಯುಕ್ತ ಗ್ರಂಥಗಳನ್ನು, ಕಲ್ಪತರು ಸಂಶೋಧನಾ ಪ್ರತಿಷ್ಠಾನವು ಪ್ರಕಟಿಸಿ, ಭಾರತೀಯ ಸಂಸ್ಕೃತಿಗೆ ಸಂಬಂಧಪಟ್ಟಂತೆ ವಿಶಿಷ್ಟವಾದ ಕೊಡುಗೆಯನ್ನು ನೀಡಿದೆ. ಈಚೆಗೆ ಬಾರತೀಯ ಸಂಸ್ಕೃತಿಯ ಸಮಗ್ರವಾದ, ಪ್ರಾಮಾಣಿಕವಾದ, ವಸ್ತುನಿಷ್ಠವಾದ ಸಂಪುಟಗಳನ್ನು ಹೊರತರಲು ನಿರ್ಧರಿಸಲಾಗಿದೆ. ಈ ಮಾಲಿಕೆಯಲ್ಲಿ ಈಗಾಗಲೆ ದೇವಾಲಯಗಳ ಸಂಪ್ರದಾಯವನ್ನು ಕುರಿತಂತೆ ಒಂದು ಉದ್ಗ್ರಂಥ ಪ್ರಕಟವಾಗಿದೆ. ಋಗ್ವೇದವನ್ನು ಸಾಂಪ್ರಾದಾಯಿಕ ನೆಲೆಯಲ್ಲಿ ಭಾಷ್ಯಗಳೊಂದಿಗೆ ಹಲವಾರು ಸಂಪುಟಗಳಲ್ಲಿ ಪ್ರಕಟಿಸಲು ಯೋಜಿಸಲಾಗಿದೆ. ಇವೆಲ್ಲ ಗ್ರಂಥಗಳೂ ಇಂಗ್ಲೀಷ್ ಭಾಷೆಯಲ್ಲೇ ಇವೆ. ಕನ್ನಡದಲ್ಲಿಯೂ ಭಾರತೀಯ ಸಂಸ್ಕೃತಿ-ಸರ್ವಸ್ವಕೋಶದ ಕೆಲವು ಗ್ರಂಥಗಳನ್ನು ಪ್ರಕಟಿಸಬೇಕೆಂದು ಯೋಜನೆಯಿದೆ. ಶ್ರೀ ತತ್ವನಿಧಿಯ ಸಂಪುಟ ಇದಕ್ಕೆ ನಾಂದಿಯಾಗಿದೆ. ಇದನ್ನು ಇಂಗ್ಲೀಷಿನಲ್ಲಿಯೂ ಇಷ್ಟರಲ್ಲೇ ಹೊರತರಲಾಗುತ್ತದೆ.

ಈ ಗ್ರಂಥವನ್ನು ಸಂಶೋಧಿಸಿ ಪ್ರಕಟಿಸಲು ನಮಗೆ ಪ್ರೇರೇಪಿಸಿ, ಅನುಗ್ರಹಿಸಿ, ಆಶೀರ್ವದಿಸಿದ, ಜಗದ್ಗುರುಗಳು, ಶೃಂಗೇರಿ ಶ್ರೀ ಶಾರದಾ ಪೀಠಾಧಿಪತಿಗಳು, ನಮ್ಮ ಸಂಸ್ಥೆಯ ಮಹಾಪೋಷಕರು, ಆಶ್ರಯದಾತರು ಆದ ಪರಮ ಪೂಜ್ಯ ಶ್ರೀ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ ಪಾದಕಮಲಗಳಿಗೆ ನಮ್ಮ ಹೃತ್ಪೂರ್ವಕ ನಮಸ್ಕಾರಗಳು. ನಮ್ಮ ಸಂಸ್ಥೆಯ ಸಕಲಕಾರ್ಯಗಳಿಗೆ ಸದಾ ಸಹಕಾರ ಕೊಡುತ್ತಿರುವ ನಮ್ಮ ಸಂಸ್ಥೆಯ ಅಧ್ಯಕ್ಷರು, ಹಾಗೂ ಶ್ರೀ ಮಠದ ಆಡಳಿತಾಧಿಕಾರಿಗಳಾದ ಶ್ರೀ ವಿ.ಆರ್. ಗೌರಿಶಂಕರ್‌ರವರಿಗೆ ನಮ್ಮ ಅಭಿಮಾನಪೂರ್ವಕ ಧನ್ಯವಾದಗಳು. ಮತ್ತು ಈ ಗ್ರಂಥವನ್ನು ಸಿದ್ಧಪಡಿಸಿಕೊಟ್ಟಿದ್ದಾಕ್ಕಾಗಿ ಪ್ರೊ।। ಎಸ್.ಕೆ. ರಾಮಚಂದ್ರರಾಯರಿಗೆ ನಾವು ಅಭಾರಿಗಳಾಗಿದ್ದೇವೆ. ಈ ಪ್ರಕಟಣೆಗೆ ನೆರವಾದ ಕರ್ನಾಟಕ ಸರ್ಕಾರ ಹಾಗೂ ಭಾರತ ಸರ್ಕಾರಕ್ಕೆ ನಾವು ಕೃತಜ್ಞರಾಗಿದ್ದೇವೆ. ಇದನ್ನು ಆಸ್ಥೆಯಿಂದಲೂ ಶ್ರದ್ಧೆಯಿಂದಲೂ ಮುದ್ರಿಸಿಕೊಟ್ಟ ಓಂಕಾರ್ ಮುದ್ರಣ ಸಂಸ್ಥೆಗೆ ಋಣಿಗಳಾಗಿದ್ದೇವೆ.

ಬೆಂಗಳೂರು
14ನೇ ಜನವರಿ 1998
ಮಕರ ಸಂಕ್ರಾಂತಿ

ದೈವಜ್ಞ ಕೆ.ಎನ್. ಸೋಮಯಾಜಿ
ನಿರ್ದೇಶಕರು ಮತ್ತು ಪ್ರಧಾನ ಸಂಪಾದಕರು
ಕಲ್ಪತರು ಸಂಶೋಧನಾ ಪ್ರತಿಷ್ಠಾನ

ಪ್ರಕಾಶಕರ ಮುನ್ನುಡಿ

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ 'ಶ್ರೀ ತತ್ವನಿಧಿ' ಯೆಂಬುದೊಂದು ವಿಶಿಷ್ಟವಾದ ಗ್ರಂಥ. ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ಮುಮ್ಮಡಿ ಕೃಷ್ಣರಾಜ ವಡೆಯರು ರಚಿಸಿರುವ ಈ ಗ್ರಂಥವು ವಿಶ್ವಕೋಶದಂತಿದೆ. ಭಾರತದ ಯಾವ ಭಾಷೆಯಲ್ಲೂ ಇಂಥ ಇನ್ನೊಂದು ಗ್ರಂಥ ಇದ್ದಂತೆ ತೋರುವುದಿಲ್ಲ. ಭಾರತೀಯ ಸಂಸ್ಕೃತಿಗೆ ಮೂಲಾಧಾರವೆಂಬಂಥ ವಿವರಗಳನ್ನೆಲ್ಲಾ ಇಲ್ಲಿ ಸಂಕಲನ ಮಾಡಿದ್ದಾರೆ. ಇಂಥದೊಂದು ಅಪೂರ್ವವಾದ ಗ್ರಂಥದ ಪ್ರಕಟಣೆಯನ್ನು ಈವರೆಗೆ ಯಾವ ಸಂಸ್ಥೆಯೂ ಕೈಗೊಳ್ಳದಿರುವುದು ಶೋಚನೀಯ. ಕಲ್ಪತರು ಸಂಶೋಧನಾ ಪ್ರತಿಷ್ಠಾನವು ಇದನ್ನು ಹೊರತರಲು ನಿರ್ಧರಿಸಿ, ಇದನ್ನು ಸಂಪಾದಿಸಿ ಕೊಡಲು ಸುಪ್ರಸಿದ್ಧವಿದ್ವಾಂಸರಾದ ವಿದ್ಯಾಲಂಕಾರ, ಶಾಸ್ತ್ರಚೂಡಾಮಣಿ, ಸಂಗೀತಕಲಾರತ್ನ, ವೇದಾಂತನಿಧಿ, ಪ್ರೊ॥ ಎಸ್.ಕೆ. ರಾಮಚಂದ್ರರಾಯರನ್ನು ಪ್ರಾರ್ಥಿಸಲು, ಅವರು ಸಮ್ಮತಿಸಿ ಇದನ್ನು ಸಿದ್ಧಪಡಿಸಿಕೊಟ್ಟು ಉಪಕರಿಸಿದ್ದಾರೆ. ಅವರ ಬಳಿಯೇ ಈ ಗ್ರಂಥದ ಹಸ್ತಪ್ರತಿಯೊಂದು ಇದ್ದದು ನಾವು ಅವರನ್ನು ಕೇಳಿಕೊಳ್ಳಲು ಕಾರಣವಾಯಿತು.

ಈ ವರೆಗೆ ಹಲವಾರು ಉಪಯುಕ್ತ ಗ್ರಂಥಗಳನ್ನು, ಕಲ್ಪತರು ಸಂಶೋಧನಾ ಪ್ರತಿಷ್ಠಾನವು ಪ್ರಕಟಿಸಿ, ಭಾರತೀಯ ಸಂಸ್ಕೃತಿಗೆ ಸಂಬಂಧಪಟ್ಟಂತೆ ವಿಶಿಷ್ಟವಾದ ಕೊಡುಗೆಯನ್ನು ನೀಡಿದೆ. ಈಚೆಗೆ ಬಾರತೀಯ ಸಂಸ್ಕೃತಿಯ ಸಮಗ್ರವಾದ, ಪ್ರಾಮಾಣಿಕವಾದ, ವಸ್ತುನಿಷ್ಠವಾದ ಸಂಪುಟಗಳನ್ನು ಹೊರತರಲು ನಿರ್ಧರಿಸಲಾಗಿದೆ. ಈ ಮಾಲಿಕೆಯಲ್ಲಿ ಈಗಾಗಲೆ ದೇವಾಲಯಗಳ ಸಂಪ್ರದಾಯವನ್ನು ಕುರಿತಂತೆ ಒಂದು ಉದ್ಗ್ರಂಥ ಪ್ರಕಟವಾಗಿದೆ. ಋಗ್ವೇದವನ್ನು ಸಾಂಪ್ರಾದಾಯಿಕ ನೆಲೆಯಲ್ಲಿ ಭಾಷ್ಯಗಳೊಂದಿಗೆ ಹಲವಾರು ಸಂಪುಟಗಳಲ್ಲಿ ಪ್ರಕಟಿಸಲು ಯೋಜಿಸಲಾಗಿದೆ. ಇವೆಲ್ಲ ಗ್ರಂಥಗಳೂ ಇಂಗ್ಲೀಷ್ ಭಾಷೆಯಲ್ಲೇ ಇವೆ. ಕನ್ನಡದಲ್ಲಿಯೂ ಭಾರತೀಯ ಸಂಸ್ಕೃತಿ-ಸರ್ವಸ್ವಕೋಶದ ಕೆಲವು ಗ್ರಂಥಗಳನ್ನು ಪ್ರಕಟಿಸಬೇಕೆಂದು ಯೋಜನೆಯಿದೆ. ಶ್ರೀ ತತ್ವನಿಧಿಯ ಸಂಪುಟ ಇದಕ್ಕೆ ನಾಂದಿಯಾಗಿದೆ. ಇದನ್ನು ಇಂಗ್ಲೀಷಿನಲ್ಲಿಯೂ ಇಷ್ಟರಲ್ಲೇ ಹೊರತರಲಾಗುತ್ತದೆ.

ಈ ಗ್ರಂಥವನ್ನು ಸಂಶೋಧಿಸಿ ಪ್ರಕಟಿಸಲು ನಮಗೆ ಪ್ರೇರೇಪಿಸಿ, ಅನುಗ್ರಹಿಸಿ, ಆಶೀರ್ವದಿಸಿದ, ಜಗದ್ಗುರುಗಳು, ಶೃಂಗೇರಿ ಶ್ರೀ ಶಾರದಾ ಪೀಠಾಧಿಪತಿಗಳು, ನಮ್ಮ ಸಂಸ್ಥೆಯ ಮಹಾಪೋಷಕರು, ಆಶ್ರಯದಾತರು ಆದ ಪರಮ ಪೂಜ್ಯ ಶ್ರೀ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ ಪಾದಕಮಲಗಳಿಗೆ ನಮ್ಮ ಹೃತ್ಪೂರ್ವಕ ನಮಸ್ಕಾರಗಳು. ನಮ್ಮ ಸಂಸ್ಥೆಯ ಸಕಲಕಾರ್ಯಗಳಿಗೆ ಸದಾ ಸಹಕಾರ ಕೊಡುತ್ತಿರುವ ನಮ್ಮ ಸಂಸ್ಥೆಯ ಅಧ್ಯಕ್ಷರು, ಹಾಗೂ ಶ್ರೀ ಮಠದ ಆಡಳಿತಾಧಿಕಾರಿಗಳಾದ ಶ್ರೀ ವಿ.ಆರ್. ಗೌರಿಶಂಕರ್‌ರವರಿಗೆ ನಮ್ಮ ಅಭಿಮಾನಪೂರ್ವಕ ಧನ್ಯವಾದಗಳು. ಮತ್ತು ಈ ಗ್ರಂಥವನ್ನು ಸಿದ್ಧಪಡಿಸಿಕೊಟ್ಟಿದ್ದಾಕ್ಕಾಗಿ ಪ್ರೊ॥ ಎಸ್.ಕೆ. ರಾಮಚಂದ್ರರಾಯರಿಗೆ ನಾವು ಅಭಾರಿಗಳಾಗಿದ್ದೇವೆ. ಈ ಪ್ರಕಟಣೆಗೆ ನೆರವಾದ ಕರ್ನಾಟಕ ಸರ್ಕಾರ ಹಾಗೂ ಭಾರತ ಸರ್ಕಾರಕ್ಕೆ ನಾವು ಕೃತಜ್ಞರಾಗಿದ್ದೇವೆ. ಇದನ್ನು ಆಸ್ಥೆಯಿಂದಲೂ ಶ್ರದ್ಧೆಯಿಂದಲೂ ಮುದ್ರಿಸಿಕೊಟ್ಟ ಓಂಕಾರ್ ಮುದ್ರಣ ಸಂಸ್ಥೆಗೆ ಋಣಿಗಳಾಗಿದ್ದೇವೆ.

ಬೆಂಗಳೂರು
14ನೇ ಜನವರಿ 1998
ಮಕರ ಸಂಕ್ರಾಂತಿ

ದೈವಜ್ಞ ಕೆ.ಎನ್. ಸೋಮಯಾಜಿ
ನಿರ್ದೇಶಕರು ಮತ್ತು ಪ್ರಧಾನ ಸಂಪಾದಕರು
ಕಲ್ಪತರು ಸಂಶೋಧನಾ ಪ್ರತಿಷ್ಠಾನ

ಕಲ್ಪತರು ಸಂಶೋಧನಾ ಪ್ರತಿಷ್ಠಾನ

ಉದ್ದೇಶಗಳು

- ★ ವೇದ, ವೇದಾಂಗ, ಆಗಮ, ಜ್ಯೋತಿಷ, ವೇದಾಂತ, ಯೋಗ ಮತ್ತು ಆಯುರ್ವೇದ ಕ್ಷೇತ್ರಗಳಲ್ಲಿ ಅಧ್ಯಯನ.
- ★ ಸಂಸ್ಕೃತ ಭಾಷೆ ಮತ್ತಿತರ ಸಂಬಂಧಿತ ಭಾಷೆಗಳ ಅಧ್ಯಯನ.
- ★ ವೇದ ಶಿಕ್ಷಣ ಮತ್ತು ವೈದಿಕ ಪರಂಪರೆಯ ಪ್ರಚಾರ.
- ★ ಗುರುಕುಲ ಪದ್ಧತಿಯಲ್ಲಿ ವೇದಪಾಠಶಾಲೆಗಳ ಸ್ಥಾಪನೆ.
- ★ ಪ್ರಾಚ್ಯಗ್ರಂಥಾಲಯಗಳ ಸ್ಥಾಪನೆ.
- ★ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ, ರಕ್ಷಣೆ ಮತ್ತು ಪ್ರಕಟಣೆ.

ಸಂಪಾದಕರ ಮೊದಲ ಮಾತು

ಪ್ರಸ್ತುತ ಪ್ರಕಟಣೆಯ ವಸ್ತುವಾದ 'ಶ್ರೀ ತತ್ವನಿಧಿ' ಮೈಸೂರಿನ ಅರಸೊತ್ತಿಗೆಯಲ್ಲಿ ಪ್ರಸಿದ್ಧರಾದ ಆಳರಸರು, ಮಹಾರಾಜ ಮುಮ್ಮಡಿ ಕೃಷ್ಣರಾಜ ವಡೆಯರ (1794-1868) ಕೃತಿಗಳಲ್ಲಿ ಮುಖ್ಯವಾದುದು. ಖಾಸಾಚಾಮರಾಜ ವಡೆಯರ ಮಕ್ಕಳಾದ ಇವರು ಪಟ್ಟಕ್ಕೆ ಬಂದದು ಐದು ವರ್ಷಗಳ ಬಾಲ್ಯದಲ್ಲೇ. ಅವರ ಪರವಾಗಿ ಆಳತೊಡಗಿದವರು ಅವರಜ್ಜಿ ಲಕ್ಷ್ಮಮ್ಮಣ್ಣಿಯವರು (1747-1810). ಆಕೆ ತೀರಿಕೊಂಡ ನಂತರ ಮುಮ್ಮಡಿಯವರು ತಾವೇ ರಾಜ್ಯಭಾರವನ್ನು ವಹಿಸಿಕೊಂಡರು.

ಪೂರ್ಣಯ್ಯನವರಂಥ ಹಿರಿಯ, ನುರಿತ, ಜಾಣ ದಿವಾನರಿದ್ದರಾಗಿ ಆಡಳಿತ ಸುಸೂತ್ರವಾಗಿಯೇ ಸಾಗಿತು. ಮೈಸೂರು ಅರಸೊತ್ತಿಗೆಯ ನೆಲೆ ಮೊದಲು ಶ್ರೀರಂಗಪಟ್ಟಣದಲ್ಲಿದ್ದುದು ಮತ್ತೆ ಮೈಸೂರಿಗೆ ಸಂದಿತು. ಆದರೆ ಕೆಲವರ ಕಿರುಕುಳ ಹೆಚ್ಚಿ ಆಡಳಿತದಲ್ಲಿ ಅವ್ಯವಸ್ಥೆ ತಲೆದೋರಿಕೊಂಡು 1831ರ ಸುಮಾರಿಗೆ ಆಗ ಆಳರಸರಾಗಿದ್ದ ಆಂಗ್ಲ ಕಮಿಷನರುಗಳ ನೇರವಾದ ಆಳ್ವಿಕೆಗೆ ಸಂಸ್ಥಾನವು ಸೇರಿಕೊಳ್ಳಬೇಕಾಯಿತು. ಆಂಗ್ಲರು ಇವರಿಗೆ ಸಾಕಷ್ಟು ಆದಾಯವನ್ನು ಕಲ್ಪಿಸಿದರು. ಈ ಪರಭಾರೆ 1868ರವರೆಗೂ ನಡೆದುಬಂದು, ಮುಮ್ಮಡಿಯವರ ದತ್ತಕಪುತ್ರ ಚಾಮರಾಜ ವಡೆಯರಿಗೆ ಮರಳಿತು. ತಪ್ಪಿದ ಅಧಿಕಾರವನ್ನು ಮತ್ತೆ ಪಡೆದುಕೊಳ್ಳಲು ಮುಮ್ಮಡಿಯವರ ಎಡೆಬಿಡದ ಪ್ರಯತ್ನ ಕಡೆಗೂ ಫಲಿಸಿತು.

ತಮ್ಮ ಎಪ್ಪತ್ತುನಾಲ್ಕು ವರ್ಷಗಳಷ್ಟು ಸುದೀರ್ಘವಾದ ಬದುಕಿನಲ್ಲಿ ಅವರು ನೇರವಾಗಿ ಆಡಳಿತದ ಹೊಣೆಯನ್ನು ಹೊತ್ತದ್ದು ಎಂಟು ಹತ್ತು ವರ್ಷಗಳಷ್ಟು ಮಾತ್ರ. ಉಳಿದಂತೆ ತಮ್ಮ ಕಾಲವನ್ನು ವಿದ್ವಾಂಸರ ಸಹವಾಸದಲ್ಲಿ, ಧರ್ಮಕಾರ್ಯಗಳಲ್ಲಿ, ಪಂಡಿತರ ಪೋಷಣೆಯಲ್ಲಿ, ಸ್ವಂತ ಕೃತಿ ರಚನೆಯಲ್ಲಿ ಕಳೆದರು. ಅವರು ನಾಡಿಗೆ ಸಲ್ಲಿಸಿದ ಸೇವೆಯನ್ನು ಗುರುತಿಸಿ, ಭೂಷಾರತ್ನ, ದೇಶರತ್ನ, ಸೇವಾರತ್ನ, ದಾನರತ್ನ, ಪ್ರತಿಷ್ಠಾರತ್ನ, ಉಪಕಾರ ರತ್ನ, ಧರ್ಮರತ್ನ, ಕೀರ್ತಿರತ್ನ, ಸಾರಸ್ವತರತ್ನ, ಎಂಬ ನವರತ್ನ ಪ್ರಶಸ್ತಿಯನ್ನು ಮೈಸೂರಿನ ಪ್ರಸನ್ನಕೃಷ್ಣಸ್ವಾಮಿ ದೇವಾಲಯದ ಒಂದು ಶಿಲಾಶಾಸನ ಉಲ್ಲೇಖಿಸುತ್ತದೆ. ಅವರನ್ನು ಕುರಿತ 'ವಂಶಾವತರಣ ವೈಭವಗದ್ಯ'ವು ಮೇಲಣ ನವರತ್ನಗಳಲ್ಲೊಂದಾದ ಸಾರಸ್ವತರತ್ನವನ್ನು 'ಶ್ರೀ ತತ್ವನಿಧ್ಯಾದ್ಯನೇಕ ಗ್ರಂಥ ನಿರ್ಮಾಣ ಪ್ರಕಾಶಿತ ಸಕಲ ಶಾಸ್ತ್ರಾರ್ಥಪಾಂಡಿತ್ಯ ವೈಭವ' ಎಂದು ಸ್ಪಷ್ಟಪಡಿಸಿದೆ. ನಮಗೆ ದೊರೆತಿರುವ ಹಳೆಯದೊಂದು ಪಟ್ಟಿಯ (1916-1922) ಪ್ರಕಾರ ಅವರ ಮುಖ್ಯ ಬರಹಗಳು ಇವು :- ಶ್ರೀತತ್ವನಿಧಿ, ಗಣಿತ ಸಂಗ್ರಹ, ಸ್ವರಚೂಡಾಮಣಿ, ಸೌಗಂಧಿಕಾಪರಿಣಯ, ಸಂಖ್ಯಾರತ್ನಕೋಶ, ಶ್ರೀಕೃಷ್ಣ ಕಥಾಸಾರ ಸಂಗ್ರಹ, ನವಗ್ರಹ ಪೂಜಾಮಂಜರಿ, ಸೂರ್ಯಚಂದ್ರ ವಂಶಾವಳೀ, ಶ್ರೀ ಚಾಮುಂಡಾಂಬಿಕಾ ನಿಘಂಟು, ಮಹಾಕೋಶ ಸುಧಾಕರ, ಚತುರಂಗ ಸಾರಸರ್ವಸ್ವ, ದಶಾವಿಭಾಗ ಪದಕ, ದೇವತಾನಾಮ ಕುಸುಮಮಂಜರಿ ಮಹಾಸಂಕಲ್ಪ, ವಿಷ್ಣುನಾಮ ಪಂಚಶತಿ, ಸಂಖ್ಯಾಮಾಲೆ, ಶ್ರೀ ಚಾಮುಂಡೇಶ್ವರೀ ತ್ರಿಶತಿ, ಶ್ರೀಕಂಠೇಶ್ವರ ತ್ರಿಶತಿ, ಶ್ರೀ ಮಹಾವಿಷ್ಣು ತ್ರಿಶತಿ, ಗ್ರಹದರ್ಪಣ, ಅನೇಕ ಗದ್ಯಪದ್ಯಗಳು, ಕೆಲವು ಪುರಾತನ ನಾಟಕಗಳಿಗೂ ಕರ್ಣಾಟಕ ಭಾಷಾನುವಾದ, ನಂಜುಡ ಶತಕ, ದೇವೀಮಹಾತ್ಮೆ, ಶಂಕರ ಸಂಹಿತೆ.

ಇವುಗಳಲ್ಲಿ ಎಷ್ಟು ಉಪಲಬ್ಧವೋ ತಿಳಿಯದು. ನನ್ನ ಗಮನಕ್ಕೆ ಬಂದಿರುವುದು ಇವುಗಳಲ್ಲಿ ಹನ್ನೆರಡು ಅಷ್ಟೆ. ಅವರು ಅರಮನೆಗೆ ಸೇರಿದ ಅಂಬಾವಿಲಾಸದ ಮುದ್ರಾಕ್ಷರ ಶಾಲಾ ಶಿಲಾಯಂತ್ರದಲ್ಲಿ ತಮ್ಮ ಕೃತಿಗಳನ್ನು ಅಚ್ಚುಹಾಕಿಸಿ, ಆಸ್ಥಾನದ ಪಂಡಿತರಿಗೆ ಇತರ ಪ್ರಮುಖರಿಗೆ, ಅಧಿಕಾರಿಗಳಿಗೆ ಉಚಿತವಾಗಿ ಕೊಡಮಾಡುತ್ತಿದ್ದರು. ಮೇಲೆ ಕಾಣಿಸಿದ ಪುಸ್ತಕಗಳಲ್ಲದೆ ಹಲವಾರು ಯಂತ್ರಗಳನ್ನು ಅವರು ಹೀಗೆ ಪ್ರತಿಮಾಡಿಸಿ ಹಂಚುತ್ತಿದ್ದರಂತೆ. ಅಂತೂ ಅವರ ದಾನ ಬಹುಮುಖವಾದುದು. ಸಾಹಿತ್ಯ, ಸಂಗೀತ, ಗಣಿತ, ಜ್ಯೋತಿಷ, ಆಗಮ, ಮಂತ್ರಶಾಸ್ತ್ರ, ಚತುರಂಗ, ಗಂಜೀಫ ಮೊದಲಾದ ಆಟಗಳು, ಇವೆಲ್ಲವನ್ನು ಕುರಿತ ಅವರ ಬರಹಗಳಿವೆ. ಅವರ ಕಲಾಭಿರುಚಿಯಂತೂ ನಿರ್ವಿವಾದವಾದುದು. ತಾವೇ ಕಲಾರಸಿಕರು, ಹಲವಾರು ಕಲಾವಿದರಿಗೂ ಒತ್ತಾಸೆಯಾಗಿದ್ದರು. ಅವರು ಚಿತ್ರಕಲೆಯಲ್ಲಿ ವಿಸೇಷವಾದ ಆಸಕ್ತಿಯನ್ನು ತಳೆದಿದ್ದರು. ಅವರ ಓಲಗದಲ್ಲಿ ಜಾವಗಲ್ಲು ನರಸಿಂಹಯ್ಯ, ನಗೂನಳ್ಳಿ ನಾರಣಪ್ಪ, ಸುಂದರಯ್ಯ, ಯಲ್ಲಯ್ಯ, ದುರ್ಗದ ಕೃಷ್ಣಪ್ಪ, ಆಳಸಿಂಗ್ರಯ್ಯ, ವೀರಣ್ಣ, ನೆಲಮಂಗಲದ ರಂಗಪ್ಪ, ಗುರಿಕಾರ ತಿಪ್ಪಣ್ಣ, ತಂಜಾವೂರು ಕೊಂಡಯ್ಯ ಮೊದಲಾದ ಚಿತ್ರಕಾರರು ಮೆರೆದರು. ಮುಮ್ಮಡಿಯವರ ಕಾಲದಲ್ಲಿ ಇವರಿಂದ ಮೈದಳೆದ ಚಿತ್ರಗಳು ಒಂದು ಸಾವಿರದಷ್ಟು ಇವೆ. ಮುಮ್ಮಡಿಯವರ ಅನೇಕ

ಗ್ರಂಥಗಳಲ್ಲಿ ಇವರ ಕಲಾಕೃತಿಗಳನ್ನು ಕಾಣಬಹುದು. ಬಿಡಿಚಿತ್ರಗಳು ನೂರಾರು ಇವೆ. ದೇವಾಲಯಗಳಲ್ಲಿನ ಭಿತ್ತಿಚಿತ್ರಗಳಲ್ಲೂ ಅವರ ಕೈವಾಡವಿದ್ದಿತು.

ಶ್ರೀ ತತ್ವನಿಧಿಯಲ್ಲಿ ಚಿತ್ರಗಳದ್ದೇ ಸಿಂಹಪಾಲು. ಸೊಗಸಾದ ಕಿರುಚಿತ್ರಗಳು, ಗ್ರಂಥದ ವಿವರಗಳನ್ನು ಮೂರ್ತಿಮತ್ತಾಗಿ ಕಾಣಿಸಲು ನೆರವಾಗುತ್ತವೆ. ದೇವತಾ ಚಿತ್ರಗಳನ್ನು ಧ್ಯಾನಶ್ಲೋಕಗಳಿಗನುಸಾರವಾಗಿ ಬಿಡಿಸಿರುವುದು ಇಲ್ಲಿನ ಸ್ವಾರಸ್ಯ. ವಿಷಯ ವ್ಯಾಪ್ತಿ ಎಷ್ಟು ದೊಡ್ಡದೋ ಚಿತ್ರಗಳ ಸ್ವಾರಸ್ಯವೂ ಅಷ್ಟು ಹಿರಿದಾದುದು. ಈ ಕಲೆಯ ವಿಚಾರವಾಗಿ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದವರು 1992ರಲ್ಲಿ ಹೊರತಂದ ನನ್ನ 'ಮುಮ್ಮಡಿ ಕೃಷ್ಣರಾಜ ವಡೆಯರ ಶ್ರೀ ತತ್ವನಿಧಿ' (ಸಂಪುಟ 1) ಯಲ್ಲಿ ವಿಸ್ತಾರವಾಗಿ ವಿವೇಚನೆ ನಡೆದಿದೆ.

ದಿಟವಾಗಿ 'ಶ್ರೀ ತತ್ವನಿಧಿ' ಒಂದು ಅಪೂರ್ವವಾದ ಗ್ರಂಥ. ಮುಮ್ಮಡಿಯವರು ಅದರ ಎಷ್ಟು ಹಸ್ತಪ್ರತಿಗಳನ್ನು ಮಾಡಿಸಿದ್ದರೋ ತಿಳಿಯದು. ಒಂದು ಸಚಿತ್ರ ಹಸ್ತಪ್ರತಿಯನ್ನು ಮೂವತ್ತು ವರ್ಷಗಳಷ್ಟು ಹಿಂದೆ ನನ್ನ ಅಭಿಮಾನಿ ಹಿರಿಯರೂ ಆಗಮ ಪಂಡಿತರೂ ಆಗಿದ್ದ ತಲಕಾಡು ಕೃಷ್ಣ ದೀಕ್ಷಿತರ ಬಳಿಯಿದ್ದುದನ್ನು ನೋಡಿದ್ದೆ. ಅನಂತರ ಇನ್ನೊಂದು ಸಚಿತ್ರ ಪ್ರತಿಯನ್ನು ಮೈಸೂರಿನ ಓರಿಯೆಂಟಲ್ ರಿಸರ್ಚ್ ಇನ್ಸ್‌ಟಿಟ್ಯೂಟಿನಲ್ಲಿ ನೋಡಿದ್ದೆ. ತರವಾಯ ನನ್ನ ಮಾನ್ಯ ಮಿತ್ರರೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕಾರಿಗಳೂ ಆಗಿದ್ದ ಶ್ರೀ ಎಸ್. ಎನ್. ಸುಬ್ಬಣ್ಣನವರು ಮೂಲಮಾತೃಕೆಯಷ್ಟೆ ಇರುವ ಹಸ್ತಪ್ರತಿಯೊಂದನ್ನು ಕೃಪೆಮಾಡಿ ನನಗೆ ಕೊಟ್ಟರು. ಇದು ಅವರ ಹಿರಿಯರು ಮೈಸೂರು ಅರಮನೆಯ ಮೊಖ್ತೇಸರರಾಗಿದ್ದ ನಾಗಪ್ಪನವರ ಸಂಗ್ರಹ. ಅರಸರ ಆದೇಶದ ಮೇರೆಗೆ ಈ ಹಸ್ತ ಪ್ರತಿಯನ್ನು ಬರೆದವರು ನರಸಪ್ಪನಾಯ್ಕರ ಮಗ ರಂಗಪ್ಪನಾಯ್ಕರ ಇದರ ಮೊದಲ ಪುಟದಲ್ಲೆ, ''ಶ್ರೀ ಕೃಷ್ಣರಾಜ ಮಹಾರಾಜ ಕಂಠೀರವರ ಆಜ್ಞೆಯಿಂದ ನರಸಪ್ಪನಾಯ್ಕರ ಮಗ ರಂಗಪ್ಪನಾಯ್ಕ ಬರೆದ ಶ್ರೀ ತತ್ವನಿಧಿ ಪುಸ್ತಕ'' ಎಂಬ ಒಕ್ಕಣೆಯಿರುವುದನ್ನು ಕಾಣಬಹುದು.

ಈ ಗ್ರಂಥದ ಮತ್ತೊಂದು ಸಚಿತ್ರ ಹಸ್ತಪ್ರತಿಯನ್ನು ನಾನು ಕಂಡದ್ದು ಮೈಸೂರಿನ ಅರಮನೆಯಲ್ಲಿ, ಅರಸುಮಕ್ಕಳಾದ ಮತ್ತು ಅರಮನೆಯ ಇಂದಿನ ಯಜಮಾನರಾದ ಶ್ರೀ ಶ್ರೀಕಂಠದತ್ತ ನರಸಿಂಹರಾಜ ವಡೆಯರ ಸೌಜನ್ಯದಿಂದ ನಾನು ನೋಡಿರುವ ಹಸ್ತಪ್ರತಿಗಳಲ್ಲೆಲ್ಲ ಇದೇ ಉತ್ತಮವಾದುದು. ಬರಹ ಸುಂದರವಾಗಿದೆ. ಚಿತ್ರಗಳು ರಸವತ್ತಾಗಿವೆ. ವರ್ಣಗಳು ಮನೋಜ್ಞವಾಗಿವೆ. ಅಚ್ಚುಕಟ್ಟಾಗಿ ಕಾಪಿಟ್ಟುಕೊಂಡು ಬಂದಿದ್ದಾರೆ. ಮೈಸೂರಿನ ಓರಿಯಂಟಲ್ ರಿಸರ್ಚ್ ಇನ್ಸ್‌ಟಿಟ್ಯೂಟ್‌ನಲ್ಲಿರುವ ಹಸ್ತಪ್ರತಿಯಲ್ಲಿ ಬರಹವೇನೋ ಸೊಗಸಾಗಿದೆ. ಚಿತ್ರಗಳು ಕೊಂಚಮಟ್ಟಿಗೆ ಒರಟು ಎನ್ನಬಹುದು. ಇನ್ನು ಸಂರಕ್ಷಣೆಯ ದೃಷ್ಟಿಯಿಂದ ಕೊರತೆ ಎದ್ದು ಕಾಣುತ್ತದೆ. ಇದರ ಮೌಲ್ಯ ಅಲ್ಲಿನ ಅಧಿಕಾರಿಗಳಿಗಾಗಲಿ, ವಿಶ್ವವಿದ್ಯಾನಿಲಯಕ್ಕಾಗಲಿ ತಿಳಿದಿರುವಂತೆ ತೋರುವುದಿಲ್ಲ. ಅರ್ಧ ಇಂಪೀರಿಯಲ್ (ರಾಯಲ್) ಆಕಾರದ ಸುಮಾರು 1500 ಪುಟಗಳಿರುವ ಈ ಹಸ್ತಪ್ರತಿಯಲ್ಲಿ ಒಂದು ಸಾವಿರದಷ್ಟು ಕಿರುವರ್ಣಚಿತ್ರಗಳವರೆಗೂ ಇವೆ. ಇದನ್ನು ಮೂಲೆಗುಂಪಾಗಿ ಇರಿಸಿಕೊಂಡಿದ್ದಾರೆಂದರೆ ಸೋಜಿಗವೆನಿಸುತ್ತದೆ. ಈಗೇನೋ ಅದರ ಪ್ರಕಟಣೆಗೆ ತಯಾರಿಮಾಡಿಕೊಳ್ಳುತ್ತಿದ್ದಾರೆಂದು ಕೇಳಿದ್ದೇನೆ. ಬೇಗನೆ ಇಡೀ ಪುಸ್ತಕವು ಬೆಳಕು ಕಾಣುವಂತಾಗಲೆಂದು ಆಶಿಸುತ್ತೇನೆ. ಇಲ್ಲಿ ನಾನು ಬಳಸಿಕೊಂಡಿರುವುದು ನನ್ನ ಬಳಿಯಿರುವ ಹಸ್ತಪ್ರತಿಯನ್ನೆ. ಇದು ಮುಮ್ಮಡಿಯವರ ಕಾಲದಲ್ಲೆ, ಅವರ ಅಪ್ಪಣೆಯಿಂದಲೇ ಸಿದ್ದವಾದುದಾದರೂ ಇದರಲ್ಲಿ ಚಿತ್ರಗಳಿಲ್ಲ. ಮೈಸೂರಿನಲ್ಲಿ ನಾನು ನೋಡಿದ ಎರಡೂ ಹಸ್ತಪ್ರತಿಗಳು ಚಿತ್ರಕಾರರಿಂದಲೇ ಅಣಿಯಾದವು. ಅಲ್ಲಿನ ಮಾತೃಕೆಯು ಕೂಡ ಚಿತ್ರಗಾರರಿಂದಲೆ ಸಿದ್ಧವಾದುದು ಸ್ಪಷ್ಟವಾಗುತ್ತದೆ. ನನ್ನಲ್ಲಿರುವ ಮಾತೃಕೆಯನ್ನು ನೋಡಿದರೆ ಚಿತ್ರಗಾರರ ಕೈಗೆ ಈ ಗ್ರಂಥವನ್ನು ಒಪ್ಪಿಸಿವ ಮೊದಲೇ ಬರೆದುಕೊಂಡಿರುವಂತೆ ಕಾಣುತ್ತದೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕಾಗಿ ನಾನು ಈ ಗ್ರಂಥವನ್ನು ಸಂಪಾದಿಸಿಕೊಡಬೇಕೆಂದು ಹೊರಟಾಗ ಮೈಸೂರಿನ ಓರಿಯಂಟಲ್ ರಿಸರ್ಚ್ ಇನ್ಸ್‌ಟಿಟ್ಯೂಟಿನ ಕಡೆಯಿಂದ ಕೆಲವು ಚಿತ್ರಗಳನ್ನಾದರೂ ಪಡೆದುಕೊಳ್ಳುವ ಪ್ರಯತ್ನ ನಡೆಯಿತು. ಸಫಲತೆ ಕಾಣಲಿಲ್ಲ. ಯಾವ ಕಾರಣಕ್ಕೋ ಯಾವ ಚಿತ್ರವನ್ನೂ ಕೊಡಲು ಅವರು ನಿರಾಕರಿಸಿಬಿಟ್ಟರು. ಹೀಗಾಗಿ ನಾನೇ ಅಲ್ಲಲ್ಲಿ ಅಲೆದಾಡಿ ಅವರಿವರನ್ನು ಕಾಡಿ, ಬೇಡಿ ಮುಮ್ಮಡಿಯವರ ಕಾಲದಲ್ಲೇ ಸಿದ್ಧವಾದ ಮತ್ತು ಈ ಗ್ರಂಥಕ್ಕೆ ಪ್ರಸ್ತುತವಾದ ವರ್ಣಚಿತ್ರಗಳ ಪ್ರತಿಕೃತಿಗಳನ್ನು ಮಾಡಿಸಿ ಕೊಳ್ಳಬೇಕಾಯಿತು. ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿರುವ ಹಳೆಯ ವರ್ಣಚಿತ್ರಗಳ ಸಂಗ್ರಹವೂ ನನ್ನ ನೆರವಿಗೆ ಬಂದಿತು. ಆ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿಯವರಾದ ಶ್ರೀ ಎಂ.ಎಸ್. ನಂಜುಡರಾಯರ ಸೌಜನ್ಯ ಸಹಕಾರಗಳಿಂದ ಮುಮ್ಮಡಿಯವರ ಓಲಗದಲ್ಲಿ ಚಿತ್ರಕಾರರಾಗಿದ್ದ ಯಲ್ಲಯ್ಯನವರು ಶ್ರೀ ತತ್ವನಿಧಿಗೆಂದೇ ಮಾಡಿಕೊಂಡಿದ್ದ ರೇಖಾಚಿತ್ರಗಳಲ್ಲಿ ಕೆಲವನ್ನು ಯಲ್ಲಯ್ಯನವರ ವಂಶೀಕರೂ ಸುಪ್ರಸಿದ್ಧ

ಕಲಾವಿದರೂ ಆಗಿದ್ದ ಶ್ರೀ ಸುಬ್ರಹ್ಮಣ್ಯರಾಜು ಅವರ ಕೃಪೆಯಿಂದ ಪಡಿಯಚ್ಚು ಮಾಡಿಸಿಕೊಳ್ಳುವುದು ಆಯಿತು. ಇವನ್ನೇ ಈ ಗ್ರಂಥದಲ್ಲಿ ಚಿತ್ರಣಕ್ಕೆಂದು ಬಳಸಿಕೊಂಡಿದ್ದೇನೆ. ಶ್ರೀ ತತ್ವನಿಧಿಗೆಂದೇ ಸಿದ್ಧವಾದ ವರ್ಣಚಿತ್ರಗಳು, ರೇಖಾಚಿತ್ರಗಳು ಇವಲ್ಲವಾದರೂ, ಪ್ರಯೋಜನವನ್ನು ಪೂರೈಸುತ್ತವೆ. ಮತ್ತೇನು ಮಾಡುವುದು?


ಕಾರಣಾಂತರದಿಂದ, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕಡೆಯಿಂದ ನನ್ನ ಕೃತಿಯ ಎರಡನೇ ಸಂಪುಟ ಹೊರಬರುವುದಾಗಲಿಲ್ಲ. ಅಚ್ಚುಮನೆಯಲ್ಲಿ ನನ್ನ ಬರಹ ಎರಡು ಮೂರು ವರ್ಷಗಳ ಕಾಲ ಕೊಳೆಯಿತು. ಅಚ್ಚಾಗಿ ಮತ್ತೆ ಕೆಲಕಾಲ ಅಲ್ಲೇ ಹಾಗೆಯೇ ಉಳಿಯಿತು. ಕಡೆಗೆ ಕಲ್ಪತರು ಸಂಶೋಧನಾ ಪ್ರತಿಷ್ಠಾನವು ಇದನ್ನು ಬೆಳಕು ಕಾಣಿಸುವ ಹೊಣೆಯನ್ನು ಹೊತ್ತಿತು. ಅದರ ನಿರ್ದೇಶಕರಾದ ದೈವಜ್ಞ ಶ್ರೀ ಕುಡಿನಲ್ಲಿ ನರಸಿಂಹ ಸೋಮಯಾಜಿಗಳ ಸೌಜನ್ಯದಿಂದ. ಅವರಿಗೆ ನಾನು ಕೃತಜ್ಞನಾಗಿದ್ದೇನೆಂದು ಬೇರೆ ಹೇಳಬೇಕೆ?

ಗತಿ ಕಾಣದೆ, ದಿಕ್ಕು ತೋಚದೆ ಇದ್ದ ಇದನ್ನು ಅಚ್ಚುಕೂಟದಲ್ಲಿ ಹಾಳಾಗದಂತೆ ಎಚ್ಚರವಹಿಸಿ ವರ್ಷಗಟ್ಟಳೆ ಕಾಪಾಡಿಕೊಂಡು ಬಂದ ನನ್ನ ಮಿತ್ರರು ಶ್ರೀ ವೆಂಕಟೇಶಬಾಬು ಮತ್ತು ಶ್ರೀ ನಾಗೇಂದ್ರ ಇವರಿಗೆ ನನ್ನ ವಿಶೇಷವಾದ ಕೃತಜ್ಞತೆಯನ್ನು ಹೇಳಬೇಕು. ಅವರ ಅಭಿಮಾನ ನನ್ನನ್ನು ಕುರಿತಾಗಿ ಇರದಿದ್ದರೆ ಈ ಬರಹವಾಗಲಿ ನಾನು ಪಡೆದುಕೊಂಡ ವರ್ಣಪಾರದರ್ಶಿಕೆಗಳಾಗಲಿ ಇಂದು ಉಳಿದಿರುತ್ತಿರಲಿಲ್ಲ. ಅವರ ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್‌ನವರು ಇಲ್ಲಿ ಕಾಣಿಸಿರುವ ಮುದ್ರಣ ವೈಖರಿ, ಪುಸ್ತಕದ ಅಂದ ಚೆಂದಗಳನ್ನು ಎಷ್ಟು ಹೊಗಳಿದರೂ ಸಾಲದು.

ಕಲ್ಪತರು ಸಂಶೋಧನಾ ಪ್ರತಿಷ್ಠಾನದ ಈಗಿನ ಪ್ರಧಾನ ಪೋಷಕರಾದ ಶೃಂಗೇರಿ ಜಗದ್ಗುರುಗಳಿಗೂ, ಶ್ರೀ ಮಠದ ಆಡಳಿತಾಧಿಕಾರಿಗಳಾದ ಶ್ರೀ ವಿ. ಆರ್. ಗೌರಿಶಂಕರ್‌ರವರಿಗೂ ನನ್ನ ನಮಸ್ಕಾರಗಳನ್ನು ಸಲ್ಲಿಸುತ್ತೇನೆ. ನಾನು ಬಯಸಿದ ವರ್ಣಚಿತ್ರಗಳ, ಶಿಲ್ಪಗಳ ಪ್ರತಿಕೃತಿಗಳನ್ನು ತಯಾರಿಸಿಕೊಟ್ಟು ಉಪಕರಿಸಿದ ನನ್ನ ಮಾನ್ಯ ಮಿತ್ರರು ಹೆಸರಾಂತ ಫೋಟೋಗ್ರಾಫರ್ ದಿವಂಗತ ಶ್ರೀ ಕೇಸರ್ ಸಿಂಗ್ ಅವರಿಗೆ ಋಣಿಯಾಗಿದ್ದೇನೆ.


305, 6ನೇ ಕ್ರಾಸ್, ಮೊದಲ ಬ್ಲಾಕ್, ಜಯನಗರ, ಬೆಂಗಳೂರು - 560 011

ಸಾಲಿಗ್ರಾಮ ಕೃಷ್ಣರಾಮಚಂದ್ರರಾವ್






नमस्ते जगदेक मातः



ಪರಮಪೂಜ್ಯ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಯವರು
(ಸಂಸ್ಥೆಯ ಮಹಾಪೋಷಕರು)
ಇವರಲ್ಲಿ ಸಮರ್ಪಿತ



।। श्री शृङ्गेरी श्रीजगद्गुरुमहासंस्थानम् ।।

श्रीमत्परमहंसपरिव्राजकाचार्यवर्य पदवाक्यप्रमाणपारावारपारीण
यमनियमासनप्रणायामप्रत्याहारधारणाध्यानसमाध्यष्टाङ्गयोगानुष्ठाननिष्ठ
तपश्चक्रवर्त्यनाद्यविच्छिन्न श्रीशङ्कराचार्यगुरुपरम्पराप्राप्त षड्दर्शनस्थापनाचार्य
व्याख्यानसिंहासनाधीश्वर सकलनिगमागमसारहृदय सांख्यत्रयप्रतिपादक वैदिकमार्गप्रवर्तक
सर्वतन्त्रस्वतन्त्रादिराजधानी विद्यानगरमहाराजधानी कर्णाटकसिंहासनप्रतिष्ठापनाचार्य
श्रीमद्राजाधिराजगुरुभूमण्डलाचार्य ऋष्यश्रृङ्गपुरवराधीश्वर तुङ्गभद्रातीरवासि
श्रीमद्विद्याशङ्करपादपद्माराधक श्रीजगद्गुरु श्रीमदभिनवविद्यातीर्थस्वामिगुरुकरकमलसञ्जात

।। श्री जगद्गुरु शृंङ्गेरी श्रीमद्भारतीतीर्थमहास्वामिभिः ।।

अस्मदत्यन्तप्रियशिष्य श्री नरसिंह सोमयाजि विषये नारायणस्मरणपूर्वकं विरचिता आशिषस्समुल्लसन्तु ।

वैदिकान्ववाये लब्धजनिर्भवान् ज्योतिर्विद्यामभ्यस्य तद्द्वारा बहून् जनान् उपकुर्वन्नास्ते । वेदागमशास्त्रेषु भूयसीं श्रद्धामावहन् तत्प्रचाराय कल्पतरु संशोधनप्रतिष्ठान नाम्नीं संस्थां प्रत्यस्थापयत् । सा च संस्था विशिष्टान् ग्रन्थान् प्रकाशयन्ती वरीवर्ति ।

शृंगरिरि जगद्गुरु महासंस्थाने पारम्परिकीं भक्तिमास्थितवतो भवतो मनसि संस्थामेनां शृंगिरि मठीयां विधातुं सङ्कल्पः उदभूदिति विज्ञाय मोदामहे । अत एव अदसीयानि प्रकाशनानि इतः परं मठीयत्वेनैव प्रकाशयिष्यन्त इत्यपि भवान् निरचिनोत् । दुर्लभाः भारतीयसंस्कृतिप्रबोधकाः विशिष्टाः ग्रन्थाः संस्थयानया प्रकाशयन्तां तेन च भवदीयो मनोरथः फलेग्रहिर्भूयात् श्रीशारदाचन्द्रमौलीश्वरयोरनुकम्पया भवान् इतोधिक श्रेयः परम्पराभिः समभिवर्धतामिति चाशास्महे ।

इति नारायणस्मरणम्

शृङ्गगिरिः
ईश्वर भाद्रपदशुद्धदशमी भार्गववासरः
१२.९.१९९७

CYAN YEL BLK

ವಿಷಯಸೂಚಿ

ಶ್ರೀತತ್ವನಿಧಿಯನ್ನು ಕುರಿತು	1
ಮೊದಲನೆಯ ನಿಧಿ : ಶಕ್ತಿನಿಧಿ	37
ಎರಡನೆಯ ಪರಿಚ್ಛೇದ : ವಿಷ್ಣು-ವೈಷ್ಣವ ನಿಧಿಗಳು	117
ಮೂರನೆಯ ಪರಿಚ್ಛೇದ : ಶಿವ-ಶೈವ ನಿಧಿಗಳು	205
ನಾಲ್ಕನೆಯ ಪರಿಚ್ಛೇದ : ಬ್ರಹ್ಮ, ಆಗಮ ನಿಧಿಗಳು	308
ಐದನೆಯ ಪರಿಚ್ಛೇದ :ಗ್ರಹನಿಧಿ ಮತ್ತು ಕೌತುಕನಿಧಿ	329

ಶ್ರೀತತ್ತ್ವನಿಧಿಯನ್ನು ಕುರಿತು

೧. ಗ್ರಂಥದ ಸ್ವಾರಸ್ಯ

ಮುಮ್ಮಡಿ ಕೃಷ್ಣರಾಜ ವಡೆಯರ ರಚನೆಗಳಲ್ಲೆಲ್ಲ ಮುಖ್ಯವಾದದ್ದು 'ಶ್ರೀತತ್ತ್ವನಿಧಿ'. ಇದು ಮುಖ್ಯವೆನಿಸಿಕೊಳ್ಳಲು ಕಾರಣಗಳು ಹಲವಾರು. ಗ್ರಂಥದ ಗಾತ್ರ ಮೊದನೆಯದು. ಸಾಮಾನ್ಯವಾಗಿ ಅವರ ಗ್ರಂಥಗಳು ಸಣ್ಣ ಪ್ರಮಾಣದವು. 'ಶ್ರೀತತ್ತ್ವನಿಧಿ'ಯನ್ನು ಬಿಟ್ಟರೆ 'ಸೌಗಂಧಿಕಾಪರಿಣಯ' ವೊಂದು ದೊಡ್ಡದು, ಅಷ್ಟೆ. ನನ್ನಲ್ಲಿರುವ 'ಶ್ರೀತತ್ತ್ವನಿಧಿ' ಹಸ್ತಪ್ರತಿಯಲ್ಲಿ ಚಿತ್ರಗಳಿಲ್ಲದೆಯೆ ಒಂದು ನೂರು ಅರವತ್ತೆರಡು ಪುಟಗಳಷ್ಟಿವೆ (ಪ್ರತಿಪುಟದ ಆಕಾರ ಒಂದು ಅಡಿ ಅಗಲ, ಎಂಟು ಅಂಗುಲಗಳಷ್ಟು ಎತ್ತರ). ಮೈಸೂರಿನ ಸಚಿತ್ರ ಹಸ್ತಪ್ರತಿಯಲ್ಲಿ ಸುಮಾರು ಒಂದು ಸಾವಿರ, ಮೇಲೆ ಐನೂರು ಪುಟಗಳಿವೆ (ರಾಯಲ್ ಆಕಾರದವು)

ಗಾತ್ರ ಒಂದೇ ಕಾರಣ ಎನ್ನುವಂತಿಲ್ಲ. ಗ್ರಂಥದ ಸ್ವರೂಪ ಎರಡನೆಯ ಕಾರಣ. ಇದೊಂದು ವಿಶ್ವಕೋಶ; ಅದರಲ್ಲಿ ಅಡಗಿರುವ ವಿಷಯಗಳ ವ್ಯಾಪ್ತಿ ದೊಡ್ಡದು. ಮೇಲುನೋಟಕ್ಕೆ ಧಾರ್ಮಿಕ ಚೌಕಟ್ಟು ಎಂದು ಕಂಡೀತಾದರೂ ಅದರಲ್ಲಿ ಸಂಗೀತ, ಸಾಹಿತ್ಯ, ಜ್ಯೋತಿಷ, ವಿದ್ಯಾಸ್ಥಾನ, ಕ್ಷೇತ್ರಪರಿಚಯ, ಆಚಾರಸಂಹಿತೆ, ಆಟ ಎಲ್ಲವೂ ಸೇರಿವೆ. ನಮ್ಮ ನಾಡಿನಲ್ಲಿ ಇಂಥದೊಂದು ಪ್ರಯತ್ನ ಅಪೂರ್ವವಾದದ್ದು. ಕನ್ನಡದಲ್ಲಾಗಲಿ ಬೇರೆ ಯಾವ ದೇಶಭಾಷೆಯಲ್ಲಾಗಲಿ ಇದಕ್ಕೆ ಎಣೆಯಾಗುವಂಥ ಕೃತಿ ಬೇರೊಂದು ಸಿದ್ಧವಾದಂತೆ ತೋರುವುದಿಲ್ಲ. ನಮ್ಮಲ್ಲಿ ಬಸವಭೂಪಾಲನು (1709-10 ರ ಸುಮಾರಿಗೆ) ರಚಿಸಿದ 'ಶಿವತತ್ತ್ವರತ್ನಾಕರ'ವೊಂದು ನೆನಪಿಗೆ ಬಂದೀತು. ಆದರೆ 'ಶ್ರೀತತ್ತ್ವನಿಧಿ'ಯ ಮುಂದೆ ಅದೂ ತಲೆಯೆತ್ತಿ ನಿಲ್ಲಲಾರದು.

ಮೂರನೆಯ ಕಾರಣವೆಂದರೆ ಗ್ರಂಥದ ಸಿಂಹಪಾಲು ಚಿತ್ರಗಳದ್ದಾಗಿರುವುದು. ಮೈಸೂರಿನ ಓರಿಯಂಟಲ್ ಲೈಬ್ರರಿಯಲ್ಲಿರುವ ಹಸ್ತಪ್ರತಿಯಲ್ಲಿ ಎರಡುಸಾವಿರದಷ್ಟು ವರ್ಣಚಿತ್ರಗಳಿವೆ. ಚಿತ್ರಗಳ ಸಂಖ್ಯೆಯಷ್ಟೆ ಗಮನಾರ್ಹ ಎಂದೇನೂ ಅಲ್ಲ. ಚಿತ್ರಗಳ ಸ್ವಭಾವ, ಗುಣಮಟ್ಟ, ಧೋರಣೆ, ಶೈಲಿ ಇವೂ ಎದ್ದುಕಾಣುವಂಥವು. ಗ್ರಂಥಗಳಿಗೆ ಚಿತ್ರಗಳನ್ನು ಬರೆಯಿಸುವ ಪದ್ಧತಿ ಹೊಸದಲ್ಲ, ಪ್ರಾಚೀನವಾದ ತಾಳಪತ್ರಪ್ರತಿಗಳಲ್ಲಿಯೆ ಕಿರುಚಿತ್ರಗಳ ಸೇರ್ಪಡೆಯಿರುವುದು ಎಲ್ಲರಿಗೂ ತಿಳಿದದ್ದೆ. ನಡಯುಗದಲ್ಲಿ ಜೈನ ಸಂಪ್ರದಾಯದ ಹಲವು ಗ್ರಂಥಗಳು ಸಚಿತ್ರವಾಗಿದ್ದುವು; ಮಹಾಯಾನ ಬೌದ್ಧಪದ್ಧತಿಯ ಸಾಧನಮಾಲೆಗಳಲ್ಲಿಯೂ ದೇವತಾಚಿತ್ರಗಳಿರುತ್ತಿದ್ದುವು. ಆದರೆ ಮುಮ್ಮಡಿಯವರಿಗೆ ಒದಗಿದ ಪ್ರೇರಣೆ ಇದಲ್ಲ. ಇತಿಹಾಸ, ಕತೆ, ಕವಿತೆಗಳಿಗೆ ಚಿತ್ರಗಳನ್ನಳವಡಿಸುವುದು ಪರ್ಶಿಯನ್ ಮೂಲದಿಂದ ಬಂದದ್ದು. ದಿಲ್ಲಿಯಲ್ಲಿ ಆಳಿದ ಮೊಗಲಾಯಿ ಅರಸರ ಒತ್ತಾಸೆಯಿಂದ ಇಲ್ಲಿ ಬಳಕೆಗೆ ಬಂದಿತು. ಆ ಆರಸೊತ್ತಿಗೆ ಮರೆಯಾಗುವ ಹೊತ್ತಿಗೆ ಈ ಪದ್ಧತಿಯೂ ಕಳೆಗುಂದಿತೆನ್ನಿ. ಮುಮ್ಮಡಿಯವರು ಇದನ್ನು ಮತ್ತೆ ಎತ್ತಿಕೊಂಡರು. 'ಶ್ರೀತತ್ತ್ವನಿಧಿ' ಇದಕ್ಕೆ ಉಜ್ವಲವಾದ ನಿದರ್ಶನ. ಗ್ರಂಥನಿರ್ಮಾಣದಲ್ಲಿ ಲಿಪಿಕಾರರ ಪಾತ್ರದಂತೆ ಚಿತ್ರಕಾರರ ಪಾತ್ರವೂ ಹೆಚ್ಚಿನದೆ.

ನಾಲ್ಕನೆಯದೊಂದು ಕಾರಣವನ್ನೂ ಹೇಳಬಹುದು. ಅದು ಗ್ರಂಥದ ಆಶಯವನ್ನು ಕುರಿತದ್ದು. 'ಶ್ರೀತತ್ತ್ವನಿಧಿ'ಯಲ್ಲಿ ಎದ್ದುಕಾಣುವ ಗುಣವೆಂದರೆ, ನಮ್ಮ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಸೇರಿಬಂದಿರುವ ಹಲವು ವಿವರಗಳಿಗೆ ಮೂರ್ತಿಕಲ್ಪನೆಯನ್ನು ಮಾಡಿಕೊಂಡಿರುವುದು. ನಾವು ಪೂಜೆಮಾಡುವ ದೇವತೆಗಳಿಗೆ ಆಕಾರವನ್ನು ಒದಗಿಸುವುದು ಸರಿಯೆ. ಆಕಾರವಿರದ ವಸ್ತುವನ್ನು ಪೂಜೆ ಮಾಡುವುದು ಹೇಗೆ? 'ನ ಚ ರೂಪಂ ವಿನಾ ಧ್ಯಾತುಂ ಕೇನಾಪಿ ಶಕ್ಯತೇ' ಎಂದು ವಿಷ್ಣುಸಂಹಿತೆಯೆ ಹೇಳುತ್ತದೆ (೨೬, ೫೫). ಪೂಜೆ, ಉಪಾಸನೆ, ಧ್ಯಾನ ಇವುಗಳಿಗೆ ನೆರವಾಗಲೆಂದು ಆಕಾರಕಲ್ಪನೆ. ಕ್ರಿಸ್ತಪೂರ್ವ ಏಳುನೂರು ವರ್ಷಗಳಷ್ಟು ಹಿಂದೆಯೆ ಯಾಸ್ಕರು ತಮ್ಮ 'ನಿರುಕ್ತ'ದಲ್ಲಿ ಪರೋಕ್ಷವಾದುದನ್ನು ಪ್ರತ್ಯಕ್ಷದಂತೆ ಬಗೆಯಲು 'ರೂಪೋಪಮೆ'ಯೆಂಬ ಸಂವಿಧಾನವನ್ನು ಸೂಚಿಸಿದರು (೩,೧೬); ದೇವತೆಗಳ ಆಕಾರಚಿಂತನೆಯನ್ನೂ ಮಾಡಿದರು.

'ಶ್ರೀತತ್ತ್ವನಿಧಿ'ಯಲ್ಲಿ ಆಕಾರಚಿಂತನೆ ಇಷ್ಟಕ್ಕೆ ಮುಗಿಯುವುದಿಲ್ಲ. ಸ್ವರ, ರಾಗ, ತಾಳ, ಗ್ರಹ, ವಾರ, ರಾಶಿ, ನಕ್ಷತ್ರ, ಸಂವತ್ಸರ, ಪಕ್ಷ, ಶಾಸ್ತ್ರಭಾಗ, ವಿದ್ಯಾಸ್ಥಾನ ಮೊದಲಾದುವು ಕೂಡ ಇದರ ಹರವಿನಲ್ಲಿ ಸೇರುತ್ತವೆ. ಇದು ಮುಮ್ಮಡಿಯವರದ್ದೆ ಹವಣಿಕೆಯೆಂದೇನು ಅಲ್ಲ. ಈ ಹವ್ಯಾಸ ಹಳೆಯದೆ. ಋಗ್ವೇದದಲ್ಲೇ ಅಗ್ನಿಗೆ ನಾಲ್ಕು ಕೊಂಬು, ಮೂರು ಕಾಲು, ಎರಡು ತಲೆ, ಏಳು ತೋಳು ಹೀಗೆಲ್ಲ ಹೇಳಿರುವುದಿದೆ (೪,೫೮,೩). ನಾವು ಬಳಸುವ ಮಾತನ್ನೆ ವೇದವು ದೇವತೆಯಂತೆ ಬಗೆಯಿತಲ್ಲವೆ? (೮,೧೦೦,೧೧ 'ದೇವೀಂ ವಾಚಮಜಯಂತ ದೇವಾಃ). ಭರತಮುನಿಯ 'ನಾಟ್ಯಶಾಸ್ತ್ರ'ದಲ್ಲಿ ವೃತ್ತಕ್ಕೊಂದು ಮೂರ್ತರೂಪವನ್ನು ಕೊಡುವ ಪ್ರಯತ್ನವಿದೆ. ಮುಂದೆ ಕೆಲವು ನಿಘಂಟುಕಾರರು ವಿನೋದಕ್ಕೆಂದು ಕಾವ್ಯ, ರಸ, ಅಲಂಕಾರ, ಶಾಸ್ತ್ರ ಇವುಗಳಿಗೆಲ್ಲ ಆಕಾರಚಿಂತನೆಯನ್ನು ಮಾಡಿದುದೂ ಇದೆ. ಸಂಗೀತಕ್ಷೇತ್ರದಲ್ಲಿ ಸ್ವರಗಳಿಗೆ ರೂಪಕಲ್ಪನೆ 'ಭರತಶಾಸ್ತ್ರ'ದಲ್ಲಿದೆ, ರಾಗಗಳಿಗೆ ಧ್ಯಾನಶ್ಲೋಕಗಳು ಪುಂಡರೀಕವಿಠಲನ 'ರಾಗಮಾಲಾ', ದಾಮೋದರಮಿಶ್ರನ 'ಸಂಗೀತದರ್ಪಣ' ಮೊದಲಾದ ಲಕ್ಷಣ ಗ್ರಂಥಗಳಲ್ಲಿವೆ. ಆಯುಧಗಳಿಗೆ ಆಕಾರವನ್ನು ಹೇಳುವ ಶಿಲ್ಪಶಾಸ್ತ್ರಗ್ರಂಥಗಳಿವೆ.

ಮುಮ್ಮಡಿಯವರು ಹಿಡಿದದ್ದು ಇದೇ ಜಾಡನ್ನು. ಇದು ಎಷ್ಟರಮಟ್ಟಿಗೆ ಸಾಧು ಎಂಬ ವಿವೇಚನೆಯನ್ನು ಮುಂದೆ ಮಾಡೋಣ. ಸದ್ಯಕ್ಕೆ 'ಶ್ರೀತತ್ತ್ವನಿಧಿ'ಯಲ್ಲಿ ಈ ಬಗೆಯ ಆಕಾರಚಿಂತನೆ ದೊಡ್ಡ ಪ್ರಮಾಣದಲ್ಲಿ ನಡೆದಿದೆ ಎಂಬಷ್ಟು ಮಾತು ಸಾಕು. ನಮ್ಮಲ್ಲಿರುವ ದೇವತಾವೈವಿಧ್ಯ, ದೇವತಾಬಾಹುಳ್ಯ ಲೋಕಪ್ರಸಿದ್ಧವಾದದ್ದು ತಾನೆ? ನಾವು ಪೂಜಿಸುವ, ಪೂಜಿಸದಿರುವ ದೇವತೆಗಳಿಗೆ, ದೈವಗಳಿಗೆ ಎಣಿಕೆಯಿದೆಯೆ? ಇವುಗಳಲ್ಲಿ ಒಂದೊಂದಕ್ಕೂ ನಿರ್ದಿಷ್ಟವಾದೊಂದು ರೂಪವನ್ನು ಸೂಚಿಸಿರುವುದು ಇಲ್ಲಿ ಕಾಣುತ್ತದೆ. ಅಷ್ಟು ಮಾತ್ರವಲ್ಲ, ದಿನನಿತ್ಯದ ವ್ಯವಹಾರದಲ್ಲಿ ನಾವು ಬಳಸುವ ಅನೇಕ ಕಲ್ಪನೆಗಳಿಗೆ

(ಹಗಲು, ರಾತ್ರಿ, ಸಂಜೆ, ವಾರ, ದಿನ, ತಿಥಿ, ನಕ್ಷತ್ರಗಳಿಗೆ, ಮೃತ್ಯು, ದಾನ, ಧರ್ಮ, ವಿದ್ಯೆ, ಕಲೆ ಇತ್ಯಾದಿ) ಧ್ಯೇಯಮೂರ್ತಿಗಳನ್ನು ಆಳವಡಿಸಿರುವುದನ್ನೂ ಕಾಣುತ್ತೇವೆ. ಇದು ಸರಿಯೋ ತಪ್ಪೋ, ಸ್ವಾರಸ್ಯವಾದುದಂತೂ ಹೌದು. ಶಬ್ದಗಳಲ್ಲಿ ರೂಪವರ್ಣನೆ ಮಾಡಿರುವುದಲ್ಲದೆ ವರ್ಣಚಿತ್ರಗಳಲ್ಲೂ ಬಿಡಿಸಿರುವುದು ಇಲ್ಲಿನ ಹೆಗ್ಗಳಿಕೆ. ಮಹಾರಾಜರು ತಮ್ಮ ಬಳಿಯಿದ್ದ ಚಿತ್ರಕಾರರಿಗೆ ಹೊಸದೊಂದು ಆಯಾಮವನ್ನು ಕಲ್ಪಿಸಿಕೊಟ್ಟರು, ಹೊಸದೊಂದು ದಾರಿಯನ್ನು ತೋರಿದರು. ಮಾತು-ಚಿತ್ರ ಎರಡೂ ವಾಗರ್ಥದಂತೆ ಕೂಡಿಕೊಂಡರೆ ಆಕಾರಚಿಂತನೆಗೆ ಬಲವೆಂಬುದನ್ನು ಮಹಾರಾಜರು ಅರಿತಿದ್ದರು.

ಹೀಗೆ ಹಲವು ಕಾರಣಗಳಿಂದಾಗಿ 'ಶ್ರೀತತ್ತ್ವನಿಧಿ'ಗೆ ವಿಶೇಷವಾದೊಂದು ಬೆಲೆ ಒದಗಿಬರುತ್ತದೆ. ಇದರ ರಚನೆಮಾಡಿದ ಮುಮ್ಮಡಿಯವರಿಗೇ ಇದನ್ನು ಕುರಿತಂತೆ ಹೆಚ್ಚಿನ ಆದರ ಇದ್ದಿತೆಂಬುದು ಅವರ ಆಣತಿಯಂತೆ ಅರಸೊತ್ತಿಗೆಯ 'ಸಂತಾನಾಂಬುಜ'ವೆಂಬ ವಂಶವೃಕ್ಷಕ್ಕೆ 'ವಂಶಾವತರಣವೈಭವ'ವೆಂಬ ಗದ್ಯಕೃತಿಯನ್ನು ಬರೆದ ಗುರಿಕಾರ ತಿಪ್ಪಣ್ಣನ ಮಾತಿನಿಂದ ಸ್ಪಷ್ಟವಾಗುತ್ತದೆ. 'ಗೊತ್ತುಗಾರ ಮಹಾಸನ್ನಿಧಾನದ ಚಾಕರನಾದ ತಿಪ್ಪಣ್ಣ' ಬರೆದ ಈ ಗದ್ಯದಲ್ಲಿ ಮುಮ್ಮಡಿಯವರ ಹೆಗ್ಗಳಿಕೆಯನ್ನು ಹೇಳುತ್ತ, ಅವರಿಂದ ನಡೆದ ಅನೇಕ ಕಾರ್ಯಗಳನ್ನು ಪಟ್ಟಿಮಾಡುವಾಗ 'ಶ್ರೀತತ್ತ್ವನಿಧ್ಯಾದ್ಯನೇಕಗ್ರಂಥ ನಿರ್ಮಾಣ ಪ್ರಕಾಶಿತ ಸಕಲ ಶಾಸ್ತ್ರಾರ್ಥಪಾಂಡಿತ್ಯವೈಭವಃ' ಎಂಬ ಒಕ್ಕಣೆ ಬಂದಿದೆ. ಮುಮ್ಮಡಿಯವರು ಅನೇಕ ಗ್ರಂಥಗಳನ್ನು ರಚಿಸಿದ್ದರೂ ಅದರಲ್ಲಿ ಮೊದಲು ಉಲ್ಲೇಖಕ್ಕೆ ಬರುವುದು 'ಶ್ರೀತತ್ತ್ವನಿಧಿ'ಯೆ. ಅದೊಂದನ್ನು ಹೆಸರಿಸಿದರೇ ಸಾಕು, ಅವರ ವೈದುಷ್ಯದ ವೈಭವ ಅರಿವಿಗೆ ಬರುತ್ತದೆ.

೨. ಗ್ರಂಥದ ಪರಿಚಯ

ಮುಮ್ಮಡಿಯವರ ಕೆಲವು ಗ್ರಂಥಗಳು ಕಲ್ಲಚ್ಚಿನ ಪ್ರತಿಗಳಲ್ಲಿ ದೊರಕುತ್ತವೆ. ಅವರು ಅರಮನೆಯಲ್ಲೆ 'ಜಗದಂಬಾಶಿಲಾ ಮುದ್ರಾಕ್ಷರಶಾಲೆ'ಯಲ್ಲಿ ತಮ್ಮ ಬರಹಗಳನ್ನು ಪ್ರತಿಮಾಡಿಸಿ, ತಮ್ಮ ಆಪ್ತರಿಗೆ ಹಂಚುತ್ತಿದ್ದರು. ಇವು ಹೆಚ್ಚಿನ ಸಂಖ್ಯೆಯಲ್ಲೆ ಇರುತ್ತಿದ್ದುವೆಂದು ಊಹಿಸಿಕೊಳ್ಳಬಹುದು. 'ದೇವತಾನಾಮಕುಸುಮಮಂಜರಿ' ಮುಂತಾದ ಕೆಲವು ಗ್ರಂಥಗಳ ಇಂಥ ಅನೇಕ ಪ್ರತಿಗಳನ್ನು ನಾನು ನೋಡಿದ್ದೇನೆ. ಆದರೆ 'ಶ್ರೀತತ್ತ್ವನಿಧಿ'ಯು ಕಲ್ಲಚ್ಚಿನ ಪುಣ್ಯವನ್ನು ಪಡೆಯಲಿಲ್ಲ. ಅದರಲ್ಲಿರುವ ಸಾವಿರ ಚಿತ್ರಗಳನ್ನು ಕಲ್ಲಚ್ಚಿನಲ್ಲಿ ಪ್ರತಿ ತೆಗೆಸುವುದು ಆಗದ ಮಾತು; ಚಿತ್ರಗಳಿರದ ಪುಸ್ತಕವನ್ನು ಕೂಡ ಅದೇಕೋ ಹಾಗೆ ಅವರು ಪ್ರತಿಮಾಡಿಸಲಿಲ್ಲ. ಮುಂದೆ ಬೆಳಗಾಂವಿಯಲ್ಲಿ ಇದರ ಕಲ್ಲಚ್ಚಿನ ಪ್ರತಿಯೊಂದು ಸಿದ್ಧವಾದಂತೆ ತೋರುತ್ತದೆ. ದೇವನಾಗರಿ ಲಿಪಿಯಲ್ಲಿ ಹಿಂದೆಯೇ ಇದರ ಪಾಠವೊಂದು ಹೊರಬಂದಿತು. (ಕ್ಷೇಮರಾಜ ಶ್ರೀಕೃಷ್ಣದಾಸ, ಶ್ರೀವೆಂಕಟೇಶ್ವರ ಸ್ಟೀಮ್ ಮುದ್ರಾಲಯ, ಮುಂಬಯಿ). ಈಚೆಗೆ ತಂಜಾವೂರು ಸರಸ್ವತಿಮಹಲಿನ ಪ್ರಕಾಶನವಾಗಿ ಗ್ರಂಥಾಕ್ಷರದ ಒಂದು ಪಾಠವೂ ಅಚ್ಚಾಯಿತು.

ನನ್ನ ಬಳಿಯಿರುವ 'ಶ್ರೀತತ್ತ್ವನಿಧಿ'ಯ ಹಸ್ತಪ್ರತಿಯು (ಚಿತ್ರಗಳಿಲ್ಲದ್ದು) ಮಹಾರಾಜರ ಅಪ್ಪಣೆಯಂತೆ ಅವರ ಕಾಲದಲ್ಲೇ ಅವರ ಚಾಕರರೊಬ್ಬರಿಂದ ಲಿಪಿಮಾಡಲ್ಪಟ್ಟಿತೆಂದು ಅಲ್ಲಿರುವ ಒಕ್ಕಣೆಯಿಂದಲೆ ತಿಳಿದುಬರುತ್ತದೆ. ಮೊದಲ ಹಾಳೆಯಲ್ಲಿ ಕೆಳಗಿನ ಬರಹವಿದೆ –

" ॥ ಶ್ರೀ ಕೃಷ್ಣರಾಜ ಮಹಾರಾಜ ಕಂಠೀರವರ ಆಜ್ಞೆ
॥ ಯಿಂದ ನರಸಪ್ಪನಾಯ್ಕರ ಮಗ ರಂಗ್ಗಪ್ಪನಾಯ್ಕ ಬ
॥ ರದ ಶ್ರೀತತ್ತ್ವನಿಧಿ ಪುಸ್ತಕ ॥"

ಕಡೆಯಲ್ಲಿಯೂ

" ..... ರಾಧೀಶ ಕೃಷ್ಣರಾಜೇಂದ್ರಶಾಸನಾತ್ ।
ಲಿಖಿತಂ ರಂಗಪತಿನಾ ಶ್ರೀತತ್ತ್ವನಿಧಿ ಪುಸ್ತಕಂ ॥"

ಎಂಬ ಪುಷ್ಪಿಕೆಯಿದೆ. ಇದರಿಂದ ಮಹಾರಾಜರೆ ಇದನ್ನು ಬರೆಯಿಸಿದರೆಂಬುದು ಸ್ಪಷ್ಟವಾಗುತ್ತದೆ.

ಮುಮ್ಮಡಿಯವರು ಹೀಗೆ ಎಷ್ಟು ಪ್ರತಿಗಳನ್ನು ಮಾಡಿಸಿದ್ದರೋ ತಿಳಿಯದು. ಸಚಿತ್ರವಾದ, ಮತ್ತು ಕಲಾವಿದರಿಂದಲೇ ಬರೆಯಲ್ಪಟ್ಟ ಪ್ರತಿಯೊಂದು ಮೈಸೂರಿನ ಓರಿಯಂಟಲ್ ಲೈಬ್ರರಿಯಲ್ಲಿದೆ. ಇದನ್ನು ನಾನು ಪರಿಶೀಲಿಸಿಯೂ ಇದ್ದೇನೆ. ಇಂಥದೇ ಇನ್ನೊಂದು ಪ್ರತಿ ಮೈಸೂರು ಅರಮನೆಯಲ್ಲಿದೆ. ಅದನ್ನೂ ನಾನು ನೋಡಿದ್ದೇನೆ. ನಾನು ಬಹು ಹಿಂದೆ ನೋಡಿರುವ ಮತ್ತೊಂದು ಪ್ರತಿ ನನಗೆ ಹಿರಿಯರೂ, ಗುರುಸಮಾನರೂ, ಆಗಮಪಂಡಿತರೂ, ಅರಮನೆಯ ನಂಟನ್ನು ಹೊಂದಿದ್ದವರೂ ಆಗಿದ್ದ ತಲಕಾಡು ಕೃಷ್ಣದೀಕ್ಷಿತರ ಬಳಿಯಿದ್ದಿತು. ಈಗ ಅದೆಲ್ಲಿದೆಯೋ ನಾನರಿಯೆ. ಬೇರೆ ಯಾವೊಂದು ಪ್ರತಿಯಿದ್ದುದು ನನ್ನ ಗಮನಕ್ಕೆ ಬಂದಿಲ್ಲ. ಆದರೆ ಅರಮನೆಯ ಚಿತ್ರಕಾರರಿಗೆ ಕೆಲವು ಪ್ರತಿಗಳನ್ನು ಮಾಡಿಸಿಕೊಟ್ಟಿರಬಹುದು, ಕೆಲವು ಚಿತ್ರಕಾರರು ತಮಗೆಂದೇ ಸಚಿತ್ರಪ್ರತಿಗಳನ್ನು ಮಾಡಿಕೊಂಡಿರಬಹುದು. ಹಾಗೆ ಒಬ್ಬರು ಮೈಸೂರು ಚಿತ್ರಕಾರರ ಮನೆಯಲ್ಲಿ ಒಂದು ಸಚಿತ್ರಪ್ರತಿ ಇದ್ದಿತೆಂದು ಕೇಳಿದ್ದೇನೆ.

'ಶ್ರೀತತ್ತ್ವನಿಧಿ'ಯ ಮೈಸೂರು ಪ್ರತಿಯನ್ನು ಸಿದ್ಧಮಾಡಲು ಮಹಾರಾಜರು ಅರಮನೆಯ ಚಿತ್ರಗಾರರನ್ನು ತೊಡಗಿಸಿದ್ದರಷ್ಟೆ. ಅವರಲ್ಲಿ ಈಗ ನನ್ನ ಹಿರಿಯಮಿತ್ರರೂ, ವಿಖ್ಯಾತ ಕಲಾವಿದರೂ ಆದ ಶ್ರೀ ಸುಬ್ರಹ್ಮಣ್ಯರಾಜು ಅವರ ಹಿರಿಯರೂ ಇದ್ದರು. ಶ್ರೀ ರಾಜು ಅವರ ಮನೆಯಲ್ಲಿ ಹಿಂದಿನಿಂದ ಕಾಪಾಡಿಕೊಂಡುಬಂದ ರೇಖಾಚಿತ್ರಗಳ ಕಡತವೊಂದಿದೆ. ಈ ರೇಖಾಚಿತ್ರಗಳನ್ನು ಪರಿಶೀಲಿಸಿದಾಗ ಅವು 'ಶ್ರೀತತ್ತ್ವನಿಧಿ'ಯ ಮೈಸೂರು ಪ್ರತಿಯಲ್ಲಿರುವ ವರ್ಣಚಿತ್ರಗಳಿಗೆ ಮೂಲವಾದುವೆಂಬುದು ತಿಳಿದುಬರುತ್ತದೆ.

ನನ್ನ ಬಳಿಯಿರುವ ಪ್ರತಿಯಲ್ಲಿ ಚಿತ್ರಗಳಿಲ್ಲ. ಮೈಸೂರು ಪ್ರತಿಯಲ್ಲಿ ಎದ್ದುಕಾಣುವ ವೈಶಿಷ್ಟ್ಯವೆಂದರೆ ಚಿತ್ರಗಳು. ಚಿತ್ರಗಳಿಗಾಗಿಯೆ ಸಿದ್ಧವಾದ ಪ್ರತಿ ಅದು. ಚಿತ್ರಗಳ ಸಮರ್ಥನೆಗೆ ಧ್ಯಾನಶ್ಲೋಕಗಳು, ವಿವರಣೆಗಳು. ಇಲ್ಲಿ ಸಂಸ್ಕೃತದ ಧ್ಯಾನಶ್ಲೋಕಗಳಾದ ಮೇಲೆ ಹಲವು ವೇಳೆ ಕನ್ನಡದಲ್ಲಿ 'ಇದಕ್ಕೆ ಇಂಥ ಬಣ್ಣ' ಎಂದು ಗುರುತುಮಾಡಿಕೊಂಡಿರುವುದಿದೆ. ನನ್ನಲ್ಲಿರುವ ಪ್ರತಿಯಲ್ಲಿ ಇಂಥ ಟಿಪ್ಪಣಿಗಳೇನು ಇಲ್ಲ. ಈ ಪ್ರತಿಯನ್ನು ಸಿದ್ಧಪಡಿಸುವಾಗ ಗ್ರಂಥಕ್ಕೆ ಚಿತ್ರಗಳನ್ನು ಬರೆಯಿಸುವ ಉದ್ದೇಶ ಅರಸರಿಗೆ ಇದ್ದಿತೋ ಇಲ್ಲವೋ ತಿಳಿಯದು. ಆ ಉದ್ದೇಶ ಇದ್ದಿತಾದರೂ ಚಿತ್ರಗಾರರಿಗೆ

ಮೂಲಮಾತೃಕೆಯೊಂದು ಬೇಕಲ್ಲ? ಚಿತ್ರಗಾರರೇನು ಸಂಸ್ಕೃತ ಪಂಡಿತರಲ್ಲ, ಅವರಿಗೆ ಗ್ರಂಥದ ವಿಷಯವನ್ನು ತಿಳಿಯಹೇಳಿ ಒಂದೊಂದು ಧ್ಯೇಯಮೂರ್ತಿಯ ಸ್ವರೂಪವನ್ನು ಮನವರಿಕೆಮಾಡಿಕೊಡಲು ಪಂಡಿತರು ಅರಸರಿಂದ ನಿಯುಕ್ತರಾಗಿದ್ದಿರಬೇಕು. ಇವರ ಸಲುವಾಗಿಯಾದರೂ ಮೂಲ ಗ್ರಂಥದ ಪ್ರತಿಗಳು ಇದ್ದಿರಬೇಕು. ಇವುಗಳಲ್ಲಿ ಚಿತ್ರಗಳಿಲ್ಲದಿರುವುದು ಸಹಜವೇ.

ನನ್ನಲ್ಲಿರುವ ಪ್ರತಿ ಮೂಲಮಾತೃಕೆಯ ಸ್ವರೂಪದ್ದೆಂದು ಹೇಳಬಹುದು. ಇದಕ್ಕೆ ಪ್ರಬಲವಾದ ಒಂದು ಕಾರಣವೆಂದರೆ ಮೈಸೂರು ಪ್ರತಿಯಲ್ಲಿ ಸೇರ್ಪಡೆಯಾಗಿರುವ ಕೆಲವು ಭಾಗಗಳು ಇಲ್ಲಿ ಕಾಣಸಿಗದಿರುವುದು. ನಿದರ್ಶನಕ್ಕೆ, ಈ ಗ್ರಂಥದ ನಾಲ್ಕನೆಯ ವಿಭಾಗವಾದ 'ಬ್ರಹ್ಮನಿಧಿ'ಯಲ್ಲಿ ಮೈಸೂರು ಪ್ರತಿಯು ಏಳು ಸ್ವರಗಳು, ಮೂವತ್ತಾರು ರಾಗಗಳು, ಏಳು ತಾಳಗಳು ಇವುಗಳ ಧ್ಯಾನಶ್ಲೋಕಗಳನ್ನೊಳಗೊಂಡಿವೆ; ಈ ಸಂಗೀತವಿವರಗಳ ಚಿತ್ರಗಳೂ ಇವೆ. ನನ್ನಲ್ಲಿರುವ ಪ್ರತಿಯಲ್ಲಿ ಈ ವಿವರಗಳು ಬರುವಾಗ 'ಅಸ್ಮತ್‌ಕೃತಸ್ವರಚೂಡಾಮಣೌರೀತ್ಯಾ' ಎಂಬ ಉಲ್ಲೇಖವಿರುವುದು ಗಮನಾರ್ಹ. ಇದನ್ನು ನಾನು ಮೊದಲ ಸಂಪುಟದಲ್ಲಿ ಪ್ರಸ್ತಾಪಿಸಿದ್ದೇನೆ. ಮುಮ್ಮಡಿಯವರೇ ಬರೆದಿದ್ದ ಮತ್ತೊಂದು ಗ್ರಂಥವನ್ನು (ಸ್ವರಚೂಡಾಮಣಿ) 'ಶ್ರೀತತ್ತ್ವನಿಧಿ'ಯ ಮೈಸೂರು ಪ್ರತಿಯು ಹಾಗೆಯೇ ಸೇರಿಸಿಕೊಂಡಿದೆ. ನನ್ನಲ್ಲಿರುವ ಪ್ರತಿಯಾದರೋ ಈ ಸೇರ್ಪಡೆಗೆ ಮೊದಲೆ ಸಿದ್ಧವಾದದ್ದು.

ಹಾಗೆಯೆ 'ಶ್ರೀತತ್ತ್ವನಿಧಿ'ಯ ಮೊದಲ ವಿಭಾಗವಾದ 'ಶಕ್ತಿನಿಧಿ'ಯಲ್ಲಿ ಮೈಸೂರು ಪ್ರತಿಯ ಆರಂಭದಲ್ಲೆ ಶ್ರೀಚಕ್ರಪುರವರ್ಣನೆ ವಿಸ್ತಾರವಾಗಿ ಸಚಿತ್ರವಾಗಿ ಬಂದಿದೆ; ಇದು ಪ್ರಮುಖವಾಗಿ ಲಲಿತೋಪಾಖ್ಯಾನವನ್ನವಲಂಬಿಸಿದ ಭಾಗ. ಇದು ನನ್ನಲ್ಲಿರುವ ಪ್ರತಿಯಲ್ಲಿರದು. ಬಹುಶಃ ಇದು ಮುಮ್ಮಡಿಯವರ ಇನ್ನೊಂದು ಸ್ವತಂತ್ರ ರಚನೆಯಿದ್ದೀತು; ಮೈಸೂರು ಪ್ರತಿಯಲ್ಲಿ ಅದನ್ನು ಸೇರಿಸಿಕೊಳ್ಳಲಾಗಿದೆ. ಹೀಗೆ ಮೈಸೂರಿನ ಪ್ರತಿಯಲ್ಲಿ ಸೇರಿಸಿರುವ ಹಲವು ವಿವರಗಳು ನನ್ನ ಬಳಿಯಿರುವ ಪ್ರತಿಯಲ್ಲಿ ಕಾಣಸಿಗದೆ ಇರುವುದರ ಕಾರಣ ಇದು ಚಿತ್ರಗಾರರ ವಶಕ್ಕೆ ಗ್ರಂಥವನ್ನು ಕೊಡುವ ಮೊದಲೆ ಸಿದ್ಧವಾದದ್ದು.

'ಶ್ರೀತತ್ತ್ವನಿಧಿ'ಯು ಬಹುಮಟ್ಟಿಗೆ ಒಂದು ಸಂಕಲನಗ್ರಂಥ. ಇದರಲ್ಲಿ ಮೊದಲ ಏಳೆಂಟು ಶ್ಲೋಕಗಳನ್ನೂ ಕಡೆಯ ವಿಭಾಗವಾದ ಕೌತುಕನಿಧಿಯನ್ನೂ ಬಿಟ್ಟರೆ ಮುಮ್ಮಡಿಯವರ ಸ್ವಂತರಚನೆ ಅಷ್ಟಾಗಿ ಇರದು. ಹಲವಾರು ಪುರಾಣ, ಆಗಮ, ಕಲ್ಪ, ಪ್ರಕರಣಗ್ರಂಥಗಳಿಂದ ಪ್ರಸಕ್ತವಾದ ವಿವರಗಳನ್ನು ಆಯ್ದುಕೊಂಡು, ಕ್ರಮವರಿತು ಇಲ್ಲಿ ಸೇರಿಸಿದ್ದಾರೆ. ವಿಷಯಗಳಾದರೂ ಅವರದ್ದೇ ಕಲ್ಪನೆಯೆನ್ನುವಂತಿಲ್ಲ. ಇದೊಂದು ಸಂಕಲನ ಗ್ರಂಥವೆಂಬುದನ್ನು ಅವರೇ ಮೊದಲಲ್ಲಿ ಹೇಳಿಯೂ ಇದ್ದಾರೆ. ಆಕರಸ್ಮರಣೆಯನ್ನೂ ಅಲ್ಲಲ್ಲಿಯೆ ಮಾಡಿದ್ದಾರೆ. ನಡುನಡುವೆ ತಮ್ಮ ಮಾತುಗಳಿಂದ ಸಂದರ್ಭವನ್ನೂ ಸಂಬಂಧವನ್ನೂ ಸೂಚಿಸಿದ್ದಾರೆ. ಅವರು ಬಳಸಿಕೊಂಡಿರುವ ಪ್ರಾಚೀನ ಗ್ರಂಥಗಳೂ ಪ್ರಕರಣಗಳೂ ಇವು-

ನೃಸಿಂಹಪ್ರಾಸಾದ, ಷೋಡಶೀಕಲ್ಪ, ಚಂಡೀಕಲ್ಪ,
ಲಲಿತೋಪಾಖ್ಯಾನ, ಜ್ಞಾನಾರ್ಣವ, ಷೋಡಾಕಲ್ಪ,
ಶೈವಾಗಮ, ಸ್ಕಂದಯಾಮಳ, ದುರ್ಗಾಕಲ್ಪ, ಕಾರಣಾಗಮ,
ಪ್ರತ್ಯಂಗಿರಾಕಲ್ಪ, ಮಹಾಲಕ್ಷ್ಮೀರತ್ನಕೋಶ, ನಾರದಸಂಹಿತೆ,
ಸುದರ್ಶನಸಂಹಿತೆ, ಅಹಿರ್ಬುಧ್ನ್ಯಸಂಹಿತೆ, ವಾರಾಹೀಕಲ್ಪ,
ಶ್ಯಾಮಲಾಕಲ್ಪ, ತ್ರಿಪುರಸುಂದರೀಕಲ್ಪ, ಶಾರದಾತಿಲಕ,
ಪದ್ಮಪುರಾಣ, ಸೋಮನಾಥವಲ್ಲೀಮಂತ್ರಶಾಸ್ತ್ರ,
ಶಾಬರತಂತ್ರ, ಸಿದ್ಧಶಾಬರತಂತ್ರ, ಇಂದ್ರಾಕ್ಷೀಕಲ್ಪ,
ಭವಾನೀಕಲ್ಪ, ತುಳಸೀಮಾಹಾತ್ಮ್ಯ,
ಮಾರ್ಕಂಡೇಯಪುರಾಣ, ಪಾಂಚರಾತ್ರಸಂಹಿತೆ,
ಆಥರ್ವಣರಹಸ್ಯ, ಆಶ್ವಲಾಯನಕಲ್ಪ, ನರಸಿಂಹಪುರಾಣ
(ಬ್ರಹ್ಮನಾರದ ಸಂವಾದ), ಭಾಗವತ, ಸ್ಕಂದಪುರಾಣ,
ಭೃಗುಸಂಹಿತೆ, ವಾಯವೀಯಸಂಹಿತೆ, ನಿರ್ಣಯಸಿಂಧು,
ಪದ್ಮೋತ್ತರಖಂಡ, ಮಂತ್ರಸಾರ, ಹೇಮಾದ್ರಿದಾನಕಾಂಡ,
ಉಡ್ಡಾಮರತಂತ್ರ, ದತ್ತಾತ್ರೇಯಕಲ್ಪ, ಶಂಕರಸಂಹಿತಾ
(ಸ್ಕಾಂದ), ಮುದ್ಗಲಪುರಾಣ, ಭಟ್ಟಭಾಸ್ಕರೀಯ,
ರತ್ನಮಾಲಾ, ಆಗ್ನೇಯಪುರಾಣ, ಶೈವಾಗಮಶೇಖರ,
ಮಲ್ಲಾರೀಮಾಹಾತ್ಮ್ಯ, ಭೈರವಕಲ್ಪ, ಆಯುರ್ವೇದತಂತ್ರ,
ಪ್ರಯೋಗರತ್ನ (ನಾರಣಭಟ್ಟೀಯ), ಶಿವರಹಸ್ಯ
(ತೃತೀಯಾಂಶ), ಶಿಂಗಾಭಟ್ಟೀಯ ಪ್ರಯೋಗ, ಧರ್ಮಶಾಸ್ತ್ರ
(ಆಚಾರಖಂಡ), ಬ್ರಹ್ಮಾಂಡಪುರಾಣ (ಲಕ್ಷ್ಮೀನಾರಾಯಣ
ಸಂವಾದ), ವೈಕುಂಠದೀಕ್ಷಿತೀಯ, ಸಿದ್ಧಾಂತಶೇಖರ,
ಸ್ಮೃತಿಮುಕ್ತಾಫಲ, ತಂತ್ರಸಾರಗ್ರಂಥ, ಮಯೂಖ
(ದಾನಖಂಡ), ಜ್ಯೋತಿಷಾರ್ಣವ, ಯತಿರಾಜಸಪ್ತತಿ,
ಮದನರತ್ನಜ್ಯೋತಿಃಶಾಸ್ತ್ರ, ಪರಾಶರಮಾಧವೀಯ,
ದೈವಜ್ಞವಿಲಾಸ, ನಕ್ಷತ್ರಚೂಡಾಮಣಿ, ಸೂರ್ಯಸಿದ್ಧಾಂತ,
ಜ್ಯೋತಿಷರತ್ನಾಕರ, ಸಚ್ಚರಿತ್ರರಕ್ಷಾ, ಲಲಿತಾಗಮ ಇತ್ಯಾದಿ.

ಈ ಅಸಂಪೂರ್ಣವಾದ ಪಟ್ಟಿಯನ್ನು ನೋಡಿದರೇನೆ ಮುಮ್ಮಡಿಯವರ ಅಭ್ಯಾಸದ ಹರವು ತಿಳಿಯುತ್ತದೆ. ಸಾಹಿತ್ಯ, ವೇದಾಂತ, ಜ್ಯೋತಿಷ್ಯ, ಆಗಮ, ಸ್ಮೃತಿ, ಪುರಾಣ ಎಲ್ಲ ಶಾಸ್ತ್ರಭಾಗಗಳದ್ದೂ ಅವರಿಗೆ ಪರಿಚಯವಿದ್ದಿತು. 'ಶ್ರೀತತ್ತ್ವನಿಧಿ'ಯು ಮುಮ್ಮಡಿಯವರು ತಾವೊಬ್ಬರೆ ಕೂತು ಬರೆದ ಗ್ರಂಥ ಎಂಬ ಹಟಕ್ಕೇನು ಅವಕಾಶವಿರದು. ಅವರ ಆಸ್ಥಾನದಲ್ಲಿ ಉದ್ದಾಮಪಂಡಿತರೂ ಕವಿಗಳೂ ಇದ್ದುದು ದಿಟ; ಅವರ ನೆರವನ್ನು ಅರಸರು ಪಡೆದುಕೊಂಡಿದ್ದರೆ ಆಶ್ಚರ್ಯವೇನಿರದು. ಪಂಡಿತರು ಹಲವಾರು ಶಾಸ್ತ್ರಭಾಗಗಳಲ್ಲಿ ತಜ್ಞರಾಗಿದ್ದವರಾದ್ದರಿಂದ ಆಕರಗ್ರಂಥಗಳನ್ನೋ ಅವುಗಳಲ್ಲಿ ಪ್ರಸಕ್ತಭಾಗಗಳನ್ನೋ ಅರಸರಿಗೆ ಒದಗಿಸಿಕೊಟ್ಟಿರುವುದು ಸಹಜವೇ. ಆದರೆ ಗ್ರಂಥದ ಸ್ವರೂಪ, ಸ್ವಭಾವ, ವ್ಯಾಪ್ತಿ ಇವುಗಳನ್ನು ಅರಸರೆ ನಿರ್ಧರಿಸಿ, ಗ್ರಂಥಕ್ಕೊಂದು ಆಕಾರ ನೀಡಿದರೆಂದು ಧಾರಾಳವಾಗಿ ಹೇಳಬಹುದು. ಅರಸರಿಗೆ ಗ್ರಂಥರಚನೆಯಲ್ಲಿ ಆಸಕ್ತಿಯೂ ಸಾಮರ್ಥ್ಯವೂ ಇದ್ದುದು ಪ್ರಸಿದ್ಧವೆ. ಅವರು ಗ್ರಂಥಕಾರರಲ್ಲವೆಂದು ಯಾರೂ ಸಾಧಿಸಲಾರರು; ಅವರೊಬ್ಬರೆ ಗ್ರಂಥಕ್ಕೆ ಕಾರಣ ಎಂದೂ ಹೇಳಲಾಗದು.

'ಶ್ರೀತತ್ತ್ವನಿಧಿ'ಯು ಒಂಬತ್ತು ಪರಿಚ್ಛೇದಗಳಲ್ಲಿದೆ. ಒಂದೊಂದು ಪರಿಚ್ಛೇದಕ್ಕೂ 'ನಿಧಿ'ಯೆಂಬ ಹೆಸರಿದೆ. ನಿಧಿಗಳನ್ನು ರತ್ನಗಳೆಂದು ಕರೆದು 'ನವನಿಧಿ', 'ನವರತ್ನ' ಎಂಬ ಮಾತು ವಾಡಿಕೆಯಲ್ಲಿದೆ. ನಿಧಿಯೆಂದರೆ



ಹಸ್ತಪ್ರತಿಯ ಚಿತ್ರಗಳು

ಬೆಲೆಬಾಳುವ ವಸ್ತುಗಳು ಕೂಡಿಕೊಂಡಿರುವೆಡೆ; 'ನಿಧೀಯತೇ ಅತ್ರ' ಎಂಬ ವಿವರಣೆಯಿದೆ. ಆಧಾರವೆಂದೂ ಸೂಚನೆ; 'ಗುಣನಿಧಿ', 'ಜಲನಿಧಿ'ಯೆಂಬ ಮಾತುಗಳಿಲ್ಲವೆ? ಕುಬೇರನ ನಿಧಿಗಳು ಒಂಬತ್ತೆಂದು ಸಂಪ್ರದಾಯದ ಎಣಿಕೆ –

ಪದ್ಮೋ ಮಹಾಪದ್ಮಃ ಶಂಖೋ ಮಕರಕಚ್ಛಪೌ ।
ಮುಕುಂದಕುಂದನೀಲಂ ಚ ವರ್ಚೋಽಪಿ ನಿಧಯೋ ನವ ॥

ಎಂದು ಹಾರಾವಳಿಯ ಒಕ್ಕಣೆ. ಮಾರ್ಕಂಡೇಯಪುರಾಣದ 'ನಿಧಿಲಕ್ಷಣ'ವೆಂಬ ಭಾಗದಲ್ಲಿ(ಅಧ್ಯಾಯ ೬೮) ಎಂಟು ನಿಧಿಗಳನ್ನು ಹೇಳಿ ಅವು ಮನುಷ್ಯರಿಗೆ ಅಗತ್ಯವಾದ ಎಲ್ಲವನ್ನೂ ಒದಗಿಸುವ ದೇವತೆಗಳೆಂದು ವಿವರಿಸಿದೆ ('ಇತ್ಯೇತೇ ನಿಧಯಃ ಖ್ಯಾತಾಃ ನರಾಣಾಮರ್ಥದೇವತಾಃ'). ಇವು ವಿದ್ಯೆಗಳೆಂಬ ಮಾತೂ ಅಲ್ಲಿದೆ; ಲಕ್ಷ್ಮಿ ಅಧಿದೇವತೆಯಂತೆ ('ಪದ್ಮಿನೀ ನಾಮ ವಿದ್ಯಾ ಲಕ್ಷ್ಮೀರಧಿದೇವತಾ').

ಅಂತೂ, ಶ್ರೀತತ್ತ್ವನಿಧಿಯ ಒಂಬತ್ತು ನಿಧಿಗಳು ನಮ್ಮ ಬದುಕಿಗೆ ಬೇಕಾಗುವ ವಿವರಗಳಿಗೆ ಆಧಾರಗಳೂ ಹೌದು, ಅವುಗಳ ವಿದ್ಯೆಗಳೂ ಹೌದು. ಗ್ರಂಥದ ಹೆಸರಿನಲ್ಲಿರುವ' ನಿಧಿ'ಯಾದರೋ ಶ್ರೀತತ್ತ್ವದ ನಿಧಿ. 'ಶ್ರೀ'ಯೆನ್ನುವ ಮಾತು ದೇವಿಯನ್ನು ಕುರಿತದ್ದು.'ದುರ್ಗಾಸಪ್ತಶತಿ'ಯಲ್ಲಿ (೧,೨೯) 'ತ್ವಂ ಶ್ರೀಸ್ತ್ವಮೀಶ್ವರೀ' ಎಂಬ ಉಲ್ಲೇಖವಿದೆಯಷ್ಟೆ? ಎಲ್ಲರಿಂದ ಬಯಸಲ್ಪಡುವವಳು, ಸೇವಿಸಲ್ಪಡುವವಳು ಶ್ರೀ ("ಶ್ರೀಯತೇ ಸರ್ವೈಃ"; 'ಶ್ರೀ' ಎನ್ನುವ ಧಾತುವಿಗೆ ಆಜ್ ಉಪಸರ್ಗ ಸೇರಿ ಆಶ್ರಯಮಾಡುವ ಅರ್ಥ ಒದಗುತ್ತದೆ). ತಾಂತ್ರಿಕ ಸಾಧನೆಯಲ್ಲಿ ಶ್ರೀಕ್ರಮ (ಅಥವಾ ಶ್ರೀಕಲ್ಪ) ಎಂಬೊಂದು ಪದ್ಧತಿಯಿದೆ; ಇದನ್ನು ಹಾದಿವಿದ್ಯೆಯೆಂದೂ ಕರೆಯುವುದುಂಟು. ಇಲ್ಲಿ 'ಶ್ರೀ' (ಸುಂದರೀ) ಎನಿಸಿಕೊಳ್ಳುವ ಷೋಡಶೀ ಅಥವಾ ಚಿತ್-ಶಕ್ತಿಯೇ ಆರಾಧ್ಯದೇವತೆ. 'ಪರಶುರಾಮಕಲ್ಪಸೂತ್ರ'ದಲ್ಲಿ ಕಂಡುಬರುವ ತ್ರಿಪುರಾ ಸಿದ್ಧಾಂತದಲ್ಲಿ ಆತ್ಮ-ತತ್ತ್ವ, ವಿದ್ಯಾ-ತತ್ತ್ವ, ಶಿವ-ತತ್ತ್ವಗಳೆಂಬ ಮೂರು ವಿಭಾಗಗಳಿದ್ದು ಎಲ್ಲವನ್ನೂ ಒಳಗೊಂಡಿರುವುದು ಶ್ರೀ-ತತ್ತ್ವವೆಂಬ ವಿವರಣೆಯಿದೆ. ಭಗವತೀಗೀತೆಯು

'ಶಿವಃ ಪ್ರಧಾನಃ ಪುರುಷಃ ಶಕ್ತಿಶ್ಚ ಪರಮಾ ಶಿವಾ ।
ಶಿವಶಕ್ತ್ಯಾತ್ಮಕಂ ಬ್ರಹ್ಮ ಯೋಗಿನಸ್ತತ್ತ್ವದರ್ಶಿನಃ ॥'

ಎಂಬ ಶ್ರೀತತ್ತ್ವವನ್ನು ಬಣ್ಣಿಸಿ ಚಣಕದಂತೆ ಶಿವ-ಶಕ್ತಿಗಳು ಇಬ್ಭಾಗವಾಗುವುದನ್ನು ಹೇಳುತ್ತದೆ. ಮುಮ್ಮಡಿಯವರಿಗೆ ಶಾಕ್ತಾಗಮದ ಈ ಮೂಲಸಿದ್ಧಾಂತದ ಪರಿಚಯವಿದ್ದುದು ಸ್ಪಷ್ಟವಾಗುತ್ತದೆ. 'ಶ್ರೀತತ್ತ್ವನಿಧಿ'ಯಲ್ಲಿನ ಶ್ರೀತತ್ತ್ವ ಮೇಲೆ ಕಾಣಿಸಿದ ವಿವರವೇ ಎಂಬುದು ಗ್ರಂಥದ ಮೊದಲಲ್ಲೆ ಖಚಿತವಾಗುತ್ತದೆ.

ಗ್ರಂಥ ಮೊದಲಾಗುವುದೇ ಶ್ರೀಪುರವರ್ಣನೆಯಿಂದ; ಇದು ಶ್ರೀಚಕ್ರದ ಒಂದು ರೂಪಕಲ್ಪನೆ. ಶ್ರೀತತ್ತ್ವಕ್ಕೆ ಆಕಾರ ಒದಗಿಸುವುದು ಉಪಾಸನೆಯ ಸಲುವಾಗಿಯೆ. ರಾಮಪೂರ್ವತಾಪನಿ ಉಪನಿಷತ್ತಿನಲ್ಲಿ "ಉಪಾಸಕಾನಾಂ ಕಾರ್ಯಾರ್ಥೇ ರೂಪಕಲ್ಪನಾ" ಎಂಬ ಸೂಚನೆಯಿದೆ. ಶ್ರೀತತ್ತ್ವಕ್ಕೆ ಆಕಾರವನ್ನು ಒದಗಿಸುವಲ್ಲಿ ಶ್ರೀಚಕ್ರದ ನವಾವರಣದೇವತೆಗಳು, ಬ್ರಹ್ಮಾಂಡದ ಸ್ವರೂಪ, ಚಿಂತಾಮಣಿಗೃಹದ ಕಲ್ಪನೆ ಮುಂತಾದ ಶ್ರೀವಿದ್ಯಾವಿವರಗಳು ನೆರವಿಗೆ ಬಂದಿವೆ. ಶ್ರೀತತ್ತ್ವದಲ್ಲಿ ಒಳಗೊಳ್ಳುವ ಎಲ್ಲ ಪ್ರಮೇಯಗಳಿಗೂ ಮೂರ್ತರೂಪಗಳನ್ನು ಇಲ್ಲಿ ಕಾಣಿಸಿರುವುದೊಂದು ಇಲ್ಲಿನ ವೈಶಿಷ್ಟ್ಯ. ಮಹಾನಿರ್ವಾಣತಂತ್ರದಲ್ಲಿ ಬರುವ "ಗುಣಕ್ರಿಯಾನುಸಾರೇಣ ರೂಪಂ ದೇವ್ಯಾಃ ಪ್ರಕಲ್ಪಿತಂ" ಎಂಬ ಸೂತ್ರವನ್ನು ಇಲ್ಲಿ ಚೆನ್ನಾಗಿ ಬಳಸಿಕೊಂಡಿದ್ದಾರೆ.

ಇಲ್ಲಿನ ನೂರಾರು ವರ್ಣಚಿತ್ರಗಳು ಗ್ರಂಥದ ಸ್ವರೂಪದಲ್ಲಿ ಅವಿಭಾಜ್ಯವಾದ ಅಂಗ. ಸಂಕಲನದಲ್ಲಿ ಸೇರಿಬಂದಿರುವ ಶ್ಲೋಕಗಳ ಆಶಯವನ್ನೂ ಇಂಗಿತವನ್ನೂ ಅರಿತುಕೊಂಡು ಚಿತ್ರಗಾರರು ಧ್ಯಾನಶ್ಲೋಕಗಳಿಗೆ ಅನುರೂಪವಾದ ಚಿತ್ರಗಳನ್ನು ಸಿದ್ಧಪಡಿಸಿದ್ದಾರೆ. ಚಿತ್ರಗಳಿಗಾಗಿಯೆ ಸಂಕಲನವನ್ನು ಮಾಡಿರಬಹುದು. ಚಿತ್ರಗಳಿಲ್ಲದೆಯೂ ಸಂಕಲನದಲ್ಲಿ ಸ್ವಾರಸ್ಯವಿದೆಯೆನ್ನಿ. ಆದರೆ ಚಿತ್ರಗಳು ಮೂಡಿಸಿರುವ ಕಳೆ ಎದ್ದು ನಿಲ್ಲುವಂಥದು. ಚಿತ್ರಗಳ ರಚನೆಯಲ್ಲಿ ಶಾಸ್ತ್ರಸಮ್ಮತಿಮಾತ್ರವಲ್ಲದೆ ರಸಾಭಿಜ್ಞತೆಯೂ ಕೆಲಸಮಾಡಿದೆ.

ಚಿತ್ರಣಕ್ಕೆ ಸ್ಪಷ್ಟವಾದ, ಖಚಿತವಾದ ರೇಖೆಗಳನ್ನು ಲೇಖನಿಯಿಂದ ಮೂಡಿಸಿ ಅದರಲ್ಲಿ ಕ್ರಮವರಿತು ಕುಂಚದಿಂದ ಹಸಿರು, ಹಳದಿ, ಕಪ್ಪು, ಕೆಂಪು ಬಣ್ಣಗಳನ್ನೆ ಮುಖ್ಯವಾಗಿ ಮೂಡಿಸಿ ರೂಪಕಲ್ಪನೆಯನ್ನು ನಿರ್ವಹಿಸಿದ್ದಾರೆ. ಸಾಮಾನ್ಯವಾಗಿ ಪ್ರತಿಶ್ಲೋಕದ ಆಶಯವನ್ನು ಒಂದೊಂದು ಚಿತ್ರದಲ್ಲಿ ಕಾಣಿಸಿದ್ದಾರೆನ್ನಬಹುದು. ಚಿತ್ರರಚನೆಯಲ್ಲಿ ೧:೩.೫:೭ ಎಂಬ ಅಳತೆಯನ್ನು ಸೂಚಿಸಿ 'ಶಿಲ್ಪಶಾಸ್ತ್ರಕ್ಕೆ ಅನುಗುಣವಾಗಿದೆ'ಯೆಂಬ ಅಭಿಪ್ರಾಯವನ್ನು ಒಂದೆಡೆ ನಮೂದಿಸಿರುವುದನ್ನು ಕಾಣಬಹುದು. ಬಹುಶಃ ಚಿತ್ರಗಳ ಸೇರ್ಪಡೆಯಾದ ಮೇಲೆ ತಜ್ಞರಾದವರು ಯಾರೋ ಚಿತ್ರಗಳನ್ನು ಪರಿಶೀಲಿಸಿ ಈ ಅಭಿಪ್ರಾಯವನ್ನು ಇಲ್ಲಿ ಬರೆದಿದ್ದಾರೆ; ಹಾಗೆ ಅವರು ಮಾಡಲು ವಡೆಯರ ಆದೇಶವಿದ್ದಂತೆ ತೋರುತ್ತದೆ. ಆದರೆ ಈ ಅಳತೆಯು ಯಾವ ಶಿಲ್ಪಶಾಸ್ತ್ರಕ್ಕೆ ಸಮ್ಮತವಾಗಿದೆಯೆಂಬುದು ಸ್ಪಷ್ಟವಾಗುವುದಿಲ್ಲ. ವರ್ಣಚಿತ್ರಗಳನ್ನು ಕುರಿತಂತೆ ನಿರ್ದೇಶನವೇನೋ ಚಾಳುಕ್ಯ ಸೋಮೇಶ್ವರನ 'ಮಾನಸೋಲ್ಲಾಸ' (ಅಭಿಲಷಿತಾರ್ಥಚಿಂತಾಮಣಿ), ನಿಜಗುಣರ 'ಶಿವತತ್ತ್ವರತ್ನಾಕರ', ವಿಷ್ಣುಧರ್ಮಪುರಾಣ ಮೊದಲಾದ ಕೆಲವು ಗ್ರಂಥಗಳಲ್ಲಿವೆ. ನಿರ್ದೇಶನ ಏಕರೀತಿಯಾಗಿಲ್ಲದಿರುವುದನ್ನೂ ಗಮನಿಸಬಹುದು. ಶ್ರೀತತ್ತ್ವನಿಧಿಯ ಚಿತ್ರಗಾರರು ಯಾವ ಗ್ರಂಥವನ್ನು ಅವಲಂಬಿಸಿದ್ದಾರೆಂದು ಹೇಳುವುದು ಕಷ್ಟ.

ಇಲ್ಲಿ ಸೇರಿರುವ ದೇವತಾಮೂರ್ತಿರೂಪಗಳೆಲ್ಲ ಬಹುಮಟ್ಟಿಗೆ ವೈದಿಕ ತಾಂತ್ರಿಕ ಸಂಪ್ರದಾಯಕ್ಕೆ ಒಗ್ಗಿಕೊಂಡಂಥವು; ಇವನ್ನೆಲ್ಲ ಆಗಮ-ಪುರಾಣಗಳಿಂದಲೇ ಎತ್ತಿಕೊಂಡಿದ್ದಾರೆಂದು ಹೇಳಬಹುದು. ಕೆಲವು ಜೈನಸಂಪ್ರದಾಯದ ಚಿತ್ರಗಳೂ ಇವೆ – ಜ್ವಾಲಾಮಾಲಿನಿ, ಕೂಷ್ಮಾಂಡಿನಿ, ಪದ್ಮಾವತಿ, ಚಕ್ರೇಶ್ವರಿ ಮೊದಲಾಗಿ. ಇವನ್ನು ರಚಿಸುವಾಗ ಭೈರವಪದ್ಮಾವತೀಕಲ್ಪ, ರೂಪಮಂಡನ ಮೊದಲಾದ ಜೈನಾಗಮಗ್ರಂಥಗಳಿಂದಲೇ ವಿವರಗಳನ್ನು ಪಡೆದುಕೊಂಡಿರುವಂತೆ ತೋರುತ್ತದೆ. ಮಹಾಯಾನ, ವಜ್ರಯಾನವೆಂಬ ಬೌದ್ಧಪಂಥಗಳಲ್ಲಿ ಪೂಜೆಗೊಳ್ಳುವ ಉಗ್ರತಾರೆ, ಕುರುಕುಲ್ಲಾ, ವಜ್ರವಾರಾಹೀ ಮೊದಲಾದ ದೇವತೆಗಳ ಚಿತ್ರಣವೂ ಇಲ್ಲಿ ಬಂದಿದೆ. ಅವನ್ನು ರಚಿಸುವಾಗ 'ಸಾಧನಮಾಲಾ' ಎಂಬ ಆಗಮಗ್ರಂಥವನ್ನು ಅವಲಂಬಿಸಿರುವಂತೆ ಕಾಣುತ್ತದೆ. ಮತ್ತೆ ಆಗಮೋಕ್ತವಲ್ಲದ ಕೆಲವು ದೇವತೆಗಳ ಉಲ್ಲೇಖವೂ ಇಲ್ಲಿ ಕಾಣಿಸಿಗುತ್ತದೆ. ನಡುಯುಗದಿಂದ ಅಲ್ಲಲ್ಲಿ ಪೂಜೆಗೊಳ್ಳುತ್ತಿರುವ ಈ ಕೆಲವು ದೇವತೆಗಳಿಗೆ ಆಯಾ ಉಪಾಸನಾಪದ್ಧತಿಗಳೂ, ಸ್ಥಳಪುರಾಣಗಳೂ, ಪೂಜಾಕಲ್ಪಗಳೂ ಆಕರಸಾಮಗ್ರಿಯಾಗಿರುವುದು ಸಾಧ್ಯ.



ಚಾಮುಂಡೇಶ್ವರಿ

೩. ಗ್ರಂಥದ ಪರಿವಿಡಿ

'ಶ್ರೀತತ್ತ್ವನಿಧಿ'ಯ ರಚನೆ ಜಯಂತಿ ಸಂವತ್ಸರದ ಆಷಾಢಶುದ್ಧ ಏಕಾದಶಿಯಂದು ರೇವತೀ ನಕ್ಷತ್ರವಿರುವಾಗ ಆರಂಭವಾಯಿತೆಂಬ ಒಕ್ಕಣೆಯಿದ್ದರೂ ಗ್ರಂಥವು ಒಮ್ಮೆಲೆ ಆದಂತೆ ತೋರುವುದಿಲ್ಲ; ಅದರ ರಚನೆಯಲ್ಲಿ ಕೆಲವು ಹಂತಗಳನ್ನು ಗುರುತಿಸುವುದು ಸಾಧ್ಯ. ಈಗ ದೊರಕುವ ಹಸ್ತಪ್ರತಿಗಳಲ್ಲೇನೋ ಒಂಬತ್ತು ಅಧ್ಯಾಯಗಳಿದ್ದು, ಅವುಗಳಿಗೆ ಒಂದೊಂದಕ್ಕೂ ನಿಧಿಯೆಂಬ ನಿರ್ದೇಶನವಿದೆ. ಮೊದಲನೆಯದಾದ 'ಶಕ್ತಿನಿಧಿ'ಯ ವಿಸ್ತಾರವನ್ನೂ ವಿವರವನ್ನೂ ನೋಡಿದರೆ ಅದು ಸ್ವತಂತ್ರವಾಗಿಯೆ ಸಿದ್ಧವಾದ ಗ್ರಂಥವೇನೋ ಎಂದೆನಿಸುತ್ತದೆ. ಅದು ಮುಗಿದಮೇಲೆ ಇನ್ನು ಏಳು ಅಧ್ಯಾಯಗಳನ್ನು ಅದಕ್ಕೆ ಅನುಬಂಧವಾಗಿ ಸೇರಿಸಿದ್ದಾರು. ಮಾರ್ಕಂಡೇಯ ಪುರಾಣದಲ್ಲಿ ಬರುವ ಎಂಟು ನಿಧಿಗಳ ಎಣಿಕೆ ಇದಕ್ಕೆ ಪ್ರೇರಣೆಯನ್ನು ಒದಗಿಸಿರಬಹುದು. ರಚನೆಯ ಸಂವಿಧಾನದಲ್ಲಿ ಮೊದಲ 'ನಿಧಿ'ಗೂ ಉಳಿದ ಏಳು 'ನಿಧಿ'ಗಳಿಗೂ ಇರುವ ವ್ಯತ್ಯಾಸವನ್ನು ಯಾರಾದರೂ ಗಮನಿಸಬಹುದು. ಈ ಎಂಟೂ ನಿಧಿಗಳಲ್ಲಿ ಏಕತಾನತೆಯಾಗಲಿ ಅಡಕವಾದ ಒಂದು ಚೌಕಟ್ಟಾಗಲಿ ಕಂಡುಬರುವುದಿಲ್ಲ.

ಇನ್ನು ಕಡೆಯದಾದ 'ಕೌತುಕನಿಧಿ'ಯು ಗ್ರಂಥದ ಸ್ವರೂಪಕ್ಕಾಗಲಿ ಉದ್ದೇಶಕ್ಕಾಗಲಿ ಹೊಂದಿಕೊಳ್ಳುವಂಥದೇ ಅಲ್ಲ. ಮೇಲಾಗಿ ಉಳಿದ 'ನಿಧಿ'ಗಳಂತೆ ಇದು ಪ್ರಾಚೀನಗ್ರಂಥಗಳಿಂದ ಮಾಡಿಕೊಂಡ ಸಂಕಲನವೂ ಅಲ್ಲ. ಬಹುಮಟ್ಟಿಗೆ ಇದು ಅರಸರ ಸ್ವಂತ ರಚನೆಯೆ. ಅರಸರಿಗೆ ಪ್ರಿಯವಾಗಿದ್ದ ಪಗಡೆ, ಗಂಜೀಫಾ ಆಟಗಳನ್ನೆ ಕುರಿತ ಈ ಭಾಗ 'ಶ್ರೀತತ್ತ್ವನಿಧಿ'ಯಲ್ಲಿ ಹೇಗೆ ಸೇರಿಕೊಂಡಿತೋ ತಿಳಿಯದು; 'ನವನಿಧಿ'ಗಳಾಗಬೇಕೆಂಬ ತವಕವೇ ಕಾರಣ ಇದ್ದರೂ ಇದ್ದೀತು. 'ಕೌತುಕ'ವೆಂಬ ಹೆಸರೂ ಹಾಗೆ ನೋಡಿದರೆ ಸಮಂಜಸವಲ್ಲ. ಮತ್ತು ಗಂಜೀಫಾ ಬಗೆಗಳನ್ನು ತಿಳಿಯಹೇಳುವಾಗ ಅಲ್ಲಲ್ಲಿ ರಚನೆಯ ಕಾಲನಿರ್ದೇಶನವನ್ನೂ ಮಾಡಿದ್ದಾರೆ. ಇದು ಮೊದಲು ಸ್ವತಂತ್ರವಾಗಿಯೇ ಸಿದ್ಧವಾಗಿದ್ದು, ಅನಂತರ 'ಶ್ರೀತತ್ತ್ವನಿಧಿ'ಯ ಅಂಗವಾಗಿ ಸೇರ್ಪಡೆಗೊಂಡಿತೆನ್ನಬಹುದು. ಇದೇ ವಿಚಾರವಾಗಿ ಇನ್ನೊಂದು ಸಚಿತ್ರ ಹಸ್ತಪ್ರತಿಯೂ ಮಹಾರಾಜರ ಹೆಸರಿನಲ್ಲೆ ಇದೆ.

'ಶ್ರೀತತ್ತ್ವನಿಧಿ'ಯಲ್ಲಿ ಈಗ ಕಾಣಿಸಿಕೊಳ್ಳುವ ಒಂಬತ್ತು ಅಧ್ಯಾಯಗಳ ವಿವರಗಳು ಹೀಗಿವೆ.

(೧)

ಮೊದಲನೆಯದು 'ಶಕ್ತಿನಿಧಿ'. ಇದರ ಪುಷ್ಪಿಕೆಯಲ್ಲಿ 'ಚಾಮುಂಡಾದಿ ಶಕ್ತಿಸ್ವರೂಪ-ನಿರೂಪಣಂ ನಾಮ ಪ್ರಥಮೋ ನಿಧಿಃ' ಎಂಬ ಒಕ್ಕಣೆಯಿದೆ. ಚಾಮುಂಡೇಶ್ವರಿ ಅರಸರ ಕುಲದೈವ, ಇಷ್ಟದೈವ. ಶಕ್ತಿಯ ಈ ರೂಪವೆ ಮೊದಲಲ್ಲಿ ಬಂದಿರುವುದು ಸಹಜ. ಅನಂತರ ರಾಜರಾಜೇಶ್ವರಿ, ಮಹಾಕಾಳೀ-ಮಹಾಲಕ್ಷ್ಮೀ-ಮಹಾಸರಸ್ವತಿಯರು, ಶ್ರೀಚಕ್ರದ ನವಾವರಣಗಳಲ್ಲಿರುವ ದೇವತೆಯರು, ಅಣಿಮಾದಿ ಸಿದ್ಧಿದೇವತೆಯರು, ಅಷ್ಟಮಾತೃಕೆಯರು (ಸಪ್ತಮಾತೃಕೆಯರೊಂದಿಗೆ ಮಹಾಲಕ್ಷ್ಮಿಯೂ ಸೇರಿ), ತಿಥಿನಿತ್ಯೆಯರು, ತ್ರಿಪುರಸುಂದರೀ, ಯೋಗನಿದ್ರಾದೇವತೆ, ಹದಿನೆಂಟು ಭುಜಗಳ ಭದ್ರಕಾಳಿ, ಮೂಲಾಧಾರಾದಿ ಸಪ್ತಪೀಠೇಶ್ವರಿಯರು, ಸಪ್ತಮಾತೃಕೆಯರು (ಮೇಲೆ ಬಂದಿರುವುದಕ್ಕಿಂತ ಬೇರೆಯಾಗಿ), ಷೋಡಶಭುಜ ದುರ್ಗೆ, ಪ್ರತ್ಯಂಗಿರಾ, ಧೂಮಾವತಿ, ವಶ್ಯಮುಖೀ, ಕುರುಕುಳಾ, ಅಪರಾಜಿತಾ, ದಂಡನಾಥಾ ವಾರಾಹೀ, ಶುದ್ಧವಾರಾಹೀ, ಲಘುಶ್ಯಾಮಳಾ, ರಾಜಮಾತಂಗಿ, ಬಾಲಾ, ಭುವನೇಶ್ವರೀ, ಮೃತಸಂಜೀವಿನಿ, ಬಗಳಾ, ಪ್ರಾಣಶಕ್ತಿ, ಶ್ರೀವಿದ್ಯಾದೇವೀ, ಕಾಮಕಳೇಶ್ವರಿ, ಬನಶಂಕರೀ, ಶಾಕಂಬರೀ, ಆಸುರೀದೇವೀ, ಸರ್ವವರ್ಣೇಶ್ವರೀ, ಚತುಃಷಷ್ಟಿಕಳಾದೇವೀ, ದ್ವಾದಶಾರ್ಧದೇವೀ, ತಿರಸ್ಕರಿಣೀ, ಅಶ್ವಾರೂಢಾ, ಇಂದ್ರಾಕ್ಷೀ, ತುಳಜಾಭವಾನೀ, ಚಂದಾ ಪರಮೇಶ್ವರೀ, ತುಳಸೀ, ಸಾವಿತ್ರೀ, ಸರಸ್ವತೀ, ಅನ್ನಪೂರ್ಣಾ, ಅಗ್ನಿದುರ್ಗಾ, ಅಷ್ಟಲಕ್ಷ್ಮಿಯರು, ಸೌಭಾಗ್ಯಭುವನೇಶ್ವರೀ, ವಜ್ರಪ್ರಸ್ತಾರಿಣೀ, ಮಾಯಾ, ತ್ರಿಕಂಟಕೀ, ಮೋಹಿನೀ, ವಿಂಧ್ಯವಾಸಿನೀ (ದುರ್ಗೆ), ರಿಪುಮಾರಿಣೀ(-ದುರ್ಗೆ), ಸಂವಿತ್ತ್ರಿಪುರಾ ಮೊದಲಾದ ಶಕ್ತಿರೂಪಗಳ ಧ್ಯಾನಶ್ಲೋಕಗಳಿವೆ.

(೨)

ಎರಡನೆಯದು 'ವಿಷ್ಣುನಿಧಿ', ಇದು 'ವಿರಾಡ್ರೂಪಾದಿ ವಿಷ್ಣುಸ್ವರೂಪನಿರೂಪಣ'. ಮೊದಲಲ್ಲಿ ಭಾಗವತದ ದ್ವಿತೀಯಸ್ಕಂದದ ಮೊದಲನೆ ಅಧ್ಯಾಯದಿಂದ ವಿರಾಟ್‌ಪುರುಷನ ವರ್ಣನೆಯನ್ನು ಆಯ್ದುಕೊಳ್ಳಲಾಗಿದೆ. ಅನಂತರ ಪಾದ್ಮೋತ್ತರ ಖಂಡದಿಂದ ಮಹಾವೈಕುಂಠಮೂರ್ತಿಸ್ವರೂಪ; ಮುಂದೆ ವಿಷ್ಣು; ಅವನ ಶಕ್ತಿಯರಾದ ಲಕ್ಷ್ಮಿ, ಭೂದೇವಿ, ನೀಳಾದೇವಿಯರು; ವಿಷ್ಣುವಿನ ರೂಪಾಂತರಗಳಾದ ವೈಕುಂಠನಾರಾಯಣ, ತಾರಕರಾಮ, ಶಿಂಶುಮಾರ, ತ್ರಿವಿಕ್ರಮ, ಹಯಗ್ರೀವ ಭೂವರಾಹ, ಧರಣೀವರಾಹ, ಶ್ರೀಕರಮೂರ್ತಿ, ಹಂಸಮೂರ್ತಿ, ದಧಿವಾಮನ, ಅಶ್ವತ್ಥನಾರಾಯಣ, ಲಕ್ಷ್ಮೀನೃಸಿಂಹ; ಕೇಶವಾದಿ ಚತುರ್ವಿಂಶತಿಮೂರ್ತಿಗಳು(೨೪), ವ್ಯೂಹಚತುಷ್ಟಯ (೪), ಮತ್ಸ್ಯಾದಿ ದಶಾವತಾರಗಳು(೧೦); ಸೂರ್ಯನಾರಾಯಣ, ಗಂಡಭೇರುಂಡನೃಸಿಂಹ, ಪಂಚವಕ್ತ್ರನರಸಿಂಹ, ಪ್ರತಾಪರಾಮ, ಸಪರಿವಾರ ಪಟ್ಟಾಭಿರಾಮ, ಅನಂತಮೂರ್ತಿ, ಗೋಪಾಲಕೃಷ್ಣ, ಸಂತಾನಗೋಪಾಲ, ಮದನಗೋಪಾಲ; ವಿಷ್ಣುವಿನ ಪರಿವಾರದಲ್ಲಿ ಸೇರಿದ ಸುದರ್ಶನ ಚಕ್ರ, ವಿಷ್ವಕ್ಸೇನ, ಆಂಜನೇಯ, ಗರುಡ, ಕಾರ್ತವೀರ್ಯ, ಮನ್ಮಥ ಮತ್ತು ದತ್ತಾತ್ರೇಯ ಇವರನ್ನು ಕುರಿತಂತೆ ಧ್ಯಾನಶ್ಲೋಕಗಳಿವೆ.

(೩)

ಮೂರನೆಯದು 'ಶಿವನಿಧಿ'. ಇದರಲ್ಲಿರುವುದು "ಮಹಾಕೈಲಾಸಮೂರ್ತ್ಯಾದಿ ಶಿವಮೂರ್ತಿ ಸ್ವರೂಪಣಂ" ಮಹೇಶ್ವರ, ಗೌರಿ, ಮಹಾಕೈಲಾಸಮೂರ್ತಿ, ದ್ವಾತ್ರಿಂಶದಘೋರಮೂರ್ತಿಗಳು (೩೨), ಮೃತ್ಯುಂಜಯ, ನೀಲಕಂಠ, ರುದ್ರ, ಉಮಾಮಹೇಶ್ವರ, ಸಭಾಪತಿ (ನಟರಾಜ), ಸದ್ಯೋಜಾತಾದಿ ಪಂಚಮೂರ್ತಿಗಳು (೫), ಸಪ್ತತಾಂಡವರೂಪಗಳು (೭), ಭವಾದ್ಯಷ್ಟಮೂರ್ತಿಗಳು (೮), ಏಕಾದಶರುದ್ರರು (೧೧), ಪಂಚವಿಂಶತಿ ಲೀಲಾಮೂರ್ತಿಗಳು (೨೫) ; ಮತ್ತು ಈ ನಿಧಿಯಲ್ಲೇ ದ್ವಾತ್ರಿಂಶದ್ ಗಣಪತಿರೂಪಗಳು (೩೨), ಸಪ್ತದಶ ಸುಬ್ರಹ್ಮಣ್ಯರೂಪಗಳು (೧೭), ವೀರಭದ್ರ,

ಸ್ವರ್ಣಾಕರ್ಷಣಭೈರವ, ವಟುಕಭೈರವ, ಮಲ್ಲಾರಿ, ಚಂಡೇಶ, ಪಾಶುಪತಾಸ್ತ್ರಮೂರ್ತಿ, ಖಡ್ಗರಾವಣ ಮತ್ತು ಭೈರವಾಷ್ಟಕ (೮) ಇವುಗಳ ಧ್ಯಾನಶ್ಲೋಕಗಳು ಬರುತ್ತವೆ.

(೪)

ನಾಲ್ಕನೆಯದು 'ಬ್ರಹ್ಮನಿಧಿ'. ಇದು 'ಚತುರ್ಮುಖ ಬ್ರಹ್ಮಾದಿ ದಿಕ್ಪಾಲನಿರೂಪಣಂ'. ಚತುರ್ಮುಖಬ್ರಹ್ಮನ ಧ್ಯಾನಶ್ಲೋಕದಿಂದ ಆರಂಭವಾಗಿ ಬ್ರಹ್ಮನ ಶಕ್ತಿಯಾದ ಸರಸ್ವತಿ, ಪಂಚಬ್ರಹ್ಮರು (೫), ಆದ್ಯ ಲೋಕಪಾಲಬ್ರಹ್ಮ, ಪ್ರಜಾಪತಿ, ವಿಧಿ, ನವ ಪ್ರಜೇಶ್ವರರು (೯), ಸಪ್ತರ್ಷಿಗಳು (೭), ಧರ್ಮಾದಿ ಚತುಷ್ಟಯ (೪), ಪುಣ್ಯಪುರುಷ, ಪಾಪಪುರುಷ, ವೇದಚತುಷ್ಟಯ (೪), ಉಪವೇದಗಳು (೪), ವೇದಷಡಂಗ ದೇವತೆಗಳು (೬), ಮಿಮಾಂಸಾಶಾಸ್ತ್ರ ಸ್ವರೂಪ, ಧರ್ಮಶಾಸ್ತ್ರ, ನ್ಯಾಯ, ಪುರಾಣ, ಇತಿಹಾಸ, ಭರತಶಾಸ್ತ್ರ, ಪಾಂಚರಾತ್ರ, ಪಾಶುಪತಶಾಸ್ತ್ರ, ಪಾತಂಜಲಶಾಸ್ತ್ರ, ಸಾಂಖ್ಯಶಾಸ್ತ್ರ, ಚತುಃಷಷ್ಟಿ ಕಲೆಗಳು (೬೪), ದೇವತೆಗಳು, ಪಂಚಭೂತಗಳು (೫), ದಶದಿಕ್ಕುಗಳು (೧೦), ಅಷ್ಟನಾಗ (೮), ಅಷ್ಟದಿಗ್ಗಜ (೮), ಅಷ್ಟದಿಕ್ಪಾಲಕರು (೮), ವಸುಗಳು, ಏಕೋನಪಂಚಾಶನ್ಮರುತರು (೪೯), ಸಪ್ತಸಮುದ್ರಗಳು(೭), ಅಷ್ಟನದಿಗಳು (೮), ಪರ್ಜನ್ಯ, ಅಶ್ವಿನಿ, ಕಾಮಧೇನು, ದ್ವಾದಶಾಯುಧಗಳು (೧೨), ಶಕ್ತಿತ್ರಯ (ಪ್ರಭು, ಮಂತ್ರ, ಉತ್ಸಾಹ), ಉಪಾಯ ಚತುಷ್ಟಯ (ಸಾಮ, ದಾನ, ಭೇದ, ದಂಡ), ಚತುರ್ದಶಮನುಗಳು (೧೪), ನವ ಚಿರಂಜೀವಿಗಳು (೯), ಮರೀಚ್ಯಾದಿ ಋಷಿಗಳು, ಶಾಸ್ತ್ರಾಭಿಮಾನಿದೇವತೆಗಳು. ಯಕ್ಷ ಮತ್ತು ವಿಶ್ವಕರ್ಮ ಇವೆಲ್ಲದರ ಧ್ಯಾನಶ್ಲೋಕಗಳನ್ನು ಕೊಡುತ್ತದೆ.

(೫)

ಐದನೆಯದು 'ಗ್ರಹನಿಧಿ'. ''ಯುಗಾದಿಕಾಲಭೇದ, ತದ್ದೇವತಾ ಸ್ವರೂಪನಿರೂಪಣಂ'' ಎಂಬ ನಿರ್ದೇಶನವಿದೆ. ಇದರಲ್ಲಿ ಸೂರ್ಯಾದಿ ಗ್ರಹಗಳು (೯), ಕ್ಷೇತ್ರಪಾಲ, ವಾಸ್ತುಪುರುಷ, ಮೃತ್ಯುಂಜಯ, ಚತುರ್ಯುಗಗಳು (೪), ಕಲಿಪುರುಷ, ಪ್ರಭವಾದಿ ಷಷ್ಟಿಸಂವತ್ಸರಸ್ವರೂಪ (೬೦), ಅವುಗಳ ಅಭಿಮಾನಿ ದೇವತೆಗಳು, ಆ ಸಂವತ್ಸರಗಳಲ್ಲಿ ಹುಟ್ಟಿದವರ ಸ್ವರೂಪ; ಉತ್ತರಾಯಣ-ದಕ್ಷಿಣಾಯನಗಳ ಲಕ್ಷಣಗಳು, ಅಭಿಮಾನಿದೇವತೆಗಳು, ಅವುಗಳಲ್ಲಿ ಯುಕ್ತವಾದ ದಾನಗಳು; ಷಡೃತುಗಳು (೬) ಅವುಗಳ ಸ್ವರೂಪ, ಅಭಿಮಾನಿದೇವತೆಗಳು, ಕರ್ತವ್ಯದಾನಗಳು; ಚೈತ್ರಾದಿ ಮಾಸಸ್ವರೂಪ (೧೨), ಅವುಗಳಲ್ಲಿ ಹುಟ್ಟಿದವರ ಗುಣಗಳು; ಮೇಷಾದಿ ಮೀನಪರ್ಯಂತ ರಾಶಿಗಳು (೧೨); ದ್ವಾದಶಸಂಕ್ರಾಂತಿಸ್ವರೂಪ(೧೨); ದ್ವಾದಶಮಾಸಾಭಿಮಾನಿದೇವತೆಗಳು (೧೨); ದ್ವಾದಶಾದಿತ್ಯರು (೧೨); ಅಧಿಮಾಸ-ಕ್ಷಯಮಾಸಲಕ್ಷಣ, ಮಕರಸಂಕ್ರಾಂತಿಸ್ವರೂಪ, ಸಂಕ್ರಾಂತಿಸಾಮಾನ್ಯಲಕ್ಷಣ; ಶುಕ್ಲಪಕ್ಷ-ಕೃಷ್ಣಪಕ್ಷಸ್ವರೂಪ; ತಿಥಿಸ್ವರೂಪ (೧೫) ಮತ್ತು ತಿಥ್ಯಾಭಿಮಾನಿದೇವತೆಗಳು, ಆಯಾತಿಥಿಗಳಲ್ಲಿ ಹುಟ್ಟಿದವರ ಗುಣಗಳು; ವಾರಸ್ವರೂಪ, ಅವುಗಳಲ್ಲಿ ವಿಷನಾಡೀಪ್ರವೇಶ, ವಾರಾಭಿಮಾನಿದೇವತೆಯರು, ವಾರಜಾತಗುಣಗಳು; ನಕ್ಷತ್ರಗಳ ಅಧಿಪತಿಗಳು, ನಕ್ಷತ್ರಗಳಲ್ಲಿ ಮಾಡಬೇಕಾದ ದಾನಗಳು, ಹುಟ್ಟಿದವರ ಗುಣಗಳು; ವಿಷ್ಕಂಭಾದಿ ಸಪ್ತವಿಂಶತಿಯೋಗಗಳು (೨೭), ಬವಾದಿ ಏಕಾದಶಕರಣಗಳು (೧೧); ಗುಳಿಕಸ್ವರೂಪ; ವ್ಯತೀಪಾತ ವಿಚಾರ; ಜನ್ಮನಕ್ಷತ್ರಸ್ವರೂಪ; ಮಾಸಭೇದ; ಮೇಷಾದಿ ದ್ವಾದಶರಾಶಿಸ್ವರೂಪ; ರಾಶಿಗಳ ಸ್ಥಿತಿಸ್ವರೂಪ, ಮೇಷಾದಿ ದ್ರೇಕ್ಕಾಣಸ್ವರೂಪ; ದಿವಾಸ್ವರೂಪ (ಹಗಲು), ರಾತ್ರಿಸ್ವರೂಪ, ಸಂಧ್ಯಾರೂಪ; ಮಹಾಕಾಲಸ್ವರೂಪ, ಉಗ್ರದೇವತೆ; ಮೃತ್ಯುದೇವತೆ; ಕುಹೂಕೃತ್ಯಾ; ಮಹಾಕೃತ್ಯಾ; ರಾಕಾ; ಸಿನೀವಾಲೀ; ಕಾಳರಾಹು; ಅಪಸ್ಮಾರ; ದಿವಾರಾತ್ರಿಮುಹೂರ್ತಗಳು; ಘಟಿಕಾಸ್ವರೂಪಗಳು (ಸಾತ್ತ್ವಿಕ, ರಾಜಸ, ತಾಮಸ), ಕಾಳಿ, ಕಲವಿಕರಣಿ, ತೀವ್ರಾ, ಮದ-ಮತ್ಸರೇರ್ಷ್ಯಾ-ದಂಭಾ-ಅಹಂಕೃತಿಗಳು, ಭ್ರಾಮರೀ, ಸಂಕಟಾ, ಉಲ್ಕಿಕಾ, ಕಲಾದೇವೀ, ಕಾಷ್ಠಾದೇವೀ, ನಿಮೇಷಾಸ್ವರೂಪ, ಕ್ಷಣರೂಪ ಈ ವಿವರಗಳು ಬರುತ್ತವೆ.

(೬)

ಆರನೆಯದು 'ವೈಷ್ಣವನಿಧಿ'. ಇದು 'ವಿಷ್ಣುನಿಧಿ'ಗೆ ಅನುಬಂಧವಾಗಿ ಸೇರಿಕೊಂಡಂತಿದೆ. ವೈಷ್ಣವರು ನಂಬಿರುವ ಕಲ್ಪನೆಗಳನ್ನೂ, ಅವರ ಆಚಾರಗಳನ್ನೂ ಹೇಳುವ ಭಾಗ ಇದು. ಶ್ರೀವೈಷ್ಣವ ಸಂಪ್ರದಾಯವನ್ನೆ ಅನುಸರಿಸಿ ಸಿದ್ಧವಾದದ್ದು. ''ವಿಷ್ಣುಕ್ಷೇತ್ರ ಸಾಲಗ್ರಾಮಾದಿ ಲಕ್ಷಣನಿರೂಪಣಂ'' ಎಂಬ ಒಕ್ಕಣೆಯನ್ನು ಪುಷ್ಪಿಕೆಯಲ್ಲಿ ಕಾಣುತ್ತೇವೆ. ಬ್ರಹ್ಮಾಂಡಪುರಾಣದಿಂದ ಷೋಡಶೋತ್ತರಶತದಿವ್ಯ ಸ್ಥಳಗಳಲ್ಲಿರುವ ಅರ್ಚಾಮೂರ್ತಿಗಳ ವಿಚಾರವನ್ನು ಆಯ್ದುಕೊಂಡು ಇಲ್ಲಿ ಕೊಡಲಾಗಿದೆ. ನೂರೆಂಟು ತಿರುಪತಿಗಳು, ಅಲ್ಲಿರುವ ರೂಪ, ವಿಮಾನ, ತೀರ್ಥ ಇತ್ಯಾದಿ, ಎಂಟು ಸ್ವಯಂವ್ಯಕ್ತಸ್ಥಳಗಳು (ಶ್ರೀರಂಗ, ಶ್ರೀಮುಷ್ಣ, ಸಾಲಿಗ್ರಾಮ, ನೈಮಿಶಾರಣ್ಯ, ತೋತಾದ್ರಿ, ಪುಷ್ಕರ, ಬದರಿ, ವೆಂಕಟಾಚಲ); 'ಪ್ರಪತ್ತಿಸೋಪಾನ'ವೆಂಬ ಪ್ರಕರಣ ಗ್ರಂಥದ ಪೂರ್ಣಪಾಠ; ಊರ್ಧ್ವಪುಂಡ್ರವಿಧಾನ, ದ್ವಾದಶಪುಂಡ್ರಾಭಿಮಾನಿದೇವತೆಯರು, ಶ್ರೀಚೂರ್ಣಾಭಿಮಾನಿಲಕ್ಷ್ಮಿ; ಪದ್ಮಪುರಾಣದಿಂದ 'ತುಳಸೀಮಹಾತ್ಮೆ'ಯ ಪೂರ್ಣಪಾಠ; ಭಾಷ್ಯಕಾರಾವತಾರಶ್ಲೋಕಗಳು; 'ರಾಮಾನುಜಾಷ್ಟೋತ್ತರ; ಮತ್ತು 'ಯತಿರಾಜಸಪ್ತತಿ' ಇವುಗಳ ಪೂರ್ಣಪಾಠ; ಹನ್ನೆರಡುಮಂದಿ ಆಳ್ವಾರರ ಸ್ವರೂಪ; ರಾಮಾನುಜರು, ವೇದಾಂತಾಚಾರ್ಯರು (ವೇದಾಂತ ದೇಶಿಕರು), ರಮ್ಯಜಾಮಾತೃಮುನಿಗಳು, ಆಳವಂದಾರ್ ಇವರ ಮೂರ್ತಿಲಕ್ಷಣ; ಪಾಂಚರಾತ್ರವನ್ನು ಹಿಡಿದು ವಿಷ್ಣುವಿನ ಪಂಚಬೇರಮೂರ್ತಿಗಳು (ಉತ್ಸವ, ಶಯನ, ಬಲಿ, ಸ್ನಪನ, ಕೌತುಕ); ನೃಸಿಂಹಪುರಾಣದಿಂದ 'ಸಾಲಿಗ್ರಾಮಲಕ್ಷಣ', ಮೂರ್ತಿನಿರ್ಣಯಗಳು ಇವನ್ನೆಲ್ಲ ಈ ನಿಧಿಯಲ್ಲಿ ಕಾಣಬಹುದು.

(೭)

ಏಳನೆಯದು 'ಶೈವನಿಧಿ'. ಇದು 'ಶಿವನಿಧಿ'ಗೆ ಪೂರಕವಾಗಿದೆ. ಇದರಲ್ಲಿ 'ಶಿವಕ್ಷೇತ್ರ ಬಿಲ್ವಾದಿ ಮಾಹಾತ್ಮ್ಯಕಥನಂ' ಎಂಬ ಒಕ್ಕಣೆಯಿದೆ. 'ಲಲಿತಾಗಮ'ವನ್ನನುಸರಿಸಿ ತ್ರಯೋದಶೋತ್ತರಶತಶಿವ ಸ್ವಯಂವ್ಯಕ್ತಸ್ಥಳಗಳು (೧೧೩), ಶಿವನ ಪೂಜೆಯಲ್ಲಿ ಪ್ರಸಕ್ತವಾಗುವ ಒಂಬತ್ತು ಮೂರ್ತಿಗಳು (ನವ-ಬೇರ; ವಿಘ್ನೇಶ, ತ್ರಿಶೂಲಾಸ್ತ್ರ, ಉಮೇಶ, ಚಂದ್ರಶೇಖರ, ಸೋಮಾಸ್ಕಂದ, ಗೌರೀ, ಚಂಡೇಶ, ಕಿರಾತಕ, ಮಹಾನೃತ್ತಪ್ರವೃತ್ತ); ಪಾರ್ಥಿವಾದಿ ಲಿಂಗಭೇದಗಳು, ಮೃಲ್ಲಿಂಗವನ್ನು ನಿರ್ಮಾಣಮಾಡುವ ಪದ್ಧತಿ; ಹೇಮಾದ್ರಿಯ 'ದಾನಖಂಡ'ದಿಂದ

ರುದ್ರಾಷ್ಟಕದ ಪಾಠ, ಸ್ಕಾಂದಪುರಾಣದಿಂದ ಮೈಲಾರಲಿಂಗ, ಮಾಲಾಚೀ ಸೋತ್ರಭಾಗ, 'ಭಸ್ಮಮಾಹಾತ್ಮ್ಯ'ದಿಂದ ವಿಭೂತಿಮಹಾತ್ಮೆ, 'ಶಿವರಹಸ್ಯ'ದಿಂದ ಬಿಲ್ವಮಾಹಾತ್ಮ್ಯೆ ಇವುಗಳ ಪಾಠ; ಸ್ಕಾಂದಪುರಾಣದಲ್ಲಿ ಹೇಳಿರುವಂತೆ ಆರವತ್ತುಮೂವರು ಪುರಾತನರ ಹೆಸರುಗಳು, ವರ್ಣ, ಆಶ್ರಮ, ಧರ್ಮ ಇತ್ಯಾದಿ ವಿಚಾರ ("ವೀರಮಾಹೇಶ್ವರ ಕಾಂಡದಲ್ಲಿ ಭಕ್ತವಿಲಾಸದೊಳ್ ಪೇಳಿಯಿರುವ"). 'ಲಲಿತಾಗಮ'ವಲ್ಲದೆ 'ನಿರ್ಣಯಸಿಂಧು' ಮತ್ತು 'ವಾಯವೀಯಸಂಹಿತೆ'ಯನ್ನೂ ಇಲ್ಲಿ ಅವಲಂಬಿಸಿದ್ದಾರೆ.

(೮)

ಎಂಟನೆಯದು 'ಆಗಮನಿಧಿ'. ಇದರಲ್ಲಿ "ಆಗಮತಂತ್ರೋಪನಿಷತ್ ಪ್ರಭೇದ-ತತ್ತತ್ ಕರ್ತೃ ಪ್ರಭೇದ ನಿರೂಪಣಂ" ಎಂಬ ನಿರ್ದೇಶನವಿದೆ. ಹದಿನೆಂಟು ಪುರಾಣಗಳ ಹೆಸರುಗಳು, ಶ್ಲೋಕಸಂಖ್ಯೆ, ಸಂಕ್ಷಿಪ್ತ ಪರಿವಿಡಿ; ಅನುಕ್ರಮಣಿಕಾಧ್ಯಾಯವನ್ನನುಸರಿಸಿ ಮಹಾಭಾರತ ಪ್ರತಿಪರ್ವಾಧ್ಯಾಯ ಶ್ಲೋಕಸಂಖ್ಯೆ; ಭಾಗವತಸ್ಕಂಧಾಧ್ಯಾಯ ಶ್ಲೋಕಸಂಖ್ಯೆ; ರಾಮಾಯಣಸ್ಯ ಕಾಂಡಸರ್ಗಶ್ಲೋಕಸಂಖ್ಯೆ; ಸ್ಕಾಂದಪುರಾಣಸ್ಯಖಂಡಾಧ್ಯಾಯ ಶ್ಲೋಕಗಳು; ವೇದ, ಉಪನಿಷತ್ತು, ಷಡಂಗ, ತಂತ್ರ, ಆಗಮ, ಉಪನಿಷತ್ತು ಇವುಗಳ ಹೆಸರುಗಳು, ಆಯಾ ಆಗಮತಂತ್ರಗಳನ್ನು ಮಾಡಿದವರ ಹೆಸರುಗಳು; ಸ್ಮೃತಿಕಾರರು; ವ್ಯಾಖ್ಯಾನಲಕ್ಷಣ; ಆಗಮಪ್ರಭೇದಗಳು (ವೈದಿಕತಂತ್ರ, ವೈದಿಕಾಚಾರತಂತ್ರ, ವೈಖಾನಸ, ಪಾಂಚರಾತ್ರ, ಶೈವಾಗಮಗಳು); ಪಂಚಯತನಪೂಜಾಕ್ರಮ, ಗುರುಗಳು ಮೊದಲಾದುವು ಬಂದಿವೆ. ಇಲ್ಲಿ ದೇವೀಪಂಚಾಯತನಕ್ಕೆ ಮುಂದಿನ ಭಾಗ ಕನ್ನಡದಲ್ಲಿಯೇ ಇರುವುದನ್ನು ಗಮನಿಸಬಹುದು. 'ಕಾಳಹಸ್ತಿವಿಲಾಸ'ದಿಂದ ವಿವರಗಳನ್ನು ಆಯ್ದುಕೊಂಡಿರುವಂತೆ ಸೂಚನೆಯಿದೆ. ಈ ಭಾಗದ ಕೊನೆಯಲ್ಲಿ 'ಶಾಲೀವಾಹನ ಶಕವರ್ಷಂಗಳು ೧೭೫೪ ವರ್ತಮಾನವಾದಾ ಖರಸಂವತ್ಸರ ಜ್ಯೇಷ್ಠ ಶುದ್ಧ ೭ ಗುರುವಾರದಲ್ಲು' ಈ ನಿಧಿಯು ಬರೆಯಲ್ಪಟ್ಟಿತೆಂಬ ದಾಖಲೆಯಿದೆ.

(೯)

ಕಡೆಯದು 'ಕೌತುಕನಿಧಿ'ಯೆನಿಸಿಕೊಳ್ಳುತ್ತದೆ. ಅನೇಕ ಅರ್ಥಗಳಿರುವ 'ಕೌತುಕ' ಎಂಬ ಮಾತನ್ನು ಇಲ್ಲಿ ಆಟ, ಸುಖವನ್ನು ಒದಗಿಸುವ ಹವ್ಯಾಸ, ವಿಸ್ಮಯವನ್ನುಂಟುಮಾಡುವ ಕ್ರೀಡೆ ಎಂಬರ್ಥದಲ್ಲಿ ಬಳಸಿಕೊಂಡಿದ್ದಾರೆ. ಮೇಲೆ ಹೇಳಿದಂತೆ, ಗ್ರಂಥದ ಈ ಭಾಗ ಉಳಿದ ಭಾಗಗಳಿಗಿಂತ ಅತ್ಯಂತ ವಿಲಕ್ಷಣವಾಗಿದೆ; ಮತ್ತು ಈ ಭಾಗದ ಆರಂಭದಲ್ಲೆ "ಶಾಲೀವಾಹನ ಶಕ ವರ್ಷಂಗಳು ೧೭೪೫ನೇ ಚಿತ್ರಭಾನು ಸಂವತ್ಸರದ ಆಷಾಢ ಶುದ್ಧ ೧೧ ಭಾನುವಾರದಲ್ಲು" ಎಂಬ ಕಾಲನಿರ್ದೇಶನ ಇರುವುದು ಮಾತ್ರವಲ್ಲದೆ, "ಶ್ರೀಕೃಷ್ಣರಾಜಮಹಾರಾಜ ಕಂಠೀರವರವರು ವಿರಚಿತಿಯಿರುವ ಚಾಮುಂಡೇಶ್ವರಿ ಗಂಜೀಫಿನ ವಿವರ"ವೆಂಬ ಒಕ್ಕಣೆಯೂ ಇದೆ. ಇತರ ಭಾಗಗಳಲ್ಲಿ ಕಂಡುಬರುವುದು ಅಲ್ಲಿಂದ ಇಲ್ಲಿಂದ ಆಯ್ದುಕೊಂಡ ಸಂಸ್ಕೃತಶ್ಲೋಕಗಳು. ಇಲ್ಲಾದರೋ ಅರಸರು ತಾವೆ ರಚಿಸಿರುವ ವಿವರಗಳು. ಮೊದಲು ಬಂದಿರುವುದು ಚಾಮುಂಡೇಶ್ವರಿ ಗಂಜೀಪು ಆಟವನ್ನಾಡುವ ಬಗೆ; ಮುಂದೆ ಜಗನ್ಮೋಹನ ಗಂಜೀಪು, ನವೀನ ದಶಾವತಾರ ಗಂಜೀಪು ("ಕ್ರೀಡಾ ದಶಾವತಾರಾಖ್ಯಾ"), ನವಗ್ರಹ ಗಂಜೀಪು ("ಸರಸಾನಾಂ ವಿನೋದಾಯ ಗ್ರಹಾಣಾಂ ಪೇಟಿಕಾ ಕೃತಾ"), ಮತ್ತು ಪಂಚಪಾಂಡವರು, ದೇವಿ, ದಿಕ್ಪಾಲಕರು, ಮನೋಹರ, ಸರ್ವಮಂಗಳಾ, ನವರತ್ನ ಎಂಬ ಹೆಸರುಗಳ ಗಂಜೀಪು ಆಟಗಳು, ಕೃಷ್ಣರಾಜ ಪೀಟು(ಪೇಟಿಕಾ), ಸದ್ಯೋಜಾತಪೀಟು, ರಾಮ ಪೀಟು ಎಂಬ ಆಟಗಳು, ಪಗಡೆ ಆಟಗಳಲ್ಲಿ ಎಂಟು ಮುಖದ್ದು, ಷಣ್ಮುಖದ್ದು, ಬುರುಜಿನದು, ನವಗ್ರಹದ್ದು, ಭೂಚಕ್ರದ್ದು, ಶ್ರೀಚಕ್ರದಶದಳದ್ದು ಎಂಬ ಪಗಡೆ ಆಟದ ವಿಧಾನಗಳು, ಆನೆಕಟ್ಟಿನ ಆಟ, ಈ ಆಟಗಳ ವಿವರಗಳಿವೆ. "ಜ್ಯೋತಿಃಶಾಸ್ತ್ರ ರೀತ್ಯಾ ಯಲ್ಲಾ ಆಟವು ಆಡಬಹುದು" ಎಂಬ ಒಕ್ಕಣೆ ಪಗಡೆ ಆಟಗಳನ್ನು ಕುರಿತಂತೆ ಬರುತ್ತವೆ.

ನನ್ನಲ್ಲಿರುವ ಹಸ್ತಪ್ರತಿ ಮುಗಿಯುವುದು ಈ ಮೊದಲೆ ಹೇಳಿದಂತೆ

". . . ರಾಧೀಶ ಕೃಷ್ಣರಾಜೇಂದ್ರಶಾಸನಾತ್।
ಲಿಖಿತಂ ರಂಗಪತಿನಾ ಶ್ರೀತತ್ತ್ವನಿಧಿಪುಸ್ತಕಂ॥ "


ಎಂಬ ಒಕ್ಕಣೆಯಿಂದ. ಕನ್ನಡದ ರಂಗಪ್ಪನಾಯ್ಕ ಇಲ್ಲಿ ರಂಗಪತಿಯಾಗಿದ್ದಾನೆ.

೪. ಶ್ರೀಪುರಪ್ರಾಕಾರವರ್ಣನೆ


ನನ್ನಲ್ಲಿರುವ ಹಸ್ತಪ್ರತಿ ಚಾಮುಂಡೇಶ್ವರಿಯ ಧ್ಯಾನಶ್ಲೋಕದಿಂದ ಆರಂಭವಾಗಿ ಮುಂದೆ ರಾಜರಾಜೇಶ್ವರಿ ಮುಂತಾದ ಶಕ್ತಿಭೇದಗಳನ್ನು ಗಮನಿಸುತ್ತದೆ. ಆದರೆ ಮೈಸೂರಿನ ಹಸ್ತಪ್ರತಿಯ ಮೊದಲಲ್ಲೆ 'ಲಲಿತೋಪಾಖ್ಯಾನ'ದಿಂದ ಎತ್ತಿಕೊಂಡ ಶ್ರೀಪುರಪ್ರಾಕಾರವರ್ಣನೆಯ ಭಾಗವಿದೆ; ಅದಕ್ಕೆ ಸೂಗಸಾದ ವರ್ಣಚಿತ್ರಗಳನ್ನೂ ಅಳವಡಿಸಿದ್ದಾರೆ. ಈ ಭಾಗ ನನ್ನಲ್ಲಿರುವ ಹಸ್ತಪ್ರತಿಯಲ್ಲಿರದು. ಆದರೂ ಇದು ಸ್ವಾರಸ್ಯವಾದುದೆಂಬುದರಲ್ಲಿ ಸಂಶಯವಿಲ್ಲ. 'ಶ್ರೀತತ್ತ್ವನಿಧಿ'ಯನ್ನು ರಚಿಸಲು ಪ್ರೇರಣೆ ದೊರತದ್ದೇ ಈ ಭಾಗದಿಂದ ಎಂದೂ ತೋರುತ್ತದೆ. ಬ್ರಹ್ಮಾಂಡಪುರಾಣಕ್ಕೆ ಸೇರಿದ 'ಲಲಿತೋಪಾಖ್ಯಾನ' (ಉತ್ತರಖಂಡ, ನಲವತ್ತು ಅಧ್ಯಾಯಗಳು) ಶ್ರೀವಿದ್ಯೆಯನ್ನು ಶ್ರೀಪುರವನ್ನಾಗಿ ಕಾಣಿಸಿ ಅದರ ವಿವಿಧ ಆವರಣಗಳನ್ನೂ ಪ್ರಾಕಾರಗಳನ್ನೂ ವರ್ಣಿಸಿದೆ. ಇದನ್ನು ಭಕ್ತರು ಶಿಲ್ಪಿಗಳಿಂದ (ಎಂದರೆ ಚಿತ್ರಕಾರರಿಂದ) ಬಿಡಿಸಿದರೆ ಅವರಿಗೆ ಪರಮಪದ ದೊರಕುವುದೆಂಬ ಸೂಚನೆ ಇಲ್ಲಿದೆ (೩೧,೧೦೭)

'ಯೇ ಶ್ರೀಪುರಪ್ರಾಕಾರೇಣ ತತ್ತತ್‌ಸಾಲಾನ್ ವಿಭೇದತಃ।
ಕೃತ್ವಾ ಶಿಲ್ಪಿಜನೈರ್ದಿವ್ಯಂ ಶ್ರೀ ದೇವ್ಯಾಯತನಂ ಮಹತ್।
ಸಂಪಾದಯಂತಿ ಸದ್ಭಕ್ತಾಸ್ತೇ ಯಾಂತಿ ಪರಮಾಂ ಗತಿಂ॥'

ಲಲಿತೋಪಾಖ್ಯಾನದಲ್ಲಿ ಇಪ್ಪತ್ತಾರನೆಯ ಅಧ್ಯಾಯದಿಂದ ಮೊದಲಾಗುವ ಶ್ರೀಪುರವರ್ಣನೆಯು ಶ್ರೀವಿದ್ಯಾಸಂಪ್ರದಾಯದ ಪ್ರಧಾನವಾದ ಒಂದು ವಿವರ. ಮುಮ್ಮಡಿಯನರು ಶ್ರೀವಿದ್ಯೆಯ ಉಪಾಸಕರಾಗಿದ್ದುದು ಹಲವಾರು ಮೂಲಗಳಿಂದ ಸ್ಪಷ್ಟವಾಗುತ್ತದೆ. ಆದ್ದರಿಂದ ಶ್ರೀಪುರವರ್ಣನೆಯು ಅವರ ಈ ದೇವೀಪರವಾದ ಕೃತಿಯಲ್ಲಿ ಸಚಿತ್ರವಾಗಿ ಬಂದಿರುವುದು ಸಹಜವಾಗಿಯೇ ಇದೆ. ಗ್ರಂಥರಚನೆ ಆಷಾಢಮಾಸದ ಶುಕ್ಲಪಕ್ಷದ ಏಕಾದಶಿಯಂದು, ಎಂದರೆ ಚಾತುರ್ಮಾಸ್ಯವ್ರತವು ಆರಂಭವಾಗುವ ಸಮಯದಲ್ಲಿ ಶುರುವಾದದ್ದರಿಂದ



ಶ್ರೀ ಚಕ್ರ



ಶ್ರೀ ಚಕ್ರ

ಗ್ರಂಥಸಮಾಪ್ತಿಯ ಭರಸೆಯಿದ್ದಿತು. ಸನತ್ಕುಮಾರಸಂಹಿತೆಯಲ್ಲಿ ಚಾತುರ್ಮಾಸ್ಯವ್ರತದ ಸ್ವಾರಸ್ಯವನ್ನು ಹೇಳುವಾಗ 'ನಿರ್ವಿಘ್ನಂ ಸಿದ್ಧಿಮಾಪ್ನೋತು' ಎಂಬ ಮಾತಿದೆ. ಆ ಸಮಯದಲ್ಲಿ ಅಕಸ್ಮಾತ್ ಸಾವು ಸಂಭವಿಸಿದರೂ ಹಿಡಿದ ಕೆಲಸವಂತೂ ಪೂರ್ಣಗೊಳ್ಳುವುದಂತೆ: 'ಗೃಹೀತೇಷ್ಮಿನ್ ವ್ರತೇ ದೇವ ಯದ್ಮ್ಯಪೂರ್ಣೇ ತ್ವಹಂ ಮ್ರಿಯೆ।ತನ್ಮೇಭವತು ಸಂಪೂರ್ಣಂ ತ್ವತ್ಪ್ರಸಾದಾಜ್ಜನಾರ್ದನ॥' (ಮತ್ಸ್ಯಪುರಾಣ) ಶ್ರೀತತ್ತ್ವನಿಧಿಯ ಆರಂಭದಲ್ಲಿ ಬಂದಿರುವ ಶ್ರೀಪುರವರ್ಣನೆಗೆ ಪ್ರಧಾನವಾದ ಆಧಾರ ಲಲಿತೋಪಾಖ್ಯಾನ. ಇದಲ್ಲದೆ ದೇವೀಮಹಾತ್ಮ್ಯ, ಲಲಿತಾಮಾಹಾತ್ಮ್ಯ, ಗೌರೀಪುರಾಣ ಮೊದಲಾದ ಆಕರಗ್ರಂಥಗಳ ಉಲ್ಲೇಖವೂ ಇದೆ. ಲಲಿತೋಪಾಖ್ಯಾನವೆಂಬುದು ಬ್ರಹ್ಮಾಂಡಪುರಾಣದ ಉತ್ತರಖಂಡದಲ್ಲಿ ಅಡಕವಾಗಿರುವ ನಲವತ್ತು ಅಧ್ಯಾಯಗಳ ಹೆಸರು. ಆದರೆ ಫಲಶ್ರುತಿಯಲ್ಲಿ ಲಲಿತೋಪಾಖ್ಯಾನವು ದಿಟವಾಗಿ ಮೂವತ್ತೆರಡೇ ಅಧ್ಯಾಯಗಳ ಶಾಸ್ತ್ರಗ್ರಂಥವೆಂದು ಸೂಚಿತವಾಗಿದೆ.

'ದ್ವಾತ್ರಿಂಶಲ್ಲಲಿತಾಖ್ಯಾನಮಮೃತಂ ದಿವ್ಯದರ್ಶನಂ।
ತಸ್ಮಾದ್ ದ್ವಾತ್ರಿಂಶಿಕಾಶಾಸ್ತ್ರಂ ಬ್ರಹ್ಮಾಂಡೋತ್ತರ ಕೀರ್ತಿತಂ ॥'
(೨೧)

ಇದಂ ದ್ವಾತ್ರಿಂಶದಧ್ಯಾಯಸಮ್ಮಿತಂ ದರ್ಶನೋತ್ತಮಂ।'
(೨೯)

ಉಳಿದ ಅಧ್ಯಾಯಗಳಲ್ಲಿ ಕಾಂಚೀಮಾಹಾತ್ಮ್ಯ, ಮುದ್ರಾಲಕ್ಷಣ, ದೇವೀಮಾಹಾತ್ಮ್ಯ ಎಂಬ ಪರಿಶಿಷ್ಟಗಳು ಸೇರುತ್ತವೆ.

ಶ್ರೀತತ್ತ್ವನಿಧಿಯಲ್ಲಿರುವ ನಿರೂಪಣೆಯೇನೋ ಸ್ವತಂತ್ರವಾದುದು; ಲಲಿತೋಪಾಖ್ಯಾನದ ನಿರೂಪಣೆಯ ಪಡಿಯಚ್ಚಲ್ಲ. ಕಲ್ಪನೆಗಳು ಅಲ್ಲಿಯವು; ಕ್ರಮವೂ ಅಲ್ಲಿಯದೆ; ವರ್ಣನೆಯೂ ಬಹುಮಟ್ಟಿಗೆ ಅಲ್ಲಿರುವಂಥದೇ. ಆದರೆ ಶ್ಲೋಕರಚನೆ ಬೇರೆಯಾಗಿಯೇ ಇದೆ. ಚಿತ್ರಗಳಂತೂ ಶ್ರೀತತ್ತ್ವನಿಧಿಗೆ ವಿಶಿಷ್ಟವಾದುವೇ; ಬೇರೆಲ್ಲಿಯೂ ಕಾಣಸಿಗದಂಥವು. ಶ್ಲೋಕಗಳ ವಿವರಗಳನ್ನೂ ಭಾವವನ್ನೂ ಇಂಗಿತವನ್ನೂ ಚೆನ್ನಾಗಿ ಹೊರಹೊಮ್ಮಿಸುವ ಚಿತ್ರಗಳು. ದರ್ಶನದ ದೃಷ್ಟಿಯಿಂದ ಯಥಾರ್ಥವಾದುವು; ಕಲೆಯ ದೃಷ್ಟಿಯಿಂದ ಮನೋಜ್ಞವಾದುವು.

ಶ್ರೀಪುರವೆಂದರೆ ಶ್ರೀ ಎಂಬ ದೇವಿಯು ಸದಾ ವಾಸಮಾಡುವ ಊರು, ಎಡೆ; ಶ್ರೀಚಕ್ರಪುರವಾಸಿನಿಯೆಂಬ ವರ್ಣನೆಗೂ ಇದೇ ಅರ್ಥ. ಶ್ರೀ ಎಂದರೆ ಇಲ್ಲಿ ದುರ್ಗಾದೇವಿ. ದುರ್ಗಾ ಸಪ್ತಶತಿಯಲ್ಲಿ (೧, ೨೯) ''ತ್ವಂ ಶ್ರೀಃ ತ್ವಂ ಈಶ್ವರೀ'' ಎಂಬ ಸಂಬೋಧನೆಯಿದೆ. 'ಶ್ರೀ' ಎನ್ನುವ ಧಾತುವಿಗೆ 'ಸೇವೆಮಾಡು' ಎಂಬರ್ಥವಿದ್ದು ಅದಕ್ಕೆ 'ಆಜ್' ಉಪಸರ್ಗ ಸೇರಿದಾಗ ಆಶ್ರಯಮಾಡು ಎಂಬ ಸೂಚನೆಯೊದಗಿ, 'ಎಲ್ಲರಿಂದಲೂ ಸೇವೆಗೊಳ್ಳುವವಳು', 'ಎಲ್ಲರೂ ಅವಳನ್ನು ಆಶ್ರಯಿಸುವರು' ('ಶ್ರೀ ಯತೇ ಸರ್ವೈಃ ಇತಿ ಶ್ರೀಃ') ಎಂಬ ಅರ್ಥ ಹೊರಡುತ್ತದೆಯೆಂದು ಹಿಂದೆಯೆ ಹೇಳಿದೆವಷ್ಟೆ? ದುರ್ಗಾಸಪ್ತಶತಿಯಲ್ಲಿ 'ಆಧಾರಭೂತಾ ಜಗತಃ ತ್ವಂ ಏಕಾ' (೧೧, ೪, ೪, ೭) ಎಂಬ ಮಾತು ಬರುವುದೂ ಇದೇ ಅರ್ಥದಲ್ಲಿ. ಬ್ರಹ್ಮಾಂಡವೆಲ್ಲ ಆ ದೇವಿಯ ನಿವಾಸಸ್ಥಾನವೇ; ಬ್ರಹ್ಮಾಂಡದ ಪ್ರತೀಕವಾಗಿಯೆ ಶ್ರೀಚಕ್ರವಿದೆ. ಆದಿಪ್ರಕೃತಿಯಾದ ಶ್ರೀದೇವಿಯ ಆರಾಧನಾಸ್ಥಾನವೂ ಅದೇ; ಆಕೆಯ ದಿವ್ಯಧಾಮ, ದಿವ್ಯರಥ.

ಲಲಿತೋಪಾಖ್ಯಾನದಲ್ಲಿ ಶ್ರೀಪುರವರ್ಣನೆಯ ಸಂದರ್ಭ ಬರುವುದು ಹೀಗೆ. ಈ ಗ್ರಂಥದ ಹನ್ನೊಂದನೆಯ ಅಧ್ಯಾಯದಲ್ಲಿ ದೇವಿಯು ಭಂಡಾಸುರನೊಂದಿಗೆ ಕಾದಾಡಲು ಹೊರಡುತ್ತಾಳೆ. ಅವಳ ಪಾಶವೆಂಬ ಆಯುಧದಿಂದ ಅಶ್ವಾರೂಢೆಯೆಂಬ ದೇವೀರೂಪ ತೋರಿಕೊಂಡು ಅಪರಾಜಿತವೆಂಬ ಕುದುರೆಯನ್ನೇರಿ ಹೊರಡುತ್ತಾಳೆ. ಅವಳ ಹಿಂದೆ ದಂಡನಾಥಾದೇವಿ ಸಿಂಹವನ್ನೇರಿ ಬರುತ್ತಾಳೆ. ಮುಂದಿನ ಅಧ್ಯಾಯಗಳಲ್ಲಿ ದಂಡನಾಥಾದೇವಿಯ ಅಂಗರಕ್ಷಕಿ ತಿರಸ್ಕರಣಿ, ಆನಂತರ ಶ್ಯಾಮಲೆ (ಮಂತ್ರಿಣಿ) ಗೇಯಚಕ್ರವನ್ನೇರಿ ತನ್ನ ಪರಿಚಾರಿಕೆಯರಾದ ಯಂತ್ರಿಣಿ, ತಂತ್ರಿಣಿಯರೊಂದಿಗೆ ಬರುವುದು, ಕಡೆಗೆ ಲಲಿತಾ ದೇವಿಯು ತನ್ನ ಚಕ್ರರಾಜರಥವನ್ನೇರಿ ಪರ್ವದೇವತೆಯರೊಂದಿಗೆ (ಅಣಿಮಾದಿ) ಕಾಣಿಸಿಕೊಳ್ಳುತ್ತಾಳೆ.

ಹತ್ತು ಯೋಜನ ವಿಸ್ತಾರವಾಗಿರುವ, ಚಾಮುಂಡೆ ಮೊದಲಾದ ಆರು ಸಾರಥಿನಿಗಳನ್ನೊಳಗೊಂಡ ಶ್ರೀದೇವಿಯ ಶ್ರೀಚಕ್ರರಥ, ಏಳು ಯೋಜನ ವಿಸ್ತಾರವಾಗಿರುವ, ಹಸಂತಿಕಾದೇವಿಯು ಸಾರಥಿನಿಯಾಗಿರುವ ಶ್ಯಾಮಲೆಯ ಗೇಯಚಕ್ರರಥ, ಆರು ಯೋಜನ ವಿಸ್ತಾರವಾಗಿರುವ, ಸ್ತಂಭಿನೀದೇವಿಯು ಸಾರಥಿನಿಯಾಗಿರುವ ದಂಡನಾಥಾದೇವಿಯ ಕಿರಿಚಕ್ರರಥ ಈ ಮೂರೂ ರಥಗಳು ಚಲಿಸುತ್ತಿರುವ ಮೂರುಲೋಕಗಳಂತೆ ಇದ್ದುವಂತೆ


'ಏತದ್ರಥತ್ರಯಂ ತತ್ರ ತ್ರೈಲೋಕ್ಯಮಿವ ಜಂಗಮಂ ।'
(೧೫, ೮೨)

ಹದಿನಾರನೆಯ ಅಧ್ಯಾಯದಲ್ಲಿ ಭಂಡಾಸುರನ ರಾಜಧಾನಿಯಾದ ಶೂನ್ಯನಗರದ ವರ್ಣನೆ ಬರುತ್ತದೆ. ಭಂಡಾಸುರನ ಸೇನಾನಿಗಳಾಗಿದ್ದ ದುರ್ಮದ-ಕುಟಿಲಾಕ್ಷ ಇವರೊಂದಿಗೆ ಲಲಿತೆಯ ಸೇನಾನಿಯಾಗಿದ್ದ ಗಜಾರೂಢೆ ಸಂಪತ್ಕರೀದೇವಿಯು ನಡೆಸಿದ ರಣಕೋಲಾಹಲ, ದುರ್ಮದನ ಸೋದರ ಕುರುಂಡನೊಂದಿಗೆ ಅಶ್ವಾರೂಢೆಯು ಕಾದಾಡಿದ್ದು ಮೊದಲಾದ ವಿವರಗಳಿಂದ ದೇವಿ-ಅಸುರ ಇವರ ನಡುವೆ ನಡೆದ ಸೆಣಸಾಟ ಮೊದಲಾಗುತ್ತದೆ. ಮುಂದೆ ಇಪ್ಪತ್ತನಾಲ್ಕನೆಯ ಅಧ್ಯಾಯದಲ್ಲಿ ಯುದ್ಧದ ಪ್ರಧಾನಘಟ್ಟವಾಗಿ ಭಂಡಾಸುರ-ಲಲಿತಾದೇವಿಯರ ಸಮರ, ಅಸ್ತ್ರಗಳ ವಿನಿಯೋಗ, ದಶಾವತಾರಗಳ ಆವಿರ್ಭಾವ, ದೇವಿಯ ನಾರಾಯಣಾಸ್ತ್ರದಿಂದ ಅಸುರನ ಸೇನೆಯೆಲ್ಲವೂ ಸುಟ್ಟು ಬೂದಿಯಾದದ್ದು, ಪಾಶುಪತಾಸ್ತ್ರದಿಂದ ಇಪ್ಪತ್ತುನಾಲ್ವರು ಅಸುರ ಸೇನಾಪತಿಗಳು ಸತ್ತದ್ದು, ಮಹಾಕಾಮೇಶ್ವರಾಸ್ತ್ರದಿಂದ ಭಂಡಾಸುರನ ವಧೆ ಇವು ನಿರೂಪಿತವಾಗಿವೆ.

ಹೀಗೆ ಲಲಿತಾದೇವಿಯು ಜಗತ್ತಿನ ಕ್ಷೇಮವನ್ನು ಸಾಧಿಸಿ ತನ್ನ ಊರಿಗೆ ಹಿಂದಿರುಗಿದಮೇಲೆ, ಇಪ್ಪತ್ತಾರನೆಯ ಅಧ್ಯಾಯದಲ್ಲಿ ಶ್ರೀಪುರದ ವರ್ಣನೆ ಬರುತ್ತದೆ. ಅಗಸ್ತ್ಯಋಷಿಯು

'ಕಿಮಿದಂ ಶ್ರೀಪುರಂ ನಾಮ ಕೇನ ರೂಪೇಣ ವರ್ತತೇ।
ಕೇನ ವಾ ನಿರ್ಮಿತಂ ಪೂರ್ವಂ ತತ್ಸರ್ವಂ ವಿನಿವೇದಯ॥'

ಎಂದು ಕೇಳಲು ಇಂದ್ರಾದಿ ದೇವತೆಗಳು ಸಂತೋಷದಿಂದ ಲಲಿತೆ ಮತ್ತು ಕಾಮಶಿವ ಇವರ 'ನಿತ್ಯೋಪಭೋಗಾರ್ಥ'ಕ್ಕೆಂದು ಈ ಮಂದಿರವನ್ನು ಕಟ್ಟಿಸಿದರೆಂಬ ಉತ್ತರ ದೊರೆಯುತ್ತದೆ. ಈ ಮಂದಿರನಿರ್ಮಾಣಕ್ಕೆ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ಇವರು



ಶ್ರೀಚಕ್ರ ರಥ

ಕಾರಣಪುರುಷರಂತೆ; ದೇವಶಿಲ್ಪಿಗಳಾದ ವಿಶ್ವಕರ್ಮ ಮತ್ತು ಮಯ ಇವರು ಸ್ಥಪತಿಗಳಂತೆ. ಹದಿನಾರು ಕ್ಷೇತ್ರಗಳಲ್ಲಿ (ಮಹಾರಾಜ್ಞಿಯಿಂದ ಅಭಿನ್ನರಾದ ಷೋಡಶನಿತ್ಯೆಯರು) ಶ್ರೀನಗರಿ ನಿರ್ಮಿತವಾಯಿತಂತೆ. ಮೇರುಪರ್ವತವೇ ಕೇಂದ್ರವಾಗಿ ಹದಿನಾಲ್ಕು ಲೋಕಗಳನ್ನೂ ಅಡಕಮಾಡಿಕೊಂಡಿತಂತೆ -

'ಅಖಿಲಾಧಾರಸ್ತುಂಗಃ ಸಾಹಸ್ರಯೋಜನಃ।
ಚತುರ್ದಶ ಜಗಚ್ಚಕ್ರಸಂಪ್ರೋತ ನಿಜವಿಗ್ರಹಃ॥
(೨೬, ೨೮)

ಮೇರು ಪರ್ವತಕ್ಕೆ ನಾಲ್ಕು ಶಿಖಿರಗಳು. ನಡುವಣ ಶಿಖಿರ ಅತಿಎತ್ತರ; ಅದರ ಮೂರು ಕಡೆ ಮೂರು ಶಿಖಿರಗಳು; ಇಂದ್ರಕೋಣ(ಮೂಲೆ)ದಲ್ಲೊಂದು, ನಿರ್ಋತಿಕೋಣದಲ್ಲೊಂದು, ವಾಯುಕೋಣ (ವಾಯವ್ಯಮೂಲೆ)ದಲ್ಲೊಂದು. ಇವು ಒಂದೊಂದೂ ನೂರು ಯೋಜನ ವಿಸ್ತಾರ (ಅಗಲ), ನೂರು ಯೋಜನ ಉಚ್ಛ್ರಾಯ (ಎತ್ತರ) ಇರುವ ಲೋಕಗಳು. ಈ ಮೂರು ಲೋಕಗಳಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರ ಆಧಿಪತ್ಯ. ನಡುವಣ ಶಿಖಿರ ನಾನ್ನೂರು ಯೋಜನ ವಿಸ್ತಾರ, ಅಷ್ಟೇ ಉಚ್ಛ್ರಾಯ. ಇಲ್ಲಿರುವುದೇ ಶ್ರೀಪುರ. ಇದಕ್ಕೆ ಏಳು ಪ್ರಾಕಾರಗಳು, ಒಂದರ ಒಳಗೊಂದರಂತೆ ಮತ್ತು ಎರಡು ಪ್ರಾಕಾರಗಳ ನಡುವೆ ಏಳು ಯೋಜನ ಅಂತರವಿರುವಂತೆ. ಇವನ್ನು ದಾಟಿಹೋದರೆ ಕದಂಬವನದಲ್ಲಿ ಶ್ಯಾಮಲೆ (ಲಲಿತಾಂಬೆಯ ಮಂತ್ರಿಣಿ)ಯನ್ನು ಕಾಣಬಹುದು. ಲಲಿತೋಪಾಖ್ಯಾನದಲ್ಲಿ ಏಳು ಪ್ರಾಕಾರಗಳು ('ಲೋಹಾದಿ ಸಪ್ತಸಾಲಾನಾಂ') ಮತ್ತು ಏಳು ಕಕ್ಷ್ಯೆಗಳು (ಎರಡು ಪ್ರಾಕಾರಗಳ ನಡುವೆ ಇರುವ ಪ್ರದೇಶ) ಉಲ್ಲೇಖಕ್ಕೆ ಬಂದಿವೆ. ಇವನ್ನು ಶ್ರೀತತ್ತ್ವನಿಧಿ ವಿಸ್ತಾರವಾಗಿ ವರ್ಣಿಸಿರುವುದಲ್ಲದೆ, ಚಿತ್ರಣದಲ್ಲೂ ವಿವರಗಳನ್ನು ಮೂಡಿಸಿಕೊಂಡಿದೆ. ಏಳು ಪ್ರಾಕಾರಗಳನ್ನು ಹೊಕ್ಕು ಮುಂದುವರಿದರೆ ಕದಂಬವನವಾಟಿಕೆ. ಶ್ರೀತತ್ತ್ವನಿಧಿಯಲ್ಲಿ ಬಂದಿರುವ ಒಕ್ಕಣೆಯಂತೆ ಪ್ರಾಕಾರಗಳೂ ಕಕ್ಷ್ಯೆಗಳೂ ಮುಂದೆ ಕಾಣಿಸಿರುವಂತಿವೆ.

೧.

ಮೊದಲನೆಯ ಪ್ರಾಕಾರ ಕಬ್ಬಿಣದ್ದು ('ಕಾಲಾಯಸವಿನಿರ್ಮಿತ'). ಇದಿರುವುದು ಮಹಾಕಾಶದಲ್ಲಿ, ಸೌರವ್ಯೂಹದ ಹೊರಗಡೆ. ಆಕಾಶದಲ್ಲಿ ಭೂತಾಕಾಶ, ಚಿದಾಕಾಶ, ಮಹಾಕಾಶ ಎಂದು ಮೂರು ಬಗೆಗಳು. ಪಂಚಭೂತಗಳಲ್ಲಿ ಒಂದಾಗಿ ಎಲ್ಲ ವಸ್ತುಗಳಿಗೂ ಪ್ರಸಂಗಗಳಿಗೂ ಆಸರೆ ನೀಡುವುದು ಭೂತಾಕಾಶ. ನಮ್ಮೆಲ್ಲರ ಹೃದಯಗುಹೆಯಲ್ಲಿ ಇರುವುದು ದಹರಾಕಾಶ ಅಥವಾ ಹಾರ್ದಾಕಾಶ; ಇದು ಕೇವಲ ಅರಿವಾದುದರಿಂದ ಚಿದಾಕಾಶವೆನಿಸಿಕೊಳ್ಳುತ್ತದೆ. ಜೀವಿಗಳ ಆಸರೆಯೇ ಇದು. ಭೂತಾಕಾಶವನ್ನೂ ಚಿದಾಕಾಶಗಳನ್ನೂ ಒಳಗೊಂಡು ಬ್ರಹ್ಮಾಂಡವನ್ನೆಲ್ಲ ಆವರಿಸಿಕೊಂಡಿರುವುದು ಮಹಾಕಾಶ. ಶ್ರೀಪುರದ ಹೊರಗಣ ಕೋಟೆ ಇರುವುದು ಇಲ್ಲಿಯೇ; ಬ್ರಹ್ಮಾಂಡವನ್ನು ಉಜ್ಜೀವನಗೊಳಿಸುವ ಸೂರ್ಯನ ಮಂಡಲವೂ ಈ ಕೋಟೆಯ ಹೊರಗೇ ಇರುವುದು.

ಈ ಆವರಣವನ್ನು ಒಳಹೊಕ್ಕರೆ ಎಲ್ಲೆಲ್ಲೂ ಕಾಣುವುದು ನಂದನವನವೆಂಬ ಅಂತರ್ದೇಶ ಅಥವಾ 'ನಾನಾವೃಕ್ಷಮಹೋದ್ಯಾನ'. ಇದರ ರಕ್ಷಕರು ಮಹಾಕಾಳ, ಮಹಾಕಾಳಿಯರು. ವನದ ನಡುವೆ ಸಿಂಹಾಸನದ ಮೇಲೆ ಇವರಿಬ್ಬರು ಅಪ್ಪಿಕೊಂಡು ಕುಳಿತಿರುವಂತೆ ಚಿತ್ರಣವಿದೆ. ಈ ವನವು ಆರು ಸಾವಿರ ಯೋಜನ ವಿಸ್ತಾರವಾದುದೆಂಬ ವಿವರ ಉಂಟು.

'ಕಾಲಾಯಸಸ್ಯ ಸಾಲಸ್ಯ ಯೋಂತರ್ದೇಶಃ ಸಮಂತತಃ
ನಾನಾವೃಕ್ಷಮಹೋದ್ಯಾನಂ ..... '

೨.

ಎರಡನೆಯದು ಕಂಚಿನ ಕೋಟೆ, 'ಕಾಂಸ್ಯಮಯಪ್ರಾಕಾರ'. ಇದನ್ನು ದಾಟಿ ಹೋದರೆ ಸಿಗುವುದು ಕಲ್ಪವಾಟಿಕೆ. ಇದರ ರಕ್ಷಕ ವಸಂತಋತುದೇವತೆ ; ಕಲ್ಪವಾಟಿಕೆಯಲ್ಲಿರುವ ಕಲ್ಪವಾಪಿಯೆಂಬ ಕೊಳದ ಬದಿಯಲ್ಲಿ ಇವನ ಸಿಂಹಾಸನ. ಅವನ ತೊಡೆಯಮೇಲೆ ಮಧುಶ್ರೀ, ಮಾಧವಶ್ರೀ ಎಂಬಿಬ್ಬರು ಹೆಂಗಳೆಯರು. ಇವರ ಕುಚಗಳನ್ನು ತನ್ನ ಕೈಗಳಿಂದ ಹಿಂಡುತ್ತಿರುವ ವಸಂತನನ್ನು ಇತರ ಶಕ್ತಿದೇವತೆಗಳೂ ಸೇವಿಸುತ್ತಿದ್ದಾರೆ. ('ತದಂಕದ್ವಯಸಂಲಗ್ನೇ ಮಧುಶ್ರೀಮಾಧವಶ್ರಿಯೌ । ಉಭಾಭ್ಯಾಂ ನಿಜಪತ್ನೀಭ್ಯಾಂ ಉಭಯೋಸ್ತನಮೇಕಕಂ । ನಿಪೀಡಯನ್')

ಹೀಗೆ ಇವನು ಲಲಿತಾದೇವಿಯ ಪರಿಚಾರಕನಾಗಿ ತೋರಿಕೊಳ್ಳುತ್ತಾನೆ. ಇವನ ಚಕ್ರದ ವರ್ಣನೆ ಇಲ್ಲಿರುವಂತೆ-

'ತ್ರಿಕೋಣಂ ಪಂಚಕೋಣಂ ಚ । ನಾಗಚ್ಛಂದ ಸರೋರುಹಂ।
ಷೋಡಶಾರ ಸರೋಜಂ ಚ । ದಶಾರ ದ್ವಿತೀಯಂ ಪುನಃ ।
ಚತುರಶ್ರಂ ಚ ವಿಜ್ಞೇಯಂ । ಸಪ್ತಾವರಣ ಸಂಯುತಂ।
ತನ್ಮಧ್ಯೇ ಬಿಂದುಚಕ್ರಸ್ಥೋ ವಸಂತರ್ತುಮಹಾದ್ಯುತಿಃ॥'

ಶಕ್ತಿದೇವತೆಯರು ಈ ಚಕ್ರದ ವಿವರಗಳನ್ನು ಪ್ರತಿನಿಧಿಸುವರು. ಮಧುಮಾಸದ(ವಸಂತಋತುವಿನ ಚೈತ್ರಮಾಸದ) ಶುಕ್ಲಪಕ್ಷದ ಪಾಡ್ಯದಿಂದ ಹಿಡಿದು ಮುಂದಿನ ಮಾಧವ ಮಾಸದ (ವೈಶಾಖದ) ಕೃಷ್ಣಪಕ್ಷದ ಕೊನೆಯವರೆಗೂ ಇರುವ ಆರವತ್ತು ತಿಥಿದೇವತೆಯರೇ ಈ ಚಕ್ರದೇವತೆಯರು.

'ಏತದ್ಪಾಸಿತಂ ಚಕ್ರಸ್ತ್ರೀದೇವತಾಃ ಕಥಯಾಮಿ ತೇ।
ಮಧುಶುಕ್ಲಪ್ರತಿಪದಮಾರಭ್ಯ ತಿಥಿ ದೇವತಾಃ।
ಮಾಧವಾಸಿತವಕ್ರ್ಯಂತಾಃ ಷಷ್ಟಿಸ್ತ್ರೀಚಕ್ರದೇವತಾಃ।
ಏತಾಭಿಃ ಶಕ್ತಿಭಿರ್ಯುಕ್ತಃ ಸೇವತೇ ಲಲಿತಾಂಬಿಕಾಂ॥'

ಈ ವರ್ಣನೆಗನುಗುಣವಾಗಿ ದ್ವಿತೀಯಕಕ್ಷ್ಯೆ, ಅದರಲ್ಲಿನ ಕಲ್ಪವಾಟಿಕೆ, ಅಲ್ಲಿನ ವಸಂತಚಕ್ರವೆಂಬ ಸಿಂಹಾಸನ, ಅದರ ಮೇಲಿರುವ ವಸಂತಪುರುಷನ ಭವ್ಯ ನಿಲುವು, ಅವನ ಪ್ರೇಯಸಿಯರ ಚೆಲುವು ಮುಂತಾದುವೆಲ್ಲ ಚಿತ್ರಣದಲ್ಲಿ ಬಂದಿವೆ. ಚಿತ್ರಕಾರನ ಕೌಶಲ, ಕಲ್ಪನೆ, ಕೈಚಳಕಗಳು ದಿಟವಾಗಿ ಉತ್ತಮಮಟ್ಟದವು.

೩.

ಮೂರನೆಯದು ತಾಮ್ರದ ಪ್ರಾಕಾರ. ಇದು ವಸಂತವಾದ ಮೇಲೆ ಬರುವ ಗ್ರೀಷ್ಮ ಋತುವಿನ(ಎಂದರೆ ಬೇಸಿಗೆಯ) ಸಂಕೇತ. ಇದರೊಳಗೆ ಕಾಣಿಸಿಕೊಳ್ಳುವುದು ಸಂತಾನವಾಟಿಕೆ, ಅಥವಾ ಸಂತಾನವಾಪಿ. ಅದರ ರಕ್ಷಕನು ಕುಂಭಸಂಭವನಾದ ಗ್ರೀಷ್ಮರ್ತುದೇವತೆ. ಅವನ ಕಣ್ಣುಗಳು ಬಿಸಿಲಿನಂತೆ ಪ್ರಖರ. ಅವನ ಇಬ್ಬರು ಹೆಂಗಳೆಯರು ಶುಕ್ರಶ್ರೀ ಮತ್ತು ಶುಚಿಶ್ರೀ (ಶುಕ್ಲಪಕ್ಷ ಮತ್ತು ಕೃಷ್ಣಪಕ್ಷಗಳು). ಈ ದೇವತೆಯ ಚಕ್ರವನ್ನು ಶ್ರೀತತ್ತ್ವನಿಧಿ ಹೀಗೆ ಹೇಳಿದೆ-

'ತಸ್ಯ ಚಕ್ರಂ ಮುನೇ ಶ್ರುಣು।
ವಸಂತಚಕ್ರಸದೃಶಂ ಸಪ್ತಾವರಣ ಸಂಯುತಂ।
ತನ್ಮಧ್ಯೇ ಬಿಂದು-ಚಕ್ರಸ್ಥೋ ಗ್ರೀಷ್ಮರ್ತುಸ್ತೀಕ್ಷ್ಣಲೋಚನಃ॥'

೪.

ನಾಲ್ಕನೆಯದು ('ತುರೀಯ') ಸೀಸದ ಪ್ರಾಕಾರ. ಇದು ಗ್ರೀಷ್ಮವಾದ ಮೇಲೆ ಬರುವ ವರ್ಷರ್ತುವಿನ (ಮಳೆಗಾಲದ) ಸಂಕೇತ. ಇದರೊಳಗಿರುವುದು ಹರಿಚಂದನವಾಟಿಕೆ. ಇದರ ರಕ್ಷಕ ವರ್ಷರ್ತುದೇವ. ಇವನನ್ನು ಪಿಂಗಳೇಕ್ಷಣ, ವಜ್ರಾಪ್ರಹಾಸಮುಖರ, ಜೀಮೂತವಾಹನ ಎಂದು ಇಲ್ಲಿ ಬಣ್ಣಿಸಿದ್ದಾರೆ. ಇವನ ಸುತ್ತ ನೆರೆದಿರುವವರು ಹನ್ನೆರಡು ಮಂದಿ ಹೆಂಗಳೆಯರು, ನಭಶ್ರೀ, ನಭಸ್ಯಶ್ರೀ, ಸರಸೀ, ಸಸ್ಯಮಾಲಿನೀ, ಅಂಬಾ, ಅಮಲಾ, ನಿರಕ್ತಿ, ಭಾಯಂತಿ, ಮೇಘಯಂತಿ, ವರ್ಷಯಂತಿ, ರುಣಿಕಾ, ವಾರಿಧಾರಾ ಎಂಬ ಅವರ ಹೆಸರುಗಳನ್ನು ನೋಡಿದರೇನೆ ಮಳೆಗಾಲದ ವರ್ಣನೆ ಮನದಟ್ಟಾಗುತ್ತದೆ. ಲಲಿತೋಪಾಖ್ಯಾನದಲ್ಲಿ (೩೨, ೪, ೨೯-೩೦)ಹೆಸರುಗಳು ಬೇರೆ ರೀತಿಯಾಗಿವೆ –

'ಅಂಬಾ ದುಲಾ ನಿರಲಿಶ್ಚಾಭ್ರಯಂತೀ ಮೇಘಯಂತ್ರಿಕಾ।
ವರ್ಷಯಂತೀ ಚಬುಣಿಕಾ ವಾರಿಧಾರಾ ಚ ಶಕ್ತಯಃ॥
ವರ್ಷಂತ್ಯೋ ದ್ವಾದಶ ಪ್ರೋಕ್ತಾ ಮದಾರುಣವಿಲೋಚನಾಃ।'

ಬರಗಾಲದ ಬೇಗೆಯನ್ನು ತೊಲಗಿಸಿ, ಮಳೆಬೆಳೆಗಳನ್ನು ಹೆಚ್ಚಿಸಿ ಲಲಿತಾದೇವಿಯನ್ನು ಸೇವಿಸುವರೆಂಬ ಒಕ್ಕಣೆಯೂ ಇಲ್ಲಿದೆ-

'ಲಲಿತಾಭಕ್ತದೇಶಾಂಸ್ತು ಭೂಷಯನ್ ಸಸ್ಯಸಂಪದಾ।
ತದ್ ವೈರಿಣಾಂ ತು ವಸುಧಾಂ ಅನಾವೃಷ್ಟ್ಯಾ
ನಿಪೀಡಯನ್ ವರ್ತತೇ ಸತತಂ ದೇವೀಕಿಂಕರೋ
ಜಲದಾಗಮಃ॥'

ಮೂರುಲೋಕಗಳಿಗೂ ಸಂತಸವನ್ನುಂಟುಮಾಡುವ ('ತ್ರೈಲೋಕ್ಯಾಹ್ಲಾದದಾಯಕಃ') ಈ ವರ್ಷಾಕಾಲದ ದೇವತೆಯ ಚಕ್ರವು ಪೂರ್ವದ ಕಡೆ ತಿರುಗಿರುವುದೆಂದೂ, ಅದರ ನಡುವೆ ಇರುವ ಬಿಂದುವೇ ದೇವತೆಯ ಆವಾಸಸ್ಥಾನವೆಂದೂ ('ಚಕ್ರಂ ತು ಪೂರ್ವಾವರ್ತಂ । ತನ್ಮಧ್ಯ ಬಿಂದು ಪೀಠಸ್ಥೋ ವರ್ಷರ್ತುಃ') ವರ್ಣನೆಯಿದೆ.

ಮಳೆಗಾಲದ ಹನ್ನೆರಡು ದೃಶ್ಯಗಳನ್ನು ಚಿತ್ರಣದಲ್ಲಿ ಸೂಗಸಾಗಿ ಮೂಡಿಸಿದ್ದಾರೆ. ಮೋಡ ಮಳೆಸುರಿಸುವ ಉತ್ಸಾಹದಲ್ಲಿರುವುದು, ಮಳೆಯಿಂದ ಆಕಾಶ ಕಳೆಗೂಡುವುದು, ಕೆರೆಕೊಳಗಳು ತುಂಬಿಕೊಳ್ಳುವುದು, ಮಳೆಯ ತುಂತುರು ನೀರು ಮೈಮೇಲೆ ಬಿದ್ದಾಗ ಆಗುವ ನೆಮ್ಮದಿ(ನಿರಕ್ತಿ), ಮೋಡ ಕವಿದು, ಕತ್ತಲೆಗೂಡಿ, ಗುಡುಗು-ಸಿಡಲಿನ ಆರ್ಭಟದಿಂದ ಹೆದರುವುದು(ಭಾಯಂತಿ), ಮೋಡ ದಟ್ಟವಾಗಿ ಕವಿಯುವುದು (ಮೇಘಯಂತಿ), ಮಳೆ ಸುರಿಯುವುದು (ವರ್ಷಯಂತಿ), ಮನುಷ್ಯನ ಮನಸ್ಸಿನಲ್ಲಿ ಕೃತಜ್ಞತಾಭಾವ ಮೂಡಿಸುವುದು (ಋಣಿಕಾ), ಧಾರಾಕಾರವಾಗಿ ಮಳೆ ಬೀಳುವುದು (ವಾರಿಧಾರಾ) ಇವನ್ನೆಲ್ಲ ಚಿತ್ರಕಾರರು ಕಲ್ಪಿಸಿಕೊಂಡಿರುವುದು ಸ್ವಾರಸ್ಯವಾಗಿದೆ.

೫.

ಐದನೆಯದು ಅರಕೂಟಮಯಪ್ರಾಕಾರ. ಅರಕೂಟವೆಂದರೆ ಹಿತ್ತಾಳೆ. **'ಯೀ ಪಿತ್ತಾಳೆ ಕೋಟೆಗೂ ಮುಂದಣ ಪಂಚಲೋಹದ ಕೋಟೆಗೂ ಅಂತರಾಳವಾದ ಐದನೆ ಕಕ್ಷ್ಯದ ಮಂದಾರವಾಟಿಯಲ್ಲಿ ಶರಚ್ಚಕ್ರಾಸನದಲ್ಲಿ ಚಕ್ರಸ್ಥೀ ದೇವತೆಗಳಿಂದೊಡಗೂಡಿ ಇಷುಶ್ರೀ ಊರ್ಜಶ್ರೀರೆಂಬ ಯೀರ್ವ ಪತ್ನೀರಿಂ ಸಹಿತನಾಗಿ ಶರದೃತು ರಕ್ಷಕನಾಗಿಯಿರುವನೂ'.** ಶರತ್ಕಾಲದ ಪ್ರಕೃತಿವೈಚಿತ್ರ್ಯದ ಸಂಕೇತವಾಗಿ ಈ ಕಕ್ಷ್ಯೆಯಿದೆ. ಇದೂ ಲಲಿತಾದೇವಿಯ ಉಪಾಸನೆಯ ಒಂದು ಪ್ರಕಾರವೇ ಎಂಬುದನ್ನು

'ಅಭ್ಯರ್ಚಯತಿ (ಶರದೃತುದೇವಃ, ರಕ್ಷಕಃ) ಸಾಮ್ರಾಜ್ಞೀಂ
ಶ್ರೀ ಕಾಮೇಶ್ವರ ಯೋಷಿತಾಂ' –

ಎಂಬ ಒಕ್ಕಣೆ ಸೂಚಿಸುತ್ತದೆ. ಈ ಕಕ್ಷ್ಯೆಯನ್ನು ಲಲಿತೋಪಾಖ್ಯಾನವು ಮಂದಾರ ದ್ರುಮವಾಟಿಕೆಯೆಂದು ಕರೆದಿದೆ.

೬.

ಆರನೆಯದು ಪಂಚಲೋಹ ಪ್ರಾಕಾರ. ಪಂಚಲೋಹ ಮಿಶ್ರಣದಲ್ಲಿ ಬೆಳ್ಳಿ, ಬಂಗಾರ, ತಾಮ್ರ, ಸೀಸ, ತವರ ಇವು ಸೇರುತ್ತವೆ. ಈ ಮಿಶ್ರಣವು ದೇವತಾಸಂಬಂಧವಾದುದೆಂಬ ನಂಬಿಕೆಯಿದೆ; ಪುತ್ಥಳಿಗಳನ್ನೂ ಪೂಜಾ ಪಾತ್ರೆಗಳನ್ನೂ, ಘಂಟೆ, ಕಳಸ, ಛತ್ರಿ, ಮೊದಲಾದುವನ್ನೂ ಪಂಚಲೋಹದಲ್ಲಿಯೇ ಮಾಡುವುದು ವಾಡಿಕೆ. ಈ ಪ್ರಾಕಾರದೊಳಗಿರುವುದು ಪಾರಿಜಾತದ್ರುಮವಾಟಿಕೆ. ಇದು ಹೇಮಂತಋತುವಿನ ಸಂಕೇತ. ಈ ವಾಟಿಕೆಯ ರಕ್ಷಕನಾದವನು 'ಹಿಮಶೀತಳವಿಗ್ರಹ'ವಂತೆ. ಅವನು ಕುಳಿತಿರುವುದು ಹೇಮಂತಚಕ್ರದ ಮೇಲೆ. ಅವನ ಹೆಂಗಳೆಯರು ಸಪಶ್ರೀ ಮತ್ತು ಸಪಸ್ಯಶ್ರೀಯೆಂಬುವರು; ಹೇಮಂತನನ್ನು ಆಲಿಂಗಿಸಿ ಕುಳಿತಂತೆ ಚಿತ್ರಣ. ಹೇಮಂತನೇನೋ ಮೈಸೂರಿನ ಒಬ್ಬ ರಾಜನಂತೆಯೇ ಕಾಣುತ್ತಾನೆ. ಹಿಂಭಾಗದಲ್ಲಿ ಅರಮನೆಯೂ ಇದೆಯನ್ನಿ. ಚಳಿಗಾಲದಲ್ಲಿ ಸಾಧಾರಣವಾಗಿ ಬೆಳಗುವ ಕಾಮುಕತೆಯನ್ನು ಚಿತ್ರ ಸೂಚಿಸುತ್ತದೆ.

೭.

ಏಳನೆಯದು ಬೆಳ್ಳಿಯ ಕೋಟೆ (ರೌಪ್ಯಮಯ ಪ್ರಾಕಾರ). ಅದರಲ್ಲಿರುವುದು ಕದಂಬವನವಾಟಿಕೆ; ಅಲ್ಲಿನ ಕದಂಬವಾಪಿಯ ರಕ್ಷಕ ಶಿಶಿರ ಋತುದೇವತೆ. ಅವನು ಮುನಿಶ್ರೇಷ್ಠನಂತೆ; ಅವನ ಮಡದಿಯರು ತಪಶ್ರೀ ಮತ್ತು ತಪಸ್ಯಶ್ರೀಯರು. ಅವನದು ಶೈಶಿರಚಕ್ರಾಸನ. ಅದರ ಮೇಲೆ ಪದ್ಮಾಸನಸ್ಥನಾಗಿ ಕುಳಿತು ಮಡದಿಯರನ್ನು ಅಪ್ಪಿಕೊಂಡಿದ್ದಾನೆ. ಮುನಿಸಹಜವಾದ ರೂಪ ಚಿತ್ರದಲ್ಲಿದೆ. ಮಡದಿಯರ ಚಿತ್ರಣವೂ ಅಷ್ಟೇ ಮನೋಜ್ಞವಾಗಿದೆ. **'ಶಿಶಿರರ್ತುಸ್ತು ಸೇವತೇ ಜಗದಂಬಿಕಾಂ'.**

೮.

ಲಲಿತಾದೇವಿಯ ಪ್ರಧಾನಪರಿಚಾರಿಕೆಯಾದ ಶ್ಯಾಮಳಾದೇವಿಯ ನಿವಾಸಸ್ಥಾನವೊಂದೂ ಇಲ್ಲಿದೆಯೆಂಬ ಕಲ್ಪನೆಯಿದೆ. ('ಸಂವಾಸನಗರೀ ಸೇಯಂ ಶ್ಯಾಮಾಯಾಃ ಪರಿಕೀರ್ತಿತಾ॥'). ಒಂದು ಪಾಠಾಂತರದಲ್ಲಿ ಇದನ್ನು ಆರನೆಯ ಕಕ್ಷ್ಯೆಯಲ್ಲೆ ಕಾಣಿಸುತ್ತಾರೆ. ಶ್ಯಾಮಲೆಯು ಲಲಿತಾಂಬಿಕೆಯ ಮಂತ್ರಿಣಿಯೆಂದು ಪ್ರಸಿದ್ಧಿಯಿದೆ. ಏಳನೆಯ ಕಕ್ಷ್ಯೆಯಲ್ಲಿ



ರಾಜಮಾತಂಗಿ

ಅವಳ 'ಸೇವಾನಗರ'ವಿದ್ದರೂ ದೇವಿಯ ನಿತ್ಯಸನ್ನಿಧಿ ಅವಳಿಗಿರದಾದಕಾರಣ ಚಿಂತಾಮಣಿಗೃಹದ ಹತ್ತಿರ (ಇಪ್ಪತ್ತೈದನೆಯ ಕಕ್ಷ್ಯೆಯಲ್ಲಿನ ಪದ್ಮಾಟವಿಯಲ್ಲಿ) ಅವಳ ಇನ್ನೊಂದು ಭವನವಿದೆ('ಶ್ರೀದೇವ್ಯಾಃ ನಿತ್ಯಸೇವಾ ತು ಮಂತ್ರಿಣ್ಯಾ ನ ಘಟಿಷ್ಯತೇ, ಬಹುಯೋಜನದೂರತಃ। ಅತಶ್ಚಿಂತಾಮಣಿಗೃಹೋಪಾಂತೇ ತು ಭವನಂ ಕೃತಂ'). ಏಳನೆಯ ಕಕ್ಷ್ಯದಲ್ಲಿರುವ ಶ್ಯಾಮಲೆಯ ಸ್ನೇಹಿತೆ ಕಾದಂಬಿನಿಯೆಂಬ ದೇವತೆ. ಈಕೆಯನ್ನು ಕಾದಂಬರೀ ಎಂದೂ ಉಲ್ಲೇಖಿಸಲಾಗಿದೆ ('ಕಾದಂಬರೀ ಯೋಗಿನೀ ಭೋಗದಾಯಿನೀ'). ಈಕೆಯು ಹೆಂಡದಿಂದಲೆ ಹುಟ್ಟಿದವಳೆಂಬ

ವರ್ಣನೆಯೂ ಇದೆ ('ವಿಶಿಷ್ಟಾ ಮದಿರೋತ್ಪನ್ನಾ ಮಂತ್ರಿಣ್ಯಾ ಸತತಂ ಪ್ರಿಯಾ') (ಲಲಿತೋಪಾಖ್ಯಾನ, ೭೭–೭೮)

ಮತಂಗನೆಂಬ ಋಷಿಯು ತನ್ನ ಹೆಂಡತಿ ಸಿದ್ಧಿಮತಿಯೊಡಗೂಡಿ ಮಂತ್ರನಾಯಿಕೆಯಾದ ಮುದ್ರಿಣೀದೇವಿಯನ್ನು ಕುರಿತು ತಪಸ್ಸು ಮಾಡಿದನೆಂದೂ ಲಘುಶ್ಯಾಮಲಾಂಬಿಕೆಯನ್ನು (ಮಂತ್ರಿಣಿ, ಮೂಲ ಕಂದದಿಂದ ಆವಿರ್ಭೂತಳಾದವಳು) ಮಗಳಾಗಿ ಪಡೆದನೆಂದೂ ಕತೆಯಿದೆ(ಅಲ್ಲಿಯೇ, ೮೭-೧೦೫). ಹಿನ್ನೆಲೆಯಾಗಿ ಪಾರ್ವತಿಯ ತಂದೆಯೆಂದು ಗರ್ವದಿಂದ ಬೀಗಿದ ('ಗೌರೀಗುರುರಿತಿ ಶ್ಲಾಘಾಂ ಆತ್ಮನಿ ತೇನಿವಾನ್') ಹಿಮಾಲಯದೊಂದಿಗೆ ಈ ಋಷಿಯು ಕಟ್ಟಿಕೊಂಡ ವಿರಸದ ಸಂದರ್ಭವಿದೆ. ಮಾತಂಗಿಯು ಲಲಿತಾಂಬೆಯ ಸೇವೆಯಲ್ಲಿ ನಿಂತು ಮಂತ್ರಿಣಿ ಶ್ಯಾಮಲೆಯೆನಿಸಿಕೊಂಡಳು. ಅವಳಿಂದ ಉತ್ಪನ್ನರಾದ ಕೋಟ್ಯನುಕೋಟಿ ಮಾತಂಗಕನ್ನಿಕೆಯರು ದೇವಿಯ ಅಂಗಶಕ್ತಿಯರಾಗಿ ನಿಂತರು. ಲಲಿತೋಪಾಖ್ಯಾನದ ಪ್ರಕಾರ ಇವರೆಲ್ಲರೂ ಏಳನೆಯ ಪ್ರಾಕಾರದಲ್ಲೇ ಅಲ್ಲಿನ 'ಕದಂಬತರುವಾಟಿಕೆ'ಯಲ್ಲೇ ತೋರಿಕೊಳ್ಳುತ್ತಾರೆ. ಎಂದರೆ ಏಳು ಲೋಹಗಳ ಕೋಟೆಗಳು ಮುಗಿದವು. ಇವನ್ನು ದಾಟಿ ಒಳಹೊಕ್ಕರೆ ಎಂಟನೆಯ 'ಸುವರ್ಣಮಯಾಷ್ಟಮಪ್ರಾಕಾರ'ದಲ್ಲಿ ಸಿದ್ಧರು ತಂತಮ್ಮ ಸ್ತ್ರೀಯರೊಡಗೂಡಿ ರಕ್ಷಕರಾಗಿರುವ 'ಪುಷ್ಪರಾಗಮಯೀ'ವಾಟಿಕೆ ಕಾಣುತ್ತದೆ. ಅದರ ವರ್ಣನೆ ಇಲ್ಲಿರುವುದು ಹೀಗೆ-

'ಪುಷ್ಯರಾಗಾದಿಸಾಲೇಷುಕವಾಟಾರ್ಗಳ ಗೋಪುರಂಪುಷ್ಯರಾಗಾದಿ
ವಿಜ್ಞೇಯಂ ಉದ್ಯದಾದಿತ್ಯಭಾಸ್ವರಂತದ್ವರ್ಣಾನಿ ಸರಾಂಸಿ ಚ।
ತದ್ವರ್ಣಸಲೀಲಾ ನದ್ಯಸ್ತದ್ವರ್ಣಾಶ್ಚ ಮಣೀದ್ರುಮಾಃ।।

ಅತ್ರ ಸಿದ್ಧನಾರ್ಯಃ ಖೇಲಂತೀ ಮದನಾಲಸರಸ್ಯೈರಸಾಯನೈಶ್ಚೈವ
ಖಡ್ಗೈಃ ಪಾದಾಂಜನೈರಪಿಲಲಿತಾಭಕ್ತಿಯುಕ್ತಂತರ್ಪಯಂತೋ
ಮಹಾಜನಾನ್।

ಲಲಿತಾಮಂತ್ರ ಜಪ್ತಾರೋ ಲಲಿತಾಕ್ರಮತತ್ಪರಾಃಸಿದ್ಧಜಾತಿಷು
ಯೇ ದೇವೀ-
ಮುಪಾಸ್ಯ ವಿವಿಧೈಃ ಕ್ರಮೈಃ।।ತ್ಯಕ್ತವಂತೋ ವಪುಃ ಪೂರ್ವಂತೇ ಸಿದ್ಧಾ-
. . . . ನಾಂಗನಾಃ।।'

(ಇಲ್ಲಿ ಬರಹದಲ್ಲಿ ಸ್ಖಲಿತ್ಯಗಳಿವೆ; ಕೆಲವನ್ನು ತಿದ್ದಿ ಮೇಲಿನ ಪಾಠವನ್ನು ಕೊಟ್ಟಿದ್ದೇನೆ)

ಸ್ತ್ರೀಸಿದ್ಧರು(ಸಿದ್ಧನಾರಿಯರು) ಯಾರೆಂಬ ವಿವರಣೆ ಇಲ್ಲಿದೆ. ಯಾರು ಮನುಷ್ಯರಾಗಿದ್ದಾಗ ರಸವಿದ್ಯೆಯ ಲಾಭವನ್ನು ಪಡೆದುಕೊಂಡು (ರಸಾಯನ, ಖಡ್ಗ, ಪಾದಾಂಜನ ಮುಂತಾದ ಚಮತ್ಕಾರ ಸಾಧನೆಗಳು) ಲಲಿತಾದೇವಿಯ ಉಪಾಸನೆಯನ್ನು ಬಹುವಾಗಿ ನಡೆಸಿ ದೇಹತ್ಯಾಗಮಾಡಿರುವರೋ ಅವರು ಸಿದ್ಧಾಂಗನೆಯರಾಗಿ ತೋರಿಕೊಂಡು ಈ ಹೇಮಪ್ರಾಕಾರದಲ್ಲಿ ವಿಹರಿಸುತ್ತಾರೆ.

ಮನುಷ್ಯರಿಗೆ ದಕ್ಕುವುದು ಮೊದಲ ಏಳು ಕೋಟೆಗಳು ('ಸಪ್ತಕಕ್ಷ್ಯಾಶ್ಚ ಸಾಲಾ ಲೋಹಾದಿ ನಿರ್ಮಿತಾಃ'). ಸಾಧನೆಯ ಗುಣವಿಶೇಷದಿಂದಲೂ ನಿಷ್ಠೆಯಿಂದಲೂ ದೇವಿಯ ಅನುಗ್ರಹದಿಂದಲೂ 'ಲೋಹಾದಿಸಪ್ತಸಾಲ'ಗಳನ್ನು ದಾಟುವುದಾದರೆ, ಸಿದ್ಧಸಾಧ್ಯರೆಂಬ ಯೋನಿಯಲ್ಲಿ ಕಾಣಿಸಿಕೊಂಡು ಎಂಟನೆಯ ಕಕ್ಷ್ಯೆಯಲ್ಲಿ ಅವತರಿಸುತ್ತಾರೆ. ಇಲ್ಲಿಂದ ಮುಂದೆ ಮತ್ತೆ ಹದಿನೇಳು ಕಕ್ಷ್ಯೆಗಳಿವೆ. ಅವುಗಳಲ್ಲಿಯೂ ಕ್ರಮವಾಗಿ ಅಡಿಯಿಟ್ಟು ಮುಂದರಿಯಬೇಕಾಗುತ್ತದೆ. ಕಡೆಯ ಕಕ್ಷ್ಯೆಯಲ್ಲಿಯೇ ಲಲಿತಾದೇವಿಯ ಸಾಕ್ಷಾತ್ಸನ್ನಿಧಾನವಾದ ಪದ್ಮಾಟವಿ ಇರುವುದು.

೯.

ಒಂಬತ್ತನೆಯ ಕಕ್ಷ್ಯೆಯಲ್ಲಿ 'ಪುಷ್ಯರಾಗಮಯಪ್ರಾಕಾರ'ದೊಳಗೆ ಕಲ್ಪವೃಕ್ಷವನ. ಪುಷ್ಯ(ಪುಷ್ಪ)ರಾಗವೆನ್ನುವುದು ಹಳದಿ ಬಣ್ಣದ ಮಂಜುಮಣಿ, ಥಳಥಳ ಹೊಳೆಯುವ ರತ್ನ. 'ಯುಕ್ತಿಕಲ್ಪತರು'ವಿನಲ್ಲಿ ಅದರ ವರ್ಣನೆ ಹೀಗಿದೆ-

'ಶಣಪುಷ್ಪಸಮಃ ಕಾಂತ್ಯಾ ಸ್ವಚ್ಛಭಾವಸ್ತು ಚಿಕ್ಕಣಃ।
ಪುತ್ರದೋ ಧನದಃ ಪುಣ್ಯಃ ಪುಷ್ಪರಾಗಮಣಿರ್ಧೃತಃ।।
ದೈತ್ಯಧಾತು ಸಮುದ್ಭೂತಃ ಪುಷ್ಯರಾಗಮಣಿರ್ದ್ವಿಧಾ।
ಪದ್ಮರಾಗಾಕರೇ ಕಂಶ್ಚಿತ್ ಕಶ್ಚಿತ್ತಾಕ್ಷ್ಯೋಪಲಾಕರೇ।।

ಈಶತ್ ಪೀತಚ್ಛವಿಚ್ಛಾಯಾಸ್ವಚ್ಛಂ ಕಾಂತ್ಯಾ ಮನೋಹರಂ।
ಪುಷ್ಪರಾಗಮಿತಿ ಪ್ರೋಕ್ತಂ ರಂಗಸೋಮಮಹೀಭುಜಾ।।
ಬ್ರಹ್ಮಾದಿ ಜಾತಿ ಭೇದೇನ ತದ್ವಿಜ್ಞೇಯಂ ಚತುರ್ವಿಧಂ।
ಛಾಯಾ ಚತುರ್ವಿಧಾ ತಸ್ಯ ಸಿತಾ ಪೀತಾ ಸಿತಾಸಿತಾ।।

ಇಲ್ಲಿ **'ಚಾರಣಕೋಟಿಗಳು ತಮ್ಮ ತಮ್ಮ ಸ್ತ್ರೀಯರುಗಳಿಂದೊಡಗೂಡಿ ಈ ಪ್ರಾಕಾರವಂ ರಕ್ಷಿಸಿಕೊಂಡು ಸುಖದಿಂದ ಕಾಯ್ದುಕೊಂಡಿರುವರು'.** ಇಲ್ಲಿ ದೇವೀಸೇವೆಗೆ ಸಲ್ಲುವವರು ಚಾರಣರು, ಚಾರಣಸ್ತ್ರೀಯರು. ಚಾರಣರೆಂಬುವವರು ಗಂಧರ್ವರಲ್ಲಿ ಒಂದು ಗುಂಪು; ಇವರು ನಟರು, ನೃತ್ಯ-ಗೀತಗಳಲ್ಲಿ ಚತುರರು. ಪಾದ್ಮಪುರಾಣದ ಪಾತಾಳಖಂಡದಲ್ಲಿ ದೇವತೆಗಳಲ್ಲಿ ವಂದಿಮಾಗಧರನ್ನಾಗಿ ಚಾರಣರನ್ನು ಗುರುತಿಸಿ ಅವರದ್ದೇ ಒಂದು ಲೋಕವಿರುವಂತೆ ಹೇಳಿದೆ –

'ಗಾಂಧರ್ವಾಣಾಂ ತತೋ ಲೋಕಃ ಪರತಃ ಶತಯೋಜನಾತ್।
ದೇವಾನಾಂ ಗಾಯನಾಸ್ತೇ ಚ ಚಾರಣಾಃ ಸ್ತುತಿಪಾಠಕಾಃ।।'

ಭಾಗವತವು (೨,೧,೩೬)ಚಾರಣರನ್ನು ಗಂಧರ್ವ, ವಿದ್ಯಾಧರ, ಅಪ್ಸರರ ಗಡಣದಲ್ಲಿ ಸೇರಿಸಿ ದೇವಯೋನಿಯೆಂದು ಹೇಳುತ್ತದೆ-

'ಗಂಧರ್ವ ವಿದ್ಯಾಧರ ಚಾರಣಾಪ್ಸರಃ।
ಸ್ವರಃ ಸ್ಮೃತೀರಸುರಾನೀಕ ವೀರ್ಯಃ।।'

ಮನುಷ್ಯರ ಒಳಗೂ ಹೊರಗೂ ಇದ್ದುಕೊಂಡು ಅವರ ಎಲ್ಲ ಕರ್ಮಗಳನ್ನೂ (ದೇಹದ, ಮಾತಿನ, ಮನಸ್ಸಿನ ಕೆಲಸಗಳನ್ನೆಲ್ಲ) ನೋಡುತ್ತಿದ್ದು, ಅವುಗಳಲ್ಲಿ ಏನೊಂದು ಆಸಕ್ತಿಯನ್ನೂ ತಾಳದೆ, ಅವುಗಳಿಗೆ ತಕ್ಕ ಫಲವನ್ನು ನೀಡುವುದು ಚಾರಣರ ಕೆಲಸವೆಂದೂ ಹೇಳಿದೆ (೪, ೧೬, ೧೨). ಆತ್ಮನಾದ ವಾಯುವು ಅವರಿಗೆ ಈ ಕೆಲಸವನ್ನು ಒಪ್ಪಿಸಿರುವನೆಂದೂ ಹೇಳಲಾಗಿದೆ



ಗಂಧರ್ವರು, ಅಪ್ಸರೆಯರು

'ಅಂತರ್ಬಹಿಶ್ಚ ಭೂತಾನಾಂ ಪಶ್ಯನ್ ಕರ್ಮಾಣಿ ಚಾರಣೈಃ।
ಉದಾಸೀನ ಇವಾಧ್ಯಕ್ಷೋ ವಾಯುರಾತ್ಮೈವ ದೇಹಿನಾಂ॥'

ಇದು ಶ್ರೀಪುರದಲ್ಲಿ ಚಾರಣರ ಮತ್ತು ಅವರ ಸ್ತ್ರೀಯರ ಸ್ವಾರಸ್ಯ. ಇವರಿಗೆಲ್ಲ ಪಾದಾಂಜನ, ಆಕಾಶಗಮನ, ಕಾಮರೂಪಧಾರಣ, ಕಾಮಿತಾರ್ಥಸಿದ್ಧಿ, ವಜ್ರಕಾಯ ಮೊದಲಾದ ಹಲವು ಸಿದ್ಧಿಗಳಿವೆ. ಈ ಸಿದ್ಧಿಗಳು ಹಿಂದಿನ ಲೋಕದಲ್ಲಿರುವ ಸಿದ್ಧರಿಗೂ ಇರುತ್ತವೆಯಾದರೂ, ಚಾರಣರಲ್ಲಿ ಇವು ಋದ್ಧಿಯ ರೂಪವನ್ನು ತಳೆಯುತ್ತವೆ. ಋದ್ಧಿಯೆಂದರೆ ಪುಣ್ಯಪ್ರದವಾದ ಲಕ್ಷ್ಮೀಸ್ವರೂಪ. ಇವೆಲ್ಲವೂ ಹಿಂದೆ ತಾವು ತಳೆದಿದ್ದ ಮನುಷ್ಯದೇಹ ಬಿದ್ದುಹೋಗಿ ದಿವ್ಯದೇಹ ಒದಗಿಬಂದಮೇಲೇ ಕಾಣಿಸಿಕೊಳ್ಳುವುವೆಂದು ಶ್ರೀತತ್ತ್ವನಿಧಿಯ ಒಕ್ಕಣೆ ('ಪೂರ್ವದೇಹವಿನಾಶತಃ ಸಿದ್ಧಿಂ ಪ್ರಾಪ್ತಾಃ'). ಇವರು ಲಲಿತಾದೇವಿಯ ಸೇವೆಯ ರೂಪವಾಗಿ ಗಾಯನ-ವಾದನಗಳಲ್ಲಿ ತೊಡಗಿರುತ್ತಾರೆ.

'ಚಾಪಪದ್ಮರಾಗಾಖ್ಯಾ ತತ್ರ ಚಾರಣಲೋಕಸ್ತ್ರೀಃ।ಪೂರ್ವದೇಹ
ವಿನಾಶತಃ ಸಿದ್ಧಿಂ ಪ್ರಾಪ್ತಾಃ।ಮಹಾರಾಜ್ಞೀ ಚರಣಾಂಭೋಜ ಸೇವಕಾಃ।
ಚಾರಣಾನಾಂ ಸ್ತ್ರೀಯಶ್ಚಾಪಿ ಚಾರ್ವಂಗಾ ಮದನಾಲಸಾಃ।ಗಾಯಂತೀ
ಲಲಿತಾದೇವ್ಯಾಃ ಗೀತಿಬಂಧಾನ್ಮುಹುರ್ಮುಹುಃ।ಅತ್ರೈವ ಕಲ್ಪವೃಕ್ಷಾಣಾಂ
ಮದಂತಾದ್ವೇದಿಸ್ಥಾಃ ಭರ್ತೃಭಿಸ್ತತ್ಪಚಾರಿಣ್ಯಃ ಪಿಬಂತಿ ಮಧುರಂ ಮಧು।'

ಶ್ರೀತತ್ತ್ವನಿಧಿಯಲ್ಲಿ ಚಾರಣಸ್ತ್ರೀಪುರುಷರ ಚಿತ್ರಣ ತುಂಬ ಸುಂದರವಾಗಿ ಬಂದಿದೆ. ತಂಬೂರಿ ಮತ್ತು ಪ್ರಾಚೀನ ವೀಣೆಗಳನ್ನು ಹಿಡಿದು ನುಡಿಸುತ್ತ ಬಾಯ್ದೆರೆದು ಹಾಡುತ್ತ ಇರುವಂತೆ ಕಲ್ಪಿಸಿಕೊಳ್ಳಲಾಗಿದೆ.

೧೦.

ಹತ್ತನೆಯದು ಪದ್ಮರಾಗದ ಪ್ರಾಕಾರ. ಪದ್ಮರಾಗವೆನ್ನುವುದು ಕೆಂಪುಬಣ್ಣದ ಮಣಿವಿಶೇಷ; ಅದನ್ನು ಶೋಣರತ್ನವೆಂದೂ ಕುರುವಿಂದಕವೆಂದೂ ಕರೆಯುವುದುಂಟು. ಸೌಗಂಧಿಕ, ಕುರುವಿಂದ, ಸ್ಫಟಿಕಗಳಿಂದ ಪದ್ಮರಾಗ ಹುಟ್ಟುವುದೆಂದು 'ಬೃಹತ್ಸಂಹಿತೆ' (೮೨,) ಹೇಳಿದೆ. ಸೌಗಂಧಿಕದಿಂದ ಉಂಟಾದ ಪದ್ಮರಾಗವು 'ಭ್ರಮರಾಂಜನಾಬ್ಜಜಂಬೂರಸದ್ಯುತಯಃ'; ಕುರುವಿಂದದಿಂದ ಆದದ್ದು 'ಶಬಲಾ ಮಂದದ್ಯುತಯಶ್ಚ ಧಾತುಭಿರ್ವಿದ್ಧಾಃ'; ಸ್ಫಟಿಕದಿಂದ ಒದಗಿಬಂದದ್ದು; 'ದ್ಯುತಿಮಂತೋ ನಾನಾವರ್ಣಾ ವಿಶುದ್ಧಾಶ್ಚ'. ಈ ಮಣಿಗಳಲ್ಲಿ ದೋಷಗಳಿರುವ ಸಂಭವದಿಂದಾಗಿ ಪದ್ಮರಾಗಪರೀಕ್ಷೆಯೆಂಬ ಒಕ್ಕಣೆಯನ್ನು ಹಲವು ಗ್ರಂಥಗಳಲ್ಲಿ ಕಾಣುತ್ತೇವೆ.

ಈ ಪ್ರಾಕಾರದಲ್ಲಿ ರಕ್ಷಕರಾಗಿರುವವರು ಭೈರವರು. 'ಭೈರವಕೋಟಿಗಳು ಯೋಗಿನೀಗಣಗಳಿಂ ಕೂಡಿ ರಕ್ಷಕರಾಗಿರುವರು'. ತ್ರಿಶೂಲ, ನಾಗಡಮರು, ಖಡ್ಗಗಳನ್ನು ಹಿಡಿದು ವೀರಾಸನದಲ್ಲಿ ಕುಳಿತ ಭೈರವನ ಪಕ್ಕದಲ್ಲಿ ಅಂಕುಶ-ಖಡ್ಗಧಾರಿಣಿಯಾದ ಯೋಗಿನಿ ಇವರ ಚಿತ್ರಗಳನ್ನು ಕಾಣಬಹುದು, ದೇವಿಯನ್ನು 'ಕೋಟಿ-ಯೋಗಿನೀಗಣಸೇವಿತೆ'ಯೆಂದೂ 'ಭೈರವಾರಾಧಿತೆ'ಯೆಂದೂ ಬಣ್ಣಿಸಿರುವುದಿದೆ.

೧೧.

ಹನ್ನೊಂದನೆಯ ಪ್ರಾಕಾರ ಗೋಮೇಧಿಕದ್ದು. ಗೋಮೇಧಿಕವನ್ನು (ಸರಿಯಾದ ಶಾಬ್ದರೂಪ ಗೋಮೇದಕ) ರಾಹುರತ್ನ, ಪಿಂಗಸ್ಫಟಿಕ, ತಮೋಮಣಿ ಎಂದೆಲ್ಲ ಕರೆಯುತ್ತಾರೆ. ಹಿಮಾಲಯ ಮತ್ತು ಸಿಂಧು ಇದರ ಉತ್ಪತ್ತಿಸ್ಥಾನವಂತೆ. ಭೋಜರಾಜನ 'ಯುಕ್ತಿಕಲ್ಪತರು'ವಿನಲ್ಲಿ ಇದರ ವರ್ಣನೆ-

' ಹಿಮಾಲಯೇ ವಾ ಸಿಂಧೌ ವಾ ಗೋಮೇದಮಣಿ ಸಂಭವಃ।
ಸ್ವಚ್ಛಕಾಂತಿರ್ಗುರುಃ ಸ್ನಿಗ್ಧೋ ವರ್ಣಾಢ್ಯೋ ದೀಪ್ತಿಮಾನಪಿ
ಬಲಕ್ಷಃ ಪಿಂಜರೋ ಧನ್ಯೋ ಗೋಮೇದ ಇತಿ ಕೀರ್ತಿತಃ॥'

ಈ ಮಣಿ ಬಿಳಿ (ಬ್ರಾಹ್ಮಣಜಾತಿ), ಕೆಂಪುಬಣ್ಣ (ಕ್ಷತ್ರಿಯ), ನಸುಹಳದಿ (ವೈಶ್ಯ), ನೀಲಿ(ಶೂದ್ರ) ಎಂಬ ನಾಲ್ಕು ಬಗೆಗಳಲ್ಲಿ ದೊರೆಯುತ್ತದೆ. ವಜ್ರದಲ್ಲಿರುವ ದೋಷಗಳೇ ಈ ಮಣಿಯಲ್ಲಿಯೂ ಕಾಣುವುವೆಂದು ರತ್ನಪರೀಕ್ಷಕರು ಹೇಳುತ್ತಾರೆ. ನಕಲಿ ಗೋಮೇಧಿಕವನ್ನು ಸ್ಫಟಿಕದಲ್ಲಿ ಮಾಡುವುದೂ ಉಂಟಂತೆ.

ಇಲ್ಲಿನ ಕಕ್ಷ್ಯೆಯಲ್ಲಿ ಗಂಧರ್ವರು ('ಗಂಧರ್ವಪುಂಗವಾಃ') ಅಪ್ಸರೆಯರೊಂದಿಗೆ ದೇವಿಯ ಸ್ತುತಿಪಾಠವನ್ನು ಗಾಯನ-ವಾದನಗಳ ಮೂಲಕ ಮಾಡುತ್ತ ಇರುವಂತೆ ವರ್ಣನೆಯಿದೆ; ಚಿತ್ರಣವೂ ಇದೆ. ವರ್ಣನೆಯಲ್ಲಿ ಅಪ್ಸರೆಯರ ಹೆಸರುಗಳೂ ಇವೆ-

'ಮಹಾರಾಜ್ಞೀ ಗುಣಗಣಾನ್ ಗಾಯಂತೋ ವಲ್ಲಕೀಸ್ವನೈಃ।
ಕಾಮಭೋಗೈಕರಸಿಕಾಃ।ಕಾಮಸನ್ನಿಭವಿಗ್ರಹಾಃ।ಸುಕುಮಾರ ಪ್ರಕೃತಯಃ।
ಶ್ರೀ ದೇವೀಭಕ್ತಿಶಾಲಿನಃ॥

ತಸ್ಮಿನ್ ವಸಂತ್ಯಪ್ಸರಸೋ।ಭೂಷಣೋತ್ತಮ ಭೂಷಿತಾಃ।
ಉರ್ವಶೀ ಮೇನಕಾ ಚೈವ।ರಂಭಾ ಚಾಲಂಬುಗೀ ತಥಾ।ಮಂಜು
ಘೋಷಾ ಸುಕೇಶೀ ಚ।ಪೂರ್ವಚಿತ್ತಿಃ ಘೃತಾಚಿಕಾ।ಕೃತಸ್ಥಳಾ
ಚ ವಿಶ್ವಾಚೀ।ಪುಂಜಿಕಸ್ಥಳಯಾ ಸಹ।ತಿಲೋತ್ತಮೇತಿ ದೇವಾನಾಂ।
ವೇಶ್ಯಾಃ ಏತಾದೃಶೋಪರಾಃ।

ಗಂಧರ್ವೈಃ ಸಹ ನವ್ಯಾನಿ।ಕಲ್ಪವೃಕ್ಷಮಧೂನಿ ಚ।ಪಿಬಂತೋ
ಲಲಿತಾದೇವೀಂ।ಧ್ಯಾಯಂತ್ಯಃ ಸತತಂ ಹೃದಿ।ನೃತ್ಯಂತಶ್ಚೈವ ಗಾಯಂತ್ಯೋ
ವರ್ತಂತೇ. . .'

ಚಿತ್ರಣದಲ್ಲಿ ಪಾಟಲವರ್ಣದ, ರಾಜವೈಭವದ ನಾಲ್ವರು ಗಂಧರ್ವರನ್ನು ಕಾಣಬಹುದು. ಅವರೆಲ್ಲ ಪದ್ಮಾಸನಸ್ಥರು. ಅಪ್ಸರೆಯರಲ್ಲಿ ರಂಭೆ (ತಂಬೂರಿಯ ಶ್ರುತಿಯಲ್ಲಿ ಹಾಡುತ್ತಿರುವಳು), ಮೇನಕೆ (ಬಲಗೈಯನ್ನು ಕಿವಿಗೆ ಆನಿಸಿ ಬಾಯ್ದೆರೆದು ಹಾಡುತ್ತಿದ್ದಾಳೆ), ಊರ್ವಶಿ (ಮೃದಂಗ ನುಡಿಸುತ್ತಿದ್ದಾಳೆ), ತಿಲೋತ್ತಮೆ (ವೀಣೆ ನುಡಿಸುತ್ತಿರುವಳು) ಇವರ ಚಿತ್ರಗಳಿವೆ.

೧೨.

ಹನ್ನೆರಡನೆಯದು ಹೀರಕಕ್ಷೋಣಿ (ವಜ್ರಮಯಪ್ರಾಕಾರ). ಇಲ್ಲಿ ಕಿನ್ನರರು, ಕಿಂಪುರುಷರು, ಕಿನ್ನರಸ್ತ್ರೀಯರು ಮದೋನ್ಮತ್ತರಾಗಿ, 'ಮಹಾರಾಜ್ಞೀಮಂತ್ರಜಾಪೈಃ ವಿಧೂತಾಶೇಷಕಲ್ಮಷ'ರಾಗಿ ದೇವಿಯನ್ನು ತಮ್ಮ ಗಾಯನ-ನರ್ತನಗಳಿಂದ ಸೇವಿಸುತ್ತಿರುವರು. ಇಲ್ಲಿ ಹರಿಯುವ ನದಿಗೆ 'ವಜ್ರಾ' ಎಂದೇ ಹೆಸರು. ಲಲಿತಾದೇವಿಯ ಭಕ್ತರು ಈ ನದಿಯ ನೀರನ್ನು ಕುಡಿದು ವಜ್ರದೇಹವನ್ನು ಪಡೆದು ದೀರ್ಘಾಯುಷಿಗಳೂ ನೀರೋಗಿಗಳೂ ಆಗಿರುವರು. ಭಂಡಾಸುರನೊಂದಿಗೆ ಇಂದ್ರನು ಕಾದಾಡುತ್ತಿರುವಾಗ ಇಂದ್ರನ ವಜ್ರಾಯುಧವು ಮುರಿಯಿತು. ಆಗ ಇಂದ್ರನು ಈ ಕಕ್ಷ್ಯೆಯಲ್ಲಿನ ನದಿಯ ದಡದ ಮೇಲೆ ನಿಂತು ದೇವಿಯನ್ನು ಕುರಿತು ತಪಸ್ಸು ಮಾಡಿ ವಜ್ರಾಯುಧವನ್ನು ಮತ್ತೆ ಪಡೆದುಕೊಂಡನು. ದೇವಿಯ ಈ ನದಿಯ ನೀರಿನ ಮಧ್ಯೆ ಎದ್ದು ಇಂದ್ರನೆದುರು ಕಾಣಿಸಿಕೊಂಡಳು ('ತಜ್ಜಲಾದುದಿತಾ ದೇವೀ ವಜ್ರಂ ದತ್ತಾ ಬಲದ್ವಿಷೇ। ಪುನರಂತರ್ದಧೇ ಸೋಽಪಿ ಕೃತಾರ್ಥಃ ಸ್ವರ್ಗಮೇಯಿವಾನ್'). ಈ ಕಾರಣದಿಂದ ಇದು ವಜ್ರಮಯ ಕಕ್ಷ್ಯೆಯೆನಿಸಿಕೊಂಡಿತು.

೧೩.

ಹದಿಮೂರನೆಯ ಕಕ್ಷ್ಯೆಯಲ್ಲಿ ಪಾತಾಳಲೋಕದ ವಾಸಿಗಳೂ ಶ್ರೀದೇವ್ಯರ್ಚನಸಾಧಕರೂ ಆದ ಶೇಷ, ಕರ್ಕೋಟಕ, ಮಹಾಪದ್ಮ, ವಾಸುಕಿ, ಶಂಖ, ತಕ್ಷಕ, ಶಂಖಚೂಡ, ಮಹಾದಂತ, ಮಹಾಫಣ ಮೊದಲಾದ ನಾಗಗಳೂ, ಬಲಿಯೇ ಮೊದಲಾದ ಧಾರ್ಮಿಕರಾದ ಅಸುರರೂ ಸಿದ್ಧಮೂರ್ತಿಗಳಾಗಿ, ನಾಗಗಳು ನಾಗಸ್ತ್ರೀಯರೊಂದಿಗೆ ಅಸುರರು ಅಸುರಸ್ತ್ರೀಯರೊಂದಿಗೆ ಲಲಿತಾಪೂಜೆ ಮಾಡುತ್ತ ಇರುವರು. ಈ ಕಕ್ಷ್ಯೆಯನ್ನು ವೈಡೂರ್ಯಮಯ ಪ್ರಾಕಾರವೆಂದು ಕರೆಯಲಾಗಿದೆ. ವೈಡೂರ್ಯ (ವೈದೂರ್ಯ)ವೆನ್ನುವುದು ಒಂದು ಮಣಿವಿಶೇಷ; ಅದರ ಬಣ್ಣ ಕೃಷ್ಣಪೀತವೆಂದು ಹೇಳಿದೆ. ಒಳ್ಳೆಯ ವೈಡೂರ್ಯದ ಲಕ್ಷಣವನ್ನು 'ರಾಜನಿರ್ಘಂಟ'ವೆಂಬ ಗ್ರಂಥ ಹೀಗೆ ನೀಡಿದೆ–

'ಘೃಷ್ಟಂ ಯದಾತ್ಮನಾ ಸ್ವಚ್ಛಂ ಸ್ವಚ್ಛಾಯಾಂ ನಿಕಷಾಶ್ಮನಿ।
ಸ್ಫುಟಂ ಪ್ರದರ್ಶಯೇದೇತದ್ವೈಡೂರ್ಯಂ ಜಾತ್ಯಮುಚ್ಯತೇ॥'

೧೪.

ಹದಿನಾಲ್ಕನೆಯದು ಶಕ್ರನೀಲಕಕ್ಷ್ಯೆ (ಇಂದ್ರನೀಲ ಮಣಿಮಯ ಕೋಟೆ). ಇಂದ್ರನೀಲಮಣಿಯನ್ನು ಮರಕತಮಣಿಯೆಂದೂ ಕರೆಯುವುದುಂಟು. ಇದನ್ನು ಹಾಲಿನಲ್ಲಿಟ್ಟರೆ ಹಾಲು ನೀಲಿಬಣ್ಣಕ್ಕೆ ತಿರುಗುವುದೆಂದು ಹೇಳುತ್ತಾರೆ –

'ಕ್ಷೀರಮಧ್ಯೇ ಕ್ಷಿಪೇನ್ನೀರಂ ಕ್ಷೀರಂ ಚೇನ್ನೀಲತಾಂ ವ್ರಜೇತ್।
ಇಂದ್ರನೀಲಮಿತಿ ಖ್ಯಾತಂ ತದಾಹಿ ರತ್ನಕೋವಿದೈಃ॥'


ಈ ಕಕ್ಷ್ಯೆಯಲ್ಲಿ ಹರಿಯುವ ತಾಮ್ರಪರ್ಣೀ, ಮಹಾಪರ್ಣೀ, ಮೊದಲಾದ ಮಹಾನದಿಗಳೂ ಇಂದ್ರನೀಲಮಣಿಯಂತೆಯೆ ಕಂಗೊಳಿಸುವುವು. ಈ ನದಿಗಳ ದಡದಲ್ಲಿ ವಾಸಿಸುವವರು ಹಿಂದಿನ ಜನ್ಮದಲ್ಲಿ ಭೂಮಿಯ ಮೇಲೆ ಲಲಿತಾಭಕ್ತರಾಗಿದ್ದವರು, ಈಗ ದೇವಲೋಕನಿವಾಸಿಗಳಾಗಿರುವವರು.

'ಏವಮಾದ್ಯಾ ಮಹಾನದ್ಯೋಽವಹಂತ್ಯತ್ರ ಮಹೀಸ್ಥಲೇ।
ತಾಸಾಂ ತೀರೇಷು ಸರ್ವೇಷುದೇವಲೋಕನಿವಾಸಿನಃ।ವಸಂತಿ
ಪೂರ್ವಜನುಷಿ ಶ್ರೀ ದೇವೀಮಂತ್ರಸಾಧಕಾಃ।।'

ಇದಕ್ಕೆ ಮೂಲವಾದ ಲಲಿತೋಪಾಖ್ಯಾನದಲ್ಲಿ ವಿವರಣೆಯಿದೆ (೩, ೪, ೩೩, ೪೩-೪೭)

'ಯೇ ಭೂಲೋಕಗತಾ ಮರ್ತ್ಯಾ ಲಲಿತಾಮಂತ್ರಸಾಧಕಾಃ।
ತೇ ದೇಹಾಂತೇ ಶಕ್ರನೀಲಕಕ್ಷ್ಯಾಂ ಪ್ರಾಪ್ಯ ವಸಂತಿ ವೈ।।
ತತ್ರ ದಿವ್ಯಾನಿ ವಸ್ತೂನಿ ಭುಂಜಾನಾ ವನಿತಾಸಖಾಃ।
ಪಿಬಂತೋ ಮಧುರಂ ಮದ್ಯಂ ನೃತ್ಯಂತೋ ಭಕ್ತಿನಿರ್ಭರಾಃ।।

ಸದಾ ಜಪಂತಃ ಶ್ರೀದೇವೀಂ ಪಠಂತಶ್ಚಾಪಿ ತದ್ಗುಣಾನ್।
ನಿವಸಂತಿ ಮಹಾಭಾಗಾ ನಾರೀಭಿಃ ಪರಿವೇಷ್ಟಿತಾಃ।।



ಅಷ್ಟದಿಕ್ಪಾಲಕರು

ಕರ್ಮಕ್ಷಯೇ ಪುನರ್ಯಾಂತಿ ಭೂಲೋಕೇ ಮಾನುಷೀಂ ತನುಂ।
ಪೂರ್ವವಾಸನಯಾ ಯುಕ್ತಾಃ ಪುನರರ್ಚಂತಿ ಚಕ್ರಿಣೀಂ॥

ಶ್ರೀತತ್ತ್ವನಿಧಿಯಲ್ಲಿ ಕಾಣುವ ಈ ಕಕ್ಷ್ಯೆಯ ಒಕ್ಕಣೆಯಲ್ಲಿ ಗೊಂದಲವಿದೆ. ಲಲಿತೋಪಾಖ್ಯಾನವು ತಾಮ್ರಪರ್ಣೀ, ಮಹಾಪರ್ಣೀ ಮೊದಲಾದ ನದಿಗಳನ್ನು ಮುಂದಿನ ಕಕ್ಷ್ಯೆಯಾದ (ಹದಿನೈದನೆಯದು) ಮುಕ್ತಾಫಲಮಯಶಾಲೆಯಲ್ಲಿ ಕಾಣಿಸಿದೆ (೩, ೪, ೩೩, ೫೦-೫೨)-

'ಇಂದ್ರನೀಲಾಖ್ಯಶಾಲಸ್ಯಾಂತರೇ ಮಾರುತಯೋಜನೇ।
ಮುಕ್ತಾಫಲಮಯಃ ಶಾಲಃ ಪೂರ್ವವದ್ಗೋಪುರಾನ್ವಿತಃ॥
ತಾಮ್ರಪಾರ್ಣೀ ಮಹಾಪರ್ಣೀ ಸದಾ ಮುಫಲೋದಕಾ।
ಏವಮಾದ್ಯಾ ಮಹಾನದ್ಯಃ ಪ್ರವಹಂತಿ ಮಹಾಸ್ಥಲೇ॥
ತಾಸಾಂ ತೀರೇಷು ಸರ್ವೇಽಪಿ ದೇವಲೋಕನಿವಾಸಿನಃ।
ವಸಂತಿ ಪೂರ್ವಜನುಷಿ ಶ್ರೀ ದೇವೀಮಂತ್ರಸಾಧಕಾಃ॥

ಶ್ರೀತತ್ತ್ವನಿಧಿಯ ಈ ಪ್ರತಿಯನ್ನು ಲಿಪಿಬದ್ಧವಾಗಿ ಮಾಡಿದವರು ಈ ಎರಡು ಕಕ್ಷ್ಯೆಗಳ ವಿವರಗಳನ್ನು ಬೆರೆಸಿಬಿಟ್ಟಂತೆ ತೋರುತ್ತದೆ. ಲಲಿತೋಪಾಖ್ಯಾನದಲ್ಲಿ ಅಷ್ಟದಿಕ್ಪಾಲಕರನ್ನೂ ಹದಿನೈದನೆಯ ಕಕ್ಷ್ಯೆಯಲ್ಲೇ ಕಾಣಿಸಿದೆ; ಶ್ರೀತತ್ತ್ವನಿಧಿಯಲ್ಲಾದರೋ ಅವರು ಹದಿನಾಲ್ಕನೆಯ ಕಕ್ಷ್ಯೆಯಲ್ಲೇ ಕಾಣಿಸಿಕೊಳ್ಳುತ್ತಾರೆ. ಅದನ್ನು ಕುರಿತ ಬರಹವನ್ನು ಮಾತ್ರ ಲಲಿತೋಪಾಖ್ಯಾನದಿಂದಲೇ (೩, ೪, ೩೩, ೫೨) ಎತ್ತಿಕೊಂಡಿದ್ದಾರೆ –

'ಪೂರ್ವಾದ್ಯಷ್ಟಸು ಭಾಗೇಷು । ಲೋಕಾಃ ಶಕ್ರಾದಿ ಗೋಚರಾಃ।'

ಆರಂಭವಚನದಲ್ಲಿಯೂ **'ಅಥ ಇಂದ್ರನೀಲಮಣಿಮಯ ಚತುರ್ದಶ ಪ್ರಾಕಾರಸ್ಥ ಇಂದ್ರಾದಿ ದಿಕ್ಪಾಲಕಾನಾಂ ಧ್ಯಾನಂ'** ಎಂಬ ಸೂಚನೆಯೇ ಇದೆ.

ಲಲಿತೋಪಾಖ್ಯಾನದ ವಿಂಗಡಣೆಯಂತೆ ಒಂಬತ್ತನೆಯ ಪ್ರಾಕಾರವಾದ ಪುಷ್ಯರಾಗಮಯ ಪ್ರಾಕಾರದಿಂದ ಹದಿನೈದನೆಯ ಪ್ರಾಕಾರವಾದ ಮುಕ್ತಾಫಲಮಯ ಪ್ರಾಕಾರದವರೆಗೆ ಏಳು ಪ್ರಾಕಾರಗಳು ಒಂದು ಗುಂಪು; ಆಷ್ಟು ಪ್ರಕಾರಗಳ ವಿವರಣೆ ಮೂವತ್ತಮೂರನೆಯ ಅಧ್ಯಾಯದಲ್ಲಿ ಬಂದಿದೆ. ಆ ಅಧ್ಯಾಯದ ಪುಷ್ಪಿಕೆಯಲ್ಲೂ 'ಲಲಿತೋಪಾಖ್ಯಾನೇ ಪುಷ್ಪರಾಗಪ್ರಾಕಾರಾದಿ ಮುಕ್ತಾಕಾರಾಂತ ಸಪ್ತಕಕ್ಷಾಂತರಕಥನಂ ನಾಮ ತ್ರಯಸ್ತ್ರಿಂಶೋಧ್ಯಾಯಃ' ಎಂದೇ ಇದೆ.

ಮತ್ತೆ ಮುಂದಿನ ಅಧ್ಯಾಯದಲ್ಲಿಯೂ ದಿಕ್ಪಾಲಕರು ಹದಿನೈದನೆಯ ಮುಕ್ತಾಮಯ ಪ್ರಾಕಾರದಲ್ಲೇ ಇದ್ದಾರೆಂಬ ಸ್ಪಷ್ಟೋಕ್ತಿಯಿದೆ (೩, ೪, ೩೪, ೫೩) –

'ಇತ್ಥಂ ಶಕ್ರಾದಿ ದಿಕ್ಪಾಲಾ ಮುಕ್ತಾಶಾಲಂ ಸಮಾಶ್ರಿತಾಃ।
ಲಲಿತಾಪರಮೇಶ್ವರ್ಯಾಃ ಸೇವಾಮೇವ ವಿತನ್ವತೇ॥

ಇದೇ ಕಕ್ಷ್ಯೆಯಲ್ಲಿಯೇ ಲಲಿತೋಪಾಖ್ಯಾನವು ರುದ್ರರನ್ನೂ ಸೇರಿಸುತ್ತದೆ.

ಪ್ರಕೃತ, ದಿಕ್ಪಾಲಕರನ್ನು ಲಲಿತೋಪಾಖ್ಯಾನವು ಕಾಣಿಸಿರುವುದನ್ನು ಗಮನಿಸಿ ವಿವರಿಸೋಣ –

**'ಮುಕ್ತಾಶಾಲಸ್ಯ ನೀಲಸ್ಯ ದ್ವಾರಯೋರ್ಮಧ್ಯದೇಶತಃ।
ಪೂರ್ವಭಾಗೇ ಶಕ್ರಲೋಕಸ್ತತ್ಕೋಣೇ ವಹ್ನಿಲೋಕಭೂಃ
ಯಾಮ್ಯಭಾಗೇ ಯಮಪುರಂ ತತ್ರ ದಂಡಧರಃ ಪ್ರಭುಃ॥'**

ಇಂದ್ರನೀಲಮಣಿಮಯ ಪ್ರಾಕಾರದಿಂದ ಮುಕ್ತಾಫಲಮಯ ಪ್ರಾಕಾರದವರೆಗೆ ವ್ಯಾಪಿಸಿರುವ ಕಕ್ಷ್ಯೆಯ ನಡುವೆ ಇರುವ ಸ್ಥಳದ ಎಂಟೂ ದಿಕ್ಕುಗಳಲ್ಲಿ ದಿಕ್ಪಾಲಕರು: ಇಂದ್ರ, ಅಗ್ನಿ, ಕುಬೇರ, ಯಮ, ವಾಯು, ವರುಣ, ನಿರ್ಋತಿ, ಈಶಾನ. ಶ್ರೀತತ್ತ್ವನಿಧಿಯಲ್ಲಿ ದಿಕ್ಪಾಲಕರ ಭವ್ಯಚಿತ್ರಣವಿದೆ. ಆಯಾ ದಿಕ್ಪಾಲಕರ ವರ್ಣ, ಮುಖ, ಭುಜ, ಆಯುಧ, ವಾಹನ ಮುಂತಾದ ವಿವರಗಳನ್ನು ಶಾಸ್ತ್ರಸಮ್ಮತವಾಗಿ ಅಳವಡಿಸಿದ್ದಾರೆ.

(೧) ಇಂದ್ರ - ಕನಕವರ್ಣ; ಎರಡು ಕೈಗಳು (ಬಲಗೈಯಲ್ಲಿ ವಜ್ರಾಯುಧ, ಎಡಗೈ ಲೋಲಹಸ್ತ) ಐರಾವತವು ವಾಹನ. **('ಐರಾವತಂ ಸಮಾರೂಢೋ ವಜ್ರಹಸ್ತಸ್ತು ರೈವತಃ । ಪೂರ್ವಭಾಗೇ ಶಕ್ರಲೋಕಸ್ತಂ ರಕ್ಷತಿ ಪುರಂದರಃ।')**

(೨) ಅಗ್ನಿ - ರಕ್ತವರ್ಣ, ಎರಡು ಮುಖ; ನಾಲ್ಕು ಕೈಗಳು; ಶಕ್ತ್ಯಾಯುಧ, ಸ್ರುಕ್, ಅಭಯ, ವರದ; ಸ್ವಧಾ ಮತ್ತು ಸ್ವಾಹಾ ಪತ್ನಿಯರು.
('ಅಗ್ನಿಭಾಗೇ ಚಾಗ್ನಿಲೋಕಃ।ಸಪ್ತಾರ್ಚಿಸ್ತಸ್ಯ ವೈ ಪ್ರಭುಃ। ಮೇಷಾರೂಢಃ ಶಕ್ತಿಧೀಃ ಸ್ವಧಾಸ್ವಾಹಾಸಮನ್ವಿತಃ।')

(೩) ಕುಬೇರ - ಕನಕವರ್ಣ; ಬಲಗೈಯಲ್ಲಿ ಖಡ್ಗ, ಎಡಗೈ ಊರುಹಸ್ತ (ತೊಡೆಯ ಮೇಲಿರಿಸಿ-ಕೊಂಡಿದ್ದಾನೆ). ಪರಿವಾರದಲ್ಲಿ ಮಣಿಭದ್ರಯಕ್ಷ; ಪಕ್ಷಯುತ (ರೆಕ್ಕೆಗಳಿದ್ದು ಆಕಾಶಗಮನಸಿದ್ಧಿಯನ್ನು ಸೂಚಿತಸುವಂಥದ್ದು ಕುಬೇರನು ಯಕ್ಷರಿಗೆ ಒಡೆಯ; ಅವನ ಅನುಚರರು ಮಣಿಭದ್ರ, ಪೂರ್ಣಭದ್ರ ಮೊದಲಾದ ಯಕ್ಷರು; ನಿಧಿರಕ್ಷಕರು.
('ಯಕ್ಷಲೋಕೋ ಮಹಾದ್ಯುತಿಃ।ಯಕ್ಷೇಂದ್ರೋ ವಸತಿ ಶ್ರೀಮಾನ್ ಕೃತಭೃದ್ವಾಜಿವಾಹನಃ।ನಿಧಿಭಿಶ್ಚ ನವಾಕಾರೈಃ ಬುದ್ಧಿಖದ್ವ್ಯಾದಿ ಶಕ್ತಿಭಿಃ। ಸಹಿತೋ ಲಲಿತಾಭಕ್ತಾ। ಪೂರಯನ್ ಧನಸಂಪದಾ। ಯಕ್ಷಿಭಿಶ್ಚ ಮನೋಜ್ಞಾಭಿ। ರನುಕೂಲ ಪ್ರವರ್ತಿಭಿಃ। ಮಣಿಭದ್ರಃ ಪೂರ್ಣಭದ್ರೋ ಮಣಿಮಾನ್ ಮಣಿಕಂಧರಃ। ಇತ್ಯೇವಮಾದಯೋ ಯಕ್ಷಸೇನಾಸ್ತತ್ರ ಸಂತಿ ವೈ । ವಿವಿಧೈರ್ವಸುಭೇದೈಶ್ಚ । ಸಂಪೂಜಯತಿ ಚಕ್ರಿಣೀಂ॥')

(೪) ಯಮ - ನೀಲವರ್ಣ; ಎರಡು ಕೈಗಳು, ಬಲಗೈಯಲ್ಲಿ ಲೀಲಾರವಿಂದ (ತಾವರೆ ಹೂ), ಎಡಗೈಯಲ್ಲಿ ದಂಡ; ಜೊತೆಗೆ ಚಿತ್ರಗುಪ್ತ. ಲಲಿತೋಪಾಸಕರಿಗೆ ತೊಂದರೆ ಕೊಡುವವರನ್ನು ದಂಡಿಸುವುದು ಯಮಭಟರ ಕೆಲಸ. ಇವರ ಚಿತ್ರಣ ಆಗಿನ ಕಾಲದ ರಾಜಾಸ್ಥಾನದಲ್ಲಿ ಬಳಕೆಯಲ್ಲಿದ್ದ ಉಡುಗೆ-ತೊಡುಗೆಗಳನ್ನು ತೊಟ್ಟಂತೆ.
('ಯಾಮ್ಯಭಾಗೇ ಯಮಪುರಂ । ತತ್ರ ದಂಡಧರಃ ಪ್ರಭುಃ। ಉತ್ತುಂಗ ಮಹಿಷಾರೂಢಃ। ಅತಿತೀವ್ರಸ್ವಭಾವವಾನ್। ಆಜ್ಞಾಧರೈ ಯಮಭಟೈಶ್ಚಿತ್ರಗುಪ್ತ ಪುರೋಗಮೈರ್ನಿಪೀಡಯತ್ಯೇವ ಲಲಿತಾಸಮಯದ್ರುಹಃ।)

(೫) ವಾಯು (ವಾಯವ್ಯದೇವ) - ಧೂಮ್ರವರ್ಣ; ಧ್ವಜವನ್ನು ಹಿಡಿದ (ಬಲಗೈ), ಲೋಲಾಹಸ್ತ(ಎಡಗೈ); ಜಿಂಕೆ ವಾಹನ; ಪರಿವಾರದಲ್ಲಿ ಗೋರಕ್ಷನೇ ಮೊದಲಾದ ಯೋಗಿಗಳು, ಸಿದ್ಧರು, ಋಷಿಗಳು; ಇಡಾ ಮೊದಲಾದವರು ಶಕ್ತಿಯರು.
('ವಾಯುರ್ಲೋಕೋ ಮಹಾದ್ಯುತಿಃ। ಸಪ್ತಧಾ ('ಸರ್ವಥಾ') ಭಿನ್ನಮೂರ್ತಿಃ।ವಾಯುಸ್ತತ್ರಾಪಿ ಕುಂಭಜ । ಧ್ವಜಹಸ್ತೋ ಮೃಗಾರೂಢೋ । ಗೋರಕ್ಷಾದ್ಯೈಶ್ಚ ಯೋಗಿಭಿಃ ಸಿದ್ಧೈರ್ಮಹರ್ಷಿಭಿಃ ಸಾರ್ಧಂ ಇಡಾದ್ಯಾಭಿಶ್ಚ ಶಕ್ತಿಭಿಃ ।ಸುಮಾರುತೇಶ್ವರಃ ಶ್ರೀಮಾನ್।ಸದಾಜಪತಿ ಚಕ್ರಿಣೀಂ॥')

(೬) ವರುಣ - ಕನಕವರ್ಣ; ಪಾಶಹಸ್ತ (ಬಲಗೈ), ಲೋಲಾಹಸ್ತ (ಎಡಗೈ); ವಾರುಣಿಯೆಂಬ ಮದ್ಯವಿಶೇಷವನ್ನು ಕುಡಿದು ಉನ್ಮತ್ತನಾಗಿದ್ದಾನೆ; ಮೊಸಳೆಯನ್ನೇರಿದ್ದಾನೆ. ಲಲಿತಾದೇವಿಗೆ ಅಪಚಾರಮಾಡುವವರನ್ನು ಪಾಶದಿಂದ ಕಟ್ಟಿ ಕೆಳಲೋಕಕ್ಕೆ ಎಳೆದೂಯ್ಯುತ್ತಾನೆ;ಭಕ್ತರಾದವರನ್ನು ಬಂಧನಗಳಿಂದ ಬಿಡಿಸುತ್ತಾನೆ.

'ವರುಣಃ ಪಾಶಹಸ್ತವಾನ್।ವಾರುಣ್ಯಾಸ್ವಾದನೋನ್ಮತ್ತಃ । ಶುಭಾಂಗೋ ನಕ್ರ-
ವಾಹನಃ।ಶ್ರೀ ದೇವತಾ ದರ್ಶನಸ್ಯ।ದ್ವೇಷಿಣಂ ಪಾಶಬಂಧನೈಃ।ಬದ್ಧ್ವಾಽನಯತ್ಯಧೋಮಾರ್ಗಂ। ಭಕ್ತಾನಾಂ ಬಂಧಮೋಚಕಃ॥')

(೭) ನಿರ್ಋತಿ - ಅಂಜನವರ್ಣ; ಖಡ್ಗಹಸ್ತ (ಎಡಗೈ), ಲೋಲಾಹಸ್ತ (ಬಲಗೈ);
('ಮನುಷ್ಯ ವಾಹನ ನಿರ್ಋತಿರ್ನರವಾಹನಃ। ಖಡ್ಗಹಸ್ತೋ ಮಹಾಬಾಹು ।ರ್ವರ್ತತೇ ಲಲಿತಾರ್ಚಕಃ॥')

(೮) ಈಶಾನ - ಶ್ವೇತವರ್ಣ; ನಾಲ್ಕುಕೈಗಳು; ತ್ರಿಶೂಲ, ಡಮರು, ಅಭಯ, ವರದ; ರುದ್ರಚಕ್ರಾಸನಸ್ಥ
('ಷೋಡಶಾವರಣಂ ಚಕ್ರಂ । ಮಹಾರುದ್ರಸ್ಯ ತಸ್ಯ ವೈ। ಬಿಂದುತ್ರಿಕೋಣಷಟ್ಕೋಣಾಷ್ಟಕೋಣದಶಪತ್ರಕೈಃ॥')

ಅಷ್ಟದಿಕ್ಪಾಲಕರ ಚಿತ್ರಣ ಸುಂದರವಾಗಿ, ವಿವರಪೂರ್ಣವಾಗಿ, ಮನೋಜ್ಞವಾಗಿದೆ.

೧೫.

ಹದಿನೈದನೆಯದು ಮುಕ್ತಾಮಯ ಪ್ರಾಕಾರ (ಮುತ್ತಿನ ಕೋಟೆ); ಅದರಲ್ಲಿ ತಾಳವನ; ಅದರ ರಕ್ಷಕಳು ವಾರಾಹೀ –

'ಯೀ ಮುತ್ತಿನ ಕೋಟೆಗೂ ಮುಂದಣ ಮರಕತದ
ಕೋಟೆಗೂ ಅಂತರಾಳವಾದ ಹದಿನೈದನೆಯ ಕಕ್ಷ್ಯದಲ್ಲಿ
ಸುವರ್ಣತಾಳೀವನದಲ್ಲಿ
ಕಿರಿಚಕ್ರರಥ ಸ್ತ್ರೀದೇವತೆಗಳಿಂದೊಡನೆ ಕಿರಿಚಕ್ರಾಸನದೊಳ್
ದಂಡಿನಿಯಾದ
ವಾರಾಹೀ ದೇವಿಯು ಪರಿವಾರದಿಂ ಕೂಡಿ
ನಿಜಾಯುಧಗಳಂ ಧರಿಶಿ ರಕ್ಷಕಳಾಗಿಯಿರುವಳೂ'

ಮುತ್ತಿಗೆ ಸಂಸ್ಕೃತದಲ್ಲಿ ಮೌಕ್ತಿಕ, ಮುಕ್ತಾ, ಇಂದುರತ್ನ, ಶುಕ್ತಿಮಣಿ, ತಾರೆ, ಹಿಮ, ಶಶಿಪ್ರಭ ಎಂಬ ಹೆಸರುಗಳಿವೆ. ಇದು ಪಾಪವೆಂಬ ಅಲಕ್ಷ್ಮಿಯನ್ನು ತೊಡೆದು ಹಾಕಬಲ್ಲುದಂತೆ. ಒಳ್ಳೆಯ ಮುತ್ತನ್ನು ಕುರಿತು 'ರಾಜನಿರ್ಘಂಟು'ವೆಂಬ ಗ್ರಂಥದಲ್ಲಿರುವ ಒಕ್ಕಣೆ ಇದು –

'ನಕ್ಷತ್ರಾಭಂ ಶುದ್ಧಮತ್ಯಂತಮುಕ್ತಂ
ಸ್ನಿಗ್ಧಂ ಸ್ಥೂಲಂ ನಿರ್ಮಲಂ ನಿರ್ವ್ರಣಂ ಚ।
ನ್ಯಸ್ತಂ ಧತ್ತೇ ಗೌರವಂ ಯತ್ತುಲಾಯಾಂ
ತನ್ಮೌಕ್ತಿಕಂ ಮೌಕ್ತಿಕಂ ಸೌಖ್ಯದಾಯಿ॥'

ಲಲಿತೋಪಾಖ್ಯಾನದಲ್ಲಿ (೩, ೪, ೩೪, ೫೮-೫೯) ಹದಿನಾರನೆಯ ಕಕ್ಷ್ಯೆಯಲ್ಲಿ ಕಾಣಿಸಿರುವ ಈ ತಾಳವನ ಪ್ರದೇಶವನ್ನು

'ಹೇಮತಾಲವನಾಢ್ಯಶ್ಚ ಸರ್ವವಸ್ತುಸಮಾಕುಲಾಃ।
ತತ್ರ ದೇವ್ಯಃ ಸಮಸ್ತಾಶ್ಚ ದಂಡನಾಥಾ ಸಮಶ್ರಿಯಃ॥
ಹಲೋದ್ಧರ್ಣ ಹಲಾದ್ಧರ್ಣ ಮುಸಲಾಃ ಸಂಚರಂತ್ಯಪಿ।
ಸಂಖ್ಯಾತೀತಾಸ್ತಾಲವೃಕ್ಷಾಃ ನವಸ್ವರ್ಣವಿಚಿತ್ರಿತಾಃ॥

ಎಂದು ವರ್ಣಿಸಿ ಅದರಲ್ಲಿ ತಾಳರಸವನ್ನು ಮತ್ತೆ ಮತ್ತೆ ಕುಡಿದು ಮದವೇರಿದ ಜೃಂಭಿಣೀ ಮೊದಲಾದ ಚಕ್ರದೇವತೆಯರ, ಹೇತುಕನೇ ಮೊದಲಾದ ಭೈರವರ, ಮತ್ತೇರಿ ಕುಣಿದಾಡುತ್ತಿರುವ ಏಳುಮಂದಿ ನಿಗ್ರಹದೇವತೆಯರ, ದೇವಿಯ ಪೂರ್ವದಿಕ್ಕಿನಲ್ಲಿರುವ ಉನ್ಮತ್ತಭೈರವಿಯ ಮತ್ತು ಎಲ್ಲೆಡೆಯೂ ತೋರಿಕೊಳ್ಳುವ ಸ್ವಪ್ನೇಶಿಯ ಉಲ್ಲೇಖಗಳನ್ನು ಮಾಡಲಾಗಿದೆ.

ಲಲಿತಾದೇವಿಯು ಭಂಡಾಸುರನ ವಿರುದ್ಧ ಸೈನ್ಯಸಮೇತ ಹೊರಟಾಗ, ಆ ಸೇನೆಯ ನಾಯಕಿಯಾದವಳು ವಾರಾಹೀ- ದಂಡನಾಥಾ. ಇವಳ ನಿವಾಸವು ಈ ಕಕ್ಷ್ಯೆಯಲ್ಲಿ ಔಪಚಾರಿಕವಾಗಿ ಮಾತ್ರ ಇದೆ; ಅವಳ ನಿತ್ಯಸನ್ನಿಧಿಯಿರುವುದು ಕಡೆಯ ಕಕ್ಷ್ಯೆಯಾದ ಪದ್ಮಾಟವಿಯಲ್ಲೇ –

'ನಿವಾಸೋ ದಂಡನಾಥಾಯಾಃ ಕೇವಲಂ ತ್ವಾಭಿಮಾನಿಕಃ।
ತಸ್ಯಾಸ್ತು ಸೇವಾವಾಸೋಽನ್ಯೋ ಮಹಾಪದ್ಮಾಟವೀಸ್ಥಲೇ॥
(ಅಲ್ಲಿಯೇ, ೬೫).

ಈ ದಂಡಿನೀದೇವಿಯ ವರ್ಣನೆ ಶ್ರೀತತ್ತ್ವನಿಧಿಯಲ್ಲಿರುವುದು —

'ಶಂಖಚಕ್ರಾಭಯವರಾನ್ ಹಲಂ ಚ ಮುಸಲಂ ತಥಾ।
ಪಾಶಾಂಕುಶೌ ಚ ದಧತೀ। ಚಂದ್ರರೇಖಾವತಂಸೀ।
ವಾರಾಹ್ಯವಕ್ತ್ರಸಂಯುಕ್ತಾ।
ದಂಡಿನೀ ತತ್ರ ವರ್ತತೇ॥

ಇದರ ಕೊನೆಯಲ್ಲಿ "ಇತಿ ಲಲಿತೋಪಾಖ್ಯಾನೇ" ಎಂಬ ಪುಷ್ಪಿಕಾವಚನವೂ ಇದೆಯೆನ್ನಿ. ಆದರೆ ಆ ಗ್ರಂಥದಲ್ಲಿ ಈ



ವಾರಾಹೀ

ಕಕ್ಷ್ಯವರ್ಣನೆಯ ಸಂದರ್ಭದಲ್ಲೇನು ಈ ಮಾತುಗಳ ಬಳಕೆ ಕಾಣಿಸುವುದಿಲ್ಲ.

ಶ್ರೀತತ್ತ್ವನಿಧಿಯಲ್ಲಿ ಬಿಡಿಸಿರುವ ದಂಡಿನಿ - ವಾರಾಹಿಯ ಚಿತ್ರ ಸೂಗಸಾಗಿದೆ.

ದೇವಿಯ ಹಿಂಬದಿಯಲ್ಲಿ ಬಂಗಾರದ ತಾಳೆಮರಗಳ ತೋಪು ಕಂಗೊಳಿಸುತ್ತದೆ. ವನರಾಜಿಯ ನಡುವೆ ಪದ್ಮಾಸನಾಸೀನೆಯಾದ ವಾರಾಹಿಯು ಬಲಭಾಗಕ್ಕೆ ಮುಖವನ್ನು ತಿರುಗಿಸಿ ಕುಳಿತಿದ್ದಾಳೆ. ಉತ್ತುಂಗವಾದ ಕಿರೀಟ ತಲೆಯ ಮೇಲೆ ಎಂಟು ಕೈಗಳು, ಶಂಖ, ಚಕ್ರ, ಹಲ(ನೇಗಿಲು), ಮುಸಲ (ಒನಕೆ), ಪಾಶ, ಅಂಕುಶ, ದಂಡಗಳನ್ನು ಹಿಡಿದಿದ್ದಾಳೆ.

ಭಂಡಾಸುರನ ನಿಗ್ರಹಕ್ಕಾಗಿ ಲಲಿತಾದೇವಿಯು ಚಿದಗ್ನಿಕುಂಡಸಂಭೂತೆಯಾಗಿ ತೋರಿಕೊಂಡಾಗ, ಅವಳ ನೆರವಿಗೆಂದು ಕೋಟಿಯೋಗಿನಿಯರ ಪರಿವಾರ ಸಿದ್ಧವಾದಾಗ ಆ ಸೇನೆಯ ಮುಂಚೂಣಿಯಲ್ಲಿ ಕಾಣಿಸಿಕೊಂಡ ಈ ದೇವತೆಯಲ್ಲಿ ವಿಷ್ಣುವಿನ ವರಾಹಾವತಾರದ ಧ್ವನಿಯಿದೆ. ಇಲ್ಲಿನ ವಾರಾಹಿಯು ತನ್ನದೇ ಆದ ಕಿರಿಚಕ್ರವನ್ನೇರಿ ತನ್ನ ಪರಿವಾರದಿಂದಲೇ ಪರಿವೃತಳಾಗಿ ಹೊರಡುತ್ತಾಳೆ.

೧೬.

ಹದಿನಾರನೆಯದು ಮರಕತಮಯ ಪ್ರಾಕಾರ (ಪಚ್ಚೆಯ ಕೋಟೆ). ಮರಕತವನ್ನು 'ಹರಿದ್ವರ್ಣ-ಮಣಿವಿಶೇಷ'ವೆಂದೂ 'ರಾಜನೀಲ'ವೆಂದೂ 'ಗರಳಾರಿ'ಯೆಂದೂ ಬಣ್ಣಿಸಿದ್ದಾರೆ. ಹಾವಿನ ವಿಷವನ್ನು ಕಳೆಯುವ ಗುಣ ಇದಕ್ಕುಂಟೆಂದು ಇದನ್ನು 'ಗಾರುಡಮಣಿ'ಯೆಂದೂ ಕರೆಯುತ್ತಾರೆ.

'ಸ್ವಚ್ಛಂ ಚ ಗುರು ಸಚ್ಛಾಯಂ
ಸ್ನಿಗ್ಧಂ ಗಾತ್ರಂಚ ಮಾರ್ದವ ಸಮೇತಂ।
ಅವ್ಯಂಗಂ ಬಹುರಂಗಂ ಶೃಂಗಾರೀ
ಮರಕತಂ ಶುಭಂ ಬಿಭೃಯಾತ್॥'

ಈ ಪಚ್ಚೆಯ ಕೋಟೆಯಲ್ಲಿ ಬ್ರಹ್ಮಲೋಕವಿದೆಯೆಂದು ಇಲ್ಲಿನ ಕಲ್ಪನೆ. **'ಅಥ ಮರಕತಮಯ ಷೋಡಶಃ ಪ್ರಾಕಾರ ಸ್ತ್ರೀಪರಿವಾರ ಸಹಿತ ಬ್ರಹ್ಮಣಃ ಧ್ಯಾನಂ'** ಎಂಬ ಒಕ್ಕಣೆ ಮೊದಲಲ್ಲೇ ಕಾಣುತ್ತದೆ.

'ಯೀ ಮರಕತದ ಕೋಟೆಗೂ ಮುಂದಣ ಪವಳದ ಕೋಟೆಗೂ ಅಂತರಾಳವಾದ ಪದಿನಾರನೆಯ ಕಕ್ಷ್ಯದಲ್ಲಿ ಕಮಲಾಸನದೊಳ್‌ಕುಳಿತು ಚತುರ್ಮುಖ ಬ್ರಹನು ಮರೀಚ್ಯಾದಿ ನವಪ್ರಜೇಶ್ವರರಿಂ ಮತ್ತು ಚತುರ್ದಶ-

ವಿದ್ಯಾದೇವತೆಗಳಿಂದುಪವಿದ್ಯಾದೇವತೆಗಳಿಂ
ಚತುಃಷಷ್ಟಿಕಲಾದೇವತೆಗಳಿಂದೊಡಗೂಡಿ ರಕ್ಷಕನಾಗಿ ಯಿರುವನೂ'

ಲಲಿತೋಪಾಖ್ಯಾನದಲ್ಲಿ ಲಲಿತಾದೇವಿಯ ಸೇವೆಗಾಗಿ ಬ್ರಹ್ಮಲೋಕದಿಂದ ಬ್ರಹ್ಮನು ಇಲ್ಲಿಗೆ ಬಂದು ನಿಂತಿದ್ದಾನೆಂಬ ವರ್ಣನೆಯಿದೆ -

'ಬ್ರಹ್ಮಲೋಕಾತ್ ಸಮಾಗತ್ಯ ಸಾರ್ಧಂ ಸರ್ವೈರ್ಮುನೀಶ್ವರೈಃ
ಸದಾ ಶ್ರೀ ಲಲಿತಾದೇವ್ಯಾಃ ಸೇವನಾರ್ಥಮತಂದ್ರಿತಃ॥'

ಆದರೆ ಅಲ್ಲಿ ಬ್ರಹ್ಮಲೋಕವಿರುವುದು ವಿದ್ರುಮಾಕಾರ ಪ್ರಾಕಾರದಲ್ಲಿ. ಬ್ರಹ್ಮನೂ 'ವಿದ್ರುಮ ಸಂಕಾಶ'ನೇ (ಹವಳದಂತೆ ಹೊಳೆಯುವವನು).

ಚಿತ್ರದಲ್ಲಿ ನಾಲ್ಕುಮೊಗದ ನಾಲ್ಕುಕೈಗಳ (ಜಪಸರ, ಕಲಶ, ಅಭಯ, ವರದ ಹಸ್ತಗಳು) ಬ್ರಹ್ಮನು ಹತ್ತುದಳಗಳ ಕಮಲದ ಮೇಲೆ ಕುಳಿತಿರಲು ಸನಕಾದಿ ಮುನಿಗಳು, ಮರೀಚಿಯೇ ಮೊದಲಾದ ಪ್ರಜೇಶ್ವರರು, ವಿದ್ಯಾದೇವತೆಯರು, ಕಲಾದೇವತೆಯರು ಎಲ್ಲರೂ ಕೈಜೋಡಿಸಿ ನೆರೆದಿದ್ದಾರೆ.

ಮೇಲೆ ಕಾಣಿಸಿರುವ ಪ್ರಜೇಶ್ವರರು(ಎಂದರೆ ಪ್ರಜಾಪತಿಗಳು) ಮರೀಚಿ, ಮಿತ್ರ, ಅಂಗಿರಸ, ಪುಲಸ್ತ್ಯ, ಪುಲಹ, ಕ್ರತು, ಪ್ರಚೇತಸ, ವಶಿಷ್ಠ, ಮತ್ತು ಭೃಗು ಹೀಗೆ ಒಂಬತ್ತು ಮಂದಿ.

ಚತುರ್ದಶವಿದ್ಯೆಗಳು (೧೪) ಪುರಾಣ, ನ್ಯಾಯ, ಮೀಮಾಂಸಾ, ಧರ್ಮಶಾಸ್ತ್ರ, ಚತುರ್ವೇದ, ಮತ್ತು ವೇದಷಡಂಗ (ವೇದಕ್ಕೆ ಅಂಗವಾದ ಜ್ಯೋತಿಷ, ನಿರುಕ್ತ, ಕಲ್ಪ, ಛಂದಸ್ಸು, ಶೀಕ್ಷಾ, ವ್ಯಾಕರಣ).

ಚತುಃ ಷಷ್ಟಿ ಕಲೆಗಳು (೬೪) ಇವು– ಗೀತ, ವಾದ್ಯ, ನೃತ್ಯ, ಆಲೇಖ್ಯ, ವಿಶೇಷಕಚ್ಛೇದ್ಯ, ತಂಡುಲಕುಸುಮಬಲಿವಿಕಾರ, ಪುಷ್ಪಾಸ್ತರಣ, ದಶನವಸನಾಂಗರಾಗ, ಮಣಿಭೂಮಿಕಾಕರ್ಮ, ಶಯನರಚನ, ಉದಕವಾದ್ಯ, ಉದಕಾಘಾತ, ಚಿತ್ರಯೋಗ, ಮಾಲ್ಯಗ್ರಥನವಿಕಲ್ಪ, ಶೇಖರಕಾಪೀಡಯೋಜನ, ನೇಪಥ್ಯಪ್ರಯೋಗ, ಕರ್ಣಪತ್ರಭಂಗ, ಗಂಧಯುಕ್ತಿ, ಭೂಷಣಯೋಜನ, ಐಂದ್ರಜಾಲ, ಕೌಚುಮಾರಯೋಗ, ಹಸ್ತಲಾಘವ, ವಿಚಿತ್ರಶಾಕಯೂಷಭಕ್ಷ್ಯ, ವಿಕಾರಕ್ರಿಯ, ಪಾನಕರಸರಾಗಾಸವಯೋಜನ, ಸೂಚೀವಾನಕರ್ಮ, ಸೂತ್ರಕ್ರೀಡಾ, ವೀಣಾಡಮರುಕವಾದ್ಯ, ಪ್ರಹೇಳಿಕಾ, ಪ್ರತಿಮಾಲಾ, ದುರ್ವಾಚಕಯೋಗ, ಪುಸ್ತಕವಾಚನ, ನಾಟಕಾಖ್ಯಾಯಿಕಾದರ್ಶನ, ಕಾವ್ಯಸಮಸ್ಯಾಪೂರಣ, ಪಟ್ಟಿಕಾವೇತ್ರವಾನವಿಕಲ್ಪ, ತಕ್ಷಕರ್ಮ, ತಕ್ಷಣ, ವಾಸ್ತುವಿದ್ಯಾ, ರೂಪ್ಯರತ್ನಪರೀಕ್ಷಾ, ಧಾತುವಾದ, ಮಣಿರಾಗಾಕರಜ್ಞಾನ, ವೃಕ್ಷಾಯುರ್ವೇದಯೋಗ, ಮೇಷಕಕುಕ್ಕುಟಲಾವಕಯುದ್ಧವಿಧಿ, ಶುಕಶಾರಿಕಾಪ್ರಲಾಪನ, ಉತ್ಸಾದನೇ ಸಂವಾಹನೇ ಕೇಶಮರ್ದನೇ ಚ ಕೌಶಲಂ, ಅಕ್ಷರ ಮುಷ್ಟಿಕಾ ಕಥನ, ಮ್ಲೇಚ್ಛಿತವಿಕಲ್ಪ, ದೇಶಭಾಷಾವಿಜ್ಞಾನ, ಪುಷ್ಪಶಕಟಿಕಾ ನಿಮಿತ್ತಜ್ಞಾನ, ಯಂತ್ರಮಾತೃಕಾ, ಧಾರಣಮಾತೃಕಾ, ಸಂಪಾಠ್ಯ, ಮಾನಸೀ, ಕಾವ್ಯಕ್ರಿಯಾ, ಅಭಿಧಾನಕೋಶ, ಛಂದೋಜ್ಞಾನ, ಕ್ರಿಯಾಕಲ್ಪ, ಛಲಿತಕಯೋಗ, ವಸ್ತ್ರಗೋಪನ, ದ್ಯೂತವಿಶೇಷ, ಆಕರ್ಷಕ್ರೀಡೆ, ಬಾಲಕ್ರೀಡನಕ, ವೈನಯಿಕೀ ವಿದ್ಯಾಜ್ಞಾನ, ವೈಜಯಿಕೀ ವಿದ್ಯಾಜ್ಞಾನ, ವ್ಯಾಯಾಮಿಕೀ ವಿದ್ಯಾಜ್ಞಾನ.

೧೭.

ಹದಿನೇಳನೆಯದು ವಿದ್ರುಮಮಯ ಪ್ರಾಕಾರ (ಹವಳದ ಕೋಟೆ). ಇಲ್ಲಿರುವ ವಿಷ್ಣುಲೋಕದಲ್ಲಿ **'ಮಾಣಿಕ್ಯಮಂಟಪಗತೋ। ವಿಷ್ಣುಸ್ತತ್ರ ವಿರಾಜತೇ।'** (ಲಲಿತೋಪಾಖ್ಯಾನದಲ್ಲಿ 'ಮಾಣಿಕ್ಯಮಂಟಪಗತೋವಿಷ್ಣುಃ।, ವಿಷ್ಣುಲೋಕೇ ವಿರಾಜತೇ॥'ಎಂದಿದೆ).

'ಯೀ ಪವಳದ ಕೋಟೆಗೂ ಮುಂದಣ ಮಾಣಿಕ್ಯದ ಕೋಟೆಗೂ ಅಂತರಾಳವಾದ ಪದಿನೇಳನೆಯ ಕಕ್ಷ್ಯದಲ್ಲಿ ಮಾಣಿಕ್ಯಮಂಟಪದೊಳ್ ಮಹಾವಿಷ್ಣುವು ವಾಸುದೇವಾದಿ ವ್ಯೂಹಮೂರ್ತಿಗಳಿಂ ಮತ್ತು ಕೇಶವಾದಿ ದ್ವಾದಶಮೂರ್ತಿಗಳಿಂ ಮತ್ಸ್ಯಾದಿದಶಾವತಾರಮೂರ್ತಿಗಳಿಂದೊಡಗೂಡಿ ರಕ್ಷಕನಾಗಿರುವನೂ'

ಇದಕ್ಕೆ ಲಲಿತೋಪಾಖ್ಯಾನದ

'ತತ್ರ ವೈಷ್ಣವೇ ಲೋಕೇ ವಿಷ್ಣುಃ ಸಾಕ್ಷಾತ್ ಸನಾತನಃ।
ಚತುರ್ಧಾ ದಶಧಾ ಚೈವ ದ್ವಾದಶಧಾ ಪುನಃ।
ಭಿನ್ನಮೂರ್ತಿಃ ಸತತಂ ವರ್ತತೇ ಮಾಧವಃ ಸದಾ॥'

ಎಂಬ ಶ್ಲೋಕ (೩, ೪, ೫೪, ೭೨) ಆಧಾರ. ವಿಷ್ಣುವಿನ ನಾಲ್ಕುರೂಪಗಳು ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ವ್ಯೂಹಮೂರ್ತಿಗಳು. ಹತ್ತುರೂಪಗಳು ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಪರಶುರಾಮ, ಶ್ರೀರಾಮ, ಕೃಷ್ಣ, ಬುದ್ಧ, ಕಲ್ಕಿ ಎಂಬ ದಶಾವತಾರಗಳು. ಹನ್ನೆರಡು ರೂಪಗಳು: (ವಾಸುದೇವನಿಂದ) ಕೇಶವ, ನಾರಾಯಣ, ಮಾಧವ; (ಸಂಕರ್ಷಣನಿಂದ); ಗೋವಿಂದ, ವಿಷ್ಣು, ಮಧುಸೂದನ; (ಪ್ರದ್ಯುಮ್ನನಿಂದ) ತ್ರಿವಿಕ್ರಮ, ವಾಮನ, ಶ್ರೀಧರ; (ಅನಿರುದ್ಧನಿಂದ) ಹೃಷಿಕೇಶ, ಪದ್ಮನಾಭ, ದಾಮೋದರ ಈ ದ್ವಾದಶಮೂರ್ತಿಗಳು.

ಚಿತ್ರವು ಶಂಖ, ಚಕ್ರ, ಗದಾಪದ್ಮಗಳನ್ನು ಹಿಡಿದು ಸುಖಾಸೀನನಾದ ವಿಷ್ಣುವಿನದು. ಲಲಿತೋಪಾಖ್ಯಾನದ ಪ್ರಕಾರ (ಅಲ್ಲಿಯೇ, ೭೧) ಬ್ರಹ್ಮನಂತೆ ವಿಷ್ಣುವೂ ಲಲಿತಾದೇವಿಯ ಭಕ್ತನೇ

'ಮಾಣಿಕ್ಯ ಮಂಡಪಸ್ಥಾನೇ ಪರೀತಃ ಸರ್ವತೋ ದಿಶಃ।
ವರ್ತತೇ ವಿಷ್ಣುಲೋಕಸ್ತು ಲಲಿತಾಸೇವನೋತ್ಸುಕಃ॥'

೧೮.

ಹದಿನೆಂಟನೆಯದು ಮಾಣಿಕ್ಯಮಯ ಪ್ರಾಕಾರ. ಇದರೊಳಗೆ ಶಿವಲೋಕ –

'ಯೀ ಮಾಣಿಕ್ಯದ ಕೋಟೆಗೂ ಮುಂದಣ ನಾನಾರತ್ನಗಳಿಂ ನಿರ್ಮಿತವಾದ ಕೋಟೆಗೂ ಅಂತರಾಳವಾದ ಪದಿನೆಂಟನೆಯ ಕಕ್ಷ್ಯದಲ್ಲಿ ನವರತ್ನಗಳಿಂ ಮಾಡಿದ ಸಹಸ್ರಸ್ತಂಭಮಂಟಪದೊಳ್ ಮಹೇಶ್ವರನು ಸದ್ಯೋಜಾತಾದಿ ಪಂಚಮೂರ್ತಿಗಳಿಂ ವಿವಿಧ ವಿನಾಯಕರಿಂ ಸಾವಿರಗುಹಂ।

ನಂದಿಭೃಂಗಿ ಮೊದಲಾದಾ ಪ್ರಮಥರಿಂ ಕೂಡಿದ ವೀರಭದ್ರನಿಂ, ಮತ್ತೂ ಮುವ್ವತ್ತಾರು ತತ್ತ್ವದೇವತೆಗಳಿಂದೊಡಗೂಡಿಯುಂ ಶಕ್ತಿಯ ರಕ್ಷಕನಾಗಿ ಯಿರುವನೂ॥''

ಇಲ್ಲಿರುವ ಈ ಶಿವನ ವರ್ಣನೆಯೂ ಇದೆ-

'ಜಟಾಮಕುಟಮಂಡಿತಃ ಗಂಗಾಧರಸ್ತ್ರಿನೇತ್ರಶ್ಚ।
ನೀಲಗ್ರೀವೋ ವೃಷಧ್ವಜಃ । ನಾನಾರತ್ನವಿಭೂಷಾಢ್ಯಾ
ಪಾರ್ವತೀ ಪ್ರಾಣವಲ್ಲಭಃ॥
ಸರ್ವಜ್ಞಃ ಸರ್ವಕರ್ತಾ ಚ । ಸಹಸ್ರಸ್ತಂಭಮಂಟಪೇ ।
ವರ್ತಮಾನೋ ಮಹಾದೇವಃ॥'

ಲಲಿತೋಪಾಖ್ಯಾನದಲ್ಲಿರುವ ಆಧಾರಶ್ಲೋಕಗಳು (ಅಲ್ಲಿಯೇ, ೮೫ ಮುಂದೆ)

'ಸಹಸ್ರಸ್ತಂಭಕಂ ನಾಮ ಮಂಡಪಂ ಸುಮನೋಹರಂ।
ಶಿವಲೋಕಸ್ತತ್ರ ಮಹಾನ್ ಜಾಗರ್ತಿ ಸ್ಫುರಿತದ್ಯುತಿಃ॥
ಶೈವಾಗಮಾ ಮೂರ್ತಿಮಂತಃ ತತ್ಪಾಷ್ಯಾವಿಂಶತಿ ಸ್ಮೃತಾಃ।
ಈಶಾನಃ ಸರ್ವವಿದ್ಯಾನಾಂ ಅಧಿಪಶ್ಚಂದ್ರಶೇಖರಃ।
ಲಲಿತಾಜ್ಞಾಪಾಲಕಶ್ಚ ಲಲಿತಾಜ್ಞಾಪ್ರವರ್ತಕಃ॥'

ಮೇಲೆ ಹೇಳಿರುವ ವರ್ಣನೆಯಲ್ಲಿ, ಶಿವನ ಸದ್ಯೋಜಾತ, ಅಘೋರ, ತತ್ಪುರುಷ, ವಾಮದೇವ, ಈಶಾನ ಎಂಬ ಐದು ರೂಪಗಳ ಉಲ್ಲೇಖವಿದೆ ('ಸದ್ಯೋಜಾತಾದಿ ಪಂಚಮೂರ್ತಿಗಳಿಂ'). ಮೂವತ್ತಾರು ತತ್ತ್ವದೇವತೆಗಳು (ಶೈವಾಗಮದ ಪ್ರಕಾರ) : ಐದು ಶುದ್ಧತತ್ತ್ವಗಳು (ಶಿವ, ಶಕ್ತಿ, ಸದಾಶಿವ, ಈಶ್ವರ, ಶುದ್ಧವಿದ್ಯಾ), ಏಳು ಶುದ್ಧಾಶುದ್ಧತತ್ತ್ವಗಳು (ಮಾಯಾ, ಕಾಲ, ಕಲಾ, ವಿದ್ಯಾ, ನಿಯತಿ, ರಾಗ, ಪುರುಷ), ಇಪ್ಪತ್ತನಾಲ್ಕು ಅಶುದ್ಧತತ್ತ್ವಗಳು (ಪ್ರಕೃತಿ, ಬುದ್ಧಿ, ಅಹಂಕಾರ, ಮನಸ್, ಶ್ರೋತ್ರ, ತ್ವಕ್, ಚಕ್ಷುಸ್, ಜಿಹ್ವಾ, ನಾಸಿಕಾ, ವಾಕ್, ಪಾಣಿ, ಪಾದ, ಪಾಯು, ಉಪಸ್ಥಾ, ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಆಕಾಶ, ವಾಯು, ತೇಜ, ಜಲ, ಪೃಥಿವೀ).

ಶಿವಲೋಕದ ಚಿತ್ರಣದಲ್ಲಿ (ಉತ್ತರಭಾಗ, ಚತುಸ್ತ್ರಿಂಶೋಧ್ಯಾಯ) ಶಿವಲೋಕದವರಿಗೆ ಒಂದು ವರ್ಗವಾಗಿ ಮಾಡಿದೆ (ದಿಕ್ಪಾಲಾದಿ ಶಿವಲೋಕಾಂತರಕಥನಂ ನಾಮ'). ಶಿವಲೋಕದ ಸಹಸ್ರ ಸ್ತಂಭಮಂಡಪವಿರುವುದು 'ನಾನಾರತ್ನ ಶಾಲೆ'ಯಲ್ಲಿ; ಶ್ರೀತತ್ತ್ವನಿಧಿಯ ಪ್ರಕಾರ 'ಮಾಣಿಕ್ಯಮಯಮಂಡಪ'ದಲ್ಲಿ. ಲಲಿತೋಪಾಖ್ಯಾನದಂತೆ ಮುಂದಿನ ಕಕ್ಷ್ಯೆಗಳು 'ವಾಪೀತ್ರಯ', ಎಂದರೆ ಮೂರು ಕೊಳಗಳಲ್ಲಿ ಮೊದಲನೆಯದಾದ ಅಮೃತವಾಪಿಯು ಹತ್ತೊಂಬತ್ತನೆಯ (ನಾನಾರತ್ನಮಯ) ಪ್ರಾಕಾರಕ್ಕೂ ಇಪ್ಪತ್ತೊಂದನೆಯ (ಮನೋಮಯ) ಪ್ರಾಕಾರಕ್ಕೂ ನಡುವೆ ಇದೆ.

೧೯.

ಹತ್ತೊಂಬತ್ತನೆಯದು ನಾನಾರತ್ನಮಯಪ್ರಾಕಾರ.

'ಯೀ ನಾನಾರತ್ನದ ಕೋಟೆಗೂ ಮುಂದಣ ಮನೋಮಯದ ಕೋಟೆಗೂ ಅಂತರಾಳವಾದ ಪತ್ತೊಂಬತ್ತನೆಯ ಕಕ್ಷ್ಯದಲ್ಲಿಯಿರುವ ಅಮೃತವಾಪಿಯಲ್ಲಿ ನೌಕಾಧೀಶ್ವರಿಯಾದ ತಾರಾದೇವಿಯು ತನ್ನ ಪರಿವಾರದಿಂದೊಡಗೂಡಿ ರಕ್ಷಕಳಾಗಿ ಯಿರುವಳೂ'

ತಾರಾದೇವಿ (ತಾರಿಣಿ) ತಾಂತ್ರಿಕಪಂಥಗಳಲ್ಲಿ ಪ್ರಭಾವಶಾಲಿನಿ ಯಾದವಳು, ಬೌದ್ಧಮಹಾಯಾನ ಧರ್ಮದಲ್ಲಿ ಈಕೆ ಮೊದಲು ಕಾಣಿಸಿಕೊಂಡಂತೆ ತೋರುತ್ತದೆ. ನಮ್ಮ ದೇಶದಲ್ಲಿ ಮಾತ್ರವಲ್ಲದೆ ಟಿಬೆಟ್, ಮಂಗೋಲಿಯ, ಚೀಣದೇಶಗಳಲ್ಲೂ ತಾರೆಯ ಪೂಜೆಯಿದೆ. ನಾಗಾರ್ಜುನನು ಭೋಟದೇಶದಿಂದ (ಎಂದರೆ ಟಿಬೆಟ್ಟಿನಿಂದ) ತಾರಾಪದ್ಧತಿಯನ್ನು ಪಡೆದುಕೊಂಡನೆಂಬ ಉಲ್ಲೇಖವಿದೆ. ಅವಲೋಕಿತೇಶ್ವರನೆಂಬ ಬೋಧಿಸತ್ತ್ವನ ಶಕ್ತಿಯೇ ತಾರೆಯೆಂಬುದು ಕಲ್ಪನೆ. ಶ್ರೀವಿದ್ಯಾರ್ಣವತಂತ್ರದಲ್ಲಿ ತಾರಾದೇವಿಯ ಎಂಟು ರೂಪಗಳನ್ನು ಹೇಳಿದೆ - ತಾರಾ, ಉಗ್ರತಾರಾ, ಮಹೋಗ್ರತಾರಾ, ನೀಲಾಸರಸ್ವತೀ, ವಜ್ರಾ, ಕಾಮೇಶ್ವರಿ ಮತ್ತು ಭದ್ರಕಾಳಿ. ಮತ್ತು ಬೌದ್ಧಗ್ರಂಥಗಳಲ್ಲಿ ಶ್ವೇತತಾರಾ, ಪೀತತಾರಾ, ಹರಿತವರ್ಣತಾರಾ, ರಕ್ತತಾರಾ, ನೀಲತಾರಾ ಎಂಬ ತಾರಾಭೇದಗಳನ್ನು ಕಾಣುತ್ತೇವೆ. ರಕ್ತತಾರಾ ಎಂಬುವಳನ್ನು ಕುರುಕುಲ್ಲಾ ಎಂದೂ, ನೀಲತಾರೆಯನ್ನು ಏಕಜಟೆಯೆಂದೂ, ಶ್ವೇತತಾರೆಯನ್ನು ಮಹಾಮಾಯೆಯೆಂದೂ, ಹರಿತವರ್ಣತಾರೆಯನ್ನು ಜಾಂಗುಲಿಯೆಂದೂ, ಪೀತತಾರೆಯನ್ನು ಪರ್ಣಶಬರಿಯೆಂದೂ ಕರೆಯುವುದಿದೆ. ನೀಲಾ ಮತ್ತು ಸರಸ್ವತಿಯೆಂಬೆರಡು ರೂಪಗಳನ್ನು ಸೇರಿಸಿ ನೀಲಸರಸ್ವತಿಯೆಂಬ ತಾರಾರೂಪವೂ ಉಂಟು. 'ತಂತ್ರಸಾರ'ದಲ್ಲಿ

'ಲೀಲಯಾ ವಾಕ್‌ಪ್ರದಾ ಚೇತಿ ತೇನ ನೀಲಸರಸ್ವತೀ।
ತಾರಕತ್ವಾತ್ಸದಾ ತಾರಾ ಸುಖಮೋಕ್ಷಪ್ರದಾಯಿನೀ।
ಉಗ್ರಾಪತ್ತಾರಿಣೀ ಯಸ್ಮಾದುಗ್ರತಾರಾ ಪ್ರಕೀರ್ತಿತಾ॥'

ಎಂಬ ವಿವರಣೆಯೂ ಇದೆ.

ಶ್ರೀತತ್ತ್ವನಿಧಿಯು ತಾರಾದೇವಿಯನ್ನು ನೌಕಾಧೀಶ್ವರಿಯೆಂದು ಗುರುತಿಸಿದೆ. ನೀರನ್ನು ದಾಟಲು ಬಳಸುವ ತೆಪ್ಪ, ದೋಣಿ, ಹಡಗು ಎಲ್ಲವೂ ನೌಕೆಯೇ. ಇಂಥ ನೌಕೆಗಳಿಗೆ ಒಡೆಯಳು ಈ ದೇವತೆ. ಲಲಿತೋಪಾಖ್ಯಾನದಲ್ಲಿ ಇದರ ವಿವರಣೆಯಿದೆ. ಹತ್ತೊಂಬತ್ತನೆಯ ಕಕ್ಷ್ಯೆಯನ್ನು ದಾಟಿ ಇಪ್ಪತ್ತನೆಯ (ವಾಪೀತ್ರಯ)ಕಕ್ಷ್ಯೆಗೆ ಹೋಗುವುದಕ್ಕೆ ನೌಕೆಯನ್ನು ಬಿಟ್ಟು ಬೇರಾವ ಸಾಧನವೂ ಇರದು. ಇಲ್ಲಿ ಸಾವಿರಾರು ರತ್ನನೌಕೆಗಳಿವೆ; ಅವುಗಳನ್ನು ನಡೆಸುವ ದೇವತೆಗಳು ನವಯುವತಿಯರು; ಹಾಡುತ್ತ ಕುಣಿಯುತ್ತ ಈ ದಡದಿಂದ ಆಚೆಯ ದಡಕ್ಕೆ, ಆ ದಡದಿಂದ ಈಚೆಯ ದಡಕ್ಕೆ ನೌಕೆಯನ್ನು ನಡೆಸುತ್ತಿರುವರು. ಇವರೆಲ್ಲ ಕಪ್ಪುಬಣ್ಣದವರು. ಇವರ ನಾಯಕಿಯಾದವಳು ತಾರೆ. ಲಲಿತಾದೇವಿಯ ಸಾಕ್ಷಾತ್ಪರಿಚಾರಿಕೆಯರಾದ ಮಂತ್ರಿಣಿ ಮತ್ತು ದಂಡಿನಿ (ವಾರಾಹೀ) ಇವರ ಅಪ್ಪಣೆಯಂತೆ ತಾರಾದೇವಿ ತನ್ನ ಕರ್ತವ್ಯವನ್ನು ನಿರ್ವಹಿಸುವಳು. ಮಂತ್ರಿಣಿ ಮತ್ತು ದಂಡಿನಿಯರ ಅಪ್ಪಣೆಯಿಲ್ಲದೆ ಮುಕ್ಕಣ್ಣನಾಗಲಿ ಈ ನೀರನ್ನು ಸೋಕಿಸಲಾರ (೩, ೪, ೩೫, ೧೨-೧೮).

'ನ ತತ್ರ ಗಂತುಂ ಮಾರ್ಗೋಽಸ್ತಿ ನೌಕಾವಾಹನಮಂತರಾ।
ಆಜ್ಞಯಾ ಕೇವಲಂ ತತ್ರ ಮಂತ್ರಿಣೀ ದಂಡನಾಥಯೋಃ॥
ತಾರಾ ನಾಮ ಮಹಾಶಕ್ತಿಃ ವರ್ತತೇ ತಾರಣೇಶ್ವರೀ।
ಬಹ್ವ್ಯಸ್ತತ್ರೋತ್ಪಲಶ್ಯಾಮಾಸ್ತಾರಾಯಾಃ ಪರಿಚಾರಿಕಾಃ॥
ರತ್ನನೌಕಾಸಹಸ್ರೇಣ ಖೇಲಂತ್ಯೋ ಸರಸೀಜಲೇ।



ತಾರಾದೇವಿ

. . . . .

ತಾಸಾಂ ನೌಕಾವಾಹಿಕಾನಾಂ ಶಕ್ತೀನಾಂ ಶ್ಯಾಮಲತ್ವಿಷಾಂ।
ಪ್ರಧಾನಭೂತಾ ತಾರಾಂಬಾ ಜಲೌಘಶಮನಕ್ಷಮಾ॥
ಆಜ್ಞಾಂ ವಿನಾ ತಯೋಸ್ತಾರಾ ಮಂತ್ರಿಣೀ ದಂಡಧಾರಯೋಃ।
ತ್ರಿನೇತ್ರಸ್ಯಾಪಿ ನೋ ದತ್ತೇ ವಾಪಿಕಾಂಭಸಿ ಸಂತರಂ॥
(ಕಡೆಯ ಶ್ಲೋಕದ ಒಂದು ಪಾಠ ಶ್ರೀತತ್ತ್ವನಿಧಿಯಲ್ಲಿ
ಕಾಣಸಿಗುತ್ತದೆ)

ಅನೇಕ ಚಿತ್ರವಿಚಿತ್ರ ನೌಕೆಗಳ ನಡುವೆ ತಾರೆಯು ದೊಡ್ಡದೊಂದು ನೌಕೆಯನ್ನೇರಿ ಮೆರೆಯುತ್ತಾಳೆ. ('ಇತ್ಥಂ ವಿಚಿತ್ರರೂಪಾಭಿರ್ನೌಕಾಭಿಃ ಪರಿವೇಷ್ಟಿತಾ।ತಾರಾಂಬಾ ಮಹತೀಂ ನೌಕಾಮಧಿಗಮ್ಯ ವಿರಾಜತೇ॥'). ಈ ಕಕ್ಷ್ಯೆಯನ್ನು ರಕ್ಷಿಸುವವಳು ತಾರೆಯೇ. ಈ ದೇವತೆಯ ಸೊಗಸಾದ, ಸ್ವಾರಸ್ಯವಾದ ಚಿತ್ರ ಶ್ರೀತತ್ತ್ವನಿಧಿಯಲ್ಲಿದೆ. ಮೀನುಗಳಿಂದ ಗುರುತಿಸಬಹುದಾದ ನೀರಿನ ನಡುವೆ ವೃತ್ತಾಕಾರದ ನೌಕೆ; ಅದರಲ್ಲಿ ಎದ್ದು ನಿಂತ ತಾರಾದೇವಿ; ಮೊಣಕಾಲಿಂದ ಮೇಲ್ಭಾಗವನ್ನು ಕಾಣಬಹುದು. ನಾಲ್ಕು ಕೈಗಳು; ಕಮಲ, ಕಪಾಲ, ಖಡ್ಗ, ತ್ರಿಶೂಲಗಳು ಕೈಯಲ್ಲಿ. ಪರಿವಾರ ದೇವತೆಯರೂ ಇದ್ದಾರೆ.

೨೦.

ಇಪ್ಪತ್ತನೆಯದು ಮನೋಮಯಪ್ರಾಕಾರ. ಈ 'ವಿಂಶತಿಪ್ರಾಕಾರ'ದ ನಿರೂಪಣೆಯ ಮೊದಲಲ್ಲಿ ಬಂದಿರುವ ಸಂಸ್ಕೃತಭಾಗ ಇದನ್ನು ಬುದ್ಧಿಮಯ ಪ್ರಾಕಾರವೆಂದೇ ಗುರುತಿಸಿದೆ. ಹತ್ತೊಂಬತ್ತನೆಯದು 'ನಾನಾರತ್ನಮಯ ಪ್ರಾಕಾರ'ವೆಂದೇ ಶ್ರೀತತ್ತ್ವನಿಧಿ ಹೇಳಿದ್ದರೂ ಅದೇ 'ಮನಃಶಾಲ'(ಮನೋಮಯಪ್ರಾಕಾರ) ಎಂದು ಗ್ರಹಿಸಬೇಕೆಂಬ ಸೂಚನೆಯಿದೆ. ಶ್ರೀತತ್ತ್ವನಿಧಿಯ ಈ ವಿಭಾಗದ ಶೀರ್ಷಿಕೆಯಲ್ಲಿ ' ಅಥ ಮನೋಮಯ ವಿಂಶತಿ ಪ್ರಾಕಾರ ಸ್ತ್ರೀಸಪರಿವಾರ ವಾರುಣೀಧ್ಯಾನಂ' ಎಂದಿರುವುದೂ ವರ್ಣನಾಭಾಗದಲ್ಲಿ ಬುದ್ಧಿಮಯ ಕಕ್ಷ್ಯೆಯ ಮಾತುಗಳೇ ಬಂದಿರುವುದೂ ಸ್ವಲ್ಪ ಗೊಂದಲಕ್ಕೆ ಎಡೆಮಾಡಿಕೊಡುವುದು ಸಾಧ್ಯ -

''ಮನಸಾಲಸ್ಯಾಂತರಾಳೇ । ಸಪ್ತಯೋಜನದೂರತಃ । ಬುದ್ಧಿಸಾಲ ಇತಿ ಖ್ಯಾತ।. . . ಮಂತ್ರಿಣೀ ದಂಡನಾಥಯೋಃ । ದದಾತಿ ವಾಪೀತರಣಂ। ತ್ರಿನೇತ್ರಸ್ಯಾಪಿ ನಾನ್ಯಥಾ । ಇತಿ ವಿಂಶತಿ ಪ್ರಾಕಾರಃ।'

ಲಲಿತೋಪಾಖ್ಯಾನದಲ್ಲಿ 'ನಾನಾರತ್ನಮಯಪ್ರಾಕಾರ'ವೇ ಮನಃಶಾಲವೆಂಬ ಒಕ್ಕಣೆಯಿದೆ (೩, ೪, ೩೫, ೩ 'ಸಹಸ್ರಸ್ತಂಭಶಾಲಸ್ಯಾಂತರಮಾರುತ ಯೋಜನೇ । ಮನೋ ನಾಮ ಮಹಾಶಾಲಃ ಸರ್ವರತ್ನ ವಿಚಿತ್ರಿತಃ॥". ಈ ವಿಭಾಗದಲ್ಲಿ ಮೊದಲು ಎಣಿಕೆಗೆ ಬರುವುದು 'ವಾಪೀತ್ರಯ'ಗಳು. ಮೂರು ಕೊಳಗಳು ಯಾವುವೆಂದರೆ ಮನಸ್ಸು, ಬುದ್ಧಿ, ಅಹಂಕಾರ. ಇವನ್ನು ಮೂರು ಶಾಲಗಳೆಂದು (ಪ್ರಾಕಾರಗಳು, ಕೋಟೆಗಳು) ಬಣ್ಣಿಸಲಾಗಿದೆ. ಇವುಗಳನ್ನು ಕ್ರಮವಾಗಿ ಅಮೃತವಾಪಿ, ಆನಂದವಾಪಿ, ವಿಮರ್ಶಾವಾಪಿ ಎಂದು ಕರೆದಿದ್ದಾರೆ. ಈ ಕೊಳಗಳನ್ನು ದಾಟಲು ಕ್ರಮವಾಗಿ ತಾರಾ, ವಾರುಣಿ, ಕುರುಕುಲ್ಲಾ ಎಂಬ ದೇವಿಯರು ನೆರವಾಗುತ್ತಾರೆ.

ಇಪ್ಪತ್ತನೆಯ ಕೋಟೆಗೆ ಶ್ರೀತತ್ತ್ವನಿಧಿಯಲ್ಲಿ ಇರುವ ವಿವರಣೆ-

'ಯೀ ಮನೋಮಯವಾದ ಕೋಟೆಗೂ ಮುಂದಣ ಬುದ್ಧಿಮಯ ವೆಂಬ ಕೋಟೆಗೂ ಅಂತರಾಳವಾದ ಯಿಪ್ಪತ್ತನೆಯ ಕಕ್ಷ್ಯದಲ್ಲಿರುವ ಆನಂದ ವಾಪಿಯಲ್ಲಿ ನೌಕಾಧೀಶ್ವರಿಯಾದ ವಾರುಣೀದೇವಿಯು ವಿವಿಧ ನಾಮಗಳಿಂದೊಪ್ಪಿ ನಿಜಪರಿವಾರದಿಂ ಕೂಡಿ ರಕ್ಷಕರಾಗಿರುವಳೂ'

ವಾರುಣಿಯಿಂಬ ದೇವತೆ ಹೆಂಡಕ್ಕೆ ಅಭಿಮಾನಿನಿ (ಮದಿರಾಧಿಷ್ಠಾತ್ರೀ ದೇವತಾ) ಎಂದು ವಿಷ್ಣುಪುರಾಣದಲ್ಲಿ ಹೇಳಿದೆ (೧, ೯, ೯೩):

'ಕಿಮೇತದಿತಿ ಸಿದ್ಧಾನಾಂ ದಿವಿ ಚಿಂತಯತಾಂ ತತಃ।
ಬಭೂವ ವಾರುಣೀ ದೇವೀ ಮದಾಘೂರ್ಣಿತಲೋಚನಾ॥

ವಾರುಣಿಯೆಂಬ ಮದ್ಯದ ಪ್ರಸ್ತಾಪವೂ ಗ್ರಂಥಗಳಲ್ಲಿ ಬರುತ್ತದೆ; ನೊರೆನೊರೆಯಾಗಿ ಉಕ್ಕಿ ಹರಿಯುವ ಹೆಂಡ ವಾರುಣಿಯೆಂಬ ಮಾತೂ ಇದೆ. ವಾರುಣಿಯು ಭಾರ್ಗವಿಯಾಗಿ ಆನಂದದ ದರ್ಶನವನ್ನು ಮಾಡಿಕೊಡುವುದು ತೈತ್ತಿರೀಯೋಪನಿಷತ್ತಿನಲ್ಲಿ (೩, ೬) ಕಂಡುಬರುತ್ತದೆ. ಆನಂದದಲ್ಲಿಯೇ ಎಲ್ಲವೂ ಒದಗಿಬರುತ್ತವೆ, ಆನಂದದಿಂದಲೇ ಉಳಿದುಕೊಳ್ಳುತ್ತವೆ, ಆನಂದದಲ್ಲಿಯೇ ಮುಗಿಯುತ್ತವೆ ಎಂಬ ಸಿದ್ಧಾಂತವನ್ನು ಅಲ್ಲಿ ''ಸೈಷಾ ಭಾರ್ಗವೀ ವಾರುಣೀ ವಿದ್ಯಾ'' ಎಂದು ಕರೆಯಲಾಗಿದೆ. ಇಲ್ಲಿನ 'ಆನಂದವಾಪಿ'ಗೂ ಅದರ ರಕ್ಷಕಿಯಾದ ವಾರುಣಿಗೂ ಇರುವ ಸಂಬಂಧ ಯಾದೃಚ್ಛಿಕವಲ್ಲ.

ಈ ವಾಪಿಯ ನೀರೇ ಮದ್ಯವೆಂದೂ, ಈ ಕಕ್ಷ್ಯೆಯ ಶಕ್ತಿಯರು ಇದನ್ನು ಕುಡಿದುಕುಡಿದು ಮದೋನ್ಮತ್ತರಾಗಿ ವಿಹರಿಸುವರೆಂದೂ ಲಲಿತೋಪಾಖ್ಯಾನದ ಒಕ್ಕಣೆ -(೩, ೪, ೩೫, ೨೮)-

'ತತ್ರತ್ಯಂ ಸಲಿಲಂ ಮದ್ಯಂ ಪಾಯಂಪಾಯಂ ತಟಸ್ಥಿತಾಃ।
ವಿಹರಂತಿ ಮದೋನ್ಮತ್ತಾಃ ಶಕ್ತಯೋ ಮದಪಾಟಲಾಃ॥
ಸಾಕ್ಷಾಚ್ಚ ವಾರುಣೀ ದೇವೀ ತತ್ರ ನೌಕಾಧಿನಾಯಿಕಾ।
ಯಾಂ ಸುಧಾಮಾಲಿನೀಮಾಹುರ್ಯಾಮಾಹುರಮೃತೇಶ್ವರೀಂ॥'

ವಾರುಣೀದೇವಿಯನ್ನು ಸುಧಾಮಾಲಿನಿಯೆಂದೂ ಅಮೃತೇಶ್ವರಿಯೆಂದೂ ಕರೆಯುವರು. ಅವಳನ್ನು ಸುತ್ತರಿದು ಮಣಿನೌಕಸ್ಥಿತಶಕ್ತಿಯರು ನೆರೆದಿದ್ದಾರೆ. ಆಕೆಯ ಓರೆನೋಟದಿಂದಲೇ ಮೂರೂ ಲೋಕಗಳಿಗೆ ಮದವೇರುತ್ತದೆ ('ಈಷದಾಲೋಕಮಾತ್ರೇಣ ತ್ರೈಲೋಕ್ಯ ಮದದಾಯಿನೀ।'). ಆಕೆಯ ಒಂದು ಕೈಯಲ್ಲಿ ಮದ್ಯದ ಪಾತ್ರೆ, ಜೊತೆಗೆ ಲೀಲಾಕುಮುದ ; ಇನ್ನೊಂದರಲ್ಲಿ ಬೇಯಿಸಿದ ಮಾಂಸ ತುಂಬಿದ ಮಣಿ ಪಾತ್ರೆ ('ಪಕ್ವಂ ಪಿಶಿತ ಖಂಡಂ ಚ ಮಣಿಪಾತ್ರೇ ತಥಾನ್ಯಕೇ', ಅಲ್ಲಿಯೇ ೩೨). ಹಿಂದಿನಂತೆ, ವಾರುಣಿಯೂ ಕೂಡ ಮಂತ್ರಿಣಿ-ವಾರಾಹಿಯರ ಅಪ್ಪಣೆಯಿಲ್ಲದೆ ಯಾರನ್ನೂ ಈ ಕೊಳವನ್ನು ದಾಟಗೊಡುವುದಿಲ್ಲ(೩೩)-

'ವಾರುಣೀ ತರಣಿಶ್ರೇಣಿನಾಯಿಕಾ ತತ್ರ ರಾಜತೇ।
ಸಾಪ್ಯಾಜ್ಞಯೈವ ಸರ್ವೇಷಾಂ ಮಂತ್ರಿಣೀದಂಡನಾಥಯೋಃ।
ದದಾತಿ ವಾಪೀತರಣಂ ತ್ರಿನೇತ್ರಸ್ಯಾಪಿ ನಾನ್ಯಥಾ॥'

ಇಪ್ಪತ್ತೊಂದನೆಯ ಕಕ್ಷ್ಯೆಯನ್ನು ಶ್ರೀತತ್ತ್ವನಿಧಿಯ ಕನ್ನಡಭಾಗ ಬುದ್ಧಿಮಯ ಕೋಟೆಯೆಂದು ಕರೆದಿದೆ. ದಿಟವಾಗಿ ಇದು ಲಲಿತೋಪಾಖ್ಯಾನದಲ್ಲಿರುವಂತೆ ಅಹಂಕಾರಮಯ ಪ್ರಾಕಾರವನ್ನು ಪ್ರತಿನಿಧಿಸುತ್ತದೆ; ಶ್ರೀತತ್ತ್ವನಿಧಿಯ ಸಂಸ್ಕೃತಭಾಗವೂ **'ಅಥ ಬುದ್ಧಿಮಯಶಾಲಾಂತರೇ ಮಾರುತಯೋಜನೇ । ಅಹಂಕಾರ ಮಹಾಶಾಲಃ'** ಎಂದೇ ನಿರೂಪಿಸುತ್ತದೆ. ಶೀರ್ಷಿಕಾಭಾಗದಲ್ಲಿ ಮಾತ್ರ **'ಅಥ ಬುದ್ಧಿಮಯ ಏಕವಿಂಶತಿ ಪ್ರಾಕಾರಸ್ಥ ಪರಿವಾರಸಹಿತ ಕುರುಕುಳ್ಳಾಧ್ಯಾನಂ'** ಎಂಬ ಒಕ್ಕಣೆಯಿದೆ.

ಪ್ರಾಕಾರ, ಸಾಲ (ಅಥವಾ ಶಾಲ), ಕಕ್ಷ್ಯಾ ಎಂಬ ಮಾತುಗಳಿಗಿರುವ ಅಂತರವನ್ನು ಸರಿಯಾಗಿ ಗ್ರಹಿಸದಿರುವುದರಿಂದ ಈ ಬಗೆಯ ಗೊಂದಲವೇಳುತ್ತದೆ. ಪ್ರಾಕಾರವೆಂದರೆ ಸುತ್ತಿನ ಗೋಡೆ; ಇದನ್ನು ಶ್ರೀತತ್ತ್ವನಿಧಿಯು ಕೋಟೆಯೆಂದು ಕರೆದಿದೆ. ಅಮರಕೋಶದಲ್ಲಿ ಪ್ರಾಕಾರಕ್ಕೇ ಸಾಲ (ಅಥವಾ ಶಾಲ)ಎಂಬ ಮಾತು ಪರ್ಯಾಯಪದವೆಂದು ಹೇಳಿದೆ (೨, ೨, ೩). ಆದರೆ ಬೇರೆಡೆಗಳಲ್ಲಿ ಸಾಲ (ಶಾಲ)ಎಂದರೆ ಮನೆ ಎಂಬರ್ಥವಿದೆ. ಕೋಟೆಯ ಒಳಗಡೆ ಕಟ್ಟಿರುವ ಅಥವಾ ಏರ್ಪಟ್ಟಿರುವ ಕೋಣೆ; ಸುತ್ತಾಲಯ. ಒಂದು ಪ್ರಾಕಾರಕ್ಕೂ ಇನ್ನೊಂದು ಪ್ರಾಕಾರಕ್ಕೂ ನಡುವೆ ಇರುವುದು ಕಕ್ಷ ಅಥವಾ ಕಕ್ಷ್ಯೆ ('ವೇಷ್ಟನಾವಚ್ಛಿನ್ನೋ ದೇಶಃ); ಇದನ್ನು ಶ್ರೀತತ್ತ್ವನಿಧಿ ಅಂತರಾಳವೆಂದು ಕರೆದಿದೆ. ಲಲಿತೋಪಾಖ್ಯಾನದಲ್ಲಿ ಸಾಲ (ಶಾಲ) ಎಂಬ ಮಾತನ್ನು ಪ್ರಾಕಾರ ಎಂಬರ್ಥದಲ್ಲೇ ಬಳಸಿರುವುದುಂಟು. ನಿದರ್ಶನಕ್ಕೆ 'ಕಥಿತಾಃ ಸಪ್ತ ಕಕ್ಷಾಶ್ಚ ಶಾಲಾ ಲೋಹಾದಿನಿರ್ಮಿತೇ,' (೩, ೪, ೩೧, ೧) ಎಂಬ ನಿರೂಪಣೆಯಲ್ಲಿ ಕಕ್ಷಗಳನ್ನೂ ಶಾಲೆಗಳನ್ನೂ ಬೇರೆ ಬೇರೆಯಾಗಿ ಹೇಳಿದೆ. ಹಾಗೆಯೆ ಮುಂದೆ 'ತಯೋಸ್ತು ಶಾಲಯೋರ್ಮಧ್ಯೆ ಕಕ್ಷಾಭೂರಖಿಲಾ' (೩, ೪, ೩೫, ೩೫) ಎಂದಿದೆ. ಯಾವ ಶಾಲೆಯಿಂದ ಕಕ್ಷೆ ಮೊದಲಾಗುವುದೋ, ಕಕ್ಷೆಗೆ ಅದೇ ಸಂಖ್ಯೆ, ಅದೇ ಹೆಸರು ಕೊಡುವುದು ವಾಡಿಕೆ.

ಆದರೆ ವಾಪಿಗಳನ್ನು ಹೇಳುವಾಗ ಶಾಲ ಮತ್ತು ಕಕ್ಷ್ಯ ಎರಡೂ ಮಾತುಗಳನ್ನು ಸುಮಾರಾಗಿ ಸಮಾನಾರ್ಥದಲ್ಲಿಯೆ ಬಳಸಿದ್ದಾರೆಂದು ಬಗೆಯುವುದು ಸಾಧ್ಯ. ನಿದರ್ಶನಕ್ಕೆ (೩, ೪, ೩೫, ೨೫,-೨೬)

'ಮನಶಾಲಸ್ಯಾಂತರಾಲೇ ಸಪ್ತಯೋಜನದೂರತಃ।
ಬುದ್ಧಿಶಾಲ ಇತಿ ಖ್ಯಾತಶ್ಚತುರ್ಯೋಜನಮುಚ್ಛ್ರಿತಃ।
ತನ್ಮಧ್ಯಕಕ್ಷ್ಯಾ ಭಾಗೇಽಸ್ತಿ ಸರ್ವಾಪ್ಯಾನಂದವಾಪಿಕಾ॥


ಎನ್ನುವಾಗ, ಮನೋಮಯ ಕೋಟೆಗೂ ಅದರಿಂದ ಏಳಯೋಜನ ದೂರವಿರುವ ಬುದ್ಧಿಮಯ ಕೋಟೆಗೂ ನಡುವೆ ಇರುವ ಕಕ್ಷೆ (ಅಂತರಾಳ)ಯಲ್ಲಿ ಆನಂದವಾಪಿಯೆಂಬುದಿದೆ ಎಂಬರ್ಥ ಹೊರಡುತ್ತದೆ. ಹಾಗೆಯೇ ನಾನಾರತ್ನಮಯ ಶಾಲೆಗೂ ಮನೋಮಯ ಶಾಲೆಗೂ ನಡುವೆ ಇರುವ ಕಕ್ಷೆಯಲ್ಲಿ ಅಮೃತವಾಪಿ. ಆದರೆ ಲಲಿತೋಪಾಖ್ಯಾನವು 'ನಾನಾರತ್ನಶಾಲಾಂತರೇ . . . . ಸಹಸ್ರಸ್ತಂಭಕಂ ನಾಮ ಮಂಡಪಂ' (೩, ೪, ೩೪, ೮೫) ಎಂದು ಹೇಳಿ ಮುಂದೆ ಇದನ್ನೇ ಒಂದು ಶಾಲೆಯೆಂದು ನಿರ್ದೇಶಿಸಿದೆ (೩, ೪, ೩೫, ೨). ಮನೋಮಯ ಶಾಲೆಯೇ 'ಸರ್ವರತ್ನವಿಚಿತ್ರಿತ'ವಾದುದು ಎಂದು ಇಲ್ಲಿನ ಎಣಿಕೆ.

ಸಹಸ್ರಸ್ತಂಭಶಾಲೆಯಿಂದ ಕೆಲವು ಯೋಜನ ದೂರದಲ್ಲಿರುವುದು 'ಮನೋನಾಮ ಮಹಾಶಾಲಃ' (ಅಲ್ಲಿಯೇ). ಇವೆರಡರ ನಡುವೆ ಇರುವುದು ಅಮೃತವಾಪಿ ಎಂಬ ನಿರ್ದೇಶನ ಅಲ್ಲಿದೆ.

'ಯೀ ಬುದ್ಧಿಮಯವಾದ ಕೋಟೆಗೂ ಮುಂದಣ ಅಹಂಕಾರಮಯವಾದ ಕೋಟೆಗೂ ಮಧ್ಯೆ ಅಂತರಾಳವಾದ ಯಿಪ್ಪತ್ತೊಂದನೇ ಕಕ್ಷ್ಯದಲ್ಲಿ ಯಿರುವ ವಿಮರ್ಶವಾಟಿಯಲ್ಲಿ ನೌಕಾಧೀಶ್ವರಿಯಾದ ಕುರುಕುಳಾದೇವಿ ಯಿರುವಳೂ'.

ಚಿತ್ರದಲ್ಲಿ ಜಂತುನಿಬಿಡವಾದ ನೀರಿನ ಮೇಲೆ ದೋಣಿಯನ್ನು ತನ್ನ ಎರಡು ಕೈಗಳಿಂದ ನಡೆಯಿಸುತ್ತಿರುವ ಕುರುಕುಳಾದೇವಿಯೂ ತಾರೆಯಂತೆ ತಾಂತ್ರಿಕದೇವತೆ; ಬೌದ್ಧಸಾಧನೆಯಲ್ಲೂ ಪ್ರಸಿದ್ಧಳಾದವಳು. ಉತ್ತರಭಾರತದಲ್ಲಿ, ಹಿಮಾಲಯದ ಪರಿಸರದಲ್ಲಿ, ಜಾನಪದನೆಲೆಯಲ್ಲಿ ಪೂಜೆಗೊಳ್ಳುವವಳು. ಇವಳೂ ತಾರಾ-ವಾರುಣಿಯರಂತೆಯೇ ನೌಕಾಧೀಶ್ವರಿ (೩, ೪, ೩೫, ೩೮)

'ತತ್ರ ನೌಕೇಶ್ವರೀ ದೇವೀ ಕುರುಕುಲ್ಲೇತಿ ವಿಶ್ರುತಾ।
ತಮಾಲಶ್ಯಾಮಲಾಕಾರಾ ಶ್ಯಾಮಕಂಚುಕಧಾರಿಣೀ॥



ಶ್ರೀಮಂದಿರ

ಅವಳ ರಕ್ಷಣೆಗೆ ಒಳಪಟ್ಟ ವಿಮರ್ಶವಾಪಿಕೆಯನ್ನು ಲಲಿತೋಪಾಖ್ಯಾನವು (ಅಲ್ಲಿಯೇ, ೩೫) ಯೋಗಿಗಳ ಸುಷುಮ್ನಾಮಾರ್ಗದಲ್ಲಿ ಅಮೃತ ರೂಪವಾಗಿ ಎಚ್ಚರವಾಗಿದ್ದುಕೊಂಡು ಅದರಿಂದ ಅಮೃತವನ್ನು ಹೊರಸೂಸುವ ಸಂಕೇತವೆಂದು ತಿಳಿಸುತ್ತದೆ.

'ವಿಮರ್ಶವಾಪಿಕಾ ನಾಮ ಸೌಷುಮ್ಣಾಮೃತರೂಪಿಣೀ।
ತನ್ಮಹಾಯೋಗಿನಾಂ ಅಂತರ್ಮನೋ ಮಾರುತಪೂರಿತಂ।
ಸುಷುಮ್ಣಾದಂಡವಿವರೇ ಜಾಗರ್ತಿ ಪರಮಾಮೃತಂ॥

ಎಲ್ಲ ಮನುಷ್ಯರಲ್ಲೂ ಮೇರು ದಂಡದ ಮಧ್ಯೆ ಸುಷುಮ್ನಾನಾಡಿಯೂ ಅದರ ಬಲಗಡೆ ಪಿಂಗಳಾನಾಡಿಯೂ, ಎಡಗಡೆ ಇಡಾನಾಡಿಯೂ ಇರುವುದೆಂದೂ, ಪ್ರಾಣಸಂಚಾರ, ಪ್ರವೃತ್ತಿ, ಪ್ರಕ್ರಿಯೆಗಳೆಲ್ಲ ಸಾಮಾನ್ಯವಾಗಿ ಇಡಾ-ಪಿಂಗಳಾ ನಾಡಿಗಳ ಮೂಲಕವೇ ನಡೆಯುವುದೆಂದೂ, ಸುಷುಮ್ನಾ ನಾಡಿಯ ಮಾರ್ಗವನ್ನು ಮುಚ್ಚಿ ಕುಂಡಲಿನೀಶಕ್ತಿ ಸುಪ್ತವಾಗಿರುವುದೆಂದೂ ಕಲ್ಪನೆಯಿದೆ. ಕುಂಡಲಿನಿಯನ್ನು ಜಾಗ್ರತಗೊಳಿಸಿದಾಗ ಶಕ್ತಿಯು ಸುಷುಮ್ನಾನಾಡಿಯ ಮೂಲಕ ಮೇಲೆ ಹೊರಟು ಸಹಸ್ರಾರವನ್ನು ಸೇರುವುದೆಂದು ನಂಬಿಕೆ. ಪ್ರಾಣಾಯಾಮ ಸಾಧನೆಯಲ್ಲಿ ಕುಂಭಕಕ್ರಿಯೆ ಮಾಡಿದಾಗ ವಾಯುವು ಮನಸ್ಸಿನೊಳಗೆ ಜೀವಪ್ರದೇಶವನ್ನು ಪ್ರವೇಶಮಾಡುವುದಂತೆ. ಆಗ ಸುಷುಮ್ನಾನಾಡಿಯ ಒಳಗಣ ಕೊಳವೆಯಲ್ಲಿ ಅಮೃತಸ್ರಾವವಾಗುವುದಂತೆ. ಈ ಸಂದರ್ಭವನ್ನು ಇಲ್ಲಿ ವಿಮರ್ಶವಾಪಿಯೆಂದು ಕರೆದಿದ್ದಾರೆ.

ವಿಮರ್ಶೆಯೆನ್ನುವುದೂ ತಾಂತ್ರಿಕ ಪರಿಭಾಷೆಯೆ. ಶಿವನನ್ನು ಪ್ರಕಾಶವೆಂದೂ ಅವನಲ್ಲಿ ಸಹಜವಾಗಿರುವ ಶಕ್ತಿಯನ್ನು ವಿಮರ್ಶೆಯೆಂದೂ ಶೈವಾಗಮ ಗುರುತಿಸುತ್ತದೆ. ಪ್ರಪಂಚವಾಗಿ ಶಿವನು ಕಾಣಿಸಿಕೊಳ್ಳುವುದು ಪ್ರಕಾಶ; ತನ್ನ ಸ್ವರೂಪವನ್ನು ಅರಿತುಕೊಳ್ಳುವುದು ವಿಮರ್ಶೆ. ಪ್ರಕಾಶವನ್ನು ಬ್ರಹ್ಮನೆಂದು, ವಿಮರ್ಶೆಯನ್ನು ಮಾಯೆಯೆಂದು ಹೇಳುವುದೂ ಉಂಟು. ಪ್ರಕಾಶ, ವಿಮರ್ಶೆ, ಕೂಡಿಕೊಂಡಾಗ ಮಿಥುನಪಿಂಡ; ವೇದಾಂತವು ಅದನ್ನೆ 'ಅಹಂ' ಎಂಬ ನಾದ ಎಂದು ಹೇಳುತ್ತದೆ. ಕುಂಡಲಿನೀಶಕ್ತಿಯು ಬಹಿರ್ಮುಖವಾದಾಗ 'ವಿಸರ್ಗ'ದ ಎರಡು ಬಿಂದುಗಳಾಗಿ ಪರಿಣಮಿಸುತ್ತದೆ. ವಿಸರ್ಗದಲ್ಲಿ ಸೃಷ್ಟಿಯ ಆನಂದವಿದೆ; ಇದನ್ನು 'ಕಾಮ' ಎನ್ನುತ್ತಾರೆ.

ಅದರೊಂದಿಗೆ ಪ್ರಾಣಶಕ್ತಿಯ 'ಹಂಸ' ಅಥವಾ ಶೂನ್ಯದ ಅಂಶವೂ ಇದೆ. ಇವೆರಡೂ ಕೂಡಿದ್ದನ್ನು ಬಿಂದು ಎಂದು ಕರೆದು ಪ್ರಾಕಾಶ-ವಿಮರ್ಶಾಶಕ್ತಿಗಳ ಒಕ್ಕೂಟವೆನ್ನುತ್ತಾರೆ. ಪ್ರಕಾಶವೆನ್ನುವುದು ಪುರುಷರೂಪ ; ಶ್ವೇತಬಿಂದು. ವಿಮರ್ಶೆ ಸ್ತ್ರೀರೂಪ; ರಕ್ತಬಿಂದು, ಇದನ್ನೇ ನಾದವೆಂದೂ ಕರೆಯುವುದುಂಟು. ಈ ಎರಡು ಬಿಂದುಗಳು ಕಲೆತದ್ದನ್ನು ತಂತ್ರಶಾಸ್ತ್ರವು 'ಕಾಮಕಲಾ' ಎಂದು ನಿರ್ದೇಶಿಸುತ್ತದೆ. ಎರಡು ಬಿಂದುಗಳ ನಡುವೆ ಆನಂದವೆಂಬ ಹಾರ್ದಕಲೆ ಹರಿಯುತ್ತದೆ; ಅದು ವಿಮರ್ಶೆಯ ಒಂದು ಲಹರಿಯೆ. ಪ್ರಕಾಶ ಬೆಂಕಿಯಂತೆ, ವಿಮರ್ಶೆ ಆದರಲ್ಲಿ ಕರಗುವ ಬೆಣ್ಣೆಯಂತೆ. ಇದನ್ನೇ ಬೌದ್ಧಸಂಪ್ರದಾಯವು ಯುಗನದ್ಧವೆಂದೂ (ಪ್ರಜ್ಞೋಪಾಯಗಳ, ಶೂನ್ಯತೆ ಕರುಣೆಗಳ ಒಕ್ಕೂಟ), ಮಹಾಸುಖವೆಂದೂ, ಸಮರಸವೆಂದೂ, ವಜ್ರವೆಂದೂ ವ್ಯವಹರಿಸುತ್ತದೆ.

ಪ್ರಜ್ಞೆಯಂಬುದು ಇಡಾನಾಡಿ, ಉಪಾಯವೆಂಬುದು ಪಿಂಗಳಾನಾಡಿ. ಎರಡಕ್ಕೂ ನಡುವೆ, ಎರಡರ ಆಧಾರವಾಗಿರುವ ಸುಷುಮ್ನಾನಾಡಿಯನ್ನು ಅವಧೂತಿಯೆನ್ನುತ್ತಾರೆ. ಇಡಾನಾಡಿಯನ್ನು ಚಂದ್ರನೆಂದೂ ಪಿಂಗಳಾನಾಡಿಯನ್ನು ಸೂರ್ಯನೆಂದೂ ಸುಷುಮ್ನಾನಾಡಿಯನ್ನು ಅಗ್ನಿಯೆಂದೂ ಬಣ್ಣಿಸುತ್ತಾರೆ. ಮನಸ್ಸು ಇಡಾನಾಡಿಯ ಸಂಕೇತ, ಬುದ್ಧಿ ಪಿಂಗಳನಾಡಿಯದು, ಅಹಂಕಾರವು ಸುಷಮ್ನಾನಾಡಿಯದು. ಶಕ್ತಿಕುಂಡಲಿನಿಯ ವಿಸರ್ಗಕ್ರಿಯೆಯಲ್ಲಿ ಒದಗುವ ಆನಂದ 'ಅ' ಕಾರ; ಪ್ರಾಣದ ಪ್ರಾದುರ್ಭಾವ 'ಹ' ಕಾರ; ಆನಂದ ಎನ್ನುವುದು ಪರ, ಪ್ರಾಣದ ಪ್ರಾದುರ್ಭಾವ ಅಪರ. ಎರಡೂ ಕೂಡುವುದು 'ಅಹಂ' ಅಕಾರದಿಂದ ಹಕಾರದವರೆಗೆ ವರ್ಣಮಾಲೆಯ ಎಲ್ಲ ಅಕ್ಷರಗಳೂ ಅಡಗಿವೆ. 'ಅಹಂ' ಎನ್ನುವುದು ನಾದ, ಮಿಥ್ಯಾಪಿಂಡ.

೨೨

ಇಪ್ಪತ್ತೆರಡನೆಯದು ಶ್ರೀತತ್ತ್ವನಿಧಿಯ ಪ್ರಕಾರ ಅಹಂಕಾರಮಯಪ್ರಾಕಾರ; ಅದರೊಳಗಿನ ಸೂರ್ಯಮಯಶಾಲ (ಕಕ್ಷ್ಯ) ಇದರ ವರ್ಣನೆಯ ಸಂಸ್ಕೃತಭಾಗದಲ್ಲಿ ಕೆಳಗಿನ ಒಕ್ಕಣೆಯಿದೆ.

'ಅಥ ಅಹಂಕಾರಮಯ ದ್ವಾವಿಂಶತಿ ಪ್ರಾಕಾರಸ್ಥ ಸಪರಿವಾರ ಸೂರ್ಯಧ್ಯಾನಂ। '
' ಅಥ ಅಹಂಕಾರಸಾಲಸ್ಯಾಂ ।ತರೇ ಮಾರುತ ಯೋಜನೇ। ಸೂರ್ಯಬಿಂಬಮಯಃ ಸಾಲಃ।
ತತ್ರ ಬಾಲಾತಪೋದ್ಗಾರೇ। ಭಾತಿ ಮಾರ್ತಾಂಡಭೈರವ: ॥'

ಇದೇ ಕನ್ನಡದಲ್ಲಿ ಹೀಗೆ ಬಂದಿದೆ -

' ಯೀ ಅಹಂಕಾರದ ಕೋಟೆಗೂ ಮುಂದಣ ಸೂರ್ಯಬಿಂಬಮಯವಾದ ಕೋಟೆಗೂ ಅಂತರಾಳಮಾದ ಯಿಪ್ಪತ್ತೆರಡನೆಯ ಕಕ್ಷದಲ್ಲಿ ಕಂಕೇಳಿವನದಲ್ಲಿ
ಮಾರ್ತಾಂಡಭೈರವನು ಪನ್ನೆರಡು ಭೇದರೂಪಗಳಿಂದ ಛಾಯಾದಿ ನಿಜಶಕ್ತಿಗಳಿಂದೊಡಗೂಡಿ ಮತ್ತು ಗ್ರಹರಾಶಿಗೆ ಹಿತರಕ್ಷಕನಾಗಿ ಯಿರುವನೂ ॥ '

ಲಲಿತೋಪಾಖ್ಯಾನವು ಇದನ್ನು 'ಸೂರ್ಯಬಿಂಬಮಹಾಶಾಲ' ವೆಂದೇ ಕರೆದಿದೆ. ಶ್ರೀತತ್ತ್ವನಿಧಿಯ ಸಂಸ್ಕೃತಭಾಗದಲ್ಲಿ ಬಂದಿರುವ 'ತತ್ರ ಬಾಲಾತಪೋದ್ಗಾರೇ' ಎಂಬ ವಾಕ್ಯದ ವಿವರಣೆಯು ಲಲಿತೋಪಾಖ್ಯಾನದಲ್ಲಿದೆ (೩, ೪, ೩೫, ೪೩-೪೪)

' ತತ್ರ ಬಾಲಾತಪೋದ್ಗಾರೇ ಲಲಿತಾ ಪರಮೇಶ್ವರೀ ।
ಅತಿತೀವ್ರತಪಸ್ತಪ್ತ್ವಾ ಸೂರ್ಯೋ(s)ಲಭತ ತಾಂ ದ್ಯುತಿಂ ॥
ಗ್ರಹರಾಶಿಗಣಾಃ ಸರ್ವೇ ನಕ್ಷತ್ರಾಣ್ಯಪಿ ತಾರಕಾಃ ।
ತೇಽತ್ರೈವ ಹಿ ತಪಸ್ತಪ್ತ್ವಾ ಲೋಕಭಾಸಕತಾಂ ಗತಾಃ ॥ '

ಈ ಕಕ್ಷೆಯಲ್ಲಿನಿಂತು ಸೂರ್ಯನು ಲಲಿತಾಂಬಿಕೆಯನ್ನು ಕುರಿತು ತಪಸ್ಸು ಮಾಡಿ ತನ್ನ ಸಾಮರ್ಥ್ಯವನ್ನು ಪಡೆದುಕೊಂಡನಂತೆ. ಹಾಗೆಯೇ ಎಲ್ಲ ಗ್ರಹಗಳೂ, ರಾಶಿಗಳೂ, ನಕ್ಷತ್ರಗಳೂ ಇಲ್ಲಿ ತಪಸ್ಸು ಮಾಡಿಯೇ ತಂತಮ್ಮ ಸ್ವರೂಪಗಳನ್ನು ಉದ್ಧರಿಸಿಕೊಂಡರಂತೆ. ಈ ಕಕ್ಷೆಯ

ರಕ್ಷಕನಾದವನು ಮಾರ್ತಂಡಭೈರವನೆನಿಸಿಕೊಂಡ ಸೂರ್ಯ. ಈ ಕಕ್ಷೆಯನ್ನು ಶ್ರೀತತ್ತ್ವನಿಧಿಯು ' ಕಂಕೇಳಿವನ ' ವೆಂದು ಕರೆದಿದೆ. ಲಲಿತೋಪಾಖ್ಯಾನವು 'ಕಂಕೋಲಿತರುಖಂಡ'ವೆಂಬ ಕ್ರೀಡೋದ್ಯಾನವೆಂದು ಹೇಳಿದೆ. ರಾಜನಿರ್ಘಂಟದ ಪ್ರಕಾರ ಕಂಕೋಲಿಯೆನ್ನುವುದು ಅಶೋಕವೃಕ್ಷಕ್ಕೆ ಇನ್ನೊಂದು ಹೆಸರು.

ಇಲ್ಲಿ ದ್ವಾದಶಾದಿತ್ಯರು ರಕ್ಷಕರು. ಸಂವತ್ಸರದ ಹನ್ನೆರಡು ತಿಂಗಳುಗಳಿಗೆ ಸರಿಯಾಗಿ ಧಾತೃ, ಮಿತ್ರ, ಅರ್ಯಮನ್, ರುದ್ರ, ವರುಣ, ಸೂರ್ಯ, ಭಗ, ವಿವಸ್ವಾನ್, ಪೂಷನ್, ಸವಿತೃ, ತ್ವಷ್ಟೃ, ವಿಷ್ಣು ಎಂಬುವರು; ಇವರೇ ಋತುನಿಯಾಮಕರು. ಅವರ ಪರಿವಾರದಲ್ಲಿ ಅಸಂಖ್ಯ ಶಕ್ತಿಯರು.

'ಮಾರ್ತಂಡಭೈರವಸ್ತತ್ರ ಭಿನ್ನೋ ದ್ವಾದಶಧಾ ಮುನೇ ।
ಶಕ್ತಿಭಿಸ್ತೈಜಸೀಭಿಶ್ಚ ಕೋಟಿಸಂಖ್ಯಾಭಿರನ್ವಿತಃ ॥ '

ಸೂರ್ಯನ ಶಕ್ತಿಯರಲ್ಲಿ ಮೂವರು ಮುಖ್ಯರಾದವರು. ಮಹಾಪ್ರಕಾಶ ಎನ್ನುವುದೊಂದು, ಚಕ್ಷುಷ್ಮತಿ ಇನ್ನೊಂದು. ಛಾಯಾದೇವೀ ಮೂರನೆಯವಳು (ಲಲಿತೋಪಾಖ್ಯಾನ, ಅಲ್ಲಿಯೇ ೪೭-೪೮) ಇವರೆಲ್ಲರೂ ಲಲಿತೆಯ ಮಂತ್ರವನ್ನು ಜಪಿಸುತ್ತಲೇ ಇರುತ್ತಾರಂತೆ ('ಲಲಿತಾಯಾ ಮಹೇಶಾನ್ಯಾಃ ಸದಾ ವಿದ್ಯಾ ಹೃದಾ ಜಪನ್')

ಚಿತ್ರದಲ್ಲಿ ಸೂರ್ಯನು ಪದ್ಮಾಸನಸ್ಥನಾಗಿ ಕುಳಿತು ಬಲಗೈಯಲ್ಲಿ ಕಮಲವನ್ನು ಹಿಡಿದು ಎಡಗೈ ಲೋಲಮುದ್ರೆಯಲ್ಲಿರುವಂತೆ ಕಾಣುತ್ತಾನೆ. ಎಡಗಡೆ ಛಾಯಾದೇವಿ, ಬಲಗಡೆ ಸಂಜ್ಞಾದೇವಿ (ಸೌವೀರಶಕ್ತಿ). ಇವರೂ ಇದ್ದಾರೆ. ಸೂರ್ಯನೇ ಮೊದಲಾಗಿ ಒಂಭತ್ತು ಗ್ರಹಗಳು (ಸೂರ್ಯ, ಚಂದ್ರ, ಬುಧ, ಬೃಹಸ್ಪತಿ, ಶುಕ್ರ, ಶನಿ, ರಾಹು, ಕೇತು) ಮತ್ತು ಅವನನ್ನವಲಂಬಿಸಿ ಹನ್ನರಡು ರಾಶಿಗಳು (ಮೇಷ, ವೃಷಭ, ಮಿಥುನ, ಕರ್ಕಾಟಕ, ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಧನುಸ್, ಮಕರ, ಕುಂಭ, ಮೀನ) ಇಲ್ಲಿ ಲಲಿತಾಭಕ್ತರಾಗಿರುವರು.

೨೩

ಇಪ್ಪತ್ತಮೂರನೆಯದು 'ಚಂದ್ರಬಿಂಬಮಹಾಸಾಲ'

' ಯೀ ಸೂರ್ಯಬಿಂಬದ ಕೋಟೆಗೂ ಮುಂದಣ ಚಂದ್ರಬಿಂಬಮಯಮಾದ ಕೋಟೆಗೂ ಅಂತರಾಳವಾದ ಯಿಪ್ಪತ್ತುಮೂರನೆಯ ಕಕ್ಷ್ಯದಲ್ಲಿ ಸೋಮನಾಥನು ಅಶ್ವಿನ್ಯಾದಿ ನಿಜಪತ್ನಿಯರಿಂದೊಡಗೂಡಿ ಮತ್ತು ಅಸಂಖ್ಯಾತ ತಾರಾಗಣಗಳಿಂದೊಡಗೂಡಿ ಯೀ ಕಕ್ಷವಂ ರಕ್ಷಶಿಕೊಂಡಿರುವನೂ ''

ಲಲಿತೋಪಾಖ್ಯಿನವು ಈ ಕಕ್ಷ್ಯೆಯನ್ನು 'ಚಂದ್ರಿಕಾದ್ವಾರ'ವೆಂದು ಕರೆದು, ಅತ್ರಿಯ ನೇತ್ರ-ಸಮುದ್ಭವನಾದ ಚಂದ್ರನು ತಪಸ್ಸುಮಾಡಿ ಕಾಂತಿಯುಕ್ತನಾದದ್ದು ಇಲ್ಲೇ ಎಂದು ಹೇಳುತ್ತದೆ (ಅಲ್ಲಿಯೇ, ೫೩). ಇಲ್ಲಿ ಚಂದ್ರಬಿಂಬದ ಮಧ್ಯದಲ್ಲಿ ಸೋಮನಾಥನೆಂಬ ದೇವತೆಯು ಇದ್ದುಕೊಂಡು ಮೂರು ಲೋಕಗಳ ಕತ್ತಲೆಯನ್ನು ಕಳೆಯುವನಂತೆ -

' ಅತ್ರ ಶ್ರೀಸೋಮನಾಥಾಖ್ಯೋ ವರ್ತತೇ ನಿರ್ಮಲಾಕೃತಿಃ ।
ದೇವಸ್ತ್ರೈಲೋಕ್ಯತಿಮಿರಧ್ವಂಸೀ ಸಂಸಾರವರ್ತಕಃ ॥ '

ಈ ಚಂದ್ರಿಕಾದ್ವಾರದಲ್ಲಿಯೇ ಚಂದ್ರನು ಅಶ್ವಿನೀ ಮಾದಲಾದ ಇಪ್ಪತ್ತೇಳು ನಕ್ಷತ್ರಗಳೊಡಗೂಡಿ ಲಲಿತಾಂಬಿಕೆಯ ಜಪ, ಧ್ಯಾನ, ಸ್ತೋತ್ರ, ಪೂಜೆ ಮೊದಲಾದುವುಗಳನ್ನು ಮಾಡುತ್ತ ಕಾಲ ಕಳೆಯುತ್ತಿರುವನಂತೆ.

ಚಿತ್ರದಲ್ಲಿ ನೀಲವರ್ಣದ ದೊಡ್ಡ ಚಂದ್ರಮಂಡಲ. ಅದರ ನಡುವೆ ಪದ್ಮಾಸನದಲ್ಲಿ ಕುಳಿತ ಸೋಮದೇವ. ಎರಡು ಕೈಗಳು; ಬಲಗೈಯಲ್ಲಿ ಗದೆ ಹಿಡಿದಿದ್ದಾನೆ, ಎಡಗೈಯಲ್ಲಿ ಬಂಗಾರದ ಬಟ್ಟಲು (ಸುಧಾರಸವನ್ನು ತುಂಬಿದ ಪಾತ್ರೆ). ಪಕ್ಕದಲ್ಲಿ ಪ್ರಿಯಪತ್ನಿಯಾದ ರೋಹಿಣಿ.

೨೪

ಇಪ್ಪತ್ತನಾಲ್ಕನೆಯದು ಶೃಂಗಾರಪರಿಘವೆಂಬ ಕೋಟೆ. ಈ ಪರಿಘವನ್ನು ರಕ್ಷಿಸಿಕೊಂಡು ಸ್ಮರ(ಎಂದರೆ ಮನ್ಮಥ) ಇದ್ದಾನೆ.

'ಯೀ ಚಂದ್ರಬಿಂಬದ ಕೋಟೆಗೂ ಮುಂದಣ ಶೃಂಗಾರಮಯ ಮಾದ ಕೌಂಸ್ತುಭಮಣಿ ನಿರ್ಮಿತಮಾದ ಕೋಟೆಗೂ ಅಂತರಾಳವಾದ ಯಿಪ್ಪತ್ತು ನಾಲ್ಕನೆಯ ಕಕ್ಷ್ಯದ ಶೃಂಗಾರಪರಿಘದಲ್ಲಿ ವಿಚಿತ್ರ ನೌಕಾರೂಢನಾಗಿ ರತಿ ಮೊದಲಾದ ಸ್ತ್ರೀರಿಂದೊಡಗೂಡಿ ಪಂಚಬಾಣನು ರಕ್ಷಕನಾಗಿ ಯಿರುವನೂ'

ಲಲಿತೋಪಾಖ್ಯಾನವೂ ಇದನ್ನು ಶೃಂಗಾರಶಾಲವೆಂದು ಕರೆದಿದೆ. ಆದರೆ ಅದರ ಪ್ರಕಾರ ಇಲ್ಲಿರುವವರು ಶೃಂಗಾರಶಕ್ತಿಯರು. ಇವರೆಲ್ಲ ಸಾವಿರಾರು ನೌಕೆಗಳಲ್ಲಿ ಸಂಚರಿಸುತ್ತ ತಮ್ಮ ಒಡೆಯ ಕುಸುಮಾಯುಧನನ್ನು (ಎಂದರೆ ಮನ್ಮಥನನ್ನು) ಸೇವಿಸುತ್ತಿರುತ್ತಾರೆ; ಈ ಒಡೆಯನೋ 'ಸದಾ ಮತ್ತ'. ಇವನು ತನ್ನ ಸಂಮೋಹನ ಮೊದಲಾದ ಬಾಣಗಳಿಂದ ಇಡೀ ಜಗತ್ತನ್ನೇ ಮೋಹಗೊಳಿಸುವುದು ಲಲಿತಾಂಬಿಕೆಯ ಅಪ್ಪಣೆಯ ಮೇರೆಗೆ -

' ಸ ತು ಸಮ್ಮೋಹಯತ್ಯೇವ ವಿಶ್ವಂ ಸಮ್ಮೋಹನಾದಿಭಿಃ ।
ವಿಶಿಖೈರಖಿಲಾಂಲ್ಲೋಕಾನ್ ಲಲಿತಾಜ್ಞಾವಶಂವದಃ ॥ '

ಶ್ರೀತತ್ತ್ವನಿಧಿಯು ಮನ್ಮಥನನ್ನು 'ಮಹಾಶೃಂಗಾರ ಪರಿಘಾಧಿಕಾರೀ ಸ್ಮರ ' ನೆಂದು ಬಣ್ಣಿಸಿದೆ. ಇಲ್ಲಿರುವ ಚಿತ್ರ ಅವನನ್ನು ಕಾಣಿಸಿದೆ. ದೋಣಿಯ ನಡುವೆ ತೋರಿಕೊಂಡ ಇವನು ಎಂಟುಕೈಗಳ ಸುಕುಮಾರ. ಕೈಗಳಲ್ಲಿ ಅವನ ಆಯುಧವಾದ ಕಬ್ಬಿನ ಜಲ್ಲೆ(ಇಕ್ಷುಚಾಪ), ಪಂಚಬಾಣ (ಐದು ಹೂಗಳೂ ಬಾಣಗಳಂತೆ), ಶಂಖ, ಪದ್ಮಗಳು; ಉಳಿದ ಕೈಗಳಿಂದ ತನ್ನ ಸ್ತ್ರೀಯರನ್ನು ಅಪ್ಪಿಕೊಂಡಿದ್ದಾನೆ. ಬಲಭಾಗದ ಎರಡು ತೋಳುಗಳು ರತೀದೇವಿಯನ್ನೂ ಭೇದಶಕ್ತಿಯರನ್ನೂ ಆಲಂಗಿಸಿವೆ; ಎಡಭಾಗದ ತೋಳುಗಳು ಪ್ರತಿದೇವಿಯನ್ನೂ ಶಕ್ತಿಯರನ್ನೂ ಆಲಂಗಿಸಿವೆ. ಮತ್ತೆ ಪರಿಚಾರಿಕೆಯರೂ ಇದ್ದಾರೆ.

ಲಲಿತಾಂಬಿಕೆಯ ಸಾಂಪ್ರದಾಯಿಕ ಉಪಾಸಕರಲ್ಲಿ ಮನ್ಮಥನಿಗೆ ವಿಶೇಷವಾದ ಸ್ಥಾನವಿದೆ. ಅವರು ಹನ್ನೆರಡು ಮಂದಿಯೆಂಬ ಪ್ರತೀತಿ-

'ಮನುಶ್ಚಂದ್ರಃ ಕುಬೇರಶ್ಚ ಲೋಪಾಮುದ್ರಾ ಚ ಮನ್ಮಥಃ ।
ಅಗಸ್ತಿರಗ್ನಿಃ ಸೂರ್ಯಶ್ಚ ಇಂದ್ರಃ ಸ್ಕಂದಃ ಶಿವಸ್ತಥಾ ।
ಕ್ರೋಧಭಟ್ಟಾರಕೋ ದೇವ್ಯಾ ದ್ವಾದಶಾಮೀ ಉಪಾಸಕಾಃ ॥ '

ಶ್ರೀವಿದ್ಯೆಯಲ್ಲಿ ಕಾದಿಸಂಪ್ರದಾಯದ ಪ್ರವರ್ತಕನೇ ಮನ್ಮಥ (ಕಾಮ). ಇದನ್ನು ಪ್ರಕಾಶಪಡಿಸಿದವನು ಅಗಸ್ತ್ಯಋಷಿ. ಇದರ ಆಚಾರ್ಯರು ಪರಮಶಿವ, ದುರ್ವಾಸ, ಹಯಗ್ರೀವ, ಅಗಸ್ತ್ಯ. ಇವರನ್ನು ಆಚಾರ್ಯಪರಂಪರೆಯೆಂದು ಗುರುತಿಸುವರು. ಈ ಸಂಪ್ರದಾಯದ ಮಂತ್ರದಲ್ಲಿ 'ಕ' ಎಂಬುದೇ ಮೊದಲನೆಯ ಅಕ್ಷರ (ಕ ಏ ಈ ಲ ಹ್ರೀಂ। ಹ ಸ ಕ ಲ ಹ್ರೀಂ। ಸಕಲ ಹ್ರೀಂ।) ; ಕಕಾರವನ್ನು ಕಾಮಬೀಜವೆಂದೇ ಕರೆಯುತ್ತಾರೆ. ಹಾದಿಸಂಪ್ರದಾಯವು ಅಗಸ್ತ್ಯಋಷಿಯ ಹೆಂಡತಿ ಲೋಪಾಮುದ್ರೆಯಿಂದ ಪ್ರವರ್ತಿವಾಯಿತು. ಇದು ಕಾದಿಸಂಪ್ರದಾಯದನಂತರವೇ ಕಾಣಿಸಿಕೊಂಡದ್ದು (' ಕಾದೇಃ ಪಶ್ಚಾದೇವ ಹಾದೇರುದ್ಧಾರಃ'). ಕಾದಿವಿದ್ಯೆಯಲ್ಲಿ ಪೂಜೆಗೊಳ್ಳುವ ದೇವತಾರೂಪಕ್ಕೆ 'ಕಾಮಕಲಾ', ' ರಾಜರಾಜೇಶ್ವರೀ, ' ಮಹಾತ್ರಿಪುರಸುಂದರೀ', 'ಶ್ರೀಮಾತಾ' ಎಂಬ ಹೆಸರುಗಳಿವೆ. ರೂಪಕಲ್ಪನೆಯಲ್ಲಿ ಮನ್ಮಥನ ಆಯುಧಗಳಾದ ಕಬ್ಬಿನ ಜಲ್ಲೆ (ಇಕ್ಷುಚಾಪ) ಮತ್ತು ಪಂಚಶರ (ಹೂಗಳ ಬಾಣಗಳು) ಇವೂ ಸೇರುತ್ತವೆ. ಶ್ರೀವಿದ್ಯೆಗೂ ಕಾಮರಾಜವಿದ್ಯೆಯೆಂದೇ ಹೆಸರಿದೆ. ಶ್ರೀವಿದ್ಯೆಯಲ್ಲಿ ಪ್ರಸಿದ್ಧವಾದ ಪಂಚದಶೀಮಂತ್ರದ ಎರಡನೆಯ ಕೂಟ ಕಾಮರಾಜಕೂಟ (ಮೊದಲನೆಯದು ವಾಗ್ಭವಕೂಟ, ಮೂರನೆಯದು ಶಕ್ತಿಕೂಟ).

ಮುಂದಿನ ಕಕ್ಷ್ಯೆಯೇ ದೇವಿಯ ಸಾಕ್ಷಾತ್‌ಸನ್ನಿಧಾನ ; ಪದ್ಮಾಟವಿ. ಇಲ್ಲಿಗೆ ಹೋಗಲು ಮನ್ಮಥನ ನೆರವು ಅತ್ಯಗತ್ಯ. ಸ್ವಭಾವದಿಂದಲೇ ಶುದ್ಧಚಿತ್ತರಾದವರು, ದೇವತೆಗಳು, ಸಿದ್ಧರು ಮೊದಲಾದವರು ಮನ್ಮಥನ ಅಪ್ಪಣೆಯಿಂದಲೇ ಪದ್ಮಾಟವಿಯನ್ನು ಪ್ರವೇಶಮಾಡುವರು. ಲಲಿತೋಪಾಖ್ಯಾನದಲ್ಲಿ (ಅಲ್ಲಿಯೇ ೬೪ ಮುಂದೆ) ಹೀಗೆ ಹೇಳಿದೆ.

ವನಿತುಂ ಶುದ್ಧವೇಷಾಶ್ಚ ಲಲಿತಾಭಕ್ತಿ ನಿರ್ಭರಾಃ ।
ಸಾವಧಾನೇನ ಮನಸಾ ಯಾಂತಿ ಪದ್ಮಾಟವೀಸ್ಥಲಂ ॥
ತಂ ಗಂತುಂ ಪಾರಯತ್ಯೇವ ಸುರಸಿದ್ಧನರಾಸುರಾಃ ।
ಬ್ರಹ್ಮವಿಷ್ಣುಮಹೇಶಾಸ್ತು ಶುದ್ಧಚಿತ್ತಾಃ ಸ್ವಭಾವತಃ ।
ತದಾಜ್ಞಯಾ ಪರಂ ಯಾಂತಿ ಮಹಾಪದ್ಮಾಟವೀಸ್ಥಲಂ ॥ '

೨೫

ಇದು ಕಡೆಯ ಕಕ್ಷ್ಯ. ಲಲಿತೋಪಾಖ್ಯಾನದಲ್ಲಿ (ಅಲ್ಲಿಯೇ ೭೦-೭೧) ಬರುವ

' ಶೃಂಗಾರಶಾಲಸ್ಯಾಂತರೇ ಸಪ್ತಯೋಜನೇ ।
ಚಂತಾಮಣಿಗೃಹಂ ನಾಮ ಚಕ್ರರಾಜಮಹಾಲಯಃ ॥
ತನ್ಮಧ್ಯಭೂಃ ಸಮಸ್ತಾಪಿ ಪರಿತೋ ರತ್ನಭೂಷಿತಾ ।
ಪದ್ಮಾಟವೀ ನಾಮ ಸರ್ವಸೌಭಾಗ್ಯದಾಯಿನೀ॥ '

ಎಂಬ ಒಕ್ಕಣೆಗನುಸಾರವಾಗಿ ಶ್ರೀತತ್ತ್ವನಿಧಿಯು

'ಯೀ ಶೃಂಗಾರಮಯವಾದ ಕೋಟೆಗೂ ಮುಂದಣ ಚಿಂತಾಮಣಿಗೃಹದ ಭಿತ್ತಿಗೂ ಅಂತರಾಳವಾದ ಯಿಪ್ಪತ್ತೈದನೆಯ ಕಕ್ಷದಲ್ಲಿ ಮಹಾಪದ್ಮಾಟವಿ ಯಿರುವುದು'

ಎಂದು ಹೇಳಿ ಇದರ ವರ್ಣನೆಯನ್ನು ಆರಂಭಿಸಿದೆ.

'ಕಾಲಾಯಸಮಯವಾದ ಪ್ರಥಮ ಪ್ರಾಕಾರದಿಂದ ಯೀ ಶೃಂಗಾರಮಯ ಸಾಲದವರಿಗೆ ನಾಲ್ಕುದಿಕ್ಕಿನಿಂದಲೂ ಯಿಪ್ಪತ್ತೈದು ಕೋಟೆಗಳಿಗೆ ನೂರು ಗೋಪುರವಿರುವುದು. ಯೀ ಕಕ್ಷ್ಯದ ಮಹಾಪದ್ಮಾಟವಿಯಲ್ಲಿ ಯಿರುವ ಪದ್ಮಂಗಳು ಮಹಾಪ್ರಮಾಣ ಉಳ್ಳವಾಗಿ ಸದಾವಿಕಶಿತಗಳಾಗಿ ವಿಚಿತ್ರಪರಿಮಳಯುಕ್ತಮಾಗಿ ಯಿರುವುವು। ಯೀ ರೀತಿಯಿಂದಿರುವ ಮಹಾಪದ್ಮಾಟವೀಯಲ್ಲಿ ಅಂಮನವರಿಗೆ ಅರ್ಘ್ಯಾದ್ಯುಪಚಾರಗಳಿಗೆ ಯೋಗ್ಯಮಾದ ದಿವ್ಯಾಮೃತದಿಂ ಪೂರಿತಂಗಳಾದ ಅರ್ಘ್ಯಪಾತ್ರೆಗಳು ಯಿರುವುವು ।ಯೀ ಅರ್ಘ್ಯಪಾತ್ರಗಳಲ್ಲಿ ರವಿಕಳಾ (೧೨), ಚಂದ್ರಕಳಾ (೧೬) ಅಗ್ನಿಕಳಾ (೧೦), ವಿಷ್ಣುಕಳಾ (೧೦), ರುದ್ರಕಳಾ (೧೦) , ಬ್ರಂಹಕಳಾ (೧೦) ಈಶ್ವರಕಳಾ (೪), ಸದಾಶಿವಕಳಾ (೧೬) ಸಹಾ ೮೫ ಕಳಾದೇವಿಯರು ಪಾದಧ್ಯಾನಾಸಕ್ತರಾಗಿ ಸಂಚರಿಸುತ್ತ ಯಿರುವರು । ಮತ್ತು ಆದಿದಂಪತಿಗಳಿಗೆ ನಿತ್ಯ ಔಪಾಸನಕ್ಕೆ ಯೋಗ್ಯವಾದ ವಂದು ಯೋಜನ ಅಗಲದಿಂ ಯಿದೇ ಪ್ರಮಾಣ ಉಳ್ಳ ಆಳ ಉಳ್ಳ ಚಿದಗ್ನಿಕುಂಡವಿರುವದು। ಯೀ ಪದ್ಮಾಟವಿಯಲ್ಲೇ ನೈರುತ್ಯಭಾಗದೊಳ್ ಶ್ರೀದೇವಿಗೆ ಆರೋಹಣೆಗೆ ಯೋಗ್ಯವಾದ ಶ್ರೀಚಕ್ರವೆಂಬ ರಥವೂ ವಂಭತ್ತು ಅಂತಸ್ತಿನಿಂದೂಡಗೂಡಿ ನಾಲ್ಕು ಯೋಜನದಗಲ ಮತ್ತು ಯೋಜನ ವುನತಮಾಗಿ ವೇದಗಳೆಂಬ ಚಕ್ರಗಳಾಗಿ ಪುರುಷಾರ್ಥಗಳೇ ಅಶ್ವಗಳಾಗಿ ಅನೇಕ ಕಿರುಘಂಟಾಧ್ವಜ ಪತಾಕ ಮತ್ತು ಛತ್ರಯಕ್ತಮಾಗಿ ಯಿರುವದು। ವಾಯವ್ಯಭಾಗದಲ್ಲಿ ಮಂತ್ರಿಣೀ ಶ್ಯಾಮಳಾದೇವಿಗೆ ಯೋಗ್ಯಮಾದ ಗೇಯಚಕ್ರವೆಂಬ ರಥವೂ ಏಳು ಅಂತಸ್ಥಿನಿಂದೂಡಗೂಡಿ ಎರಡು ಯೋಜನ ಉಂನತಮಾಗಿ ಯಿರುವದು।

ವಾಯವ್ಯಭಾಗದಲ್ಲಿ ಮಂತ್ರಿಣೀ ಶ್ಯಾಮಳಾದೇವಿಗೆ ಯೋಗ್ಯಮಾದ ಗೇಯಚಕ್ರವೆಂಬ ರಥವೂ ಏಳು ಅಂತಸ್ಥಿನಿಂದೊಡಗೂಡಿ ಎರಡು ಯೋಜನ ಉಂನತಮಾಗಿ ಯಿರುವದು।

ಯೀಶಾನ್ಯಭಾಗದಲ್ಲಿ ದಂಡಿನೀ ವಾರಾಹೀದೇವಿಗೆ ಯೋಗ್ಯಮಾದ ಕಿರಿಚಕ್ರವೆಂಬ ರಥವು ಐದು ಅಂತಸ್ತಿನಿಂದೊಡಗೂಡಿ ಆರು ಯೋಜನ ಉಂನತಮಾಗಿ ಯಿರುವುದು.

ಶೃಂಗಾರವೆಂಬುದು ಇಲ್ಲಿ ಕೋಟೆಯ ಹೆಸರು. ಲಲಿತೋಪಾಖ್ಯಾನದಲ್ಲಿ ಇದನ್ನು ಪರಿಖವೆಂದು ಕರೆಯಲಾಗಿದೆ. ಒಳಹೋಗಲು ಅಡ್ಡಿಮಾಡುವ ವ್ಯವಸ್ಥೆಗೆ ಪರಿಖವೆಂದು ಹೆಸರು. ಚಂತಾಮಣಿಗೃಹವನ್ನು ಸುತ್ತರಿದು ಕಂದಕ, ಕಮರಿ. ಕೋಟೆಯ ಹೊರಗೆ ಇಂಥ ಕಂದಕ ಅಥವಾ ಅಗಳು ಇರುತ್ತಿದ್ದುದು ವಾಡಿಕೆ; ಇದನ್ನು ನೋಡಿಕೊಳ್ಳುವ ಅಧಿಕಾರಿಗಳೂ ಇರುತ್ತಿದ್ದರು. ಶೃಂಗಾರಪರಿಖದ ಅಧಿಕಾರಿ ಸ್ಮರ (ಮನ್ಮಥ) 'ಅಜೇಯಸೌಂದರ್ಯಃ ತ್ರೈಲೋಕ್ಯಜನಮೋಹನಃ' ಸಾಮಾನ್ಯ ಮನುಷ್ಯರು ಕಾಮಭೋಗಗಳಲ್ಲಿ

ಮುಳುಗಿದ್ದು, ಸಂಸಾರದ ಒತ್ತಡಕ್ಕೆ ಸಿಲುಕಿರುವಾಗ ಈ ಕಂದಕವನ್ನು ದಾಟಲು ಸಾಧ್ಯವಾಗದು. ಕಂದಕವೇ ಸೊಗಸು ಸೊಬಗುಗಳಿಂದ ಕೂಡಿದೆಯಾಗಿ ಶೃಂಗಾರಪರಿಖಿ. ತಾನೇ ಜನರನ್ನು ಮರುಳುಮಾಡಿ ದೂರ ಅಟ್ಟಬಲ್ಲದು (೧,೪,೨೬,೩೨)

'ಪ್ರಭೂತರಾಗಗಹನಾಃ ಪ್ರೌಢವ್ಯಾಮೋಹದಾಯಿನೀಂ।
ಮಹಾಶೃಂಗಾರ ಪರಿಖಾಂ ತರಿತುಂ ನ ವಿಚಕ್ಷಣಾಃ।।'

ಈ ಪರಿಖಾಧಿಕಾರಿಯಾದ ಮನ್ಮಥನು ದುರ್ಬಲರಾದ ಸಾಧಕರನ್ನೂ ಮಂದಾಧಿಕಾರಿಗಳನ್ನು ದುರಿತಾಕ್ರಾಂತಚಿತ್ತರನ್ನೂ ತಡೆಹಿಡಿಯುವನು.

'ತಸ್ಯ ಸರ್ವಮತಿಕ್ರಮ್ಯ ಮಹತಾಮಪಿ ಮೋಹನಂ।
ಮಹಾಪದ್ಮಾಟವೀಂ ಗಂತುಂ ಕೋಪಿ ಭವತಿ ಕ್ಷಮ: ।।

ಲಲಿತೋಪಾಖ್ಯಾನವು ಇದನ್ನು ಶೃಂಗಾರಶಾಲವೆಂದು ಕರೆದಿದೆ. ಈ ಗ್ರಂಥದ ಪ್ರಕಾರ, ಇದರೊಳಗೆ ಏಳುಯೋಜನ ದೂರದಲ್ಲಿ ಈ ಕಕ್ಷ್ಯೆಯ ಪೂರ್ವಭಾಗದಲ್ಲಿ ಒಂದು ಕ್ರೋಶದಷ್ಟು ಎತ್ತರವಾಗಿ, ವರ್ತುಲಾಕಾರದ ಕುಂಡದಲ್ಲಿರುವ ಅಗ್ನಿ. ಕುಂಡದ ಎದುರಿಗೆ ಅರ್ಧಯೋಜನ ವಿಸ್ತಾರವಾಗಿರುವ ಅರ್ಘ್ಯಪಾತ್ರೆ : ಅದರಲ್ಲಿ ಹತ್ತು ಕಲಾದೇವತೆಗಳು (ಧೂಮ್ರಾರ್ಚಿ, ಉಷ್ಣಾ, ಜ್ವಲಿನೀ, ಜ್ವಾಲಿನೀ, ವಿಸ್ಫುಲಿಂಗಿನೀ, ಸುಶ್ರೀಃ, ಸುರೂಪಾ, ಕಪಿಲಾ, ಹವ್ಯವಹಾ, ಕವ್ಯವಹಾ) ಕೂಡಿಕೊಂಡಿದ್ದಾರೆ. ಸೂರ್ಯನೇ ಆ ಪಾತ್ರೆಯ ರೂಪದಲ್ಲಿದ್ದಾನೆ. ಪಾತ್ರೆಯ ಸುತ್ತ ಹನ್ನೆರಡು ಸೂರ್ಯರಶ್ಮಿಗಳಂತಿರುವ ಕಳೆಗಳಿದ್ದಾರೆ (ತಪಿನೀ, ತಾಪಿನೀ, ಧೂಮ್ರಾ, ಮರೀಚಿ, ಜ್ವಲಿನೀ, ರುಚಿ, ಸುಷುಮ್ಣಾ, ಭೋಗದಾ, ವಿಶ್ವಾ, ಬೋಧಿನೀ, ಧಾರಿಣೀ). ಪರಮಾನಂದಕ್ಕೆ ಕಾರಣವಾದ ಅಮೃತವೇ ಪಾತ್ರೆಯಲ್ಲಿರುವ ಅರ್ಘ್ಯೋದಕ, ಇದು ಹದಿನಾರು ಚಂದ್ರಕಳೆಗಳಿಂದ ಕೂಡಿದೆ (ಅಮೃತಾ, ಮಾನದಾ, ಪೂಷ್ಣಾ, ತುಷ್ಟಿ, ಪುಷ್ಟಿ, ರತಿ, ಧೃತಿ, ಶಶಿನೀ, ಚಂದ್ರಿಕಾ, ಕಾಂತಿ, ಜ್ಯೋತ್ಸ್ನಾ, ಶ್ರೀ, ಪ್ರೀತಿ, ಅಂಗದಾ, ಪೂರ್ಣಾ, ಪೂರ್ಣಾಮೃತಾ).

ಅದರಲ್ಲಿ ಬ್ರಹ್ಮನ ಕಳೆಗಳು ಹತ್ತು (ಪುಷ್ಟಿ, ಋದ್ಧಿ, ಸ್ಮೃತಿ, ಮೇಧಾ, ಕಾಂತಿ, ಲಕ್ಷ್ಮೀ, ದ್ಯುತಿ, ಧೃತಿ, ಜರಾ, ಸಿದ್ಧಿ); ವಿಷ್ಣುವಿನ ಕಳೆಗಳು ಹತ್ತು (ಸ್ಮೃತಿ, ಪಾಲಿನೀ, ಶಾಂತಿ, ಈಶ್ವರೀ, ರತಿ, ಕಾಮಿಕಾ, ವರದ , ಆಹ್ಲಾದಿನೀ, ಪ್ರೀತಿ, ದೀರ್ಘಾ); ರುದ್ರನ ಕಳೆಗಳು ಹತ್ತು (ತೀಕ್ಷ್ಣಾ, ರೌದ್ರೀ, ಭಯಾ, ನಿದ್ರಾ, ತಂದ್ರಾ, ಕ್ಷುತ್, ಕ್ರೋಧಿನೀ, ತ್ರಪಾ, ಉತ್ಕಾರೀ, ಮೃತ್ಯು; ಈಶ್ವರನ ಕಳೆಗಳು ನಾಲ್ಕು (ಪ್ರೀತ, ಶ್ವೇತ, ಅರುಣ, ಸಿತ); ಸದಾಶಿವನ ಕಳೆಗಳು ಹದಿನಾರು (ನಿವೃತ್ತಿ, ಪ್ರತಿಷ್ಠಾ, ವಿದ್ಯಾ, ಶಾಂತಿ, ಇಂದಿರಾ, ದೀಪಿಕಾ, ರೇಚಿಕಾ, ಮೋಚಿಕಾ, ಪರಾ, ಸೂಕ್ಷ್ಮಾ, ಸೂಕ್ಷ್ಮಾಮೃತಾ, ಜ್ಞಾನಾಮೃತಾ, ವ್ಯಾಧಿನೀ, ವ್ಯಾಪಿನೀ, ವ್ಯೋಮಾ, ರೂಪಿಕಾ). ಇವರೆಲ್ಲರೂ ಶಕ್ತಿಯರೆಂದೇ ಎಣಿಕೆ, ಚಂಚಲೆಯರು, ಇಲ್ಲಿಂದಲ್ಲಿಗೆ ಅಲೆದಾಡುತ್ತ ಆಡುತ್ತಿರುವರು. ಬ್ರಹ್ಮನು ಇವರನ್ನು ತನ್ನ 'ಅರ್ಘ್ಯಸಂಶೋಧನೆ'ಗೆಂದೇ ವ್ಯವಸ್ಥೆಮಾಡಿರುವನು. ಆ ಅರ್ಘ್ಯವನ್ನು ಇವರು ಕುಡಿದು ಮದೋನ್ಮತ್ತರಾಗಿರುವರು (೩, ೪, ೩೫, ೭೭-೧೦೫)

ಚಿಂತಾಮಣಿಗೃಹದ ಆಗ್ನೇಯದಿಕ್ಕಿನಲ್ಲಿ ದೇವಿಯ ದಿನನಿತ್ಯದ ಉಪಾಸನೆಗೆಂದು ಅಗ್ನಿಕುಂಡವೊಂದಿದೆ. ಚೈತನ್ಯವೇ ಇಲ್ಲಿ ಅಗ್ನಿರೂಪದಿಂದಿರುವುದರಿಂದ ಇದು ಚಿದಗ್ನಿಯೆನಿಸಿಕೊಳ್ಳುತ್ತದೆ ('ತತ್ರ ಜ್ವಲತಿ ಚಿದ್ವಹ್ನಿಃ ಸುಧಾಧಾರಾಶತಾರ್ಚಿತಃ). ಇದಕ್ಕೆ ಸೌದೆ, ಅರಣಿ ಮುಂತಾದ ವಸ್ತುಗಳ ಅಗತ್ಯವಿರದು(ಅನಿಂಧನಃ), ಅದರ ಉರಿ ಎತ್ತರಕ್ಕೆ ಸಾಗುತ್ತದೆ ('ಮಹಾಜ್ವಾಲಃ') ಅಮೃತವೇ ಅದಕ್ಕೆ ಕಾರಣ ('ಸುಧಾತರ್ಪಿತಃ). ಈ ಅಗ್ನಿಯಲ್ಲಿ ನಿತ್ಯವೂ ಜಗತ್ತಿನ ರಕ್ಷಣೆಗಾಗಿ ಉಪಾಸನೆಮಾಡುವವರು ದೇವಿ ಮತ್ತು ಕಾಮೇಶ್ವರ ಈ ಆದಿದಂಪತಿಗಳು (೩, ೪, ೩೬, ೪)

'ತತ್ರ ಹೋತ್ರೀ ಮಹಾದೇವೀ ಹೋತಾ ಕಾಮೇಶ್ವರಃ ಪರಃ।
ಉಭೌ ನಿತ್ಯಹೋತಾರೌ ರಕ್ಷತಃ ಸಕಲಂ ಜಗತ್।।'

ಚಿಂತಾಮಣಿಗೃಹದ ರಕ್ಷೋಭಾಗದಲ್ಲಿ (ಎಂದರೆ ನೈಋತ್ಯದಿಕ್ಕಿನಲ್ಲಿ) ದೇವಿಯ ಎತ್ತರವಾದ ಮಹಾಚಕ್ರವಿದೆ: 'ಚಕ್ರರಾಜರಥಶ್ರೇಷ್ಠಃ ಉನ್ನತವಿಗ್ರಹಃ'. ಇದು ಒಂಬತ್ತು ಪರ್ವಗಳಿಂದ (ಅಂತಸ್ತುಗಳಿಂದ) ಕೂಡಿದ ಶ್ರೀಚಕ್ರವೇ; ಸರ್ವರತ್ನಮಯಾಕೃತಿ. ಇದರ ವಿಸ್ತಾರ ನಾಲ್ಕು ಯೋಜನಗಳಷ್ಟು, ಎತ್ತರ ಹತ್ತು ಯೋಜನ ಎಂಬ ನಿರ್ದೇಶನವೂ, ಕೆಳಗೆ ದಪ್ಪನಾಗಿದ್ದು ಮೇಲೆ ಹೋದಂತೆ ಸಣ್ಣಗಾಗುವುದೆಂಬ ವರ್ಣನೆಯೂ ಇವೆ ('ಯಥೋತ್ತರಂ ಹ್ರಾಸಯುಕ್ತಃ ಸ್ಫೂಲತಃ ಕೂಬರೋಜ್ವಲಃ') ಈ ರಥದ ಚಕ್ರಗಳು ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದಗಳೆಂಬ ನಾಲ್ಕುವೇದಗಳು ('ಚತುರ್ವೇದಮಹಾಚಕ್ರಃ'), ರಥಕ್ಕೆ ಕಟ್ಟಿರುವ ಕುದುರೆಗಳು ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಕುದುರೆಗಳು ('ಪುರುಷಾರ್ಥಮಹಾಹಯಃ'). ಭಂಡಾಸುರನೊಂದಿಗೆ ದೇವಿ ಕಾದಾಡುವಾಗ ಈ ರಥದ ಪಾತ್ರ ದೊಡ್ಡದು; ಪರಾಕ್ರಮ ಬಹುವಾದುದು ('ಭಂಡಾಸುರಮಹಾಯುದ್ಧೇ ಕೃತಸಾಹಸಿಕಕ್ರಿಯಃ). ರಥಗಳಲ್ಲೆಲ್ಲ ಇದೇ ಮುಖ್ಯವಾದುದು (ರಥಮೂರ್ಧನ್ಯಃ).

ಚಿಂತಾಮಣಿಗೃಹದ ವಾಯವ್ಯಭಾಗದಲ್ಲಿ ದೇವಿಯ ಸಚಿವೆಯಾದ ಮಂತ್ರಿಣೀ ಶ್ಯಾಮಲೆಯ ಏಳುಪರ್ವಗಳ ಗೇಯಚಕ್ರವಿದೆ, ಈಶಾನ್ಯಭಾಗದಲ್ಲಿ ದೇವಿಯ ಸೇನಾನಾಯಿಕೆಯಾದ ದಂಡಿನೀ-ವಾರಾಹಿಯ ಐದುಪರ್ವಗಳ ಕಿರಿಚಕ್ರವಿದೆ.

ಈ ಮೂರು ರಥಗಳಲ್ಲಿ ಸಾಧಕರು ಯಾವ ತಾರತಮ್ಯವನ್ನೂ ಎಣಿಸಬಾರದೆಂಬ ಕಿವಿಮಾತು ಬಂದಿದೆ. ಮೂರೂ ಸಮಾನವಾದುವೇ, ದೇವಿಯ ಅಂಗಗಳಂತೆ ಅವು (೩, ೪, ೩೬, ೧೩)

'ಏತದ್ರಥತ್ರಯಂ ಸರ್ವಕ್ಷೇತ್ರಶ್ರೀಪುರಪಂಕ್ತಿಷು।
ಸಮಾನಮೇವ ವಿಜ್ಞೇಯಂ ಅಂಗಸ್ಥಾ ದೇವತಾ ಯಥಾ।।

೫. ಶ್ರೀತತ್ತ್ವ ಚಿಂತನೆ

ಮೇಲೆ ಹೇಳಿದ ಪ್ರಾಕಾರಗಳೆಲ್ಲವೂ ಚಿಂತಾಮಣಿಗೃಹಕ್ಕೇ ಇರುವಂಥವು. ಈ ಪ್ರಾಕಾರಗಳ ಸಂಖ್ಯೆ ಇಪ್ಪತ್ತೈದು ಎಂಬುದು ಪ್ರಾಚೀನವಾದ ಉಲ್ಲೇಖ-

'ಅಯೋಮಯಸ್ತು ಪ್ರಥಮಃ ಪ್ರಾಕಾರಃ ಪರಿಕೀರ್ತಿತಃ।
ತದಂತಃ ಸೀಸರಚಿತಃ ಪ್ರಾಕಾರಃ ಸ್ಯಾದ್ ದ್ವಿತೀಯಕಃ ।।೧।।
ತತೋ ವಂಗಮಯಶ್ಚಾರಕೂಟಾಕಾರಸ್ತ್ವನಂತರಃ।
ತತಃ ಕಾಂಸ್ಯಮಯಸ್ತಾಮ್ರಪ್ರಾಕಾರೋ ರಾಜತಃ ಪರಃ।। ೨।।
ಸ್ವರ್ಣಾಕಾರಸ್ತತಶ್ಚೇತಿ ಹ್ಯಷ್ಟೌ ಧಾತುಮಯಾಃ ಪರಾಃ।
ಪುಷ್ಯರಾಗಮಯಃ ಪದ್ಮರಾಗರತ್ನಮಯಃ ಪರಃ ।। ೩।।
ಗೋಮೇಧಕಸ್ತತೋ ವಜ್ರಪ್ರಾಕಾರಃ ಸ್ಯಾತ್ತತಃ ಪರಃ।

ವೈಡೂರ್ಯಶ್ಚೇಂದ್ರನೀಲೇನ ಕೃತೋ ಮರಕತಃ ಪರಃ ॥ ೪ ॥
ಮೌಕ್ತಿಕೋ ವೈದ್ರುಮಶ್ಚಾನ್ಯೋ ನವರತ್ನಕೃತಃ ಪರಃ।
ವಿಚಿತ್ರರತ್ನ ಪ್ರಾಕಾರಶ್ಚೇತ್ಯೇಕಾದಶ ಸುಂದರಿ ॥ ೫ ॥
ನವರತ್ನಕೃತಾಂಸ್ತತ್ತ್ವಪ್ರಾಕಾರಾನಪಿ ಷಟ್ ಶ್ರುಣು।
ಅಹಂಕಾರ ಮಯಸ್ತಸ್ಮಾದಾಂತರಶ್ಚಿತ್ತಸಂಜ್ಞಿತಃ ॥ ೬॥
ತತೋ ಬುದ್ಧಿಮಯಸ್ತಸ್ಮಾದಿತರಸ್ತು ಮನೋಮಯಃ।
ತೇಜೋಮಯಸ್ತತೋ ಜ್ಞೇಯೋ ಮಹಾಶೃಂಗಾರ ಸಂಜ್ಞಿತಃ ॥ ೭॥
ಇತ್ಯೇವಂ ಕಥಿತಾಃ ಪಂಚವಿಂಶತ್ ಪ್ರಾಕಾರಕಾಃ ಶುಭಾಃ॥'

ಮೇಲಿನ ಒಕ್ಕಣೆಯಂತೆ ಮೊದಲ ಎಂಟು ಪ್ರಾಕಾರಗಳು ಧಾತುಮಯವಾದುವು (ಕಬ್ಬಿಣ, ಸೀಸ, ತಗರ, ಹಿತ್ತಾಳೆ, ಕಂಚು, ತಾಮ್ರ, ಬೆಳ್ಳಿ, ಚಿನ್ನ) ; ಮುಂದಿನ ಹನ್ನೊಂದು ರತ್ನಮಯವಾದುವು (ಪುಷ್ಯರಾಗ, ಪದ್ಮರಾಗ, ಗೋಮೇಧಕ, ವಜ್ರ, ವೈಡೂರ್ಯ, ಇಂದ್ರನೀಲ, ಮರಕತ, ಮುತ್ತು, ಹವಳ, ನವರತ್ನ, ವಿಚಿತ್ರರತ್ನ). ಮುಂದೆ ಆರು ಪ್ರಾಕಾರಗಳು ತತ್ತ್ವಮಯವಾದುವು (ಅಹಂಕಾರ, ಚಿತ್ತ, ಬುದ್ಧಿ, ಮನಸ್ಸು, ತೇಜಸ್ಸು, ಮಹಾಶೃಂಗಾರ)

ಪ್ರಾಕಾರಗಳ ಮತ್ತು ಚಿಂತಾಮಣಿಗೃಹವೆಂಬ ದೇವಿಯ ಆಲಯದ ವರ್ಣನೆಯು ತಾಂತ್ರಿಕಗ್ರಂಥಗಳಲ್ಲಿ ಬಂದಿರುವುದು ಹೀಗೆ. ಹೊರಗಿನ ಪ್ರಾಕಾರದ ಒಳಗೆ ಇನ್ನೊಂದು ಪ್ರಾಕಾರ ಎಂಬ ಕ್ರಮದಲ್ಲಿ ಈ ಪ್ರಾಕಾರಗಳಿವೆ; ಹೊರಗಿನದಕ್ಕಿಂತ ಒಳಗಿನದು ಎತ್ತರವಾಗಿದೆ. ಒಂದೊಂದು ಪ್ರಾಕಾರದಲ್ಲಿಯೂ ನಾಲ್ಕುದ್ವಾರಗಳು, ನಾಲ್ಕು ದಿಕ್ಕುಗಳಲ್ಲಿ; ದ್ವಾರದ ಮೇಲ್ಭಾಗದಲ್ಲಿ ಹೊಂಗಳಶಗಳು, ಪ್ರಾಕಾರಗಳ ನಡುವಣ ಪ್ರದೇಶದಲ್ಲಿ (ಕಕ್ಷೆಗಳಲ್ಲಿ) ಭೈರವರೇ ಮಾದಲಾಗಿ ರಕ್ಷಕರು. ಇವರೆಲ್ಲ ದೇವಿಯ ಆಜ್ಞಾಧಾರಕರು. ಒಳಗಿನ ಪ್ರಾಕಾರವನ್ನು ದಾಟಿದರೆ ದೇವಿಯ ನಿತ್ಯ ನಿವಾಸಸ್ಥಾನ. ಅದರ ಮುಂಭಾಗದಲ್ಲಿ ಬಲಿಪೀಠ, ಇದರ ದಕ್ಷಿಣಭೂಭಾಗದಲ್ಲಿ ರಾಜರಾಜೇಶ್ವರ, ಪೂರ್ವದಲ್ಲಿ ಕ್ಷೇತ್ರಪಾಲ, ಉತ್ತರದಲ್ಲಿ ಭೂತನಾಥ, ಪಶ್ಚಿಮದಲ್ಲಿ ವಟುಕಭೈರವ, ಉತ್ತರದಲ್ಲಿ ಮಂಜಿಷ್ಠಭೈರವ ಇವರು ಬಲಿದೇವತೆಗಳು. ಈ ನಿವಾಸಸ್ಥಾನದ ಎದುರಿನಲ್ಲಿ ಗಣಪತಿ ಮತ್ತು ಸ್ಕಂದ ಇವರ ಆಲಯಗಳಿವೆ. ಈ ಆಲಯಗಳ ಹೊರಗೆ ಕೋಟಿ ಯೋಜನ ದೂರದಲ್ಲಿ ಶೃಂಗಾರಪರಿಖೆಯ ಹೊರವಲಯವಿರುವುದು.

ಶೃಂಗಾರ ಪರಿಖೆಯನ್ನು ದಾಟಿ ಹೋದರೆ ಮಹಾಪದ್ಮಾಟವಿ (ಪದ್ಮವನ) ಕಾಣುವುದು. ಈ ವನದ ನಡುವೆ ಇರುವ ಮಹಾಪದ್ಮ ರತ್ನದ್ವೀಪದಲ್ಲಿ ತೋರಿಕೊಂಡದ್ದು. ಮಹಾಪದ್ಮದ ಮೇಲೆ ರತ್ನವೇದಿಕೆ, ಅದರ ಮೇಲೆ ಮಹಾವೇದಿ. ಇದರ ಮೇಲೆ ಚಿಂತಾಮಣಿಗೃಹ.

ಚಿಂತಾಮಣಿಯೆನ್ನುವ ಮಣಿವಿಶೇಷ ಮನಸ್ಸಿನಲ್ಲಿ ಬಯಸಿದ್ದನ್ನೆಲ್ಲ ಈಡೇರಿಸುವ ಸಾಮರ್ಥ್ಯವುಳ್ಳದ್ದು; ಸರ್ವಕಾಮಪ್ರದವಾದದ್ದು. ಚಿಂತೆಯಿಂದ, ಎಂದರೆ ಧ್ಯಾನಧಾರಣಗಳಿಂದ, ಕಲ್ಪಿಸಿಕೊಳ್ಳುವ ಮನಃಸ್ಥಿತಿವಿಶೇಷವೆಂದೂ ಅರ್ಥವಿದೆ. 'ಸಾಮರ್ಥ್ಯಸಂಪಾದಿತವಾಂಛಿತಾರ್ಥಃ ಚಿಂತಾಮಣಿಃ' ಎಂಬ ನಿರುಕ್ತಿಯೂ ಇದೆ. ಪಾದ್ಮೋತ್ತರಖಂಡದಲ್ಲಿ ಚಿಂತಾಮಣಿಯು ಲೋಹವನ್ನು ಕಾಂಚನವನ್ನಾಗಿ ಪರಿವರ್ತಿಸುವ ಗುಣವುಳ್ಳದ್ದು ಎಂದು ಹೇಳಿದೆ. ಅಖಂಡವಾದ ಒಂದು ಚಿಂತಾಮಣಿಯಿಂದ ಮಾಡಿದ್ದು ದೇವಿಯ ಚಿಂತಾಮಣಿಗೃಹ. ಅದಕ್ಕೆ ತ್ರಿಪುರಾಲಯವೆಂದೂ ಹೆಸರಿದೆ.

ಗೃಹದ ಕೆಳಭಾಗದಲ್ಲಿರುವ ಅಗ್ನಿಕುಂಡ (ಆಗ್ನೇಯ ದಿಕ್ಕಿನಲ್ಲಿ), ನವಚಕ್ರವೆನಿಸಿಕೊಂಡ ಚಕ್ರರಾಜರಥ (ನೈಋತ್ಯ ಭಾಗದಲ್ಲಿ), ಷಟ್ಚಕ್ರವೆನಿಸಿಕೊಂಡ ಗೇಯರಥ (ವಾಯುವ್ಯದಿಕ್ಕಿನಲ್ಲಿ), ಪಂಚಚಕ್ರವೆನಿಸಿಕೊಂಡ ಕಿರಿರಥ (ಈಶಾನ್ಯ ದಿಕ್ಕಿನಲ್ಲಿ) ಎಂಬ ಮೂರು ರಥಗಳಿವೆ. ಈ ರಥಗಳಿಗೂ ಕೆಳಭಾಗದಲ್ಲಿ ರತ್ನವೇದಿಕೆ; ಅದರಲ್ಲಿ ಅರ್ಘ್ಯಪಾತ್ರೆ.

ಚಿಂತಾಮಣಿಗೃಹದ ಸುತ್ತ ಒಂದೊಂದು ದಿಕ್ಕಿನಲ್ಲಿಯೂ ಒಂದರಂತೆ ನಾಲ್ಕು ಆಮ್ನಾಯಗೃಹಗಳು. ಒಂದೊಂದು ಆಮ್ನಾಯಗೃಹದಲ್ಲಿಯೂ ಒಂಬತ್ತು ಪೀಠಗಳು, ಅವುಗಳಲ್ಲಿ ಶಕ್ತಿಯರು. ನಡುವೆ ಪ್ರಧಾನ ಪೀಠದಲ್ಲಿರುವ ಶಕ್ತಿಯೇ ದೇವಿಯ ಸಾಕ್ಷಾತ್ ಪರಿಚಾರಿಕೆ. ಪೂರ್ವಾಮ್ನಾಯದಲ್ಲಿ ಮಾತಂಗಿ, ದಕ್ಷಿಣಾಮ್ನಾಯದಲ್ಲಿ ವಾರಾಹಿ, ಪಶ್ಚಿಮಾಮ್ನಾಯದಲ್ಲಿ ಭುವನೇಶಿ, ಉತ್ತರಾಮ್ನಾಯದಲ್ಲಿ ಕಾಲಸಂಕರ್ಷಿಣಿ. ಚಿಂತಾಮಣಿಗೃಹದ ಕೆಳಗಿರುವುದು ಅಧರಾಮ್ನಾಯ; ಇಲ್ಲಿನ ಪ್ರಧಾನದೇವತೆ ಮಹಾಮಾಯೆ.

ಚಿಂತಮಣಿಗೃಹದ ಒಳಗಿರುವುದು ಊರ್ಧ್ವಾಮ್ನಾಯ. ಇಲ್ಲಿ ಹೊರಗಣ ಪಂಚಾಮ್ನಾಯಗಳಿಗೆ ಅಧಿಪತಿಯಾದ ಶಂಭುನಾಥನೆಂಬ ಶಿವನೂ ಅನ್ನಪೂರ್ಣೇಶ್ವರಿಯೆಂಬ ಶಕ್ತಿಯೂ ಇರುವರು. ಚಿಂತಾಮಣಿಗೃಹದ ಬಾಗಿಲ ಹೊರಗೆ ದಕ್ಷಿಣದಲ್ಲಿ ಮಾತಂಗಿ, ಉತ್ತರದಲ್ಲಿ ವಾರಾಹೀ ಇವರಿಬ್ಬರೂ ಎದುರುಬದರಾಗಿ ನಿಂತು ದೇವಿಯ ಆಜ್ಞಾಧಾರಕರಾಗಿರುವರು. ಇವರ ಅನುಜ್ಞೆಯಿಲ್ಲದೆ ಚಿಂತಾಮಣಿಗೃಹದೊಳಗೆ ಯಾರೂ ಪ್ರವೇಶಿಸಲಾರರು

ಚಿಂತಾಮಣಿಗೃಹದೊಳಗೆ ನಡುವೆ ಎಂಟುದಳಗಳ ಕಮಲವೇ ಸಿಂಹಾಸನ. ಈ ಸಿಂಹಾಸನಕ್ಕೆ ಪೀಠಶಕ್ತಿಯರು ಒಂಬತ್ತುಮಂದಿ. ಸಿಂಹಾಸನದ ಮಧ್ಯಭಾಗದಲ್ಲಿ ಮಾತೃಕಾಚಕ್ರಮಂಡಲ. ಅದರ ಹದಿನಾರು ಆವರಣಗಳಲ್ಲಿ, ಒಂದೊಂದರಲ್ಲೂ ಮೂವತ್ತಾರು ಮಾತೃಕಾಮೂರ್ತಿಯರು. ಅದರ ನಡುವಣ ಬಿಂದುವೆಂಬ ಮಹಾಪೀಠದಲ್ಲಿ ಅಮೃತಾಸನ, ಅದರ ಮಧ್ಯೆ ಪೋತಾಂಬುಜಾಸನ, ಅದರ ನಡುವೆ ಸುದರ್ಶನಚಕ್ರ. ನಾಲ್ಕು ಆವರಣಗಳು, ಐದು ಪೀಠಗಳೂ ಇರುವ ಈ ಸುದರ್ಶನಚಕ್ರದ ನಡುವೆ ಶ್ರೀಚಕ್ರವಿದೆ. ನವಾವರಣವುಳ್ಳ ಶ್ರೀಚಕ್ರದ ಮಧ್ಯತ್ರಿಕೋಣವನ್ನು ಕೌಲಸಂಪ್ರದಾಯದವರೂ ಬಿಂದುವನ್ನು ಸಮಯಿಗಳೂ ಲಲಿತಾದೇವಿಯ ಸ್ಥಾನವೆಂದು ಗುರುತಿಸುತ್ತಾರೆ.

'ಚಿಂತಾಮಣಿಸ್ತವ' ಎಂಬ ಪ್ರಕರಣಗ್ರಂಥದಲ್ಲಿ ರತ್ನಮಯದ್ವೀಪ, ಅದರಲ್ಲಿ ಎಂದೂ ವಸಂತಋತುವೇ ವಿಜೃಂಭಿಸುತ್ತಿರುವ ನಂದನವನ, ಈ ಸುಂದರನಂದನವನದಲ್ಲಿ ಮನೋಹರವಾದ ಪದ್ಮವನವೆಂಬ ಉಪವನ, ಅದರೊಳಗೆ ಕದಂಬಕಾಂತಾರ, ಅಲ್ಲಿ ಮಣಿಮಂಡಪ, ಅದರ ಮಧ್ಯದಲ್ಲಿ 'ಮುಕ್ತಾವಿತಾನೋಜ್ವಲವೇದಿ', ಅದರ ಮೇಲೆ ಮಹಾರ್ಘವಾದ ರತ್ನಮಯವಾದ ಸಿಂಹಾಸನದ ಮೇಲೆ ಶ್ರೀಚಕ್ರ

'ಭೂಮಿಂ ಸ್ಮರಾಬ್ಜಂ ಪುನರಷ್ಟಪತ್ರಂ
ಚತುರ್ದಶಾರಂ ಚ ದಶಾರಯುಗ್ಮಂ।
ವಸುತ್ರಿಕೋಣಾಂಚಿತ ಬಿಂದುಚಕ್ರಂ
ನಮಾಮ್ಯಹಂ ಸರ್ವಫಲಪ್ರದಾರ್ಹಂ॥

ವಾಮಕೇಶ್ವರತಂತ್ರದಲ್ಲಿಯೂ

'ಶ್ರೀಮತ್ ತ್ರಿಕೋಣ ಬಹಿರಷ್ಟಕೋಣಬಾಹ್ಯ
ದಿಕ್ಕೋಣಯುಕ್ಪರ ಚತುರ್ದಶಕೋಣಯುಕ್ತಂ।
ವೃತ್ತಾಷ್ಟಷೋಡಶದಲಾನಲ ವೃತ್ತಲೋಕ
ಭೂಯಶ್ಚತುರ್ಮುಖಿಮಹಂ ಪ್ರಣಮಾಮಿ ನಿತ್ಯಂ।।

ಎಂದು ಶ್ರೀಚಕ್ರದ ಒಂಬತ್ತು ವಿವರಗಳನ್ನು ನಿರ್ದೇಶಿಸಲಾಗಿದೆ.

ಈ ಚಕ್ರದಮೇಲೆ 'ಕಾಮಿತಕಲ್ಪವೃಕ್ಷ'ವಾದ, 'ಪರಾನಂದರಸಾಭಿಪನ್ನ' ನಾದ ಕಾಮೇಶ್ವರ. ಕಾಮೇಶ್ವರನ ತೊಡೆಯ ಮೇಲೆ ('ತದಂಕಸಂಸ್ಥಾ') ಅವನ ಮಡದಿಯಾದ ಕಾಮೇಶ್ವರಿ, ಲಲಿತಾದೇವಿ.

ಇಪ್ಪತ್ತೈದು ಪ್ರಾಕಾರಗಳಿಗೂ ಆಧ್ಯಾತ್ಮಿಕವಾದ ಸಂಕೇತಗಳಿವೆ. ಇವನ್ನು ಅನುಸಂಧಾನ ಮಾಡಿಯೇ ಶ್ರೀವಿದ್ಯಾಪೂಜೆಯನ್ನು ಮಾಡುವುದು ಕ್ರಮ. ನಿದರ್ಶನಕ್ಕೆ 'ಶ್ರೀವಿದ್ಯಾಸಪರ್ಯಾಪದ್ಧತಿ' ಯಲ್ಲಿ ದೇಹರಕ್ಷಾ, ದಿಗ್ಬಂಧ, ಪುಷ್ಪಾಂಜಲಿ, ಲಘುಪ್ರಾಣಪ್ರತಿಷ್ಠಾ ಎಂಬ ಉಪಚಾರಗಳು ನಡೆದಮೇಲೆ 'ಮಂದಿರಪೂಜೆ'ಯೆಂಬ ಕ್ರಮವುಂಟು. ಇದರಲ್ಲಿ ಮೂಲಮಂತ್ರವನ್ನು ಜಪಿಸುತ್ತಾ ಇಪ್ಪತ್ತೈದು ಪ್ರಾಕಾರಗಳಿಗೂ ನಮಸ್ಕಾರ ಸಲ್ಲಿಸುವ ವಾಡಿಕೆ. ಪ್ರಾಕಾರಗಳ ಎಣಿಕೆಯನ್ನು' ಅಮೃತಾಂಭೋನಿಧಿ' ಯಿಂದ ಆರಂಭಿಸುತ್ತಾರೆ.

ಇದು ಮಂದಿರದ ಹೊರಗಿರುವ ಅನಾದ್ಯನಂತ ಚಿತಿ ಶಕ್ತಿಯನ್ನು ಪ್ರತಿನಿಧಿಸುತ್ತದೆ. ಅನಂತರ ರತ್ನದ್ವೀಪ (ಜಡಪ್ರಪಂಚ ಅಥವಾ ಉಪಾಸಕನ ಸ್ಥೂಲ ದೇಹದ ಸಂಕೇತ), ನಾನಾವೃಕ್ಷಮಹೋದ್ಯಾನ (ಎಂದರೆ ಹಲವು ಕರ್ಮವಾಸನೆಗಳಿಂದಾದ ಲಿಂಗಶರೀರ), ಕಲ್ಪವಾಟಿಕೆ (ಸಂಕಲ್ಪಗಳು), ಸಂತಾನವಾಟಿಕೆ (ಹೃದಯ, ಆಕಾಶ, ಶ್ರೋತ್ರೇಂದ್ರಿಯ), ಹರಿಚಂದನವಾಟಿಕೆ (ಅಹಂಕಾರ, ಪೃಥ್ವೀ, ಘ್ರಾಣೇಂದ್ರಿಯ), ಮಂದಾರವಾಟಿಕೆ (ಬುದ್ಧಿ, ಅಗ್ನಿ, ದರ್ಶನೇಂದ್ರಿಯ), ಪಾರಿಜಾತವಾಟಿಕೆ (ಚಿತ್ತ, ಜಲ, ರಸನೇಂದ್ರಿಯ), ಕದಂಬವಾಟಿಕೆ (ಮನಸ್, ವಾಯು, ಸ್ಪರ್ಶೇಂದ್ರಿಯ), ಪುಷ್ಪರಾಗರತ್ನ ಪ್ರಾಕಾರ (ಮಾಂಸಧಾತು), ಪದ್ಮರಾಗರತ್ನಪ್ರಾಕಾರ (ಓಜೋಧಾತು), ಗೋಮೇಧಕರತ್ನಪ್ರಾಕಾರ (ಮೇದಸ್ಸು ಎಂಬ ಧಾತು), ವಜ್ರರತ್ನಪ್ರಾಕಾರ (ಅಗ್ನಿಧಾತು), ವೈಡೂರ್ಯರತ್ನಪ್ರಾಕಾರ (ತ್ವಗ್ಧಾತು), ಇಂದ್ರನೀಲರತ್ನಪ್ರಾಕಾರ (ರೋಮ), ಮುಕ್ತಾರತ್ನಪ್ರಾಕಾರ (ಶುಕ್ರಧಾತು), ಮರಕತರತ್ನಪ್ರಾಕಾರ (ಮಜ್ಜಾಧಾತು), ವಿದ್ರುಮರತ್ನಪ್ರಾಕಾರ (ರುಧಿರಧಾತು) ಇವುಗಳಿಗೆ ವಂದನೆ ನಡೆಯುತ್ತದೆ.

ಮುಂದೆ ಮಾಣಿಕ್ಯಮಂಟಪ (ಹೃದಯ), ಸಹಸ್ರಸ್ತಂಭಮಂಟಪ (ಶಿರೋಭಾಗದಲ್ಲಿರುವ ಸಹಸ್ರಾರಕಮಲವೆಂಬ ಚಕ್ರ) ಅಮೃತವಾಪಿಕೆ (ದ್ವಾದಶಾಂತವೆಂಬ ಚಕ್ರ), ಆನಂದವಾಪಿಕೆ (ಲಲಾಟಮಧ್ಯ), ವಿಮರ್ಶವಾಪಿಕೆ (ಭ್ರೂಮಧ್ಯ), ಬಾಲಾತಪೋದ್ಗಾರ (ಸೂರ್ಯಬಿಂಬ, ಪ್ರವೃತ್ತಿ), ಚಂದ್ರಿಕೋದ್ಗಾರ (ಚಂದ್ರಬಿಂಬ, ನಿವೃತ್ತಿ), ಮಹಾಶೃಂಗಾರಪರಿಖಾ (ಲಂಬಿಕಾಗ್ರ ಅಥವಾ ಇಂದ್ರಯೋನಿ). ಇಲ್ಲಿ ಬಾಲಾತಪ ಉದ್ಗಾರ, ಚಂದ್ರಿಕಾ- ಉದ್ಗಾರ ಎನ್ನುವಾಗ 'ಉದ್ಗಾರ' ಎಂಬ ಮಾತಿಗೆ ಅರಿವಿಗೆ ನೆರವಾಗುವ ಬಾಗಿಲು ಅಥವಾ ಸಾಧನ ಎಂಬರ್ಥವಿದೆ ('ಉದ್ಗಾರೋ ಲೋಹಿತವರ್ಣಂ ಸಮಾಹ್ಲಾದಕಂ ವಸ್ತು; ಜ್ಞಾನಸಾಧನಂ ದ್ವಾರಭೂತಂ'). ಇಲ್ಲಿನ ಎರಡು ಉದ್ಗಾರಗಳು ನಮ್ಮ ಎರಡು ಕಣ್ಣುಗಳು.

ಶೃಂಗಾರಪರಿಖ ಎನ್ನುವಾಗ ಶೃಂಗಾರ ಎಂದರೆ ಶಿಖರದ ತುದಿ (ಶೃಂಗ ಎಂದರೆ ಶಿಖರ). ಎಲ್ಲಿ ಐದು ಜ್ಞಾನೇಂದ್ರಿಯಗಳೂ ಐದು ಕರ್ಮೇಂದ್ರಿಯಗಳೂ ಮನಸ್ಸೂ ವಿರಮಿಸುವವೋ ಆ ಸ್ಥಳ; ಇದನ್ನು ಯೋಗದಲ್ಲಿ ಲಂಬಿಕಾಗ್ರ ಅಥವಾ ಇಂದ್ರಯೋನಿ ಎಂದು ಕರೆಯುತ್ತಾರೆ; ನಾಲಗೆ ಶುರುವಾಗುವ ಎಡೆ.

ಮಹಾಪದ್ಮಾಟವಿಯೆಂದರೆ ಸಹಸ್ರಾರಚಕ್ರ. ತಾಂತ್ರಿಕಯೋಗದಲ್ಲಿ ಎರಡು ಸಹಸ್ರಾರಗಳ ಎಣಿಕೆಯಿದೆ. ಮೊದಲನೆಯದರ ದಳಗಳು ಕೆಳಮುಖವಾಗಿವೆ; ಇದು ತಲೆಯ ಮೇಲಿರುವ ಚಕ್ರ. ಇನ್ನೊಂದರ ದಳಗಳು ಮೇಲುಮುಖವಾಗಿರುತ್ತವೆ; ಇದು ಮೂಲಾಧಾರದ ಕೆಳಗೆ ಇರುವ ಚಕ್ರ. ಚಿಂತಾಮಣಿಗೃಹವೆಂದರೆ ಸತ್ತ್ವಪ್ರಚುರವಾದ ಮನಸ್ಸು. ದೇವಿಯ ನೆಲೆ ಅಲ್ಲಿಯೇ.

ಹೀಗೆ ಶ್ರೀಪುರವರ್ಣನೆಯಲ್ಲಿ ಹೇಳಿರುವ ಇಪ್ಪತ್ತೈದು ಪ್ರಾಕಾರಗಳೂ ದಿಟವಾಗಿ ತತ್ತ್ವಗಳೇ. "ಶಿವಶಕ್ತಿಯೋಗವು ಇಪ್ಪತ್ತಾರನೆಯ ತತ್ತ್ವವು. ಸರ್ವತತ್ತ್ವಕ್ಕೂ ಅತೀತವಾಗಿ ಅನ್ಯವಾದುದು" ಎಂದು ಜಕ್ಕಣಾಮಾತ್ಯನು 'ಷಟ್‌ಚಕ್ರದೀಪಿಕೆ' ಯಲ್ಲಿ (ಸೌಂದರ್ಯಲಹರೀಕನ್ನಡ ಟೀಕೆ) ಬರೆದಿದ್ದಾನೆ. ಇವನ ಕಾಲ ಹದಿನೇಳನೇ ಶತಮಾನ. ಕನ್ನಡದೇಶದಲ್ಲಿ ಶ್ರೀವಿದ್ಯೆ ಪ್ರಚಲಿತವಾಗಲು ಇವನ ಪಾತ್ರವೂ ಇದ್ದಿತು. ಇವನು ಶಿವಶಕ್ತಿಯೋಗವೆಂದರೆ ಶ್ರೀಚಕ್ರವೆ ಎಂದು ಹೇಳಿದ್ದಾನೆ (ಶ್ಲೋಕ ಒಂದರ ಮೇಲೆ ಟೀಕೆ)

"ನಿರಾಕಾರ ಆಕಾಶರೂಪವಾಗಿ ಇದ್ದಂಥಾ ಪರಶಿವನಿಗೆ ಚರಿಸುವದು ಕೂಡದು. ಸ್ತ್ರೀಪುರುಷನ್ಯಾಯದಿಂದ ಶಿವನು ಶಕ್ತಿಯೊಡನೆ ಕೂಡಿದವನಾಗಿ ಲೋಕವನ್ನು ಸೃಷ್ಟಿಯ ಮಾಡುವುದಕ್ಕೆ ಸಮರ್ಥನು. ಸ್ತ್ರೀಹೊರತಾಗಿ ಕೇವಲ ಪುರುಷನು ಸಂತಾನವ ಪಡೆಯಲರಿಯನಲ್ಲಾ. ಈ ಅರ್ಥವು ಆಗಮರಹಸ್ಯದಲ್ಲಿದೆ. ಶಿವಶಕ್ತಿಯೋಗವು ಶಿವಶಬ್ದದಿಂದ ನವಯೋನಿರೂಪವಾದ ಶ್ರೀಚಕ್ರದಲ್ಲಿ ನಾಲ್ಕುಯೋನಿರೂಪವಾದ ಅರ್ಧಚಕ್ರವು ಹೇಳಲ್ಪಟ್ಟತ್ತು. ಶಕ್ತಿಶಬ್ದದಿಂದ ಉಳಿದ ಐದು ಯೋನಿರೂಪವಾದ ಅರ್ಧಚಕ್ರವು ಹೇಳಲ್ಪಟ್ಟಿತ್ತು. ಈ ಎರಡು ಅರ್ಧವು ಕೂಡಲಾಗಿ ಒಂಬತ್ತುಯೋನಿರೂಪವಾದ ಶ್ರೀ ಚಕ್ರವಹುದು. ಈ ಶ್ರೀಚಕ್ರದಿಂದಲೆ ಲೋಕದ ಉತ್ಪತ್ತಿಸ್ಥಿತಿಲಯಗಳು ಆಗುವವೆಂದು ಮುಂದೆ ಬರೆದೇನು"

ಇವನ ಪ್ರಕಾರ ಶ್ರೀಚಕ್ರವು ಇಪ್ಪತ್ತಾರನೆಯ ತತ್ತ್ವ; ಶ್ರೀತತ್ತ್ವ. ನಮ್ಮಲ್ಲಿರುವ ಷಟ್ ಚಕ್ರಗಳಿಗೂ ತತ್ತ್ವಗಳಿಗೂ ಸಮಭಾವವನ್ನು ಹೇಳುತ್ತ ಮೂಲಾಧಾರ ಚಕ್ರವು ಗುದಾಸ್ಥಾನ, ಭೂತತ್ತ್ವ; ಮಣಿಪೂರಚಕ್ರವು ನಾಭಿಸ್ಥಾನ, ಬಲತತ್ತ್ವ; ಸ್ವಾಧಿಷ್ಠಾನಚಕ್ರವು ಲಿಂಗಸ್ಥಾನ, ಅಗ್ನಿತತ್ತ್ವ; ಅನಾಹತಚಕ್ರವು ಹೃದಯಸ್ಥಾನ, ವಾಯುತತ್ತ್ವ; ವಿಶುದ್ಧಿಚಕ್ರವು ಕಂಠಸ್ಥಾನ, ಆಕಾಶತತ್ತ್ವ; ಆಜ್ಞಾಚಕ್ರವು ಭ್ರೂಮಧ್ಯ, ಮನಸ್ಸಿನ ತತ್ತ್ವ ಎಂದೆಲ್ಲ ವಿವರಿಸಿ (ಶ್ಲೋಕ ೯ರ ಟೀಕೆ)

"ಮೂಲಾಧಾರ ಆದಿಯಾಗಿ ವಿಶುದ್ಧಿಚಕ್ರ ಪಂಚಭೂತಗಳು ಆದಿಯಾಗಿ ವಿಶುದ್ಧಿಚಕ್ರ ಪರಿಯಂತರ ಐದು ಚಕ್ರದಲ್ಲಿ ಪಂಚಭೂತಗಳು ತನ್ಮಾತ್ರವೈದು ಕೂಡಾ ಹತ್ತು ತತ್ತ್ವವು. ಆಜ್ಞಾಚಕ್ರದಲ್ಲಿ ಇದ್ದ ಮನದ ತತ್ತ್ವದಿಂದ ಜ್ಞಾನೇಂದ್ರಿಯ ಐದು ಕರ್ಮೇಂದ್ರಿಯವೈದು ಮನಸ್ತತ್ತ್ವ ಆಜ್ಞಾಪರಿಯಂತರ ಹೇಳಲ್ಪಟ್ಟಿತು. ಪತಿಯಾದ ಸದಾಶಿವನೊಡನೆ ಸಹಸ್ರಕಮಲದಲ್ಲಿ ಕ್ರೀಡಿಸುತ್ತಿದ್ದೆ ಎಂದದ್ದರಿಂದ ಮಾಯಾ ಶುದ್ಧವಿದ್ಯಾ ಮಹೇಶ್ವರ ಸದಾಶಿವ ಎಂಬ ಈ ನಾಲ್ಕು ತತ್ತ್ವವು ಹೇಳಲ್ಪಟ್ಟಿತು.,

ಎಲ್ಲವೂ ಕೂಡ ಇಪ್ಪತ್ತೈದು ತತ್ತ್ವಗಳು. ಅದುಕಾರಣ ಭಗವತಿಯು ಇಪ್ಪತ್ತುನಾಲ್ಕು ತತ್ತ್ವ ದಾಟಿದ ಇಪ್ಪತ್ತೈದು ತತ್ತ್ವವಾಗಿದ್ದಂಥಾ ಸದಾಶಿವನೊಡನೆ ಕ್ರೀಡಿಸಿ ಐಕ್ಯದಿಂದ ಇಪ್ಪತ್ತಾರುತತ್ತ್ವವಾಗಿದ್ದಂಥಾ ಪರಮಾತ್ಮವೆಂದು ಹೇಳುವರು.

ಅದೀಗ ಸಾದಾಖ್ಯಕಲೆ. ಇಪ್ಪತ್ತೈದೇ ತತ್ತ್ವವೆಂದು ವೇದದಲ್ಲಿ ಹೇಳಿದೆ, ಅದು ಸದಾಶಿವತತ್ತ್ವ ಪರಿಯಂತರ ಹೇಳಿದ್ದು, ಸದಾಶಿವ ಶಕ್ತಿಯ ಐಕ್ಯವ ಕೆಳಗೆ ಇಹದರಿಂದ ಶ್ರೀಚಕ್ರಮಧ್ಯವು ಬಿಂದುಸ್ಥಾನವು"

ಶಿರಸ್ಸಿನಲ್ಲಿ ಸಹಸ್ರದಳ ಕಮಲಮಧ್ಯದಲ್ಲಿರುವ ಚಂದ್ರಮಂಡಲವೇ ಶ್ರೀಚಕ್ರವೆಂದು ಸಮಯಿಗಳ ಮತವೆಂದೂ ಅದೇ ಹೊರಗಣಚಂದ್ರಮಂಡಲವೂ ಹೌದೆಂದು ಲಕ್ಷ್ಮೀಧರನ ಅಭಿಪ್ರಾಯವೆಂದೂ ಇದೇ ಟೀಕೆ ಹೇಳುತ್ತದೆ. ನವಯೋನ್ಯಾತ್ಮಕವಾದ ದೇಹಕ್ಕೆ ಹತ್ತನೆಯ ಯೋನಿಯು ಬಿಂದುಸ್ಥಾನ.

'ಶಿವಶಕ್ತ್ಯಾತ್ಮಕಂ ಸಿದ್ಧಂ ಜಗದೇತಚ್ಚರಾಚರಂ'

ಎಂಬ ಕಾಮಿಕಾಗ್ರಂಥದ ವಚನಕ್ಕೆ ಜಕ್ಕಣಾಮಾತ್ಯನು ಅರ್ಥ ಬರೆಯುತ್ತ

> "ಚರವೆಂಬುದು ಪಿಂಡಾಂಡವು. ಅಚರವೆಂಬುದು ಬ್ರಹ್ಮಾಂಡವು. ಅದುಕಾರಣ ಸರ್ವತತ್ತ್ವಾತೀತ ಶಿವಶಕ್ತಿಯೋಗವು."

ಎಂದು ಹೇಳಿದ್ದಾನೆ. ಮುಂದೆ (೩೨ ಶ್ಲೋಕದ ಟೀಕೆ) ಸಮಯಿಮತಾನುಸಾರ ಅನುಷ್ಠಾನವನ್ನು ವಿವರಿಸುತ್ತ

> "ಸಹಸ್ರಕಮಲದ ಚತುಷ್ಕೋಣಮಧ್ಯ ಬಿಂದುಸ್ಥಾನ. ಹಾಗಾದರು ಪುರಶ್ಚರಣಸಮಯದಲ್ಲಿ ಹೃದಯ ಕಮಲದಲ್ಲಿ ತ್ರಿಕೋಣಮಧ್ಯದಲ್ಲಿ ಬಿಂದುವುಂಟಾದ ಶ್ರೀಚಕ್ರಧ್ಯಾನವ ಮಾಡಿ ಆ ಚಕ್ರತ್ರಿಕೋಣಬಿಂದು ಸ್ಥಾನದಲ್ಲಿ ತ್ರಿಪುರಸುಂದರಿಯ ಧ್ಯಾನವ ಮಾಡುವದು"

ಎಂದು ಸೂಚಿಸಿದ್ದಾನೆ.

ಮೇಲೆ ಹೇಳಿದ ಪ್ರಮಾಣದಂತೆ ತ್ರಿಪುರಸುಂದರಿ (ಲಲಿತಾಂಬಿಕೆ, ರಾಜರಾಜೇಶ್ವರಿ)ಯ ರೂಪಕಲ್ಪನೆ ಮಾಡಿಕೊಳ್ಳಲಾಗಿದೆ. ಇಪ್ಪತ್ತನಾಲ್ಕು ತತ್ತ್ವಗಳಲ್ಲಿ ಕಡೆಯ ನಾಲ್ಕು ಸೃಷ್ಟಿ, ಸ್ಥಿತಿ, ಸಂಹಾರ ಮತ್ತು ತಿರೋಧಾನವೆಂಬ ನಾಲ್ಕು ಶಕ್ತಿಗಳನ್ನು ಸಂಕೇತಿಸುವ ಬ್ರಹ್ಮ, ವಿಷ್ಣು, ರುದ್ರ ಮತ್ತು ಈಶ್ವರ. ಇವರು ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ ಮತ್ತು ಅನಾಹತವೆಂಬ ನಾಲ್ಕು ಚಕ್ರಗಳಲ್ಲಿರುವ ದೇವತೆಗಳು. ಈ ನಾಲ್ವರು ಶಕ್ತಿಗಳನ್ನು ಮಂಚದ ನಾಲ್ಕು ಕಾಲುಗಳಂತೆ ಭಾವಿಸಿಕೊಂಡು, ಈ ಕಾಲುಗಳ ಮೇಲಿರುವ ಮಂಚದ ಹಲಗೆಯೇ (ಮಂಚಫಲಕ) ಸದಾಶಿವತತ್ತ್ವ (ಇಪ್ಪತ್ತೈದನೆಯ ತತ್ತ್ವ)ವೆಂದು ಬಗೆದು, ಅದು ಅನುಗ್ರಹಶಕ್ತಿಯೆಂದೂ ವಿಶುದ್ಧಿಚಕ್ರದಲ್ಲಿರುವುದೆಂದೂ ಹೇಳುತ್ತಾರೆ. ಈ ಹಲಗೆಯ ಮೇಲೆ ಹಾಸಿರುವ 'ಹಂಸತೂಲಿಕಾತಲ್ಪ' ಸುಷುಪ್ತಿ (ಪ್ರಲಯ) ಸೂಚಕವಾದದ್ದು; ಆಜ್ಞಾಚಕ್ರದ ಸಂಕೇತ. ಈ ತಲ್ಪದ ಮೇಲೆ ಕುಳಿತಿರುವ ದೇವಿಯೇ ಇಪ್ಪತ್ತಾರನೆಯ ತತ್ತ್ವ; ಶ್ರೀತತ್ತ್ವ; ಸಹಸ್ರಾರಕಮಲ ಚಕ್ರದಲ್ಲಿರುವವಳು.

ವಾಮಕೇಶ್ವರತಂತ್ರಕ್ಕೆ ಸೇರಿದ 'ಬಹುರೂಪಾಷ್ಟಕ' ವೆಂಬ ಗ್ರಂಥದಲ್ಲಿ ಇದನ್ನೆ ಸಂಗ್ರಹವಾಗಿ ಹೀಗೆ ಹೇಳಿದೆ -

'ಬಿಂದುಸ್ಥಾನಂ ಸುಧಾಸಿಂಧುಃ ಪಂಚಯೋನ್ಯಃ ಸುರದ್ರುಮಾಃ।
ತತ್ರೈವ ನೀಪಶ್ರೇಣೀ ಚ ತನ್ಮಧ್ಯೆ ಮಣಿಮಂಟಪಂ॥
ತತ್ರ ಚಿಂತಾಮಣಿಕೃತಂ ದೇವ್ಯಾ ಮಂದಿರಮುತ್ತಮಂ।
ಶಿವಾತ್ಮಕೇ ಮಹಾಮಂಚೇ ಮಹೇಶಾನೋಪಬರ್ಹಿಣೇ॥
ಅತಿರಮ್ಯತರೇ ತತ್ರ ಕಶಿಪುಶ್ಚ ಸದಾಶಿವಃ।
ಭೃತಕಾಶ್ಚ ಚತುಷ್ಪಾದಾ ಮಹೇಂದ್ರಶ್ಚ ಪತದ್ಗ್ರಹಃ।
ತತ್ರಾಸ್ತೇ ಪರಮೇಶಾನೀ ಮಹಾತ್ರಿಪುರಸುಂದರೀ॥'

'ಸೌಂದರ್ಯಲಹರಿ'ಯಲ್ಲಿಯೂ (ಶ್ಲೋಕ ೮) ಇಷ್ಟೇ ಸಂಗ್ರಹವಾದ ಇದೇ ಅರ್ಥದ ವರ್ಣನೆಯಿದೆ

'ಸುಧಾಸಿಂಧೋರ್ಮಧ್ಯೆ ಸುರವಿಟಪಿವಾಟೀಪರಿವೃತೇ
ಮಣಿದ್ವೀಪೇ ನೀಪೋಪವನವತಿ ಚಿಂತಾಮಣಿ ಗೃಹೇ।
ಶಿವಾಕಾರೇ ಮಂಚೇ ಪರಮಶಿವಪರ್ಯಂಕನಿಲಯಾ
ಭಜಂತಿ ತ್ವಾಂ ಧನ್ಯಾಃ ಕತಿಚನ ಚಿದಾನಂದಲಹರೀಂ॥'

ಬಿಂದುವೇ ಅಮೃತಸಾಗರ (ಸುಧಾಸಿಂಧು). ಅದರ ನಡುವೆ ಕಲ್ಪವಾಟಿಕೆ. ಅದರಲ್ಲಿ ಮಣಿದ್ವೀಪ, ಕದಂಬವನ. ಅದರೊಳಗೆ ಚಿಂತಾಮಣಿಗೃಹ. ಇಲ್ಲಿ ಶಿವನೇ ಮಂಚವಾಗಿದ್ದಾನೆ. ಅದರ ನಾಲ್ಕು ಕಾಲುಗಳು ದೇವಿಯ ಪರಿಚಾರಕರಾದ(ಭೃತಕಾಃ) ಬ್ರಹ್ಮ, ವಿಷ್ಣು, ರುದ್ರ, ಈಶ್ವರ ಇವರು. ಅದರ ಮೇಲಿನ ಹಲಗೆ (ಪರ್ಯಂಕ) ಸದಾಶಿವಸ್ವರೂಪದ್ದು. ಅದರ ಮೇಲೆ ಚೈತನ್ಯದ ಆನಂದವೇ ಮೂರ್ತಿಮತ್ತಾದ ಶ್ರೀದೇವಿ ('ತತ್ರಾಪಿ ಕೃತಸಾನ್ನಿಧ್ಯಾ ಶ್ರೀವಿದ್ಯಾ ದೇವತಾ ಪರಾ।'). ಲಲಿತೋಪಾಖ್ಯಾನವು ಇವಳನ್ನು 'ಸಾಕ್ಷಾತ್ ಸೈವ ಮಹಾಲಕ್ಷ್ಮೀ। ಶ್ರೀಚಕ್ರಮಿತಿ ತತ್ತ್ವತಃ॥' ಎಂದು ಬಣ್ಣಿಸಿದೆ(೩,೪,೪೦,೫). ಶ್ರೀ ಎಂಬ ದೇವಿಯ ತತ್ತ್ವದಲ್ಲಿ ಇಪ್ಪತ್ತೈದು ಪ್ರಾಕಾರಗಳಲ್ಲಿರುವ ಎಲ್ಲ ತತ್ತ್ವದೇವತೆಗಳೂ ಸೇರಿಕೊಳ್ಳುತ್ತಾರೆ; ಅಷ್ಟಕ್ಕೆ ಮುಗಿಯದೆ ಶ್ರೀಸ್ವರೂಪ ಇಪ್ಪತ್ತಾರನೆಯ ತತ್ತ್ವವಾಗಿ ಸಾಧಕರಿಗೆ ತೋರಿಕೊಳ್ಳುತ್ತದೆ.

ಶ್ರೀಪುರವರ್ಣನೆಯನ್ನು ಮಾಡಿ ಶ್ರೀತತ್ತ್ವದ ಚಿಂತನೆಗೆ ತೊಡಗುವುದು ಶ್ರೀತತ್ತ್ವನಿಧಿಯ ಮುಖ್ಯ ಉದ್ದೇಶ. ಶ್ರೀಪುರವರ್ಣನೆಯ ಭಾಗವು ಶ್ರೀ ಎಂಬ ದೇವಿಯು ಸಮಷ್ಟಿರೂಪಿಣಿ ಎಂದು ಸೂಚಿಸುತ್ತದೆ. ಮುಂದಿನ ಶಕ್ತಿನಿಧಿಯ ಭಾಗವು ದೇವಿಯು ತತ್ತ್ವಾತೀತಳು ಎಂದು ತೋರಿಸುವಲ್ಲಿ ಆಕೆಯ ವಿವಿಧ ರೂಪಗಳ ಸ್ವಾರಸ್ಯವನ್ನು ಮನವರಿಕೆಮಾಡಿಕೊಡುತ್ತದೆ. ಆಗಮಗ್ರಂಥಗಳಲ್ಲಿ ಮತ್ತು ಶಾಕ್ತಸಂಪ್ರದಾಯದಲ್ಲಿ ದೇವಿಯ ಅನೇಕ ಲೀಲಾರೂಪಗಳನ್ನೂ, ಅವತಾರಗಳನ್ನೂ, ಲೋಕೋಪಕಾರಕ ಮೂರ್ತಿಗಳನ್ನೂ, ಸ್ಥಳದೇವತೆಗಳನ್ನೂ ಉಪಾಸನೆಗಾಗಿ ಬೇರೆಬೇರೆಯಾಗಿ ಹೇಳಿದ್ದರೂ ಶ್ರೀತತ್ತ್ವವೊಂದೇ ಸತ್ಯವಾದುದು ಎಂಬ ನಿರ್ಣಯವಿದೆ.

ಮೊದಲನೆಯ ನಿಧಿ ಶಕ್ತಿನಿಧಿ

೧ ಆರಂಭದ ಒಕ್ಕಣೆ

'ಶುಭಮಸ್ತು। ನಿರ್ವಿಘ್ನಮಸ್ತು। ಶ್ರೀಗಣಾಧಿಪತಯೇ ನಮಃ।
ಶ್ರೀಮಚ್ಚಂಡಿಕಾಯೈ ನಮಃ।
ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ।
ಪ್ರಸನ್ನವದನಂ ಧ್ಯಾಯೇತ್ಸರ್ವವಿಘ್ನೋಪಶಾಂತಯೇ। (॥೧॥)
ಲಕ್ಷ್ಮೀಪ್ರದಾನ ಸಮಯೆ ನವವಿದ್ರುಮಾಭಾಂ
ವಿದ್ಯಾಪ್ರದಾನ ಸಮಯೆ ಶರದಿಂದು ಶುಭ್ರಾಂ।
ವಿದ್ವೇಷಿವರ್ಗವಿಜಯೆ ಹರಿನೀಲವರ್ಣಾ
ಮಂಬಾಂ ತ್ರಿಲೋಜನನೀಮಜನಿಂ ಪ್ರಪದ್ಯೆ ॥ (॥೨॥)
ಜಯತ್ವಂ ದೆ ವಿ ಚಾಮುಂಡೆ ಜಯ ಭೂತಾಪಹಾರಿಣಿ।
ಜಯ ಸರ್ವಗತೆ ದೆವಿ ಭದ್ರಕಾಳಿ ನಮೋಸ್ತು ತೆ ॥ (॥೩॥)
ಶ್ರೀಮಚ್ಚಾಮುಂಡಿಕಾ ದೆವೀಕಟಾಕ್ಷಶುಭವೀಕ್ಷಣಾತ್।
ನಿಗಮಾಗಮತಂತ್ರಾಣಾಂ ಪುರಾಣವಚಸಾಮಪಿ। (॥೪॥)
ಧರ್ಮಶಾಸ್ತ್ರೆತಿಹಾಸಾನಾಮುಪತಂತ್ರಗಿರಾಮಪಿ ।
ಮಂತ್ರಜ್ಯೋತಿಷ ಶಿಲ್ಪಾನಾಂ ಸಾರಂ ಸಂಗೃಹ್ಯ ತತ್ವತಃ॥೫॥)
ಚಾಮುಂಡಾಪ್ರಮುಖಾನಾಂ ಚ ದೆವತಾನಾಂ ಪೃಥಕ್ಪೃಥಕ್।
ಸ್ವರೂಪಾಯುಧವರ್ಣಾನಾಂ ಭೂಷಾವಾಹನ ಲಕ್ಷ್ಮ(ಕ್ಷ)ಣಾಃ। ॥೬॥
ಪುಷ್ಪಾಭಿಧೆಯ ವಸ್ತ್ರಾಣಾಂ ಪ್ರಭೆದಾಶ್ಚ ತತಃಪರಂ।
ವಿಷ್ಣ್ವೀಶಬ್ರಹ್ಮಶಕ್ರಾದಿದೆವಾನಾಂ ಲಕ್ಷಣಾನಿ ಚ । (॥೭॥)
ಯುಗಾದಿಕಾಲಭೆದಾಶ್ಚ ಕಾಲಜಾತಗುಣಾಗುಣಾ।
ಏ (ಏ) ತತ್ವಸಂಗಾದನ್ಯೆಷಾಂ ವಕ್ತವ್ಯಾನಾಂ ಕ್ರಮಾ ಅಪಿ । (॥೮॥)
ಮಹೀಶೂರಪುರಾಧೀಶ ಕೃಷ್ಣರಾಜ ಮಹೀಭುಜಾ।
ಗ್ರಂಥೆ ಶ್ರೀತತ್ವನಿಧ್ಯಾಖ್ಯೆ ನವನಿಧ್ಯಾತ್ಮಕೆ ಶುಭೆ ।(॥೯॥)
ಪ್ರಪಂಚಸ್ಯೊಪಕಾರಾಯ ಪ್ರಕಾಶ್ಯಂತೆ ಯಥಾಮತಿ ।
ವಕ್ಷ್ಯಮಾಣೇಷು ನಿಧಿಷು ಜ್ಞಾತವ್ಯೊಯಂ ತ್ವನುಕ್ರಮಃ। (॥೧೦॥)
ಚಾಮುಂಡಾದಿ ಮಹಾಶಕ್ತಿಲಕ್ಷಣಂ ಪ್ರಥಮೇ ನಿಧೌ।
ವಿಷ್ಣುಮೂರ್ತಿಪ್ರಭೆದಾನಾಂ ಲಕ್ಷ್ಮ ಪ್ರೊಕ್ತಂ
ದ್ವಿತೀಯ್ಯತೇ। (॥೧೧॥)
ತ್ರಿ(ತೃ)ತೀಯ್ಯೆ ಶಿವಶೈವಾದಿ ಮೂರ್ತೀನಾಂ ಲಕ್ಷಣಂ ಮತಂ। (॥೧೨॥)
ತುರಿಯ್ಯೆ ಬ್ರಹ್ಮಶಕ್ರಾದಿದೆವರೂಪನಿರೂಪಣಂ।
ಪಂಚಮೆ ಗ್ರಹನಕ್ಷತ್ರಕಾಲಾದೀನಾಂ ಚ ಲಕ್ಷಣಂ। (॥೧೩॥)
ಷಷ್ಠೆ ಪ್ರೊಕ್ತಂ ಹರಿಕ್ಷೆತ್ರಸಾಲಿಗ್ರಾಮಾದಿಲಕ್ಷಣಂ।
ಸಪ್ತಮೆತು ಶಿವಕ್ಷೆತ್ರ ಶಿವಲಿಂಗಾದಿ ಲಕ್ಷಣಂ । (॥೧೪॥)
ನಿಗಮಾಗಮತಂತ್ರಾದಿಲಕ್ಷಣಂ ಪ್ರೊಕ್ತಮಷ್ಟಮೆ ।
ಪ್ರೊಕ್ತಂ ಚ ನವಮೆ ಸಂಖ್ಯಾಲಿಪಿಪ್ರಮುಖ ಕೌತುಕಂ । (॥೧೫॥)
ಏ (ಏ) ತನ್ನವನಿಧಿಜ್ಞಾನಾತ್ಸುಲಭಾ ನಿಧಯೋನವ॥'

(ಮೇಲಿನ ಶ್ಲೋಕಗಳಲ್ಲಿರುವ ಪದವಿಭಾಗ ಮತ್ತು ಪಂಕ್ತಿಭೇದ ಮೂಲದಲ್ಲಿಲ್ಲ. ಉಚ್ಚಾರಣೆಯ ಸೌಕರ್ಯಕ್ಕಾಗಿ ಬೇಕಾಗುವ ವಿಕಾರದೀರ್ಘ ಚಿಹ್ನೆಗಳನ್ನು ಸೇರಿಸಿಕೊಳ್ಳಬೇಕು. ಮೂಲದಲ್ಲಿರುವ ಕೆಲವು ಅಕ್ಷರಸ್ಖಾಲಿತ್ವಗಳನ್ನು ಸರಿಪಡಿಸಿ ಕಂಸಗಳಲ್ಲಿ ತೋರಿಸಲಾಗಿದೆ. ಶ್ಲೋಕಸಂಖ್ಯೆಗಳನ್ನು ಮೂಲದಲ್ಲಿ ಕೊಟ್ಟಿಲ್ಲ. ಅವನ್ನು ಇಲ್ಲಿ ಕಂಸಗಳಲ್ಲಿ ಕಾಣಬಹುದು)

ಸಂಪ್ರದಾಯದಂತೆ ಗ್ರಂಥಾರಂಭದಲ್ಲಿ ಆಶೀಃ (ಒಳ್ಳೆಯದಾಗಲೆಂಬ ಹರಕೆ, ಹಾರೈಕೆ), ನಮಸ್ಕ್ರಿಯಾ (ಇಷ್ಟದೇವತಾಸ್ತುತಿ), ವಸ್ತುನಿರ್ದೇಶ (ಗ್ರಂಥದ ಉದ್ದೇಶ, ಲಕ್ಷಣಗಳ ಕಿರುಪರಿಚಯ) ಇವುಗಳಲ್ಲಿ ಯಾವುದಾದರೊಂದು ಇರುವುದು ವಾಡಿಕೆ ('ಆಶೀರ್ನಮಸ್ಕ್ರಿಯಾ ವಸ್ತುನಿರ್ದೇಶೋ ವಾಪಿ ತನ್ಮುಖಂ'). ಆದರೆ ಶ್ರೀತತ್ತ್ವನಿಧಿಯ ಉಪಕ್ರಮದಲ್ಲಿ(ಎಂದರೆ ಆರಂಭದ ಒಕ್ಕಣೆಯಲ್ಲಿ) ಮೂರೂ ಸೇರಿವೆ. 'ಶುಭಮಸ್ತು, ನಿರ್ವಿಘ್ನಮಸ್ತು' ಎನ್ನುವುದು ಆಶೀಃ. ಗಣಪತಿಗೆ, ಚಂಡಿಕೆಗೆ (ಚಾಮುಂಡಿಗೆ) ನಮಸ್ಕರಿಸಿದ್ದಾರೆ; ನಮಸ್ಕ್ರಿಯೆ ಮುಂದುವರೆದು ಮೂರು ಶ್ಲೋಕಗಳಲ್ಲಿ ಮುಗಿಯುತ್ತದೆ.

ಮೊದಲನೆಯ ಶ್ಲೋಕ ಸರ್ವತ್ರ ಪ್ರಸಿದ್ಧವಾದದ್ದು, ವಿಷ್ಣುಪರವಾದದ್ದು. ಎರಡನೆಯದು ಲಕ್ಷ್ಮೀ, ಸರಸ್ವತಿ, ಕಾಳಿ ಎಂಬ ದೇವತಾತ್ರಯದ ಸ್ತುತಿ. ಮೂರನೆಯದು ಅರಸರ ಇಷ್ಟದೈವವೂ ಕುಲದೇವತೆಯೂ ಆದ ಚಾಮುಂಡಾಂಬಿಕೆಯನ್ನು ಕುರಿತದ್ದು.

ಮೊದಲನೆಯ ಶ್ಲೋಕಕ್ಕೆ ಹೆಚ್ಚಿನ ವಿವರಣೆಯ ಅಗತ್ಯವೇನಿರದು. ಈಗಲೂ ಯಾವ ಕೆಲಸವನ್ನು ಆರಂಭಿಸುವಾಗಲೂ ಈ ಶ್ಲೋಕದ ಪಠಣ ಬಳಕೆಯಲ್ಲಿದ್ದೇ ಇದೆಯಷ್ಟೆ? ಇದು ವಾಚ್ಯವಾಗಿ ವಿಷ್ಣುಪರವಾದುದೆಂಬ ಸೂಚನೆಯಿರುವುದಾದರೂ 'ಶಶಿವರ್ಣ'ನೆಂಬ ವರ್ಣನೆಯಿರುವುದರಿಂದ ಇದು ಗಣಪತಿಪರವಾದ ಪ್ರಾರ್ಥನೆಯೆಂದೂ ಹೇಳುವುದುಂಟು. ತೊಡಗಿದ ಕೆಲಸಕ್ಕೆ ಬಂದಡರುವ ತೊಡರುಗಳನ್ನೆಲ್ಲ ದೂರಮಾಡುವವನು ಈ ದೇವತೆಯೇ ತಾನೆ?

ಎರಡನೆಯ ಶ್ಲೋಕದ ಹಿನ್ನೆಲೆ ಮಾರ್ಕಂಡೇಯಪುರಾಣದ ಸಪ್ತಶತಿ-ದೇವೀಮಾಹಾತ್ಮ್ಯಕ್ಕೆ ಅನುಬಂಧವಾಗಿ ಸೇರಿರುವ 'ಪ್ರಾಧಾನಿಕರಹಸ್ಯ' ಮತ್ತು 'ವೈಕೃತಿಕರಹಸ್ಯ'ಎಂಬ ಪ್ರಕರಣಗಳಲ್ಲಿದೆ. ಅವ್ಯಾಕೃತತ್ರಿಗುಣಾತ್ಮಕಳಾದ ಆದಿಶಕ್ತಿಯು ಗುಣಭೇದದಿಂದ ಲಕ್ಷ್ಮಿಯಾಗಿ (ರಜೋಗುಣ), ಸರಸ್ವತಿಯಾಗಿ (ಸತ್ತ್ವಗುಣ), ಮಹಾಕಾಳಿಯಾಗಿ (ತಮೋಗುಣ) ತೋರಿಕೊಂಡ ಸಂದರ್ಭ ಇಲ್ಲಿದೆ. ಭಕ್ತರಿಗೆ ಐಶ್ವರ್ಯ-ಭೋಗಗಳನ್ನು ನೀಡುವಾಗ ಲಕ್ಷ್ಮಿಯು ಹವಳದ ಬಣ್ಣದವಳು(ಕೆಂಪು ರಜೋಗುಣದ ಸಂಕೇತ), ಜ್ಞಾನ-ಮುಕ್ತಿಗಳನ್ನು ನೀಡುವಾಗ ಸರಸ್ವತಿಯು ಶರತ್ಕಾಲದ ಚಂದ್ರಬಿಂಬದಂತೆ ಕಾಣುವಳು (ಬಿಳಿ ಸತ್ತ್ವಗುಣದ ಸಂಕೇತ); ಅಸುರರನ್ನು ನಿಗ್ರಹಿಸುವಾಗ ಮಹಾಕಾಳಿಯು ನೀಲಿಗಪ್ಪು ಬಣ್ಣದವಳು (ಕಪ್ಪು ತಮೋಗುಣದ ಸಂಕೇತ). ಈ ದೇವತಾತ್ರಿತಯದ ಪ್ರಸ್ತಾಪ ಮತ್ತೆ ಬರುತ್ತದೆ.

ಮುಂದಿನ ಶ್ಲೋಕದಲ್ಲಿ ಚಾಮುಂಡಾಂಬಿಕೆಯು ಅಸುರರನ್ನು ಸಂಹರಿಸಿ ಭೂಭಾರವನ್ನು ಇಳುಹಿ 'ಭೂ-ತಾಪ-ಹಾರಿಣಿ' ಯಾದವಳು,

ವಿಶ್ವಾತ್ಮಿಕೆಯಾದವಳು, ಭದ್ರಕಾಳಿಯೆಂದು ಹೆಸರಾದವಳು ಎಂಬ ವರ್ಣನೆಯಿದೆ.

ನಾಲ್ಕನೆಯ ಶ್ಲೋಕದಿಂದ ಮುಂದಕ್ಕೆ ಹತ್ತನೆಯ ಶ್ಲೋಕದವರೆಗೆ 'ವಸ್ತುನಿರ್ದೇಶ'; ಗ್ರಂಥದ ಪರಿಚಯ. ಚಾಮುಂಡಾ ದೇವಿಯ ಕೃಪೆಯಿಂದ ಲೋಕಾಪಕಾರಾರ್ಥವಾಗಿ ('ಪ್ರಪಂಚಸ್ಯೋಪಕಾರಾಯ') ಮೈಸೂರು ಸೀಮೆಯ ಅರಸರು (ಒಕ್ಕಣೆಯಂತೆ, ಮೈಸೂರು ನಗರದ ದೊರೆಗಳು) ಕೃಷ್ಣರಾಜ ಒಡೆಯರು (ಮುಮ್ಮಡಿ) ಶ್ರೀತತ್ತ್ವನಿಧಿಯೆಂಬ ಒಂಬತ್ತು ಪರಿಚ್ಛೇದಗಳುಳ್ಳ ಗ್ರಂಥವನ್ನು ರಚಿಸಿದರು. ಈ ಗ್ರಂಥರಚನೆಗೆ ನಿಗಮ (ಎಂದರೆ ವೇದ), ಆಗಮ, ತಂತ್ರ, ಪುರಾಣ, ಧರ್ಮಶಾಸ್ತ್ರ, ಇತಿಹಾಸ, ಉಪತಂತ್ರ, ಮಂತ್ರಶಾಸ್ತ್ರ, ಜ್ಯೋತಿಷ, ಶಿಲ್ಪಶಾಸ್ತ್ರ ಈ ವಿಭಾಗಗಳ ಗ್ರಂಥಗಳ ನೆರವನ್ನು ಪಡೆಯಲಾಗಿದೆಯೆಂಬ ಸೂಚನೆಯಿದೆ. ಈ ಗ್ರಂಥಗಳ ಸಾರವೆಲ್ಲವನ್ನೂ ಸಂಗ್ರಹಿಸಿ ಇಲ್ಲಿ ಕೊಡಲಾಗಿದೆಯಂತೆ.

ಗ್ರಂಥದ ಕೊನೆಯ ಭಾಗದಲ್ಲಿ ತಾವು ನೋಡಿದ ಗ್ರಂಥಗಳನ್ನೆಲ್ಲ ಪಟ್ಟಿಮಾಡಿ,

'ಪೂರ್ವೋಕ್ತಾನ್ ಕರಲಿಂಗೇಂದು ಸಂಖ್ಯಾನ್ ಗ್ರಂಥಾನ್ ಯಥಾಮತಿ।
ಸಮಾಲೋಕ್ಯ ಸಮಾ ... ರಂ ಸರ್ವಹಿತೈಷಿಣಾ ।
ಶ್ರೀ ಚಾಮುಂಡಾಕೃಪಾಪೂರ್ಣ ಕೃಷ್ಣರಾಜೇನ ಕಲ್ಪಿತಃ।
ಗ್ರಂಥ ಶ್ರೀ ತತ್ವನಿಧ್ಯಾಖ್ಯೊ, ಜೀಯ್ಯಾದಾಚಂದ್ರತಾರಕಂ॥
ಶ್ರೀ ಕೃಷ್ಣಾಯ ನಮಃ॥'

ಎಂದು ಮುಗಿಸಿದ್ದಾರೆ. ಇಲ್ಲಿನ ಸೂಚನೆಯಂತೆ, ಅವರು ಬಳಸಿಕೊಂಡಿರುವ ಗ್ರಂಥಗಳ ಸಂಖ್ಯೆ ಒಂದು ನೂರ ಮೂವತ್ತೆರಡು (ಕರ=೨, ಲಿಂಗ=೩, ಇಂದು=೧ 'ಸಂಖ್ಯಾನಾಂ ವಾಮತೋ ಗತಿಃ). ನನ್ನಲ್ಲಿರುವ ಹಸ್ತಪ್ರತಿಯ ಈ ಭಾಗ ಕೊಂಚಮಟ್ಟಿಗೆ ತ್ರುಟಿತವಾಗಿದೆಯಾಗಿ ಪಟ್ಟಿಮಾಡಿರುವ ಎಲ್ಲ ಪುಸ್ತಕಗಳೂ ಸ್ಪಷ್ಟವಾಗಿಲ್ಲ. ಉಳಿದಂತೆ ಉಲ್ಲೇಖಕ್ಕೆ ಬಂದಿರುವ ಗ್ರಂಥಗಳು ಕ್ರಮವಾಗಿ ಇವು–

(೧) ಕಲ್ಪಗಳು:

ಚಂಡಿಕಾಕಲ್ಪ, ಷೋಢಾಕಲ್ಪ, ಷೋಡಶೀಕಲ್ಪ, ಪಂಚಾಕ್ಷರೀಕಲ್ಪ, ಅಷ್ಟಾ..., ದುರ್ಗಾಕಲ್ಪ, ರಾಮತಾರಕಕಲ್ಪ, ಶೂಲಿನೀಕಲ್ಪ, ಪ್ರತ್ಯಂಗಿರಾಕಲ್ಪ, ಇಂದ್ರಾಕ್ಷೀಕಲ್ಪ, ದೇವೀಕಲ್ಪ, ಶೀತಳಾಕಲ್ಪ, ಸ್ವಪ್ನವಾರಾಹಿಕಾಕಲ್ಪ, ತೃಚಕಲ್ಪ, ಲಕ್ಷ್ಮೀನೃಸಿಂಹಕಲ್ಪ, ..., ಆಸುರೀಕಲ್ಪ, ಬಗಳಾಕಲ್ಪ, ವಟುಕಭೈರವಕಲ್ಪ, ದಶಪಾಪಹರಾಕಲ್ಪ, ಸ್ವರ್ಣಾ..., ಲಘುಶ್ಯಾಮಲಾಕಲ್ಪ, ಆಶ್ವಲಾಯನ, ಆತ್ರೇಯ ಕಲ್ಪ, ಕಾರ್ತೀಕ..., ಚಂದಿರಾಪರಮೇಶ್ವರೀಕಲ್ಪ, ಹನುಮತ್ಕಲ್ಪ, ('ಏತೇ ಕಲ್ಪಕಾಃ ವೇದಮೂರ್ತಿಸಂಖ್ಯಾಕಾಃ ಪರಿಕೀರ್ತಿತಾಃ। ಒಟ್ಟು ೩೪) (ಶ್ಲೋಕಗಳು ೧-೯)

(೨) ಆಗಮಗಳು :

ಶೈವಾಗಮ, ಪಾಂಚರಾತ್ರಾಗಮ, ಕಾರಣಾಗಮ, ವೈಖಾನಸಾಗಮ, ..., ...ಮಂತ್ರಾಗಮ (ಒಟ್ಟು ೬)
(ಋತುಸಂಖ್ಯಾಸ್ತು ವಿಜ್ಞೇಯಾ ಆಗಮಾಃ ಪರಿಕೀರ್ತಿಕಾಃ। (ಶ್ಲೋಕಗಳು೧೦-೧೧)

(೩) ತಂತ್ರಗಳು :

ಶಾಬರತಂತ್ರ,. ಶ್ರೀಶಾಬರ, ಶರಭತಂತ್ರ, ಉಡ್ಡಾಮರತಂತ್ರ, ವಾಮಕೇಶ್ವರತಂತ್ರ, ಆಯುರ್ವೇ.., .. (ಒಟ್ಟು ೯) (ತಂತ್ರಾಣಿ ರಸಸಂಖ್ಯಾನಿ ಪ್ರಖ್ಯಾತಾನಿ ಮಹೀತಲೆ।') (ಶ್ಲೋಕಗಳು ೧೨-೧೩)

(೪) ಸಂಹಿತೆಗಳು :

ಪಾದ್ಮಸಂಹಿತೆ, ನಾರದ, ..., ಸುದರ್ಶನಸಂಹಿತಾ, ಭೃಗುಸಂಹಿತಾ, ಪಂಚಮೀತಂತ್ರಸಾರ, ಜ್ಞಾನಾರ್ಣವ, ... ಅಹಿರ್ಬುಧ್ನ್ಯಸಂಹಿತಾ, ಶಂಕರಸಂಹಿತಾ, ಲಕ್ಷ್ಮೀನಾರಾಯಣಸಂಹಿತಾ, .. (ಒಟ್ಟು ೯) (... ಸಂಹಿತಾ ರತ್ನಸಂಖ್ಯಾನಾಃ ಕೀರ್ತಿತಾ ಧರ್ಮಬೋಧಕಾಃ।') (ಶ್ಲೋಕಗಳು ೧೪-೧೬)

(೫) 'ಜ್ಯೋತಿಷೇ' :

ರತ್ನಮಾಲಾ, ಜಾತಕಾಭರಣ, ... ರೋವ, ಸೂರ್ಯಸಿದ್ಧಾಂತ, ಕಾಲಪ್ರಕಾಶಕ, ಜ್ಯೋತಿಷಸಂಗ್ರಹ, ಜ್ಯೋತಿಷಾರ್ಣವ, ರ... ಮಣೀ, ಕಾಲಾಮೃತ, ವಿದ್ಯಾಮಾಧವೀಯ, ಬೃಹಜ್ಜಾತಕ, ದೈವಜ್ಞವಿಲಾಸ,..., ಮದನರತ್ನಹೋರಾ, ಮುಹೂರ್ತಗಣಪತಿ, ನಕ್ಷತ್ರಚೂಡಾಮಣಿ, ..., (ಒಟ್ಟು ೧೭) ('ಗ್ರಂಥಾ ಸ್ಯುರ್ಜ್ಯೋತಿಷಿ ಖ್ಯಾತಾಃ ಕ್ರೌಂಚಭೇದನ ಸಂಖ್ಯಕಾಃ।) (ಶ್ಲೋಕಗಳು ೧೭-೨೧)

(೬) ಪುರಾಣಗಳು :

ಸ್ಕಾಂದಪುರಾಣ, ಪಾದ್ಮಪುರಾಣ, ...,.., ಆಗ್ನೇಯಪುರಾಣ, ನಾರಸಿಂಹಪುರಾಣ, ಭವಿಷ್ಯೋತ್ತರ ಪುರಾಣ, ಬ್ರಹ್ಮಾಂಡ ಪುರಾಣ, ಮುದ್ಗಲ ಪುರಾಣ, ಕೂರ್ಮಪುರಾಣ, ವಿಷ್ಣುಧರ್ಮೋತ್ತರಪುರಾಣ, .., ಭಾಗವತಪುರಾಣ, ಬ್ರಹ್ಮವೈವರ್ತಪುರಾಣ, ಮಾರ್ಕಂಡೇಯಪುರಾಣ, ವಿಷ್ಣುಪುರಾಣ, (ಒಟ್ಟು ೧೮) ('... ಸಂಖ್ಯಾನಿ ಪುರಾಣಾನಿ ಮತಾನಿ ಚ ।) (ಶ್ಲೋಕಗಳು ೨೨-೨೪)

(೭) ಧರ್ಮಶಾಸ್ತ್ರ :

ಹೇಮಾದ್ರಿ (ಧರ್ಮಾಬ್ಧಿಸಾರ), ಮಯೂಖ, ಭಟ್ಟಭಾಸ್ಕರ, ಮಾಧವೀಯ, ಕಾಳಹಸ್ತಿವಿಲಾಸ, ಸದಾಚಾರಸಂಗ್ರಹ, ದಾನಚಿಂತಾಮಣಿ, ಸ್ಮೃತಿಮುಕ್ತಾವಳಿ,... ರಾಣಸಾರ, ವೈಕುಂಠದೀಕ್ಷಿತೀಯ, (ಒಟ್ಟು ೧೦) ('ಧರ್ಮಶಾಸ್ತ್ರಸ್ಥಿತಾ ಗ್ರಂಥಾ ಸ್ತಾಂಬೂಲ ಗುಣಸಂಖ್ಯಕಾಃ।) (ಶ್ಲೋಕಗಳು ೨೫-೨೭)

(೮) ಮಂತ್ರಶಾಸ್ತ್ರ :

... ಪ್ರಾಸಾದ, ಸ್ಕಂದಯಾಮಳ, ಆಮ್ನಾಯಶ್ರಮ, ಮಹಾಲಕ್ಷ್ಮೀರತ್ನಕೋಶ, ರುದ್ರಯಾಮಳ, ಶಾರದಾತಿಲಕ, ಅಥರ್ವಣರಹಸ್ಯ, ಮಂತ್ರಸಾರ, ಸೋಮನಾಥಾವಳೀ (ಶಿಂಗಾಭಟ್ಟೀಯ),

ಶೇಖರ, ಸೌಂದ..., ದೇವತಾರ್ಚನಮಂಜರೀ, (ಒಟ್ಟು ೧೫)
('ಮಂತ್ರಶಾಸ್ತ್ರಸ್ಥಿತಾ ಗ್ರಂಥಾಸ್ತತ್ತದ್ದೇವಾರ್ಚನೋಚಿತಾಃ)
ಮುನಿಪ್ರೋಕ್ತಾಃ ಪದಗತ ದೋಷ... ॥'

(೯) **ಸಂಕೀರ್ಣ :**

ಮಲ್ಲಾರೀಮಾಹಾತ್ಮ್ಯ, ತುಳಸೀಮಾಹಾತ್ಮ್ಯ, ಶಾರೀರಕಭಾಷ್ಯ, ಹಯಗ್ರೀವಸ್ತುತಿ, ... ತತ್ವರತ್ನಾಕರ, ರಾಮಾನುಜವಿಜಯ, ಭಕ್ತವಿಲಾಸ, ದೇಶಿಕಪ್ರೋಕ್ತ ಮಂಗ..., ಲಕ್ಷ್ಮೀನಾರಾಯಣಪದ ಪೂರ್ವಸಂವಾದ, ರಾಮಾಯಣ, ಲಲಿತೋಪಾಖ್ಯಾನ, ವೈದ್ಯಶಾಸ್ತ್ರ ... (ಒಟ್ಟು ೧೬)
(... ಗ್ರಂಥಾಸ್ತ್ವಂಗೇಂದು ಸಂಖ್ಯಕಾಃ) (ಶ್ಲೋಕಸಂಖ್ಯೆ ಇಲ್ಲ)

ಮೇಲೆ ಕಾಣಿಸಿರುವ ಗ್ರಂಥವಿಭಾಗ ಮೂಲಗ್ರಂಥದಲ್ಲೇ ಇದೆ. ಆದರೆ ವಿಭಾಗಸಂಖ್ಯೆಯನ್ನೂ ಆಯಾ ವಿಭಾಗದ ಹೆಸರನ್ನೂ ನಾನು ಸೇರಿಸಿದ್ದೇನೆ. ಈ ಪಟ್ಟಿಯಲ್ಲಿ ಸಂಕೇತಪದಗಳಿಂದ ಗ್ರಂಥಸಂಖ್ಯೆಯನ್ನು ಸೂಚಿಸಿದ್ದಾರೆ. ಒಂಬತ್ತು ವಿಭಾಗಗಳಲ್ಲಿರುವ ಗ್ರಂಥಗಳನ್ನೂ ಕೂಡಿಸಿದರೆ ಗ್ರಂಥಕಾರರು ಕೊಟ್ಟಿರುವ ಒಂದು ನೂರ ಮೂವತ್ತೆರಡಕ್ಕೆ ('ಪೂರ್ವೋಕ್ತಾನ್ ಕರಲಿಂಗೇಂದುಸಂಖ್ಯಾನ್ ಗ್ರಂಥಾನ್') ಸರಿಹೋಗುತ್ತದೆ.

ಈ ಗ್ರಂಥಗಳಲ್ಲಿ ಅನೇಕ ಇಂದಿಗೂ ಉಪಲಬ್ಧವಿವೆ; ಪ್ರಸಿದ್ಧವಾಗಿಯೂ ಉಳಿದಿವೆ, ಮಹಾಲಕ್ಷ್ಮೀರತ್ನಕೋಶ, ಶಾರದಾತಿಲಕ ಮೊದಲಾದುವು. ಕೆಲವು ಈ ಕಾಲಕ್ಕೆ ಮರೆಯಾಗಿವೆ.

ಶ್ರೀತತ್ತ್ವನಿಧಿ ಗ್ರಂಥವು ಒಂಬತ್ತು ಬಗೆಯ ವಿಶೇಷವಿವರಗಳಿಂದ ಕೂಡಿದೆಯೆಂಬುದು ಉಲ್ಲೇಖಿಸಲ್ಪಟ್ಟಿದೆ ('ನಿಧಯೋ ನವ'). ಪ್ರತಿಯೊಂದು ನಿಧಿಯ ಪರಿವಿಡಿಯನ್ನು ಸಂಗ್ರಹವಾಗಿ ಹತ್ತನೆಯ ಶ್ಲೋಕದಿಂದ ಹದಿನೈದನೆಯ ಶ್ಲೋಕದವರೆಗೆ ಕೊಡಲಾಗಿದೆ. ನನ್ನಲ್ಲಿರುವ ಹಸ್ತಪ್ರತಿಯ ಕಡೆಯಲ್ಲಿ ಪ್ರತಿಯೊಂದು ಪತ್ರದಲ್ಲೂ ಯಾವ ವಿಷಯ ಬಂದಿದೆಯೆಂಬುದರ ವಿಸ್ತೃತ ಅನುಕ್ರಮಣಿಕೆಯಿದೆ. ಹೀಗೆ ಮೊದಲನೆಯ ಪತ್ರದಿಂದ ೧೭೦ನೆಯ ಪತ್ರದವರೆಗೂ ವಿಷಯಾನುಕ್ರಮಣಿಕೆಯನ್ನು ಒಂಬತ್ತು ಪತ್ರಗಳಲ್ಲಿ ಕಾಣಿಸಿದ್ದಾರೆ. ಒಂದೊಂದು ನಿಧಿಗೂ ಪ್ರಥಮ, ದ್ವಿತೀಯ ಎಂಬಂತೆ ಸಂಖ್ಯೆಯನ್ನೂ ಅಡಕವಾಗಿರುವ ವಿಷಯದಿಂದ ನಿಧಿಯ ನಾಮಕರಣವನ್ನೂ ಮಾಡಲಾಗಿದೆ. ನಿದರ್ಶನಕ್ಕೆ 'ಶ್ರೀತತ್ವನಿಧ್ಯಾಖ್ಯಗ್ರಂಥೆ ಚಾಮುಂಡಾದಿಶಕ್ತಿಸ್ವರೂಪನಿರೂಪಣಂ ನಾಮ ಪ್ರಥಮೋ ನಿಧಿಃ' ಎಂದು ಮೊದಲನೆಯ ನಿಧಿಗೆ ಪುಷ್ಪಿಕಾವಚನವಿದೆ. ಮತ್ತು ಪುಷ್ಪಿಕಾಭಾಗದಲ್ಲಿ ಗ್ರಂಥಕಾರರ ಸಾಂಪ್ರದಾಯಿಕ ಉಲ್ಲೇಖವನ್ನೂ ಮಾಡಲಾಗಿದೆ –

'ಇತಿ ಶ್ರೀಮತ್ಸಮಸ್ತಭೂಮಂಡಲ ಮಂಡನಾಯಮಾನ ನಿಖಿಲ ದೇಶಾವತಂಸ ಕರ್ನಾಟಕ ಜನಪದಸಂಪದಧಿಷ್ಠಾನಭೂತ ಶ್ರೀಮನ್ಮಹಿ ಶೂರಮಹಾಸಂಸ್ಥಾನಮಧ್ಯ ದೇದೀಪ್ಯಮಾನಾವಿಕಲ ಧಿಕುಲಕ್ರಮಾಗತ ರಾಜ ಕ್ಷಿತಿಪಾಲ ಪ್ರಮುಖ ನಿಖಿಲ ನಿಜರಾಜಾಧಿರಾಜಮಹಾರಾಜ ಚಕ್ರವರ್ತಿಮಂಡಲಾನುಭೂತದಿವ್ಯರತ್ನಸಿಂಹಾಸನಾರೂಢ ಶ್ರೀಮದ್ರಾ ಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪಾಪ್ರತಿಮ ವೀರನರಪತಿ ಬಿರುದೆಂತೆಂಬರ ಗಂಡ ಲೋಕೈಕವೀರ ಯದುಕುಲಪಯಃ ಪಾರಾವಾರ ಕಳಾನಿಧಿ ಶಂಖ ಚಕ್ರಾಂಕುಶಕುಠಾರಮಕರಮತ್ಸ್ಯ ಶರಭಸಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತ ಮಹಿಶೂರಪುರವರಾಧೀಶ ಕೃಷ್ಣರಾಜ ಮಹಾರಾಜವಿರಚಿತ ಶ್ರೀತತ್ತ್ವ ನಿಧ್ಯಾಖ್ಯ ಗ್ರಂಥೇ... '

೨. ಶಕ್ತಿನಿಧಿಯ ತತ್ವದೇವತೆಗಳು

ಶ್ರೀತತ್ವನಿಧಿಯಲ್ಲಿ ಮೊದಲಪರಿಚ್ಛೇದವು ಶಕ್ತಿನಿಧಿಯಾಗಿರುವುದು ಸಹಜವೇ. ಗ್ರಂಥದ ಪ್ರೇರಣೆಯು ಲಲಿತೋಪಾಖ್ಯಾನದಿಂದಲೇ ಒದಗಿರುವಂತೆ ತೋರುತ್ತದೆ. ಶ್ರೀಪುರವರ್ಣನೆ, ಶ್ರೀಚಕ್ರದ ಕಲ್ಪನೆ, ಶ್ರೀವಿದ್ಯೆಯ ವಿವರಗಳು ಇವೆಲ್ಲವೂ ಶಕ್ತಿನಿಧಿಯಲ್ಲಿ ಸಂಗ್ರಹವಾಗಿ ಬಂದಿವೆ. ಇಲ್ಲಿನ ತತ್ವದೇವತೆಗಳೆಲ್ಲ ಶ್ರೀವಿದ್ಯೆಯ ಚೌಕಟ್ಟಿನಲ್ಲಿ, ಶ್ರೀಚಕ್ರದ ಉಪಾಸನೆಯಲ್ಲಿ ಕಾಣಿಸಿಕೊಳ್ಳುವಂಥವೇ. ಇತರ ನಿಧಿಗಳಲ್ಲಿ ಬರುವ ಬ್ರಹ್ಮ, ವಿಷ್ಣು, ಮಹೇಶ್ವರ ಮತ್ತು ಅವರ ಪರಿವಾರದೇವತೆಗಳು ಕೂಡ ಶ್ರೀವಿದ್ಯೆಯ ಸಂದರ್ಭಕ್ಕೆ ಸೇರಿದವರೇ. ಶಕ್ತಿನಿಧಿಯ ವಿವರಗಳಿಗೆ ಶ್ರೀ ತತ್ವನಿಧಿಯು ದೇವ್ಯಾಗಮವಿಭಾಗಕ್ಕೆ ಸೇರಿದ ಹಲವು ಗ್ರಂಥಗಳನ್ನು ಅವಲಂಬಿಸಿದ್ದರೂ ಪ್ರಮುಖವಾಗಿ ಲಲಿತೋಪಾಖ್ಯಾನವನ್ನೇ ಆಕರವಾಗಿ ಗ್ರಹಿಸಿದೆ.

ಶ್ರೀಚಕ್ರದ ಉಪಾಸ್ಯದೇವತೆಯಾದ ರಾಜರಾಜೇಶ್ವರಿಯ (ಲಲಿತಾಭಟ್ಟಾರಿಕಾ, ತ್ರಿಪುರ ಸುಂದರಿಯ) ವರ್ಣನೆಯಿಂದಲೇ ಶಕ್ತಿನಿಧಿಯು ಆರಂಭವಾಗುತ್ತದೆ. ಶ್ರೀಪುರದ ನಿರೂಪಣೆ ಇದಕ್ಕೆ ಹಿನ್ನೆಲೆಯಾಗಿ ಬರುವ ಭಾಗ, ಮೈಸೂರಿನ ಹಸ್ತಪ್ರತಿಯಲ್ಲಿದೆ. ನನ್ನ ಬಳಿಯಿರುವ ಹಸ್ತಪ್ರತಿಯಲ್ಲಾಗಲಿ, ಮುಂಬಯಿಯ ವೆಂಕಟೇಶ್ವರ ಸ್ಟೀಮ್ ಪ್ರೆಸ್‌ನಲ್ಲಿ ಸುಮಾರು ನೂರು ವರ್ಷಗಳ ಹಿಂದೆ ದೇವನಾಗರಿ ಲಿಪಿಯಲ್ಲಿ ಕಲ್ಲಚ್ಚಾದ ಪ್ರತಿಯಲ್ಲಾಗಲಿ ಈ ಭಾಗವು ಕಾಣಸಿಗುವುದಿಲ್ಲ. ಪ್ರಾಯಶಃ ಅನಂತರದ ಆಲೋಚನೆಯಿದ್ದೀತು. ಈ ಭಾಗದ ಸ್ವಾರಸ್ಯವಿರುವುದು ಶ್ರೀಪುರಕಲ್ಪನೆಯನ್ನು ವಿವರಿಸುವ ಸೊಗಸಾದ ಚಿತ್ರಗಳಲ್ಲಿ ಮತ್ತು ಶಕ್ತಿನಿಧಿಯ ದೇವತೆಗಳಿಗೆ ಒದಗಿಸುವ ಸಂದರ್ಭದ ನಿರೂಪಣೆಯಲ್ಲಿ. ರಾಜರಾಜೇಶ್ವರಿಯೇ ಮೊದಲನೆಯ ಶಕ್ತಿರೂಪವೆಂದು ಇಲ್ಲಿನ ಒಕ್ಕಣೆ. ಆದರೆ ಗ್ರಂಥಕಾರರ ಕುಲದೇವತೆಯೂ ಇಷ್ಟದೈವವೂ ಆದ ಚಾಮುಂಡೇಶ್ವರಿಯ ಸ್ತುತಿರೂಪವಾದ ವರ್ಣನೆಯಿಂದ ಗ್ರಂಥ ಆರಂಭವಾಗಿರುವುದು ಸರಿಯೇ. ದೇವತೆಯನ್ನು ಸಂಪ್ರದಾಯದಂತೆ ವ್ಯಕ್ತವಾಗಿ ನಮಸ್ಕರಿಸಿರುವುದೇನೋ ಕಾಣುವುದಿಲ್ಲವೆನ್ನಿ. ಈ ವರ್ಣನೆಯನ್ನು ಮೊದಲಲ್ಲಿ ಕಾಣಬಹುದು. ('ಅಥ ಶ್ರೀ ಚಾಮುಂಡೇಶ್ವರಿ ಧ್ಯಾನಂ। ನೃಸಿಂಹಪ್ರಸಾದೆ॥)

'ನಿಗದ್ಯತೇಽತ್ರ ಯಾ ಚಂಡೀ ಹೇಮಾಭಾ ಸುಸ್ವರೂಪಿಣೀ।
ತ್ರಿನೇತ್ರಾ (ಯೌ(ವ)ನಸ್ಥಾ ಚ ಕ್ರುದ್ಧಾ ಚೋರ್ಧ್ವಸ್ಥಿತಾ ಮತಾ।
ಕೃಶಮಧ್ಯಾ ವಿಶಾಲಾಕ್ಷೀ ಚಾರುಪೀನಪಯೋಧರಾ।
ವಿಕವಕ್ತ್ರಾತು ಸುಗ್ರೀವಾ ಬಾಹುವಿಂಶತಿ ಸಂಯುತಾ।
ಶೂಲಾಸಿ ಚಕ್ರಾಣಿ ಬಾಣಶಂಖಿಪವೀನಪಿ।
ಅಭಯಂ ಡಮರುಂ ಚೈವ ಛುರಿಕಾಂ ದಕ್ಷಿಣೈಃ ಕರೈಃ।
ಪೂರ್ಧ್ವಾ(ರ್ವಾ)ದಿಕ್ರಮಯೋಗೇನ ಬಿಭ್ರತೀ ಸಾ ಸದಾ ಶುಭಾ।



ನಾಗಂ ಪಾಶಂ ತಥಾ ಖೇಟಂ ಕುಠಾರಾಂಕುಶಕಾರ್ಮುಕಾನ್।
ಘಂಟಾ ಧ್ವಜಗದಾದರ್ಶಾನ್ ಬಿಭ್ರಾಣಾ ಕಾಮರೂಪಿಣೇ।
ತದಧೋ ಮಹಿಷಚ್ಛಿನ್ನಮೂರ್ಧಾ ಪತಿತಮಸ್ತಕಃ।
ತ್ರಸ್ತೋದ್ಯತಕರಃ ಕ್ರುದ್ಧಸ್ತ ದ್ರಿೀವಾಸಂಭವಃ ಪುಮಾನ್।
ಶೂಲಭಿನ್ನೊ ವಮದ್ರಕ್ತೊ ರಕ್ತಭೂ ಶ್ಮಶ್ರುಲೋಚನಃ
ಸಿಂಹೇನ ಖಾದ್ಯಮಾನಸ್ತು ಪಾಶಬದ್ಧೋ ಗಲೇ ಭೃಶಂ।
ಸವ್ಯಾಂಘ್ರ್ಯಾಲೀಢಗಾಸುರೆ।

ಚಂಡೀ ಚೋದ್ಯತ ಶಸ್ತ್ರೌಘಮಶೇಷರಿಪುನಾಶಿನೀ।।
ಸ್ವರ್ಣವರ್ಣಃ।।

ಚಾಮುಂಡಾದೇವಿಯನ್ನು ದೇವಿಮಹಾತ್ಮ್ಯೆಯು ಅಷ್ಟಮಾತೃಕೆಯರಲ್ಲಿ ಒಂದು ರೂಪವೆಂದು ಹೇಳುತ್ತದೆ (೧೧, ೧೯ 'ಚಾಮುಂಡಾ ಮುಂಡಮಥನಾ'). ಸಪ್ತಮಾತೃಕೆಯರ ಗುಂಪಿನಲ್ಲಿ ಈ ದೇವತೆಯನ್ನು ಸೇರಿಸುವುದಿದೆ. ಭೇರುಂಡಾದೇವಿಯ ರೂಪಾಂತರವೆಂದೂ ಹೇಳುತ್ತಾರೆ. ಚಂಡ ಮತ್ತು ಮುಂಡ ಎಂಬ ಅಸುರರನ್ನು ಕೊಂದು ಅವರ ತಲೆಗಳನ್ನು ದೇವಿಗೆ ಒಪ್ಪಿಸಿದ ಪರಿಚಾರಿಕೆಯೆಂದೂ ಕತೆಯಿದೆ. ಆಗಮಗ್ರಂಥಗಳಲ್ಲಿ (ವಿಷ್ಣುಧರ್ಮೋತ್ತರ, ರೂಪಮಂಡನ) ವಾರುಣೀಚಾಮುಂಡಾ, ರಕ್ತಚಾಮುಂಡಾ ಎಂಬ ಭೇದವೂ ಇದೆ. ರಕ್ತಚಾಮುಂಡೆಯನ್ನು ಯೋಗೇಶ್ವರಿಯೆಂದು ಗುರುತಿಸುತ್ತಾರೆ. ಮಹಿಷಾಸುರ, ಕುಂಭ, ನಿಶುಂಭ, ಚಂಡ, ಮುಂಡ ಮೊದಲಾದ ಅಸುರರನ್ನು ಕೊಲ್ಲುವ ಸಂದರ್ಭದಲ್ಲಿ ದೇವಿಗೆ ನೆರವಾದ ಒಂದು ರೂಪವೆಂದು ಪ್ರತೀತಿ, ದೇವಿಯ ಒಂದು ರೂಪವೇ ಎಂದೂ ಪ್ರಸಿದ್ಧಿ.

ಮೇಲೆ ಕಾಣಿಸಿರುವ ಚಾಮುಂಡೇಶ್ವರಿಯ ವರ್ಣನೆಯಲ್ಲಿ ದೇವತೆಯನ್ನು ಚಂಡಿಯೆಂದೇ ಕರೆದಿರುವುದನ್ನು ಕಾಣಬಹುದು. ಚಂಡಿಯ ವಿಚಾರವು ಮಾರ್ಕಂಡೇಯಪುರಾಣದ 'ದೇವೀಮಹಾತ್ಮ್ಯೆ'ಯಲ್ಲಿ ಬರುತ್ತದೆ. ಈ ಗ್ರಂಥಭಾಗವನ್ನೇ 'ಚಂಡೀಪಾಠ', 'ಸಪ್ತಶತಿ' ಎಂದು ಕರೆಯುವ ವಾಡಿಕೆಯಿದೆ. ಶುಂಭ -ನಿಶುಂಭರೆಂಬ ರಾಕ್ಷಸರ ಸೇನಾಧ್ಯಕ್ಷರಾದ ಚಂಡ ಮತ್ತು ಮುಂಡ ಎಂಬುವರನ್ನು ಸೆರೆಹಿಡಿದು ಸಾಹಸವನ್ನು ತೋರಿಸಿದ ಚಂಡಿಯನ್ನು ಭಗವತಿಯಾದ ಕೌಶಿಕಿಯು ಚಾಮುಂಡಿಯೆಂದು ಕರೆದಳಂತೆ-

'ಯಸ್ಮಾಚ್ಚಂಡಂ ಚ ಮುಂಡಂ ಚ ಗೃಹೀತ್ವಾ ತ್ವಮುಪಾಗತಾ।
ಚಾಮುಂಡೇತಿ ತತೋ ಲೋಕೇ ಖ್ಯಾತಾ ದೇವೀ ಭವಿಷ್ಯಸಿ।।

'ಕಾತ್ಯಾಯನೀತಂತ್ರ'ದಲ್ಲಿ ಚಾಮುಂಡಿಯೇ ತನ್ನ ಪ್ರಥಮಚರಿತದಲ್ಲಿ ಮಹಾಕಾಳಿಯಾಗಿ (ಅಗ್ನಿತತ್ತ್ವವಾಗಿ) ಮಧ್ಯಮಚರಿತದಲ್ಲಿ ಮಹಾಲಕ್ಷ್ಮಿಯಾಗಿ (ಸೂರ್ಯತತ್ವವಾಗಿ), ಉತ್ತರ ಚರಿತದಲ್ಲಿ ಸರಸ್ವತಿಯಾಗಿ (ವಾಯುತತ್ತ್ವವಾಗಿ) ತೋರಿಕೊಂಡಳೆಂದು ಹೇಳಿದೆ. ಹೇಮಚಂದ್ರನ 'ಅಭಿಧಾನಚಿಂತಾಮಣಿ'ಯು ಚರ್ವಿಕಾ, ಚರ್ಮಮುಂಡಾ, ಮಾರ್ಜಾರಕರ್ಣಿಕಾ, ಮಹಾಗಂಧಾ, ಕರ್ಣಮೋಟೀ, ಭೈರವೀ, ಕಾಪಾಲಿನೀ ಎಂಬ ಹೆಸರುಗಳನ್ನು ಚಾಮುಂಡಿಗೆ ಪರ್ಯಾಯಪದಗಳಾಗಿ ಕಾಣಿಸಿದೆ. 'ಕಾಳಿಕಾಪುರಾಣ'ವು (ಅಧ್ಯಾಯ ೬೦) ಚಾಮುಂಡಿಯ ಹಣೆಯಿಂದ ಕಾಳಿಯು ಹೊರಹೊಮ್ಮಿದಳೆಂದು ಹೇಳಿ, ಚಾಮುಂಡಿಯ ಯೋಗಿನಿಯರಾಗಿ ತ್ರಿಪುರಾ, ಭೀಷಣಾ, ಚಂಡೀ, ಕರ್ತ್ರೀ, ಹಂತ್ರೀ, ವಿಧಾತೃಕಾ, ಕರಾಲಾ, ಶೂಲಿನೀ ಎಂಬ ಎಂಟು ಶಕ್ತಿಗಳನ್ನು ಹೆಸರಿಸುತ್ತದೆ. ಮತ್ತು

ಏಷಾತಿಕಾಮದಾ ದೇವೀ ಜಾಡ್ಯಹಾನಿಕರೀ ಸದಾ।
ಏತಸ್ಯಾಃ ಸದೃಶೀ ಕಾಚಿತ್ ಕಾಮದಾ ನ ಹಿ ವಿದ್ಯತೇ।।

ಎಂದು ಹೊಗಳಿದೆ.

ಈ ದೇವತೆಯು ಮೈಸೂರಿನ ಅರಸೊತ್ತಿಗೆಗೆ ಅಭಿಮಾನಿದೇವತೆಯಾಗಿ ಮೈಸೂರಿನ ನೆರೆಯಲ್ಲಿರುವ ಬೆಟ್ಟದ ಮೇಲೆ ಪೂಜೆಗೊಳ್ಳುತ್ತಾಳೆ. ಮುಮ್ಮಡಿ ಕೃಷ್ಣರಾಜ ಒಡೆಯರು ಈ ಗುಡಿಯನ್ನು 1827ರ ಸುಮಾರಿಗೆ ಜೀರ್ಣೋದ್ಧಾರ ಮಾಡಿಸಿದ ಉಲ್ಲೇಖವಿದೆ. ದೇವಿಯ ವಾಹನವಾದ ಸಿಂಹದ ಸುವರ್ಣಮೂರ್ತಿ, ದೇವಿಗೆ ಸುವರ್ಣ ನಕ್ಷತ್ರ ಮಾಲಿಕೆ ಮೊದಲಾದುವನ್ನು ಮಾಡಿಸಿಕೊಟ್ಟಿದ್ದಾರೆ. ಅವರ ಕಾಲದಲ್ಲಿ ಅವರ ಪ್ರೋತ್ಸಾಹದಿಂದ ಸಿದ್ಧವಾದ ಚಾಮುಂಡೇಶ್ವರೀ ಚಿತ್ರಗಳು ನೂರಾರು ಇವೆ. ಚಾಮುಂಡೇಶ್ವರಿಯ ಹೆಸರಿನಲ್ಲಿ ಅವರೇ ಹಲವು ಗ್ರಂಥಗಳನ್ನೂ (ಚಾಮುಂಡಾಂಬಾನಿಘಂಟು ಮುಂತಾಗಿ), ಆಟಗಳನ್ನೂ (ಚಾಮುಂಡಾಂಬಾ ಗಂಜೀಪು ಮುಂತಾಗಿ) ಸಿದ್ಧಪಡಿಸಿದ್ದಾರೆ. ಹೀಗಾಗಿ ಚಾಮುಂಡೇಶ್ವರಿಯ ಪರವಾದ ವರ್ಣನೆಯಿಂದ ಶ್ರೀತತ್ವನಿಧಿ ಆರಂಭವಾಗಿರುವುದು ಸಹಜವೇ.

ಇಲ್ಲಿ ಕೊಟ್ಟಿರುವ ವರ್ಣನೆಯಂತೆ ಈ ದೇವತೆಯ ಮೈಬಣ್ಣ ಚಿನ್ನದ್ದು; ಆಕೆ ರೂಪವತಿ, ಮುಕ್ಕಣ್ಣೆ, ತರುಣಿ, ಆದರೆ ಕೋಪಗೊಂಡ ನಿಲುವು. ಒಂದೇ ಮುಖವಾದರೂ ಇಪ್ಪತ್ತು ಕೈಗಳು. ಕೈಗಳಲ್ಲಿ ಶೂಲ, ಖಡ್ಗ, ಚಕ್ರ, ಬಾಣ, ಶಂಖ, ಅಗ್ನಿ, ಅಭಯ, ಮುದ್ರೆ, ಡಮರು, ಘುರಿಕೆ; ಎಡಕೈಗಳಲ್ಲಿ ಹೂವು, ಪಾಶ, ಗುರಾಣಿ, ಕೊಡಲಿ, ಅಂಕುಶ, ಬಿಲ್ಲು, ಗಂಟೆ, ಬಾವುಟ, ಗದೆ, ಕನ್ನಡಿ. ದೇವಿಯ ಕೆಳಭಾಗದಲ್ಲಿ ತಲೆ ತರಿದ ಎಮ್ಮೆ(ಮಹಿಷ)ಬಿದ್ದಿದೆ; ಅದರ ಕತ್ತಿನಿಂದ ರಾಕ್ಷಸ (ಮಹಿಷಾಸುರ) ಎದ್ದು ಕಾಣಿಸಿಕೊಳ್ಳುತ್ತಾನೆ. ದೇವಿಯು ತನ್ನ ಎಡಗಾಲನ್ನು ಈ ರಾಕ್ಷಸನ



ಮೇಲಿರಿಸಿ ತುಳಿಯುತ್ತಿದ್ದಾಳೆ, ಎಡಗಾಲು ತನ್ನ ವಾಹನವಾದ ಸಿಂಹದ ಮೇಲಿದೆ. ಅವಳ ಕೈಗಳಲ್ಲಿರುವ ಆಯುಧಗಳೆಲ್ಲವೂ ಪ್ರಯೋಗಕ್ಕೆ ಸಿದ್ಧವಾಗಿವೆ. ಎಲ್ಲ ಶತ್ರುಗಳ ಸಂಹಾರ ಅವಳ ಉದ್ದೇಶ.

ಸಪ್ತಮಾತೃಕೆಯರಲ್ಲಿ ಒಬ್ಬಳಾಗಿ ಚಾಮುಂಡಾಂಬಿಕೆಯ ರೂಪಕಲ್ಪನೆ ತೀರ ಬೇರೆ ರೀತಿಯಾಗಿದೆ.

'ಚತುರ್ಭುಜಾಂ ತ್ರಿನೇತ್ರಾಂ ಚ ಕಾಲಮೇಘಸಮಪ್ರಭಾಂ।
ದಂಷ್ಟ್ರಾಕರಾಲವದನಾಂ ವ್ಯಾಘ್ರಚರ್ಮಂಬರೋಜ್ವಲಾಂ॥೧॥
ಸಖಡ್ಗಾಂ ಶೂಲಹಸ್ತಾಂ ಚ ಕಪಾಲಾಭಯಧಾರಿಣೀಂ।
ಕಿಂಕಿಣೀಮಾಲಯಾ ಯುಕ್ತಾಂ ಕರಂಡಮಕುಟಾನ್ವಿತಾಂ॥೨॥
ಪೀನಸ್ತನೀಂ ಯೌವನಾಂ ಚ ಚಾಮುಂಡಾಂ ಭಾವಯೇತ್ ಸದಾ॥೩॥

ತಂಜಾವೂರಿನ ಸರಸ್ವತೀಮಹಲಿನಲ್ಲಿರುವ ಹಸ್ತಪ್ರತಿಯೊಂದರಲ್ಲಿ (ಮೂರ್ತಿಧ್ಯಾನಗಳ ಸಂಕಲನ, ತಂಜಾವೂರು ಸರಸ್ವತಿ ಮಹಲ್‌ಸೀರಿಸ್ ನಂ ೨೧೧, ಮಹಾರಾಜಾ ಸರಫೋಜಿಯ ಸರಸ್ವತಿ ಮಹಲ್ ಲೈಬ್ರರಿ, ತಂಜಾವೂರು, ೧೯೬೫, ಪುಟ ೫೪) ಕಾಣುವ ಈ ವರ್ಣನೆಯ ಪ್ರಕಾರ ಚಾಮುಂಡಾ ಎಂಬ ದೇವಿಗೆ ನಾಲ್ಕೇ ಕೈಗಳು, ಕೈಗಳಲ್ಲಿ ಕತ್ತಿ, ಶೂಲ, ಕಪಾಲ ಮತ್ತು ಅಭಯಮುದ್ರೆ, ಮೂರ್ತಿಯ ಮೈಬಣ್ಣ ಕಾರ್ಮೊಡದಂತೆ ಕಪ್ಪು; ಪ್ರೇತವಾಹನ, ರುಂಡಮಾಲೆ, ಹುಲಿಯ ಚರ್ಮ ಹೊದಿದ್ದಾಳೆ, ಕೋರೆದಾಡೆಗಳು ಕಾಣುತ್ತವೆ. ಇದೇ ಗ್ರಂಥಭಂಡಾರದಲ್ಲಿರುವ ಇನ್ನೊಂದು ಹಸ್ತಪ್ರತಿಯಲ್ಲಿ (ಅದೇ ಸಂಕಲನ, ಪು ೭೯) ಚಾಮುಂಡೀ ಎಂಬ ದೇವಿಯ ರೂಪಕಲ್ಪನೆಯಿದ್ದು, ಅದೂ ಚತುರ್ಭುಜವೇ. ಆದರೆ ಧ್ಯಾನಶ್ಲೋಕದಲ್ಲಿ ಕಪಾಲ, ವರದ ಎಂದು ಎರಡು ಕೈಗಳ ವಿವರವಷ್ಟೇ ಇದೆ. ಇವಳು 'ಭೂತಪ್ರೇತಾದಿವಾಹನೆ'ಯಂತೆ; ತ್ರಿನೇತ್ರೆ; ಶತ್ರುನಾಶಿನಿ; ಸರ್ವಾಭೀಷ್ಟಫಲಪ್ರದೆ.


ಮುಮ್ಮಡಿಯವರೇ ರಚಿಸಿರುವ ಇನ್ನೊಂದು ಗ್ರಂಥ 'ದೇವತಾ ಧ್ಯಾನಮಾಲಿಕಾ' ('ಶ್ರೀ ಕೃಷ್ಣರಾಜ ಮಹಾರಾಜ ಕಂಠೀರವೇಂದ್ರರಿಂದ ಪ್ರಕಾಶಿತಮಾದ'ಎಂಬ ಒಕ್ಕಣೆಯಿರುವುದರಿಂದ ಇದೊಂದು ಸಂಕಲನಗ್ರಂಥ ಆಷ್ಟೆ). ಇದರ ಕಲ್ಲಚ್ಚಿನ ಒಂದು ಪ್ರತಿ ನನ್ನಲ್ಲಿದೆ. ಇದು ಆರಂಭವಾಗುವುದು 'ಶ್ರೀ ಚಾಮುಂಡಾಂಬಿಕಾ ಧ್ಯಾನ' ದಿಂದಲೆ; ಈ ಸುದೀರ್ಘವಾದ ಧ್ಯಾನಶ್ಲೋಕ ಸಂಗ್ರಹವನ್ನೂ 'ನೃಸಿಂಹ ಪ್ರಾಸಾದ' ದಿಂದಲೇ ಆಯ್ದುಕೊಂಡಿದ್ದಾರೆಂಬ ಸೂಚನೆಯಿದೆ. ಇಲ್ಲಿನ ಚಾಮುಂಡೇಶ್ವರಿ ಮೂವತ್ತೆರಡು ಕೈಗಳ ದೇವತೆ. ಆರಂಭದಲ್ಲಿ ಕಾಣುವ ಒಕ್ಕಣೆ-

'ಅಥ ದ್ವಾತ್ರಿಂಶದ್ಭುಜ ಶ್ರೀ ಚಾಮುಂಡಾಂಬಿಕಾ ಧ್ಯಾನಂ।
ನೃಸಿಂಹಪ್ರಾಸಾದೆ।
ಕಾಳಿಕಾ ಪುರಾಣೆ । ತಂತ್ರೆ ಚ॥

ಇಲ್ಲಿರುವ ವರ್ಣನೆ ವಿಸ್ತೃತವಾದದ್ದು; ಸಂದರ್ಭವನ್ನು ಶ್ರೀತತ್ವನಿಧಿಯ ನಿರೂಪಣೆಗಿಂತ ಚೆನ್ನಾಗಿ ವಿವರಿಸಿದೆ



ಚಾಮುಂಡೇಶ್ವರಿ



ಚಾಮುಂಡೇಶ್ವರಿ

'ಶ್ರೀ ಚಾಮುಂಡಾ ಮಹಾದೆವೀ। ಸೃಷ್ಟಿಸ್ಥಿತ್ಯಂತಕಾರಿಣೇ।
ಮಹಾಬಲಾಚಲಾವಾಸಾ। ಸೂರ್ಯಚಂದ್ರಾಗ್ನಿಲೋಚನಾ॥೨॥
ಜ್ವಲಜ್ವಾ (ಜ್ವಾ)ಲಾ ಕರೀಟಾಢ್ಯಾ । ಚಂದ್ರರೆ(ಲೇ)ಖಾವತಂಸಿನೀ।
ರತ್ನಗ್ರೈವೆ(ವೇ)ಯತಾಟಂಕ। ಕಟೀಕಾಂಗುಳಿನೂಪುರಾ॥೩॥
ರುಂಡಮಾಲಾವಿಭೂಷಾಢ್ಯಾ । ಭೃಕುಟೀಕುಟಿಲೇಕ್ಷಣಾ।
ದಂಷ್ಟ್ರಾಕರಾಳವದನಾ । ಚಂಡಕೋಪಸಮನ್ವಿತಾ॥೪॥
ದ್ವಾತ್ರಿಂಶಾದಾಯುಧೋಪೇತ। ದ್ವಾತ್ರಿಂಶದ್ಬುಜಮಂಡಲಾ।
ಚಂದ್ರಹಾಸಂ।ಚಕ್ರ।ಶೂಲ।ಶರ।ಶಕ್ತಿಗದಾಂ।ಕುಶಾನ್॥೫॥
ಭೃಶುಂಡೀಂ।ತೋಮರಂ।ಕುಂತಂ।ಜಯಘಂಟಾಂ।
ಪರಶ್ವಧಂ। ಭುರಿಕಾಂ।ಪರಿಘಂ।ವಜ್ರ।ಮಭಯಂ ದಕ್ಷಿಣೈಃ ಕರೈಃ॥೬॥
ಖೇಟಂ।ಶಂಖಂ।ಚಾಪ।ಪಾಶ।ಡಮರು।ಪ್ರಾಸ।ಮುದ್ಗರಾನ್।
ಕಷ್ಪರಿಕಾ।ಭಿಂಡಿವಾಳ।ನಾಗ।ಪಟ್ಟಿಸಾನ್॥೭॥
ಕಪಾಲಂ।ದರ್ಪಣಂ।ದಂಡಂ।ವರಂ ವಾಮೈಶ್ಚಬಿಭ್ರತೀ।
ಮಹಿಷಾಕಾರದೈತ್ಯಸ್ಯ। ಶಿರಶ್ಛಿತ್ವಾ ರಣಾಂಗಣೇ ॥೮॥
ಶೂಲಾಗ್ರೇಣ ವಿನಿರ್ಭಿದ್ಯ।ಬಧ್ವಾ ಪಾಶೇನ ತಂ ಗಳೇ।
ಮುಖಾದ್ವಮಂತಂ ರುಧಿರಂ।ರಕ್ತಭ್ರೂಶ್ಮಶ್ರುಲೋಚನಂ॥೧೦॥
ಸಿಂಹೇನ ಖಾದಯಂತ್ಯೇನಂ । ಯಾಮ್ಯಾಂಘ್ರ್ಯಾಕ್ರಾಂತಸಿಂಹಗಾ।
ಸವ್ಯಾಂಘ್ರ್ಯಾಲೀಢಮಹಿಷದೈತ್ಯಘ್ನೀ ಕಾಮರೂಪಿಣೀ॥೧೧॥
ಯೋದ್ಧುಮಾಪತತಃ ಕೃ(ಕ್ರು)ದ್ಧಾನ್ ಪರಿತೋ ದೈತ್ಯಯೂಥಪಾನ್।
ಹುಂಕಾರ ಮಾತ್ರತಸ್ಸರ್ವಾ।ನ್ನಾಶಯಂತೀ ಮದೋತ್ಕಟಾನ್॥೧೨॥
ರಕ್ತಬೀಜಾದಿಸಂಹರ್ತ್ರೀ। ಚಂಡಮುಂಡನಿಷೂದಿನೀ।
ತಾಂಬೂಲಪೂರಿತಮುಖೀ। ಪ್ರಸನ್ನವದನಾಂಬುಜಾ॥೧೩॥
ಸರ್ವಚೈತನ್ಯರೂಪಾಢ್ಯಾ। ಭಕ್ತಾನುಗ್ರಹಕಾರಿಣೀ।
ಮಹಾಮಾಯಾ ಜಗದ್ಧಾತ್ರೀ । ದುರ್ಗಾ ತ್ರೈಲೋಕ್ಯಪೂಜಿತಾ॥೧೪॥
ಬ್ರಹ್ಮೇಂದ್ರಾದಿ ಮುನಿಸ್ತುತ್ಯಾ।ಯೋಗಿನೀಗಣಸೇವಿತಾ।
ಯಾದವಾನ್ವಯರಾಜೇಂದ್ರ।ವಂಶಾಂಬೋನಿಧಿಚಂದ್ರಿಕಾ॥೧೫॥
ರಾಜರಾಜೇಷ್ವವರದಾ।ರಾಜ್ಯಲಕ್ಷ್ಮೀ ಪ್ರದಾಯಿನೀ।
ಶಕ್ತಿತ್ರಿತಯರೂಪಾಢ್ಯಾ।ಸನ್ನಿಧತ್ತಾಂ ಸದಾ ಹೃದಿ॥೧೬॥
ಇತಿ ದ್ವಾತ್ರಿಂಶದ್ಬುಜ ಶ್ರೀಚಾಮುಂಡಾಂಬಾಸ್ವರೂಪಧ್ಯಾನಂ
ಸಂಪೂರ್ಣಂ॥



ಮಹಿಷಾಸುರಮರ್ದಿನಿ

ಇದು ಸೊಗಸಾದ ವರ್ಣನೆಯೆ, ಇದಕ್ಕೆ ಚಿತ್ರವೊಂದನ್ನು ಅರಸರು ಬರೆಯಿಸಿ ಈ ಗ್ರಂಥದಲ್ಲಿ ಸೇರಿಸಿದ್ದಾರೆ. ಅದನ್ನು ಇಲ್ಲಿ ಕಾಣಿಸಲಾಗಿದೆ. ಮುಂದೆ ಇನ್ನೊಂದು ಚಾಮುಂಡಾಂಬಿಕಾಧ್ಯಾನವಿದೆ. ಇದನ್ನು 'ಅಥ ಅಷ್ಟಭುಜಮಹಿಷಾಸುರಮರ್ದಿನೀಧ್ಯಾನಂ' ಎಂದು ಆರಂಭಿಸಲಾಗಿದೆ.

'ಶ್ರೀಮತ್ಕರ್ಣಾಟರಾಜ್ಯಶ್ರೀರಾಜೇಂದ್ರಕುಲದೇವತಾ।
ಮಹಾಬಲಾಚಲಾವಾಸಾಂ। ಶ್ಯಾಮಾಮಷ್ಟಭುಜಾನ್ವಿತಾಂ।
ಕೌಸುಂಭವಸನೋಪೇತಾಂ। ದಿವ್ಯಕಂಚುಕಧಾರಿಣೀಂ।
ಅಪ್ರಾಕೃತವಿಭೂಷಾಢ್ಯಾಂ। ತೇಜಸ್ತ್ರಯವಿಲೋಚನಾಂ।।೨।।
ದುರ್ಗಾಂ ದೇವಾದಿ ಸಂಸ್ತುತ್ಯಾಂ(ತಾಂ)। ಸರ್ವಚೈತನ್ಯರೂಪಿಣೀಂ।
ಸಿಂಹಾರೂಢಾಂ । ಚಂದ್ರಚೂಡಾಂ। ರುಂಡಮಾಲಾ ವಿಭೂಷಿತಾಂ।
ಶೂಲಾಸಿಶಂಖಚಕ್ರಾದಿ।ಧಾರಿಣೀಂ ಜಯದಾಯಿನೀಂ।।೪।।
ನವಾಕ್ಷರೀಮನಸ್ತುತ್ಯಾಂ। ನವಲಾವಣ್ಯಶಾಲಿನೀಂ।
ಶಕ್ತಿತ್ರಿತಯರೂಪಾಢ್ಯಾಂ।ಶ್ರೀ ಚಾಮುಂಡಾಂ ನಮಾಮ್ಯಹಂ।।೫।।

ಈ ವರ್ಣನೆಯಲ್ಲಿರುವ 'ಶಕ್ತಿತ್ರಿತಯರೂಪಾಢ್ಯೆ' ಯೆಂಬ ವಿವರ ಸ್ವಾರಸ್ಯವಾದುದು. ಮೂರು ಶಕ್ತಿಗಳು ಯಾವುವೆಂದರೆ ಮಹಾಕಾಳಿ, ಮಹಾಲಕ್ಷ್ಮಿ, ಮಹಾಸರಸ್ವತಿ. ಮಾರ್ಕಂಡೇಯ ಪುರಾಣದಲ್ಲಿ ಸೇರಿರುವ 'ಸಪ್ತಶತಿ ದೇವೀಮಾಹಾತ್ಮ್ಯ'ಯಲ್ಲಿ ದುರ್ಗೆಯು ಈ ಮೂರು ರೂಪಗಳನ್ನು ತಳೆದ ಉಲ್ಲೇಖವಿದೆ. ಈ ಗ್ರಂಥಭಾಗದಲ್ಲಿ ದೇವಿಯ ಸಾಹಸವನ್ನು ಮೂರು ಚರಿತ್ರಗಳಲ್ಲಿ ಬಿತ್ತರಿಸಲಾಗಿದೆ. ಮೊದಲನೆಯದು ಮಧುಕೈಟಭರೆಂಬ ಇಬ್ಬರು ಅಸುರರ ವಧೆಯನ್ನೂ, ಎರಡನೆಯದು ಮಹಿಷಾಸುರನ ವಧೆಯನ್ನೂ, ಮೂರನೆಯದು(ಉತ್ತರಚರಿತೆ) ಶುಂಭ-ನಿಶುಂಭರೆಂಬ ದೈತ್ಯರ ವಧೆಯನ್ನೂ ನಿರೂಪಿಸುತ್ತವೆ. ಶಕ್ತಿತ್ರಯವನ್ನನುಸರಿಸಿ ಚರಿತ್ರತ್ರಯ, ಚರಿತ್ರತ್ರಯವನ್ನನುಸರಿಸಿ ರಹಸ್ಯತ್ರಯ ಎಂದು ರುದ್ರಯಾಮಳದ ವಿವರಣೆ.

ಮಮ್ಮಡಿಯವರ ಚಾಮುಂಡಾದೇವಿ ಮಹಿಷಾಸುರಮರ್ದಿನಿಯಾದ ದುರ್ಗೆ, ಪ್ರಧಾನದೇವತೆ, ಸಪ್ತಮಾತೃಕೆಯರಲ್ಲಿ ಒಬ್ಬಳಲ್ಲ. ಮೈಸೂರು ಪ್ರದೇಶವು ಕ್ರಿಸ್ತಪೂರ್ವಯುಗದಲ್ಲೇ ಮಹಿಷಕ (ಅಥವಾ

ಮಹಿಷಮಂಡಲ) ಎಂದು ಪ್ರಖ್ಯಾತವಾಗಿದ್ದುದು ಮಹಿಷಾಸುರನಿಗೂ ಈ ದೇವಿಗೂ ಏರ್ಪಟ್ಟ ನಂಟಿಗೆ ಕಾರಣವಾಗಿದ್ದೀತು. ಮಹಿಷಾಸುರನು ನೆಲೆಸಿದ್ದುದು ಮೈಸೂರಿನ ನೆರೆಯಲ್ಲಿರುವ ಬೆಟ್ಟದ ಮೇಲೇ ಎಂಬುದು, ಅಲ್ಲಿನ ಗುಡಿಯಲ್ಲಿದ್ದ ದೇವಿಯು ಈ ಅಸುರನನ್ನು ಕೊಂದು ಲೋಕವನ್ನು ಕಾಪಾಡಿದಳೆಂಬ ಕತೆಯೂ ಈ ಹಿನ್ನೆಲೆಯಲ್ಲಿದೆಯಷ್ಟೆ. ಗುಡಿಯ ಮೂಲಸ್ಥಾನದಲ್ಲಿರುವ ಮೂರ್ತಿಯ ಲಕ್ಷಣವೇನೋ ಮಹಿಷಮರ್ದಿನಿಯದಲ್ಲ. ಈ ದೇವತೆಯು ಮೊದಲು ತ್ವರಿತಾ ಅಥವಾ ಪ್ರತ್ಯಂಗಿರಾ ಎಂಬ ದೇವೀರೂಪವಾಗಿದ್ದಿತೆಂಬುದನ್ನು ಆಗಮಿಕ ತಲಕಾಡು ಕೃಷ್ಣದೀಕ್ಷಿತರಿಂದ ಕೇಳಿದ್ದೇನೆ. ಅಲಂಕಾರವಿಲ್ಲದ ಮೂರ್ತಿಯನ್ನು ನಾನು ನೋಡಿಲ್ಲ.

ರಾಜರಾಜೇಶ್ವರೀ

ಶ್ರೀಪುರವರ್ಣನೆಯ ಕಡೆಯಲ್ಲಿ ಶ್ರೀಚಕ್ರನಾಯಿಕೆಯಾಗಿ ಉಲ್ಲೇಖಗೊಂಡ ದೇವೀಸ್ವರೂಪವನ್ನು ರಾಜರಾಜೇಶ್ವರಿಯೆಂದು ಕರೆಯಲಾಗಿದೆ. ಈ ಹೆಸರು ಪ್ರಾಚೀನ ದೇವ್ಯಾಗಮಗ್ರಂಥಗಳಲ್ಲಿ ಕಾಣಸಿಗುವುದಿಲ್ಲ. ರುದ್ರಯಾಮಳಕ್ಕೆ ಸೇರಿದ 'ದಶವಿದ್ಯಾರಹಸ್ಯ'ವೆಂಬ ಭಾಗದಲ್ಲಿ ಪರಿಶಿಷ್ಟವಾಗಿ 'ಮಹಾರಾಜ್ಞೀ ಪಟಲ' ವೆಂಬ ಪ್ರಕರಣ ಕೂಡಿಕೊಂಡಿದೆ. ಇದರಲ್ಲಿ

'ಮಹಾಶ್ರೀಷೋಡಶೀವಿದ್ಯಾ ಸಾ ರಾಜ್ಞೇತಿ ನಿಗದ್ಯತೇ'
(ಪಂಚಾಂಗ ೬)
'ಯಾ ದೇವೀ ಲೋಕಮಾತೇತಿ ರಾಜ್ಞೀ ರಾಜ್ಯಪ್ರದಾಯಿನೀ'
(ಅಲ್ಲಿಯೇ, ೯)
'ರಾಜೇಶೀ ರಾಜರಾಜ್ಞೀ ರತಿಪ್ರಿಯಾ'
(ಸಹಸ್ರನಾಮಾಂಗ, ೧೪೧)

ಎಂಬ ಉಲ್ಲೇಖಗಳಿವೆ. ಇಲ್ಲಿ 'ಭಗವತೀಮಹಾರಾಜ್ಞಿ'ಯೆನಿಸಿಕೊಂಡ ದೇವಿಗೂ ಕೌಲಸಂಪ್ರದಾಯದ ಶ್ರೀಚಕ್ರಉಪಾಸನೆಗೂ ನಿಕಟಸಂಬಂಧವಿರುವುದನ್ನು ಪಟಲದ ಉದ್ದಕ್ಕೂ ಕಾಣಬಹುದು. ದಶಮಹಾವಿದ್ಯೆಯರಲ್ಲಿ 'ಷೋಡಶೀ' ಎನಿಸಿಕೊಂಡ ವಿದ್ಯೆ ಇದು. ಆದರೆ ಇಲ್ಲಿರುವ ಮೂರ್ತಿಲಕ್ಷಣವು ನಮ್ಮ ಇಂದಿನ ಕಲ್ಪನೆಯ ರಾಜರಾಜೇಶ್ವರಿಯನ್ನು ನೆನಪಿಗೆ ತರುವುದಿಲ್ಲ

'ಉದ್ಯದ್ದಿವಾಕರಸಹಸ್ರರುಚಿಂ ತ್ರಿನೇತ್ರಾಂ
ಸಿಂಹಾಸನೋಪರಿಗತಾಂ ಉರಗೋಪವೀತಾಂ।
ಖಡ್ಗಾಂಬುಜಾಢ್ಯ ಕಲಶಾಮೃತಪಾತ್ರಹಸ್ತಾಂ
ರಾಜ್ಞೀಂ ಭಜಾಮಿ ವಿಕಸದ್ವದನಾರವಿಂದಾಂ॥
(ಚತುರ್ಭುಜಾಂ ಚಂದ್ರಕಲಾರ್ಧಶೇಖರಾಂ
ಸಿಂಹಾಸನಸ್ಥಾಂ ಭುಜಗೋಪವೀತಾಂ।
ಪಾಶಾಂಕುಶಾಂಭೋರುಹ ಖಡ್ಗಧಾರಿಣೀಂ
ರಾಜ್ಞೀಂ ಭಜೇ ಚೇತಸಿ ರಾಜ್ಯದಾಯಿನೀಂ॥)

ಕಂಸಗಳಲ್ಲಿ ಕಾಣಿಸಿರುವ ಪಾಠಾಂತರದಲ್ಲಿ ರಾಜರಾಜೇಶ್ವರಿಯ ಕೈಯಲ್ಲಿರುವ ಪಾಶ ಮತ್ತು ಪಂಚಬಾಣ (ಐದು ಹೂ ಬಾಣಗಳು) ಇವುಗಳ ಸೊಲ್ಲಿಲ್ಲ. ಮಹಾರಾಜ್ಞಿಯೆಂಬ ರೂಪದಲ್ಲಿ ದೇವಿಯು ಸಿಂಹಾಸನದ ಮೇಲೆ ಕುಳಿತು, ಕೈಗಳಲ್ಲಿ ಕತ್ತಿ, ಕಮಲ, ಕಲಶ, ಪಾನಪಾತ್ರೆಗಳನ್ನು ಹಿಡಿದು, ಹಾವನ್ನೆ ಉಪವೀತವಾಗಿ ಧರಿಸಿದವಳು. ಇವಳು ರಾಜ್ಞಿ (ಎಂದರೆ ರಾಣಿ) ಮಾತ್ರವಲ್ಲದೆ ರಾಜ್ಯವನ್ನು ಭಕ್ತರಿಗೆ ನೀಡುವವಳು. ಕೌಲಸಂಪ್ರದಾಯದ ಶಾಕ್ತಾಭಿಷೇಕದೀಕ್ಷೆಗಳಲ್ಲಿ ಸಾಮ್ರಾಜ್ಯದೀಕ್ಷೆ (ಸಿದ್ಧಾಂತಾಚಾರ) ಮತ್ತು ಮಹಾಸಾಮ್ರಾಜ್ಯದೀಕ್ಷೆ (ಕೌಲಾಚಾರದಲ್ಲಿ ದಿವ್ಯಭಾವ) ಎಂಬೆರಡು ವಿವರಗಳಿರುವುದನ್ನೂ ಈ ಸಂದರ್ಭದಲ್ಲಿ ಗಮನಿಸಬೇಕು.

ಶ್ರೀವಿದ್ಯೆಯ ಚೌಕಟ್ಟಿನಲ್ಲಿ 'ಶ್ರೀರಾಜರಾಜೇಶ್ವರಿ' ಎಂಬ ಹೆಸರಿನ ಸ್ವಾರಸ್ಯವಿರುವುದು ರಾಜರಾಜನಾದ ಕುಬೇರನಿಗೂ ಒಡತಿಯೆಂಬರ್ಥದಲ್ಲಿ. ಕುಬೇರನಿಗೆ 'ರಾಜರಾಜ' ನೆಂಬ ಹೆಸರಿರುವುದು ಅಮರಕೋಶಕಾರನಿಗೇ ತಿಳಿದಿದೆ (೧, ೧, ೬, ೩). ಶ್ರೀವಿದ್ಯಾಸಂಪ್ರದಾಯದ ಹನ್ನೆರಡುಮಂದಿ ಪ್ರವರ್ತಕರಲ್ಲಿ ಕುಬೇರನೊಬ್ಬ. ಶ್ರೀವಿದ್ಯಾರ್ಣವತಂತ್ರದಲ್ಲಿ (ಮೊದಲ ಪಟಲ, ೨೫೪) ಕುಬೇರನನ್ನು ಶ್ರೀವಿದ್ಯೆಯ ಸಿದ್ಧೌಘದಲ್ಲಿ ಕಾಣಿಸಿದ್ದಾರೆ

'ಮನುಶ್ಚಂದ್ರಃ ಕುಬೇರಶ್ಚ ಲೋಪಾಮುದ್ರಾ ಚ ಕಾಮರಾಟ್।
ದುರ್ವಾಸಾಶ್ಚ ಮಹಾದೇವ್ಯಾ ದ್ವಾದಶೋಪಾಸಕಾಃ ಸ್ಮೃತಾಃ॥'
(ಪಟಲ ೭, ೪೩೪೪)

ಶ್ರೀವಿದ್ಯಾ ಸಂಪ್ರದಾಯಭೇದಗಳಲ್ಲಿ 'ಕುಬೇರೋಪಾಸಿತಾ ಶ್ರೀವಿದ್ಯಾ' ಎಂಬುದೂ ಒಂದು ಇದೆ. (ಹಸಕಏಈಲ ಹ್ರೀಂ। ಹಸಕಏಈಲ ಹ್ರೀಂ। ಹಸಕಏಈಲ ಹ್ರೀಂ॥). ಶ್ರೀವಿದ್ಯೆಯ ಫಲವನ್ನು ಹೇಳುವಾಗ 'ಸಂಪತ್ಪ್ರದಾ', 'ಸುಭಗೋದಯಾ', 'ಸರ್ವಾರ್ಥಸಿದ್ಧಿಪ್ರದಾ', 'ಸರ್ವಸಾಮ್ರಾಜ್ಯದಾಯಿನೀ', 'ಸರ್ವಸೌಭಾಗ್ಯಜನನೀ' ಎಂದೆಲ್ಲ ಹೇಳಿರುವುದನ್ನು ನೋಡಿದರೆ ಯಕ್ಷರಾಜನಾದ ಕುಬೇರನಿಂದ ಪ್ರವರ್ತಿತವಾದ ಶ್ರೀವಿದ್ಯಾಪದ್ಧತಿಯಲ್ಲಿ ಪೂಜೆಗೊಳ್ಳುವ ದೇವಿಯನ್ನು 'ರಾಜರಾಜೇಶ್ವರಿ'ಯೆಂದು ಕರೆದಿರಬಹುದೆಂದು ತೋರುತ್ತದೆ. ಕುಬೇರನು ನಮ್ಮ ಪೂಜಾಕ್ರಮದಲ್ಲಿ ಉಳಿದಂತೆ ಸೇರಿಕೊಂಡುಬಂದಿರುವುದೂ ಉಂಟು. ನಿತ್ಯಪೂಜೆಯ ಕೊನೆಯಲ್ಲಿ ಮಂತ್ರಪುಷ್ಪವಾದಮೇಲೆ 'ರಾಜಾಧಿರಾಜನಾದ ಮಹಾರಾಜನಾದ ಕುಬೇರ - ವೈಶ್ರವಣ'ನಿಗೆ ನಮಸ್ಕಾರ ಸಲ್ಲುವುದಿಲ್ಲವೆ?

ಶ್ರೀತತ್ತ್ವನಿಧಿಯಲ್ಲಿ ಕೊಟ್ಟಿರುವ ರಾಜರಾಜೇಶ್ವರೀಧ್ಯಾನವನ್ನು 'ಷೋಡಶೀಕಲ್ಪ'ದಿಂದ ಆಯ್ದುಕೊಳ್ಳಲಾಗಿದೆ ('ಅಥ ರಾಜರಾಜೇಶ್ವರೀ ಧ್ಯಾನಂ॥ ಷೋಡಶೀಕಲ್ಪೆ॥)

'ಕೋಟಿಕಂದರ್ಪಲಾವಂಣ್ಯ ಶಿವವಾಮಾಂಕ ವಾಸಿನೀಂ।
ವಿಕಕಾಲೋದಿತಾನೇಕ ಚಂದ್ರ ಕೋಟ್ಯರ್ಕ ಕೋಟಿಭಾಂ।
ಪ್ರಭಾಪಾಟಲಿತಾನೇಕ ಕೋಟಿಬ್ರಹ್ಮಾಂಡಮಂಡಲಾಂ।
ಜಪಾಕುಸುಮಸಂಕಾಶಾಮಜಪಾಮಜಪಾತ್ಮಿಕಾಂ।
ಕುಂಕುಮೋದರಸಂಕಾಶಾಂ ದಾಡಿಮೀಕುಸುಮಾರುಣಾಂ।
ಬಾಲಾರ್ಕಕೋಟಿಭಾಂ ತ್ರ್ಯಕ್ಷಾಂ ಬಾಲೇಂದು ಮಕುಟೋಜ್ವಲಾಂ।
ಪಾಶಾಂಕುಶೇಕ್ಷುಕೋದಂಡ ಪಂಚಬಾಣಲಸತ್ಕರಾಂ।



ಅಚಂಚಲ ತಟಿತ್ಕೋಟಿ ಪ್ರಭಾಪಿಂಗಳವಾಸಸಂ।
ಸಮವೃತ್ತಸುವೃತ್ತೋರುಜಘನಸ್ತನಮಂಡಲಾಂ।
ಕೋಟೀರಕೋಟಿ ಘಟಿತಸುಧಾಕರಸುಧಾಪ್ಲುತಾಂ।
ಫಾಲಭೂತಿಲಕೇಭೂತಲೋಚನಾಂ ಕಾಮಲೋಚನಾಂ।
ಕಟಾಕ್ಷಸರಣೇನಿರ್ಧೃತ್ಕರುಣಾಪೂರ್ಣಲೋಚನಾಂ
ಸೂರ್ಯೇಂದುಮಂಡಲಾಕಾರ ಮಣಿತಾಟಂಕಮಂಡಿಕಾಂ।

ಶುಕ್ರತಾರಾಸಮಾಕಾರ ನಾಸಾಭರಣಶೋಭಿನೀಂ॥
ದಾಡಿಮೀ ಬೀಜಸಂದೋಹಸಂದೇಹ ದಶನಾವಳಿಂ ।
ವೀಣಾರವಪ್ಯೂಣಾದಾಯಿ ನಿಜವಾಣೇಗುಣೋದಯಾಂ।
ಕರ್ಪೂರವೀಟಿಕಾಗಂಧ ಸುಗಂಧಿತ ದಿಗಂತರಾಂ।
ಮಣಿದರ್ಪಣದರ್ಪಘ್ನ ಕಪೋಲಫಲಕಪ್ರಭಾಂ।
ಪ್ರಸನ್ನವದನಾಂಭೋಜಾಂ ಸಮಂದ ಹಸಿತೇಕ್ಷಣಾಂ।

ಮಣಿಮಂಗಲಸೂತ್ರೇಣ ವಿಲಸತ್‌ಕಂಬು ಕಂಧರಾಂ।
ಶ್ರುತಕಲ್ಪಲತೀಭೂತಭುಜವಲ್ಲೀ ಚತುಷ್ಪಯಾಂ।
ರತ್ನಾಂಗುಳೀಯ್ಯ ನಿವಹೈರ್ಲಸದಂಗುಳಿಪಲ್ಲವಾಂ।
ತಾರಹಾರಝರೈರ್ಭಾಸ್ವತ್ ಸ್ತನಹಾಟಕಭೂಧರಾಂ।
ಕುಚಭಾರನಮನ್ಮಧ್ಯತ್ರಿವಳೀಲಲಿತೋದರಾಂ।
ಅನರ್ಘ್ಯರತ್ನ ಘಟಿತರಶನಾಜಘನಸ್ಥಳಾಂ।
ಸುವೃತ್ತಜಂಘೋರುಕಾಂಡಾಂ ಗೂಢಗುಲ್ಫಾಂ ಗುಡಾಲಕಾಂ।
ಶಿಂಜಾನಮಣಿಮಂಜೀರ ಮಂಜು ಪಾದಾಬ್ಜ ಮಂಜುಳಾಂ ।
ರತ್ನಗ್ರೈವೇಯ ವಲಯಮಕುಟಾಂಗದ ಕಂಕಣಾಂ।
ಕಂಬುಕಂಠೀಂ ಸುನಾಸಾಢ್ಯಾಂ ಬಿಂಬೋಷ್ಠೀಮುಡುಪಾನನಾಂ।
ಸರ್ವಶೃಂಗಾರವೇಷಾಢ್ಯಾಂ ಸರ್ವಾಭರಣಭೂಷಿತಾಂ।
ಚಂದನಾಗರುಕರ್ಪೂರ ಮೃಗನಾಭಿಸುಗಂಧಿನೀಂ।
ಕಾರಣೇಶ ಶಿರೋರತ್ನನಿಘೃಷ್ಟಚರಣಾಂಬುಜಾಂ।
ಪಂಚಪ್ರೇತಾಸನಾಸೀನಾಂ ಪಂಚಪ್ರಣವರೂಪಿಣೀಂ।।)
ಸಿಂದೂರವರ್ಣಾಂ।।

ಸುದೀರ್ಘವಾದ, ಸಾಂಪ್ರದಾಯಿಕವಾದ ದೇವತಾವರ್ಣನೆ; ಅರಸಿಯ ವೈಭವಗಳನ್ನೆಲ್ಲ ನೆನಪಿಗೆ ತಂದುಕೊಡುತ್ತದೆ. ಆದರೆ ರಾಜರಾಜೇಶ್ವರಿಗೆ ವಿಶಿಷ್ಟವಾದ ವಿವರಗಳಲ್ಲಿ 'ಪಂಚಪ್ರೇತಾಸನಾಸೀನೆ', 'ಶಿವವಾಮಾಂಕನಿವಾಸಿನಿ' ಎಂಬೆರಡನ್ನು ಬಿಟ್ಟರೆ ಬೇರೇನೂ ಇರದು. ಯಾವ ದೇವೀರೂಪಕ್ಕಾದರೂ ಸಾಮಾನ್ಯವಾಗಿ ಇದು ಅನ್ವಯವಾದೀತು. ಮುಖ್ಯವಾಗಿ ರಾಜರಾಜೇಶ್ವರೀದೇವಿಯ (ಲಲಿತಾಂಬಿಕೆ, ತ್ರಿಪುರಸುಂದರಿ) ಮೂರ್ತಿಕಲ್ಪನೆಯಲ್ಲಿ ಆಕೆ ತನ್ನ ನಾಲ್ಕು ಕೈಗಳಲ್ಲಿ ಹಿಡಿದಿರುವ ಆಯುಧಗಳು ವಿಶಿಷ್ಟವಾದುವು; ಅವನ್ನು ಈ ಧ್ಯಾನಶ್ಲೋಕಗಳು ಕಾಣಿಸುವುದಿಲ್ಲ. ಆಕೆಯ ಆಯುಧಗಳು ಪಾಶ (ಎಂದರೆ ರಾಗ, ಪ್ರೀತಿ, ಆಕರ್ಷಣೆ), ಅಂಕುಶ (ದ್ವೇಷ, ಕ್ರೋಧ, ನಿಗ್ರಹ), ಇಕ್ಷುಧನು (ಕಬ್ಬಿನ ಜಲ್ಲೆ ಬಾಣವಾಗಿ, ಮನಸ್ಸಿನ ಸಂಕೇತ), ಪಂಚಶರ (ಐದು ಹೂಬಾಣಗಳು, ಪಂಚತನ್ಮಾತ್ರಗಳನ್ನು ಸೂಚಿಸುವುವು). ಇವುಗಳಲ್ಲಿ ಇಕ್ಷುಧನು, ಪಂಚಶರ ಇವು ಮನ್ಮಥನ (ಕಾಮನ) ಆಯುಧಗಳು. ರಾಜರಾಜೇಶ್ವರಿಯು ಕಾಮೇಶ್ವರಿಯಾಗಿಯೇ ಇಲ್ಲಿ ತೋರಿಕೊಳ್ಳುತ್ತಾಳೆ. ದುರ್ವಾಸರ 'ದೇವೀಮಹಿಮ್ನಃಸ್ತವ'ದಲ್ಲಿ (೧೫) ಕಾಮವು ಶಿವ ಶಕ್ತಿಗಳೆಂಬ ಎರಡು ತತ್ತ್ವಗಳಲ್ಲಿಯೂ ಹರಡಿಕೊಂಡಿದೆಯೆಂದೂ ಸ್ವರೂಪದಲ್ಲಿ ಎರಡೂ ತತ್ತ್ವವಗಳು ಒಂದೇ ಎಂದೂ ಹೇಳಿದೆ –

'ಕಾಮಾಖ್ಯಂ ಶಿವಶಕ್ತಿತತ್ತ್ವಮುಭಯಂ ವ್ಯಾಪ್ಯಾತ್ಮನಾ ಸರ್ವತೋ।
ದೀವ್ಯಂತೀಂ ಇಹ ತಸ್ಯ ಸಿದ್ಧಿರಚಿರಾತ್ ಸ್ಯಾತ್ತತ್ತ್ವರೂಪೈಕ್ಯತಾ।।'

ಇಲ್ಲಿ ಆಯ್ದುಕೊಂಡಿರುವ ಧ್ಯಾನಶ್ಲೋಕಗಳಲ್ಲಿ ಈ ವಿವರದ ಉಲ್ಲೇಖವಿಲ್ಲದಿದ್ದರೂ, ಚಿತ್ರದಲ್ಲೇನೋ ಕಾಣಿಸಿದ್ದಾರೆ.

ಮೇಲಿನ ಶ್ಲೋಕಗಳಲ್ಲಿ ಬರುವ 'ಪಂಚಪ್ರೇತಗಳ ಮೇಲೆ ಕುಳಿತಿರುವವಳು' ಎಂಬ ಪ್ರಸ್ತಾಪವೂ ಲಲಿತೋಪಾಖ್ಯಾನದಲ್ಲೇ (೨, ೪, ೩೭, ೪೮-೫೪) ಬಂದಿದೆ. ದೇವಿಯು ಕುಳಿತಿರುವ ಮಂಚಕ್ಕೆ ನಾಲ್ಕು ಕಾಲುಗಳು, ಒಂದು ಹಲಗೆ. ಇವನ್ನು ಪ್ರತಿನಿಧಿಸುವ ದೇವತೆಗಳು 'ಪಂಚಬ್ರಹ್ಮ'ರು; ನಾಲ್ಕು ಕಾಲುಗಳು ಬ್ರಹ್ಮ(ಸೃಷ್ಟಿಯ ಸಂಕೇತ), ವಿಷ್ಣು (ಸ್ಥಿತಿ), ರುದ್ರ ಅಥವಾ ಮಹೇಶ್ವರ (ಸಂಹಾರ), ಈಶ್ವರ ಅಥವಾ ಈಶಾನ (ತಿರೋಧಾನ); ಮತ್ತು ಹಲಗೆ ಸದಾಶಿವ(ಅನುಗ್ರಹ). ಇವರು ಲಲಿತೆಯ ಧ್ಯಾನದಲ್ಲೇ ನಿಶ್ಚಲರಾಗಿ ಜಡರೂಪದಲ್ಲಿರುವುದರಿಂದ ಪಂಚಪ್ರೇತಗಳು; ಇವರ ಮೇಲೆ ಕುಳಿತಿರುವ ದೇವಿಯೇ ಚೈತನ್ಯರೂಪಳು. ಇವಳಿಂದಲೇ ಐವರು ಪ್ರೇತಗಳಿಗೆ ಶಕ್ತಿ ಒದಗುವುದು. ಚಿತ್ರವು ಇವರಿಗೆಲ್ಲ ಮೂರ್ತಿರೂಪವನ್ನು ಕೊಟ್ಟಿದೆ.

'ತತ್ರ ಶ್ರೀ ಲಲಿತಾದೇವ್ಯಾಃ ಪಂಚಬ್ರಹ್ಮಮಯೇ ಮಹತ್।
ಜಾಗರ್ತಿ ಮಂಚರತ್ನಂ ತು ಪ್ರಪಂಚತ್ರಯ ಮೂಲಕಂ।।
ತಸ್ಯ ಮಂಚಸ್ಯ ಪಾದಾಸ್ತು ಚತ್ವಾರಃ ಪರಿಕೀರ್ತಿತಾಃ।
ಬ್ರಹ್ಮವಿಷ್ಣುಮಹೇಶಾನೇಶ್ವರ ರೂಪತ್ವಮಾಗತಾಃ।
ಶಕ್ತಿಭಾವಮನುಪ್ರಾಪ್ತಾಃ ಸದಾ ಶ್ರೀಧ್ಯಾನಯೋಗತಃ।।
ಏತೇ ಸರ್ವೇ ಸಾಯುಧಾಶ್ಚ ಸರ್ವಾಲಂಕಾರಭೂಷಿತಾಃ।
ಉಪರ್ಯಧಃ ಸ್ತಂಭರೂಪಾ ಮಧ್ಯೆ ಪುರುಷರೂಪಿಣಃ।।
ಶ್ರೀಧ್ಯಾನನಿಮೀಲಿತಾಕ್ಷಾಶ್ಚ ಶ್ರೀಧ್ಯಾನಾನ್ನಿಶ್ಚಿಲಾಂಗಕಾಃ।
ತೇಷಾಮುಪರಿ ಮಂಚಶ್ಚ ಫಲಕಸ್ತು ಸದಾಶಿವಃ।।'

ಇಂಥ ಮಂಚದ ಮೇಲೆ ಹಂಸತೂಲಿಕಾತಲ್ಪ; ಅದರ ಮೇಲೆ ಕೌಸುಂಭವಸನ ಎಂಬ ಮೇಲುಹೊದಿಗೆ; ಅದರ ಮೇಲೆ ಪೂರ್ವಕ್ಕೆ ಮುಖಮಾಡಿ ಕಾಮೇಶ್ವರ ಕುಳಿತಿದ್ದಾನೆ; ಅವನು ಹದಿನಾರು ವರ್ಷವಯಸ್ಸಿನ, ಸೊಗಸಾದ ಉಡುಗೆಯನ್ನು ಧರಿಸಿದ, ನಗುಮೊಗದ ಸುಂದರಯುವಕ. ಅವನ ತೊಡೆಯಮೇಲೆ ಕಾಮೇಶ್ವರಿ; ಅವಳೂ ಹದಿನಾರುವರ್ಷವಯಸ್ಸಿನ, ಎಳೆಸೂರ್ಯನ ಬಣ್ಣದ ಯುವತಿ(೬೪-೭೪)

'ಅಥ ಮಂಚಸ್ಯೋಪರಿಷ್ಟಾತ್ ಹಂಸತೂಲಿಕಾತಲ್ಪಕಃ।
ತಸ್ಯೋಪರಿಷ್ಟಾತ್ ಕೌಸುಂಭವಸನೋತ್ತರಚ್ಛದ।
ತಸ್ಯೋಪರಿ ವಸನ್ಪೂರ್ವದಿಙ್ಮುಖೋ ದಯಯಾನ್ವಿತಃ।
ಶೃಂಗಾರವೇಷರುಚಿರಃ ಸದಾ ಷೋಡಶವಾರ್ಷಿಕಃ।।
ಕಮನೀಯ ಸ್ಮಿತ ಜ್ಯೋತ್ಸಾಮರಿಪೂರ್ಣಕಪೋಲಭೂಃ।
ಜಾಗರ್ತಿ ಭಗವಾನಾದಿದೇವಃ ಕಾಮೇಶ್ವರಃ ಶಿವಃ।।
ತಸ್ಯೋತ್ಸಂಗೇ ಸಮಾಸೀನಾ ಕರುಣಾದಿತ್ಯಪಾಟಲಾ।
ಸದಾ ಷೋಡಶವರ್ಷಾ ಚ ನವಯೌವನದರ್ಪಿತಾ।।

ದೇವತಾತ್ರಿತಯ

ಮುಂದೆ ಆದಿಶಕ್ತಿಯು ಸಂದರ್ಭಾನುಸಾರವಾಗಿ ಮೂರು ಮೂಲಾವತಾರಗಳಲ್ಲಿ ತೋರಿಕೊಂಡದ್ದನ್ನು ಅವಲಂಬಿಸಿ, ಮಹಾಲಕ್ಷ್ಮೀ, ಮಹಾಸರಸ್ವತೀ, ಮಹಾಕಾಳೀ ಎಂಬ ಮೂರು ರೂಪಗಳಿಗೂ ಧ್ಯಾನಶ್ಲೋಕಗಳನ್ನು ಕೊಡಲಾಗಿದೆ. ಮೂರು ಶ್ಲೋಕಗಳು 'ಚಂಡೀಕಲ್ಪ'ದಿಂದ ಎತ್ತಿಕೊಂಡವು.

'ಅಥ ಮಹಾಕಾಳೀಸ್ವರೂಪಂ (I)ಚಂಡೀಕಲ್ಪೆ।
ಖಡ್ಗಂ ಚಕ್ರಗದೆ ಷುಚಾಪ ಪರಿಘಾನ್ ಶೂಲಂ ಭೃಶುಂಡೀಂ
ಶಿರಶ್ಶಂಖಂ ಸಂದಧತೀಂ ಕರೈಸ್ತ್ರಿನಯಾಂ ಸರ್ವಾಂಗಭೂಷಾವೃತಾಂ।

ನೀಲಾಶ್ಮದ್ಯುತಿಮಾಸ್ಯ ಪಾದದಶಕಾಂ ಸೆವೆ ಮಹಾಕಾಳಿಕಾಂ
ಯಾಮಸ್ತೌಭ್ಬಯಿತೆವೆ ('ಯಾಮಸ್ತೌತ್ಸ್ವಪಿತೆ' ಎಂದಿರಬೇಕು)
ಹರೌ ಕಮಲಜೋ ಹಂತುಂ ಮಧುಂ ಕೈಟಭಂ। (ii)
ನೀಲವರ್ಣಃ।

ಅಥ ಮಹಾಲಕ್ಷ್ಮೀಸ್ವರೂಪಂ (I) ಚಂಡೀಕಲ್ಪೆ।
ಅಕ್ಷಸ್ರಕ್ಪರಶುಂ ಗದೇಷುಕುಲಿಶಂ ಪದ್ಮಂ ಧನುಃಕುಂಡಿಕಾಂ
ದಂಡಂ ಶಕ್ತಿಮಸಿಂ ಚ ಚರ್ಮಜಲಜಂ ಘಂಟಾಂ ಸುರಾಭಾಜನಂ।
ಶೂಲಂ ಪಾಶ ಸುದರ್ಶನೆಚ ದಧತೀ ಹಸ್ತೈಃ ಪ್ರವಾಳಪ್ರಭಾಂ
ಸೆವೆ ಸೈರಿಭಮರ್ದಿನೀಮಿಹ ಮಹಾಲಕ್ಷ್ಮೀಂ ಸರೋಜಸ್ಥಿತಾಂ।।
ಪ್ರವಾಳವರ್ಣಃ।।

ಅಥ ಮಹಾಸರಸ್ವತೀಸ್ವರೂಪಂ।। ಚಂಡೀಕಲ್ಪೆ।।
ಘಂಟಾಶೂಲ ಹಲಾನಿ ಶಂಖಮುಸಲೌ ಚಕ್ರಂ ಧನುಸ್ಸಾಯಕಂ।
ಹಸ್ತಾಬ್ಜೈರ್ದಧತೀಂ ಘನಾಂತವಿಲಸತ್ಸೀಚ್ಛೀತಾಂಶು ತುಲ್ಯ ಪ್ರಭಾಂ।
ಗೌರೀದೇಹಸಮುದ್ಭವಾಂ ತ್ರಿಜಗತಾಮಾಧಾರಭೂತಾಂ ಮಹಾ
('ಆಧಾರಭೂತಾಮಹಂ' ಎಂದಿರಬೇಕು) ಪೂರ್ವಾಮತ್ರ ಸರಸ್ವತೀಮನು
ಭಜೆ ಶುಂಭಾದಿದೈತ್ಯಾರ್ದಿನೀಂ।।
ಶ್ವೇತವರ್ಣಃ।।



ಮಹಾಕಾಳಿ



ಮಹಾಕಾಳಿ

ಈ ಮೂರು ದೇವತೆಗಳನ್ನು ಅವತಾರತ್ರಯ ಎಂದು ಕರೆಯುವುದಿದೆ. ಇದಕ್ಕೆ ಆಕರ ಮಾರ್ಕಂಡೇಯಪುರಾಣದ 'ದೇವೀಮಾಹಾತ್ಮ್ಯ'ಯೆಂಬ ಭಾಗಕ್ಕೆ ಅನುಬಂಧವಾಗಿ ಸೇರಿಸಿರುವ 'ಪ್ರಾಧಾನಿಕರಹಸ್ಯ' ಎಂಬ ಪ್ರಕರಣವೆಂದು ಆಗಲೇ ಹೇಳಿದೆ. 'ಸಪ್ತಶತೀರಹಸ್ಯತ್ರಯ' ಎಂಬ ಸಂಕಲನದಲ್ಲಿ ಇದು ಮೊದಲನೆಯದು; 'ವೈಕೃತಿಕರಹಸ್ಯ' ಮತ್ತು 'ಮೂರ್ತಿರಹಸ್ಯ' ಎಂಬುವು ಉಳಿದೆರಡು ಪ್ರಕರಣಗಳು. ಚಂಡಿಕೆಯ ಅವತಾರಗಳಲ್ಲಿ ಮೂಲಭೂತವಾದುವು ಮೂರು; ಇದನ್ನು 'ಪ್ರಕೃತಿ' ಅಥವಾ 'ಪ್ರಧಾನ' ಎಂದು ಕರೆಯಲಾಗಿದೆ.

ಇಲ್ಲಿನ ಒಕ್ಕಣೆಯಂತೆ ಎಲ್ಲಕ್ಕೂ ಆದಿಯಾದ ತ್ರಿಗುಣಾತ್ಮಿಕೆಯಾದ ಪರಮೇಶ್ವರಿಯನ್ನು ಮಹಾಲಕ್ಷ್ಮಿಯೆಂದು ನಿರ್ದೇಶಿಸಿದ್ದಾರೆ. ಎಲ್ಲವನ್ನೂ ವ್ಯಾಪಿಸಿಕೊಂಡು ಇದ್ದ ಈ ಶಕ್ತಿಯು ತನ್ನ ತೇಜಸ್ಸಿನಿಂದ ಶೂನ್ಯವನ್ನೆಲ್ಲ ತುಂಬಿತು. ಶೂನ್ಯವನ್ನು ಕಂಡು ಪರಮೇಶ್ವರಿಯು ತನ್ನ ತಾಮಸಗುಣವನ್ನೆ ಮುಂದೆಮಾಡಿಕೊಂಡು ಮಹಾಕಾಳಿಯಾಗಿ ತೋರಿಕೊಂಡಳು. ಇವಳನ್ನು ಮಹಾಮಾಯೆ, ಮಹಾಮಾರಿ, ನಿದ್ರಾ, ಏಕವೀರಾ ಎಂದು ಮುಂತಾಗಿ ಕರೆಯುವರು; ಈಕೆ ಕ್ಷಾಮದೇವತೆ. ಅನಂತರ ತನ್ನ ಸಾತ್ತ್ವಿಕಗುಣವನ್ನು ಮುಂದೆಮಾಡಿಕೊಂಡು ಸರಸ್ವತಿಯಾಗಿ (ಮಹಾವಿದ್ಯಾ, ಭಾರತೀ, ವಾಕ್, ಆರ್ಯಾ ಇತ್ಯಾದಿ ಹೆಸರುಗಳೂ ಇವೆ) ತೋರಿಕೊಂಡಳು.

ಮಹಾಲಕ್ಷ್ಮಿಯು ತನ್ನಿಂದ ಹೊರಹೊಮ್ಮಿದ ಮಹಾಕಾಳಿ, ಸರಸ್ವತಿಯರನ್ನು ಸ್ವರೂಪಾನುಸಾರವಾಗಿ ಇಬ್ಭಾಗವಾಗುವಂತೆ ಹೇಳಿ, ತಾನೂ ಇಬ್ಭಾಗವಾಗಿ ಬ್ರಹ್ಮ, ವಿಷ್ಣು ಎಂಬ ಪುರುಷದೇವತೆಗಳನ್ನು ಹೊರಹೊಮ್ಮಿಸಿದಳು. ಮಹಾಕಾಳಿಯಿಂದ ತ್ರಯೀ ವಿದ್ಯಾ ಎಂಬ ಸ್ತ್ರಿಯೂ ರುದ್ರನೆಂಬ ಪುರುಷನೂ, ಸರಸ್ವತಿಯಿಂದ ಗೌರಿಯೆಂಬ ಸ್ತ್ರೀಯೂ ಕೃಷ್ಣನೆಂಬ ಪುರುಷನೂ ಹೊರಹೊಮ್ಮಿದರು. ಮಹಾಲಕ್ಷ್ಮಿಯು ಬ್ರಹ್ಮನಿಗೆ ತ್ರಯೀವಿದ್ಯೆಯೆಂಬ ಸ್ತ್ರೀಯನ್ನೂ ರುದ್ರನಿಗೆ ಗೌರಿಯನ್ನೂ ಪತ್ನಿಯರನ್ನಾಗಿ ಕೊಟ್ಟಳು. ತಾನು ವಿಷ್ಣುವಿನ ಪತ್ನಿಯಾದಳು.

'ವೈಕೃತಿಕರಹಸ್ಯ'ದಲ್ಲಿ ಮಹಿಷಮರ್ದಿನಿಯೇ ಮಹಾಲಕ್ಷ್ಮಿ ಎಂಬ ನಿರ್ದೇಶನವಿದೆ. ಮಹಾಲಕ್ಷ್ಮಿಯು ರಜೋಗುಣ ಪ್ರಧಾನವಾದ ದೇವತೆ; ಮಹಾಕಾಳಿಯು ತಮೋಗುಣಪ್ರಧಾನ ; ಸರಸ್ವತಿಯು ಸತ್ತ್ವಗುಣಪ್ರಧಾನ. 'ತ್ರಿಪುರಾರಹಸ್ಯ'ದಲ್ಲಿ ಮಹಾತ್ರಿಪುರಸುಂದರಿಯು ಮಹಾಲಕ್ಷ್ಮೀ ಸ್ಥಾನದಲ್ಲಿದ್ದಾಳೆ. ಆಕೆಯು ತನ್ನ ಅಂಗದಿಂದ ವಾಣಿಯನ್ನು (ಸರಸ್ವತಿಯನ್ನು), ರಮೆಯನ್ನು (ಲಕ್ಷ್ಮಿಯನ್ನು), ರುದ್ರಾಣಿಯನ್ನು (ಗೌರಿಯನ್ನು) ಹೊರಹೊಮ್ಮಿಸಿ ಅವರನ್ನು ಕ್ರಮವಾಗಿ ಬ್ರಹ್ಮ, ವಿಷ್ಣು, ರುದ್ರರಿಗೆ ಶಕ್ತಿಯರನ್ನಾಗಿ ನೀಡಿ ಮರೆಯಾದಳು ; ತ್ರಿಕೋಣಮಧ್ಯದಲ್ಲಿ ಬಿಂದುವಾಗಿ ನಿಂತು ಪೂಜೆಗೊಳ್ಳುವಳು. 'ರುದ್ರಯಾಮಳ' ದಲ್ಲೂ

'ಬಿಂದುಚಕ್ರೇ ಸಮಾಸೀನಾ ದೇವದೇವಮಹೇಶ್ವರೀ'

ಎಂದಿದೆ. ಶ್ರೀತತ್ತ್ವನಿಧಿಯಲ್ಲಿ ಶ್ರೀವಿದ್ಯಾದೇವತೆಯಾದ ರಾಜರಾಜೇಶ್ವರಿಯನ್ನು ಹೇಳಿ, ಶ್ರೀಚಕ್ರದಲ್ಲಿರುವ ದೇವತೆಯರನ್ನು ಹೇಳುವಮೊದಲು ಅವತಾರತ್ರಯವನ್ನು ಉಲ್ಲೇಖಿಸಿರುವ ಔಚಿತ್ಯ ಇದೇ.

ಇಲ್ಲಿ ಅವತಾರತ್ರಯದ ಮೂರ್ತಿಲಕ್ಷಣಗಳು ಹೀಗಿವೆ-

ಮೊದಲು ಮಹಾಕಾಳಿ. ತಮಸ್ಸಿನ ಸಂಕೇತವಾದುದರಿಂದ ಕಪ್ಪುಬಣ್ಣದವಳು. ಮುಖಗಳೂ ಕಾಲುಗಳೂ ಹತ್ತು; ಕೈಗಳೂ ಹತ್ತೇ; ಕೈಗಳಲ್ಲಿ ಕತ್ತಿ, ಚಕ್ರ, ಗದೆ, ಬಾಣ, ಬಿಲ್ಲು, ಪರಿಘ, ಶೂಲ, ಭೃಶುಂಡೀ, ಮನುಷ್ಯನ ತಲೆ, ಶಂಖ ಇವುಗಳನ್ನು ಹಿಡಿದಿದ್ದಾಳೆ. ಬ್ರಹ್ಮನಿಂದ ಪ್ರಾರ್ಥಿಸಲ್ಪಟ್ಟು ಮಧು ಮತ್ತು ಕೈಟಭರೆಂಬ ರಾಕ್ಷಸರನ್ನು ಸಂಹರಿಸಿದವಳು. ಇಲ್ಲಿನ ಪ್ರಸ್ತಾಪದ ಸಂದರ್ಭ ಪ್ರಳಯಕಾಲದಲ್ಲಿ ವಿಷ್ಣುವು ಶೇಷಶಾಯಿಯಾಗಿ ಮಲಗಿರಲು ಮಹಾಮಾಯಾ ಅಥವಾ ಯೋಗನಿದ್ರಾದೇವಿಯು ಅವನ ಕಣ್ಣು, ಮುಖ, ಮೂಗು, ಹೃದಯ ಮೊದಲಾದ ಅವಯವಗಳನ್ನು ಮುಸುಕಿದಳು. ವಿಷ್ಣುವು ಹೀಗೆ ನಿಶ್ಚೇಷ್ಟನಾಗಲು, ಅವನ ಕಿವಿಯ ಕೊಳೆಯಿಂದ ತೋರಿಕೊಂಡ ಮಧು-ಕೈಟಭರೆಂಬ ರಾಕ್ಷಸರು ಬ್ರಹ್ಮನನ್ನು ಪೀಡಿಸತೊಡಗಿದರು. ಬ್ರಹ್ಮನು ವಿಷ್ಣುವನ್ನು ಎಚ್ಚರಗೊಳಿಸಲು ಯೋಗನಿದ್ರಾದೇವಿಯನ್ನು ಪ್ರಾರ್ಥಿಸಿದನು. ಆಗ ಯೋಗನಿದ್ರಾದೇವಿಯು ತನ್ನ ಮುಸುಕನ್ನು ವಿಷ್ಣುವಿನ ಅಂಗಗಳಿಂದ ಹಿಂದೆಗೆದಳು. ವಿಷ್ಣುವು ಎಚ್ಚೆತ್ತನು. ವಿಷ್ಣವಿಗೂ ಮಧುಕೈಟಭರಿಗೂ ಬಿರುಸಾದ ಕಾಳಗ ನಡೆಯಿತು. ಮಧುಕೈಟಭರ ಬಲವನ್ನು ಕುಂದಿಸಲು ಮಹಾಕಾಳಿ ನೆರವಾಗಲು, ವಿಷ್ಣು ಅವರನ್ನು ಸಂಹರಿಸುವುದು ಸಾಧ್ಯವಾಯಿತು.



ಮಹಾಲಕ್ಷ್ಮಿ



ಮಹಾಲಕ್ಷ್ಮಿ

ಎರಡನೆಯ ರೂಪ ಮಹಾಲಕ್ಷ್ಮಿಯದು; ರಜೋಗುಣದ ಪ್ರತೀಕವಾದದ್ದರಿಂದ ಹವಳದ ಮೈಬಣ್ಣ. ಕಮಲದ ಮೇಲೆ ಕುಳಿತಿದ್ದಾಳೆ. ಕೈಗಳ ಸಂಖ್ಯೆ ಹದಿನೆಂಟು; ಧರಿಸಿರುವ ಆಯುಧಗಳು ಜಪಮಾಲೆ, ಕೊಡಲಿ, ಗದೆ, ಬಾಣ, ಬಿಲ್ಲು, ವಜ್ರಾಯುಧ, ಕಮಲ, ಕಲಶ, ದಂಡ, ಶಕ್ತ್ಯಾಯುಧ, ಕತ್ತಿ, ಗುರಾಣಿ, ಘಂಟೆ, ನೈದಿಲೆ, ಮದ್ಯದ ಪಾತ್ರೆ, ಶೂಲ, ಪಾಶ, ಚಕ್ರ; ಮಹಿಷಾಸುರನನ್ನು ಕೊಂದವಳು.

ಮೂರನೆಯದು ಮಹಾಸರಸ್ವತಿಯ ರೂಪ; ಸತ್ತ್ವಗುಣದ ಸಂಕೇತವಾಗಿ ಬಿಳಿಬಣ್ಣದವಳು. ಗೌರಿಯ ದೇಹದಿಂದ ಹೊರಹೊಮ್ಮಿದ ದೇವತೆ; ಮೂರು ಲೋಕಗಳಿಗೂ ಆಸರೆಯಾದ ವಾಗ್ರೂಪಿಣಿ. ಶುಂಭನೇ ಮೊದಲಾದ ದೈತ್ಯರನ್ನು ಕೊಂದು ಜಗತ್ತಿನ ಹಿತವನ್ನು ಸಾಧಿಸಿದವಳು. ಈ ದೇವತೆಯ ಕೈಗಳು ಎಂಟು; ಇವುಗಳಲ್ಲಿ ಘಂಟೆ, ಶೂಲ, ನೇಗಿಲು, ಒನಕೆ, ಶಂಖ, ಚಕ್ರ, ಬಿಲ್ಲು, ಬಾಣ ಇವನ್ನು ಹಿಡಿದಿದ್ದಾಳೆ.

ಮುಮ್ಮಡಿಯವರು ಈ ಅವತಾರತ್ರಯವಿಚಾರವನ್ನು 'ಮೇರುತಂತ್ರ'ದಿಂದ ಪಡೆದಿರುವಂತೆ ತೋರುತ್ತದೆ. ಅಲ್ಲಿ 'ನವದುರ್ಗಾತ್ಮಕಚಾಮುಂಡಾಮಂತ್ರ' ವೆಂಬ ಪರಿಚ್ಛೇದದಲ್ಲಿ 'ಮಾರ್ಕಂಡೇಯ- ಪುರಾಣೋಕ್ತ ಚರಿತತ್ರಿತಯ'ದಲ್ಲಿ ಈ ಅವತಾರಗಳ ಕಲ್ಪನೆಯಿದೆಯೆಂದು ಹೇಳಿದೆ.

'ತತೋ ದೇವೀತ್ರಯಂ ಧ್ಯಾಯೇತ್ ಕಾಲಿಕಾಧ್ಯಾನಮುಚ್ಯತೇ ।
ದಶಾಸ್ಯಾಂ ದಶಪದಾಂ ಚ ದಶಹಸ್ತಾಂ ವಿಧಿಸ್ತುತಾಂ ॥
ಇಂದ್ರನೀಲದ್ಯುತಿಂ ಖಡ್ಗಂ ಚಕ್ರಂ ಶಂಖಿಂ ಶಿರಃ ಶರಾನ್ ।
ದಕ್ಷಹಸ್ತೇಷು ದಧತೀಂ ಗದಾಂ ಶೂಲಂ ಭುಶುಂಡಿಕಾಂ ॥
ಪರಿಘಂ ಚ ಧನುರ್ವಾಮೇ ದಧತೀಂ ಬ್ರಹ್ಮಸಂಸ್ತುತಾಂ।
ಮಧುಕೈಟಭನಾಶಾರ್ಥಂ ಸಾಲಂಕಾರಾಂ ತ್ರಿವೀಕ್ಷಣಾಂ ॥'

ಈ ಧ್ಯಾನಶ್ಲೋಕವಾದನಂತರ 'ಮೇರುತಂತ್ರ'ವು " ತಂತ್ರಾಂತರೇ " ಎಂದು ನಿರ್ದೇಶಿಸಿ ಮುಮ್ಮಡಿಯವರು ಕೊಟ್ಟಿರುವ ಮಹಾಕಾಳೀಸ್ವರೂಪವರ್ಣನೆಯನ್ನೇ ಕಾಣಿಸಿದೆ. ಇದಾದಮೇಲೆ " ಇತಿ ಚಾಮುಂಡಾಮಂತ್ರಃ" ಎಂಬ ಸಮಾಪ್ತಿವಚನವಿದೆ.

ಮುಂದಕ್ಕೆ ಮೇರುತಂತ್ರದಲ್ಲಿ 'ಮಹಾಲಕ್ಷ್ಮ್ಯೀಧ್ಯಾನಂ' ಎಂಬ ಪ್ರಕರಣ. ಅದರಲ್ಲಿ, ಮಹಾಕಾಳಿಯ ಧ್ಯಾನವಾದಮೇಲೆ ಮಹಾಲಕ್ಷ್ಮಿಯ ಧ್ಯಾನಮಾಡಬೇಕೆಂಬ ವಿಧಿಯಿದೆ –

'ತತೋ ಧ್ಯಾಯೇನ್ಮಹಾಲಕ್ಷ್ಮೀಂ ಮಹಿಷಾಸುರಮರ್ದಿನೀಂ ।
ಸಮಸ್ತದೇವತಾತೇಜೋಜಾತಾಂ ಪದ್ಮಾಸನಸ್ಥಿತಾಂ ॥
ಅಷ್ಟಾದಶಭುಜಾಮಕ್ಷಮಾಲಾಂ ಪದ್ಮಂ ಚ ಸಾಯಕಾನ್ ।
ಖಡ್ಗಂ ವಜ್ರಂ ಗದಾಂ ಚಕ್ರಂ ದಕ್ಷಹಸ್ತೆ ಕಮಂಡಲುಂ ॥
ಶಂಖಿಂ ಚ ದಧತೀಂ ವಾಮೇ ಶಕ್ತಿಂ ಚ ಪರಶುಂ ಧನುಃ ।
ಚರ್ಮದಂಡೌ ಸುರಾಪಾತ್ರಂ ಘಂಟಾಂ ಪಾಶಂ ತ್ರಿಶೂಲಕಂ ॥ '

ಈ ಮೂರ್ತಿವರ್ಣನೆಯಾದಮೇಲೆ "ಅನ್ಯತ್ರಾಪಿ" ಎಂಬ ಮಾತಿನೊಂದಿಗೆ ಶ್ರೀತತ್ತ್ವನಿಧಿಯಲ್ಲಿ ಕಾಣಿಸಿರುವ ಮಹಾಲಕ್ಷ್ಮೀಸ್ವರೂಪವರ್ಣನೆಯ ಶ್ಲೋಕವೇ ಬಂದಿದೆ.


ಇದಾದಮೇಲೆ, ಈ ತಂತ್ರಗ್ರಂಥವು -

ಸರಸ್ವತೀಂ ತತೋ ಧ್ಯಾಯೇಚ್ಛರಚ್ಚಂದ್ರಸಮಪ್ರಭಾಂ ।
ಶಂಖಿಂ ಚ ಮುಸಲಂ ಚಕ್ರಂ ಬಾಣಾನ್ ದಕ್ಷೈಷು ಬಿಭ್ರತೀಂ ॥
ಘಂಟಾಂ ಶೂಲಂ ಹಲಂ ಚಾಪಂ ವಾಮಹಸ್ತೇಷು ಬಿಭ್ರತೀಂ ।
ಗೌರೀದೇಹಸಮುದ್ಭೂತಾಂ ತ್ರಿಣಾಮಾನಂದದಾಯಿನೀಂ ॥
ಆಧಾರಭೂತಾಂ ಜಗತಃ ಶುಂಭಾದಿಕವಿಮರ್ದಿನೀಂ ।
ಅಧಿಷ್ಠಾತ್ರೀಂ ತೃತೀಯಸ್ಯ ಚರಿತ್ರಸ್ಯ ಸ್ಮರೇತ್ಸದಾ ॥

ಎಂಬ ಸರಸ್ವತೀರೂಪವರ್ಣನೆಯನ್ನು ಮಾಡಿ "ತಂತ್ರಾಂತರೇಪಿ" ಎಂಬ ಸೂಚನೆಯೊಂದಿಗೆ ಶ್ರೀತತ್ತ್ವನಿಧಿಯಲ್ಲಿ ಕಾಣಿಸಿಗುವ ಮಹಾಸರಸ್ವತೀಸ್ವರೂಪವರ್ಣನೆಯನ್ನೇ ಕೊಡುತ್ತದೆ. ಈ ವಿವರಗಳು 'ಪುರಶ್ಚರ್ಯಾರ್ಣವ'ದಲ್ಲಿಯೂ ಬಂದಿವೆ. ಮಾರ್ಕಂಡೇಯಪುರಾಣದ ದೇವೀಮಾಹಾತ್ಮ್ಯೆಯ ಪೂರ್ವಚರಿತ್ರ, ಮಧ್ಯಚರಿತ್ರ, ಉತ್ತರಚರಿತ್ರಗಳೆಂಬ ಮೂರು ಚರಿತ್ರಗಳಲ್ಲಿ ದೇವಿಯು ಮಹಾಕಾಳಿ, ಮಹಾಲಕ್ಷ್ಮಿ, ಮಹಾಸರಸ್ವತಿಯಾಗಿ ಅವತರಿಸಿದ ಕಥೆ ಈ ಪ್ರಸ್ತಾಪಗಳಿಗೆ ಮೂಲ.



ಮಹಾಸರಸ್ವತಿ



ಮಹಾಸರಸ್ವತಿ

ಮುಮ್ಮಡಿಯವರೇ ರಚಿಸಿರುವ 'ದೇವತಾಧ್ಯಾನಮಾಲಿಕಾ' ಎಂಬ ಗ್ರಂಥದಲ್ಲೂ ಈ ಮೂರು ದೇವತೆಗಳ ಧ್ಯಾನಶ್ಲೋಕಗಳು ಬಂದಿವೆ; ಆದರೆ ಶ್ರೀತತ್ತ್ವನಿಧಿಯಲ್ಲಿರುವದಕ್ಕಿಂತ ತೀರ ಬೇರೆಯಾಗಿವೆ -

'ಅಥ ಮಹಾಕಾಳೀ ಧ್ಯಾನಂ ॥೧೦॥
ಶ್ರೀರಸ್ತು ॥ - ॥ದಶವಕ್ತ್ರಾಂ ದಶಭುಜಾಂ ದಶಪಾದಾಂ ತ್ರಿಲೋಚನಾಂ ।
ಗಣೇಶಲಾಸ್ಯಸಂತುಷ್ಟಾಂ । ಲೋಕಸಂಹಾರಕಾರಿಣೀಂ ॥೧॥
ಚಂದ್ರಹಾಸಾದ್ಯಾಯುಧಾಢ್ಯಾಂ ।ಶಿವಚೈತನ್ಯರೂಪಿಣೀಂ ।
ನೀಲಾಂಜನಪ್ರಭಾಂ ದೇವೀಂ । ಮಹಾಕಾಳೀಂ ನಮಾಮ್ಯಹಂ॥೨॥

ಅಥ ಮಹಾಲಕ್ಷ್ಮ್ಯೀಧ್ಯಾನಂ ॥೧೧॥
ಶ್ರೀರಸ್ತು ॥—॥ ಅಷ್ಟಾದಶಭುಜಾಂ ರಕ್ತಾಂ । ಖಡ್ಗಖೇಟಾದಿಧಾರಿಣೀಂ ।
ಜಗತ್ಸಂರಕ್ಷಣೋದ್ಯುಕ್ತಾಂ । ಸರ್ವಾಲಂಕಾರಭೂಷಿತಾಂ ॥ ೧॥
ವಿಷ್ಣುಚೈತನ್ಯರೂಪಾಢ್ಯಾಂ । ದುಷ್ಟದೈತ್ಯವಿಮರ್ದಿನೀಂ।
ಭಕ್ತಾಭೀಷ್ಟಪ್ರದಾಂ ದೇವೀಂ । ಮಹಾಲಕ್ಷ್ಮೀಂ ಭಜಾಮ್ಯಹಂ ॥ ೨॥

ಅಥ ಮಹಾಸರಸ್ವತೀ ಧ್ಯಾನಂ ॥ ೧೨॥
ಶ್ರೀರಸ್ತು ॥ - ॥ ಅಷ್ಟಬಾಹಾಂ ಶುಭ್ರವರ್ಣಾಂ।
ಸೃಷ್ಟಿಕಾರ್ಯಧುರಂಧರಾಂ ।
ಶೂಲಾದ್ಯಾಯುಧಸಂಯುಕ್ತಾಂ । ಸರ್ವದೇವ ನಮಸ್ಕೃತಾಂ ।
ಮಹಾಸರಸ್ವತೀಂ ದೇವೀಂ । ಭಕ್ತ್ಯಾ ತಾಂ ಪ್ರಣಮಾಮ್ಯಹಂ ॥ ೩॥

ಈ ಪುಸ್ತಕದಲ್ಲಿಯೂ ಮೂರೂ ರೂಪಗಳ ಚಿತ್ರಗಳಿವೆ. ಅವನ್ನು ಇಲ್ಲಿ ಕೊಡಲಾಗಿದೆ.

ಶ್ರೀಚಕ್ರದೇವತೆಯರು

ಮುಮ್ಮಡಿಯವರು ಶ್ರೀವಿದ್ಯಾಉಪಸಕರಾಗಿದ್ದಂತೆ ತೋರುತ್ತದೆ. ಶ್ರೀತತ್ತ್ವನಿಧಿಯಲ್ಲಿ ಶ್ರೀಚಕ್ರದ ವಿಚಾರವಾಗಿ ಉಲ್ಲೇಖ ಮತ್ತೆ ಮತ್ತೆ ಬರುತ್ತದೆ. ಶ್ರೀ ಚಕ್ರದಲ್ಲಿರುವ ಎಲ್ಲ ಆವರಣದೇವತೆಗಳಿಗೂ ಮೂರ್ತಿಲಕ್ಷಣಗಳನ್ನು ಹೇಳಿದ್ದಾರೆ; ಗ್ರಂಥದ ಕೊನೆಯಲ್ಲಿ ವಾಮಕೇಶ್ವರತಂತ್ರದಿಂದ ಶ್ರೀಚಕ್ರೋದ್ಧಾರಕ್ರಮದ ಶ್ಲೋಕವನ್ನು ಕೊಟ್ಟು ವಿವರಿಸಿದ್ದಾರೆ. ನನ್ನಲ್ಲಿರುವ ಹಸ್ತಪ್ರತಿಯಲ್ಲಿ ಇದೇ ಶ್ರೀತತ್ತ್ವನಿಧಿಯ ಕೊನೆಯ ಭಾಗ; ಇದಾದಮೇಲೆ ಆಕರಗ್ರಂಥಗಳ ಸ್ಮರಣೆಯಿದೆ. ಕೌತುಕನಿಧಿಯಲ್ಲಿ ಚದುರಂಗ, ಗಂಜೀಪು, ಪಗಡೆ ಮುಂತಾದ ಆಟಗಳನ್ನು ಹೇಳುವಾಗ ತಾವೇ ರಚಿಸಿದ ಅನೇಕ ಆಟಗಳನ್ನು ಉಲ್ಲೇಖಿಸುತ್ತಾರೆ. ಅವುಗಳಲ್ಲಿ 'ಶ್ರೀಚಕ್ರದಶದಳದ ಪಗಡೆ ಆಟ' ವೂ ಸೇರಿದೆ (ನನ್ನಲ್ಲಿರುವ ಹಸ್ತಪ್ರತಿಯಲ್ಲಿ ಪತ್ರ ೧೫೧). ಹಾಗೆ ನೋಡಿದರೆ, ಶ್ರೀತತ್ತ್ವನಿಧಿಯ ಮುಖ್ಯವಿಚಾರವೇ ಶ್ರೀಚಕ್ರವನ್ನು ಕುರಿತದ್ದು; ಈ ಗ್ರಂಥದಲ್ಲಿ ಬರುವ ವಿವರಗಳು ಬಹುಮಟ್ಟಿಗೆ ಶ್ರೀಚಕ್ರಕ್ಕೆ ನೇರವಾಗಿಯೋ ಬಳಸಾಗಿಯೋ ಸಂಬಂಧಿಸಿದವೇ.

ಶ್ರೀಚಕ್ರಕಲ್ಪನೆಯ ಬಗ್ಗೆ ಕುತೂಹಲವುಳ್ಳವರು ಶ್ರೀಚಕ್ರವನ್ನು ಕುರಿತು ಇಂಗ್ಲೀಷಿನಲ್ಲಿ ನಾನು ಬರೆದಿರುವ ಈ ಪುಸ್ತಕಗಳನ್ನು ನೋಡಬಹುದು : Srichakra: Its Yantra, Mantra and Tantra (ಕಲ್ಪತರು ರಿಸರ್ಚ್ ಅಕ್ಯಾಡಮಿ, ಬೆಂಗಳೂರು) 1982; The Tantra of Sri-Chakra, ಶಾರದಾ ಪ್ರಕಾಶನ, ಬೆಂಗಳೂರು, 1983; ಮತ್ತು Sri-Chakra, ಸದ್ಗುರುಪ್ರಕಾಶನ, ಇಂಡಿಯನ್ ಬುಕ್ಸ್ ಸೆಂಟರ್, ದಿಲ್ಲಿ, 1989. ಇಲ್ಲಿ ಹೇಳಬೇಕಾದುದು ಮುಮ್ಮಡಿಯವರು ಪಟ್ಟಿಮಾಡಿರುವ ಶ್ರೀಚಕ್ರದೇವತೆಯರಿಗೆ ಸಂಬಂಧಿಸಿದಂತೆ ನಾಲ್ಕು ಮಾತು ಅಷ್ಟೆ.

ಶ್ರೀಚಕ್ರವೆನ್ನುವುದು ಶ್ರೀವಿದ್ಯೆಯ ಯಂತ್ರ. ಶ್ರೀವಿದ್ಯೆಯೆನ್ನುವಾಗ 'ಶ್ರೀ' ಎಂದರೆ ಪರಮಪ್ರಕೃತಿಯಾದ ಆದಿಶಕ್ತಿ ('ತ್ವಂ ಶ್ರೀಸ್ತ್ವಮೀಶ್ವರೀ' ದುರ್ಗಾಸಪ್ತಶತಿ, ೧, ೭೯). ವಿದ್ಯೆಯೆಂದರೆ ಅದನ್ನು ಕುರಿತಾದ ಜ್ಞಾನ 'ಅದನ್ನು ಶ್ರೀಸ್ವರೂಪಾ ವಿದ್ಯಾ' ಎಂದು ಹೇಳುವುದಿದೆ. ಶ್ರೀಯೆಂಬುದು ಪರತತ್ತ್ವವೇ ಎಂದು ಶಾಕ್ತಾಗಮಗಳಲ್ಲಿ, ತಂತ್ರಗಳಲ್ಲಿ ಬರುವ ಒಕ್ಕಣೆ; ಅದು ಪರಬ್ರಹ್ಮಸ್ವರೂಪವೆಂದೇ ವಾಮಕೇಶ್ವರತಂತ್ರ ಹೇಳುತ್ತದೆ. ಮಂತ್ರಕ್ಕೂ ದೇವತೆಗೂ ವರ್ಣಗಳಿಗೂ ಐಕ್ಯಾನುಸಂಧಾನಮಾಡುವ ಕ್ರಮವೂ ಇದೆ. ವಾಮಕೇಶ್ವರತಂತ್ರದ ಪ್ರಕಾರ ಶ್ರೀವಿದ್ಯೆಯು 'ಸರ್ವದೇವಮಯೀ ವಿದ್ಯಾ'

ಶ್ರೀಚಕ್ರವೆಂಬ ಮಾತಿನಲ್ಲಿ 'ಚಕ್ರ' ಎನ್ನುವ ಪದವನ್ನು ಸಮೂಹ ಎಂಬರ್ಥದಲ್ಲಿ ಬಳಸಿದ್ದಾರೆ. ಶ್ರೀಚಕ್ರವನ್ನು ಬ್ರಹ್ಮಾಂಡದ ಪ್ರತೀಕವೆಂದು

ವಿವರಿಸಲಾಗಿದೆ. ಬ್ರಹ್ಮಾಂಡದ ಸೃಷ್ಟಿ, ಸ್ಥಿತಿ, ಸಂಹಾರಗಳೆಂಬ ಮೂರು ಅವಸ್ಥೆಗಳೂ ಶ್ರೀಚಕ್ರದಲ್ಲಿ ಮೂರು ಚಕ್ರಗಳಾಗಿ ವ್ಯವಸ್ಥಿತವಾಗಿವೆ: ಭೂಪುರ, ತ್ರಿವೃತ್ತ, ಅಂತರ್ದಶಾರ ಇಷ್ಟೂ ಸೇರಿ ಸೃಷ್ಟಿಚಕ್ರ; ಚತುರ್ದಶಾರ, ಬಹಿರ್ದಶಾರ ಮತ್ತು ಅಂತರ್ದಶಾರ ಇಷ್ಟೂ ಸೇರಿ ಸ್ಥಿತಿಚಕ್ರ; ಅಷ್ಟಾರ, ತ್ರಿಕೋಣ, ಬಿಂದು ಇವು ಕೂಡಿ ಸಂಹಾರಚಕ್ರ. ಇವು ಮೂರನ್ನು 'ತ್ರಿಪುರ' ಎಂದು ಕರೆಯುವುದು ವಾಡಿಕೆ. ಇವಕ್ಕೆ ಅಧಿಷ್ಠಾತೃದೇವತೆಯಾಗಿ ಆದಿಶಕ್ತಿಯನ್ನು ಮಹಾತ್ರಿಪುರಸುಂದರಿಯೆಂದು (ರಾಜರಾಜೇಶ್ವರಿ, ಲಲಿತಾಂಬೆ ಎಂಬ ಹೆಸರುಗಳೂ ಇವೆ) ಕರೆದು ಬಿಂದುವಿನಲ್ಲಿ ಆಕೆಯ ಮುಖ್ಯಸ್ಥಾನವನ್ನು ಹೇಳುತ್ತಾರೆ.

ಶ್ರೀಚಕ್ರದ ಬಿಂದುವಿನಿಂದ ಹೊರಗಿರುವ ರೇಖೆಗಳು, ಕೋಣಗಳು, ಆವರಣಗಳು ಎಲ್ಲವೂ ದೇವತಾಸ್ವರೂಪವೆಂದೇ ಎಣಿಕೆ. ಬಿಂದುವಿನಲ್ಲಿರುವ ಮಹಾತ್ರಿಪುರಸುಂದರಿಯ ವಿಭೂತಿಗಳಾಗಿ, ಅಂಗಗಳಾಗಿ, ಪ್ರತಿನಿಧಿಗಳಾಗಿ, ಈ ಎಲ್ಲ ದೇವತೆಯರೂ ಶ್ರೀಚಕ್ರದ ಬೇರೆಬೇರೆ ರೇಖೆಗಳಲ್ಲಿ, ಕೋಣಗಳಲ್ಲಿ, ಆವರಣಗಳಲ್ಲಿ ತೋರಿಕೊಳ್ಳುತ್ತಾರೆ. ಇವರೆಲ್ಲರೂ ತತ್ತ್ವಸ್ವರೂಪಿಣಿಯರೇ; ಬ್ರಹ್ಮಾಂಡದ ಸೃಷ್ಟಿ, ಸ್ಥಿತಿ, ಸಂಹಾರಗಳಿಗೆ ಅಭಿಮಾನಿದೇವತೆಯರು. 'ಆಗಮಕಲ್ಪದ್ರುಮ'ದಲ್ಲಿ

'ತತ್ತ್ವಾದ್ ಬ್ರಹ್ಮಾಂಡಮುತ್ಪನ್ನಂ ತತ್ತ್ವೇನ ಪರಿವರ್ಧತೇ ।
ತತ್ತ್ವೇ ವಿಲೀಯತೇ ದೇವಿ ತತ್ತ್ವಾದ್ ಬ್ರಹ್ಮಾಂಡನಿರ್ಣಯಃ ॥'

ಎಂದು ಹೇಳಿದೆ. ಶ್ರೀಚಕ್ರದಲ್ಲಿರುವ ದೇವತೆಯರು ಶ್ರೀತತ್ತ್ವದೇವತೆಯರೇ.

ಭಂಡಾಸುರನನ್ನು ಸಂಹರಿಸಲು ದೇವಿಯು ಸಜ್ಜಾಗಿ ರಥವನ್ನೇರಿ ಹೊರಟಳೆಂಬ ಲಲಿತೋಪಾಖ್ಯಾನದ ಕತೆಯಲ್ಲಿ ದೇವಿ ಏರುವುದು ಶ್ರೀಚಕ್ರರಥವನ್ನೇ. ವಾಮಕೇಶ್ವರತಂತ್ರದಿಂದ ಪ್ರಸಿದ್ಧವಾದ ಒಂದು ಶ್ಲೋಕವನ್ನು ಮುಮ್ಮಡಿಯವರು ಗ್ರಂಥದ ಕೊನೆಯಲ್ಲಿ ಉದ್ಧರಿಸಿ ಅದನ್ನು ವಿವರಿಸಿದ್ದಾರೆ. ಅಲ್ಲಿ ಬರುವ ನಿರೂಪಣೆಯನ್ನು ಮೊದಲು ಗಮನಿಸಿದರೆ, 'ಶಕ್ತಿನಿಧಿ'ಯ ದೇವತೆಗಳ ಪಟ್ಟಿಗೆ ಹಿನ್ನೆಲೆ ದೊರಕುತ್ತದೆ. ನನ್ನಲ್ಲಿರುವ ಹಸ್ತಪ್ರತಿಯಲ್ಲಿ ಆಗಲೆ ಹೇಳಿದಂತೆ ಇದು ಕಡೆಯ ಭಾಗವಾದ ಆಕರಗ್ರಂಥಸ್ಮರಣೆಗೆ ಮೊದಲು ಬಂದಿರುವ ಭಾಗ. ಈ ಪತ್ರಗಳು ಸ್ವಲ್ಪ ಮಟ್ಟಿಗೆ ತ್ರುಟಿತವಾಗಿವೆ.

'ಅಥ ಶ್ರೀಚಕ್ರೋದ್ಧಾರಶ್ಲೋಕಂ ॥ ವಾಮಕೇಶ್ವರತಂತ್ರೇ॥
ಬಿಂದುತ್ರಿಕೋಣ ವಸುಕೋಣ ದಶಾರಯುಗ್ಮ
ಮನ್ವಶ್ರ ನಾಗದಳಸಂಯುತಷೋಡಶಾರಂ ।
ವೃತ್ತತ್ರಯಂ ಚ ಧರಣೀಸದನತ್ರಯಂ ಚ
ಶ್ರೀಚಕ್ರಮೇತದುದಿತಂ ಪರದೇವತಾಯಾಃ ॥
ಅಥ ಪ್ರಕಾರಾಂತರೇಣ ಶ್ರೀಚಕ್ರಲಕ್ಷಣಂ
ಶಂಕರಾಚಾರ್ಯಕೃತ ಶ್ರೀಸೌಂದರ್ಯಲಹರ್ಯಾಂ ॥

ಯಿದಕ್ಕೆ ವ್ಯಾಖ್ಯಿನಲೊಲಾಜೀ (?) ॥...ಶ್ಮಿವಯುವತಿಭಿಃ ಪಂಚಭಿರಪಿ ಪ್ರಪನ್ನಾಭಿಶ್ಮಂಭೋರ್ನವಭಿರಪಿ ಮೂಲಪ್ರಕೃತಿಭಿಃ । ಚತುಶ್ಚತ್ವಾರಿಂಶ ... ತ್ರಿವಲಯ ತ್ರಿರೇಖಾಭಿಸ್ಸಾರ್ಧಂ ತವಶರಣ ಕೆಣಾಃ ಪರಿಣತಾಃ॥

ಅಥ ಶ್ರೀಚಕ್ರಸ್ಥ ಸಂಕೇತನಾಮಾನಿ ... ಂ ಜರ್ಯಾಂ ತ್ರಯೊ ದಶಸ್ತಬಕಾಂತ ರ್ವತ್ಯಷ್ಟಮಸ್ತಬಕೆ ಜ್ಞಾನಾರ್ಣವರೀತ್ಯಾ ಭೂಗೃಹಂ ಸ್ವರಪ ... ಭುವನಾಶ್ರಕಂ । ದಶಾರಯುಗ್ಮಮಷ್ಟಾರಂ ತ್ರ್ಯಶಂ ಮಧ್ಯ ಚ ಭೆದತಃ। ತ್ರೈಲೊಕ್ಯಮೊಹನಂ ಚಕ್ರಂ ... ರಕಂ ಸರ್ವಸಂಕ್ಷೊಭಣಂ ಚಕ್ರಂ ಸರ್ವಸೌಭಾಗ್ಯದಾಯಕಂ ಸರ್ವಾರ್ಥಸಾಧಕಂ ಚಕ್ರಂ .. ಸರ್ವರಕ್ಷಾ ... ಹರಂ ಸರ್ವಸಿದ್ಧಿಪ್ರದಾಯಕಂ ಸರ್ವಾನಂದಮಯಂ ಮಧ್ಯಂ ನವಮಂ ಚಕ್ರನಾಯಕಂ । ನವ... ಜಾನಾತಿ ಸ ಪೂಜಕಃ। ಪ್ರಕಟಾಶ್ಚ ತಥಾ ಗುಪ್ತಾಃ ತಥಾಗುಪ್ತತರಾ ಪರಾಃ । ಸಂಪ್ರದಾಯಾಃ ತುಲಾಃ ... ಗರ್ಭಾಶ್ಚ ರಹಸ್ಯಕಾಃ । ಪರಾಪರ ರಹಸ್ಯಾಸ್ತಾಃ ಅತಿ ಪೂರ್ವರಹಸ್ಯಕಾಃ। ನವಧಾ ನಾಮಸಂಕೆ ತೋ ಯೊಗಿ... ಯ್ಯತೆ ತ್ರಿಪುರಾ ತ್ರಿಪುರೆಶೀ ಚ ಸುಂದರೀ ಪುರವಾಸಿನೀ। ಶ್ರೀರ್ಮಾಲಿನೀ ಚ ಸಿದ್ಧಾಂಬಾ ಮಹಾತ್ರಿಪುರ ಸುಂದರೀ ಪುರವಾಸಿನೀ। ಅತ್ಯಾ... ವಿಜ್ಞಾಸಂಕೆತಸಂಜ್ಞಿತಂ । ತತ್ಸಂಪ್ರದಾಯ ಸಂಶೋಧ್ಯಂ ನವಕಂ ಭಕ್ತಿಮುಕ್ತಿದಂ॥ ಅತ್ರ ಅತಿಪೂರ್ವ... ಯಿತಿ ವಚನಾತ್ ಪರಾಪರರಹಸ್ಯಾಖ್ಯಾಯೋಗಿನೀತ್ವತಿ ಪೂರ್ವಕೇತಿ ದಕ್ಷಿಣಾಮೂರ್ತಿವಚನಾತ್ ಪ... ಸ್ಯ ಯೋನೀತಿ ನವಚಕ್ರಯೋಗಿನೀನಾಂ ನಾಮಸಂಕೆತಃ ॥ 0 ॥

ಶ್ರೀಚಕ್ರವೆಂಬ ಯಂತ್ರದಲ್ಲಿ ನಟ್ಟನಡುವೆ ಬಿಂದು, ಅದರ ಹೊರಗೆ ತ್ರಿಕೋಣ, ಅನಂತರ ಅಷ್ಟಕೋಣ, ಅಂತರ್ದಶಾರ, ಬಹಿರ್ದಶಾರ, ಚತುರ್ದಶಾರ, ಅಷ್ಟದಳ ಕಮಲ, ಷೋಡಶದಳ ಕಮಲ, ತ್ರಿವೃತ್ತ, ಭೂಪುರ (ಅಥವಾ ತ್ರಿರೇಖೆ) ಎಂಬ ವಿವರಗಳನ್ನು ಗುರುತಿಸಬಹುದು. ಇದರಲ್ಲಿ ಒಟ್ಟು ನಲವತ್ತಮೂರು ತ್ರಿಕೋಣಗಳು, ಇಪ್ಪತ್ತೆಂಟು ಮರ್ಮಸ್ಥಾನಗಳು (ಮೂರು ಗೆರೆಗಳು ಕೂಡುವ ಎಡೆ) ಮತ್ತು ಇಪ್ಪತ್ತನಾಲ್ಕು ಸಂಧಿಗಳು, (ಎರಡು ಗೆರೆಗಳು ಕೂಡುವ ಎಡೆ) ಇವೆ. ಶ್ರೀಚಕ್ರವು ಶಿವಶಕ್ತಿಯರ ಸಂಗಮವೆಂಬ ಕಲ್ಪನೆಯಿದೆ. ತ್ರಿಕೋಣ, ಅಷ್ಟಕೋಣ, ದಶಾರದ್ವಯ, ಚತುರ್ದಶಾರ ಈ ಐದು ವಿವರಗಳನ್ನು ಶಕ್ತಿಚಕ್ರಗಳೆಂದೂ, ಬಿಂದು, ಅಷ್ಟದಳಕಮಲ, ಷೋಡಶದಳಕಮಲ ಮತ್ತು ಭೂಪುರ ಈ ನಾಲ್ಕು ಶಿವಚಕ್ರಗಳೆಂದೂ, ಇವು ಪರಸ್ಪರ ಶ್ಲಿಷ್ಟವಾಗಿರುವುವೆಂದೂ ಕಲ್ಪನೆಯಿದೆ –

'ಚತುರ್ಭಿಃ ಶಿವಚಕ್ರೈಶ್ಚ ಶಕ್ತಿಚಕ್ರೈಶ್ಚ ಪಂಚಭಿಃ ।
ನವಚಕ್ರೈಶ್ಚ ಸಂಸಿದ್ಧಂ ಶ್ರೀಚಕ್ರಂ ಶಿವಯೋರ್ವಪುಃ॥'

ಶ್ರೀವಿದ್ಯೆಯ ಉಪಾಸನಾಕ್ರಮದಲ್ಲಿ ಆಮ್ನಾಯಗಳನ್ನು ಆಳವಡಿಸಿಕೊಂಡಿದ್ದಾರೆ. ಪೂರ್ವಮೊದಲಾಗಿ ನಾಲ್ಕು ದಿಕ್ಕುಗಳಲ್ಲಿ ನಾಲ್ಕು, ಮೇಲೆ ಒಂದು (ಊರ್ಧ್ವಾಮ್ನಾಯ), ಕೆಳಗೆ ಇನ್ನೊಂದು (ಅಧರಾಮ್ನಾಯ) ಹೀಗೆ ಆರು ಪ್ರಧಾನಾಮ್ನಾಯಗಳನ್ನೂ, ಈಶಾನ್ಯ ಮೊದಲಾಗಿ ನಾಲ್ಕು ವಿದಿಕ್ಕುಗಳಲ್ಲಿ ನಾಲ್ಕು ಉಪಾಮ್ನಾಯಗಳನ್ನೂ ಹೇಳುವುದು ವಾಡಿಕೆ. ಒಂದೊದು ಆಮ್ನಾಯದಲ್ಲೂ ಸೃಷ್ಟಿ, ಸ್ಥಿತಿ, ಸಂಹಾರ, ಅನಾಖ್ಯಾ ಮತ್ತು ಭಾಸ ಎಂಬ ಐದು ಕ್ರಮಗಳಿದ್ದು, ಇವನ್ನು ಮೂಲಾಧಾರದಿಂದ

ಆಜ್ಞಾಚಕ್ರದವರೆಗೆ ಹೊಂದಿಸುತ್ತಾರೆ. ಪ್ರತಿ ಆಮ್ನಾಯಕ್ಕೂ ಆಮ್ನಾಯನಾಯಿಕೆ ಇರುತ್ತಾಳೆ. ಅಧರಾಮ್ನಾಯಕ್ಕೆ ತಾರೆ, ಪೂರ್ವಾಮ್ನಾಯಕ್ಕೆ ಭುವನೇಶ್ವರಿ, ದಕ್ಷಿಣಾಮ್ನಾಯಕ್ಕೆ ದಕ್ಷಿಣಕಾಳಿ, ಪಶ್ಚಿಮಾಮ್ನಾಯಕ್ಕೆ ಕುಬ್ಜಿಕೆ, ಉತ್ತರಾಮ್ನಾಯಕ್ಕೆ, ಗುಹ್ಯಕಾಳಿ, ಮತ್ತು ಊರ್ಧ್ವಾಮ್ನಾಯಕ್ಕೆ ಬಾಲಾ ಮಹಾತ್ರಿಪುರಸುಂದರಿ ಇವರು ಆಮ್ನಾಯನಾಯಿಕೆಯರು. ಸಪ್ತಶತಿಯಲ್ಲಿ ಹೇಳಿರುವ ಪ್ರಕಾರ ಈಶಾನ್ಯ ಉಪಾಮ್ನಾಯಕ್ಕೆ ಮಹಾಕಾಳಿ, ಆಗ್ನೇಯ ಉಪಾಮ್ನಾಯಕ್ಕೆ ಮಹಾಲಕ್ಷ್ಮಿ, ವಾಯವ್ಯ ಉಪಾಮ್ನಾಯಕ್ಕೆ ಮಹಾಸರಸ್ವತಿ, ನೈಋತ್ಯ ಉಪಾಮ್ನಾಯಕ್ಕೆ ಚಾಮುಂಡಾ ಇವರು ನಾಲ್ವರು ಉಪಾಮ್ನಾಯ ನಾಯಿಕೆಯರು. ಇವರೆಲ್ಲರಿಗೆ ಹೊಂದುವಂತೆ ಚಕ್ರದೇವತೆಯರು, ಮುದ್ರಾದೇವತೆಯರು, ದರ್ಶನದೇವತೆಯರು, ಯೋಗಿನಿಯರು, ಸಿದ್ಧಿದೇವತೆಯರು, ಚಕ್ರನಾಯಿಕೆಯರು ಇದ್ದಾರೆ.

ಮುಮ್ಮಡಿಯವರು ಅನುಸರಿಸಿರುವ ದಕ್ಷಿಣಾಮೂರ್ತಿ ಸಂಪ್ರದಾಯದಂತೆ ಶ್ರೀ ಚಕ್ರದಲ್ಲಿರುವ ದೇವತಾಸಮೂಹವನ್ನು ಹೀಗೆ ಕಾಣಿಸಬಹುದು

(೧) ಅಧರಾಮ್ನಾಯ : ಶಬ್ದಯೋಗಸಿದ್ಧಿ

ಮೂಲಾಧಾರದಲ್ಲಿ (ಗುಹ್ಯಸ್ಥಾನ)

ಗಣಪತಿ, ಶಾಕಿನಿಯರು; ವಿಶ್ರಾಂತಿಚಕ್ರದ ನಾಯಿಕೆ ತಾರೆ, ಸೃಷ್ಟಿಕ್ರಮಕ್ಕೆ ತಾರಿಣಿ, ಸ್ಥಿತಿಕ್ರಮಕ್ಕೆ ಏಕಜಟೆ, ಸಂಹಾರಕ್ರಮಕ್ಕೆ ನೀಲಸರಸ್ವತಿ, ಅನಾಖ್ಯಿಕ್ರಮಕ್ಕೆ ಮಹೋಗ್ರತಾರೆ, ಭಾಸಾಕ್ರಮಕ್ಕೆ ಉಗ್ರತಾರೆ. ಇಲ್ಲಿನ ಸಿದ್ಧಿ ಶಬ್ದಯೋಗಸಿದ್ಧಿ. ವರ್ಣಮಾಲೆಯಲ್ಲಿ 'ವ' ಯಿಂದ 'ಸ' ವರೆಗೆ ಮಾತೃಕೆಯರು.

(೨) ಪೂರ್ವಾಮ್ನಾಯ

(ಭೂಪುರದಿಂದ ಅಷ್ಟದಳದವರೆಗೆ ಸಮಷ್ಟಿಚಕ್ರ)

- ಮಂತ್ರಯೋಗಸಿದ್ಧಿ ಸ್ವಾಧಿಷ್ಠಾನದಲ್ಲಿ(ಲಿಂಗಮೂಲ) ಬ್ರಹ್ಮ, ಡಾಕಿನಿಯರು; ಸೃಷ್ಟಿಚಕ್ರದ ನಾಯಿಕೆ ಭುವನೇಶ್ವರಿ; ಸದಾಶಿವ ಬೈರವ; ಕಾಮೇಶ್ವರೀ ಸಮಯಾನಿತ್ಯಾ; ವರ್ಣಮಾಲೆಯಲ್ಲಿ 'ಬ' ಯಿಂದ 'ಲ' ಮಾತೃಕೆಯರು

- ಭೂಪುರ-ತ್ರೈಲೋಕ್ಯಮೋಹನಚಕ್ರ; ಈಶಿತ್ವಾದಿ ಪ್ರಕಟಯೋಗಿನಿಯರು; ಅಣಿಮಾಸಿದ್ಧಿ; ತ್ರಿಪುರಾ-ಚಕ್ರನಾಯಿಕೆ, ೧) ಹೊರಗಿನ ರೇಖೆ - ಅಣಿಮಾದಿ ದಶಸಿದ್ಧಿ; (೨) ನಡುವಣ ರೇಖೆ - ಬ್ರಾಹ್ಮ್ಯಾದಿ ಅಷ್ಟಮಾತೃಕೆಯರು; (೩)ಒಳಗಿನ ರೇಖೆ - ಸಂಕ್ಷೋಭಿಣ್ಯಾದಿ ದಶಮುದ್ರೆಯರು

- ತ್ರಿವೃತ್ತ (ಸೃಷ್ಟಿ-ಸೃಷ್ಟಿ) - ತ್ರಿವರ್ಗಸಾಧನ ಚಕ್ರ; ಮಹಾಯೋನಿಮುದ್ರೆ; ಕಾಳರಾತ್ರ್ಯಾದಿ ಮಾತೃಕಾಯೋಗಿನಿಯರು, ಗರಿಮಾಸಿದ್ಧಿ; ತ್ರಿಪುರೇಶಿನೀ ಚಕ್ರನಾಯಿಕೆ ; (೧) ಹೊರಗಿನ ವೃತ್ತ ಕಾಳರಾತ್ರ್ಯಾದಿ ೨೯ ಮಾತೃಕೆಯರು,(೨) ನಡುವಣ ವೃತ್ತ; ಅಮೃತಾದಿ ೧೬ ಮಾತೃಕೆಯರು; ಒಳಗಿನ ವೃತ್ತ - ಕಾಮೇಶ್ವರ್ಯಾದಿ ೧೬ ನಿತ್ಯೆಯರು.

- ಷೋಡಶದಳ (ಸೃಷ್ಟಿ - ಸ್ಥಿತಿ) - ಸರ್ವಾಶಾಪರಿಪೂರಕಚಕ್ರ; ಸರ್ವವಿದ್ರಾವಿಣೀ ಮುದ್ರಾ, ಕಾಮಾಕರ್ಷಿಣ್ಯಾದಿ ಗುಪ್ತಯೋಗಿನಿಯರು; ಲಘಿಮಾಸಿದ್ಧಿ ತ್ರಿಪುರೇಶಿ - ಚಕ್ರನಾಯಿಕೆ; ಷೋಡಶದಳಕಾಮಾಕರ್ಷಿಣೀ ಮೊದಲಾಗಿ ೧೬ ಕಳಾದೇವಿಯರು.

- ಅಷ್ಟದಳ (ಸೃಷ್ಟಿ -ಸಂಹಾರ) - ಸರ್ವಸಂಕ್ಷೋಭಣಚಕ್ರ; ಸರ್ವಾಕರ್ಷಿಣೀ ಮುದ್ರಾ; ಅನಂಗಕುಸುಮಾದಿ ಗುಪ್ತತರಯೋಗಿನಿಯರು; ಮಹಿಮಾಸಿದ್ಧಿ; ತ್ರಿಪುರಸುಂದರೀ-ಚಕ್ರನಾಯಿಕೆ; ಅಷ್ಟದಳ; ಅನಂಗಕುಸುಮ ಮೊದಲಾಗಿ ೮ ದೇವಿಯರು.

(೩) ದಕ್ಷಿಣಾಮ್ನಾಯ

(ಚತುರ್ದಶಾರದಿಂದ ಅಂತರ್ದಶಾರದವರೆಗೆ)

ಭಕ್ತಿಯೋಗಸಿದ್ಧಿ :

ಮಣಿಪೂರದಲ್ಲಿ (ನಾಭಿಸ್ಥಾನ) ವಿಷ್ಣು, ಲಾಕಿನಿಯರು; ಮಾತೃಕೆಯರು. ಸ್ಥಿತಿಚಕ್ರದ ನಾಯಿಕೆ ವಿದ್ಯಾರಾಜ್ಞೀ ದಕ್ಷಿಣಕಾಳಿ; ಮಹಾಕಾಳ ಭೈರವ; ಭಗಮಾಲಿನೀ ಸಮಯಾನಿತ್ಯಾ; ವರ್ಣಮಾಲೆಯಲ್ಲಿ ಡ-ಫ ಮಾತೃಕೆಯರು.

- ಚತುರ್ದಶಾರ (ಸ್ಥಿತಿ-ಸ್ಥಿತಿ) - ಸರ್ವಸೌಭಾಗ್ಯದಾಯಕಚಕ್ರ; ಸರ್ವವಶಂಕರೀ; ಮುದ್ರಾ; ಸಂಕ್ಷೋಭಿಣ್ಯಾದಿ ಸಂಪ್ರದಾಯ ಯೋಗಿನಿಯರು; ಈಶಿತ್ವ ಸಿದ್ಧಿ; ತ್ರಿಪುರವಾಸಿನೀ-ಚಕ್ರನಾಯಕೆ; ಸಂಕ್ಷೋಭಿಣ್ಯಾದಿ ಶಕ್ತಿಯರು.

- ಬಹಿರ್ದಶಾರ (ಸ್ಥಿತಿ-ಸೃಷ್ಟಿ) - ಸರ್ವಾರ್ಥಸಾಧಕಚಕ್ರ; ಸರ್ವೋನ್ಮಾದಿನೀ ಮುದ್ರಾ; ಸರ್ವಸಿದ್ಧಿಪ್ರದಾದಿ ಕುಲಕೌಲ ಯೋಗಿನಿಯರು; ತ್ರಿಪುರಾಶ್ರೀ - ಚಕ್ರನಾಯಿಕೆ; ಸರ್ವಸಿದ್ಧಿಪ್ರದೆಯೇ ಮೊದಲಾಗಿ ೧೦ ದೇವಿಯರು

- ಅಂತರ್ದಶಾರ (ಸ್ಥಿತಿ - ಸಂಹಾರ) - ಸರ್ವರಕ್ಷಾಕರಚಕ್ರ; ಮಹಾಂಕುಶಾಮುದ್ರಾ; ಸರ್ವಜ್ಞಾದಿ ನಿಗರ್ಭಯೋಗಿನಿಯರು; ಪ್ರಾಕಾಮ್ಯಸಿದ್ಧಿ; ತ್ರಿಪುರಮಾಲಿನೀ- ಚಕ್ರನಾಯಿಕೆ ; ಸರ್ವಜ್ಞೆಯೇ ಮೊದಲಾಗಿ ೧೦ ದೇವಿಯರು.

(೪) ಪಶ್ಚಿಮಾಮ್ನಾಯ
(ಅಷ್ಟಾರದಿಂದ ಬಿಂದುವಿನವರೆಗೆ) ;

ಕರ್ಮಯೋಗಸಿದ್ಧಿ.

ಅನಾಹತ (ಹೃದಯಸ್ಥಾನ) ದಲ್ಲಿ ಶಿವ ರಾಕಿನಿಯರು; ಸಂಹಾರಚಕ್ರದ ನಾಯಿಕೆ ಕುಬ್ಜಿಕೆ; ಶಿಖಾಸ್ವಚ್ಛಂದಭೈರವ; ವಜ್ರೇಶ್ವರೀ ಸಮಯಾನಿತ್ಯಾ ; ವರ್ಣಮಾಲೆಯಲ್ಲಿ ಕ - ಠ ಮಾತೃಕೆಯರು

- ಅಷ್ಟಾರ (ಸಂಹಾರ -ಸೃಷ್ಟಿ) - ಸರ್ವರೋಗಹರಚಕ್ರ; ಖೇಚರೀಮುದ್ರಾ; ವಶಿನ್ಯಾದಿ ರಹಸ್ಯಯೋಗಿನಿಯರು; ಭುಕ್ತಿಸಿದ್ಧಿ; ತ್ರಿಪುರಾಸಿದ್ಧಿ - ಚಕ್ರನಾಯಿಕೆ ; ವಶಿನಿಯೇ ಮೊದಲಾಗಿ ವಾಗ್ದೇತೆಯರು ಎಂಟು ಮಂದಿ

- ತ್ರಿಕೋಣ (ಸಂಹಾರ - ಸ್ಥಿತಿ)- ಸರ್ವಸಿದ್ಧಿಪ್ರದಚಕ್ರ; ಬೀಜಮುದ್ರಾ; ಕಾಮೇಶ್ವರ್ಯಾದಿ ಅತಿರಹಸ್ಯ ಯೋಗಿನಿಯರು ; ಇಚ್ಛಾಸಿದ್ಧಿ; ತ್ರಿಪುರಾಂಬೆ - ಚಕ್ರನಾಯಿಕೆ ; ಕಾಮೇಶ್ವರಿಯೇ ಮೊದಲಾಗಿ ಮೂವರು ದೇವಿಯರು
  (ಅಷ್ಟಾರ ಮತ್ತು ತ್ರಿಕೋಣದ ನಡುವಣ ಸ್ಥಾನದಲ್ಲಿ ಗುರುಪಂಕ್ತಿ ದಿವ್ಯೌಘ, ಸಿದ್ಧೌಘ, ಮಾನವೌಘಗಳು)

- ಬಿಂದು (ಸಂಹಾರ-ಸಂಹಾರ) - ಸರ್ವಾನಂದಮಯಚಕ್ರ; ಸರ್ವಯೋನಿ ಮುದ್ರಾ; ಪಂಚದಶ್ಯಾದಿ ಪರಾಪರರಹಸ್ಯಯೋಗಿನಿಯರು ; ಪ್ರಾಪ್ತಿಸಿದ್ಧಿ; ತ್ರಿಪುರಭೈರವಿ- ಚಕ್ರನಾಯಿಕೆ; ಬಿಂದುವಿನಲ್ಲಿ ಮಹಾತ್ರಿಪುರ ಸುಂದರೀ

(೫) ಉತ್ತರಾಮ್ನಾಯ
(ಬಿಂದುವಿನಿಂದ ಭೂಪುರದವರೆಗೆ ಸಮಷ್ಟಿ)

ಜ್ಞಾನಯೋಗಸಿದ್ಧಿ

ವಿಶುದ್ಧ (ಕಂಠಸ್ಥಾನ) ದಲ್ಲಿ ಜೀವಾತ್ಮ, ಡಾಕಿನಿಯರು; ಅನಾಖ್ಯಾಚಕ್ರದ ನಾಯಿಕೆ ಗುಹ್ಯಕಾಳಿ; ನೃಸಿಂಹಭೈರವ; ಬಾಲಾಮಹಾತ್ರಿಪುರಸುಂದರೀ ಸಮಯಾನಿತ್ಯಾ; ವರ್ಣಮಾಲೆಯಲ್ಲಿ ಅ - ಅಃ ಮಾತೃಕೆಯರು.

ಅನಾಖ್ಯಾಸೃಷ್ಟಿಚಕ್ರ - ಭುವನೇಶಿ ಚಕ್ರನಾಯಿಕೆ
ಅನಾಖ್ಯಾಸ್ಥಿತಿ ಚಕ್ರ - ಶ್ಯಾಮಾಕಾಳಿ ಚಕ್ರನಾಯಿಕೆ
ಅನಾಖ್ಯಾಸಂಹಾರಚಕ್ರ ವಜ್ರಕುಬ್ಜಿಕಾ ಚಕ್ರನಾಯಿಕೆ
ಅನಾಖ್ಯಾ ಅನಾಖ್ಯಾಚಕ್ರ ಗುಹ್ಯಕಾಳೀ ಚಕ್ರನಾಯಿಕೆ
ಅನಾಖ್ಯಾಭಾಸಾಚಕ್ರ - ಕಾಮಕಲಾ ಚಕ್ರನಾಯಿಕೆ

(೬) ಊರ್ಧ್ವಾಮ್ನಾಯ
(ಬಿಂದುವಿನಿಂದ ಭೂಪುರದವರೆಗೆ ಸಮಷ್ಟಿ) ;

ಮೋಕ್ಷಯೋಗಸಿದ್ಧಿ ಆಜ್ಞಾ (ಭ್ರೂಮಧ್ಯಸ್ಥಾನ) ದಲ್ಲಿ ಪರಮಾತ್ಮ (ಅಥವಾ ಗುರು), ಹಾಕಿನಿಯರು; ಭಾಸಾಚಕ್ರದ ನಾಯಿಕೆ ಬಾಲಾ; ತ್ರಿಪುರ ಭೈರವ;

'ಕಾಮೇಶೀ ಲಲಿತಾ ಬಾಲಾ ಮಹಾತ್ರಿಪುರಸುಂದರೀ ।
ತ್ರಿಪುರಾ ಭೈರವೀ ಹ್ಯೇತಾ ಊರ್ಧ್ವಾಮ್ನಾಯಂ ಸಮಾಶ್ರಿತಾಃ ॥'
(ವಡವಾನಲ ತಂತ್ರ)

ಶ್ರೀವಿದ್ಯೆಯ ಈ ಚೌಕಟ್ಟನ್ನು ಅರಿತುಕೊಂಡಮೇಲೆ ಮುಮ್ಮಡಿಯವರ ನಿರೂಪಣೆ ಅರ್ಥವತ್ತಾಗಿ ತೋರಿಕೊಂಡೀತು. ಇಲ್ಲಿ ಎಂಟು ಚಕ್ರಗಳ (ಆವರಣಗಳ) ವರ್ಣನೆಯಿದೆ; ಒಂಬತ್ತನೆಯದು ಬಿಂದು, ಮಹಾತ್ರಿಪುರಸುಂದರಿಯ ಸ್ಥಾನ. ಚಕ್ರಗಳ ಸಂಖ್ಯಾನಿದೇಶನ, ತಲೆಬರಹ, ದೇವತೆಯ ಸ್ಥಾನ ಇವು ಮೂಲದಲ್ಲಿಲ್ಲ; ಓದುಗರ ಸೌಕರ್ಯಕ್ಕಾಗಿ ನಾನು ಇಲ್ಲಿ ಸೇರಿಸಿದ್ದೇನೆ

(೧) ಪ್ರಕಟಯೋಗಿನಿಯರು
(ಅಷ್ಟಸಿದ್ಧಿಯರು)

ಅಥ ಲಲಿತೋಪಾಖ್ಯಾನರೀತ್ಯಾ ಶ್ರೀ ಚಕ್ರಸ್ಥದೇವತಾ ಲಿಖ್ಯಂತೆ ।'
ಅಣಿಮಾದಿಸಿದ್ಧಿದೆವತಾ ಧ್ಯಾನಂ ।
ಅಣಿಮಾ ಮಹಿಮಾ ಚೈವ ಗರಿಮಾ ಲಘಿಮಾ ತಥಾ।
ಪ್ರಾಪ್ತಿಃ ಪ್ರಾಕಾಮ್ಯಮೀಶತ್ವಂ ವಶಿತ್ವಂ ಚಾಷ್ಟ ಭೂತಯಂ (॥೧॥)
ಭುಕ್ತಿಸಿದ್ಧಿಸ್ಸರ್ವಸಿದ್ಧಿರ್ದಶ ಸಿಧ (ದ್ಧ) ಯ ಈರಿತಾಃ।
ಎ (ಏ) ದೇವ್ಯಶ್ಚತುರ್ಬಾಹಾ ಜಪಾಕುಸುಮಸಂನಿಭಾಃ। (॥೨॥)
ಚಿಂತಾಮಣಿಂ ಕಪಾಲಂ ಚ ತ್ರಿಶೂಲಂ ಸಿದ್ಧಕಜ್ಜಳಂ ।
ದಧಾನಾ ದಯಯಾ ಪೂರ್ಣಾ ಯೋಗಿಭಿಶ್ಚ ನಿಷೆವಿತಾಃ। (॥೩॥)
ರಕ್ತವರ್ಣಃ॥'

ಅಷ್ಟಮಾತೃಕೆಯರು
(ಭೂಪುರದ ನಡುವಣ ರೇಖೆಯಲ್ಲಿ)

'ಅಥ ಮಹಾಲಕ್ಷ್ಮೀ ಸಹಿತ ಅಷ್ಟಮಾತೃಕಾ ಧ್ಯಾನಂ।
ಬ್ರಾಹ್ಮೀ ಮಾಹೇಶ್ವರೀ ಚೈವ ಕೌಮಾರೀ ವೈಷ್ಣವೀ ತಥಾ ।
ವಾರಾಹೀ ಚೈವ ಮಾ ಹೆಂದ್ರೀ ಚಾಮುಂಡಾ ಚೈವ ಸಪ್ತಮೀ । (॥೧॥
ಮಹಾಲಕ್ಷ್ಮೀರಷ್ಟಮೀ ಚ ದ್ವಿಭುಜಾಶ್ಯೊಣ ವಿಗ್ರಹಾಃ।
ಕಪಾಲಮುತ್ಪಲಂ ಚೈವ ಬಿಭ್ರಾಣಾ ರಕ್ತವಾಸಸಃ। (॥೨॥
ಅಥವಾನ್ಯಪ್ರಕಾರೇಣ ಕೆಚಿದ್ಧ್ಯಾ(ದ್ಧ್ಯಾ) ನಂ ಪ್ರಚಕ್ಷತೇ।
ಬ್ರಹ್ಮಾದಿ ಸದೃಶಾಕಾರಾ ಬ್ರಹ್ಮಾದಿಸದೃಶಾಯುಧಾಃ।

ಬ್ರಹ್ಮಾದೀನಾಂ ಪರಂ ಚಿನ್ಹಂ (ಹ್ನಂ) ಧಾರಯಂತ್ಯಃ ಪ್ರಕೀರ್ತಿತಾಃ ॥೩॥
ರಕ್ತವರ್ಣಾಃ॥ ॥'

ದಶಮುದ್ರಾದೇವತೆಯರು
(ಭೂಪುರದ ಒಳಗಿನ ರೇಖೆಯಲ್ಲಿ)

'ಅಥ ಸರ್ವಸಂಕ್ಷೋಭಿಣ್ಯಾದಿ ದಶಮುದ್ರಾ ದೆ ವತಾಧ್ಯಾನಂ ॥
ಮುದ್ರಾ ವಿರಚನಾಯುಕ್ತೈರ್ಹಸ್ತೈ(ಃ) ಕಮಲಕಾಂತಿಭಿಃ ।
ದಾಡಿಮೀಪುಷ್ಪಸಂಕಾಶಾಃ ಪೀತಾಂಬರಮನೋಹರಾಃ॥ (॥೧॥)
ಚತುರ್ಭುಜಾ ಭುಜದ್ವಂದ್ವಧೃತ ಚರ್ಮಕೃಪಾಣಿಕಾಃ।
ಮದರಕ್ತ ವಿಶಾಲಾಕ್ಷ್ಯಸ್ತಾಸಾಂ ನಾಮಾನಿ ಚ ಶೃಣು ॥ (॥೨॥)
ಸರ್ವಸಂಕ್ಷೋಭಿಣೀ ಚೈವ ಸರ್ವವಿದ್ರಾವಿಣೀತಥಾ।
ಸರ್ವಾಕರ್ಷಿಣಿ ಮುದ್ರಾ ಚ ತಥಾ ಸರ್ವವಶಂಕರೀ। (॥೩॥
ಸರ್ವೋನ್ಮಾದಿನಿಮುದ್ರಾ ಚ ಷಷ್ಠೀ ಸರ್ವಮಹಾಂಕುಶಾ ।
ಸರ್ವಖೆ ಚರಿ ಮುದ್ರಾ ಚ ಸರ್ವಬೀಜಾ ತಥಾಪರಾ। (॥೪॥
ಸರ್ವಯೋನಿಶ್ಚ ನವಮೀ ತಥಾ ಸರ್ವತ್ರಿಖಂಡಿಕಾ ।
ಇತ್ಯೆತಾಃ ಕಥಿತಾ ವಿಪ್ರ ದಶಮುದ್ರಾಧಿದೆವತಾಃ॥೫॥
ರಕ್ತವರ್ಣಾಃ॥'

(೨) ಗುಪ್ತಯೋಗಿನಿಯರು
(ಷೋಡಶದಳದಲ್ಲಿ)

'ಅಥ ಗುಪ್ತಯೋಗಿನೀಧ್ಯಾನಂ।
ಕಾಮಾಕರ್ಷಿಣಿಕಾ ಚೈವ ಬುಧ್ಯಾ (ದ್ಧ್ಯಾ) ಕರ್ಷಿಣಿಕಾ ಕಲಾ।
ಅಹಂಕಾರಾಕರ್ಷಿಣೀ ಚ ಸರ್ವಾಕರ್ಷಿಣಿಕಾ ಕಲಾ । (॥೧॥
ಸ್ಪರ್ಶಾಕರ್ಷಿಣಿಕಾ ನಿತ್ಯಾ ರೂಪಾಕರ್ಷಿಣಿಕಾ ಕಲಾ।
ರಸಾಕರ್ಷಿಣಿಕಾ ಚೈವ ಗಂಧಾಕರ್ಷಿಣಿಕಾ ಕಲಾ। ॥೨॥
ಚಿತ್ತಾಕರ್ಷಿಣಿಕಾ ನಿತ್ಯಾ ಧೈರ್ಯಾಕರ್ಷಿಣಿಕಾ ಕಲಾ।
ಸ್ಮೃತ್ಯಾಕರ್ಷಿಣಿಕಾ ನಿತ್ಯಾ ನಾಮಾಕರ್ಷಿಣಿಕಾ ಕಲಾ । (॥೩॥)
ಬೀಜಾಕರ್ಷಿಣಿಕಾ ನಿತ್ಯಾ ಆತ್ಮಾಕರ್ಷಿಣಿಕಾ ಕಲಾ।
ಅಮೃತಾಕರ್ಷಿಣೀ ನಿತ್ಯಾ ಶರೀರಾಕರ್ಷಿಣೀ ಪರಾ । (॥೪॥)
ಏತಾ ಷೊ ಡಶನಿತ್ಯಾ ಸ್ಯುಃ ಕಲಾರೂಪಾಶ್ಚ ಶಕ್ತಯಃ।
ವಿದ್ರುಮದ್ರುಮಸಂಕಾಶಾ ಮದಪ್ರಹಸಿತಾನನಾಃ । (॥೪॥)
ಚತುರ್ಭುಜಾಸ್ತ್ರಿನೇತ್ರಾಶ್ಚ ಚಂದ್ರಾರ್ಧಮಕುಟೊಜ್ಜ್ವಲಾಃ।
ಚಾಪಬಾಣೌ ಚರ್ಮಖಡ್ಗೌ ದಧಾನಾ ದಿವ್ಯಕಾಂತಯಃ । (॥೫॥)
ರಕ್ತವರ್ಣಾಃ॥'

(೩) ಗುಪ್ತತರಯೋಗಿನಿಯರು

'ಅಥ ಗುಪ್ತತರಯೊಗಿನೀಧ್ಯಾನಂ।
ಅನಂಗಕುಸುಮಾನಂಗಮೆಖಲಾ ಚ ದ್ವತೀಯ್ಯಕಾ(॥೧॥)
ಅನಂಗಮದನಾನಂಗಮದನಾತುರಯಾ ಸಹ।
ಅನಂಗರೆಖಾ ಚಾನಂಗವೆಗಾನಂಗಾಂಶುಕಾ ಅಪಿ (॥೨॥)
ಅನಂಗಮಾಲಿನ್ಯಪರಾ ಎ(ಏ)ತಾ ದೆವ್ಯೊ ಜಪಾತ್ವಿಷಃ।
ಇಕ್ಷು ಚಾಪಂ ಪುಷ್ಪಶರಾನ್ಪುಷ್ಪಕಂತುಕಮುತ್ಪಲಂ।
ಬಿಭ್ರತ್ಯೊ ದಭ್ರವಿಕ್ರಾಂತಿಶಾಲಿನ್ಯೊ ಲಲಿತಾಜ್ಞಯಾ । (॥೩॥)
ರಕ್ತವರ್ಣಾಃ॥ ॥'

(೪) ಸಂಪ್ರದಾಯ ಯೋಗಿನಿಯರು
(ಚತುರ್ದಶಾರದಲ್ಲಿ)

'ಅಥ ಸಂಪ್ರದಾಯಯೋಗಿನೀಧ್ಯಾನಂ।
ಸರ್ವಸಂಕ್ಷೋಭಿಣೀ ಮುಖ್ಯಾಸ್ಸಂಪ್ರದಾಯಾಖ್ಯಯಾ ಯುತಾಃ ॥ (॥೧॥)
ವೆಣೀಕೃತಕಚಸ್ತೊ ಮಾಸ್ಸಿಂಧೂರತಿಲಕೊಜ್ವಲಾಃ।
ಅತಿತೀವ್ರಸ್ವಭಾವಾಶ್ಚ ಕಾಲಾನಲಸಮತ್ವಿಷಃ (॥೨॥)
ವನ್ನಿ(ಹ್ನಿ)ಚಾಪಂ ವನ್ನಿ(ಹ್ನಿ)ರೂಪಮಸಿಂತಥಾ।
ವನ್ನಿ(ಹ್ನಿ)ಚಕ್ರಾಖ್ಯಾಫಲಕಂ ದಧಾನಾ ದೀಪ್ತವಿಗ್ರಹಾಃ (॥೩॥)
ಅಸುರೆದ್ರಂ ಪ್ರತಿ ಕ್ರುದ್ಧಾಃ ಕಾಮಭಸ್ಮ ಸಮುದ್ಭವಂ।
ಆಜ್ಞಾಶಕ್ತಯ ಎ (ಏ)ವೈತಾ ಲಲಿತಾಯಾ ಮಹೌಜಸಃ। (॥೪॥
ಸರ್ವಸಂಕ್ಷೋಭಿಣೀ ಚೈವ ಸರ್ವವಿದ್ರಾವಿಣೀ ತಥಾ।
ಸರ್ವಾಕರ್ಷಿಣಿಕಾ ಶಕ್ತಿಸ್ಸರ್ವಾಹ್ಲಾದಿ(ದಿ)ನಿಕಾ ತಥಾ॥ (॥೫॥)
ಸರ್ವಸಂಮೊಹಿನೀಶಕ್ತಿಸ್ಸರ್ವಸ್ತಂಭಿ(ಭ)ನಿಶಕ್ತಿಕಾ।
ಸರ್ವಾರ್ಥಸಾಧಿಕಾ ಶಕ್ತಿಃ ಸರ್ವಸಂಪತ್ಪ್ರಪೂರಿಣೀ। (॥೬॥)
ಸರ್ವಮಂತ್ರಮಯೀ ಶಕ್ತಿಸ್ಸರ್ವದ್ವಂದ್ವಕ್ಷಯಂಕರೀ।
ಇತ್ಯೆವಂ ಸಂಪ್ರದಾಯಾನಾಂ ನಾಮಾನಿ ಕಥಿತಾನಿ ವೈ । (॥ ೮॥)
ರಕ್ತವರ್ಣಾಃ॥ ॥

(೫) ಕುಲೋತ್ತೀರ್ಣಯೋನಿಯರು
(ಬಹಿರ್ದಶಾರದಲ್ಲಿ)

'ಅಥ ಕುಲೋತ್ತೀರ್ಣಯೋಗಿನೀ ಧ್ಯಾನಂ ।
ತಾಶ್ಚ ಸ್ಫಟಿಕಸಂಕಾಶಾಃ ಪರಶುಂ ಪಾಶಮೇವ ಚ। (॥೧॥)
ಗದಾಂ ಘಂಟಾಮಣಿಂ ಚೈವ ದಧಾನಾ ದೀಪ್ತವಿಗ್ರಹಾಃ।
ದೇವದ್ವಿಷಮಭಕ್ಕ(ಕ್ರು)ದ್ಧಾ ಭ್ರುಕುಟೀ ಕುಟಿಲಾನನಾಃ। (॥೨॥)
ಎ(ಏ)ತಾಸಾಮಪಿ ನಾಮಾನಿ ಸಮಾಕರ್ಣಯ ಕುಂಭಜ।
ಸರ್ವೆಸಿದ್ಧಿಪ್ರದಾ ದೇವೀ ಸರ್ವಸಂಪತ್ಪ್ರದಾ ತಥಾ । (॥೩॥)
ಸರ್ವಪ್ರಿಯಂಕರೀ ದೆವೀ ಸರ್ವಮಂಗಳಕಾರಿಣೀ (।)
ಸರ್ವಕಾಮಪ್ರದಾದೆವೀ ಸರ್ವದುಃಖವಿನಾಶಿನೀ। (॥೪॥)
ಸರ್ವಮೃತ್ಯು ಪ್ರಶಮನೀ ಸರ್ವವಿಘ್ನನಿವಾರಿಣೀ।
ಸರ್ವಾಂಗಸುಂದರೀ ದೇವೀ ಸರ್ವಸೌಭಾಗ್ಯದಾಯಿನೀ

ದಶೈತಾ ಕಥಿತಾ ದೇವ್ಯೋ ದಯಯಾ ಪೂರಿತಾಶಯಾಃ। (II೫II)
ಶ್ವೇತವರ್ಣಾ:II II'

(೬) ನಿಗರ್ಭಯೋಗಿನಿಯರು
(ಅಂತರ್ದಶಾರದಲ್ಲಿ)

'ಅಥ ನಿಗರ್ಭಯೋಗಿನೀಧ್ಯಾನಂ।
ನಿಗಾರ್ಭಯೋಗಿನೀ ನಾಮ್ನಾ ಪ್ರಥಿತಾ ದಶ ಕೀರ್ತಿತಾಃ।
ಸರ್ವಜ್ಞಾನಮಯೀ ದೇವೀ ಸರ್ವವ್ಯಾಧಿವಿನಾಶಿನೀ ।
ಸರ್ವಾಧಾರಸ್ವರೂಪಾ ಚ ಸರ್ವಪಾಪಹರಾ ತಥಾ। (II೨II)
ಸರ್ವಾನಂದಮಯೀ ದೇವೀ ಸರ್ವರಕ್ಷಾಸ್ವರೂಪಿಣೀ।
ಸರ್ವೇಪ್ಸಿತಪ್ರದಾ ದೇವೀ ಮುಕ್ತಾಗೌರಸಮತ್ವಿಷಃ। (II೩II)
ಎ(ಏ)ತಾಶ್ಚತುರ್ಭುಜಾ ಜ್ಞೇಯಾ ವಜ್ರಂ ಶಕ್ತಿಂ ಚ ತೋಮರಂ।
ಚಕ್ರಂ ಚೈವ ಚ ಬಿಭ್ರಾಣಾ ಭಂಡಾಸುರವಧೋದ್ಯತಾಃ । (II೪II)'
ಶ್ವೇತವರ್ಣಾ: II II

(೭) ರಹಸ್ಯಯೋಗಿನಿಯರು
(ಅಷ್ಟಾರದಲ್ಲಿ)

'ಅಥ ರಹಸ್ಯಯೋಗಿನೀಧ್ಯಾನಂ।
ರಹಸ್ಯಯೋಗಿನೀ ನಾಮ್ನಾ ಪ್ರಖ್ಯಾತಾ ವಾಗಧೀಶ್ವರಾಃ।
ರಕ್ತಾಶೋಕಪ್ರಸೂನಾಭಾ ಬಾಣಕಾರ್ಮುಕಪಾಣಯಃ । (II೧II)
ಕವಚಚ್ಛಂನ (ಚ್ಛನ್ನ) ಸರ್ವಾಂಗ್ಯೋ ವೀಣಾಪುಸ್ತಕಶೋಭಿತಾಃ।
ವಶಿನೀ ಚೈವ ಕಾಮೇಶೀ ಮೋದಿನೀ ವಿಮಲಾ ತಥಾ। (II೨II)
ಅರುಣಾ ಚೈವ ಜೈನ್ಯಾ (ಜಯಿನೀ) ಚ ಸರ್ವೇಶೀ ಕೌಳಿನೀ ತಥಾ।
ಅಷ್ಟಾವೇತಾ ಸ್ಮೃತಾ ದೇವ್ಯೋ ದೈತ್ಯಸಂಹಾರಹೇತವಃ II (II೩II)
ರಕ್ತವರ್ಣಾ:II II'

(೮) ಅತಿರಹಸ್ಯಯೋಗಿನಿಯರು
(ಮಹಾತ್ರಿಕೋಣದ ಹೊರಗೆ ಆಯುಧದೇವತೆಯರು)

ಅಥ ಅತಿರಹಸ್ಯಯೋಗಿನೀಧ್ಯಾನಂ।
ತಿಸ್ರಸ್ತ್ರಿಪೀಠನಿಲಯಾ ಅಷ್ಟಬಾಹುಸಮನ್ವಿತಾಃII (I)
ಚಾಪಬಾಣೌ ಪಾನಪಾತ್ರಂ ಮಾತುಳುಂಗಂ ಕೃಪಾಣಿಕಾ। (II೧II)
ಫಲಕಂ ನಾಗಪಾಶಂ ಚ ಘಂಟಾಂ ಚೈವ ಮಹಾಧ್ವನಿಂ।
ಬಿಭ್ರಾಣಾ ಮದಿರೋನ್ಮತ್ತಾ ಅತಿಪೂರ್ವರಹಸ್ಯಕಾ:II೨II)
ಕಾಮೇಶೀ ಚೈವ ವಜ್ರೇಶೀ (ಮಹಾತ್ರಿಕೋಣದ) ಕೋಣಗಳಲ್ಲಿ
ಭಗಮಾಲಿನ್ಯಥಾ ಪರಾ ।
ತಿಸ್ರ ಎ(ಏ)ತಾ ಸ್ಮೃತಾ ದೈತ್ಯಭಂಡೇ ಕೋಪಸಮನ್ವಿತಾಃ । (II೩II)
ಲಲಿತಾಸಮಮಾಹಾತ್ಮ್ಯಾ ಲಲಿತಾಸಮತೇಜಸಃ
ಏತಾಸ್ತು ನಿತ್ಯಂ ಶ್ರೀದೇವ್ಯಾ ಅಂತರಂಗಾಃ ಪ್ರಕೀರ್ತಿತಾಃ (II೪II)
ಸಿಂದೂರವರ್ಣಾ:II'

ಮೇಲಿನ ವರ್ಣನೆ ಲಲಿತೋಪಾಖ್ಯಾನದಿಂದ ಎತ್ತಿಕೊಂಡದ್ದು ಎಂಬ ಸೂಚನೆಯನ್ನು ಗ್ರಂಥಕಾರರೇ ಮಾಡಿದ್ದಾರೆ. ಲಲಿತೋಪಾಖ್ಯಾನವು ಬ್ರಹ್ಮಾಂಡಪುರಾಣದ ಉತ್ತರಭಾಗಕ್ಕೆ ಸೇರಿದ ಕಥೆ, ಇದರಲ್ಲಿ ನಲವತ್ತು ಅಧ್ಯಾಯಗಳಿವೆ. ಹಯಗ್ರೀವ-ಅಗಸ್ತ್ಯರ ಸಂವಾದರೂಪದಲ್ಲಿದೆ. ಲಲಿತೋಪಾಖ್ಯಾನದಲ್ಲಿ ಮೂವತ್ತಾರನೆಯ ಅಧ್ಯಾಯದಲ್ಲಿ ('ಚಿಂತಾಮಣಿಗೃಹಾಂತರಕಥನಂ') ಮೇಲ್ಕಂಡ ದೇವತೆಯರ ಉಲ್ಲೇಖ ಬರುತ್ತದೆ (ಶ್ಲೋಕಗಳು ೫೦ ರಿಂದ ೯೬ ರವರೆಗೆ). ಆದರೆ ಅಲ್ಲಿರುವ ನಿರೂಪಣೆಯಲ್ಲಿ ಹೆಚ್ಚು ವಿವರಗಳಿವೆ. ನಿದರ್ಶನಕ್ಕೆ, ಶ್ರೀತತ್ತ್ವನಿಧಿಯಲ್ಲಿ ಅಣಿಮಾದ್ಯಷ್ಟಸಿದ್ಧಿಗಳನ್ನು ಹೇಳಿದ್ದಾರೆ. ಲಲಿತೋಪಾಖ್ಯಾನದಲ್ಲಿ, ಇವುಗಳ ಜೊತೆಗೆ ರಸಸಿದ್ಧಿ, ಮೋಕ್ಷಸಿದ್ಧಿ, ಬಲಸಿದ್ಧಿ, ಖಡ್ಗಸಿದ್ಧಿ, ಪಾದುಕಾಸಿದ್ಧಿ, ಅಂಜನಸಿದ್ಧಿ, ವಾಕ್ಸಿದ್ಧಿ, ಲೋಕಸಿದ್ಧಿ, ದೇಹಸಿದ್ಧಿಗಳನ್ನೂ ಹೇಳಿದೆ. ಅಷ್ಟಸಿದ್ಧಿಗಳನ್ನು ಹೇಳುವಾಗಲೂ ಬೇರೆಯ ಕ್ರಮವನ್ನೆ ಅನುಸರಿಸಿದ್ದಾರೆ. ಲಲಿತೋಪಾಖ್ಯನದ ಎಣಿಕೆ ಹೀಗಿದೆ (೩, ೪ ೩೬,, ೫೦ ೫೧)-

'ತತ್ರಾಂತರೇ(s)ಣಿಮಾದ್ಯಸ್ತು ಪೂರ್ವಾದಿಕೃತಮಂದಿರಾಃ।
ಅಣಿಮಾ ಮಹಿಮಾ ಚೈವ ಲಘಿಮಾ ಗರಿಮಾ ತಥಾ।।
ಈಶಿತ್ವಂ ಚ ವಶತ್ವಂ ಚ ಪ್ರಾಕಾಮ್ಯಂ ಮುಕ್ತಿರೇವ ಚ ।
ಇಚ್ಛಾಪ್ರಾಪ್ತಿಃ ಸರ್ವಕಾಮೇತ್ಯೇತಾಃ ಸಿದ್ಧಯ ಉತ್ತಮಾಃ ।।'

ಇವುಗಳ ನಡುವೆ ಅಸಂಖ್ಯ ಸಿದ್ಧಿಗಳಿವೆಯಂತೆ (ಅಲ್ಲಿಯೇ, ೫೪)-

'ಕೋಟಿಶಃ ಸಿದ್ಧಯಸ್ತಸ್ಮಿನ್ನಣಿಮಾದ್ಯಂತರೇ ಮುನೇ।'

ಈ ಸಿದ್ಧಿಗಳ ರೂಪವರ್ಣನೆಯೂ ಬೇರೆಯಾಗಿದೆ (೫೫ – ೫೬)–

'ನವಲಾವಣ್ಯ ಸಂಪೂರ್ಣಾಃ ಸ್ಮಯಮಾನಮುಖಾಂಬುಜಾಃ।
ಜ್ವಲಚ್ಚಿಂತಾಮಣಿಕರಾಃ ಸದಾ ಷೋಡಶವಾರ್ಷಿಕಾಃ।
ಅತ್ಯುದಾರಪ್ರಕೃತಯಃ ಖೇಲಂತಿ ಮದವಿಹ್ವಲಾಃ।।'

ಈ ಸಿದ್ಧಿಯರೆಲ್ಲ ಹದಿನಾರುವರ್ಷದ ತರುಣಿಯರೆಂದೂ, ನಗುಮೊಗದವರೆಂದೂ, ಚಿಂತಾಮಣಿಯನ್ನು ಕೈಯಲ್ಲಿ ಹಿಡಿದು, ಮದೋನ್ಮತ್ತರಾಗಿ ಆಡುತ್ತಿರುವರೆಂದೂ ಇಲ್ಲಿನ ವರ್ಣನೆ. ಶ್ರೀತತ್ತ್ವನಿಧಿಯಲ್ಲಾದರೋ ಈ ಹೆಂಗಳೆಯರು ಕೆಂಪುದಾಸವಾಳದ ಹೂವಿನ ಮೈಬಣ್ಣವುಳ್ಳವರು, ನಾಲ್ಕು ಕೈಗಳಿದ್ದು ಅವುಗಳಲ್ಲಿ ಚಿಂತಾಮಣಿ, ಕಪಾಲ, ತ್ರಿಶೂಲ, ಕಜ್ಜಲಪಾತ್ರೆಗಳನ್ನು ಹಿಡಿದಿರುವರು, ದಯಾಳುಗಳು. ಚಿಂತಾಮಣಿ, ಉದಾರಪ್ರಕೃತಿ ಎರಡು ವಿವರಗಳನ್ನು ಬಿಟ್ಟರೆ "ಲಲಿತೋಪಾಖ್ಯಾನ ರೀತ್ಯಾ " ಎಂದು ಹೇಳಿರುವುದು ಸೋಜಿಗವೆನಿಸುತ್ತದೆ. ಶ್ರೀಚಕ್ರದೇವತೆಗಳ ಹೆಸರುಗಳನ್ನು ಮಾತ್ರ ಈ ಆಕರದಿಂದ ಎತ್ತಿಕೊಂಡರೋ ಏನೋ!

ಮೊದಲಲ್ಲಿ ಬಂದ ಶ್ರೀಪುರವರ್ಣನೆಗೆ ಲಲಿತೋಪಾಖ್ಯಾನವನ್ನೇ ಬಹುಮಟ್ಟಿಗೆ ಬಳಸಿಕೊಂಡಿದ್ದಾರೆ. ಈ ಶ್ರೀಪುರವರ್ಣನೆಯಲ್ಲಿ ಚಿಂತಾಮಣಿಗೃಹದ ವಿವರ ಬಂದಮೇಲೆ ಅದರೊಳಗೆ ಸಿದ್ಧಿಗಳು, ಮಾತೃಕೆಯರು ಮುಂತಾದುವು ಕಾಣಿಸಿಕೊಳ್ಳುತ್ತವೆ. ಶ್ರೀಚಕ್ರದ ಕಲ್ಪನೆಯಲ್ಲಿ ಒಂಬತ್ತು ಚಕ್ರಗಳು; ಅವುಗಳಿಗೆ ಕ್ರಮವಾಗಿ (ಹೊರಗಿನಿಂದ ಆರಂಭಿಸಿ) ಈ ಹೆಸರುಗಳು, ಮತ್ತು ಚಕ್ರಾಧಿದೇವತೆಯರು (ಚಕ್ರೇಶ್ವರಿ);

(೧) ಭೂಪುರ (ಚತುರಸ್ರ) ತ್ರೈಲೋಕ್ಯಮೋಹನ (ತ್ರಿಪುರಾ); ಷೋಡಶದಳ (೨) ಸರ್ವಾಶಾಪರಿಪೂರಕ (ತ್ರಿಪುರೇಶೀ); (೩) ಅಷ್ಟದಳ ಸರ್ವಸಂಕ್ಷೋಭಣ (ತ್ರಿಪುರಸುಂದರೀ); (೪) ಚತುರ್ದಶಾರ ಸರ್ವಸೌಭಾಗ್ಯದಾಯಕ (ತ್ರಿಪುರಾಸಿದ್ಧಾ); (೫) ಬಹಿರ್ದಶಾರ ಸರ್ವಾರ್ಥಸಾಧಕ (ತ್ರಿಪುರಾಶ್ರೀ); (೬) ಆಂತರ್ದಶಾರ ಸರ್ವರಕ್ಷಾಕರ (ತ್ರಿಪುರಮಾಲಿನೀ); (೭) ಅಷ್ಟಾರ ಸರ್ವರೋಗಹರ (ತ್ರಿಪುರಾಸಿದ್ಧಾ); (೮)ತ್ರಿಕೋಣ ಸರ್ವಸಿದ್ಧಿಪ್ರದ (ತ್ರಿಪುರಾಂಬಾ); ಮತ್ತು (೯) ಬಿಂದು ಸರ್ವಾನಂದಮಯ (ತ್ರಿಪುರಸುಂದರೀ).

ತ್ರೈಲೋಕ್ಯಮೋಹನ ಚಕ್ರವೆನಿಸುವ ಭೂಪುರ(ಚತುರಸ್ರ)ದಲ್ಲಿ ಮೂರು ರೇಖೆಗಳು. ನಾಲ್ಕು ದಿಕ್ಕುಗಳಲ್ಲಿಯೂ ಸೋಪಾನದ ಕ್ರಮದಲ್ಲಿದ್ದು ('ಚತುರ್ದಿಕ್ಷು ಚ ಸೋಪಾನಪಂಕ್ತಿಭಿಃ ಸುಮನೋಹರಂ') ಹೊರಗಿನ (ಎಂದರೆ ತೀರ ಕೆಳಗಿನ) ಪಂಕ್ತಿಯಲ್ಲಿ ಅಷ್ಟಸಿದ್ಧಿದೇವತೆಗಳು. ನಡುವಣ ಪಂಕ್ತಿಯಲ್ಲಿ ಅಷ್ಟಮಾತೃಕೆಯರು. ಮುಮ್ಮಡಿಯವರು ಈ ವಿವರವನ್ನು ಲಲಿತೋಪಾಖ್ಯಾನದಿಂದಲೇ ಎತ್ತಿಕೊಂಡಿದ್ದಾರೆ. ಬ್ರಾಹ್ಮೀ, ಮಾಹೇಶ್ವರೀ, ಕೌಮಾರೀ, ವೈಷ್ಣವೀ, ವಾರಾಹೀ, ಮಾಹೇಂದ್ರೀ, ಚಾಮುಂಡಾ ಮತ್ತು ಮಹಾಲಕ್ಷ್ಮೀ ('ತತ್ರೈತಾಃ ಕೃತಮಂದಿರಾಃ'). ಲಲಿತೋಪಾಖ್ಯಾನದ ಈ ಭಾಗದಲ್ಲಿ ಈ ದೇವತೆಯರ ಮೂರ್ತಿಲಕ್ಷಣ ತುಂಬ ಸಂಗ್ರಹವಾಗಿದೆ (ಅಲ್ಲಿಯೇ, ೫೯).

'ನಾನಾವಿಧಾಯುಧಾಢ್ಯಾಶ್ಚ ನಾನಾಶಕ್ತಿಪರಿಚ್ಛದಾಃ ।
ಪೂರ್ವಾದಿದಿಶಮಾರಭ್ಯ ಪ್ರಾದಕ್ಷಿಣ್ಯಕೃತಾಲಯಾಃ ॥ '

ಮುಮ್ಮಡಿಯವರು ಈ ದೇವತೆಯರೆಲ್ಲರೂ ಎರಡು ಕೈಗಳವರೆಂದೂ, ಕೈಗಳಲ್ಲಿ ಕಪಾಲ (ತಲೆಯೋಡೆ) ಮತ್ತು ಉತ್ಪಲ (ನೈದಿಲೆ)ಗಳನ್ನು



ಸರ್ವಸಂಕ್ಷೋಭಿಣೀ

ಹಿಡಿದವರೆಂದೂ, ಅವರ ಮೈಬಣ್ಣವೂ ಬಟ್ಟೆಯ ಬಣ್ಣವೂ ಕೆಂಪೆಂದೂ, ಕಾಣಿಸಿದ್ದಾರೆ. ಈ ವಿವರವನ್ನು ಎಲ್ಲಿಂದ ಪಡೆದುಕೊಂಡರೋ ತಿಳಿಯುವುದಿಲ್ಲ. ಮುಂದೆ ಅವರೇ ಇನ್ನೊಂದು ಅಭಿಪ್ರಾಯವನ್ನೂ ಉಲ್ಲೇಖಿಸಿ ಈ ಮಾತೃಕೆಯರು ಆಯಾ ಪುರುಷದೇವತೆಗಳಂತೆಯೇ ಆಕಾರ, ಆಯುಧ ಮೊದಲಾದುವುದನ್ನು ಉಳ್ಳವರೆಂದು (ಬ್ರಾಹ್ಮೀ ಬ್ರಹ್ಮನಂತೆ, ಮಾಹೇಶ್ವರೀ ಮಹೇಶ್ವರನಂತೆ, ಕೌಮಾರಿಯು ಸುಬ್ರಹ್ಮಣ್ಯನಂತೆ, ಇತ್ಯಾದಿ) ಹೇಳಿದ್ದಾರೆ. ಇದು ಸಾಮಾನ್ಯವಾಗಿ ಮಾತೃಕೆಯರ ರೂಪಕಲ್ಪನೆಯೇ ಆಗಿದ್ದು ಚಿತ್ರಗಳಲ್ಲೂ ಶಿಲ್ಪಗಳಲ್ಲೂ ಕಂಡುಬರುತ್ತದೆ. ಆದರೆ ಈ ಎಂಟು ಮಾತೃಕೆಯರಲ್ಲಿ ಚಾಮುಂಡಾ ಮತ್ತು ಮಹಾಲಕ್ಷ್ಮೀ ಇವರಿಗೆ ಪುರುಷದೇವತೆಗಳಿಲ್ಲ.

'ಕಾಮಕಲ್ಪತರುಸ್ತವ' (ಶ್ಲೋಕ ೧೩) ದಲ್ಲಿ ಮಾತೃಕೆಯರಿಗೆ ಎರಡು ಕೈಗಳೇ ಇವೆ. ಅವರ ಕೈಗಳಲ್ಲಿ ಅಮೃತ ತುಂಬಿದ ಕಪಾಲ ಮತ್ತು ಕೆಂಪುನೈದಿಲೆ(ರಕ್ತೋತ್ಪಲ) ; 'ತಮಾಲದಲಕೋಮಲನೀಲ ದೇಹ', ಆದರೆ ಕೆಂಪುಬಣ್ಣದ ಬಟ್ಟೆಯುಟ್ಟಿದ್ದಾರೆ.

ಮುಂದೆ ಮುದ್ರಾದೇವತೆಯರು, ಭೂಪುರದ ಒಳಪ್ರಾಕಾರದಲ್ಲಿ ಸಂಕ್ಷೋಭಿಣ್ಯಾದಿ ಹತ್ತುಮಂದಿ ಮುದ್ರಾದೇವಿಯರು ಸುಂದರತರುಣಿಯರೆಂದಷ್ಟೆ, ಲಲಿತೋಪಾಖ್ಯಾನದ ವರ್ಣನೆ (೩, ೪, ೪೬, ೬೨-೬೩)-

'ಪೂರ್ವಾದಿ ದಿಶಮಾರಭ್ಯ ಮುದ್ರಾ ಏತಾಃ ಪ್ರತಿಷ್ಠಿತಾಃ।
ಅತ್ಯಂತಸುಂದರಾಕಾರಾ ನವಯೌವನ ವಿಹ್ವಲಾಃ ॥
ಕಾಂತಿಭಿಃ ಕಮನೀಯಾಭಿಃ ಪೂರಯಂತ್ಯೋ ಗೃಹಾಂತರಂ।
ಸೇವಂತೆ ಮುನಿಶಾರ್ದೂಲ ಲಲಿತಾಪರಮೇಶ್ವರೀಂ॥

ಮುಮ್ಮಡಿಯವರು ಕೊಟ್ಟಿರುವ ಮೂರ್ತಿಲಕ್ಷಣದಲ್ಲಿ ಇವರೆಲ್ಲ ದಾಳಿಂಬೆ ಹೂವಿನಂತೆ ಕೆಂಪು ಬಣ್ಣದ ಮೈಯುಳ್ಳವರು, ಹಳದಿ ಬಟ್ಟೆ ಉಟ್ಟವರು; ನಾಲ್ಕು ಕೈಗಳು, ಎರಡು ಕೈಗಳಲ್ಲಿ ಕತ್ತಿ, ಗುರಾಣಿ ಹಿಡಿದಿದ್ದಾರೆ; ಮತ್ತಿನಿಂದ ಕೆಂಪಾದ ಕಣ್ಣುಗಳುಳ್ಳವರು. 'ಕಾಮಕಲ್ಪತರುಸ್ತವ'ದಲ್ಲಿ ಇವರು ಎರಡು ಕೈಗಳಲ್ಲಿ ಪಾಶ, ಅಂಕುಶಗಳನ್ನು ಹಿಡಿದು, ಉಳಿದೆರಡು ಕೈಗಳಲ್ಲಿ ಮುದ್ರೆಗಳನ್ನು ತೋರಿಸುವರು.

ಇವರ ಸ್ಥಾನಗಳು ಪೂರ್ವದಿಕ್ಕಿನಿಂದ ಆರಂಭಮಾಡಿಕೊಂಡು ನಾಲ್ಕು ದಿಕ್ಕುಗಳು, ವಿದಿಕ್ಕುಗಳು, ಮೇಲೆ (ತ್ರಿಖಂಡಾಮುದ್ರೆ) ಕೆಳಗೆ (ಯೋನಿಮುದ್ರೆ) ಹೀಗೆ ಹತ್ತು. ಆದರೆ 'ಗುಪ್ತಾರ್ಣವ ಪದ್ಧತಿ'ಯಲ್ಲಿ ಪಶ್ಚಿಮದಿಕ್ಕಿನಿಂದ ಆರಂಭಿಸುತ್ತಾರೆ

'ಯದಾಶಾಭಿಮುಖೋ ಮಂತ್ರೀ ತ್ರಿಪುರಾಂ ಪರಿಪೂಜಯೇತ್ ।
ದೇವೀ ಪಶ್ಚಾತ್ತತಃ ಪ್ರಾಚೀ ಪ್ರತೀಚೀ ತ್ರಿಪುರಾಗ್ರತಃ॥'

ಸರ್ವಾಶಾಪರಿಪೂರಕವೆಂಬ ಷೋಡಶದಳದಲ್ಲಿ ಗುಪ್ತಯೋಗಿನಿಯರು (ಕಾಮಾಕರ್ಷಣೆ ಮೊದಲಾಗಿ) ಹದಿನಾರು ಮಂದಿ; ಇವರಿಗೆ ನಿತ್ಯೆಯರೆಂದೂ ಹೆಸರು. ಶ್ರೀತತ್ತ್ವನಿಧಿಯಲ್ಲಿ ಇವರ ಮೈಬಣ್ಣ ಹವಳದಂತೆ ಕೆಂಪು, ನಾಲ್ಕು ಕೈಗಳು, ಮೂರು ಕಣ್ಣುಗಳು, ತಲೆಯ ಮೇಲೆ ಅರ್ಧಚಂದ್ರ, ಕೈಗಳಲ್ಲಿ ಬಿಲ್ಲು, ಬಾಣ, ಕತ್ತಿ, ಗುರಾಣಿಗಳು; ಮದೋನ್ಮತ್ತರಾಗಿ ನಗುತ್ತಿದ್ದಾರೆ. ಈ ಚಕ್ರದ ಹದಿನಾರು ದಳಗಳಲ್ಲಿದ್ದುಕೊಂಡು ಇವರು ಕಲಾನಿಧಿಯಾದ ಚಂದ್ರನ ಹದಿನಾರು ಕಲೆಗಳನ್ನು ಪ್ರತಿನಿಧಿಸುತ್ತಾರೆ ('ಷೋಡಶೇಂದು ಕಲಾತ್ಮಿಕಾಃ'), ಲಲಿತೋಪಾಖ್ಯಾನದಲ್ಲಿರುವ ವಿವರ ಇವರು ಚಕ್ರದ ಸ್ಥಳವನ್ನು ತಣ್ಣಗಿನ ಚಂದ್ರನಿಂದ ಹೊರಸೂಸುವ ಅಮೃತದಿಂದ ತಣಿಸುವರು ('ತರ್ಪಯಂತ್ಯೋ ದಿಶಾಂ ಚಕ್ರಂ ಸುಧಾಸ್ಯಂದ್ಯೈಃ ಸುಶೀತಲೈಃ') ಇಲ್ಲಿ ಈ ಕಲಾದೇವಿಯರ ಮೂರ್ತಿಲಕ್ಷಣವನ್ನೇನು ಕೊಟ್ಟಿಲ್ಲ. ಕಾಮಕಲ್ಪತರುಸ್ತವದಲ್ಲಿ ಇವರು ಕೆಂಬಣ್ಣದವರು ('ಶೋಣಾಃ'), ಎರಡೇ ಕೈಗಳುಳ್ಳವರು, ಪಾಶ-ಅಂಕುಶಗಳನ್ನು ಹಿಡಿದವರು('ಸಪಾಶಸೃಣಿಯುಗಾಭಿರಾಮಾಃ')

ಲಲಿತೋಪಾಖ್ಯಾನವು ಅಲ್ಲಿಯೇ ಎಂಟು ಇತರ ಶಕ್ತಿಯರನ್ನೂ ಕಾಣಿಸಿದೆ. ಅಲ್ಲಿನಂತೆ ಶ್ರೀತತ್ತ್ವನಿಧಿಯಲ್ಲಿಯೂ ಇವರನ್ನು 'ಗುಪ್ತತರಯೋಗಿನಿ' ರೆಂದು ಕರೆಯಲಾಗಿದೆ. ಇವರ ವರ್ಣನೆ

'ತತ್ರಾಷ್ಟೌ ಶಕ್ತಯಸ್ತೀವ್ರಾ ಮದಾರುಣ ವಿಲೋಚನಾಃ।
ನವತಾರುಣ್ಯಮತ್ತಾಶ್ಚ ಸೇವಂತೇ ಪರಮೇಶ್ವರೀಂ॥

ಶ್ರೀತತ್ತ್ವನಿಧಿಯ ಪ್ರಕಾರ ಇವರ ಮೈಬಣ್ಣ ಕೆಂಪುದಾಸವಾಳದಂತೆ, ನಾಲ್ಕು ಕೈಗಳುಳ್ಳವರು, ಕಬ್ಬಿನ ಜಲ್ಲೆಯನ್ನೆ ಬಿಲ್ಲಿನಂತೆ ಒಂದು ಕೈಯಲ್ಲಿ, ಹೂಬಾಣಗಳನ್ನು ಇನ್ನೊಂದು ಕೈಯಲ್ಲಿ, ಹೂಗುಚ್ಛ, ನೈದಿಲೆಗಳು ಇನ್ನೆರಡು ಕೈಗಳಲ್ಲಿ.

ಸರ್ವಸೌಭಾಗ್ಯದಾಯಕವೆಂಬ ಚತುರ್ದಶಾರ (ಹದಿನಾಲ್ಕು ಕೋಣಗಳ) ಚಕ್ರದಲ್ಲಿ ಸಂಪ್ರದಾಯಯೋಗಿನಿಯರು ಹದಿನಾಲ್ಕು ಮಂದಿ. (ಸರ್ವಸಂಕ್ಷೋಭಿಣಿ ಮೊದಲಾಗಿ). ಲಲಿತೋಪಾಖ್ಯಾನ ಇವರ ಮೂರ್ತಿನಿರ್ದೇಶನವನ್ನು ಮಾಡಿಲ್ಲ. ಶ್ರೀತತ್ತ್ವನಿಧಿಯಲ್ಲಿ ಇವರ ವರ್ಣನೆಯಿರುವುದಲ್ಲದೆ ಅವರು ಮನ್ಮಥನ ಬೂದಿಯಿಂದ ತೋರಿಕೊಂಡವರೆಂದೂ ಶುಂಭಾಸುರನ ಮೇಲೆ ಸಿಟ್ಟುಗೊಂಡು ಕಾಲಾಗ್ನಿಯಂತೆ ಕಂಗೊಳಿಸುತ್ತಿರುವರೆಂದೂ, ನಾಲ್ಕು ಕೈಗಳುಳ್ಳವರೆಂದೂ ಹೇಳಿದೆ. ಅವರು ಕೈಗಳಲ್ಲಿ ಹಿಡಿದಿರುವ ಬಿಲ್ಲು, ಬಾಣ, ಕತ್ತಿ, ಚಕ್ರ ಎಲ್ಲವೂ ಬೆಂಕಿಯ ಜ್ವಾಲೆಯಂತೆ ಧಗಿಧಗಿಸುತ್ತವೆ ಲಲಿತಾದೇವಿಯ ಆಜ್ಞಾಶಕ್ತಿಯರಂತೆ ಇವರು. ಕಾಮಕಲ್ಪತರುಸ್ತವದಲ್ಲಿ ಅವರು ಬಿಲ್ಲುಬಾಣಗಳನ್ನಷ್ಟೆ ಹಿಡಿದು ಕೆಂಪು ಮೈಬಣ್ಣದವರು ('ಶೋಣಾಃ').

ಮುಂದೆ ಸರ್ವಾರ್ಥಸಾಧಕವೆಂಬ ಬಹಿರ್ದಶಾರಚಕ್ರದಲ್ಲಿ (ಹತ್ತುಕೋಣಗಳ ಹೊರಗಿನ ಚಕ್ರ, ವಿಷ್ಣುವಿನ ದಶಾವತಾರಗಳನ್ನು ಪ್ರತಿನಿಧಿಸುವುದು) ಕುಲೋತ್ತೀರ್ಣಯೋಗಿನಿಯರು ಹತ್ತುಮಂದಿ (ಸರ್ವಸಿದ್ಧಿಪ್ರದಾ ಮೊದಲಾಗಿ) ಲಲಿತೋಪಾಖ್ಯಾನದಲ್ಲಿ ಇವರ ವರ್ಣನೆಯಿರದು. ಶ್ರೀತತ್ತ್ವನಿಧಿಯಲ್ಲಿರುವ ವಿವರಣೆಯಂತೆ, ಇವರು ಸ್ಫಟಿಕದಂತೆ ಹೊಳೆಯುವವರು (ಬಿಳಿ ಮೈಬಣ್ಣ), ಅಸುರರಲ್ಲಿ ಸಿಟ್ಟುಗೊಂಡು ಹುಬ್ಬುಗಂಟಿಕ್ಕಿಕೊಂಡಿರುವವರು. ಅವರಿಗೆಲ್ಲರಿಗೆ ನಾಲ್ಕು ಕೈಗಳು; ಕೊಡಲಿ, ಪಾಶ, ಗದೆ, ಘಂಟೆಗಳನ್ನು ಹಿಡಿದಿದ್ದಾರೆ. ಕಾಮಕಲ್ಪತರುಸ್ತವ ಇವರನ್ನು ಎರಡೇ ಕೈಗಳುಳ್ಳವರಂತೆ ಕಾಣಿಸಿದೆ; ಒಂದು ಕೈಯಲ್ಲಿ ಅಭಯಮುದ್ರೆ, ಇನ್ನೊಂದರಲ್ಲಿ ವರದ ಮುದ್ರೆ('ಶುಭ್ರಾ ವರಾಭಯಕರಾಃ).

ಇದಾದಮೇಲೆ ಸರ್ವರಕ್ಷಾಕರವೆಂಬ ಅಂತರ್ದಶಾರಚಕ್ರದಲ್ಲಿ (ಹತ್ತು ಕೋಣಗಳ ಒಳಗಣ ಚಕ್ರ) ನಿಗರ್ಭಯೋಗಿನಿಯರು ಹತ್ತುಮಂದಿ (ಸರ್ವಜ್ಞಾ ಮೊದಲಾಗಿ). ಲಲಿತೋಪಾಖ್ಯಾನವು ಇವರನ್ನು 'ನಿರ್ಗರ್ವಯೋಗಿನಿ'ಯರೆಂದು ಕರೆಯುತ್ತದೆ ('ನಿರ್ಗರ್ವಾ

ಯೋಗಿನೀಶ್ವರಾಃ', ೯೫) ಅವರ ವರ್ಣನೆಯನ್ನೇನೂ ಮಾಡಿಲ್ಲ. ಶ್ರೀತತ್ತ್ವನಿಧಿಯಲ್ಲಿ ಇವರೆಲ್ಲ ನಾಲ್ಕುಕೈಗಳವರು, ಬಿಳಿ ಮೈಬಣ್ಣದವರು; ಭಂಡಾಸುರನನ್ನು ಹತ್ತಿಕ್ಕಲು ಹೊರಟವರು. ಇವರು ತಮ್ಮ ಕೈಗಳಲ್ಲಿ ವಜ್ರಾಯುಧ, ಶಕ್ತ್ಯಾಯುಧ, ತೋಮರ ಮತ್ತು ಚಕ್ರಗಳನ್ನು ಹಿಡಿದಿದ್ದಾರೆ. ಕಾಮಕಲ್ಪತರುಸ್ತವವು ಇವರನ್ನು ಕರ್ಪೂರದಂತೆ ಇರುವವರು, ತಮ್ಮೆರಡು ಕೈಗಳಲ್ಲಿ ಜಪಮಾಲೆ- ಪುಸ್ತಕಗಳನ್ನು ಹಿಡಿದವರು ಎಂದು ಬಣ್ಣಿಸಿದೆ. ಅಂತರ್ದಶಾರವೆನ್ನುವುದು ಅಗ್ನಿಪ್ರತೀಕ.

ಮುಂದಿನ ಸರ್ವರೋಗಹರಚಕ್ರವು ಶಿವನ ಅಷ್ಟಮೂರ್ತಿಗಳನ್ನು ಪ್ರತಿನಿಧಿಸುವ ಅಷ್ಟಾರಚಕ್ರ (ಎಂಟು ಕೋಣಗಳುಳ್ಳದ್ದು). ಇಲ್ಲಿರುವವರು ರಹಸ್ಯಯೋಗಿನಿಯರು, ವಶಿನೀ ಮೊದಲಾದವರು. ಲಲಿತೋಪಾಖ್ಯಾನದಂತೆ ಇವರು ವಾಗ್ದೇವತೆಯರು, ವಾಕ್‌ಪ್ರಧಾನ ದೇವತೆಯರು. ತಮ್ಮ ಗದ್ಯ, ಪದ್ಯ, ಕಾವ್ಯ, ನಾಟಕ, ವಿನೋದಗಳಿಂದ ದೇವಿಯನ್ನು ಸಂತೋಷಪಡಿಸುತ್ತಿರುವವರು. ಸ್ವರಗಳ ಸಮೂಹದಿಂದ ಮತ್ತು ವ್ಯಂಜನವರ್ಗಗಳಿಂದ ಕೂಡಿದವರು; ಸ್ವರಸಮೂಹದೊಂದಿಗೆ ವಶಿನೀ, ಕವರ್ಗದೊಂದಿಗೆ ಕಾಮೇಶೀ, ಚವರ್ಗದೊಂದಿಗೆ ಮೋದಿನೀ, ಟವರ್ಗದೊಂದಿಗೆ ವಿಮಲಾ, ತವರ್ಗದೊಂದಿಗೆ ಅರುಣಾ, ಪವರ್ಗದೊಂದಿಗೆ ಜಯಿನೀ, ಯರಲವಗಳೊಂದಿಗೆ ಸರ್ವೇಶೀ, ಶಷಸಹಗಳೊಂದಿಗೆ ಕೌಲಿನೀ. ಶ್ರೀತತ್ತ್ವನಿಧಿಯಲ್ಲಿ ಈ ವಿವರಣೆ ಕಾಣುವುದಿಲ್ಲ.

ಇವರ ಮೈಬಣ್ಣ ರಕ್ತಾಶೋಕಮರದ ಚಿಗುರಿನಂತೆ ಕೆಂಪು; ಎರಡು ಕೈಗಳಲ್ಲಿ ಬಿಲ್ಲುಬಾಣಗಳನ್ನು ಹಿಡಿದಿದ್ದಾರೆ. ಮುಂದೆ ವೀಣಾಪುಸ್ತಗಳನ್ನೂ ಹಿಡಿದವರು ಎಂಬ ಒಕ್ಕಣೆಯಿದೆಯಾಗಿ ನಾಲ್ಕು ಕೈಗಳುಳ್ಳವರು. ಮೈಯನ್ನೆಲ್ಲ ಕವಚ ಮುಚ್ಚಿದೆ. ಕಾಮಕಲ್ಪತರುಸ್ತವದಲ್ಲಿ ಎಳೆಹವಳದಂತೆ ಹೊಳೆಯುವವರೆಂದೂ, ನಾಲ್ಕು ಕೈಗಳಲ್ಲಿ ಬಿಲ್ಲು, ಬಾಣ, ಪುಸ್ತಕ, ಜಪಮಾಲೆಗಳನ್ನು ಹಿಡಿದವರೆಂದೂ ವರ್ಣನೆಯಿದೆ.

ಎಂಟನೆಯ ಆವರಣದಲ್ಲಿ ಸರ್ವಸಿದ್ಧಿಪ್ರದಚಕ್ರವಾದ ಮಹಾತ್ರಿಕೋಣದ ಹೊರಗೆ ಅಸ್ತ್ರದೇವತೆಯರಿದ್ದಾರೆ (ಆಯುಧಗಳು). ಇವರು ಅತಿರಹಸ್ಯಯೋಗಿನಿಯರು. ಲಲಿತೋಪಾಖ್ಯಾನದಲ್ಲಿ (೩, ೪, ೩೭, ೧೧-೧೫) ಹೀಗೆ ಒಕ್ಕಣೆಯಿದೆ –

> 'ಅಸ್ತ್ರಂ ಚಕ್ರಮಿತಿ ಜ್ಞೇಯಂ ತತ್ರ ಬಾಣಾದಿದೇವತಾಃ।
> ಪಂಚಬಾಣೇಶ್ವರೀ ದೇವ್ಯಃ ಪಂಚಕಾಮೇಶ್ವರಾಶುಗಾಃ॥
> ಅಂಕುಶದ್ವಿತಯಂ ದೀಪ್ತಮಾದಿಸ್ತ್ರೀಪುಂಸಯೋರ್ದ್ವಯೋಃ।
> ಧನುರ್ದ್ವಯಂ ಚ ವಿಂಧ್ಯಾರೇ ನವ ಪುಂಡ್ರೇಷು ಕಲ್ಪಿತಂ॥
> ಪಾಶದ್ವಯಂ ಚ ದೀಪ್ತಾಭಂ ಚತ್ವಾರ್ಯಸ್ತ್ರಾಣಿ ಕುಂಭಜ।
> ಕಾಮೇಶ್ವರ್ಯಾಸ್ತು ಚತ್ವಾರಿ ಶ್ರೀ ಮಹೇಶಿತುಃ॥
> ಆಹತ್ಯಾಷ್ಟಾಯುಧಾನೀತಿ ಪ್ರಜ್ವಲಂತಿ ವಿಭಾಂತಿ ಚ ।
> ಭಂಡಾಸುರಮಹಾಯುದ್ಧೇ ದುಷ್ಟದಾನವ ಶೋಣಿತೈಃ।
> ಪೀತೈರತೀವ ತೃಪ್ತಾನಿ ದಿವ್ಯಾಸ್ತ್ರಾಣ್ಯತಿ ಜಾಗೃತಿ॥'

ಭಂಡಾಸುರನೊಂದಿಗೆ ನಡೆಸಿದ ಯುದ್ಧದಲ್ಲಿ ದೇವಿಯು ಬಳಸಿದ ಆಯುಧಗಳು ಬಿಲ್ಲು, ಬಾಣ, ಪಾಶ, ಅಂಕುಶಗಳು ಇಲ್ಲಿ ನೆಲೆಗೊಂಡು ಪೂಜೆಗೊಳ್ಳುತ್ತವೆ. ಬಿಲ್ಲು (ಕಬ್ಬಿನ ಜಲ್ಲೆ) ಕಾಮೇಶ್ವರಿಯದೊಂದು, ಕಾಮೇಶ್ವರನದ್ದೊಂದು; ಪಾಶವೂ ಅಂಕುಶವೂ ಹೀಗೆಯೆ ಎರಡೆರಡು; ಪಂಚಬಾಣಗಳು (ಮನ್ಮಥನ ಹೂಬಾಣಗಳು) ಎರಡು ಜೊತೆ, ಹೀಗೆ ದೇವಿಯ ಆಯುಧಗಳು ನಾಲ್ಕು, ದೇವನ ಆಯುಧಗಳು ನಾಲ್ಕು; ಒಟ್ಟು ಎಂಟು. ಶ್ರೀವಿದ್ಯಾರ್ಣವತಂತ್ರದಲ್ಲಿ (೨೪ನೆಯ ಶ್ವಾಸ) ಮಹಾತ್ರಿಕೋಣದ ಹೊರಗೆ ಎದುರಾದ, ಪಶ್ಚಿಮದಿಂದ ಎಡಗಡೆ ತಿರುಗಿರುವಂತೆ (ವಾಮಾವರ್ತ) ಕಾಮೇಶ್ವರ-ಕಾಮೇಶ್ವರಿಯರ ಬಾಣಗಳು, ಸರ್ವಸಮ್ಮೋಹನವೆಂಬ ಅವರ ಬಿಲ್ಲುಗಳು, ವಶೀಕರಣವೆಂಬ ಅವರ ಪಾಶಗಳು, ಸರ್ವಸ್ತಂಭನವೆಂಬ ಅವರ ಅಂಕುಶಗಳು ಕ್ರಮವಾಗಿ ಹೇಳಲ್ಪಟ್ಟಿವೆ.

ಇವಲ್ಲದೆ ಈ ಎಡೆಯಲ್ಲಿ ವಜ್ರಶಕ್ತಿ, ಶತಘ್ನೀ, ಭುಶುಂಡೀ, ಮುಸಲ, ಕೃಪಾಣ, ಪಟ್ಟಿಶ, ಮುದ್ಗರ, ಭಿಂದಿಪಾಲ ಮೊದಲಾದ ಸಾವಿರಾರು ಪರಿವಾರಾಯುಧಗಳೂ ಇವೆಯೆಂದು ಲಲಿತೋಪಾಖ್ಯಾನ ಹೇಳುತ್ತದೆ (ಅಲ್ಲಿಯೆ, ೧೬-೧೮)

ಶ್ರೀತತ್ತ್ವನಿಧಿಯ ಪ್ರಕಾರ ಈ ಅತಿರಹಸ್ಯಯೋಗಿನಿಯರು ಎಂಟುಕೈಗಳನ್ನು ಹೊಂದಿದ್ದು ಅವುಗಳಲ್ಲಿ ಬಿಲ್ಲು, ಬಾಣ, ಪಾನಪಾತ್ರೆ, ಮಾತುಳುಂಗ ಫಲ, ಕತ್ತಿ, ಹಲಗೆ, ನಾಗಪಾಶ ಮತ್ತು ಘಂಟೆಗಳನ್ನು ಹಿಡಿದಿರುತ್ತಾರೆ; ಅವರ ಎರಡು ಕೈಗಳಲ್ಲಿ ವರದ, ಅಭಯ ಮುದ್ರೆಗಳು; ಒಬ್ಬೊಬ್ಬರ ತಲೆಯ ಮೇಲೂ ಒಂದೊಂದು ಆಯುಧ (ಪಾಶ, ಅಂಕುಶ, ಬಿಲ್ಲು, ಬಾಣ)

ಮಹಾತ್ರಿಕೋಣದ ಮೂರು ಕೋಣಗಳಲ್ಲಿ ಕಾಮೇಶೀ, ವಜ್ರೇಶೀ ಮತ್ತು ಭಗಮಾಲಾ ಎಂಬ ಮೂವರು ದೇವತೆಯರು. ಶ್ರೀ ವಿದ್ಯಾರ್ಣವತಂತ್ರದ ಒಕ್ಕಣೆಯಂತೆ ತ್ರಿಕೋಣದ ಎದುರಿನ ಕೋಣ ಅಗ್ನಿಚಕ್ರ, ಕಾಮಗಿರ್ಯಾಲಯ. ಅಲ್ಲಿ ರುದ್ರಾತ್ಮಶಕ್ತಿ ಕಾಮೇಶ್ವರೀ; ಪಂಚದಶೀಮಂತ್ರದ ವಾಗ್ಭವಕೂಟದ ದೇವತೆ. ಉತ್ತರ (ಬಲ) ಭಾಗದ ಕೋಣ ಸೂರ್ಯಚಕ್ರ, ಪೂರ್ಣಗಿರಿಪೀಠ, ಅಲ್ಲಿ ವಿಷ್ಣ್ವಾತ್ಮಶಕ್ತಿಯಾದ ವಜ್ರೇಶ್ವರೀ; ಮಂತ್ರದ ಕಾಮರಾಜಕೂಟದ ದೇವತೆ. ದಕ್ಷಿಣ ಎಡ ಭಾಗದ ಕೋಣ ಸೋಮಚಕ್ರ, ಜಾಲಂಧರಪೀಠ, ಅಲ್ಲಿ ಬ್ರಹ್ಮಾತ್ಮಕಶಕ್ತಿಯಾದ ಭಗಮಾಲಿನಿ; ಮಂತ್ರದ ಶಕ್ತಿಕೂಟದ ದೇವತೆ. ಇದು ಸರ್ವಸಿದ್ಧಪ್ರದಾದ್ಯಚಕ್ರ.

ಲಲಿತೋಪಾಖ್ಯಾನವು ಇಲ್ಲಿ ಈ ಮೂವರು ದೇವಿಯರಲ್ಲದೆ ನಾಲ್ಕನೆಯದಾದ ದೇವತೆಯನ್ನೂ ಹೇಳುತ್ತದೆ ('...ಅನ್ಯಾ ತು ಚತುರ್ಥಿಕಾ'). ಎಲ್ಲ ಪ್ರಪಂಚದಳ ಬೀಜಶಕ್ತಿಯಾದ ಲಲಿತಾಂಬೆಯೇ ಇದು (ಅಲ್ಲಿಯೇ, ೨೦).

'ಸೈವ ನಿಃಶೇಷವಿಶ್ವಾನಾಂ ಸವಿತ್ರೀ ಲಲಿತೇಶ್ವರೀ ।'

ಮೂವರು ದೇವಿಯರೂ ಲಲಿತೆಗೆ ಸಮವಾದ ಹಿರಿಮೆಯುಳ್ಳವರೆಂದೂ, ಲಲಿತೆಯಂತೆಯೇ ತೇಜಸ್ವಿಗಳೆಂದೂ, ಲಲಿತೆಯ ಅಂತರಂಗಮೂರ್ತಿಗಳೆಂದೂ ಶ್ರೀತತ್ತ್ವನಿಧಿ ಹೇಳುತ್ತದೆ.

(೪) ಷೋಡಶನಿತ್ಯೆಯರು

ಶ್ರೀ ಚಕ್ರದೇವತೆಯರನ್ನು ಹೇಳಿದಮೇಲೆ ಮುಮ್ಮಡಿಯವರು ಶ್ರೀವಿದ್ಯಾಉಪಾಸನೆಯಲ್ಲಿ ಪ್ರಮುಖವಾಗಿ ಕಾಣಿಸಿಕೊಳ್ಳುವ ಹದಿನಾರು ನಿತ್ಯಾದೇವಿಯರನ್ನು ಕುರಿತು ಪ್ರಸ್ತಾಪಮಾಡುತ್ತಾರೆ. ಈ ದೇವಿಯರಿಗೆ 'ನಿತ್ಯಾಷೋಡಶಿಕಾ', 'ತಿಥಿನಿತ್ಯೆಯರು' ಎಂದೂ ಹೆಸರುಗಳಿವೆ.

ಶ್ರೀವಿದ್ಯೆಯನ್ನು ಚಂದ್ರಜ್ಞಾನವೆಂದು ಕರೆದು ಚಂದ್ರನ ಹದಿನಾರು ಕಳೆಗಳನ್ನು, ಎಂದರೆ ಚಾಂದ್ರಮಾನದ ತಿಥಿಗಳನ್ನು ಲಲಿತಾದೇವಿಯ ಅಂಗಗಳಾಗಿ ಭಾವಿಸಿದ್ದಾರೆ. ದಿಟವಾಗಿ ಈ ಕಳೆಗಳ ಸಂಖ್ಯೆ ಹದಿನೈದೇ; ಪಂಚದಶಿಯೆಂದೇ ಪ್ರಸಿದ್ಧಿಯಷ್ಟೆ. ಆದರೆ ಪೂರ್ಣಚಂದ್ರನನ್ನೂ ಸೇರಿಸಿ ಹದಿನಾರು ಎನ್ನುವ ಪರಿಪಾಟಿ. ಲಲಿತೋಪಾಖ್ಯಾನದಲ್ಲಿ ಹದಿನೈದೇ ನಿತ್ಯೆಯರ ಉಲ್ಲೇಖವಿದೆ (೩, ೪, ೩೭, ೩೨)

'ನಿತ್ಯಾಂತರಮಿತಿ ಪ್ರೋಕ್ತಂ ನಿತ್ಯಾಃ ಪಂಚದಶಾತ್ರ ವೈ।'

ಹದಿನಾರನೆಯ ನಿತ್ಯೆ ಲಲಿತಾಂಬಿಕೆಯೇ. ಹೇಗೆ ಮಹಾತ್ರಿಕೋಣದ ಮೂರು ಕೋಣಗಳಲ್ಲಿ ಕಾಮೇಶಿ, ವಜ್ರೇಶಿ, ಭಗಮಾಲಿನಿ ಎಂಬ ಮೂರೇ ದೇವೀರೂಪಗಳಾದರೂ ನಾಲ್ಕನೆಯದು ಲಲಿತಾರೂಪವೋ ('ಕಾಮೇಶಾದ್ಯಾಸ್ತತ್ರ ದೇವ್ಯಸ್ತಿಸ್ರಃ ಅನ್ಯಾ ತು ಚತುರ್ಥಿಕಾ'), ಹಾಗೆಯೇ ನಿತ್ಯೆಯರಲ್ಲಿ ಹದಿನಾರನೆಯದು ಲಲಿತೆಯೇ (ಅಲ್ಲಿಯೇ, ೨೪)

'ಯಾ ಕಾಮೇಶ್ವರದೇವಾಂಕಶಾಯಿನೀ ಲಲಿತಾಂಬಿಕಾ।
ಕಾಮೇಶ್ಯಾದಿ ಚತುರ್ಥೀ ಸಾ ನಿತ್ಯಾ ಷೋಡಶೀ ಮತಾ।।'

ಮುಮ್ಮಡಿಯವರೇನೋ ಲಲಿತೋಪಾಖ್ಯಾನವನ್ನನುಸರಿಸುವೆನೆಂದು ಹೇಳಿಕೊಂಡಿದ್ದರೂ ನಿತ್ಯೆಯರು ಹದಿನಾರೆಂದೇ ಎಣಿಸಿದ್ದಾರೆ. ಈ ನಿತ್ಯೆಯರು ದೇವೀಸ್ವರೂಪದವರೆಂದೂ ಮಹಾಬಲಪರಾಕ್ರಮಳ್ಳವರೆಂದೂ, ಮೂರೂ ಜಗತ್ತುಗಳನ್ನು ವ್ಯಾಪಿಸಿಕೊಂಡು ಕಾಲತ್ರಯರೂಪದವರೆಂದೂ, ಕಾಲಗ್ರಾಸವಿಚಕ್ಷಣರೆಂದೂ, ಶ್ರೀದೇವಿಯ ಆಜ್ಞೆಯಿಂದ ನಿತ್ಯೋದ್ಯತರಾಗಿ ಚಿತ್‌ಸ್ವರೂಪಿಣಿಯಾದ ಲಲಿತೆಯನ್ನು ಎಂದೂ ಸೇವಿಸುತ್ತಿರುವವರೆಂದೂ ಲಲಿತೋಪಾಖ್ಯಾನದ ಒಕ್ಕಣೆ (ಅಲ್ಲಿಯೇ ೩೬-೩೮). ಅವರ ಆಕಾರ ಲಲಿತೆಯಂತೆಯೇ, ಅವರ ಆಯುಧಗಳೂ ಲಲಿತೆಯವೇ; ಜಗತ್ತಿನ ಹಿತಕ್ಕಾಗಿ ಅವರ ಇರವೆಂದು ಶ್ರೀತತ್ತ್ವನಿಧಿ ಹೇಳುತ್ತದೆ. ಲಲಿತೋಪಾಖ್ಯಾನ ನಿತ್ಯೆಯರನ್ನು ಹೇಳುವಮೊದಲು ಶಸ್ತ್ರಾಂತರಾಳದ (ಎಂದರೆ ಆಯುಧದೇವತೆಗಳಿರುವ ಅಷ್ಟಾರಕ್ಕೂ ತ್ರಿಕೋಣಕ್ಕೂ ನಡುವೆ ಆಯುಧ ದೇವತೆಗಳಿರುವ ಸ್ಥಳದ) ಮೇಲೆ 'ನಾಥಾಂತರಾಳ' ವೊಂದಿರುವುದನ್ನು ಹೇಳುತ್ತದೆ; ಇದನ್ನು ಗುರುಮಂಡಲವೆಂದೂ ಕರೆಯುತ್ತಾರೆ. ಇಲ್ಲಿರುವ ಯೋಗನಾಥರು ಯೋಗಶಾಸ್ತ್ರಪ್ರವರ್ತಕರು, ದಿವ್ಯೌಘ-ಸಿದ್ಧೌಘ-ಮಾನವೌಘಗಳಿಗೆ ಸೇರಿದ ಗುರುಗಳು, ಸಾಲೋಕ್ಯ ಸಾರೂಪ್ಯ ಸಾಯುಜ್ಯ ಮೊದಲಾದ ಸಿದ್ಧಿಗಳನ್ನು ಪಡೆದುಕೊಂಡವರು. ಈ ನಾಥಾಂತರಾಳದ ಮೇಲೆ ನಿತ್ಯೆಯರ ನಿವಾಸ. ಮುಮ್ಮಡಿಯವರ ನಿರೂಪಣೆಯಲ್ಲಿ ನಾಥಾಂತರಾಳದ ಪ್ರಸ್ತಾಪವಿಲ್ಲ.

'ಅಥ ನಿತ್ಯಕ್ಲಿನ್ನಾ (-ದಿ-) ದೇವತಾಸ್ವರೂಪಾಣಿ (I) ಲಲಿತೋಪಾಖ್ಯಾನ ರೀತ್ಯಾ।।
ಚಕ್ರೇಶ್ವರ್ಯಾ ತ್ರಿಪುರಸುಂದರ್ಯಾ ಸಾಕಂ ಷೋಡಶೀ(ಶಾ)ನಾಮಪಿ।
ದೇವೀಸಮನಿಜಾಕಾರಾ ದೇವೀಸಮನಿಜಾಯುಧಾಃ
ಜಗತಾಮುಪಕಾರಾಯ ವರ್ತಮಾನಾ ಯುಗೇ ಯುಗೇ । (II)ಇತಿ।
ಅಸಾಮೇವ ಶರಭತಂತ್ರೋಕ್ತರೀತ್ಯಾ ಧ್ಯಾನಂ ಲಿಖ್ಯತೇ ।
ಭೇರುಂಡಾಯಾಸ್ತು ಶರಭತಂತ್ರೇ ಅನುಕ್ತತ್ವಾತ್ ।।
ಜ್ಞಾನಾರ್ಣವೇ ಚಂದ್ರಜ್ಞಾನ ವಿದ್ಯಾಯಾಮುಕ್ತ ರೀತ್ಯಾ ಲಿಖಿತಂ।
ಅಥ ಕಾಮೇಶೀಧ್ಯಾನಂ।।

ಪಾಶೇಕ್ಷುಚಾಪೌ ಮಧುಪೂರ್ಣಪಾತ್ರಂ ಮಹಾಂಕುಶಂ ಪುಷ್ಪಶರಂ ವರಂ ಚ। ಕರೈರ್ದಧಾನಾಮರುಣಾಂ ತ್ರಿನೇತ್ರಾಂ ಕಾಮೇಶ್ವರೀಂ ನಿತ್ಯಮಹಂ ಭಜಾಮಿ।। ರಕ್ತವರ್ಣಃ।। ।। (II೧II)

ಅಥ ಭಗಮಾಲಾಧ್ಯಾನಂ।।

ಕಲ್ಹಾರ ಪಂಕಜ ಸಪಾಶ ಸೃಣೇಕ್ಷುಚಾಪಂ ಪುಷ್ಪಾಯುಧಂ ಚ ದಧತೀಂ ನಿಜಬಾಹುಷಟ್ಕೈಃ। ಬಂಧೂಕಪುಷ್ಪರುಚಿರಾಮತಿಸುಂದರಾಂಗೀಮಂಬಾಂ ಭಜಾಮಿ ಹೃದಯೇ ಭಗಮಾಲಿನೀಂ ತಾಂ।। ರಕ್ತವರ್ಣಃ।।

ಅಥ ನಿತ್ಯಕ್ಲಿನ್ನಾಧ್ಯಾನಂ।

ಉದ್ಯತ್ಸೂರ್ಯಾರುಣಕಿರಣನಿಭಾಂ ತ್ರೀಕ್ಷಣಾಮಿಂದುಖಂಡಾಪೀಡಾಂ ಕಾಂಚೀವರಮಣಿವಿಲಸದ್ಭೂಷಣಾಲಂಕೃತಾಂಗೀಂ। ದೋರ್ಭಿಃ ಪಾಶಂ ಸೃಣಿವರಮಭಯಂ ಪಾನಪಾತ್ರಂ ದಧಾನಾಂ ನಿತ್ಯಕ್ಲಿನ್ನಾ ಮಹಮನುದಿವಸಂ ಮಾನಸೇ ಭಾವಯಾಮಿ । (II) ರಕ್ತವರ್ಣಃ ।। (II೩II)

ಅಥ ಭೇರುಂಡಾಧ್ಯಾನಂ।।

ಜ್ಞಾನಾರ್ಣವೇ ಚಂದ್ರಜ್ಞಾನವಿದ್ಯಾಯಾಂ। ಮುಕ್ತಾ ಕುಂದೇಂದುಗೌರಾಂ ಮಣಿಮಯಮಕುಟಾಂ ರತ್ನತಾಟಂಕಯುಕ್ತಾ ಮಕ್ಷಸ್ರಕ್ಪುಷ್ಪಹಸ್ತಾಮ ಭಯವರಕರಾಂ ಗುಂಜಾಮಾಲಾವಿರಾಜಕ್ಕುಚಭರ ನಮನೋನ್ಮಧ್ಯ ಮಾಮಬ್ಜಸರಸ್ಥಾಂ। ನಾನಾಲಂಕಾರಯುಕ್ತಾಂ ಸುರಮಕುಟಮಣಿದ್ಯೋತಿ ತಸ್ವರ್ಣಪೀಠಾಂ ಭೇರುಂಡಾಂ ಮುಕ್ತಕೇಶೀಂ ತ್ರಿಭುವನಜನನೀಂ ಚೇತಸಾ ಚಿಂತಯಾಮಿ । ಇತಿ । ಶ್ವೇತವರ್ಣಃ।। ।। (II೪II)

ಅಥ ವನ್ಹಿ(ಹ್ನಿ) ವಾಸಿನೀಧ್ಯಾನಂ

ಪದ್ಮಂ ಶಂಖೇಕ್ಷುಚಾಪಂ ಹಿಮಕಿರಣಮಥೋ ಕಲ್ಹಾರಂ ಹೇಮಶೃಂಗಂ ಕುಸುಮಮಯಶರಂ ಆಮಾತುಳಂಗಂ ಚ ದಕ್ಷೈಃ। ತಪ್ತೋದ್ಯತ್ಕಾಂಚನಾಭಾಂ ಮಣಿಮಯಮಕುಟಾಮಷ್ಟಹಸ್ತಾಂ ತ್ರಿಣೇತ್ರಾಂ ನಿತ್ಯಾಂ ಚಿತ್ತಾರವಿಂದೇ ಪ್ರತಿದಿವಸಮಹಂ ವನ್ಹಿ(ಹ್ನಿ)ವಾಸೀಂ ಭಜಾಮಿ।। ಕನಕವರ್ಣಃ।। ।। (II೫II)

ಅಥ ಮಹಾವಜ್ರೇಶ್ವರೀ ಧ್ಯಾನಂ।।

ರಕ್ತಾಂಭೋಧಿಸ್ಥಪೋತೇ ನವಮಣಿವಿಲಸ ತ್ಪದ್ಮಪೀಠೇ ನಿಷಣ್ಣಾಂ ಪಾಶಂ ಕೋದಂಡ ಮಿಕ್ಷೂದ್ಭವಮಪಿ ಚ ಸೃಣಿಂ ದಾಡಿಮೀಜಂ ಫಲಂ ಚ। ಬಿಭ್ರಾಣಾಂ ರಕ್ತವರ್ಣಾಂ ತ್ರಿಭಿರಪಿ ನಯನೈಸ್ಸಾದರಂ ವೀಕ್ಷಯಂತೀಂ ವಜ್ರೇಶೀಂ ಭಾವಯೇಹಂ ಸುರಗಣಮುಭಿ(ಃ)ಸ್ತೂಯಮಾನಾಂ ಭವಾನೀಂ।। ರಕ್ತವರ್ಣಂ।। ।। (II೬II)

ಅಥ ಶಿವದೂತೀಧ್ಯಾನಂ।।

ವಾಮಾಧೋ ರತ್ನಪಾತ್ರಂ ತದುಪರಿ ಚ ಗದಾಂ ಖೇಟಪಾಶೇ ದಧಾನಾಂ ದಕ್ಷೈಃ ಪದ್ಮಂ ಕುಠಾರಂ ತದುಪರಿ ಚ

ಮಹಾಖಡ್ಗಮಪ್ಯಂಕುಶಂ ಚ । ಮಧ್ಯಾನ್ಹಾ(ಹ್ನಾ)ರ್ಕಪ್ರಭಾಭಾಂ ನವಮಣಿವಿಲಸದ್ಭೂ ಷಣಾಮಷ್ಟಹಸ್ತಾಂ ದೂತೀಂ ನಿತ್ಯಾಂ ತ್ರಿಣೇತ್ರಾಂ ಸುರಗಣ ಮುನಿಭಿಸ್ತೂಯಮಾನಾಂ ಭಜೇಹಂ ॥ ಪಾಟಲವರ್ಣಃ ॥೭॥

ಅಥ ತ್ವರಿತಾ ಧ್ಯಾನಂ॥

ನಾಗೈಃ ಕಲ್ಪಿತಭೂಷಣಾಂ ತ್ರಿಣನಯನಾಂ ಗುಂಜಾಗುಣಾಲಂಕೃತಾಂ ಶ್ಯಾಮಾಂ ಪಾಶವರಾಂಕುಶಾಭಯವರಾಂ ದೋರ್ಭಿರ್ಯುತಾಂ ಯವ್ವ (ಯೌವ) ನಾಂ। ಪೀತಾಂ ಪಲ್ಲವವಾಸಿನೀಂ ಶಿಖಿಶಿಖಾಚೂಡಾ ವತಂಸೋಜ್ವಲಾಂ ಧ್ಯಾಯಾಮ್ಯನ್ವಹಮೃಕ್ಷಸಿಂಹನಿವಹೈಃ ಪೀಠಸ್ಥಿತಾಂ ತ್ವಾತಳಾಂ॥ ಪೀತವರ್ಣಃ ॥೮॥

ಅಥ ಕುಲಸುಂದರೀ ಧ್ಯಾನಂ॥

ಬಾಲಾದಿತ್ಯನಿಭಾರುಣಾಂ ತ್ರಿಣನಯನಾಂ ಬಾಲೇಂದುಚೂಡಾನ್ವಿತಾಂ (।) ಹಾಲಾಗಂಧಸುಕೋಮಲಾಧರಯುತಾಂ ಲೀಲಾವತೀಂ ಸುಸ್ಮಿತಾಂ (।) ಮಾಲಾಂ ಪುಸ್ತಕಮಪ್ಯಭೀಷ್ಟಮಭಯಂ ಸಂಬಿಭ್ರತೀಂ (।) ಬಾಹುಬಿರ್ಬಾಲಾಂ ತಾಮಖಿಲಾಂಗಭೂಷಣಧರಾಂ ಧ್ಯಾಯಾಮಿ ಸಂಸಿದ್ಧಿದಾಂ॥ ಅರುಣವರ್ಣಃ ॥೯॥

ಅಥ ನಿತ್ಯಾಧ್ಯಾನಂ ॥

ಉದ್ಯದ್ಭಾನುಸಮಪ್ರಭಾಂ ರಸಮುಖಾಂ ಪಾಶಾಕ್ಷಸೂತ್ರಂ ಧನುಃಖೇಟಂ ಶೂಲಮಭೀಷ್ಟದಂ ಚ ದಧತೀಂ ವಾಮೈಶ್ಚ ಷಡ್ಭಿಃಕರೈಃ ದಕ್ಷೈರಂಕುಶಪುಸ್ತಕೇಷುಕುಸುಮಂ ಖಡ್ಗಂ ಕಪಾಲಾಭಯಂ ಮಾಣಿಕ್ಯಾಭರಣೋಜ್ವಲಾ(ಂ) ತ್ರಿಣನಯನಾಂ ನಿತ್ಯಾಂ ಭವಾನೀಂ ಭಜೇ॥ ರಕ್ತವರ್ಣಃ ॥೧೦॥

ಅಥ ನೀಲಪತಾಕಾಧ್ಯಾನಂ।

ನೀಲಾಭಾಮರುಣಾಂಶುಕಾಂ ತ್ರಿಣ(ನ)ಯನಾಂ ಪಂಚಾನನಾಂ ಸುಸ್ಮಿತಾಂ ವಾಮೇ ಪಾಶಪತಾಕ ಪದ್ಮವಿಲಸಚ್ಚಾಪಂ ವರಂ ಬಿಭ್ರತೀಂ। ದಕ್ಷೇ ಚಾಂಕುಶಖಡ್ಗಶಕ್ತಿಸುಮಹಾಬಾಣಾಭಯಾನ್ಬಾಹುಭಿಃ ಪದ್ಮಸ್ಥಾಂ ಮಣಿಮೌಕ್ತಿಕಾವೃತಕುಚಾಂ ನೀಲಧ್ವಜಾಮಾಶ್ರಯೆ। ನೀಲವರ್ಣಂ ॥೧೧॥

ಅಥ ವಿಜಯಾಧ್ಯಾನಂ॥

ಶಂಖಿಂ ಚಕ್ರಂ ಚ ಪಾಶಂ ಸೃಣಿಮಪಿಸುಮಹಾಖೇಟೆ ಖಡ್ಗೌ ಸುಚಾಪಂ ಬಾಣಾಂ ಕಲ್ಹಾರಪುಷ್ಪಂ ತದನುಕರಗತಂ ಮಾತುಳಂಗಂ ದಧಾನಾಂ ಉದ್ಯದ್ಭಾಲಾರ್ಕವರ್ಣಾಂ ತ್ರಿಭುವನ ವಿಜಯಾಂ ಪಂಚವಕ್ತ್ರಾಂ ತ್ರಿಣೇತ್ರಾಂ ದೇವೀಂ ಪೀತಾಂಬರಾಢ್ಯಾಂ ಕುಚಭರನಮ(ಮಿ)ತಾಂ ಸಂತತಂ ಭಾವಯಾಮಿ॥ ರಕ್ತವರ್ಣಃ॥೧೨॥

ಅಥ ಸರ್ವಮಂಗಳಾಧ್ಯಾನಂ॥

ಹೇಮಾಭಾಂ ಕರುಣಾಭಿಪೂರ್ಣನಯನಾಂ ಮಾಣಿಕ್ಯ ಭೂಷೋಜ್ವಲಾಂ ದ್ವಾತ್ರಿಂಶದ್ದಳಷೋಡಶಾಷ್ಟದಳಯುಕ್ಪದ್ಮಸ್ಥಿತಾಂ ಸುಸ್ಥಿತಾಂ। ಭಕ್ತಾನಾಂ ಧನದಾಂ ವರಂ ಚ ದಧತೀಂ ವಾಮೇನ ಹಸ್ತೇನ ತದ್ದಕ್ಷೇನಾಭಯಮಾತುಳಂಗ ಸುಫಲಂ ಶ್ರೀಮಂಗಳಾಂ ಭಾವಯೆ॥ ಕನಕವರ್ಣಃ॥೧೩॥

ಅಥ ಜ್ವಾಲಾಮಾಲಿನೀಧ್ಯಾನಂ॥

ಕಲ್ಪಾಂತಾಗ್ನಿಸಮಪ್ರಭಾಂ ಸ್ಮಿತಮುಖೈಃ ಷಡ್ಭಿ ರ್ಭುಜೈರ್ದ್ಯಾದ ಶೈರ್ಯುಕ್ತಾಂ ಪಾಶ ಸಖೇಟಕಂ ಜ ಚ ಸುಖಿದಂ ಶೂಲಂ ವರಂ ವಾಮತಃ ದಕ್ಷೇ ತ್ವಂಕುಶಖಡ್ಗಶಕ್ತಿಸಶರಾನ್ಬಾಪಾಭಯೇ ಬಿಭ್ರತೀಂ ಜ್ವಾಲಾಮಾಲಿನಿ ಸಂಜ್ಞಿತಾಂ ಮಣಿಮಯೈರ್ಭೂಷಾನ್ವಿತಾಮಾಶ್ರಯೇ॥ ರಕ್ತವರ್ಣಃ॥೧೪॥

ಅಥ ಚಿತ್ರಾಧ್ಯಾನಂ।

ಬಾಲಾರ್ಕಕಾಂತಿಶಶಿಲಾಂಛಿತವಕ್ತ್ರಶೋಭಾಂ ಪಾಶಾಂಕುಶೌ ಚ ವರಮಪ್ಯಭಯಂ ದಧಾನಾಂ। ಚಿತ್ರಾಂಶುಕಾಂ ಚ ನವರತ್ನವಿಭೂಷಿತಾಂಗೀಂ ಚಿತ್ರಾಂಬಿಕಾಂ ತ್ರಿಣನಯನಾಂ ಹೃದಿ ಭಾವಯಾಮಿ॥ ರಕ್ತವರ್ಣಃ ॥೧೫॥

ಅಥ ತ್ರಿಪುರಸುಂದರೀ ಧ್ಯಾನಂ।

ರಾಜರಾಜೇಶ್ವರೀವತ್ ಪಾಶಾಂಕುಶೇಕ್ಷುಚಾಪಪುಷ್ಪಬಾಣಹಸ್ತಾ ಸಿಂದೂರವರ್ಣಾ ಕಾರ್ಯಾ॥೧೬॥

ಈ ಹದಿನಾರು (ಕಡೆಯ ತ್ರಿಪುರಸುಂದರಿಯನ್ನು ಪ್ರಧಾನದೇವತೆಯೆಂದು ಪರಿಗಣಿಸಿದಾಗ ಹದಿನೈದು) ನಿತ್ಯೆಯರ ರೂಪಕಲ್ಪನೆಯನ್ನು ಲಲಿತೋಪಾಖ್ಯಾನದಲ್ಲಿ ಕಾಣಲಾರೆವು. ಮುಮ್ಮಡಿಯವರ ನಿರೂಪಣೆಯಲ್ಲಿರುವ ಮೂರ್ತಿಲಕ್ಷಣವನ್ನು 'ನಿತ್ಯಾಷೋಡಶಿಕಾರ್ಣವ', 'ಷೋಡಶನಿತ್ಯಾಪದ್ಧತಿ', ಕಾಮಕಲ್ಪತರು', ಮುಖ್ಯವಾಗಿ 'ಶರಭತಂತ್ರ' ಗಳಿಂದ ಪಡೆದುಕೊಂಡಿದ್ದಾರೆ. ಅವರೇ ರಚಿಸಿದಂತೆ ತೋರುವ ಈ ಶ್ಲೋಕಗಳಲ್ಲಿ ಅಡಗಿರುವ ವಿವರಗಳನ್ನನುಸರಿಸಿ ಚಿತ್ರಗಳನ್ನು ಕಲಾವಿದರಿಂದ ಬರೆಯಿಸಿದ್ದಾರೆ.

(೧) ಕಾಮೇಶೀ (ಕಾಮೇಶ್ವರೀ): ಕೆಂಪುವರ್ಣ, ಮೂರು ಕಣ್ಣುಗಳು, ಆರು ಕೈಗಳು; ಕೈಗಳಲ್ಲಿ ಪಾಶ, ಅಂಕುಶ, ಕಬ್ಬಿನ ಜಲ್ಲೆ (ಬಿಲ್ಲಾಗಿ), ಮಧು ತುಂಬಿದ ಪಾತ್ರೆ, ವರದಮುದ್ರೆ

(೨) ಭಗಮಾಲಾ: ಪಾಟಲ ಕೆಂಪುವರ್ಣ(ಬಂಧೂಕಪುಷ್ಪದಂತೆ) ಆರು ಕೈಗಳು; ಕೈಗಳಲ್ಲಿ ಕಲ್ಹಾರದ ಹೂ, ಕಮಲ, ಪಾಶ, ಅಂಕುಶ, ಕಬ್ಬಿನ ಜಲ್ಲೆ (ಬಿಲ್ಲು), ಹೂಬಾಣ.

(೩) ನಿತ್ಯಕ್ಲಿನ್ನಾ: ಮುಂಜಾನೆಯ ಸೂರ್ಯನಂತೆ ಕೆಂಬಣ್ಣ; ಮೂರು ಕಣ್ಣುಗಳು: ತಲೆಯ ಮೇಲೆ ಚಂದ್ರಬಿಂಬ; ನಾಲ್ಕು ಕೈಗಳು; ಕೈಗಳಲ್ಲಿ ಪಾಶ, ಅಂಕುಶ, ಅಭಯಮುದ್ರೆ, ಪಾನಪಾತ್ರೆ.

(೪) ಭೇರುಂಡಾ (ಜ್ಞಾನಾರ್ಣವದಿಂದ ಎತ್ತಿಕೊಂಡದ್ದು); ಬಿಳಿಯ ಬಣ್ಣ; ಮಣಿಮಕುಟ; ರತ್ನತಾಟಂಕ, ಮೂರು ಕಣ್ಣುಗಳು; ತಲೆಯ ಮೇಲೆ ಚಂದ್ರಬಿಂಬ; ಗುಲಗಂಜಿಮಣಿಗಳ ಮಾಲೆ; ನಾಲ್ಕು ಕೈಗಳು; ಕೈಗಳಲ್ಲಿ ಜಪಸರ, ಹೂ, ಅಭಯಮುದ್ರೆ, ವರದಮುದ್ರೆ.

(೫) ವಹ್ನಿವಾಸಿನೀ: ಬಂಗಾರದ ಬಣ್ಣ; ಮೂರು ಕಣ್ಣುಗಳು; ಎಂಟು ಕೈಗಳು; ಕೈಗಳಲ್ಲಿ ಕಮಲ, ಶಂಖ, ಬಿಲ್ಲು (ಕಬ್ಬಿನ ಜಲ್ಲೆ), ಚಂದ್ರ, ಕಲ್ಹಾರ, ಹೂಬಾಣ, ಮಾತುಳಂಗಫಲ, ಹೇಮಶೃಂಗ(?).

(೬) ಮಹಾವಜ್ರೇಶ್ವರೀ: ಕೆಂಪುಬಣ್ಣ, ರಕ್ತಸಮುದ್ರದಲ್ಲಿ ಮಣಿಖಚಿತವಾದ ತೆಪ್ಪದ ಮೇಲೆ ಪದ್ಮಪೀಠದಲ್ಲಿ ಕುಳಿತವಳು; ಮೂರು ಕಣ್ಣುಗಳು; ನಾಲ್ಕು ಕೈಗಳು; ಕೈಗಳಲ್ಲಿ ಪಾಶ, ಬಿಲ್ಲು (ಕಬ್ಬಿನ ಜಲ್ಲೆ) ಅಂಕುಶ, ದಾಳಿಂಬೆ ಹಣ್ಣು.


(೭) ಶಿವದೂತೀ: ಮಧ್ಯಾಹ್ನದ ಸೂರ್ಯನಂತೆ ಪ್ರಕಾಶಮಾನವಾದವಳು; ಕೆಂಪು ಬಣ್ಣ: ಮೂರು ಕಣ್ಣುಗಳು; ಎಂಟು ಕೈಗಳು; ಕೈಗಳಲ್ಲಿ ರತ್ನಪಾತ್ರ, ಗದೆ, ಗುರಾಣಿ, ಪಾಶ, ಕಮಲ, ಕೊಡಲಿ, ಕತ್ತಿ, ಅಂಕುಶ.

(೮) ತ್ವರಿತಾ: ಹಳದಿಬಣ್ಣ; ನಾಗಾಭರಣ; ಮೂರು ಕಣ್ಣುಗಳು; ಗುಲಗಂಜಿಮಣಿಗಳ ಮಾಲೆ; ನವಯುವತಿ, ತಲೆಯ ಮುಡಿಯ ಮೇಲೆ ನವಿಲುಗರಿಗಳು; ಎಲೆಚಿಗುರುಗಳ ಬಟ್ಟೆ, ಕರಡಿ ಸಿಂಹಗಳ ಪರಿವಾರದ ನಡುವೆ ಕುಳಿತವಳು; ನಾಲ್ಕು ಕೈಗಳು ಕೈಗಳಲ್ಲಿ ಪಾಶ, ಅಂಕುಶ, ಅಭಯಮುದ್ರೆ, ವರದಮುದ್ರೆ.

(೯) ಕುಲಸುಂದರೀ: ಬೆಳಗಿನ ಸೂರ್ಯನ ಬಣ್ಣ; ಮೂರು ಕಣ್ಣಗಳು; ತಲೆಯ ಮೇಲೆ ಬಾಲಚಂದ್ರಬಿಂಬ; ನಗುಮೊಗ; ಬಾಲೆ; ನಾಲ್ಕು ಕೈಗಳು; ಕೈಗಳಲ್ಲಿ ಜಪಸರ, ಪುಸ್ತಕ, ವರದಮುದ್ರೆ; ಅಭಯಮುದ್ರೆ.

(೧೦) ನಿತ್ಯಾ: ಆಗತಾನೆ ಹುಟ್ಟುತ್ತಿರುವ ಸೂರ್ಯನ ಬಣ್ಣ; ಒಂಬತ್ತು ಮುಖಗಳು; ಮೂರು ಕಣ್ಣಗಳು; ಹನ್ನೆರಡು ಕೈಗಳು; ಎಡಗೈಗಳಲ್ಲಿ ಪಾಶ, ಜಪಸರ, ಬಿಲ್ಲು, ಕತ್ತಿ, ಶೂಲ, ವರದಹಸ್ತ; ಬಲಗೈಗಳಲ್ಲಿ ಅಂಕುಶ, ಪುಸ್ತಕ, ಹೂಬಾಣ, ಕತ್ತಿ, ಅಭಯಮುದ್ರೆ

(೧೧) ನೀಲಪತಾಕಾ: ನೀಲಿಬಣ್ಣ; ಕೆಂಪುಬಟ್ಟೆ; ಮೂರು ಕಣ್ಣುಗಳು; ಐದು ಮುಖಗಳು; ನಗುಮೊಗ; ತಾವರೆಯ ಮೇಲೆ ಕುಳಿತವಳು; ಹತ್ತು ಕೈಗಳು; ಎಡಗೈಗಳಲ್ಲಿ ಪಾಶ, ಧ್ವಜ, ಕಮಲ, ಬಿಲ್ಲು, ವರದಮುದ್ರೆ; ಬಲಗೈಗಳಲ್ಲಿ ಅಂಕುಶ, ಕತ್ತಿ, ಶಕ್ತ್ಯಾಯುಧ, ಬಾಣ, ಅಭಯಮುದ್ರೆ



ನಿದ್ರಾ ದೇವಿ

(೧೨) ವಿಜಯಾ: ಕೆಂಪುಬಣ್ಣ; ಹಳದಿ ಬಟ್ಟೆ; ಮೂರು ಕಣ್ಣುಗಳು; ಹತ್ತು ಕೈಗಳು; ಕೈಗಳಲ್ಲಿ ಶಂಖ, ಚಕ್ರ, ಪಾಶ, ಅಂಕುಶ, ಕತ್ತಿ, ಗುರಾಣಿ, ಬಿಲ್ಲು, ಬಾಣ, ಕಲ್ಹಾರದಹೂ; ಮಾತುಳಂಗಫಲ

(೧೩) ಸರ್ವಮಂಗಳಾ: ಬಂಗಾರದ ಬಣ್ಣ; ಕರುಣೆಯಿಂದ ಕೂಡಿದ ಕಣ್ಣುಗಳು; ೩, ೧೬, ೮ ದಳಗಳ ಕಮಲಗಳ ಮೇಲೆ ಕುಳಿತವಳು; ನಾಲ್ಕುಕೈಗಳು; ಎಡಗೈಗಳಲ್ಲಿ ಧನಪ್ರದ ಮುದ್ರೆ, ವರದಮುದ್ರೆ, ಬಲಗೈಗಳಲ್ಲಿ ಅಭಯಮುದ್ರೆ, ಮಾತುಳಂಗಫಲ

(೧೪) ಜ್ವಾಲಾಮಾಲಿನೀ: ಪ್ರಳಯಕಾಲದ ಬೆಂಕಿಯಂತೆ ಕೆಂಪುಬಣ್ಣ; ನಗುಮೊಗ, ಹನ್ನೆರಡು ಕೈಗಳು; ಎಡಗೈಗಳಲ್ಲಿ ಪಾಶ, ವರದಮುದ್ರೆ ಗುರಾಣಿ, ಶೂಲ, ವರದಹಸ್ತ; ಬಲಗೈಗಳಲ್ಲಿ ಅಂಕುಶ, ಕತ್ತಿ, ಶಕ್ತ್ಯಾಯುಧ ಬಾಣಗಳು, ಬಿಲ್ಲು, ಅಭಯಮುದ್ರೆ.

(೧೫) ಚಿತ್ರಾ: ಎಳೆಯ ಸೂರ್ಯನ ಬಣ್ಣ; ಹಣೆಯ ಮೇಲ್ಭಾಗದಲ್ಲಿ ಚಂದ್ರಕಳೆ; ನವರತ್ನಗಳ ಆಭರಣ; ಮೂರು ಕಣ್ಣುಗಳು; ನಾಲ್ಕು ಕೈಗಳು; ಕೈಗಳಲ್ಲಿ ಪಾಶ, ಅಂಕುಶ, ವರದಮುದ್ರೆ, ಅಭಯಮುದ್ರೆ.

(೧೬) ತ್ರಿಪುರಸುಂದರೀ: ರಾಜರಾಜೇಶ್ವರಿಯಂತೆ ರೂಪ; ಸಿಂದೂರವರ್ಣ: ನಾಲ್ಕು ಕೈಗಳು, ಕೈಗಳಲ್ಲಿ ಪಾಶ, ಅಂಕುಶ, ಬಿಲ್ಲು (ಕಬ್ಬಿನ ಜಲ್ಲೆ), ಹೂಬಾಣ.

(೫) ಷಡಂಗದೇವಿಯರು

ನಿತ್ಯೆಯರು ವಾಸವಾಗಿರುವ ಅಂತರಾಳದಿಂದ ಮೇಲೆ ಆರು ಅಂಗದೇವಿಯರ ನಿವಾಸಸ್ಥಾನವೆಂದು ಕಲ್ಪಿಸಿಕೊಳ್ಳಲಾಗಿದೆ. ಲಲಿತೋಪಾಖ್ಯಾನವು ಇದನ್ನು ಅಂಗದೇವ್ಯಂತರವೆಂದು ಕರೆದಿದೆ. ಇಲ್ಲಿರುವ ಶಕ್ತಿಯರು (೩, ೪, ೩೭, ೪೧, ೪೪)-

'ಹೃದ್ದೇವೀ ಚ ಶಿರೋದೇವೀ ಶಿಖಾದೇವೀ ತಥೈವ ಚ।
ವರ್ಮದೇವೀ ದೃಷ್ಟಿದೇವೀ ಶಸ್ತ್ರದೇವೀ ಷಡೀರಿತಾಃ।।
ಅತ್ಯಂತಸನ್ನಿಕೃಷ್ಟಾಸ್ತಾಃ ಶ್ರೀ ಕಾಮೇಶ್ವರಸುಭ್ರುವಃ।
ನವಲಾವಣ್ಯಪೂರ್ಣಾಂಗ್ಯಃ ಸಾವಧಾನಾ ಧೃತಾಯುಧಾಃ।।
ಪರಿತೋ ಬಿಂದುಪೀಠೇ ಚ ಭ್ರಾಮ್ಯಂತೋ ದೃಪ್ತಮೂರ್ತಯಃ।
ಲಲಿತಾಜ್ಞಾಪ್ರವರ್ತಿನ್ಯೋ ವಶೀನಾಂ ಪೀಠವರ್ತಿಕಾಃ।।

ಇವರೆಲ್ಲರೂ ಹೊಸ ಹರೆಯದ ಸುಂದರಿಯರು, ದೇವಿಗೆ ತೀರ ಹತ್ತಿರದ ಪರಿಚಾರಿಕೆಯರು; ತ್ರಿಕೋಣದ ಸುತ್ತಲೂ ತಿರುಗಾಡುತ್ತಾ ದೇವಿಯ ಅಪ್ಪಣೆಯನ್ನು ನಡೆಸುವರು; ವಶಿನ್ಯಾದಿ ದೇವತೆಯರೂ ಇವರ ನೆರವನ್ನು ಬಯಸುವರು. ಈ ಶ್ಲೋಕಗಳನ್ನು ಶ್ರೀ ತತ್ವನಿಧಿಯು ನೇರವಾಗಿಯೆ, ಆದರೆ ಸ್ವಲ್ಪ ಮಾರ್ಪಾಡಿನೊಂದಿಗೆ, ಬಳಸಿಕೊಂಡಿದೆ.

'ಅಥ ಷಡಂಗದೇವೀಧ್ಯಾನಂ।।
ಹೃದ್ದೇವೀ ಚ ಶಿರೋ ದೇವೀ ಶಿಖಾದೇವೀ ತಥೈವ ಚ।
ವರ್ಮದೇವೀ ದೃಷ್ಟಿದೇವೀ ಅಸ್ತ್ರದೇವೀ ಷಡೀರಿತಾಃ।
ನವಲಾವಣ್ಯ ಪೂರ್ಣಾಂಗ್ಯೋ ಸಾವಧಾನಧೃತಾಯುಧಾಃ।
ಪರಿತೋ ಬಿಂದುಪೀಠಂ ಚ
ಭ್ರಾಮ್ಯಂತ್ಯೋ ದೀಪ್ತಮೂರ್ತಯಃ ।।೧೭।।
ರಕ್ತವರ್ಣಾಃ।।೪।।

ಇಲ್ಲಿ ದೇಹದ ಆರು ಅಂಗಗಳನ್ನು ದೇವಿಯರೆಂದು ಪರಿಗಣಿಸಿ ನ್ಯಾಸಾದಿಕ್ರಿಯೆಯಲ್ಲಿ ನೇತ್ರ(ದೃಷ್ಟಿ) ಮತ್ತು ಅಸ್ತ್ರ (ಶಸ್ತ್ರ) ಇವುಗಳನ್ನುದ್ದೇಶಿಸಿ ಕ್ರಮವಾಗಿ ನಮಃ, ಸ್ವಾಹಾ, ವಷಟ್, ಹುಂ ಮತ್ತು ಫಟ್ ಎಂದು ಉಚ್ಚರಿಸುತ್ತಾರೆ; ಆರಕ್ಕೆ ಆರು ಮುದ್ರೆಗಳೂ ಬೇರೆಬೇರೆಯಾಗಿವೆ.

'ಹೃದಯಂ ಮಧ್ಯಮಾನಾಮಾತರ್ಜನೀಭಿಃ ಸ್ಮೃತಂ ಶಿರಃ।
ಮಧ್ಯಮಾತರ್ಜನೀಭ್ಯಾಂ ಸ್ಯಾದಂಗುಷ್ಠೇನ ಶಿಖಾ ಸ್ಮೃತಾ।।
ದಶಭಿಃ ಕವಚಂ ಪ್ರೋಕ್ತಂ ತಿಸೃಭಿರ್ನೇತ್ರಮೀರಿತಂ।
ಪ್ರೋಕ್ತಾಂಗುಲಿಭ್ಯಾಮಸ್ತ್ರಂ ಸ್ಯಾದಂಗಕ್ಲೃಪ್ತಿರಿಯಂ ಮತಾ।।'



ಅಷ್ಟಾದಶಭುಜಾಭದ್ರಕಾಳಿ

(೬) ಮತ್ತೆ ಇಬ್ಬರು ದೇವಿಯರು

ಮುಮ್ಮಡಿಯವರು ಷಡಂಗದೇವಿಯರನ್ನು ಉಲ್ಲೇಖಿಸಿ ಅನಂತರ ಯೋಗನಿದ್ರಾದೇವಿ ಮತ್ತು ಹದಿನೆಂಟು ಕೈಗಳ ಭದ್ರಕಾಳಿ ಇವರ ಧ್ಯಾನವನ್ನು ಕೊಟ್ಟಿದ್ದಾರೆ. ಮುಂದೆ ಮೂಲಾಧಾರವೇ ಮೊದಲಾಗಿ ಏಳು ಮಂದಿ ಪೀಠೇಶ್ವರಿಯರ ಮೂರ್ತಿಲಕ್ಷಣವನ್ನು ಹೇಳುತ್ತಾರೆ.

'ಅಥ ಯೋಗನಿದ್ರಾದೇವೀಧ್ಯಾನಂ॥ ಪಾಂಚರಾತ್ರೇ ಪದ್ಮಸಂಹಿತಾಯಾಂ॥
ನಿದ್ರಾ ತು ಶಯನಾರೂಢಾ ಸುಸೌಮ್ಯಾ ಕಮಲೇಕ್ಷಣಾ॥
ಪಾಶಪಾತ್ರಧರಾ ಚೇಯಂ ದ್ವಿಭುಜಾ ಶ್ಯಾಮಳಾ ಸ್ಮೃತಾ।
ಶ್ಯಾಮವರ್ಣಃ॥೧೮॥

ಯೋಗಶಾಸ್ತ್ರದ ಪರಿಭಾಷೆಯಲ್ಲಿ ಯೋಗನಿದ್ರೆಯೆಂಬುದಕ್ಕೆ ಚಿತ್ತವೃತ್ತಿನಿರೋಧಲಕ್ಷಣದ ಸಮಾಧಿರೂಪವಾದ ನಿದ್ರೆಯೆಂಬರ್ಥವಿದ್ದರೂ, ತಾಂತ್ರಿಕಪ್ರಕಾರಗಳಲ್ಲಿ ದುರ್ಗೆಯ ಒಂದು ರೂಪ ಇದು. ಕಾಳಿಕಾಪುರಾಣದಲ್ಲಿ (ಆರನೆಯ ಅಧ್ಯಾಯ) ಎರಡೂ ಸಂದರ್ಭಗಳನ್ನೂ ಸೇರಿಸಿ-

'ಯಾ ನಿಮ್ನಾಂತಃ ಸ್ಥಲಾಧಸ್ಥಾ ಜಗದಂಡಕಪಾಲತಃ।
ವಿಭಜ್ಯ ಪುರುಷಂ ಯಾತಿ ಯೋಗನಿದ್ರೇತಿ ಸೋಚ್ಯತೇ॥'

ಎಂಬ ನಿರ್ದೇಶನವೂ ಇದೆಯೆನ್ನಿ. ಮಾರ್ಕಂಡೇಯಪುರಾಣದ ದೇವೀಮಾಹಾತ್ಮ್ಯಯಲ್ಲಿ(೮೧, ೪೬) ವಿಷ್ಣುವು ಕಲ್ಪಾಂತದಲ್ಲಿ ಜಗತ್ತು ಸಮುದ್ರದಲ್ಲಿ ಅಡಗಿಹೋದಾಗ ಶೇಷನ ಮೇಲೆ ಪವಡಿಸಿ ಯೋಗ ನಿದ್ರೆಯಲ್ಲಿ ಮೈಮರೆತದ್ದನ್ನು ಹೇಳುತ್ತದೆ. ವಿಷ್ಣುವಿಗೂ ಮೈಮರೆವೆಯನ್ನುಂಟುಮಾಡಿದ ಯೋಗನಿದ್ರೆಯನ್ನು ಮೂರ್ತಿಯಂತೆ ಕಾಣಿಸುವ ಪ್ರಯತ್ನವೇ ಯೋಗನಿದ್ರೆಯೆಂಬ ರೂಪ. ಈ ಮೂರ್ತಿಯ ಮೈಬಣ್ಣ ಕತ್ತಲೆಯಂತೆಯೇ ಕಪ್ಪು. ಮೋಹಿನಿಯಂಥ ಚಲುವೆ; ಎರಡು ಕೈಗಳು. ಒಂದು ಕೈಯಲ್ಲಿ ಮೈಮರವೆಯನ್ನುಂಟುಮಾಡುವ ಮದ್ಯದ ಪಾತ್ರೆ; ಮತ್ತೊಂದರಲ್ಲಿ ಮನಸ್ಸನ್ನು ಸೆರೆಹಿಡಿದೊಯ್ಯುವ ಪಾಶ. ಈ ಹೆಣ್ಣು ಒರಗಿರುವುದು ಮೆತ್ತನೆಯ ಹಾಸಿಗೆಯಿರುವ ಮಂಚದ ಮೇಲೆ

ಮುಂದೆ 'ನೃಸಿಂಹಪ್ರಾಸಾದ' ಎಂಬ ಗ್ರಂಥದಿಂದ ಆಯ್ದುಕೊಂಡಿರುವ, ಹದಿನೆಂಟು ಕೈಗಳ ಭದ್ರಕಾಳಿಯ ಮೂರ್ತಿಧ್ಯಾನ ಬರುತ್ತದೆ.

'ಅಷ್ಟಾದಶಭುಜಾ ಕಾರ್ಯಾ ಭದ್ರಕಾಳೀ ಮನೋಹರಾ।
ಆಲೀಢಸ್ಥಾನಸಂಸ್ಥಾನಾ ಚತುಃಸಿಂಹರಥೇ ಸ್ಥಿತಾ। ಅಕ್ಷಮಾಲಾಂ
ತ್ರಿಶೂಲಂ ಚ ಖಡ್ಗಂ ಚರ್ಮ ಚ ಸರ್ವದಾ। ಬಾಣಚಾಪೇ
ಕರ್ತವ್ಯೇ ಶಂಖಪದ್ಮೇ ತಥೈವ ಚ । ಸ್ರುಕ್ಸ್ರುವೌ ಚ
ತಥಾ ಕಾರ್ಯೌ ತಥಾ ದಿವ್ಯಂ ಕಮಂಡಲ್ಲು(ಲು)ಂ। ದಂಡಶಕ್ತೀ ಚ
ಕರ್ತವ್ಯೇ ಕೃಷ್ಣಾಜಿನ ಹುತಾಶನೇ ।ಹಸ್ತಾನಾಂ
ಭದ್ರಕಾಳ್ಯಸ್ತು ಭವೇಚ್ಛಾಂತಿಕರೋ ವರಃ । ಎ(ಏ)ಕತ್ರೈವ
ಮಹಾಭಾಗಾ ರತ್ನಪಾತ್ರಧರಾ(s)ಭವತ್। ನೀಲವರ್ಣಃ।

ಈ ಭದ್ರಕಾಳಿಯ ಪ್ರಾದುರ್ಭಾವ ಆದ ಸಂದರ್ಭವು ಕಾಳಿಕಾಪುರಾಣದಲ್ಲಿ (ಅಧ್ಯಾಯ ೫೯) ಬರುತ್ತದೆ.



ಮೂಲಾಧಾರ ಪೀಠೇಶ್ವರೀ



ಸ್ವಾಧಿಷ್ಠಾನ ಪೀಠೇಶ್ವರೀ



ಮಣಿಪೂರಕ ಪೀಠೇಶ್ವರಿ



ಅನಾಹತ ಪೀಠೇಶ್ವರಿ



ಮಣಿಪೂರಕ ಪೀಠೇಶ್ವರಿ - ಲಾಕಿನೀ



ಅನಾಹತ ಪೀಠೇಶ್ವರಿ - ರಾಕಿನೀ

ಕಾತ್ಯಾಯನಮುನಿಯಿಂದ ಶಾಪವನ್ನು ತಳೆದ ಮಹಿಷಾಸುರನು ಒಂದು ಇರುಳು ಮಲಗಿದ್ದಾಗ ಮಹಾಮಾಯೆಯು ಕಾಣಿಸಿಕೊಂಡು ಕತ್ತಿಯಿಂದ ತನ್ನ ತಲೆಯನ್ನು ಕತ್ತರಿಸಿದಂತೆ ಕನಸನ್ನು ಕಂಡನಂತೆ. ಒಡನೆಯೆ ಅವನು ಎದ್ದು ಅವಳನ್ನು ಆರಾಧಿಸತೊಡಗಿದಾಗ ದೇವಿಯು ಹದಿನೆಂಟು ಕೈಗಳ ಭದ್ರಕಾಳಿಯಂತೆ ಕಾಣಿಸಿಕೊಂಡಳಂತೆ ('ಪ್ರಾದುರ್ಭೂತಾ ಭದ್ರಕಾಳೀ ಭುಜೈಃ ಷೊಡಶಭಿರ್ಯುತಾ'). ಅವನ ಭಕ್ತಿಗೆ ಮೆಚ್ಚಿ ಅವನು ಕೇಳಿದ ಎರಡು ವರಗಳನ್ನು ಕೊಟ್ಟಳಂತೆ. ಜನರು ಮಾಡುವ ಎಲ್ಲ ಯಜ್ಞಗಳಲ್ಲಿ ತನಗೊಂದು ಭಾಗವಿರುವುದು ಮೊದಲ ವರ, ದೇವಿಯ ಪಾದಗಳನ್ನು ಎಂದೆಂದಿಗೂ ಸೇವಿಸುತ್ತಿರುವುದು ಎರಡನೆಯ ವರ. ಮಹಿಷಾಸುರನ ಮೊದಲಜನ್ಮದಲ್ಲಿ ಅವನನ್ನು ಕೊಂದವಳು, ಉಗ್ರಚಂಡಾ; ಅವಳೇ ಅವನ ಎರಡನೆಯ ಜನ್ಮದಲ್ಲಿ ಭದ್ರಕಾಳಿ; ಮೂರನೆಯ ಜನ್ಮದಲ್ಲಿ ದುರ್ಗೆ.

ಭದ್ರಕಾಳಿಯೆಂಬ ಮಾತಿಗೆ ಮಂಗಳವನ್ನುಂಟುಮಾಡುವವಳು ('ಭದ್ರಂ ಮಂಗಳಂ ಕಲಯತಿ') ಎಂದರ್ಥ. ನಾಲ್ಕು ಸಿಂಹಗಳನ್ನು ಹೂಡಿರುವ ತೇರಿನ ಮೇಲೆ ಆಲೀಢಾಸನದಲ್ಲಿ ಕುಳಿತು, ಕೈಗಳಲ್ಲಿ ಜಪಮಾಲೆ, ಕಮಂಡಲು, ಸ್ರುಕ್-ಸ್ರುವ, ದಂಡ, ಕೃಷ್ಣಾಜಿನ, ಅಗ್ನಿಗಳನ್ನೂ (ಇವೆಲ್ಲ ಮಂಗಳಕರವಾದ ಆಯುಧಗಳು) ವರದ ಮುದ್ರೆಯನ್ನೂ ರತ್ನಪಾತ್ರೆಯನ್ನೂ (ಇವು ಅನುಗ್ರಹಸಂಕೇತಗಳು), ತ್ರಿಶೂಲ, ಶಕ್ತಿ, ಬಿಲ್ಲು-ಬಾಣ, ಶಂಖ-ಚಕ್ರ, ಕತ್ತಿ-ಗುರಾಣಿಗಳನ್ನೂ (ಇವು ಸಂಹಾರಸೂಚಕವಾದುವು) ಹಿಡಿದು ಕಾಣಿಸಿಕೊಂಡಳೆಂಬ ಸಂದರ್ಭವನ್ನು ಸೂಚಿಸುತ್ತದೆ. ಮಂಗಳಮೂರ್ತಿಯಾದರೂ 'ದಾರುಣಂ ಘೋರದರ್ಶನಂ'.




ವಿಶುದ್ಧ ಪೀಠೇಶ್ವರಿ



ವಿಶುದ್ಧ ಪೀಠೇಶ್ವರಿ - ಡಾಕಿನೀ

(೭) ಸಪ್ತಪೀಠೇಶ್ವರಿಯರು

ಇದಾದಮೇಲೆ ಒಕ್ಕಣೆಗೆ ಬಂದಿರುವ ಶಕ್ತಿರೂಪಗಳು. 'ಮೂಲಾಧಾರಾದಿ ಸಪ್ತ ಪೀಠೇಶ್ವರಿ'ಯರದ್ದು. ಇಲ್ಲಿ ಪೀಠಗಳೆಂದರೆ ಮನುಷ್ಯದೇಹದಲ್ಲಿ ವ್ಯವಸ್ಥಿತವಾಗಿರುವ ಚಕ್ರಗಳು (ಕಮಲಗಳು). ಇವು ಕುಂಡಲಿನೀಶಕ್ತಿಯು ಜಾಗೃತವಾದಾಗ ಏರಿಕೊಂಡು ಬರುವ ಸೋಪಾನಗಳು. ಸೂಕ್ಷ್ಮಶರೀರದ ಬೆನ್ನುಹುರಿಯನ್ನು ಬ್ರಹ್ಮದಂಡವೆಂದೂ ಮೇರುದಂಡವೆಂದೂ ಕರೆಯುತ್ತಾರೆ. ಇದರೊಳಗೆ ಸ್ಥೂಲದೇಹದ ಪಾದಾಂಗುಷ್ಠದಿಂದ ತಲೆಯ ಮೇಲ್ಗಡೆ ಇರುವ ಬ್ರಹ್ಮರಂಧ್ರದ (ತಲೆಯೋಡಿನ ತುತ್ತತುದಿಯಲ್ಲಿ) ವರೆಗೂ ವ್ಯಾಪಿಸಿಕೊಂಡಿರುವುದು ಸುಷುಮ್ನಾನಾಡಿ. ಈ ನಾಡಿಯಲ್ಲಿ ಒಟ್ಟು ಮೂವತ್ತು ಚಕ್ರಗಳಿವೆ. ಇವುಗಳಲ್ಲಿ ಸ್ಥೂಲದೇಹದ ಗುದಕ್ಕೂ ಯೋನಿಸ್ಥಾನಕ್ಕೂ ನಡುವೆ ಮೂಲಾಧಾರ, ವಂಕ್ಷಣಕ್ಕೂ ನಾಭಿಗೂ ನಡುವೆ ಸ್ವಾಧಿಷ್ಠಾನ, ಅದರ ಮೇಲ್ಭಾಗದಲ್ಲಿ ಮಣಿಪುರ, ಸ್ಥೂಲದೇಹದ ಹೃದಯ ಪ್ರದೇಶದಲ್ಲಿ ಅನಾಹತ, ಜಿಹ್ವಾಗ್ರಕ್ಕೂ ತಾಲುವಿಗೂ ನಡುವೆ ವಿಶುದ್ಧ, ಭ್ರೂಮಧ್ಯದಲ್ಲಿ ಆಜ್ಞಾ ಹೀಗೆ ಆರು ಚಕ್ರಗಳು ಪ್ರಧಾನವಾದುವು. ಇವನ್ನು ಒಟ್ಟಾರೆ 'ಷಟ್‌ಚಕ್ರ' ಎಂದು ನಿರ್ದೇಶಿಸುತ್ತಾರೆ. ಇವಷ್ಟೂ ಸ್ಥೂಲದೇಹದೊಳಗೇ ಅಡಕವಾಗಿರುವುವು. ಸ್ಥೂಲದೇಹದ ತಲೆಯ ಮೇಲ್ಭಾಗದಲ್ಲಿ ಇನ್ನೊಂದು ಚಕ್ರವಿದ್ದು ಅದನ್ನು ಸಹಸ್ರಾರವೆಂದು ಕರೆಯುತ್ತಾರೆ. ದೇಹದ ಹೊರಗಿರುವುದರಿಂದ ಇದು 'ನಿರಾಲಂಬಪುರಿ'. ಏಳನ್ನೂ ಎಣಿಕೆಮಾಡಿ ಇವನ್ನು ಬ್ರಹ್ಮಚಕ್ರಗಳೆಂದು ಕರೆಯುವ ವಾಡಿಕೆಯೂ ಇದೆ.



ಪ್ರಜ್ಞಾ ಪೀಠೇಶ್ವರಿ

ಶ್ರೀತತ್ತ್ವನಿಧಿಯಲ್ಲಿ ಈ ಎಣಿಕೆಯನ್ನೇ ಹಿಡಿದು 'ಸಪ್ತಪೀಠ'ಗಳನ್ನು ಹೇಳಲಾಗಿದೆ. ಮೂಲಾಧಾರದಲ್ಲಿ ಸುಪ್ತವಾಗಿರುವ ಕುಂಡಲಿನೀ ಶಕ್ತಿಯು ಜಾಗ್ರತಗೊಂಡು ಸಹಸ್ರಾರದಲ್ಲಿರುವ ಶಿವನೊಂದಿಗೆ ಬೆರೆಯಲು ಹೊರಡುವಾಗ ಅವಳ ಪ್ರಯಾಣದಲ್ಲೂ ಪ್ರತಿಪ್ರಯಾಣದಲ್ಲೂ ಇವು ನಿಲ್ದಾಣಗಳಿದ್ದಂತೆ. ಒಂದೊಂದು ಚಕ್ರಕ್ಕೂ ಬೇರೆ ಬೇರೆ ಆಕಾರ, ವರ್ಣ, ತತ್ವ, ಧಾತು, ಪ್ರಾಣವಾಯು, ಬೀಜಾಕ್ಷರ, ವರ್ಣ, ಸಂಕೇತ ಮೊದಲಾದ ವಿವರಗಳನ್ನು ಯೋಗಶಾಸ್ತ್ರದಲ್ಲಿ ಹೇಳುತ್ತಾರೆ; ಕಮಲದ ಆಕಾರದಲ್ಲೆ ಎಲ್ಲ ಚಕ್ರಗಳೂ ಇವೆಯೆಂದು ಭಾವಿಸಿ, ಒಂದೊಂದು ಕಮಲಕ್ಕೂ ವಿಭಿನ್ನ ದಳಗಳನ್ನು ಹೇಳಲಾಗಿದೆ. ಪ್ರತಿ ಚಕ್ರಕ್ಕೂ(ಸಹಸ್ರಾರವನ್ನು ಬಿಟ್ಟು) ಶಿವಶಕ್ತಿಯರನ್ನು ವಿಶಿಷ್ಟವಾಗಿ ಕಾಣಿಸುವುದೂ ಉಂಟು. ಮೂಲಾಧಾರಕ್ಕೆ ಬ್ರಹ್ಮ ಮತ್ತು ಸಾಕಿನೀ, ಸ್ವಾಧಿಷ್ಠಾನಕ್ಕೆ ವಿಷ್ಣು ಮತ್ತು ಕಾಕಿನೀ, ಮಣಿಪೂರಕ್ಕೆ ರುದ್ರ ಮತ್ತು ಲಾಕಿನೀ, ಅನಾಹತಕ್ಕೆ ಈಶ್ವರ ಮತ್ತು ಲಾಕಿನೀ, ವಿಶುದ್ಧಕ್ಕೆ ಸದಾಶಿವ ಮತ್ತು ಶಾಕಿನೀ, ಆಜ್ಞಾಕ್ಕೆ ಪರಮಶಿವ ಮತ್ತು ಹಾಕಿನೀ. ಹೀಗೆ ನಿರೂಪಿಸುವಾಗ, ಶಕ್ತಿಗೆ ಮೂರ್ತರೂಪವೊಂದನ್ನು ಕಾಣಿಸುವುದು ತಂತ್ರಶಾಸ್ತ್ರದಲ್ಲಿ ಬರುತ್ತದೆ. ಆರು ಚಕ್ರಗಳಿಗೆ ಡಾಕಿನೀ, ರಾಕಿನೀ ಮೊದಲಾಗಿ ಆರುಮಂದಿ ಪೀಠೇಶ್ವರಿಯರು. ಸಹಸ್ರಾರದಲ್ಲಿರುವುದು ಜಾಲಂಧರಪೀಠ.

ಮುಮ್ಮಡಿಯವರು ಈ ವರ್ಣನೆಯನ್ನು 'ಷೋಢಾಕಲ್ಪ'ದಿಂದ ಆಯ್ದುಕೊಂಡಿದ್ದಾರೆ. ಸಾಮಾನ್ಯವಾದ ನಿರ್ದೇಶನಕ್ಕೂ ಇಲ್ಲಿನ ಒಕ್ಕಣೆಗೂ ಕೊಂಚ ಭೇದವಿರುವುದನ್ನು ಗಮನಿಸಬಹುದು.

೧. ಅಥ ಮೂಲಾಧಾರಾದಿ ಸಪ್ತಪೀಠೇಶ್ವರೀಣಾಂ ಧ್ಯಾನಂ ।
ಮೂಲಾಧಾರಸ್ಥ ಪದ್ಮೇ ಶ್ರುತಿದಳಸಹಿತೇ ಪಂಚವಕ್ತ್ರಾಂ
ತ್ರಿನೇತ್ರಾಂ।
ಸ್ವರ್ಣಾಭಾಮಸ್ಥಿಸಂಸ್ಥಾಂ ಸೃಣಿಮಪಿ ಕಮಲಂ ಪುಸ್ತಕಂ
ಜ್ಞಾನಮುದ್ರಾಂ।



ಜಾಲಂಧರ ಪೀಠೇಶ್ವರಿ

ಬಿಭ್ರಾಣಾಂ ಬಾಹುದಂಡೈಸ್ಸುಲಲಿತವರದಾದ್ಯಾಭಿವೀತಾಂ
ಮನೋಜ್ಞಾಂ
ಮುದ್ಗಾನ್ನಾಸಕ್ತಚಿತ್ತಾಂ ಮಧುಮದಮುದಿತಾಂ ಸಾಕಿನೀಂ
ಭಾವಯೆತ್ತಾಂ।
ಸ್ವರ್ಣವರ್ಣಾಃ॥

೨. ಅಥ ಸ್ವಾಧಿಷ್ಠಾನಪೀಠಸ್ಥ(ಸ್ಥ) ಕಾಕಿನೀಧ್ಯಾನಂ।
ಸ್ವಾಧಿಷ್ಠಾನಾಖ್ಯಪದ್ಮೇ ರಸದಳಲಸಿತೇ ವೇದವಕ್ತ್ರಾಂ ತ್ರಿನೇತ್ರಾಂ
ಪೀತಾಭಾಂ ಧಾರಯಂತೀಂ ತ್ರಿಶಿಖ ಗುಣ ಕಪಾಲಾಭಯಾನ್ ಜ್ಯಾಂ
ತವರ್ಗಾಂ। ಮೇದೋಧಾತುಪ್ರತಿಷ್ಠಾಮಳಿಮದಮುದಿತಾಂ ಬಂಧಿನೀಂ
ಪೂಗಶಕ್ಯಾಪೀತಾಂ ದಧ್ಯನ್ನಾಕ್ತಾಮಭಿಮತಫಲದಾಂ ಕಾಕಿನೀಂ
ಭಾವೆಯೆತ್ತಾಂ॥

೩. ಅಥ ಮಣಿಪೂರಚಕ್ರಸ್ಥಾ ಲಾಕಿನೀಧ್ಯಾನಂ।
ನಾಭೌ ದಿಕ್ಪತ್ರಪದ್ಮೇ ತ್ರಿವದನವಿಲಸತ್ತ್ರೀಕ್ಷಣಾಂ ಕೃಷ್ಣವರ್ಣಾಂ
ಶಕ್ತಿಂ ದಂಭೋಳಿದಂಡಾಭಯಮಪಿ ಚ ಭುಜೈರ್ದಾರಯತೀಂ
ಮಹೋಗ್ರಾಂ।
ಡಾಮರ್ಯಾದ್ಯೈಃ ಪರೀತಾಂ ಪಶುಜನಭಯದಾಂ
ಮಾಂಸಧಾತ್ವಾಸನಸ್ಥಾ
ಗೌಡಾನ್ನೇ ಸಕ್ತಚಿತ್ತಾಂ ಸಕಲಸುಖಕರಂ ಸಂಸ್ಮರೇಲ್ಲಾಕಿನೀಂ
ತಾಂ॥
ಕೃಷ್ಣವರ್ಣಾಃ॥

೪. ಅಥ ಅನಾಹತಪೀಠಸ್ಥ ಡಾಕಿನೀಧ್ಯಾನಂ॥
ಹೃತ್ಪದ್ಮೇ ಭಾನುಪತ್ರೇ ದ್ವಿವದನ ವಿಲಸದ್ದಂಷ್ಟ್ರಿಣೀಂ
ಶ್ಯಾಮವರ್ಣಾಂ।
ಟಂಕಂ ಶೂಲಂ ಕಪಾಲಂ ಡಮರುಮಪಿ ಭುಜೈರ್ದಾರಯಂತೀಂ
ತ್ರಿಣೇತ್ರಾಂ
ರಕ್ತಸ್ಥಾಂ ಕಾಳರಾತ್ರಿಪ್ರಭೃತಿಪರಿವೃತಾಂ ಶುದ್ಧರಕ್ತಪ್ರವೃತ್ತಾಂ
ಶ್ರೀ ಮದ್ವೀ
ರೇಂದ್ರವಂದ್ಯಾಮಭಿಮತಫಲದಾಂ ಡಾಕಿನೀಂ ಭಾವಯೆತ್ತಾಂ॥
ಶ್ಯಾಮವರ್ಣಾಃ॥

೫. ಅಥ ವಿಶುದ್ಧ ಪೀಠಸ್ಥ ಡಾಕಿನೀಧ್ಯಾನಂ॥
ಗ್ರೀವಾಕೂಪೇ ವಿಶುದ್ಧೇ ಸ್ವರದಳಕಮಲೇ ರಕ್ತವರ್ಣಾಂ ತ್ರಿನೇತ್ರಾಂ
ಶ್ರೀ ಖಟ್ವಾಂಗಂ ಕಪಾಲಂ ತ್ರಿಶಿಖಮಪಿ ಮಹಾಚರ್ಮ ಸಂಧಾರಯಂತೀಂ
ವಕ್ತ್ರೈಣೈಕೇನ ಯುಕ್ತಾಂ ಪಶುಜನಭಯದಾಂ ಪಾಯಸಾನ್ನಪ್ರಸಕ್ತಾಂ
ತ್ವಕ್ಸ್ಥಾಂ ವಂದೇ(s)ಮೃತೌಘೈಃ ಪರಿವೃತ ವಪುಷಂ ಡಾಕಿನೀಂ
ವೀರಚಂಡಾಂ॥
ರಕ್ತವರ್ಣಾಃ॥

೬. ಅಥ ಆಜ್ಞಾಪೀಠಸ್ಥ ಹಾಕಿನೀಧ್ಯಾನಂ॥
ಭ್ರೂಮಧ್ಯೇ ಬಿಂದುಪದ್ಮೇ ದ್ವಿದಳವಿಲಸಿತೇ ಶುಭ್ರವರ್ಣಾಂ
ಕರಾಬ್ಜೈರ್ಬಿಭ್ರಾಣಾಂ ಜ್ಞಾನಮುದ್ರಾಂ ಡಮರುಕಮಮಲಂ
ಚಾಕ್ಷಮಾಲಾಂ
ಕಪಾಲಂ। ಷಡ್ವಕ್ತ್ರಾಂ ಮಜ್ಜಸಂಸ್ಥಾಂ ತ್ರಿಣಯನಲಲಿತಾಂ

ಹಂಸವತ್ಯಾದಿ
ಯುಕ್ತಾಂ ಹರಿದ್ರಾನ್ನೇ ಪ್ರಸಕ್ತಾಂ ಸಕಲಸುರನತಾಂ ಹಾಕಿನೀಂ
ಭಾವಯೆತ್ತಾಂ॥
ಶ್ವೇತವರ್ಣಃ॥

೭. ಅಥ ಜಾಲಂಧರಪೀಠಸ್ಥಯಾಕಿನೀಧ್ಯಾನಂ।
ಮುಂಡವ್ಯೋಮಸ್ಥಪದ್ಮೇ ಸಕಲದಳಯುತೇ ಯಾಕಿನೀಂ ಭೈರವೀಂ
ತಾಂ ಯಕ್ಷಿಣ್ಯಾದ್ಯಾಂ ಸಮಸ್ತಾಯುಧಲಸಿತಕರಾಂ ಸರ್ವವರ್ಣಾಂ
ಸಮಷ್ಟಿಂ
ರಾದೀನಾಂ ಸರ್ವವಕ್ತ್ರಾಂ ಸಕಲಸುಖಕರೀಂ ಸರ್ವಧಾತುಸ್ವರೂಪಾಂ
ಸರ್ವಾನ್ನೇ ಸಕ್ತಚಿತ್ತಾಂ ಪರಶಿವರಶಿ(ಪಿ)ಕಾಂ ಭಾವಯೇದ್ಯಾಕಿನೀಂ
ತಾಂ॥
ಚಿತ್ರವರ್ಣಃ॥

ಈ ಏಳು ಚಕ್ರ-ಪೀಠಗಳ ವಿವರಗಳಲ್ಲಿ ಶಕ್ತಿಯ ಹೆಸರು, ಸ್ಥಾನ, ದಳಸಂಖ್ಯೆ, ಪರಿವಾರ, ಆಯುಧಗಳು ಮತ್ತು ಕೈಗಳು, ವರ್ಣ, ತಲೆಗಳ ಸಂಖ್ಯೆ, ಧಾತು, ರುಚಿಸುವ ಅನ್ನ ಇವುಗಳನ್ನು ಕೆಳಗೆ ಆದೇ ಕ್ರಮದಲ್ಲಿ ಕೊಡಲಾಗಿದೆ.

೧. ಮೂಲಾಧಾರಪೀಠದಲ್ಲಿ ಸಾಕಿನೀ; ನಾಲ್ಕು ದಳಗಳು(ಶ್ರುತಿದಳ); ಐದು ಮುಖಗಳು; ಮೂರು ಕಣ್ಣುಗಳು, ಬಂಗಾರದ ಬಣ್ಣ; ಅಸ್ಥಿಧಾತು; ನಾಲ್ಕುಕೈಗಳು; ಪಾಶ, ಕಮಲ, ಪುಸ್ತಕ, ಜ್ಞಾನಮುದ್ರೆ; ಮುದ್ಗಾನ್ನ.

೨. ಸ್ವಾಧಿಷ್ಠಾನಪೀಠದಲ್ಲಿ ಕಾಕಿನೀ; ಆರು ದಳಗಳು(ರಸದಳ); ನಾಲ್ಕು ಮುಖಗಳು; ಮೂರು ಕಣ್ಣುಗಳು; ಹಳದಿ ಬಣ್ಣ; ಮೇದೋಧಾತು; ತ್ರಿಶೂಲ (ಅಥವಾ ಅಗ್ನಿ, ತ್ರಿಶಿಖಿ), ಪಾಶ (ಗುಣ), ಕಪಾಲ, ಅಭಯಮುದ್ರೆಯನ್ನು ಹಿಡಿದ ನಾಲ್ಕು ಕೈಗಳು; ದಧ್ಯನ್ನ.

೩. ಮಣಿಪೂರ ಪೀಠದಲ್ಲಿ (ನಾಭಿಯಲ್ಲಿ) ಲಾಕಿನೀ; ಹತ್ತುದಳಗಳು ('ದಿಕ್ಪತ್ರಪದ'); ಮೂರು ಮುಖಗಳು; ಮೂರು ಕಣ್ಣುಗಳು; ಕಪ್ಪುಬಣ್ಣ; ಮಾಂಸಧಾತು; ನಾಲ್ಕು ಕೈಗಳು; ಶಕ್ತಿ, ವಜ್ರ (ದಂಭೋಳಿ), ದಂಡ, ಅಭಯ ಮುದ್ರೆ; ಗುಡಾನ್ನ. ಉಗ್ರರೂಪ.

೪. ಅನಾಹತಪೀಠದಲ್ಲಿ (ಹೃತ್ಪದ್ಮದಲ್ಲಿ) ರಾಕಿನೀ; ಹನ್ನೆರಡು ದಳಗಳು (ಭಾನುಪತ್ರ); ಎರಡು ಮುಖಗಳು; ಮೂರು ಕಣ್ಣುಗಳು; ನೀಲಿಗಪ್ಪು(ಶ್ಯಾಮ) ಬಣ್ಣ; ರಕ್ತಧಾತು; ನಾಲ್ಕು ಕೈಗಳು; ಟಂಕ, ಶೂಲ, ಕಪಾಲ, ಡಮರು; ಶುದ್ಧರಕ್ತಾನ್ನ, ಕೋರೆದಾಡೆಗಳು.

೫. ವಿಶುದ್ಧಪೀಠದಲ್ಲಿ (ಗಂಟಲ ಗುಳಿಯಲ್ಲಿ, ಗ್ರೀವಾಕೂಪ) ಢಾಕಿನೀ; ಹದಿನಾರು ದಳಗಳು, (ಸ್ವರದಳ); ಒಂದು ಮುಖ; ಮೂರು ಕಣ್ಣುಗಳು; ಕೆಂಪುಬಣ್ಣ; ತ್ವಗ್‌ಧಾತು; ನಾಲ್ಕು ಕೈಗಳು; ಖಟ್ವಾಂಗ, ಕಪಾಲ, ಅಗ್ನಿ (ತ್ರಿಶಿಖಿ); ಗುರಾಣಿ; ಪಾಯಸಾನ್ನ.

೬. ಆಜ್ಞಾಪೀಠದಲ್ಲಿ (ಹುಬ್ಬುಗಳ ನಡುವೆ, ಭ್ರೂಮಧ್ಯ) ಹಾಕಿನೀ; ಎರಡು ದಳಗಳು (ದ್ವಿದಳ); ಆರು ಮುಖಗಳು; ಮೂರು ಕಣ್ಣುಗಳು; ಬಿಳಿ ಬಣ್ಣ(ಶುಭ್ರವರ್ಣ); ಮಜ್ಜಧಾತು; ನಾಲ್ಕು ಕೈಗಳು; ಚಿನ್ಮುದ್ರೆ; ಡಮರು, ಕಮಲ, ಜಪಮಾಲೆ, ಹರಿದ್ರಾನ್ನ

೭. ಜಾಲಂಧರಪೀಠದಲ್ಲಿ (ನೆತ್ತಿಯ ಮೇಲೆ ಸಹಸ್ರಾರ, ಮುಂಡವ್ಯೋಮ) ಸಕಲದಳಗಳು; ಸರ್ವವಕ್ತ್ರಗಳು; ಸರ್ವವರ್ಣ; ಸರ್ವಧಾತು; ಸರ್ವಾಯುಧ; ಸರ್ವಾನ್ನ, ಸಮಷ್ಟಿರೂಪ.

ಮೇಲೆ ಕಾಣಿಸಿರುವ ವಿವರಗಳಲ್ಲದೆ ತಂತ್ರಶಾಸ್ತ್ರಗ್ರಂಥಗಳಲ್ಲಿ ಮೊದಲ ಆರು ಚಕ್ರಗಳಿಗೆ ಕ್ರಮವಾಗಿ ತತ್ವ, ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಪ್ರಾಣವಾಯು, ಬೀಜಾಕ್ಷರ, ದೇವತೆ, ವಾಹನಸಂಕೇತಗಳನ್ನೂ ಹೀಗೆ ಹೇಳುವುದಿದೆ: (೧)ಪೃಥ್ವೀ, ಗಂಧ, ಪಾದ, ಅಪಾನ, ಲಂ, ಬ್ರಹ್ಮ, ಐರಾವತ; (೨) ಜಲ, ರಸ, ಪಾಣಿ, ಪ್ರಾಣ, ವಂ, ವಿಷ್ಣು, ಮಕರ; (೩) ತೇಜಸ್ಸು(ಅಗ್ನಿ), ದರ್ಶನ (ಕಣ್ಣು) ಪಾಯು, ಸಮಾನ, ರಂ, ರುದ್ರ, ವೃಷಭ(ಅಥವಾ ಮೇಷ); (೪) ವಾಯು, ಸ್ಪರ್ಶ, ಉಪಸ್ಥಾ, ವ್ಯಾನ, ಯಂ, ಈಶ್ವರ, ಕೃಷ್ಣಮೃಗ, (೫) ಆಕಾಶ, ಶ್ರವಣ, ವಾಕ್, ಉದಾನ, ಹಂ, ಸದಾಶಿವ, ಆರು ದಂತಗಳ ಬಿಳಿಯಾನೆ. ಈ ವರ್ಣನೆಯಲ್ಲಿ ಶಕ್ತಿಯರು ಕ್ರಮವಾಗಿ ಡಾಕಿನೀ, ರಾಕಿನೀ, ಲಾಕಿನೀ, ಕಾಕಿನೀ, ಶಾಕಿನೀ ಮತ್ತು ಡಾಕಿನಿಯರು. ಮುಮ್ಮಡಿಯವರ ಶಕ್ತಿನಿರ್ದೇಶನ ಬೇರೆಯಾಗಿದೆ. ನೆತ್ತಿಯ ಮೇಲೆ ನಾಲ್ಕು ಅಂಗುಲ ದೂರದಲ್ಲಿರುವ ಸಹಸ್ರಾರವನ್ನು ಉಷ್ಣೀಷಕಮಲವೆಂದೂ ಆದ್ಯಾಶಕ್ತಿಯೆಂದೂ ಕರೆಯುತ್ತಾರೆ. ಇಲ್ಲಿರುವುದು ಸಹಸ್ರದಳಕಮಲ. ಇದು ಎಲ್ಲ ತತ್ವಗಳ, ಎಲ್ಲ ಇಂದ್ರಿಯಗಳ, ಎಲ್ಲ ಪ್ರಾಣವಾಯುಗಳ, ಎಲ್ಲ ವರ್ಣಮಾಲೆಯ,



ಬ್ರಾಹ್ಮೀ



ಬ್ರಾಹ್ಮೀ (ಬ್ರಹ್ಮಾಣೀ)


ಎಲ್ಲ ದೇವತೆಗಳ, ಎಲ್ಲ ಸಂಕೇತಗಳ ಸಮಷ್ಟಿರೂಪ. ಇದನ್ನೇ ಇಲ್ಲಿ ಜಾಲಂಧರಪೀಠವೆಂದು ಕರೆದಿದ್ದಾರೆ.


(೮) ಸಪ್ತ ಮಾತೃಕೆಯರು

ಶಾಕ್ತ-ತಾಂತ್ರಿಕಸಂಪ್ರದಾಯಗಳಲ್ಲಿ ಸಪ್ತಮಾತೃಕೆಯರ ಆರಾಧನೆ ವಿಶಿಷ್ಟವಾದುದು. ಏಳು ಕಲ್ಲುಗಳನ್ನು ಸಾಲಾಗಿ ಇರಿಸಿಕೊಂಡು ಏಳು ಹೆಂಗಳೆಯರೆಂದು ಪೂಜಿಸುವುದು ಜಾನಪದನೆಲೆಯಲ್ಲಿ ಹರಡಿಕೊಂಡಿದೆ. ಪ್ರಪಂಚದ ಹಲವು ನಾಡುಗಳಲ್ಲಿ ಏಳು ಕನ್ನಿಕೆಯರ ಕತೆಗಳು ಬಳಕೆಯಲ್ಲಿವೆ. ನಮ್ಮಲ್ಲಿ ಕ್ರಿಸ್ತಾಬ್ದದ ಹಿಂದಿನ ಶತಕಗಳಿಂದಲೂ ಸಪ್ತಮಾತೃಕೆಯರ ಪೂಜೆ ನಡೆದುಬಂದಿದೆ. ಬೃಹತ್ಸಂಹಿತೆ (೫೯, ೧೯); ಭರತನ ನಾಟ್ಯಶಾಸ್ತ್ರ(೩, ೬೬); ಗೋಭಿಲಸ್ಮೃತಿ; ಕೃತ್ಯರತ್ನಾಕರ; ಪುರಾಣಗಳು; ಪ್ರಪಂಚಸಾರ, ಯೋಗಿನೀಹೃದಯ ಮೊದಲಾದ ತಂತ್ರಗ್ರಂಥಗಳು ಇಲ್ಲೆಲ್ಲ ಸಪ್ತಮಾತೃಕೆಯರ ಉಲ್ಲೇಖ ಬರುತ್ತದೆ. ಮಾರ್ಕಂಡೇಯಪುರಾಣದ ಪ್ರಕಾರ (ದೇವೀ ಮಹಾತ್ಮ್ಯ, ೮೨, ೭) ಶುಂಭನೆಂಬ ರಾಕ್ಷಸನು ದೇವತೆಗಳ ಮೇಲೆರಗಿಬಂದಾಗ ದೇವತೆಗಳ ದೇಹಗಳಿಂದ ಹೊರಹೊಮ್ಮಿ ಕಾಣಿಸಿಕೊಂಡವರು ಈ ಶಕ್ತಿಯರು. ಸುಪ್ರಭೇದಾಮಗಮವು (ಪಟಲ ೪೨) ಬ್ರಹ್ಮನು ನಿರ್ಋತನೆಂಬ ಅಸುರನನ್ನು ಕೊಲ್ಲಲು ಹೊರಟಾಗ ಈ ಶಕ್ತಿಯರು ಬ್ರಹ್ಮನಿಂದ



ಮಹೇಶ್ವರೀ





ಹೊರಬಂದರೆಂದು ಹೇಳುತ್ತದೆ. ವಾಮನ ಪುರಾಣದ (೩೦, ೩) ಕತೆಯಂತೆ ಚಂಡಿಕೆಯ ಮೈಯಿಂದಲೇ ಹೊರಹೊಮ್ಮಿ ಅವಳಲ್ಲಿಯೇ ಮರೆಯಾದವರು ಇವರು ('ಮಯ್ಯೇವ ವಿಶನ್ತ್ಯಃ ಮದ್ವಿಭೂತಯಃ'). ಮತ್ಸ್ಯಪುರಾಣದ ಪ್ರಕಾರ (೧೭೯, ೯-೩೨) ಅವಂತಿವಿಷಯಕ್ಕೆ ಸೇರಿದ್ದ ಮಹಾಕಾಲವನದಲ್ಲಿ ಶಿವನು ಅಂಧಕಾಸುರನನ್ನು ಸಂಹರಿಸಲು ಉದ್ಯುಕ್ತನಾದಾಗ ಶಿವನು ಈ ಮಾತೃಕಾಶಕ್ತಿಯರನ್ನು ನಿರ್ಮಿಸಿದನು. ವರಾಹಪುರಾಣವು ಇದೇ ಕತೆಯನ್ನು ಹೇಳುತ್ತ ಶಿವನ ಬಾಯಿಂದ ಬೆಂಕಿಯು ಹೊರಹೊರಟು ಅದರಲ್ಲಿ ಯೋಗೇಶ್ವರಿಯೆಂಬ ಶಕ್ತಿಯು ಕಾಣಿಸಿಕೊಂಡಳೆಂದೂ ಈ ಶಕ್ತಿದೇವತೆಗೆ ನೆರವಾಗಲು ಇತರ ಏಳು ದೇವತೆಗಳು ತಂತಮ್ಮ ಶಕ್ತಿಯರನ್ನು ಕಳುಹಿಸಿದರೆಂದೂ ಅವರೇ ಸಪ್ತಮಾತೃಕೆಯರೆಂದೂ ವಿವರಿಸುತ್ತದೆ. ಯೋಗೇಶ್ವರಿಯನ್ನೂ ಸೇರಿಸಿ ಎಣಿಸಿದಾಗ ಅಷ್ಟಶಕ್ತಿಯರು. ಬ್ರಹ್ಮಾಂಡಪುರಾಣದ ಪ್ರಕಾರ ಮಹಾಲಕ್ಷ್ಮಿ ಎಂಟನೆಯ ಮಾತೃಕೆ. ಇತರ ಒಕ್ಕಣೆಗಳಲ್ಲಿ ನಾರಸಿಂಹಿ, ಚರ್ಚಿಕೆ, ಚಂಡಿಕೆ, ವೈನಾಯಕಿ ಇವರು ಮಹಾಲಕ್ಷ್ಮಿಯ ಬದಲಿಗೆ ಬಂದೊದಗುತ್ತಾರೆ.

ಶ್ರೀ ತತ್ತ್ವನಿಧಿಯಲ್ಲಿರುವ ಸಪ್ತಮಾತೃಕೆಯರ ವರ್ಣನೆಯನ್ನು 'ನೃಸಿಂಹಪ್ರಸಾದ' ವೆಂಬ ಗ್ರಂಥದಿಂದ ಎತ್ತಿಕೊಳ್ಳಲಾಗಿದೆ.

'ಅಥ ಸಪ್ತಮಾತೃಕಾದೇವತಾಸ್ವರೂಪಾಣಿ ನೃಸಿಂಹಪ್ರಾಸಾದೆ।


೧. **ತತ್ರ ಬ್ರಾಹ್ಮೀ ಧ್ಯಾನಂ।**
ಚತುರ್ವಕ್ತ್ರಾ ಷಡ್ಭುಜಾ ಹಂಸಸಂಸ್ಥಿತಾ ।
ಪಿಂಗಾಭಾ ಭೂಷಣೋಪೇತಾ
ಮೃಗಚರ್ಮೋತ್ತರೀಯಕಾ। ವರಂ ಸೂತ್ರಂ ಸ್ರುವಂ ಧತ್ತೇ
ದಕ್ಷಬಾಹುತ್ರಯೇ ಕ್ರಮಾತ್। ವಾಮೇತು ಪುಸ್ತಕಂ ಕುಂಡೀಂ
ಬಿಭ್ರತೀ ಚಾಭಯಪ್ರದಂ।
ಪೀತವರ್ಣಃ ॥೧॥

೨. **ಅಥ ಮಾಹೇಶ್ವರೀ ಧ್ಯಾನಂ।**
ಮಹೇಶ್ವರೀ ವೃಷಾರೂಢಾ ಪಂಚವಕ್ತ್ರಾ ತ್ರಿಲೋಚನಾ।
ಶ್ವೇತವರ್ಣಾ ದಶಭುಜಾ ಚಂದ್ರರೇಖಾವಿಭೂಷಿತಾ ।ಖಡ್ಗಂ
ವಜ್ರಂ ತ್ರಿಶೂಲಂ ಚ ಪರಶುಂ ಚಾಭಯಂ ವರಂ ।ಪಾಶಂ ಘಂಟಾಂ
ತಥಾ ನಾಗಮಂಕುಶಂ ಬಿಭ್ರತೀ ಕರೈಃ।
ಶ್ವೇತವರ್ಣಃ ॥೨॥

೩. **ಅಥ ಕೌಮಾರೀ ಧ್ಯಾನಂ।**
ಷಡಾನನಾ ತು ಕೌಮಾರೀ ಪಾಟಲಾಭಾ ಸುಶೀಲಕಾ।
ರವಿಬಾಹುರ್ಮಯೂರಸ್ಥಾ
ವರದಾ ಶಕ್ತಿಧಾರಿಣೀ । ಪತಾಕಾಂ ಬಿಭ್ರತೀ ದಂಡಂ ಪಾತ್ರಂ
ಬಾಣಂ ಚ ದಕ್ಷಿಣೇ।
ವಾಮೇ ಚಾಪಮಧೋ ಘಂಟಾಂ ಕಮಲಂ ತು ಕುಕ್ಕುಟಂ
ತಥಾ । ಪರಶುಂ
ಬಿಭ್ರತೀ ಚೈವ ತದಧಸ್ತ್ವಭಯಾನ್ವಿತಾ।



ಮಾಹೇಶ್ವರಿ



ಕೌಮಾರೀ



ಕೌಮಾರೀ



ಕೌಮಾರೀ

೪. ಅಥ ವೈಷ್ಣವೀಧ್ಯಾನಂ।
ವೈಷ್ಣವೀ ತಾರ್ಕ್ಷ್ಯಗಾ ಶ್ಯಾಮಾ ಷಡ್ಭುಜಾ ವನಮಾಲಿನೀ।
ವರದಾ ಗದಿನೀ ದಕ್ಷೇ ಬಿಭ್ರತೀ ಚ ಕರೇಂಬುಜಂ।
ಶಂಖಚಕ್ರಾಭಯಾನ್ವಾಮೇ ಸಾ ಚೇಯಂ ವಿಲಸದ್ಭುಜಾ।
ನೀಲವರ್ಣಃ ॥೪॥


೫. ಅಥ ವಾರಾಹೀಧ್ಯಾನಂ (।)
ಕೃಷ್ಣವರ್ಣಾ ತು ವಾರಾಹೀ ಮಹಿಷಸ್ಥಾ ಮಹೋದರೀ।
ವರದಾ ದಂಡಿನೀ ಖಡ್ಗಂ ಬಿಭ್ರತೀ ದಕ್ಷಿಣೇ ಕರೇ।
ಖೇಟಪಾತ್ರಾಭಯಾನ್ವಾಮೇ ಸೂಕರಾಸ್ಯಾ ಲಸದ್ಭುಜಾ।
ಕೃಷ್ಣವರ್ಣಃ ॥೫॥

೬. ಅಥ ಐಂದ್ರೀ ಧ್ಯಾನಂ ॥
ಐಂದ್ರೀ ಸಹಸ್ರದೃಕ್ಸೌಮ್ಯಾ ಹೇಮಾಭಾ ಗಜಸಂಸ್ಥಿತಾ।
ವರದಾ ಸೂತ್ರಿಣೇ ವಜ್ರಂ ಬಿಭ್ರತ್ಯೂರ್ಧ್ವಂ ತು ದಕ್ಷಿಣೇ।
ವಾಮೇ ತು ಕಮಲಂ ಪಾತ್ರಂ ಹ್ಯಭಯಂ ತದಧಃ ಕರೇ।
ಕನಕವರ್ಣಃ॥೬॥

೭. ಅಥ ಚಾಮುಂಡಾಧ್ಯಾನಂ।
ಚಾಮುಂಡಾ ಪ್ರೇತಗಾ ಕೃಷ್ಣಾ ವಿಕೃತಾ ಚಾಹಿಭೂಷಣಾ
ದಂಷ್ಟ್ರಾಳಾ ಕ್ಷೀಣದೇಹಾ ಚ ಗರ್ತಾಕ್ಷೀ ಕಾಮರೂಪಿಣೀ
ದಿಗ್ಬಾಹು ಕ್ಷಾಮಕುಕ್ಷಿಶ್ಚ ಮುಸಲಂ ಚ(ಛ)ತ್ರ ಚಾಮರೇ)।
ಅಂಕುಶಂ ಬಿಭ್ರತೀ ಖಡ್ಗಂ ದಕ್ಷಿಣೇ ಚಾಥ ವಾಮಕೆ।
ಖೇಟಂ ಪಾಶಂ ಧನುರ್ದಂಡಂ ಕುಠಾರಂ ಚೇತಿ ಬಿಭ್ರತೀ।
ಕೃಷ್ಣವರ್ಣಃ ॥೭॥

೮. ಅಥ ಚಂಡಿಕಾಧ್ಯಾನಂ । ನೃಸಿಂಹಪ್ರಾಸಾದೇ॥
ಚಂಡಿಕಾ ಶ್ವೇತವರ್ಣಾ ಸಾ ಶಿವರೂಪಾ ಚ ಸಿಂಹಗಾ।
ಜಟಿಲಾ ವರ್ತುಳತ್ರ್ಯಕ್ಷಾ ವರದಾ ಶೂಲಧಾರಿಣೀ।
ಕತ್ರಿ(ತ್ರಿ)ಕಾಂ ಬಿಭ್ರತೀ ದಕ್ಷೆ ಪಾಶಪಾತ್ರಾಭಯಾನ್ವಿತಾ।
ಶ್ವೇತವರ್ಣಃ॥

ಮೇಲಿನ ಒಕ್ಕಣೆಯಲ್ಲಿ ಮೊದಲು ಏಳು ಮಾತೃಕೆಯರ ವರ್ಣನೆಯನ್ನು 'ನೃಸಿಂಹಪ್ರಾಸಾದ' ಎಂಬ ಗ್ರಂಥದಿಂದ ಎತ್ತಿಕೊಂಡು ಕಡೆಯಲ್ಲಿ ಅಷ್ಟಮಾತೃಕೆಯರ ಎಣಿಕೆಯಲ್ಲಿ ಯೋಗೇಶ್ವರಿಯ ಬದಲು ಬರುವ ಚಂಡಿಕೆಯನ್ನು ಅದೇ ಗ್ರಂಥದಿಂದ ಬಣ್ಣಿಸಲಾಗಿದೆ. ಸಪ್ತಮಾತೃಕೆಯರಿಗೂ ನವದುರ್ಗೆಯರಿಗೂ ನಡುವೆ ಚಂಡಿಕೆಯ ಧ್ಯಾನ ಬಂದಿರುವುದನ್ನು ಗಮನಿಸಬೇಕು; ಈ ದೇವತೆಯನ್ನು ಅಷ್ಟಮ ಮಾತೃಕೆಯೆಂದೇ ಪರಿಗಣಿಸಬೇಕೆಂಬುದು ಗ್ರಂಥಕಾರರ ಉದ್ದೇಶವಿರುವಂತೆ ತೋರುತ್ತದೆ. ಲಲಿತೋಪಾಖ್ಯಾನದಲ್ಲಿರುವ ಅಷ್ಟಮಾತೃಕೆಯರ ನಿರ್ದೇಶನದಲ್ಲಿ ಚಂಡಿಕೆಗೆ ಬದಲಾಗಿ ಮಹಾಲಕ್ಷ್ಮಿಯನ್ನು ಗ್ರಹಿಸಿದ್ದಾರೆ. ಮಾತೃಕೆಯರೆಂಬ ಶಕ್ತಿಯರ ಹೆಸರುಗಳೂ ರೂಪನಿರ್ದೇಶನವೂ ಹಲವು ಪುರುಷದೇವತೆಗಳ ನಂಟನ್ನು ಸೂಚಿಸುತ್ತವೆ: ಬ್ರಾಹ್ಮೀ ಬ್ರಹ್ಮನ ಶಕ್ತಿ, ವೈಷ್ಣವೀ ವಿಷ್ಣುವಿನ ಶಕ್ತಿ, ಕೌಮಾರಿ ಕುಮಾರನ (ಎಂದರೆ ಸುಬ್ರಹ್ಮಣ್ಯನ)



ವೈಷ್ಣವೀ



ವೈಷ್ಣವೀ - ಮಾತೃಕೆ



ವೈಷ್ಣವೀ

ಶಕ್ತಿ, ಇಂದ್ರಾಣಿ(ಐಂದ್ರೀ) ಇಂದ್ರನ ಶಕ್ತಿ ಇತ್ಯಾದಿ. ಅಂಧಕಾಸುರಸಂಹಾರದ ಸಂದರ್ಭದಲ್ಲಿ ಶಿವನ ಬಾಯಿಂದ ಆವಿರ್ಭವಿಸಿದ ಯೋಗೇಶ್ವರಿಗೆ ನೆರವಾಗಲೆಂದು ಕೆಲವು ದೇವತೆಗಳು ತಂತಮ್ಮ ಶಕ್ತಿಗಳನ್ನು ಸೃಷ್ಟಿಮಾಡಿದ ಹಿನ್ನೆಲೆ.

ಶ್ರೀತತ್ವನಿಧಿಯ ಪ್ರಕಾರ

೧. ಬ್ರಾಹ್ಮೀಮಾತೃಕೆಯು ಬ್ರಹ್ಮನಂತೆ ನಾಲ್ಕು ಮೊಗಗಳುಳ್ಳವಳು (ನಾಲ್ಕು ವೇದಗಳ ಸಂಕೇತವಾಗಿ); ಆರು ತೋಳುಗಳು (ಷಡಂಗಗಳ ಸಂಕೇತ); ಹಂಸದ ಮೇಲೆ ಕುಳಿತವಳು. ಹಳದಿ ಮೈಬಣ್ಣ; ಕೃಷ್ಣಾಜಿನವನ್ನು ಹೊಂದ್ದಿದ್ದಾಳೆ. ಯಜ್ಞಾಯುಧಗಳಾದ ಸ್ರುಕ್‌ಸ್ರುವಗಳನ್ನೂ ಸಾರಸ್ವತ ಸಂಕೇತಗಳಾದ ಪುಸ್ತಕ, ಅಕ್ಷಮಾಲೆ, ಕುಂಡಿಕೆಗಳನ್ನೂ, ಅಭಯ ಮುದ್ರೆಯನ್ನೂ ಧರಿಸಿದ್ದಾಳೆ.


೨. ಮಾಹೇಶ್ವರಿಯು ಮಹೇಶ್ವರನಂತೆಯೇ ಬಸವನನ್ನೇರಿ ಕುಳಿತಿದ್ದಾಳೆ; ಅವನಂತೆಯೇ ಐದು ಮೊಗಗಳು (ಈಶಾನ, ಅಘೋರ, ತತ್ಪುರುಷ, ವಾಮದೇವ, ಸದ್ಯೋಜಾತ ಎಂಬ ಐದು ರೂಪಗಳ ಸಂಕೇತವಾಗಿ). ಒಂದೊಂದು ಮೊಗದಲ್ಲೂ ಮೂರು ಕಣ್ಣುಗಳು (ಸೋಮ, ಸೂರ್ಯ, ಅಗ್ನಿ); ಹತ್ತು ಕೈಗಳು(ದಶದಿಕ್ಕುಗಳು); ಕೈಗಳಲ್ಲಿ ಕತ್ತಿ, ವಜ್ರಾಯುಧ, ತ್ರಿಶೂಲ, ಕೊಡಲಿ, ಪಾಶ, ಘಂಟೆ, ನಾಗ, ಅಂಕುಶ, ಅಭಯವರದ ಮುದ್ರೆಗಳು; ತಲೆಯ ಮೇಲೆ ಚಂದ್ರರೇಖೆ.

೩. ಕೌಮಾರಿಯು ದೇವಸೇನಾಪತಿಯಾದ ಕಾರ್ತಿಕೇಯನಂತೆ ಆರು ಮೊಗಗಳುಳ್ಳವಳು, ಹನ್ನೆರಡು ಕೈಗಳು; ನವಿಲನ್ನೇರಿ ಕುಳಿತವಳು. ಕೈಗಳಲ್ಲಿ ಶಕ್ತ್ಯಾಯುಧ, ಪತಾಕೆ, ದಂಡ, ಪಾತ್ರೆ, ಬಿಲ್ಲು, ಘಂಟೆ, ಕಮಲ, ಕೋಳಿ, ಕೊಡಲಿ, ಬಾಣ, ವರದಾಭಯ ಚಿಹ್ನೆಗಳು; ಪಾಟಲವರ್ಣ.

೪. ವೈಷ್ಣವೀಮಾತೃಕೆಯು ವಿಷ್ಣುವಿನಂತೆ ನೀಲವರ್ಣದವಳು, ಗರುಡನ ಮೇಲೆ ಕುಳಿತವಳು, ವನಮಾಲೆಯನ್ನು ಧರಿಸಿದವಳು. ಆರು ಭುಜಗಳು, ಕೈಗಳಲ್ಲಿ ಶಂಖ, ಚಕ್ರ, ಗದೆ, ಪದ್ಮ, ವರದಾಭಯ ಮುದ್ರೆಗಳು.

೫. ವಾರಾಹಿಯು ವಿಷ್ಣುವಿನ ವರಾಹಾವತಾರದ ಶಕ್ತಿರೂಪಿಣಿ. ಕಪ್ಪು ಬಣ್ಣದ ಮೈ, ಹಂದಿಯ ಮೋರೆ, ದೊಡ್ಡ ಹೊಟ್ಟೆ, ಕೋಣವನ್ನೇರಿ ಕುಳಿತವಳು. ಆರು ಕೈಗಳು; ಬಲಭಾಗದಲ್ಲಿ ವರದಮುದ್ರೆ, ದಂಡ, ಕತ್ತಿ; ಎಡಭಾಗದಲ್ಲಿ ಅಭಯ ಮುದ್ರೆ, ಪಾತ್ರೆ, ಗುರಾಣಿ; ಬಂಗಾರದ ಮೈಬಣ್ಣ.

೬. ಐಂದ್ರೀಮಾತೃಕೆಯು ಇಂದ್ರನಂತೆ ಐರಾವತವನ್ನೇರಿದವಳು; ಮೈಯೆಲ್ಲ ಕಣ್ಣಾದವಳು, ಸೌಮ್ಯಸ್ವಭಾವ. ಆರು ಕೈಗಳು; ವರದ ಹಸ್ತ, ಪಾಶ, ವಜ್ರಾಯುಧ, ಕಮಲ, ಪಾತ್ರೆ, ಅಭಯ ಹಸ್ತಗಳು.



ವಾರಾಹೀ



ವಾರಾಹೀ



ಇಂದ್ರಾಣೀ



ಇಂದ್ರಾಣೀ


೭. ಚಾಮುಂಡಿಯು ನಿರ್ಋತಿಯಂತೆ ಹೆಣದ ಮೇಲೆ ಕೂತವಳು, ಕಾಡುಕಪ್ಪುಬಣ್ಣ; ವಿಕೃತವಾದ ಮೈ, ಹಾವುಗಳೇ ಆಭರಣ. ಬಾಯಲ್ಲಿ ಕೋರೆದಾಡೆಗಳು; ಕಣ್ಣುಗಳು ಗುಳಿಗಳಲ್ಲಿ. ಕೃಶವಾದ ದೇಹ, ಸೊರಗಿದ ಹೊಟ್ಟೆ, ಹತ್ತು ಕೈಗಳು; ಒನಕೆ, ಛತ್ರ, ಚಾಮರ, ಅಂಕುಶ, ಕತ್ತಿ, ಗುರಾಣಿ, ಪಾಶ, ಬಿಲ್ಲು, ಬಾಣ, ಕೊಡಲಿಗಳನ್ನು ಹಿಡಿದವಳು.

೮. ಚಂಡಿಕೆಯು ಸ್ವತಂತ್ರ ಶಕ್ತಿ, ಬಿಳಿ ಬಣ್ಣದವಳು, ಸಿಂಹದ ಮೇಲೇರಿ ಸಾಗುವವಳು, ತಲೆಗೂದಲು ಜಟೆಕಟ್ಟಿದವಳು. ಗುಂಡಾದ ಮೂರು ಕಣ್ಣುಗಳು; ಆರು ಕೈಗಳು; ಅಭಯವರದಮುದ್ರೆಗಳು, ಶೂಲ, ಕರ್ತೃಕೆ (ಕತ್ತರಿ), ಪಾಶ, ಪಾತ್ರೆಗಳನ್ನು ಹಿಡಿದವಳು.

(೯) ನವದುರ್ಗೆಯರು

ಮುಂದಕ್ಕೆ ನವದುರ್ಗೆಯರ ಮೂರ್ತಿಲಕ್ಷಣ ಬಂದಿದೆ. ದುರ್ಗೆಯ ಬೇರೆ ಬೇರೆ ರೂಪಗಳನ್ನು ಪೂಜೆಗಾಗಿ ಕಲ್ಪಿಸಿಕೊಂಡಿರುವುದನ್ನು ದೇವೀ ಮಹಾತ್ಮ್ಯ, ರೂಪಮಂಡನ, ಅಪರಾಜಿತಸೂತ್ರ, ಸ್ಕಂದಯಾಮಳ, ಭವಿಷ್ಯೋತ್ತರಪುರಾಣ, ಬ್ರಹ್ಮಾಂಡಪುರಾಣಗಳಲ್ಲಿ ಕಾಣುತ್ತೇವೆ. ಹಲವು ಬಗೆಯ ದುರ್ಗಾಮೂರ್ತಿಗಳಿದ್ದರೂ ಒಂಬತ್ತು ಮೂರ್ತಿಗಳು ಮತ್ತೆ ಮತ್ತೆ ಬರುತ್ತವೆ. ಈ ಒಂಬತ್ತರಲ್ಲಿ ಸೇರುವ ದುರ್ಗಾರೂಪಗಳನ್ನು ಕುರಿತಂತೆ ಒಮ್ಮತವಿರದು. ಮತ್ತೆ ಒಂದೇ ದುರ್ಗಾ ಮೂರ್ತಿಯ ಪರಿವಾರಗಳಾಗಿ ಉಳಿದ ಎಂಟು ದುರ್ಗಾರೂಪಗಳನ್ನು ಎಣಿಸುವುದೂ ಉಂಟು. ಪ್ರಧಾನದುರ್ಗೆಯ ಸುತ್ತ ಅಗ್ನಿದುರ್ಗೆ, ಮಹಾದುರ್ಗೆ, ಜಲದುರ್ಗೆ, ಬ್ರಹ್ಮದುರ್ಗೆ, ವಿಷ್ಣುದುರ್ಗೆ, ರುದ್ರದುರ್ಗೆ, ವನದುರ್ಗೆಯರನ್ನು ಕಾಣಿಸುವುದೊಂದು ಸಂಪ್ರದಾಯವಿದೆ. ಬ್ರಹ್ಮಾಂಡಪುರಾಣದಲ್ಲಿ ಪ್ರಧಾನವಾಗಿ ಮೂರು ದುರ್ಗೆಯರನ್ನು ಹೇಳಿದೆ - ನೀಲಕಂಠೀ (ಇವಳೇ ಮಹಾಲಕ್ಷ್ಮೀ), ಕ್ಷೇಮಂಕರಿ ಮತ್ತು ಹರಸಿದ್ಧಿ. ಇವರೊಂದಿಗೆ ಪೂಜೆಗೊಳ್ಳುವವರು ರುದ್ರದುರ್ಗೆ, ವನದುರ್ಗೆ, ಅಗ್ನಿದುರ್ಗೆ, ಜಯದುರ್ಗೆ, ವಿಂಧ್ಯವಾಸಿನಿ ಮತ್ತು ರಿಪುಮಾರಿಣಿಯರು. ಇನ್ನೊಂದು ಪಟ್ಟಿಯ ಪ್ರಕಾರ, ನವದುರ್ಗೆಯರು ಕುಮಾರಿಕೆ, ತ್ರಿಮೂರ್ತಿ, ಕಲ್ಯಾಣೀ, ರೋಹಿಣಿ, ಕಾಳಿ, ಚಂಡಿಕೆ, ಶಾಂಭವಿ, ದುರ್ಗೆ ಮತ್ತು ಭದ್ರೆಯರು.

ಭವಿಷ್ಯೋತ್ತರಪುರಾಣದ ಪ್ರಕಾರ, ಪ್ರಧಾನ ದುರ್ಗೆಯನ್ನು ಸಿಂಹಾರೂಢೆಯಾಗಿ ಆಲೀಢಾಸನದಲ್ಲಿ ಕುಳಿತಂತೆ, ಮಹಿಷನನ್ನು ಕೊಲ್ಲುತ್ತಿರುವಂತೆ ಕಲ್ಪಿಸಿಕೊಂಡು, ಅವಳ ಸುತ್ತ ಎಂಟು ದಿಕ್ಕುಗಳಲ್ಲಿ ಎಂಟು ದುರ್ಗೆಯರನ್ನು ಚಿತ್ರಿಸಿಕೊಳ್ಳಬೇಕು. ಈ ಎಂಟು ದುರ್ಗೆಯರು ಕಮಲದ ಮೇಲೆ ಕುಳಿತಂತೆ ಕಾಣಬೇಕು. ಪ್ರಧಾನದುರ್ಗೆಗೆ ಹದಿನೆಂಟು



ಚಾಮುಂಡಿ



ಚಾಮುಂಡಿ



ಚಂಡಿಕಾ



ಬ್ರಾಹ್ಮ್ಯಾದಿ ಮಾತೃಕೆಯರು

ಕೈಗಳು; ಉಳಿದ ದುರ್ಗೆಯರು ಒಬ್ಬೊಬ್ಬರಿಗೂ ಹದಿನಾರು ಕೈಗಳು. ಪ್ರಧಾನ ದುರ್ಗೆಯನ್ನು ಇಲ್ಲಿ ಉಗ್ರಚಂಡಾ ಎಂದು ಕರೆಯಲಾಗಿದೆ; ಉಳಿದವರು ರುದ್ರಚಂಡಾ, ಚಂಡೋಗ್ರಾ, ಚಂಡನಾಯಿಕಾ, ಚಂಡಾ, ಚಂಡಾವತೀ, ಚಂಡರೂಪಾ, ಅತಿಚಂಡಿಕಾ. ಉಗ್ರಚಂಡಾ ಮೂರ್ತಿಯ ಮೈಬಣ್ಣ ಅಗ್ನಿಸನ್ನಿಭ; ಉಳಿದ ದುರ್ಗೆಯರದ್ದು ಬೇರೆ ಬೇರೆ ಬಣ್ಣಗಳು.

ಇದು ಶ್ರೀತತ್ತ್ವನಿಧಿಯಲ್ಲೂ ಕಾಣಿಸಿಗುತ್ತದೆ. ಆದರೆ ಇಲ್ಲಿ ಉಗ್ರಚಂಡಾದುರ್ಗೆಯ ಪರಿವಾರದ ದುರ್ಗೆಯರನ್ನು ರುದ್ರದುರ್ಗಾ, ಚಂಡದುರ್ಗಾ, ಶಶಿ(ಚಿ)ದುರ್ಗಾ, ಶೈವದುರ್ಗಾ, ಚಂಡೀ ದುರ್ಗಾ, ಕ್ರೂರದುರ್ಗಾ, ಅನುಚಂಡಿಕಾ, ನವಮಿ ಎಂದು ಕರೆಯಲಾಗಿದೆ. ಈ ಗ್ರಂಥದಲ್ಲಿ ಕಾಣುವ ಒಕ್ಕಣೆಯಂತೆ ಪ್ರಧಾನದುರ್ಗೆಯ ಹದಿನೆಂಟು ಕೈಗಳಲ್ಲಿ ಜಪಮಾಲೆ, ಗುರಾಣಿ, ಘಂಟೆ, ಕನ್ನಡಿ, ಬಿಲ್ಲು, ಧ್ವಜ, ಡಮರು, ಪಾಶ, ತರ್ಜನೀಮುದ್ರೆ ಇವನ್ನು ಎಡಗೈಗಳಲ್ಲೂ, ಶಕ್ತ್ಯಾಯುಧ, ಮುದ್ಗರ, ಶೂಲ, ವಜ್ರಾಯುಧ, ಶಂಖ, ಪದ್ಮ, ಶಲಾಕೆ, ಬಾಣ, ಚಕ್ರಗಳನ್ನು ಬಲಗೈಗಳಲ್ಲೂ ಹಿಡಿದಿದ್ದಾಳೆ. ಉಳಿದ ದುರ್ಗೆಯರು ತಮ್ಮ ಹದಿನಾರು ಕೈಗಳಲ್ಲಿ(ಬಾಣ, ಡಮರುಗಳನ್ನು ಬಿಟ್ಟು) ಇದೇ ಆಯುಧಗಳನ್ನು ಹಿಡಿದಿದ್ದಾರೆ. ಈ ಒಕ್ಕಣೆಗೆ ಆಕರ ಕಾರಣಾಗಮವೆಂದು ಕಾಣಿಸಿದ್ದಾರೆ; ಅದಕ್ಕೂ ಮೂಲ ಸ್ಕಂದಯಮಳವೆಂದೂ ತಿಳಿಸಿದ್ದಾರೆ.

ನವದುರ್ಗೆಯರನ್ನೂ ಪ್ರಧಾನದೇವತೆಗಳೆಂದೇ ಬಗೆಯುವಾಗ ಶ್ರೀತತ್ತ್ವನಿಧಿಯು ಮಾರ್ಕಂಡೇಯಪುರಾಣದ ದೇವೀಮಹಾತ್ಮ್ಯೆಯನ್ನನುಸರಿಸುತ್ತದೆ. 'ಶೈವಾಗಮೇ' ಎಂಬ ಆಕರ ಸೂಚನೆಯೇನೋ ಇದೆ; ಆದರೆ ಯಾವ ಶೈವಾಗಮ ಎಂಬ ನಿರ್ದೇಶನವಿರದು. ಮತ್ತು ನಮಗೆ ತಿಳಿದಿರುವ ಶೈವಾಗಮವೆಂಬ ಗ್ರಂಥದಲ್ಲಿ ನವದುರ್ಗೆಯರ ಪ್ರಸ್ತಾಪ ಕಾಣುವುದಿಲ್ಲ. ಇಲ್ಲಿ ಪಟ್ಟಿಮಾಡಿರುವ ದುರ್ಗಾರೂಪಗಳೂ, ಅವೆಲ್ಲವೂ ಕಪ್ಪು ಮೈಬಣ್ಣದವೆಂಬ ನಿರ್ದೇಶನವೂ ('ಸರ್ವಾಸಾಂ ಶ್ಯಾಮವರ್ಣಃ') ದೇವೀಮಾಹಾತ್ಮ್ಯೆಯಲ್ಲಿರುವ ವಿವರಗಳೇ.

ಶ್ರೀತತ್ತ್ವನಿಧಿಯಲ್ಲಿ ಮೊದಲು ಸಮಪ್ರಧಾನ ನವದುರ್ಗೆಯರನ್ನೇ ಉಲ್ಲೇಖಿಸಿ ಅನಂತರ ಅಷ್ಟದುರ್ಗಾಪರಿವೃತ ಪ್ರಧಾನದುರ್ಗೆಯನ್ನು ಬಣ್ಣಿಸಲಾಗಿದೆ.

'ಅಥ ನವದುರ್ಗಾಧ್ಯಾನಂ ಶೈವಾಗಮೇ। ಸರ್ವಾಸಾಂ ಶ್ವೇತವರ್ಣಃ।

(೧) 'ತತ್ರ ಶೈಲಪುತ್ರೀದುರ್ಗಾಧ್ಯಾನಂ।
ವಂದೇ ವಾಂಛಿತಲಾಭಾಯ ಚಂದ್ರಾರ್ಧಕೃತಶೇಖರಾಂ।
ವೃಷಾರೂಢಾಂ
ಶೂಲಧರಾಂ ಶೈಲಪುತ್ರೀಂ ಯಶಸ್ವಿನೀಂ॥೧॥

(ಶೈಲಪುತ್ರಿಯೆಂಬ ಮೊದಲನೆಯ ದುರ್ಗಾರೂಪವು ಎರಡು ಕೈಗಳದ್ದು; ಒಂದು ಕೈಯಲ್ಲಿ ಶೂಲವನ್ನು ಹಿಡಿದಂತೆ ಕಾಣಿಸಿದೆ; ತಲೆಯ ಮೇಲೆ ಅರ್ಧಚಂದ್ರ; ಎತ್ತಿನ ಮೇಲೆ ಕುಳಿತಿದ್ದಾಳೆ.



ಶೈಲಪುತ್ರಿ



ಬ್ರಹ್ಮಚಾರಿಣಿ

(೨) ಅಥ ಬ್ರಹ್ಮಚಾರಿಣೀದುರ್ಗಾಧ್ಯಾನಂ।
ದಧಾನಾ ಕರಪದ್ಮಾಭ್ಯಾಮಕ್ಷಮಾಲಾಕಮಂಡಲೂ।
ದೇವೀ ಪ್ರಸೀದತು ಮಯಿ ಬ್ರಹ್ಮಚಾರಿಣ್ಯನುತ್ತಮಾ॥೨॥

(ಬ್ರಹ್ಮಚಾರಿಣಿಯೆಂಬ ಎರಡನೆಯ ದುರ್ಗೆಯೂ ದ್ವಿಭುಜೆಯೇ. ಅವಳು ಕೈಗಳಲ್ಲಿ ಜಪಮಾಲೆ, ಕಮಂಡಲುಗಳನ್ನು ಹಿಡಿದಿದ್ದಾಳೆ)

(೩) 'ಅಥ ಚಂಡಖಂಡಾದುರ್ಗಾಧ್ಯಾನಂ।
ಅಂಡಜಪ್ರವರಾರೂಢಾ ಚಂಡಕೋಪಾರ್ಘಟೀಯುತಾ। ಪ್ರಸಾದಂ
ತನುತಾಂ ಮಹ್ಯಂ ಚಂಡಖಂಡೇತಿ ವಿಶ್ರುತಾ ॥೩॥

(ಚಂಡಖಂಡೆಯೆಂಬ ಮೂರನೆಯ ರೂಪದಲ್ಲಿ ಎದ್ದು ಕಾಣುವುದು ಕೋಪ. ಅವಳ ವಾಹನ ಹಾವು)

(೪) 'ಅಥ ಸ್ಕಂದಮಾತೃದುರ್ಗಾಧ್ಯಾನಂ।
ಪದ್ಮಾಸನಗತಾ ನಿತ್ಯಂ ಪದ್ಮಾಂಚಿತಕರದ್ವಯಾ। ಶುಭದಾಸ್ತು
ಸದಾ ದೇವೀ ಸ್ಕಂದಮಾತಾ ಯಶಸ್ವಿನೀ ॥೪॥

(ಸ್ಕಂದಮಾತಾ ಎನ್ನುವುದು ನಾಲ್ಕನೆಯ ದುರ್ಗಾರೂಪ. ಕಮಲದ ಮೇಲೆ ಕುಳಿತಂತೆ, ಎರಡೂ ಕೈಗಳಲ್ಲಿ ಕಮಲಗಳಂತೆ ಹಿಡಿದಿರುವಂತೆ ರೂಪ)



ಚಂಡಖಂಡಾದುರ್ಗಾ



ಸ್ಕಂದಮಾತಾ

(೫) 'ಅಥ ಕೂಷ್ಮಾಂಡದುರ್ಗಾ ಧ್ಯಾನಂ।
ಸುರಾಸಂಪೂರ್ಣಕಲಶಂ ರುಧಿರಾಪ್ಲುತಮೇವ ಚ ।
ಧಧಾನಾ ಹಸ್ತಪದ್ಮಾಭ್ಯಾಂ ಕೂಷ್ಮಾಂಡಾ ಶುಭದಾ(s)ಸ್ತು ಮೆ॥೫॥

(ಕೂಷ್ಮಾಂಡದುರ್ಗೆಯದು ತಾಂತ್ರಿಕರೂಪ. ಎರಡು ಕೈಗಳಲ್ಲಿ ಎರಡು ಪಾತ್ರೆಗಳನ್ನು ಹಿಡಿದಿದ್ದಾಳೆ; ಒಂದರಲ್ಲಿ ಹೆಂಡ ತುಂಬಿದೆ, ಇನ್ನೊಂದರಲ್ಲಿ ರಕ್ತ)

(೬) 'ಅಥ ಕಾತ್ಯಾಯನೀ ದುರ್ಗಾಧ್ಯಾನಂ।
ಚಂದ್ರಹಾಸೋಜ್ಜ್ವಲತರಾ ಶಾರ್ದೂಲವರವಾಹನಾ।
ಕಾತ್ಯಾಯನೀ ಶುಭಂ ದದ್ಯಾದ್ದೇವೀ ದಾನವಘಾತಿನೀ॥೬॥

(ಕಾತ್ಯಾಯನಿಯೆಂಬ ರೂಪದಲ್ಲಿ ದುರ್ಗೆಯು ಹುಲಿಯ ಮೇಲೆ ಕುಳಿತು, ಚಂದ್ರಹಾಸವೆಂಬ ಕತ್ತಿಯನ್ನು ಹಿಡಿದು, ರಾಕ್ಷಸರನ್ನು ಕೊಲ್ಲುವಳು)

(೭) 'ಅಥ ರಾತ್ರಿದುರ್ಗಾಧ್ಯಾನಂ।
ಕರಾಳರೂಪಾ ಕಾಲಾಬ್ಜಸಮಾನಾಕೃತಿವಿಗ್ರಹಾ।
ಕಾಳರಾತ್ರಿಶ್ಶುಭಂ ದದ್ಯಾದ್ದೇವೀ ಚಂಡಾಟ್ಟಹಾಸಿನೀ॥೭॥

(ಕಾಳರಾತ್ರಿಯನ್ನು ದುರ್ಗಾರೂಪವೆಂದು ಬಗೆದು ಕತ್ತಲೆಯ ಭೀಕರತೆಯನ್ನು ಕಾಣಿಸಿದ್ದಾರೆ)



ಕೂಷ್ಮಾಂಡ ದುರ್ಗಾ



ರಾತ್ರಿ ದುರ್ಗಾ



ಕಾತ್ಯಾಯನೀ ದುರ್ಗಾ



ಗೌರೀ ದುರ್ಗಾ

(೮) ಅಥ ಗೌರೀದುರ್ಗಾಧ್ಯಾನಂ।
ಶ್ವೇತಹಸ್ತಿಸಮಾರಾಢಾ ಶ್ವೇತಾಂಬರಧರಾ ಶುಚಿಃ।
ಮಹಾಗೌರೀ ಶುಭಂ ದದ್ಯಾನ್ಮಹಾದೇವಪ್ರಮೋದದಾ।।೮।।

(ಗೌರೀದುರ್ಗೆಯು ಬಿಳಿಯ ತೊಡುಗೆಯನ್ನುಟ್ಟು ಬಿಳಿಯಾನೆಯ ಮೇಲೆ ಕುಳಿತವಳು)

(೯) ಅಥ ಸಿದ್ಧಿದಾಯನೀ ದುರ್ಗಾ ಧ್ಯಾನಂ।
ಸಿದ್ಧಗಂಧರ್ವಯಕ್ಷಾದ್ಯೈರಸುರೈರಮರೈರಪಿ।
ಸೇವ್ಯಮಾನಾ ಸದಾ ಭೂಯಾತ್ಸಿದ್ಧಿ(ದ್ಧಿ)ದಾ ಸಿದ್ಧಿದಾಯಿನೀ।।೯।।

(ಸಿದ್ಧಿದಾಯಿನಿ ದುರ್ಗೆಯನ್ನು ಸಿದ್ಧರು, ಗಂಧರ್ವರು, ಯಕ್ಷರು, ಅಸುರರು ಎಲ್ಲರೂ ಸೇವಿಸುವರು)

ಮೇಲೆ ಕಾಣಿಸಿದ ಒಂಬತ್ತು ರೂಪಗಳು ಎರಡು ಕೈಗಳವು; ಕೆಲವು ಘೋರರೂಪದವಾದರೂ ಬಹುಮಟ್ಟಿಗೆ ಸೌಮ್ಯರೂಪಗಳೆ, ಘೋರವಾದವಕ್ಕೂ ಸಾತ್ವಿಪ್ರಯೋಜನವನ್ನೇ ಧ್ಯಾನ ಒಳಗೊಂಡಿದೆ. ಇವುಗಳ ತಾಂತ್ರಿಕ ಅನ್ವಯ ಕಡಮೆಯೇ. ಶಿಲ್ಪಶಾಸ್ತ್ರದಲ್ಲಿ ದ್ವಿಭುಜಮೂರ್ತಿಗಳು ಸಾತ್ವಿಕವೆಂದೂ, ಚತುರ್ಭುಜ, ಷಡ್ಭುಜ, ಅಷ್ಟಭುಜಗಳು ರಾಜಸವೆಂದೂ, ದಶಭುಜ ಮತ್ತು ಹೆಚ್ಚಿನ ಭುಜಗಳು ತಾಮಸವೆಂದೂ ವಿಂಗಡಣೆಯಿದೆ. ಶ್ರೀತತ್ತ್ವನಿಧಿಯಲ್ಲಿ ಮುಂದೆ ಹೇಳಿರುವ ದುರ್ಗಾರೂಪಗಳು ರಾಜಸ, ತಾಮಸ ವರ್ಗಗಳಿಗೆ ಸೇರುತ್ತದೆ. ಆದ್ದರಿಂದಲೇ ಈ ರೂಪಗಳ ಆಕರವನ್ನು 'ಸ್ಕಂದಯಾಮಳೋಕ್ತ'ವೆಂದು ಕಾಣಿಸಿದ್ದಾರೆ. ಯಾಮಳಗಳು ರಾಜಸ ತಾಮಸಾಗಮಗಳು. ಅಲ್ಲಿನ ಒಕ್ಕಣೆಯನ್ನು ಕಾರಣಾಗಮ ಎತ್ತಿಕೊಂಡಿರುವಂತೆ ಇಲ್ಲಿ ಸೂಚನೆಯಿದೆ.

ಇಲ್ಲಿನ ಹದಿನೆಂಟು ಕೈಗಳ ದುರ್ಗೆ ಪ್ರಧಾನ ಮೂರ್ತಿ. ಅವಳನ್ನು ಪದ್ಮಪೀಠದ ಮೇಲೆ(ಎಂದರೆ ನಡುವೆ) ಕುಳ್ಳಿರಿಸಿ, ಅವಳ ಸುತ್ತ ಹದಿನಾರು ಕೈಗಳ ಪರಿವಾರ ದುರ್ಗೆಯರನ್ನು ಕಲ್ಪಿಸಿಕೊಳ್ಳಬೇಕೆಂದು ಆಗಲೆ ಹೇಳಿದೆಯಷ್ಟೆ. ಈ ಒಕ್ಕಣೆಯ ಮೂಲ ಇಲ್ಲಿದೆ-

'ತತ್ರ ಪದ್ಮಾನ್ವಿತೆ ಸ್ಥಾನೆ ಪೂಜ್ಯಾ ದುರ್ಗಾಸ್ತು ಮೂರ್ತಿತಃ।
ಅಷ್ಟಾದಶಭುಜಾ ಚೈಕಾ ಪೀನವಕ್ಷಾ ಭುಜೋರುಕಾ।
ಸರ್ವಾಲಂಕಾರಸಂಯುಕ್ತಾ ಸರ್ವಸಿದ್ಧಿಪ್ರದಾಯಿನೀ। ಮೂರ್ಧಜಂ
ಖೇಟಕಂ ಘಂಟಾಮಾದರ್ಶಂ ತರ್ಜನೀಂ ಧನುಃ। ಧ್ವಜಂ ಡಮರುಕಂ
ಪಾಶಂ ಬಿಭ್ರತೀ ವಾಮಪಾಣಿಭಿಃ। ಶಕ್ತಿಮುದ್ಗರ ಶೂಲಾನಿ ವಜ್ರಂ
ಶಂಖಮಥಾಂಬುಜಂ । ಶಲಾಕಾಂ ಮಾರ್ಗಣಂ ಚಕ್ರಂ ದಧಾನಾ ದಕ್ಷಿಣೈಃ
ಕರೈಃ। ಶೇಷಾ ಶ್ಯೋಡಶಹಸ್ತಾ ಸ್ಯುಶ್ಚರಂ ಡಮರುಕಂ ವಿನಾ ।ಜಯ
ಮಿಚ್ಛುದ್ಭಿರೇತಾಸ್ತು ಪೂಜನೀಯಾ ಮನೀಷಿಭಿಃ। (II)
ಎ(ಏ) ತಾಸಾಂ ನಾಮಾನಿ। ರುದ್ರಾ ಚಂಡಾ ಶಚೀ ಶೈವಾ ಚಂಡೀ
ಕ್ರೂರಾನುಚಂಡಿಕಾ ನವಮೀ ಚೋಗ್ರಚಂಡಾ ಚ ನವದುರ್ಗಾಃ
ಪ್ರಕೀರ್ತಿತಾಃ।।

ಈ ನವದುರ್ಗೆಯರಲ್ಲದೆ ಬೇರೆ ಬೇರೆ ಸಂದರ್ಭಗಳಲ್ಲಿ ಇತರ ದುರ್ಗಾರೂಪಗಳನ್ನು ಶ್ರೀತತ್ತ್ವನಿಧಿಯಲ್ಲಿ ಕಾಣಿಸಿದ್ದಾರೆ. ಅವುಗಳನ್ನು ಇಲ್ಲಿ ಸಂಕಲನಮಾಡಿದ್ದೇನೆ. ಹದಿನಾರು ಕೈಗಳ ಶ್ಯಾಮವರ್ಣದ



ರುದ್ರಾಂಶ ದುರ್ಗಾ

ಸ್ವತಂತ್ರವಾದ ದುರ್ಗಾರೂಪವೊಂದನ್ನು ದುರ್ಗಾಕಲ್ಪದಿಂದ ಎತ್ತಿಕೊಂಡು ಕೊಡಲಾಗಿದೆ. ಈ ದುರ್ಗೆಯ ಹದಿನಾರು ಕೈಗಳಲ್ಲೂ ಶೂಲಗಳಷ್ಟೇ ಆಯುಧ. ದಿಗಂಬರಳಾದ ಈ ದೇವಿಗೆ ಹಾವುಗಳೇ ಆಭರಣ; ಮೂರು ಕಣ್ಣುಗಳು, ಕಪ್ಪಿಟ್ಟ ಕುತ್ತಿಗೆ.

'ಷೋಡಶಶೂಲವ್ಯಗ್ರಭುಜಾಂ ತ್ರಿಣಾಯನಾಮಹಿನದ್ಧಾಂಗೀಂ।
ಪನ್ನಗವಲಯಭೂಷಾಂ ನೀಲಗ್ರೀವಾಂ ದಿಗಂಬರಾಂ ವಂದೇ।

ಅದರೊಂದಿಗೆ ರುದ್ರಾಂಶದುರ್ಗೆಯ ಧ್ಯಾನಶ್ಲೋಕವೂ ಇದೆ. ಇದರ ಮೂಲ ಕಾರಣಾಗಮ,

'ರಕ್ತಾಂಬರಾಂ ಶ್ಯಾಮನಿಭಾಂ ದ್ವಿನೇತ್ರಾಂ ಕಿರೀಟರತ್ನಾಂಕಿತ
ಹೇಮಭೂಷಾಂ।
ಶೂಲಂ ಚ ಖಡ್ಗಂ ಧೃತಶಂಖಚಕ್ರಾಂ ।
ಮೃಗೇಂದ್ರಯಾನಾಂ ರವಿಚಂದ್ರಭೂಷಾಂ।
ಯಿ(ಇ)ಷ್ಟಾರ್ಥಧಾತ್ರೀಂ ಸುರವಂದ್ಯಪಾದಾ(ಂ)
ರುದ್ರಾಂಶದುರ್ಗಾಂ ಮನಸಾ ಸ್ಮರಾಮಿ।।'

ಇಷ್ಟಾದನಂತರ, 'ಆಮ್ನಾಯ'ದಿಂದ (ಯಾವ ಗ್ರಂಥವೆಂದು ಸ್ಪಷ್ಟವಾಗುವುದಿಲ್ಲ) ಇನ್ನೊಂದು ನವದುರ್ಗಾಧ್ಯಾನವೂ ಬರುತ್ತದೆ-

'ಅರಿಶಂಖ ಕೃಪಾಣಖೇಟಬಾಣಾನ್ಸಧನುಶ್ಶೂಲಕತರ್ಜನೀಂ ದಧಾನಾ।
ಮಮ ಸಾ ಮಹಿಷೋತ್ತಮಾಂಗಸಂಸ್ಥಾ ನವದೂರ್ವಾಸದೃಶೀ
ಶ್ರಿಯೈ ಸುದುರ್ಗಾ।।
ಹೇಮವರ್ಣಃ।।

ಇಲ್ಲಿ ನವದುರ್ಗೆಯೆಂಬುದು ಒಂದೇ ರೂಪ; ಹೊಸ ಗರಿಕೆ ಹುಲ್ಲಿನಂತೆ ಬಂಗಾರದ ಮೈಬಣ್ಣವುಳ್ಳವಳು; ಎಂಟುಕೈಗಳು; ಕೈಗಳಲ್ಲಿ ಚಕ್ರ, ಶಂಖ, ಕತ್ತಿ, ಗುರಾಣಿ, ಬಿಲ್ಲು, ಬಾಣ, ಶೂಲ ಮತ್ತು ತರ್ಜನೀಮುದ್ರೆ ; ಕೊಂದ ಮಹಿಷಾಸುರನ ತಲೆಯ ಮೇಲೆ ಕಾಲನ್ನಿಟ್ಟು ನಿಂತವಳು.

ದುರ್ಗೆಯ ಮತ್ತೆ ಕೆಲವು ರೂಪಗಳನ್ನೂ ಕೊಡಲಾಗಿದೆ. ಶಾರದಾತಿಲಕತಂತ್ರದಿಂದ ಅಗ್ನಿದುರ್ಗೆ, ಜಯದುರ್ಗೆ, ವಿಂಧ್ಯವಾಸಿನಿದುರ್ಗೆ, ರಿಪುಮಾರಿಣೀದುರ್ಗೆಯರ ಧ್ಯಾನಶ್ಲೋಕಗಳನ್ನು ಇಲ್ಲಿ ಬಳಸಿಕೊಂಡಿದ್ದಾರೆ.

ಅಗ್ನಿದುರ್ಗೆ-

'ವಿದ್ಯುದ್ದಾಮಸಮಪ್ರಭಾಂ ಮೃಗಪತಿಸ್ತದ(ಧ)ಸ್ಥಿತಾಂ ಭೀಷಣಾಂ
ಕನ್ಯಾಭಿಃ ಕರವಾಳಖೇಟವಿಲಸದ್ಧಸ್ತಾಭಿರಾಸೇವಿತಾಂ।
ಹಸ್ತೈಶ್ಚಕ್ರದರಾಸಿಖೇಟವಿಶಿಖಾನ್ ಚಾಪಾಂಕುಶೌ ತರ್ಜನೀಂ
ಬಿಭ್ರಾಣಾಮನಲಾತ್ಮಕಾಂ ಶಶಿಧರಾಂ ದುರ್ಗಾಂ ತ್ರಿನೇತ್ರಾಂ ಭಜೇ।।
ಕನಕವರ್ಣಃ।।'



ಅಗ್ನಿ ದುರ್ಗಾ

ಮಿಂಚಿನಂತೆ ಮೆರೆಯುವ ಈ ರೂಪವು, ಕತ್ತಿ-ಗುರಾಣಿಗಳನ್ನು ಕೈಗಳಲ್ಲಿ ಹಿಡಿದು ತನ್ನನ್ನು ಸುತ್ತರಿದು ನಿಂತ ವೀರಕನ್ನಿಕೆಯರೊಂದಿಗೆ ತೋರಿಕೊಂಡಿದೆ. ದೇವಿಯು ಬಂಗಾರದ ಮೈಬಣ್ಣದವಳಾಗಿದ್ದು ಸಿಂಹದ ಬೆನ್ನೇರಿ ಕುಳಿತವಳು. ಎಂಟು ಕೈಗಳು; ಚಕ್ರ, ಶಂಖ, ಕತ್ತಿ, ಗುರಾಣಿ, ಅಗ್ನಿ, ಬಿಲ್ಲು, ಅಂಕುಶ, ತರ್ಜನೀ ಮುದ್ರೆಗಳು. ಮೂರು ಕಣ್ಣುಗಳು; ತಲೆಯ ಮೇಲೆ ಚಂದ್ರಖಂಡ.

ಜಯದುರ್ಗೆ-

'ಕಾಳಾಸ್ಫಾರಾಂ ಕಟಾಕ್ಷೈರರಿಕುಲಭಯದಾಂ ಮೌಳಿಬದ್ಧೇಂದು ರೇಖಾಂ
ಶಂಖಂ ಚಕ್ರಂ ಕೃಪಾಣಂ ತ್ರಿಶಿಖಮಪಿ ಕರೈರುದ್ವಹಂತೀಂ ತ್ರಿನೇತ್ರಾಂ।

ಸಿಂಹಸ್ಕಂದಾ(ಧಾ)ಧಿರೂಢಾಂ ತ್ರಿಭುವನಮಖಿಲಂ ತೇಜಸಾ
ಪೂರಯಂತೀಂ ಧ್ಯಾಯೇದ್ದುರ್ಗಾಂ ಜಯಾಖ್ಯಾಂ ತ್ರಿದಶಪರಿವೃತಾಂ
ಸೇವಿತಾಂ ಸಿದ್ಧಿಕಾಮೈಃ।।
ಕೃಷ್ಣವರ್ಣಃ।।



ಜಯ ದುರ್ಗಾ

ಕಪ್ಪು ಮೈಬಣ್ಣದ ಜಯದುರ್ಗೆಯ ಸುತ್ತ ದೇವತೆಗಳು ನೆರೆದಿದ್ದಾರೆ. ಅವಳ ಓರೆನೋಟದಿಂದಲೇ ಶತ್ರುಗಳು ತತ್ತರಿಸಿ ಹೋಗಿದ್ದಾರೆ. ಸಿಂಹವನ್ನೇರಿದ ಈ ದೇವತೆಗೆ ನಾಲ್ಕು ಕೈಗಳು; ಶಂಖ, ಚಕ್ರ, ಶಕ್ತಿ, ಶೂಲಗಳನ್ನು ಹಿಡಿದಿದ್ದಾಳೆ.

ವಿಂಧ್ಯವಾಸಿನಿ ದುರ್ಗೆ-

'ಸೌವರ್ಣಾಂಬುಜಮಧ್ಯಗಾಂ ತ್ರಿಣಯನಾಂ ಸೌದಾಮಿನೀಸಂನಿಭಾಂ
ಶಂಖಂ ಚಕ್ರವರಾಭಯಾನಿ ದಧತೀಮಿಂದೋಃ ಕಲಾಂ ಬಿಭ್ರತೀಂ।

ಗ್ರೈವೇಯಾಂಗದಹಾರಕುಂಡಲಧರಾಮಾಖಂಡಲಾದ್ಯೈಃ ಸ್ತುತಾಂ
ಧ್ಯಾಯೇದ್ವಿಂಧ್ಯನಿವಾಸಿನೀಂ ಶಶಿಮುಖೀಂ ಪಾರ್ಶ್ವಸ್ಥಪಂಚಾನನಾಂ॥



ವಿಂಧ್ಯವಾಸಿನಿ ದುರ್ಗಾ



ವನ ದುರ್ಗಾ

ಈ ದುರ್ಗಾರೂಪದಲ್ಲಿ ಅವಳ ವಾಹನವಾದ ಸಿಂಹವು ಪಕ್ಕದಲ್ಲಿ ನಿಂತಿದೆ. ನಾಲ್ಕು ಕೈಗಳು; ನಿಜಹಸ್ತಗಳಲ್ಲಿ ವರದ ಅಭಯ ಮುದ್ರೆಗಳು; ಪರಹಸ್ತಗಳಲ್ಲಿ ಚಕ್ರ, ಶಂಖಗಳು.

ರಿಪುಮಾರಿಣೀದುರ್ಗೆ-

'ತರ್ಜನೀಂ ತ್ರಿಶಿಖಂ ದೋರ್ಭ್ಯಾಂ ಧಾರಯಂತೀಂ ಭಯಂಕರೀಂ।
ರಕ್ತಾಂ ಧ್ಯಾತ್ವಾ ರವೇರ್ಬಿಂಬಂ ಪ್ರಜಪೇದಯುತಂ ಮನಂ।
ಮಾರಯೇದಚಿರಾದೇವ ರಿಪೂನ್ ಬಂಧುಸಮನ್ವಿತಾನ್॥'
ರಕ್ತವರ್ಣಃ ॥

ಧ್ಯಾನಶ್ಲೋಕವನ್ನು ನೋಡಿದರೆ ಎರಡೇ ಕೈಗಳ ರೂಪವೆಂದು ತೋರುತ್ತದೆ. ಶತ್ರುವಿನಾಶಕ್ಕಾಗಿ ಕಲ್ಪಿಸಿಕೊಂಡ ಭಯಂಕರ ರೂಪವಾದುದರಿಂದ ಬಲಗೈಯಲ್ಲಿ ತರ್ಜನೀಮುದ್ರೆ.



ಕುಮಾರೀ ದುರ್ಗಾ

(೧೦) ಮತ್ತೆ ಕೆಲವು ಶಕ್ತಿರೂಪಗಳು

ಇಲ್ಲಿಂದ ಮುಂದೆ ದೇವಿಯ ಕೆಲವು ತಾಂತ್ರಿಕರೂಪಗಳ ಸ್ಥೂಲಪರಿಚಯವನ್ನು ಶ್ರೀ ತತ್ತ್ವನಿಧಿ ಮಾಡಿಕೊಡುತ್ತದೆ. ಈ ರೂಪಗಳು ಶಾಕ್ತಸಂಪ್ರದಾಯ, ಕೌಲಸಂಪ್ರದಾಯ, ವಜ್ರಯಾನ ಬೌದ್ಧಪಂಥ,



ಅಷ್ಟಭುಜಾಕಾಳಿ

ನಾಥಸಿದ್ಧಪಂಥ, ಜೈನತಂತ್ರ ಮೊದಲಾದುವುಗಳಲ್ಲೆಲ್ಲ ಹರಡಿಕೊಂಡಿವೆ. ಇವುಗಳಲ್ಲಿ ಹಲವಕ್ಕೆ ಪ್ರತ್ಯೇಕವಾದ ತಂತ್ರಗಳೂ, ಕಲ್ಪಗಳೂ, ಸಾಧನೆಗಳೂ ಇವೆ. ಕೆಲವು ರೂಪಗಳು ದಶಮಹಾವಿದ್ಯೆಯರಲ್ಲಿ ಅಂತರ್ಗತವಾಗಿವೆ; ಕೆಲವು ಶ್ರೀವಿದ್ಯಾಉಪಾಸನೆಯಲ್ಲಿ ಸೇರಿಕೊಂಡುಬಂದಿವೆ. ಮುಮ್ಮಡಿಯವರು ಈ ದೇವತಾರೂಪಗಳನ್ನು ಕೊಡುವಾಗ ಪ್ರಸಕ್ತವಾದ ಕಲ್ಪಗಳಿಂದಲೇ('ತತ್ಕಲ್ಪೆ') ಎತ್ತಿಕೊಂಡಿರುವುದನ್ನು ಗಮನಿಸಬಹುದು. ಸಂಖ್ಯಾಕ್ರಮವನ್ನು ನಾನು ಮಾಡಿಕೊಂಡಿದ್ದೇನೆ; ಮೂಲದಲ್ಲಿ ಇಲ್ಲ. ದೇವತಾಕ್ರಮವನ್ನೂ ನಾನು ಮಾರ್ಪಡಿಸಿಕೊಂಡಿದ್ದೇನೆ, ವರ್ಗಸೌಕರ್ಯಕ್ಕಾಗಿ.

೧. ಅಷ್ಟಭುಜಾ ಕಾಳಿಕಾ-

'ಅಷ್ಟಬಾಹುರ್ಮಹಾಕಾಯಾ ಕಾಲಮೇಘಸಮಪ್ರಭಾ।
ಶಂಖಚಕ್ರಗದಾಕುಂಭಮುಸಲಾಂಕುಶಪಾಶಯುಕ್
ವಜ್ರಂ ಕರತಳೆ ಬಿಭ್ರನ್ಮಹಾಕಾಳೀ ಮುದೆ(s)ಸ್ತು ನಃ॥
ಮೇಘಶ್ಯಾಮವರ್ಣಃ॥
(ಎಂಟು ಕೈಗಳ ಮಹಾಕಾಳಿ, ಕಾರ್ಮೋಡದಂಥ ಮೈ; ಭೀಕರಾಕೃತಿ)

೨. ಪ್ರತ್ಯಂಗಿರಾ-

'ಶ್ಯಾಮಭಾಂ ಚ ತ್ರಿಣೆತ್ರಾಂ ಚ ಸಿಂಹವಕ್ತ್ರಾಂ ಚತುರ್ಭುಜಾಂ।
ಊರ್ಧ್ವಕೇಶೀಂ ಚ ಸಿಂಹಸ್ಥಾಂ ಚಂದ್ರಾಂಕಿತ ಶಿರೋರುಹಾಂ।
ಕಪಾಲ ಶೂಲಡಮರುನಾಗಪಾಶಧರಾಂ ಶುಭಾಂ।
ಪ್ರತ್ಯಂಗಿರಾಂ ಭಜೇ ನಿತ್ಯಂ ಸರ್ವಶತ್ರುವಿನಾಶಿನೀಂ॥ (॥)
ಶ್ಯಾಮವರ್ಣಃ ॥'

(ಶತ್ರುವಿನಾಶ, ಮಾರಣ, ಉಚ್ಚಾಟನೆ, ಮಾಟ, ಮದ್ದು ಮೊದಲಾದ ಆಭಿಚಾರಿಕಕ್ರಿಯೆಗಳಲ್ಲಿ ವಿಶೇಷವಾಗಿ ಬಳಕೆಗೆ ಬರುವ ದೇವತೆ. ಕರಿಯ ಬಣ್ಣ; ಸಿಂಹದ ಮೋರೆ; ತಲೆಯ ಮೇಲೆ ನಿಮಿರಿನಿಂತ ಕೂದಲು; ಸಿಂಹವನ್ನೇರಿ ಬರುವವಳು; ತಲೆಯೋಡೆ, ಶೂಲ, ಡಮರು, ನಾಗಪಾಶಗಳನ್ನು ಹಿಡಿದ ನಾಲ್ಕು ಕೈಗಳು. ಈ ದೇವತೆಯಲ್ಲಿ ಪ್ರತ್ಯಂಗಿರಾ, ಮಹಾಪ್ರತ್ಯಂಗಿರಾ ಎಂಬೆರಡು ಬಗೆಗಳುಂಟು)

೩. ಶೂಲಿನೀ-

'ಬಿಭ್ರಾಣಾ ಶೂಲಬಾಣಾಸ್ಯರಿಸದರಗದಾಪಾಶಚಾಪಾನ್ಕರಾಗ್ರೈ
ರ್ಮೇಘಶ್ಯಾಮಾ ಕಿರೀಟೋಲ್ಲಸಿತಜಲಧರಾ ಭೀಷಣಾ ಭೂಷಣಾಢ್ಯಾ।
ಸಿಂಹಸ್ಕಂಧಾಧಿರೂಢಾ ಚತೃಭಿ(ಚತಸೃಭಿ) ರಸಿಖೇಟಾನ್ವಿತಾಭಿಃ ಪರೀತಾ
ಕನ್ಯಾಭಿರ್ಭಿನ್ನದೈತ್ಯಾ ಭವತು ಭವಭಯಧ್ವಂಸಿನೀ ಶೂಲಿನೀ ನಃ॥
ಮೇಘಶ್ಯಾಮವರ್ಣಃ॥'



ಷೋಡಶಭುಜಾಕಾಳೀ

೪. ಧೂಮವತೀ-

'ರಕ್ತಾಂಗೀಂ ರಕ್ತವಸ್ತ್ರಾಂ ಕರಿಕರವಿಲಸತ್ಕುಂಡಲಾಂ ಚಂಡದಂಷ್ಟ್ರಾಂ
ಕಂಠೋದ್ಯದ್ಮುಂಡಮಾಲಾಂ ಪರಿಸರವಿಲಸಚ್ಛೋಭಿಪೈಶಾಚಬೃಂದಾಂ।
ಘೋರಾಂ ಘೋರಾಟ್ಟಹಾಸಾಂ ಕರಕಲಿತಕಪಾಲಾಸಿರೌದ್ರಾಂ
ತ್ರಿಣೇತ್ರಾಂ ಶತ್ರೂಣಾಂ ಪ್ರಾಣಹಂತ್ರೀಂ ಶಶಿಶಿಶುಮಕುಟಾಂ
ಭಾವಯೇ ಧೂಮ್ರಕ್ಕಾ(ಕಾ)ಳೀಂ।
ರಕ್ತವರ್ಣಃ॥'

(ದಶಮಹಾವಿದ್ಯೆಯರಲ್ಲಿ ಒಂದಾದ ಧೂಮವತಿಯೂ ತಾಂತ್ರಿಕದೇವತೆಯೇ. ಆದರೆ ಪ್ರತ್ಯಂಗಿರೆಯಂತೆ ತಾಮಸವಲ್ಲ; ರಾಜಸ. ಹಾಗೆಂದೇ ಕೆಂಪು ಬಣ್ಣ. ರುಂಡಮಾಲೆಯನ್ನು ಧರಿಸಿ ಘೋರವಾಗಿದ್ದಾಳೆ; ಅಟ್ಟಹಾಸವೂ ಇದೆ. ಒಂದು ಕೈಯಲ್ಲಿ ಕಪಾಲ, ಇನ್ನೊಂದರಲ್ಲಿ ಕತ್ತಿ, ಧೂಮಾವತೀಕಲ್ಪದಿಂದ ಎತ್ತಿಕೊಂಡ ಈ ಧ್ಯಾನಶ್ಲೋಕವು ದೇವತೆಯನ್ನು ಧೂಮ್ರಕಾಳಿಯೆಂದು ಕರೆದಿದೆ).

೫. ವಶ್ಯಮುಖೀ-

'ಸಂಧಾಯ ಸುಮನೋಬಾಣಂ ಕರ್ಷಂತೀಮೈಕ್ಷವಂ ಧನುಃ।
ಜಗಜ್ಜೈತ್ರೀಂ ಜಪಾರಕ್ತಾಂ ದೇವೀಂ ವಶ್ಯಮುಖೀಂ ಭಜೇ॥
ರಕ್ತವರ್ಣಃ॥'

(ಮಹಾಲಕ್ಷ್ಮೀರತ್ನಕೋಶದಿಂದ ಈ ಧ್ಯಾನಶ್ಲೋಕವನ್ನು ಎತ್ತಿಕೊಳ್ಳಲಾಗಿದೆ. ಈ ರೂಪಕ್ಕೆ ಎರಡು ಕೈಗಳು; ಒಂದು ಕೈಯಲ್ಲಿ ಕಬ್ಬಿನ ಜಲ್ಲೆಯನ್ನು ಬಿಲ್ಲನ್ನಾಗಿ ಹಿಡಿದು ಇನ್ನೊಂದರಲ್ಲಿ ಮನಸ್ಸೆಂಬ ಬಾಣವನ್ನು ಹಿಡಿದು ಬಿಲ್ಲಲ್ಲಿ ಹೂಡುವಂತೆ ಕಲ್ಪಿಸಿಕೊಳ್ಳಲಾಗಿದೆ. ಹೀಗೆ ಜಗತ್ತನ್ನೇ ಜಯಿಸಲು ಹೊರಟ ದೇವತೆಯನ್ನು ಸಮ್ಮೋಹನ, ವಶೀಕರಣ ಮೊದಲಾದ ಕ್ರಿಯೆಗಳಲ್ಲಿ ಬಳಸಿಕೊಳ್ಳುತ್ತಾರೆ)

೬. ಉಗ್ರತಾರಾ-

'ಪ್ರತ್ಯಾಲೀಢಪದಾರ್ಪಿತಾಂಘ್ರಿಶವಭೃದ್ಘೋರಾಟ್ಟಹಾಸಾಪರಾ
ಖಡ್ಗೇಂದೀವರ ಶೂಲಖರ್ಪರಧರಾ ಹುಂಕಾರಬೀಜೋದ್ಭವಾ।
ಖರ್ವಾ ನೀಲವಿಶಾಲಪಿಂಗಲಜಟಾಜೂ(ಜೂ)ಟೋಗ್ರನಾಗೈರ್ಯುತಾ।
ಜಾಡ್ಯಂ ನ್ಯಸ್ಯ ಕಪಾಲಕೇ ತ್ರಿಜಗತಾಂ ಹಂತ್ಯುಗ್ರತಾರಾ ಸ್ವಯಂ ॥
ಸಿಂದೂರವರ್ಣಃ॥'

(ನೇಪಾಳ, ಟಿಬೆಟ್‌ಗಳಲ್ಲಿ ಪ್ರಚಲಿತವಾದ ವಜ್ರಯಾನ ಬೌದ್ಧಪಂಥದಲ್ಲೂ ಈ ತಾಂತ್ರಿಕ ದೇವತೆಯ ಪೂಜೆಯಿದೆ. ರಾಜಸದೇವತೆ; ಹುಂಕಾರವೆಂಬ ವರ್ಣದಿಂದ ಹುಟ್ಟಿದ ಈ ದೇವತೆ ಮೂರು ಲೋಕಗಳ ರೋಗರುಜಿನಗಳನ್ನು ಒಂದು ತಲೆಯೋಡೆಯಲ್ಲಿ ತುಂಬಿಕೊಂಡು ಹಿಡಿದಿದ್ದಾಳೆ; ಉಳಿದ ಮೂರು ಕೈಗಳಲ್ಲಿ ಕತ್ತಿ, ಕಮಲ, ಶೂಲಗಳು. ತಲೆಯ ಮೇಲೆ ಕೆಂಬಣ್ಣದ ಜಟೆಯನ್ನು ಹಾವುಗಳು ಸುತ್ತಿಕಟ್ಟಿ ನಿಲ್ಲಿಸಿವೆ. ಈ ಶ್ಲೋಕವನ್ನು ಯಾವುದೋ ಅನಿರ್ದಿಷ್ಟ ಆಮ್ನಾಯದಿಂದ ಎತ್ತಿಕೊಂಡಿದ್ದಾರೆ)

೭. ಕುರುಕುಲ್ಲಾ-

'ತತ್ರ ನೌಕೇಶ್ವರೀ ದೇವೀ ಕುರುಕುಳೆ(ಕುಲ್ಲೆ) ತಿ ವಿಶ್ರುತಾ।
ತಮಾಲಶ್ಯಾಮಳಾಕಾರಾ ಶ್ಯಾಮಕಂಚುಕಧಾರಿಣೀ।
ರತ್ನಾರಿತ್ರಕರಾ ನಿತ್ಯಮುಲ್ಲಸನ್ಮದಮಾಂಸಳಾ।
ಪರಿತೊ ಭ್ರಾಮ್ಯತಿ ಮುನೇ ಮಣಿನೌಕಾಧಿರೋಹಿಣೀ।
ನೀಲವರ್ಣಃ॥'

(ಉಗ್ರತಾರೆಯಂತೆ ವಜ್ರಯಾನಬೌದ್ಧಪಂಥದಲ್ಲೂ ಪ್ರಸಿದ್ಧೆಯಾದ ದೇವತೆ ಕುರುಕುಲ್ಲಾ. ಅಂಬಿಗರು ದೋಣಿಯನ್ನು ನಡೆಸುವಾಗ ಈಕೆಗೆ ಹರಕೆ ಹೊತ್ತುಕೊಳ್ಳುತ್ತಿದ್ದರಂತೆ. ಹಾಗೆಂದೇ ಈಕೆ ನೌಕಾಧೀಶ್ವರಿ. ಚಿತ್ರಣವೂ ಮಣಿನೌಕೆಯನ್ನು ಏರಿ ನೀರಿನ ಮೇಲೆ ನಡೆಸುತ್ತಿರುವಂತೆ. ಈ ಧ್ಯಾನಶ್ಲೋಕವು ಲಲಿತೋಪಾಖ್ಯಾನದಲ್ಲಿದೆ)

೮. ವಾರುಣೀ-

'ಸಾಕ್ಷಾಚ್ಚ ವಾರುಣೀ ದೇವೀ ತತ್ರ ನೌಕಾಧಿನಾಯಿಕಾ।
ಯಾಂ ಸುಧಾಮಾಲಿನೀಮಾಹುರ್ಯಾಮಾಹುರಮೃತೇಶ್ವರೀಂ।
ಸಾ ತತ್ರ ಮಣಿನೌಕಸ್ಥಾ ಶಕ್ತಿಸೇನಾಸಮಾವೃತಾ ।
ಯೀ(ಈ)ಷದಾಲೋಕಮಾತ್ರೇಣತ್ರೈಲೋಕ್ಯಮದದಾಯಿನೀ।
ತರುಣಾದಿತ್ಯಸಂಕಾಶಾ ಮದರಕ್ತ ಕಪೋಲಭೂಃ।
ಪರಿಜಾತಪ್ರಸೂನಸ್ರಕ್ಪರಿವೀತ ಕಚೋಚ್ಚಯಾ।
ವಹಂತೀ ಮದಿರಾಪೂರ್ಣಂ ಚಷಕಂ ಲೋಲದುತ್ಪಲಂ।
ಪಕ್ವಂ ಪಿಶಿತಖಂಡಂ ಚ ಮಣಿಪಾತ್ರೆ ತಥಾನ್ಯಕೆ।
ವಾರುಣೀ ತರಣೀಶ್ರೇಣಿನಾಯಿಕಾ ತತ್ರ ರಾಜತೇ॥
ರಕ್ತವರ್ಣಃ॥'

(ಕುರುಕುಲ್ಲೆಯಂತೆ ವಾರುಣಿಯೂ ನೌಕಾಧಿದೇವತೆಯೇ. ನೀರಿನ ಅಧಿದೇವತೆಯಾದ ವರುಣನ ಮಗಳಾಗಿ ವಾರುಣಿಗೆ ನೀರಿನ ನಂಟಿರುವುದು ಸಹಜವೇ. ಆದರೆ ವಾರುಣಿಯೆಂದರೆ ಹೆಂಡವೂ ಹೌದು. ಕಳ್ಳುಮಾಡುವವರಿಗೆ ಮಾರುವವರಿಗೆ ಕುಡಿಯುವವರಿಗೆ ವಾರುಣಿ ಅಭಿಮಾನಿದೇವತೆ; ಅವಳು ಸುಧಾಮಾಲಿನಿ (ಸುಧೆಯೆಂದರೂ ಕಳ್ಳು); ಅಮೃತೇಶ್ವರಿ (ಅಮೃತವೂ ಹೆಂಡವೇ ತಾನೆ?) ಅವಳ ಓರೆಗಣ್ಣನೋಟದಿಂದಲೇ ಜಗತ್ತಿಗೆಲ್ಲ ಅಮಲೇರುವುದಂತೆ. ಅವಳ ಕೈಯಲ್ಲಿರುವ ಬಟ್ಟಲಿನಲ್ಲಿ ತುಂಬಿರುವುದು ಹೆಂಡ; ಇನ್ನೊಂದು ಕೈಯಲ್ಲಿರುವ ಪಾತ್ರೆಯಲ್ಲಿರುವುದು ಬೇಯಿಸಿದ ಮಾಂಸದ ತುಂಡು, ಕುಡಿಯುವವರಿಗೆ ಇಷ್ಟವಾದುದೇ. ಈ ಶ್ಲೋಕವೂ ಲಲಿತೋಪಾಖ್ಯಾನದ್ದೇ)

೯. ಅಪರಾಜಿತೆ-

'ನೀಲೋತ್ಪಲನಿಭಾಂ ದೇವೀಂ ನಿದ್ರಾಮುದ್ರಿತಲೋಚನಾಂ।
ನೀಲಕುಂಚಿತ ಕೇಶಾಗ್ರಾಂ ನಿಮ್ನನಾಭೀವಳಿತ್ರಯಾಂ।
ವರಾಭಯಕರಾಂಭೋಜಾಂ ಪ್ರಣತಾರ್ತಿವಿನಾಶಿನೀಂ।

ಪೀತಾಂಬರವರೋಪೇತಾಂ ಭೂಷಣಸ್ರಗ್ವಿಲೇಪನಾಂ।
ವರಶಕ್ತ್ಯಾಕೃತಿಂ ಸೌಮ್ಯಾಂ ಪರಸೈನ್ಯಪ್ರಭಂಜಿನೀಂ।
ಶಂಖಚಕ್ರಗದಾಭೀತಿಭಿನ್ನಹಸ್ತಾಂ ತ್ರಿಲೋಚನಾಂ।
ಸರ್ವಕಾಮಪ್ರದಾಂ ದೇವೀಂ ಧ್ಯಾಯೆತ್ತಾಮಪರಾಜಿತಾಂ॥
ನೀಲವರ್ಣಃ॥'

(ನವರಾತ್ರಿಯ ಸಂದರ್ಭದಲ್ಲಿ ದಶಮಿಯ ದಿನ ಪೂಜೆಗೊಳ್ಳುವ ಈ ದೇವತೆ ಮಹಾಯಾನಬೌದ್ಧಪಂಥದಲ್ಲೂ ಜೈನಾಗಮದಲ್ಲೂ ಪ್ರಸಿದ್ಧಳು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಆಳರಸರು ತಮ್ಮ ಕೋಟೆಕೊತ್ತಲುಗಳಲ್ಲಿ ಈ ದೇವತೆಯನ್ನು ಪೂಜಿಸಬೇಕೆಂದು ಹೇಳಿದೆ. ಜಯಾಪೇಕ್ಷಿಗಳು ಈಕೆಯ ಆರಾಧನೆಯನ್ನು ಕೈಗೊಳ್ಳಬೇಕಂತೆ. ಸ್ಕಾಂದಪುರಾಣದಲ್ಲಿ ಈಕೆಯ ವರ್ಣನೆಯಿದೆ. ಲಕ್ಷ್ಮೀತಂತ್ರದ ಪ್ರಕಾರ ಈಕೆಯದು ಲಕ್ಷ್ಮಿಯ ರೂಪಗಳಲ್ಲೊಂದು. ವಜ್ರಯಾನದಲ್ಲಿ ಕುರುಕುಲ್ಲಾದೇವಿಯ ಒಡನಾಡಿಯಾದವಳು. ಮೇಲಿನ ಶ್ಲೋಕಗಳು ನಾರದಸಂಹಿತೆಯಿಂದ ಆಯ್ದುಕೊಂಡವು)

೧೦. ಶತ್ರುವಿಧ್ವಂಸಿನೀ-

'ಶತ್ರುವಿಧ್ವಂಸಿನೀ ರೌದ್ರಾ ತ್ರಿಶಿರಾ ರಕ್ತಲಾಂಚ(ಛ)ನಾ।
ಅಗ್ನಿಜ್ವಾಲಾ ರೌದ್ರಮುಖೀ ಘೋರದಂಷ್ಟ್ರಾ ತ್ರಿಲೋಚನಾ।
ದಿಗಂಬರಾ ರಕ್ತಕೇಶೀ ರಕ್ತಪಾಣಿರ್ಮಹೋದರೀ।
ಎ(ಏ) ತೈರಾವಿಷ್ಣುತೈರ್ಘೋರೈಶ್ಚೀಫ್ರಮುಚ್ಚಾಟಯೇದ್ವಿ(ದ್ವಿ)ಷಃ।
ನೀಲವರ್ಣಃ ॥'

(ಮೂರುಮೊಗದ ಘೋರರೂಪವುಳ್ಳ ಈ ತಾಂತ್ರಿಕದೇವತೆಯೂ ಶತ್ರುನಾಶಕ್ಕಾಗಿ, ಶತ್ರುಗಳ ಉಚ್ಚಾಟನೆಗಾಗಿ ಅರಸರಿಂದ ಪೂಜೆಗೊಳ್ಳುವಳು. ಮೇಲಿನ ಧ್ಯಾನಶ್ಲೋಕಕ್ಕೆ ಸುದರ್ಶನಸಂಹಿತೆಯು ಆಕರ, ವರ್ಣನೆ ಸ್ಪಷ್ಟವಾಗಿಯೆ ಇದೆ)

೧೧. ಸ್ವಸ್ಥಾವೇಶಿನೀ-

'ರಕ್ತಾಂಗೀಂ ಶವವಾಸಿನೀಂ ತ್ರಿಶಿರಸಂ ರೌದ್ರೀಂ ಮಹಾಭೈರವೀಂ
ಧೂಮ್ರಾಕ್ಷೀಂ ಭಯದಾರಿಣೀಂ ಘನಶಿಖಾನೀಲಾಳಕಾಲಂಕೃತಾಂ।
ಢಕ್ಕಾಶೂಲಧರಾಂ ಮಹಾಬಲರಿಪುಧ್ವಂಸಾಂ ಕೃಶಾಂಗೀಂ ಮಹೀಂ।
ಭೀಮಾಂಗೀಂ ತ್ರಿಜಟಾಂ ದ(ದಾ)ವಾನಲಮಯೀಂ ಧ್ಯಾಯೆತ್ಪಿನಾಕಿಸ್ತುತಾಂ।
ರಕ್ತವರ್ಣಃ॥

(ಅಹಿರ್ಬುಧ್ನ್ಯಸಂಹಿತೆಯಲ್ಲಿ ಬರುವ ಈ ವರ್ಣನೆಯಿಂದ ಈ ದೇವತೆಯೂ ಅಪರಾಜಿತೆ, ಶತ್ರುವಿಧ್ವಂಸಿನಿಯರಂತೆ ಸಮರದೇವತೆಯೇ ಎಂದು ತಿಳಿಯುತ್ತದೆ. ಇವಳೂ ಮೂರು ಮೊಗದವಳು, ಮೂರು ಜಟೆಗಳನ್ನುಳ್ಳವಳು, ಘೋರಾಕಾರದವಳು, ಆದರೆ ಭಯವನ್ನು ತೊಲಗಿಸಿ ಧೈರ್ಯವನ್ನು, ಎಂದರೆ ಸ್ವಾಸ್ಥ್ಯವನ್ನು ಒದಗಿಸುವಳು)

೧೨. ಮೃತಸಂಜೀವಿನೀ-

'ಮೃತಸಂಜೀವಿನೀಂ ದೇವೀಂ ಶಾಂತರೂಪಾಂ ಮನೋಹರಾಂ।
ಪಾಶಾಹೀಂದ್ರಾಂಕುಶಗದಾಖಡ್ಗಶೂಲವರಾಭಯಾಂ।
ರಕ್ತಾಮಷ್ಟಭುಜಾಂ ವಂದೆ ಫುಲ್ಲಪದ್ಮಾಸನಾಂ ಶುಭಾಂ॥ ರಕ್ತವರ್ಣಃ॥



ಮೃತಸಂಜೀವಿನೀ

(ಶಾಂತಸ್ವಭಾವದ ಈ ಚೆಲುವೆ ಕುಳಿತಿರುವುದು ಅರಳಿದ ತಾವರೆಯ ಮೇಲೆ; ಆದರೆ ಕೆಂಪು ಬಣ್ಣದವಳು. ಎಂಟು ಕೈಗಳು, ಕೈಗಳಲ್ಲಿ ಪಾಶ, ನಾಗ, ಅಂಕುಶ, ಗದೆ, ಕತ್ತಿ, ಶೂಲ ಮತ್ತು ವರದ ಅಭಯ ಮುದ್ರೆಗಳು. ಸತ್ತವರನ್ನು ಎಬ್ಬಿಸುವ ಈ ದೇವತೆಯ ಧ್ಯಾನಶ್ಲೋಕವು ರುದ್ರಯಾಮಳದ ಕುಹೂಕಲ್ಪದಿಂದ ಆಯ್ದುಕೊಂಡಿದೆ)

೧೩. ಬಗಳಾ-

'ಚತುರ್ಭುಜಾಂ ತ್ರಿಣಯನಾಂ ಕಮಲಾಸನಸಂಸ್ಥಿತಾಂ।
ತ್ರಿಶೂಲಂ ಪಾನಪಾತ್ರಂ ಚ ಗದಾಂ ಜಿಹ್ವಾಂ ಚ ಬಿಭ್ರತೀಂ।
ಬಿಂಬೋಷ್ಠೀಂ ಕಂಬುಕಂಠೀಂ ಚ ಸಮಪೀನಪಯೋಧರಾಂ।
ಪೀತಾಂಬರಾಂ ಮದಾಘೂರ್ಣಾಂ ಧ್ಯಾಯೇದ್ಬ್ರಹ್ಮಾಸ್ತ್ರದೇವತಾಂ॥
ಪೀತವರ್ಣಃ॥'

(ಬಗಲಾಮುಖಿಯೆಂದೂ ಹೆಸರಾಂತ ಈ ದೇವತೆ ದಶಮಹಾ ವಿದ್ಯೆಯರಲ್ಲಿ ಸೇರುತ್ತಾಳೆ. ಮುಖ್ಯವಾಗಿ ತಾಂತ್ರಿಕದೇವತೆಯೆಂಬುದನ್ನು ಅವಳು ಕೈಯಲ್ಲಿ ಹಿಡಿದ ಪಾನಪಾತ್ರೆಯೆ ಸೂಚಿಸುತ್ತದೆ; ಎದುರಾಳಿಗಳ ನಾಲಗೆಯನ್ನು ಕುಯ್ದು ಕೈಯಲ್ಲಿ ಹಿಡಿದಿದ್ದಾಳೆ. ಬಗಲಾಕಲ್ಪದಿಂದ ಎತ್ತಿಕೊಂಡ ಈ ಧ್ಯಾನಶ್ಲೋಕವು ಇವಳನ್ನು ಬ್ರಹ್ಮಾಸ್ತ್ರದೇವತೆಯೆಂದು ಬಣ್ಣಿಸಿದೆ.)

೧೪. ಪ್ರಾಣಶಕ್ತಿ-

'ರಕ್ತಾಂಬೋಧಿಸ್ಥಪೋತೋಲ್ಲಸದರುಣಸರೋಜಾಧಿರೂಢಾ
ಕರಾಜ್ಯೈಃ ಪಾಶಂ ಕೋದಂಡಮಿಕ್ಷೂದ್ಭವಮಳಿಗಣಮಪ್ಯಂಕುಶಂ
ಪಂಚಬಾಣಾನ್
ಬಿಭ್ರಾಣಾ ಸ್ರಕ್ಕಪಾಲಂ ತ್ರಿನಯನವಿಲಸತ್ಪೀನವಕ್ಷೋರುಹಾಢ್ಯಾ
ದೇವೀ ಬಾಲಾರ್ಕವರ್ಣಾ ಭವತು ಸುಖಕರೀ ಪ್ರಾಣಶಕ್ತಿಃ ಪರಾ ನಃ॥
ರಕ್ತವರ್ಣಃ॥'

(ಎಲ್ಲ ದೇವತೆಗಳ ಪ್ರಾಣಪ್ರತಿಷ್ಠೆಯಲ್ಲೂ, ಆರಾಧನೆಯಲ್ಲೂ ಬಳಸುವ ಪ್ರಸಿದ್ಧವಾದ ಈ ಶ್ಲೋಕವು ಶಾರದಾತಿಲಕತಂತ್ರದಲ್ಲಿದೆ. ಪ್ರಾಣವನ್ನೇ ಶಕ್ತಿಯನ್ನಾಗಿ ಕಲ್ಪಿಸಿಕೊಂಡು ಅದಕ್ಕೊಂದು ದೇವತಾರೂಪ ಒದಗಿಸಿರುವುದು ಇಲ್ಲಿನ ಸ್ವಾರಸ್ಯ. ರಕ್ತದ ಸಮುದ್ರದಲ್ಲೊಂದು ದೋಣಿ; ಅದರಲ್ಲಿ ತಾವರೆಯ ಮೇಲೆ ಕುಳಿತವಳು; ಆರು ಕೈಗಳು; ಪಾಶ, ಅಂಕುಶ, ಇಕ್ಷುದಂಡ, ಪಂಚಬಾಣ, ಮತ್ತು ಸ್ರುಕ್ ಎಂಬ ಯಜ್ಞಾಯುಧ, ಮತ್ತು ತಲೆಯೋಡೆಗಳನ್ನು ಹಿಡಿದಿದ್ದಾಳೆ. ದೇವತೆಯ ಮೈಬಣ್ಣ ಆಗ ತಾನೆ ಹುಟ್ಟಿದ ಸೂರ್ಯನಂತೆ)



ಬನಶಂಕರೀ

೧೫. ಬನಶಂಕರೀ-

'ಕಲ್ಪಾಂತಾನಲಕಾಯಕಾಂತಿಸುಭಗಾಂ
ಶೂಲಂ ಕಪಾಲಂ ಶರಂ ಚಾಪಂ ಚಾಪಿ ವರಾಭಯೌ ಚ
ಪರಿಘಂ ಶಂಖಂ ಚ ಚಕ್ರಂ ಗದಾಂ।
ಬಿಭ್ರಾಣಂ ಶಶಿಖಂಡಶೋಭಿಮಕುಟಾಂ
ರತ್ನಾಂಬರಾಲಂಕೃತಾಂ ವಂದೇ ತಾಂ ವನಶಂಕರೀಂ
ತ್ರಿನಯನಾಂ ವಾಗೀಶವಿಷ್ಣುಸ್ತುತಾಂ॥
ರಕ್ತವರ್ಣಾಂ॥



ಬನಶಂಕರೀ

(ಹತ್ತು ಕೈಗಳ ಈ ಶಕ್ತಿರೂಪದ ಧ್ಯಾನಶ್ಲೋಕವನ್ನು ಪದ್ಮಪುರಾಣದಿಂದ ಆಯ್ದುಕೊಳ್ಳಲಾಗಿದೆ. ಕೈಗಳಲ್ಲಿ ಶೂಲ, ಕಪಾಲ, ಬಿಲ್ಲು, ಬಾಣ, ಪರಿಘ, ಶಂಖ, ಚಕ್ರ, ಗದೆ ಮತ್ತು ವರದ ಅಭಯ ಮುದ್ರೆಗಳು).

೧೬. ಶಾಕಂಬರೀ-

'ಶೂಲಂ ಪಾಶಕಪಾಲಚಾಪಕುಲಿಶಂ ಬಾಣಾನ್ ಸೃಣಿಂ
ಖೇಟಕಂ ಶಂಖಂ ಚಕ್ರಗದಾಹಿ ಖಡ್ಗಮಭಯಂ ಖಟ್ವಾಂಗದಂಡಾಂ ಶಿವಾಂ।
ವರ್ಷಾಭಾವಹತಾನ್ಮುನಿಗಣಾನ್ಯಾಕೇನ ಯಾ(s)ರಕ್ಷತಾ

ಲೋಕಾನಾಂ ಜನನೀಂ ಮಹೆಶದಯಿತಾಂ
ತಾಂ ಸ್ತೌಮಿ ಶಾಕಂಬರೀಂ॥
ರಕ್ತವರ್ಣಃ॥



ಶಾಕಂಬರಿ

(ಬರಗಾಲದಲ್ಲಿ ಆಹಾರವಿಲ್ಲದೆ ಕಂಗಾಲಾಗಿದ್ದ ಮುನಿಗಳಿಗೆ ಶಾಕವನ್ನು ಎಂದರೆ ತರಕಾರಿ ಮೊದಲಾದ ಸಸ್ಯಾಹಾರವನ್ನು ಒದಗಿಸಿ ಕಾಪಾಡಿದ ಈ ದೇವತೆಯ ಧ್ಯಾನಶ್ಲೋಕವೂ ಪದ್ಮಪುರಾಣದ್ದೇ. ಇಲ್ಲಿ 'ಶಾಕಂಬರಿ'ಯೆಂದು ಬರೆದಿರುವುದು ಶ್ರೀತತ್ವನಿಧಿಯ ಮುಂಬಯಿಯ ದೇವನಾಗರಿಲಿಪಿಯ ಪ್ರಕಟಣೆಯಲ್ಲಿ 'ಶಾಕಂಭರಿ' ಆಗಿದೆ. ಹದಿನಾರು ಕೈಗಳ ಈ ದೇವತೆ ಶೂಲ, ಪಾಶ, ತಲೆಯೋಡೆ, ಬಿಲ್ಲು, ಬಾಣ, ವಜ್ರಾಯುಧ, ಪಾಶ, ಕತ್ತಿ, ಗುರಾಣಿ, ಶಂಖ, ಚಕ್ರ, ಗದೆ, ನಾಗ, ಖಟ್ವಾಂಗ, ದಂಡ ಮತ್ತು ಅಭಯಮುದ್ರೆಗಳನ್ನು ಹಿಡಿದಿದ್ದಾಳೆ)

೧೭. ಆಸುರೀ (ಸುರಾದೇವೀ)-

'ಸಮುದ್ರೆ ಮಥ್ಯಮಾನೇ ತು ಕ್ಷೀರೋದೆ ಸಾಗರೋತ್ತಮೆ।
ತತ್ರೋತ್ಪನ್ನಾಂ ಸುರಾಂ ದೇವೀಂ ಕನ್ಯಕಾರೂಪಧಾರಿಣೀಂ।
ಅಷ್ಟಾದಶಭುಜೈರ್ಯುತಾಂ ರಕ್ತಾಂ ಚಾಯುತಲೋಚನಾಂ।
ಶಂಖಂ ಖಡ್ಗಂ ಧನುಶ್ಚೈವ ಕಪಾಲಂ ಮುಸಲಂ ತಥಾ।
ಶಕ್ತಿಂ ಗದಾಂ ವರಂ ಘಂಟಾಂ ದಧಾನಾಂ ಸೋತ್ತರೈರ್ಭುಜೈಃ।
ಚಕ್ರಂ ಮುಷ್ಟಿಂ ಶರಂ ಶೂಲಂ ಲೋಹಂ ಖೇಟಂ ಚ ತೋಮರಂ।
ಅಭಯಂ ಭಿಂಡಿವಾಲಂ ಚ ದಧಾನಾಂ ದಕ್ಷಿಣೈರ್ಭುಜೈಃ।
ತ್ರಿನೆತ್ರಾಂ ದೀರ್ಘತಂನ್ವಂಗೀಂ (ತನ್ವಂಗೀಂ) ಕಾಲಾಗ್ನಿಸದೃಶಪ್ರಭಾಂ।
ಮಂದರಂ ವೇಷ್ಟ್ಯ(ಯಿ)ತ್ವಾ ತು ಫೆನಿಲಾವರ್ತಭೀಷಣಾಂ(1)
ಗೊಮೂತ್ರಕ್ಷೀರವರ್ಣಾಭಾಂ ಕೃಷ್ಣರೂಪಾಂ ಪರಾಂ ಸುರಾಂ।
ತ್ರಾಸಯಂತ್ಯಸುರಾನ್ಸರ್ವಾನ್ದೇವಾನಾಮಭಯಂಕರೀ।
ಯಾ ಸುರಾ ಸಾ ಉ (ಹ್ಯು)ಮಾದೇವೀ ಯೋ ಮೊಹಸ್ಸಮಹೇಶ್ವರ ಇತಿ ॥
ಚಿತ್ರವರ್ಣಃ॥



ಆಸುರೀ ದೇವೀ

(ಸುರಾದೇವಿ, ಎಂದರೆ ಹೆಂಡದ ಅಭಿಮಾನಿದೇವತೆ, ಇಲ್ಲಿನ ಧ್ಯಾನಶ್ಲೋಕದ ವಸ್ತು. ದೇವನಾಗರಿಲಿಪಿಯ ಪ್ರಕಟಣೆಯಲ್ಲಿ (ಖೇಮರಾಜ ಶ್ರೀ ಕೃಷ್ಣದಾಸರ ವೆಂಕಟೇಶ್ವರ ಸ್ಟೀಮ್ ಪ್ರೆಸ್) ಇದನ್ನು 'ಸುರಾದೇವೀಧ್ಯಾನಂ' ಎಂದೇ ಕಾಣಿಸಿದ್ದರೂ ಕನ್ನಡಲಿಪಿಯ ಹಸ್ತಪ್ರತಿಯಲ್ಲಿ 'ಅಥ ಆಸುರೀದೇವೀ ಧ್ಯಾನಂ ತತ್ಕಲ್ಪೆ' ಎಂಬ ಒಕ್ಕಣೆ ಕಾಣುತ್ತದೆ. ಸುರಾದೇವಿಯು ಆಸುರೀ ಶಕ್ತಿಯೇ ಎಂದು ಸಮಾಧಾನ ನೀಡಬಹುದಾದರೂ ಧ್ಯಾನಶ್ಲೋಕದಲ್ಲಿ ('ಸುರಾಂ ದೇವೀಂ', 'ಯಾ ಸುರಾ ಸಾಹ್ಯುಮಾದೇವೀ', 'ತ್ರಾಸಯಂತಿ ಅಸುರಾನ್ ಸರ್ವಾನ್; ದೇವಾನಾಂ ಅಭಯಂಕರೀ' ಎಂಬೆಲ್ಲ ಪ್ರಯೋಗಗಳಿಂದ ಸುರಾದೇವಿಯೆಂಬುದೇ ಸರಿಯೆಂದು ತೋರುತ್ತದೆ. ಸಮುದ್ರಮಥನಕಾಲದಲ್ಲಿ ಕ್ಷೀರಸಮುದ್ರದಿಂದ ಹೊರಹೊಮ್ಮಿದ ಕನ್ನಿಕೆಯೆಂದು ಸುರೆಯ ಕಲ್ಪನೆ. ಹದಿನೆಂಟು ಕೈಗಳ ದೇವತೆ; ಮೂರು ಕಣ್ಣುಗಳು; ಉದ್ದನೆಯ ಬಳುಕುವ ಮೈಕಟ್ಟು; ನಾನಾ ಬಣ್ಣಗಳು, ಕಾಲಾಗ್ನಿಸದೃಶವಾದ ಕಾಂತಿ. ಅವಳು ಪಾರ್ವತಿಯಾದರೆ, ಅವಳಿಂದ ಒದಗುವ ಮತ್ತು(ಮೋಹ) ಮಹೇಶ್ವರನಂತೆ. ಹೆಂಡಕ್ಕೂ ಮೈಮರೆಯುವುದಕ್ಕೂ ಇರುವ ನಂಟು ಉಮಾಮಹೇಶ್ವರರ ನಂಟಿನಂತೆ

ಅವಿನಾಭಾವದ್ದು. ಪಾಲ್ಗಡಲನ್ನು ದೇವಾಸುರರು ಕಡೆದಾಗ ಕಡಗೋಲಾಗಿದ್ದ ಮಂದರಬೆಟ್ಟವನ್ನು ಸುತ್ತುಗಟ್ಟಿ ನೊರೆನೊರೆಯಾಗಿ ಮೇಲುಕ್ಕಿ ಬಂದ ಹೆಂಡದ ವರ್ಣನೆಯಲ್ಲಿ ಅದೊಂದು ಸುಳಿ, ಮಡುವು ಎಂಬ ಧ್ವನಿಯಿದೆ. ಈ ಸುದೀರ್ಘವಾದ ಧ್ಯಾನಶ್ಲೋಕದ ಆಕರವನ್ನು ಸ್ಪಷ್ಟವಾಗಿ ಹೇಳಿಲ್ಲ; 'ತತ್ಕಲ್ಪೆ' ಎಂದಷ್ಟೇ ಹೇಳಿದ್ದಾರೆ; 'ಸುರಾದೇವೀಕಲ್ಪ' ವೆಂಬುದು ಯಾವುದೋ ತಿಳಿಯದು)

೧೮. ಚತುಃಷಷ್ಟಿ ಕಲಾದೇವಿ-

'ಹಸ್ತಿಃ ಪದ್ಮಂ ರಥಾಂಗಂ ಗುಣಮಥ ಹರಿಣಂ
ಪುಸ್ತಕಂ ವರ್ಣಮಾಲಾಂ ಟಂಕಂ ಶುಭ್ರಂ ಕಪಾಲಂ
ದರಮಮೃತಲಸದ್ಧೇಮಕುಂಭಂ ದಧಾನಾಂ।
ಮುಕ್ತಾವಿದ್ಯುತ್ಪಯೋದಸ್ಫಟಿಕನವಜಪಾಬಂಧುರೈಃ
ಪಂಚವಕ್ತ್ರಾಸ್ತ್ರ್ಯಕ್ಷೈರ್ವಕ್ಷೋಜನಂಮ್ರಾಂ (ನಮ್ರಾಂ)
ಸಕಲಶಶಿನಿಭಾಂ ಶಾರದಾಂ ತಾಂ ನಮಾಮಿ॥
ಶುಭ್ರವರ್ಣಃ॥



ಚತುಃಷಷ್ಟಿಕಲಾ ದೇವಿ

(ಇಲ್ಲಿನ ದೇವತೆ ಶಾರದೆ; ಅರವತ್ತುನಾಲ್ಕುಕಲೆಗಳ ಅಭಿಮಾನಿದೇವತೆ. ಶಾಬರತಂತ್ರದಿಂದ ಆಯ್ದುಕೊಂಡಿರುವ ಈ ಧ್ಯಾನಶ್ಲೋಕದಲ್ಲಿ ಈಕೆಗೆ ಐದು ಮೊಗಗಳು, ಒಂದೊಂದರಲ್ಲೂ ಮೂರು



ಚತುಃಷಷ್ಟಿಕಲಾ ದೇವಿ

ಕಣ್ಣುಗಳು. ಕಮಲ, ಚಕ್ರ, ಪಾಶ, ಹರಿಣೆ(ಜಿಂಕೆ), ಪುಸ್ತಕ, ಜಪಮಾಲೆ, ಟಂಕ, ತಲೆಯೋಡೆ, ಶಂಖ, ಅಮೃತಕಲಶಗಳನ್ನು ಹಿಡಿದ ಹತ್ತು ಕೈಗಳು. ವಿದ್ಯಾಧಿದೇವತೆಯಾದುದರಿಂದ ಶುಭ್ರ, ಎಂದರೆ ಬಿಳಿ, ಬಣ್ಣ)

೧೯. ಸರ್ವವರ್ಣೇಶ್ವರೀ-

'ಅಕ್ಷಸ್ರಜಂ ಹರಿಣಪೋತಮುದಗ್ರಟಂಕಂ
ವಿದ್ಯಾಂ ಕರೈರವಿರತಂ ದಧತೀಂ ತ್ರಿಣೇತ್ರಾಂ।
ಅರ್ಧೇಂದುಮೌಳಿಮರುಣಾರವಿಂದವಾಸಾಂ
ವರ್ಣೇಶ್ವರೀಂ ಪ್ರಣಮತ ಸ್ತನಭಾರನಮ್ರಾಂ॥ (॥)

(ಸಿದ್ಧಶಾಬರತಂತ್ರ ಈ ಧ್ಯಾನಶ್ಲೋಕಕ್ಕೆ ಆಕರ. ವರ್ಣಮಾಲೆಯಲ್ಲಿ ಅಕಾರದಿಂದ ಕ್ಷಕಾರದವರೆಗಿರುವ ಎಲ್ಲ ವರ್ಣಗಳನ್ನೂ ಅಡಕಮಾಡಿಕೊಂಡಿರುವುದು ಜಪಮಾಲೆ; ಅಕ್ಷಸ್ರಜ. ಇದರ ಚಿತ್ರಣವೇ ಈ ದೇವತೆ. ನಾಲ್ಕು ಕೈಗಳು; ಜಪಮಾಲೆ, ಹುಲ್ಲೆಯ ಮರಿ, ಟಂಕ, ಪುಸ್ತಕಗಳನ್ನು ಹಿಡಿದಿದ್ದಾಳೆ. ತಲೆಯ ಮೇಲೆ ಚಂದ್ರಖಂಡ. ತಾವರೆ ಹೂಮೇಲೆ ಕುಳಿತಿದ್ದಾಳೆ. ಮೈಬಣ್ಣವೂ ನಸುಗೆಂಪು)

೨೦. ದ್ವಾದಶಾರ್ಧದೇವೀ-

'ಪಂಚವಕ್ತ್ರಾಂ ತ್ರಿಣೇತ್ರಾಂ ಚ ಶವಸ್ಥಾಂ ರಕ್ತವರ್ಣಕಾಂ।
ರಕ್ತಕಂಜಶಿರೋಮಾಲಾಂ ಚಂದ್ರರೇಖಾವತಂಸಕಾಂ।
ಅಕ್ಷಮಾಲಾಂಕುಶವರತ್ರಿಶೂಲಕುಸುಮಾಶುಗಾನ್।
ಪಾಶೇಕ್ಷುಚಾಪಮಭಯಂ ಕಪಾಲಂ ಪುಸ್ತಕಂ ತಥಾ।



ಸರ್ವವರ್ಣೇಶ್ವರೀ

ಧಾರಯಂತೀಂ ದ್ವಾದಶಾರ್ಧ(ರ್ಧ)ದೇವೀಂ ತಾಂ ಪ್ರಣಮಾಮ್ಯಹಂ!!
ರಕ್ತವರ್ಣಃ!!

(ದ್ವಾದಶಾರ್ಧದೇವಿಯು ಷಟ್‌ಪ್ರಯೋಗದ ಅಭಿಮಾನಿದೇವತೆ. ತಾಂತ್ರಿಕಪದ್ಧತಿಯಲ್ಲಿ ವಶೀಕರಣ, ಸ್ತಂಭನ, ಮೋಹನ, ಮಾರಣ, ಉಚ್ಚಾಟನ, ವಿದ್ವೇಷಣ ಎಂಬ ಷಟ್ಕರ್ಮಗಳ ಎಣಿಕೆಯಿದೆಯಷ್ಟೆ? ಶಿವನ ಸಂಹಾರಕೃತ್ಯಕ್ಕೆ ಅನುಗುಣವಾಗಿ ಈ ಷಟ್ಕರ್ಮಗಳಾದುದರಿಂದ, ಶಿವನಂತೆಯೇ ದೇವಿಯದೂ ಐದುಮೊಗಗಳ ರೂಪ. ಆದರೆ ಹೆಣದ ಮೇಲೆ ಕುಳಿತವಳು, ಕೆಂಪು ಬಣ್ಣದ ಮೈಯವಳು. ಹತ್ತು ಕೈಗಳು; ಜಪಮಾಲೆ, ಅಂಕುಶ, ತ್ರಿಶೂಲ, ಇಕ್ಷುಚಾಪ, ಪುಷ್ಪಬಾಣ, ಕಪಾಲ, ಪುಸ್ತಕ, ಮತ್ತು ಅಭಯವರದ ಮುದ್ರೆಗಳು, ಈ ಧ್ಯಾನಶ್ಲೋಕವು ಮಹಾಲಕ್ಷ್ಮೀರತ್ನಕೋಶದಲ್ಲಿದೆ.

೨೧. ತಿರಸ್ಕರಿಣೀ-

'ನೀಲವಾಜಿಸಮಾರೂಢಾ ನೀಲಾಂಗೀ ಖಡ್ಗಧಾರಿಣೀ।
ನಿದ್ರಾನಿಮೀಲದ್ಭುವನಾ ತಿರಸ್ಕರಣಿಕಾ(ss)ವತು!!
ನೀಲವರ್ಣಃ!!



ದ್ವಾದಶಾರ್ಣಾದೇವಿ

(ತಿರಸ್ಕರಿಣಿಯೆನ್ನುವುದು ಒಂದು ತಾಂತ್ರಿಕವಿದ್ಯೆ. ತಿರಸ್ಕರಿಣಿಯೆಂದರೆ ತೆರೆ ಹಾಕುವುದು, ಕಣ್ಣು ಮುಚ್ಚುವುದು, ಮರೆಯಿಸುವುದು. ಕೈಯಲ್ಲಿ ಕತ್ತಿ ಹಿಡಿದು, ನೀಲಿಬಣ್ಣದ ಕುದುರೆಯನ್ನೇರಿ ಸಾಗುವ ಈ ದೇವತೆಯ ಮೈಬಣ್ಣವೂ ನೀಲಿಗಪ್ಪು; ಕತ್ತಲೆಯ ಸಂಕೇತ. ಆಕೆಯ ಶಕ್ತಿಯೆಂದರೆ ಜಗದ ಜನರನ್ನೆಲ್ಲ ನಿದ್ರೆಯಲ್ಲಿ ಮರೆಯಿಸುವುದು. ಈ ಧ್ಯಾನಶ್ಲೋಕವೂ ಮಹಾಲಕ್ಷ್ಮೀರತ್ನಕೋಶದಿಂದಲೇ ಆಯ್ದುಕೊಂಡದ್ದು.)

೨೨. ಅಶ್ವಾರೂಢಾ-

'ಅಶ್ವಾರೂಢಾ ಕರಾಗ್ರೇ ನವಕನಕಮಯೀಂ ವೇತ್ರಯಷ್ಟಿಂ ದಧಾನಾ
ದಾಕ್ಷಿಣ್ಯೇ ಧಾರಯಂತೀ ಖಲಿನತನುಲತಾಪಾಶಬದ್ಧಾಂ ಸುಸಾಧ್ಯಾಂ
ದೇವೀ ನಿತ್ಯಪ್ರಸನ್ನಾ ಶಶಧರವಿಲಸತ್ಕೇಶಪಾಶಾ ತ್ರಿನೇತ್ರಾ
ದದ್ಯಾನವದ್ಯಾಂ ಸಕಲಸುಖಫಲಪ್ರಾಪ್ತಿಹೃದ್ಯಾಂ ಶ್ರಿಯಂ ನಃ!!
ರಕ್ತವರ್ಣಃ!!'

(ಮಹಾಲಕ್ಷ್ಮೀರತ್ನಕೋಶದಿಂದಲೇ ಆಯ್ದುಕೊಂಡ ಈ ಧ್ಯಾನಶ್ಲೋಕವು ಬಲಗೈಯಲ್ಲಿ ಬಂಗಾರದ ಬೆತ್ತವನ್ನೂ ಎಡಗೈಯಲ್ಲಿ ಹಗ್ಗವನ್ನೂ ಹಿಡಿದು ಕುದುರೆಯನ್ನೇರಿ ಬರುವ ಅಶ್ವಾರೂಢಾದೇವಿಯದು. ಕೆಂಪು ಮೈಬಣ್ಣ; ತಲೆಯ ಮೇಲೆ ಚಂದ್ರ; ಮೂರು ಕಣ್ಣುಗಳು)

೨೩. ಇಂದ್ರಾಕ್ಷೀ-

'ಇಂದ್ರಾಕ್ಷೀಂ ದ್ವಿಭುಜಾಂ ದೇವೀಂ ಪೀತವಸ್ತ್ರಾದ್ವಯಾನ್ವಿತಾಂ।
ಪ್ರಸನ್ನವದನಾಂಭೋಜಾಮಪ್ಸರೋಗಣಸೇವಿತಾಂ।
ಪೀತವರ್ಣಾ॥'



ಇಂದ್ರಾಕ್ಷೀ

(ಇಂದ್ರಾಕ್ಷೀಕಲ್ಪದಿಂದ ಎತ್ತಿಕೊಂಡ ಈ ಧ್ಯಾನಶ್ಲೋಕದ ಮೂರನೆಯ ಸಾಲನ್ನು ಇಲ್ಲಿ ಸ್ವಲ್ಪ ಮಾರ್ಪಡಿಸಿಕೊಂಡಿದ್ದಾರೆ. ಕಲ್ಪದಲ್ಲಿರುವುದು 'ಇಂದ್ರಾಕ್ಷೀಂ ನಾಮ ಸಜ್ಯೋತಿರ್ನಾನಾರತ್ನವಿಭೂಷಿತಾಂ' ಎಂದು. ಇಂದ್ರಾಕ್ಷಿ ಎಂಬ ದೇವತೆ ಗೌರಿ, ಶಾಕಂಭರಿ, ದುರ್ಗಾ, ನಾರಾಯಣಿ, ಭುವನೇಶ್ವರಿ ಮೊದಲಾದ ಹೆಸರುಗಳಿಂದ ಪ್ರಸಿದ್ಧಳಾದ ಶಕ್ತಿರೂಪ. ಇಂದ್ರನು ಈ ದೇವತೆಯನ್ನು ಪೂಜೆಮಾಡಿದನಾಗಿ ಆಕೆ ಇಂದ್ರಾಕ್ಷಿಯೆನಿಸಿಕೊಂಡಳೆಂದು ಕಲ್ಪದಲ್ಲಿ ಬರುವ ವಿವರಣೆ. ಈ ದೇವತೆಯು ದ್ವಿಭುಜೆ, ಎಡಗೈಯಲ್ಲಿ ವಜ್ರಾಯುಧ (ಇಂದ್ರನಿಗೆ ವಿಶಿಷ್ಟವಾದುದು); ಬಲಗೈಯಲ್ಲಿ ವರದಮುದ್ರೆ;ಮೈಬಣ್ಣ ಹಳದಿ)

೨೪. ತುಳಜಾಭವಾನೀ-

('ರಕ್ತಾಭಾಮರುಣಾಂ ಶುಭಾಂಬರಧರಾಮಾನಂದಪೂರ್ಣಾನನಾಂ
ಮುಕ್ತಾಹಾರವಿಭೂಷಣಾಂ ಕುಚಭರಾಕ್ರಾಂತಾಂ ತಾಂ ಸುಕಾಂಚೀಗುಣಾಂ



ತುಳಜಾಭವಾನೀ

ದೇವೀಂ ದಿವ್ಯರಸಾನ್ನಪೂರ್ಣಕಲಶಾಮಂಭೋಜದರ್ವೀಕರಾಂ
ಧ್ಯಾಯೇಚ್ಛಂಕರವಲ್ಲಭಾಂ ತ್ರಿಣಯನಾಮಭ್ರಾಳಕಾಂ ಭಾವಯೇ (॥)
ಅರುಣವರ್ಣಾ॥

(ಮಹಾರಾಷ್ಟ್ರದಲ್ಲಿ ಪ್ರಸಿದ್ಧಳಾದ ತುಳಜಾಭವಾನಿ ಅಥವಾ ಅಂಬಾಭವಾನಿಯ ಗುಡಿಯು ಉಸ್ಮಾನಾಬಾದ್‌ಜಿಲ್ಲೆಯ ತುಳಜಾಪುರದಲ್ಲಿದೆ; ಈ ದೇವತೆಯು ಛತ್ರಪತಿ ಶಿವಾಜಿಯ ಇಷ್ಟದೈವ. ಆದರೆ ಈ ಗುಡಿಯಲ್ಲಿರುವ ಮಾರ್ತಿ ಮೇಲಿನ ಧ್ಯಾನಶ್ಲೋಕಕ್ಕೆ ಹೊಂದುವುದಿಲ್ಲ; ಅದು ಎಂಟು ಭುಜಗಳ ಮಹಿಷಾಸುರಮರ್ದಿನಿಯ ರೂಪ. ಭವಾನೀಕಲ್ಪದಲ್ಲಿರುವ ಧ್ಯಾನಶ್ಲೋಕ ಅನ್ನಪೂರ್ಣೆಯ ರೂಪಕ್ಕೆ ಹೊಂದುತ್ತದೆ. ಎರಡು ಕೈಗಳ ಈ ದೇವತೆಯ ಎಡಗೈಯಲ್ಲಿ ದಿವ್ಯರಸಾನ್ನ ತುಂಬಿದ ಪಾತ್ರೆ, ಬಲಗೈಯಲ್ಲಿ ಕಮಲದಂಟನ್ನೇ ಸೌಟನ್ನಾಗಿ ಹಿಡಿದಿದ್ದಾಳೆ. ತುಳಜಾ ಎನ್ನುವ ಮರಾಠೀ ಮಾತು. ಸಂಸ್ಕೃತದ ತುರಜಾ, ಎಂದರೆ ವೇಗವಾಗಿ ಹೋಗುವವಳು, ತ್ವರಿತಾ, ಎಂಬುದರ ರೂಪಾಂತರ)

೨೫. ಚಂದಾಪರಮೇಶ್ವರೀ-

'ಕರಲಸದರವಿಂದಾ ಚಾರುನೇತ್ರಾರವಿಂದಾ
ನಿವಸತು ಹೃದಿ ಚಂದ್ರಾ ಸ್ಮೇರವಕ್ತ್ರಾರವಿಂದಾ।
ನಿಖಿಲವಿಬುಧಬೃಂದಾ ವಂದ್ಯಪಾದಾರವಿಂದಾ
ಅತಿಶಯಿತಮರಂದಾಮೋದಮಾಧ್ಯನ್ಮಿಳಿಂದಾ
ಕರವೃತಕರವಾಳಾ ಕಂಸದೃಷ್ಪ್ಯಾ ಕರಾಳಾ
ಗತಿವಿಜಿತಮರಾಳಾ ಪಕ್ಷ್ಮಪಂಕ್ಯಾಪ್ಯರಾಳಾ
ವಿಕಚಕಮಲಮಾಲಾ ಯೋಗಿಸಂಗೀತಶೀಲಾ
ವಸತು ರುಚಿರಲೀಲಾ ಚಂದ್ರಿಕಾನಂದಬಾಲಾ॥



ಚಂದ್ರಲಾಪರಮೇಶ್ವರಿ

ಸ್ವರ್ಣವರ್ಣಾಂ ಮಹಾದೇವೀಂ ದಿವ್ಯಸಿಂಹಾಸನೇ ಸ್ಥಿತಾಂ।
ಧ್ಯಾಯೇಚ್ಚ ವರದಾಂ ದೇವೀಂ ಚಂದಿರಾಂ ಪರಮೇಶ್ವರೀಂ॥

(ಕರ್ನಾಟಕದಲ್ಲಿ ಪ್ರಸಿದ್ಧಳಾದ ಈ ದೇವತೆಯ ಗುಡಿ ಸನ್ನತಿಯಲ್ಲಿದೆ; ಹಲವರಿಗೆ ಕುಲದೇವತೆ. ಈಕೆಯನ್ನು ಚಂದಲಾಪರಮೇಶ್ವರಿ ಎಂದು ಕರೆಯುವುದು ವಾಡಿಕೆ, 'ಚಂದಿರಾ' ಎನ್ನುವುದರ ಕನ್ನಡರೂಪ 'ಚಂದಲಾ'. ಈ ದೇವತೆಯ ಕಲ್ಪದಿಂದ ಎತ್ತಿಕೊಂಡಿರುವ ಮೇಲಿನ ಶ್ಲೋಕಗಳು ಕಾವ್ಯದೃಷ್ಟಿಯಿಂದ ಸೊಗಸಾಗಿವೆ. ಆದರೆ ಮೂರ್ತಿಲಕ್ಷಣವೇನು ಸ್ಪಷ್ಟವಾಗುವುದಿಲ್ಲ. ಕೈಯಲ್ಲಿ ಕತ್ತಿಯನ್ನು ಹಿಡಿದು ಕರಾಳರೂಪದಿಂದ ಸಿಂಹಾಸನದ ಮೇಲೆ ಕುಳಿತವಳೆಂಬಷ್ಟು ತಿಳಿಯುತ್ತದೆ)



ತುಳಸೀ

೨೬. ತುಳಸೀ-

'ಧ್ಯಾಯೇಚ್ಚ ತುಲಸೀಂ ದೇವೀಂ ಶ್ಯಾಮಾಂ ಕಮಲಲೋಚನಾಂ।
ಪ್ರಸನ್ನಾಂ ಪದ್ಮಕಲ್ಹಾರವರಾಭಯಚತುರ್ಭುಜಾಂ॥
ಕಿರೀಟಹಾರಕೇಯೂರಕುಂಡಲಾದಿವಿಭೂಷಿತಾಂ
ಧವಳಾಂಶುಕಸಂಯುಕ್ತಾಂ ಪದ್ಮಾಸನನಿಷೇದುಷೀಂ॥
ಶ್ಯಾಮವರ್ಣಃ॥'

(ತುಲಸೀಮಾಹಾತ್ಮ್ಯೆಯಲ್ಲಿರುವ ಈ ಧ್ಯಾನಶ್ಲೋಕಗಳ ಪ್ರಕಾರ, ತುಳಸಿಯು ಕಪ್ಪು ಬಣ್ಣದವಳು, ನಾಲ್ಕು ಕೈಗಳುಳ್ಳವಳು; ಕಮಲ, ಕಲ್ಹಾರಗಳನ್ನು ಪರಹಸ್ತಗಳಲ್ಲಿಯೂ, ವರದ ಅಭಯ ಮುದ್ರೆಗಳನ್ನು ನಿಜಹಸ್ತಗಳಲ್ಲಿಯೂ ಹಿಡಿದವಳು; ತಾವರೆಯ ಮೇಲೆ ಕುಳಿತವಳು; ಬಿಳಿ ಬಟ್ಟೆಯನ್ನುಟ್ಟವಳು)



ತುಳಸೀ

೨೭. ತ್ರಿಕಂಟಕೀ-

'ನೀಲಾ ನಾಭೇರಧಸ್ತಾದರುಣ ರುಚಿಧರಾಕಂಠದೇಶಾತ್ಸಿತಾ ಸಾ
ವಕ್ತ್ರೈರ್ದಂಷ್ಟ್ರಾಕರಾಳೈರುದರಪರಿಗತೈರ್ಭೀಷಣಾಂಗೀ ಚತುರ್ಭಿಃ।
ದೀಪೌ ಕಂಬುಂ ರಥಾಂಗಂ ಕರಸರಸಿರುಹೈರ್ದಾರಯಂತೀ
ಜಟಾಂತಸ್ಥೂರ್ಜತ್ಸೀ(ತ್ಶೀ)ತಾಂಶುಖಂಡಾ
ಭವತು ಭಯಹರಾ ದೇವತಾ ಚ ತ್ರಿನೇತ್ರಾ॥
ಚಿತ್ರವರ್ಣಃ॥'

(ಶಾರದಾತಿಲಕತಂತ್ರದಲ್ಲಿರುವ ಈ ಧ್ಯಾನಶ್ಲೋಕದ ಪ್ರಕಾರ ತ್ರಿಕಂಟಕೀದೇವಿಯ ಮೈಬಣ್ಣ ನಾಭಿಯಿಂದ ಕೆಳಗೆ ಕಪ್ಪು, ನಾಭಿಯಿಂದ ಕಂಠದವರೆಗೆ ಕೆಂಪು, ಕಂಠದ ಮೇಲೆ ಬಿಳಿ. ನಾಲ್ಕು ಕೈಗಳು; ಮುಂದಿನೆರಡು ಕೈಗಳಲ್ಲಿ ದೀಪಗಳು, ಹಿಂದಿನ ಕೈಗಳಲ್ಲಿ ಶಂಖ, ಚಕ್ರ. ತಲೆಯ ಮೇಲೆ ಜಟೆ; ಜಟೆಯಲ್ಲಿ ಚಂದ್ರರೇಖೆ, ಭಯವನ್ನು ನೀಗಿಸುವ ದೇವತೆಯಂತೆ)

೨೮. ಮೋಹಿನೀ ನಿತ್ಯಾ-

'ಅರ್ಧೇಂದು ಮೌಳಿಮರುಣಾಮಮರಾಭವಂದ್ಯಾ-
ಮಂಭೋಜಪಾಶಸೃಣಿಪೂರ್ಣಕಪಾಲಹಸ್ತಾಂ ।
ರಕ್ತಾಂಗರಾಗವಸನಾಭರಣಾಂ ತ್ರಿನೇತ್ರಾಂ
ಧ್ಯಾಯೇಚ್ಛಿವಸ್ಯ ವನಿತಾಂ ಮದವಿಹ್ವಲಾಂಗೀಂ (॥)
ರಕ್ತವರ್ಣಃ॥'

(ಶಾರದಾತಿಲಕತಂತ್ರದಿಂದ ಉದ್ಧೃತವಾದ ಈ ಧ್ಯಾನಶ್ಲೋಕದ ಪ್ರಕಾರ, ಮೋಹಿನಿಯು ಶಿವನ ಮಡದಿ; ತಾನೇ ಮೋಹದಿಂದ ಕಂಗೆಟ್ಟವಳು. ನಾಲ್ಕು ಕೈಗಳು; ತಾವರೆ, ಪಾಶ, ಅಂಕುಶ, ತಲೆಯೋಡೆಗಳನ್ನು ಹಿಡಿದಿದ್ದಾಳೆ. ಕೆಂಪು ಬಣ್ಣದ ಬಟ್ಟೆಯುಟ್ಟು, ತಲೆಯ ಮೇಲೆ ಚಂದ್ರಖಂಡವನ್ನು ಧರಿಸಿದ್ದಾಳೆ. ಈಕೆಯ ಮೈಬಣ್ಣವೂ ಕೆಂಪು)

೨೯. ತ್ವರಿತಾ-

'ಶ್ಯಾಮಾಂ ಬರ್ಹಿಕಲಾಪಶೇಖರಯುತಾಮಾಬದ್ಧಪೂರ್ಣಾಂಕುರಂ।
ಗುಂಜಾಹಾರಲಸತ್ಪಯೋಧರಯುತಾಮಷ್ಟಾಹಿಪಾನ್ ಬಿಭ್ರತೀಂ।
ತಾಟಂಕಾಂಗದಮೇಖಲಾಂ ಗುಣರಣನ್ಮಂಜೀರಭೂಷಿತಾಂ
ಕೈರಾತೀಂ ವರದಾಭಯೋದ್ಯತಕರಾಂ ದೇವೀಂ ತ್ರಿಣೇತ್ರಾಂ ಭಜೆ।
ಶ್ಯಾಮವರ್ಣಃ॥'

(ಶಾರದಾತಿಲಕತಂತ್ರ ಈ ಶ್ಲೋಕಕ್ಕೆ ಆಕರ. ಅಲ್ಲಿನ ತ್ವರಿತಾದೇವಿ ಕಿರಾತವರ್ಗಕ್ಕೆ ಸೇರಿದವಳು. ತಲೆಯ ಮೇಲೆ ನವಿಲುಗರಿ, ಕೊರಳಲ್ಲಿ ಗುಲಗಂಜಿಯ ಮಾಲೆ; ಅಷ್ಟನಾಗಗಳೇ ಆಭರಣ. ಎರಡು ಕೈಗಳು, ವರದ ಅಭಯಮುದ್ರೆಗಳಲ್ಲಿ. ಮೂರು ಕಣ್ಣುಗಳು)

೩೦. ಕಾಳರಾತ್ರೀ-

ಎ('ಏ)ಕವೇಣೀ ಜಪಾಕರ್ಣಪೂರಾ ನಗ್ನಾ ಖರಸ್ಥಿತಾ।
ಲಂಬೋಷ್ಠಕರ್ಣಿಕಾಕರ್ಣೀ ತೈಲಾಭ್ಯಕ್ತಶರೀರಿಣೀ।



ಕಾಳರಾತ್ರಿ

ವಾಮಪಾದೋಲ್ಲಸಲ್ಲೋಹಲತಾಕಂಟಕಭೂಷಣಾ।
ವರ್ಧನ್ಮೂರ್ಧಧ್ವಜಾ ಕೃಷ್ಣಾ ಕಾಳರಾತ್ರೀ ಭಯಂಕರೀ।
ಕೃಷ್ಣವರ್ಣಾ॥'

(ಕಾಳರಾತ್ರಿಯೆಂಬ ಭಯಂಕರ ದೇವತೆಯ ಮೈಬಣ್ಣ ಕಪ್ಪು; ಒಂದೇ ಜಡೆಯುಳ್ಳವಳು, ಏಕಜಟೆ. ಬೆತ್ತಲೆಯಾಗಿ ಕತ್ತೆಯನ್ನೇರಿ ಕೂತವಳು; ಮೈಗೆಲ್ಲ ಎಣ್ಣೆ ಸೂಸಿಕೊಂಡವಳು. ಈ ಧ್ಯಾನಶ್ಲೋಕವು ನೃಸಿಂಹಪ್ರಾಸಾದದಿಂದ ಎತ್ತಿಕೊಳ್ಳಲಾಗಿದೆ.)

(೧೧) ಶ್ರೀವಿದ್ಯೆಗೆ ಸಂಬಂಧಿಸಿದ ಕೆಲವು ರೂಪಗಳು

ಹೀಗೆ ಮೂಲಗ್ರಂಥದಲ್ಲಿ ಕಾಣಿಸಿಲ್ಲ; ಈ ಕ್ರಮದಲ್ಲಿ ದೇವತೆಗಳನ್ನು ನಿರೂಪಿಸಿಯೂ ಇಲ್ಲ. ಈ ಬಗೆಯ ವರ್ಗೀಕರಣದಿಂದ ಓದುಗರಿಗೆ ಅನುಕೂಲವಾದೀತೆಂದು, ಮೂಲಗ್ರಂಥದಲ್ಲಿ ಬೇರೆ ಬೇರೆ ಎಡೆಗಳಲ್ಲಿ ಬಂದಿರುವ ದೇವತೆಯರನ್ನು ನಾನು ಇಲ್ಲಿ ಸಂಕಲನಮಾಡಿದ್ದೇನೆ. ಈ ಕ್ರಮವನ್ನು ಮುಂದೆಯೂ ಅನುಸರಿಸಿರುವುದನ್ನು ಗಮನಿಸಬಹುದು.

೧. ಶ್ರೀ ವಿದ್ಯಾದೇವೀ-

'ಆಧಾರೇ ತರುಣಾರ್ಕಬಿಂಬವದನೇ ಹ್ಯು(ಹ್ಯ)ತ್ಯುಗ್ರದಂಷ್ಟ್ರಾಂಕುರೇ
ವೀಣಾವಾದಮನಂತಭೋಗನಿಲಯೇ ವೀಣಾದಿಗಾನಪ್ರಿಯೇ।
ನಾನಾವರ್ಣಮಯೇ ನರಾಸ್ಥಿಲುಳಿತೆ ಸುವ್ಯಕ್ತಮಾಲಾಧರೆ।
ಶ್ರೀವಿದ್ಯೆ ತ್ವರಿತೆ ಮಹಾರ್ಥಮಹಿತೇ ಶ್ರೀಶಂಕರಿ ತ್ವಾಂ ಭಜೇ॥
ಚಿತ್ರವರ್ಣಾ॥'

(ಮಹಾಲಕ್ಷ್ಮೀರತ್ನಕೋಶದಿಂದ ಉದ್ಧೃತವಾದ ಈ ಧ್ಯಾನಶ್ಲೋಕದಲ್ಲಿ ಶ್ರೀವಿದ್ಯಾದೇವಿಯನ್ನು ತ್ವರಿತಾದೇವಿಯೆಂದೇ ನಿರ್ದೇಶಿಸಿ, ಮೂಲಾಧಾರದಲ್ಲಿ ನೆಲೆಸಿರುವಂತೆ ಬಣ್ಣಿಸಲಾಗಿದೆ)

೨. ಶುದ್ಧವಿದ್ಯಾ ದೇವಿ-

'ಅಕ್ಷಮಾಲಾಂ ಪುಸ್ತಕಂ ಚ ದಧಾನಾ ಶ್ವೇತವಿಗ್ರಹಾ।
ಚಿನ್ಮುದ್ರಾಭೀತಿ ಹಸ್ತಾ ಚ ಶುದ್ಧವಿದ್ಯಾ ಸದಾವತು॥
ಶ್ವೇತವರ್ಣಾ॥'

(ಶುದ್ಧವಿದ್ಯಾದೇವಿಯು ಬಿಳಿಬಣ್ಣದವಳು, ಎಂದರೆ ಶುದ್ಧಸಾತ್ತ್ವಿಕಸ್ವರೂಪದ ದೇವತೆ. ನಾಲ್ಕು ಕೈಗಳು; ಜಪಮಾಲೆ, ಪುಸ್ತಕ, ಚಿನ್ಮುದ್ರೆ ಮತ್ತು ಅಭಯಮುದ್ರೆಗಳು. ಸೋಮನಾಥವಲ್ಲೀ ಮಂತ್ರಶಾಸ್ತ್ರದಿಂದ ಆಯ್ದುಕೊಂಡ ಧ್ಯಾನಶ್ಲೋಕ)

೩. ಕಾಮಕಳೇಶ್ವರೀ-

'ಪಂಕಜಪಾಶೇಕ್ಷುಧನುಃ ಕಿಂಶುಕಶಾಲ್ಯಗ್ರಪಂಚಬಾಣಧರಾಂ।
ಸತತಾಭಯವರಹಸ್ತಾಂ ಕಲಯೆ ಕಾಮಕಳಾಧರಾಮಂಬಾಂ। (॥)

(ಹಿಂದೆಯೆ ಉಲ್ಲೇಖಿಸಲಾಗಿರುವ ಈ ದೇವತೆಯ ಧ್ಯಾನಶ್ಲೋಕವನ್ನು



ಕಾಮಕಳೇಶ್ವರೀ

ಇಲ್ಲಿ ಮಹಾಲಕ್ಷ್ಮೀ ರತ್ನಕೋಶದಿಂದ ಎತ್ತಿಕೊಳ್ಳಲಾಗಿದೆ)


೪. ದಂಡನಾಥಾ ವಾರಾಹೀ-

'ದಂಡನಾಥಾ ತತ್ರ ದೇವೀ ಶತಸ್ಥಾಂಭಾಢ್ಯಮಂಟಪೇ।
ಕಾರ್ತಸ್ವರಮಯಾಂಭೋಜಕರ್ಣಿಕಾಮಧ್ಯಸಂಸ್ಥಿತಂ।
ಬಿಂದುತ್ರಿಕೋಣವೃತ್ತಾಢ್ಯ ಷಡ್ದಳಂ ವೃತ್ತಯುಗ್ಮಕಂ।
ಚಕ್ರಂ ವಿರಾಜತೆ(s)ತ್ರ ತಪ್ತಕಾಂಚನಸಂನಿಭಾ।
ಸಂಧ್ಯಾರುಣಲಸಚ್ಚೇಲಾ ಸರ್ವಾಭರಣಮಂಡಿತಾ।
ಶಂಖಚಕ್ರಾಭಯವರಾನ್ಹಲಂ ಚ ಮುಸಲಂ ತಥಾ।
ಪಾಶಾಂಕುಶೌ ಚ ದಧತೀ ಚಂದ್ರರೇಖಾವತಂಸಿನೀ।
ವರಾಹವಕ್ತ್ರಸಂಯುಕ್ತಾ ದಂಡಿನೀ ತತ್ರ ವರ್ತತೇ ।
ಕನಕವರ್ಣಾ॥'

(ಲಲಿತೋಪಾಖ್ಯಾನದಿಂದ ಎತ್ತಿಕೊಂಡಿರುವ ಈ ಧ್ಯಾನಶ್ಲೋಕವು ತ್ರಿಪುರಸುಂದರೀದೇವಿಯ ದಂಡನಾಥೆಯಾದ ವಾರಾಹಿಯನ್ನು ಕುರಿತದ್ದು. ಈ ದೇವತೆಯ ವರ್ಣನೆ ಹಿಂದೆ ಶ್ರೀಚಕ್ರದೇವತೆಗಳನ್ನು ಹೇಳುವಾಗ ಆಗಲೆ ಬಂದಿದೆ)

೫. ಸ್ವಪ್ನವಾರಾಹೀ-

'ಮೇಘಶ್ಯಾಮರುಚಿಂ ಮನೋಹರಕುಚಾಂ
ನೇತ್ರತ್ರಯೋದ್ಭಾಸಿತಾಂ ಕೋಲಾಸ್ಯಾಂ ಶಶಿಶೇಖರಾಮಭಿಲಸದ್ದಂ



ಸ್ವಪ್ನವಾರಾಹೀ

ಷ್ಟ್ರೋಜ್ವಲದ್ವರಾಹಾಸ್ಯಾಂ ರಕ್ತವಸ್ತ್ರೈ(ಸ್ತ್ರೈ)ತ್ತರೀಯ್ಯಕಾಂ।
ಶೂಲಂ ಕಪಾಲಂ ಮುಸಲಂ ನಾಗಂ ಹಸ್ತಾಂಬುಜೈರ್ಭ್ಯತಾಂ।
ಯಿಂ(ಇಂ)ದುರೇಖಾಲಸನ್ಮೌಳಿಂ ವಾರಾಹೀಂ ತಾಮಹಂ ಭಜೇ।।
ನೀಲವರ್ಣಾ।।'

(ವಾರಾಹೀಭೇದಗಳಲ್ಲೊಂದು ಸ್ವಪ್ನವಾರಾಹೀ. ಧ್ಯಾನಶ್ಲೋಕದ ಆಕರವನ್ನು ('ತತ್ಕಲ್ಪೆ') ಎಂದು ಕಾಣಿಸಲಾಗಿದೆ. ಆದರೆ ಸ್ವಪ್ನವಾರಾಹೀಕಲ್ಪ ವೆಂಬುದು ನಮಗೆ ದೊರೆಯುವುದಿಲ್ಲ, ವಾರಾಹೀಕಲ್ಪವೇನೋ ಇದೆ.)

೬. ಶುದ್ಧವಾರಾಹೀ-

'ದಂಷ್ಟ್ರೋಜ್ವಲದ್ವರಾಹಾಸ್ಯಂ ರಕ್ತವಸ್ತ್ರೈ(ಸ್ತ್ರೈ)ತ್ತರೀಯ್ಯಕಾಂ।
ಶೂಲಂ ಕಪಾಲಂ ಮುಸಲಂ ನಾಗಂ ಹಸ್ತಾಂಬುಜೈರ್ಭ್ಯತಾಂ।
ಯಿಂ(ಇಂ)ದುರೇಖಾಲಸನ್ಮೌಳಿಂ ವಾರಾಹೀಂ ತಾಮಹಂ ಭಜೇ।।
ನೀಲವರ್ಣಾ।।'

(ವಾರಾಹೀಭೇದಗಳಲ್ಲಿ ಇನ್ನೊಂದು. ಮೂರ್ತಿಲಕ್ಷಣ ಮೇಲಿನಂತೆಯೇ)

೭. ಲಘು ಶ್ಯಾಮಳಾ-

'ಸ್ಮರೇತ್ಪ್ರಥಮಪುಷ್ಪಿಣೀಂ ರುಧಿರಬಿಂದುಶೋಣಾಂಬರಾಂ
ಗೃಹೀತಮಧುಪಾತ್ರಿಕಾಂ ಮದವಿಘೂರ್ಣನೇತ್ರಾಂಚಲಾಂ।
ಕರಸ್ಫುರಿತವಲ್ಲಕೀಂ ವಿಮಲ ಶಂಖತಾಟಂಕಿನೀಂ
ಘನಸ್ತನಭರಾಲಸಾಂ ಗಳಿತಚೂಳಿಕಾಂ ಶ್ಯಾಮಳಾಂ।
ಶ್ಯಾಮವರ್ಣಾ।।'

(ಶ್ರೀಚಕ್ರದ ನಾಯಕಿಯಾದ ತ್ರಿಪುರಸುಂದರೀದೇವಿಗೆ ಮಂತ್ರಿಣಿಯೆಂದು ಪ್ರಸಿದ್ಧಳಾದ ಈ ದೇವತೆಯ ವಿಚಾರ ಆಗಲೇ ಬಂದಿದೆ. ಈ ಧ್ಯಾನಶ್ಲೋಕವನ್ನು ಶ್ಯಾಮಳಾಕಲ್ಪದಿಂದ ಎತ್ತಿಕೊಳ್ಳಲಾಗಿದೆ. ಮೊಟ್ಟಮೊದಲಬಾರಿಗೆ ಋತುಮತಿಯಾದವಳು. ರಕ್ತದ ಕಲೆ ಬಟ್ಟೆಯ



ರಾಜಮಾತಂಗೀ

ಮೇಲೆ ಕಾಣಿಸುತ್ತದೆ; ಒಂದು ಕೈಯಲ್ಲಿ ಹೆಂಡದ ಬಟ್ಟಲು, ಮತ್ತನ್ನು ತೋರಿಸುವ ಕಣ್ಣುಗಳು; ವೀಣೆಯನ್ನೂ ನುಡಿಸುತ್ತಿದ್ದಾಳೆ)

೮. ರಾಜಮಾತಂಗೀ-

'ರತ್ನಾಸನಾಂ ಶ್ಯಾಮಗಾತ್ರೀಂ ಶ್ರುಣ್ವತೀಂ ಶುಕಜಲ್ಪಿತಂ
ಅಬ್ಜನ್ಯಸ್ತೈಕಚರಣಾಂ ಚಾರುಚಂದ್ರಾವತಂಸಕಾಂ।
ವೀಣಾಮಾಲಾಪಯಂತೀಂ ಚ ತಿಲಕೋದ್ಭಾಸಿಫಾಲಕಾಂ
ಸೌಗಂಧಿಕಸ್ರಕಲಿಕಾ ಚೂಳಿಕಾಂ ರಕ್ತವಾಸಸೀಂ।
ವಿಭೂಷಣೈರ್ಭೂಷಿತಾಂ ಚ ಮಾತಂಗೀಂ ಪ್ರಣಮಾಮ್ಯಹಂ। (II)
ಶ್ಯಾಮವರ್ಣಃII'

(ದಶಮಹಾವಿದ್ಯೆಯರಲ್ಲಿ ಒಂದಾದ ಮಾತಂಗಿಯ ರೂಪಭೇದ ಇದು; ಮಾತಂಗೀ, ಸುಮುಖೀ ಎಂಬ ಮತ್ತೆರಡು ರೂಪಗಳಿವೆ. ಪಕ್ಕದಲ್ಲಿ ಗಿಣಿಯೊಂದು ಮಾತನಾಡುವುದನ್ನು ಆಲಿಸುತ್ತಿರುವಂತೆ ಇದ್ದಾಳೆ. ಗಿಣಿಯೆಂದರೆ ಎಲ್ಲ ಕಲೆಗಳು; ('ಶುಕಮಖಿಲ ಕಲಾರೂಪಂ'). ಕಪ್ಪುಬಣ್ಣದ ಈ ದೇವತೆ ವೀಣೆಯನ್ನೂ ನುಡಿಸುತ್ತಿರುವಂತೆ ಕಲ್ಪಿಸಿಕೊಳ್ಳಲಾಗಿದೆ. ಹಣೆಯ ಮೇಲೆ ತಿಲಕವಿದೆ; ಉಟ್ಟ ಬಟ್ಟೆ ಕೆಂಪು ಬಣ್ಣದ್ದು; ರತ್ನಸಿಂಹಾಸನದ ಮೇಲೆ ಕುಳಿತಿದ್ದಾಳೆ, ಒಂದು ಕಾಲನ್ನು ತಾವರೆಯ ಮೇಲೆ ಇರಿಸಿಕೊಂಡಿದ್ದಾಳೆ. ಸರ್ವಜನಮನೋಹರಿಯೆಂದೂ ಸರ್ವಸತ್ತ್ವವಶಂಕರಿಯೆಂದೂ ವರ್ಣನೆಗಳಿವೆ)

೯. ಬಾಲಾ-

'ಜಪಾಕುಸುಮಸಂಕಾಶಾ ಫುಲ್ಲಪದ್ಮಾಸನಸ್ಥಿತಾ।
ಅಕ್ಷಸ್ರಕ್ಪುಸ್ತಕಾಭೀತಿವರಹಸ್ತಾತು ಬಾಲಿಕಾ। (II)
ರಕ್ತವರ್ಣಃII'



ಬಾಲಾ

(ತ್ರಿಪುರಸುಂದರೀದೇವಿಯ ಬಾಲಿಕಾರೂಪ ಇದು. ತ್ರಿಪುರಸುಂದರೀ ಕಲ್ಪದಿಂದಲೇ ಆಯ್ದುಕೊಂಡ ಧ್ಯಾನಶ್ಲೋಕದಲ್ಲಿ ಕೆಂಪು ಮೈಬಣ್ಣವೆಂದೂ, ಅರಳಿದ ತಾವರೆಯ ಮೇಲೆ ಕುಳಿತವಳೆಂದೂ, ನಾಲ್ಕು ಕೈಗಳಿದ್ದು



ಬಾಲಾ

ಅವುಗಳಲ್ಲಿ ಜಪಮಾಲೆ, ಪುಸ್ತಕ, ಅಭಯವರದ ಮುದ್ರೆಗಳನ್ನು ಕಾಣಬಹುದೆಂದೂ ವಿವರಗಳಿವೆ)

(೧೨) ಭುವನೇಶ್ವರೀ ರೂಪಗಳು

೧. ಭುವನೇಶ್ವರೀ-

'ಉದ್ಯದ್ಭಾಸ್ವತ್ಸಮಾಭಾಂ ವಿಜಿತನವಜಪಾಮಿಂದುಖಂಡಾವನದ್ಧಾಂ
ಜ್ಯೋತಿರ್ಮಾಲಾಂ ತ್ರಿನೇತ್ರಾಂ ವಿವಿಧಮಣಿಲಸತ್ಕುಂಡಲಾಂ
ಪದ್ಮಸಂಸ್ಥಾಂ।
ಹಾರಗ್ರೈವೇಯಕಾಂಚೀಮಣಿಗಣವಲಯೈಸ್ಸಂಯುತಾಮಂಬ
ರಾಢ್ಯಾಮಾದ್ಯಾಂ
ಪಾಶಾಂಕುಶಾಭ್ಯಾಮಭಯವರಕರಾಂ ಭಾವಯೇ ಭೌವನೇಶೀಂII
ರಕ್ತವರ್ಣಃII'



ಭುವನೇಶ್ವರಿ

(ಬಹುವಾಗಿ ಬಳಕೆಯಲ್ಲಿರುವ ದೇವೀರೂಪ ಇದು; ಮನೆಗಳಲ್ಲೂ ಗುಡಿಗಳಲ್ಲೂ ಪೂಜೆಗೊಳ್ಳುವ ದೇವತೆ. ಕಮಲದ ಮೇಲೆ ಕುಳಿತವಳು; ಎಲ್ಲ ಆಭರಣಗಳನ್ನು ಧರಿಸಿದವಳು. ಅವಳ ಮೈಬಣ್ಣ ಕೆಂಪು. ನಾಲ್ಕು ಕೈಗಳು; ನಿಜಹಸ್ತಗಳಲ್ಲಿ ವರದ, ಅಭಯಮುದ್ರೆಗಳು, ಪರಹಸ್ತಗಳಲ್ಲಿ ಪಾಶ, ಅಂಕುಶ. ಈ ಧ್ಯಾನಶ್ಲೋಕವು ಮಹಾಲಕ್ಷ್ಮೀರತ್ನಕೋಶದಲ್ಲಿದೆ)

೨. ಸೌಭಾಗ್ಯಭುವನೇಶ್ವರೀ-

'ಸಿಂದೂರಾರುಣವಿಗ್ರಹಾಂ ತ್ರಿನಯನಾಂ ಮಾಣಿಕ್ಯಮೌಳಿ-
ಸ್ಫುರತ್ತಾರಾನಾಯಕಶೇಖರಾಂ ಸ್ಮಿತಮುಖೀಮಾಪೀನವಕ್ಷೋರುಹಾಂ।
ಪಾಣಿಭ್ಯಾಂ ಮಣಿಪೂರ್ಣರತ್ನಚಷಕಂ ರಕ್ತೋತ್ಪಲಂ ಬಿಭ್ರತೀಂ
ಸೌಮ್ಯಂ ರತ್ನನಿಧಿಸ್ಥಸವ್ಯಚರಣಾಂ ಧ್ಯಾಯೇತ್ಪರಾಮಂಬಿಕಾಂ॥
ಸಿಂದೂರವರ್ಣಾ॥'

(ಭುವನೇಶ್ವರಿಯ ರೂಪಭೇದ. ಎರಡೇ ಕೈಗಳು; ಒಂದು ಕೈಯಲ್ಲಿ ಮಣಿಗಳಿಂದ ತುಂಬಿದ ರತ್ನಪಾತ್ರೆ, ಇನ್ನೊಂದರಲ್ಲಿ ಕೆಂಪುಬಣ್ಣದ ಉತ್ಪಲ. ಮೂರು ಕಣ್ಣುಗಳು; ಸಿಂದೂರ ಮೈಬಣ್ಣ; ನಗುಮುಖ. ಒಂದು ಕಾಲನ್ನು ರತ್ನಕುಂಭದ ಮೇಲೆ ಇರಿಸಿಕೊಂಡಿದ್ದಾಳೆ. ಶಾರದಾತಿಲಕತಂತ್ರದಿಂದ ಎತ್ತಿಕೊಂಡದ್ದು ಧ್ಯಾನಶ್ಲೋಕ)



ಸೌಭಾಗ್ಯ ಭುವನೇಶ್ವರಿ



ಮಾಯಾಭುವನೇಶ್ವರಿ



ಸೂರ್ಯಾತ್ಮಕ ಭುವನೇಶ್ವರಿ

೩ ಮಾಯಾಭುವನೇಶ್ವರೀ

'ಶ್ಯಾಮಾಂಗೀಂ ಶಶಿಶೇಖರಾಂ ನಿಜಕರೈರ್ದಾನಂ ಚ ರಕ್ತೋತ್ಪಲಂ
ರತ್ನಾಢ್ಯಚಷಕಂ ಪರಂ ಭಯಹರಂ ಸಂಬಿಭ್ರತೀಂ ಶಾಶ್ವತೀಂ॥
ಮುಕ್ತಾಹಾರಲಸತ್ಪಯೋಧರನತಾಂ ನೇತ್ರತ್ರಯೋಲ್ಲಾಸಿನೀಂ
ವಂದೇಹಂ ಸುರಪೂಜಿತಾಂ ಹರವಧೂಂ ರಕ್ತಾರವಿಂದಸ್ಥಿತಾಂ॥
ನೀಲವರ್ಣಃ॥'

(ಭುವನೇಶ್ವರಿಯ ಇನ್ನೊಂದು ರೂಪ. ನಾಲ್ಕು ಕೈಗಳು; ನಿಜಹಸ್ತಗಳಲ್ಲಿ ವರದ ಅಭಯಮುದ್ರೆಗಳು; ಪರಹಸ್ತಗಳಲ್ಲಿ ರತ್ನಪಾತ್ರೆ, ಉತ್ಪಲ ಎಂದರೆ ಕೆಂಪುತಾವರೆಯ ಮೇಲೆ ಕುಳಿತವಳು; ಮೈಬಣ್ಣ ನೀಲಿಗಪ್ಪು; ತಲೆಯ ಮೇಲೆ ಚಂದ್ರಬಿಂಬ. ಶಾರದಾತಿಲಕತಂತ್ರದ್ದೇ ಧ್ಯಾನಶ್ಲೋಕ)

(೧೨) ಅಷ್ಟಲಕ್ಷ್ಮೀ ರೂಪಗಳು

'ಅಥ ಅಷ್ಟಮಹಾಲಕ್ಷ್ಮೀಸ್ವರೂಪಾಣಿ'

೧. ದ್ವಿಭುಜಲಕ್ಷ್ಮೀ

'ಹರೇಸ್ಸಮೀಪೇ ಕರ್ತವ್ಯಾ ಲಕ್ಷ್ಮೀಸ್ತು ದ್ವಿಭುಜಾ ನೃಪ।
ದಿವ್ಯರೂಪಾಂಬುಜಕರಾ ಸರ್ವಾಭರಣಭೂಷಿತಾ॥
ಹೇಮವರ್ಣಃ॥

(ನೃಸಿಂಹಪ್ರಾಸಾದವೆಂಬ ಗ್ರಂಥದಿಂದ ಆಯ್ದುಕೊಂಡ ಈ ಧ್ಯಾನಶ್ಲೋಕದ ಪ್ರಕಾರ, ವಿಷ್ಣುವಿನ ಪಕ್ಕದಲ್ಲಿರುವಂತೆ ಲಕ್ಷ್ಮಿಯದು ಎರಡು ಕೈಗಳ ರೂಪ. ಹೊಂಬಣ್ಣದ ಮೈ, ಎಲ್ಲ ಆಭರಣಗಳನ್ನು ಧರಿಸಿದ ಚೆಲುವೆ; ಒಂದು ಕೈಯಲ್ಲಿ ಕಮಲವನ್ನು ಹಿಡಿದಿದ್ದಾಳೆ)

೨ ಗಜಲಕ್ಷ್ಮೀ

'ಲಕ್ಷ್ಮೀ ಶುಕ್ಲಾಂಬರಾ ದೇವೀ ರೂಪೇಣಾಪ್ರತಿಮಾ ಭುವಿ।
ಪೃಥಕ್ಚತುರ್ಭುಜಾ ಕಾರ್ಯಾ ದೇವೀ ಸಿಂಹ್ಯಾ(ಹಾ) ಸನೇ ಶುಭಾ।
ಸಿಂಹ್ಯಾ(ಹಾ) ಸನಸ್ಯಾಃ ಕರ್ತವ್ಯಂ ಕಮಲಂ ಚಾರುಕರ್ಣಿಕಂ।
ಅಷ್ಟಪತ್ರಂ ಮಹಾಭಾಗ ಕರ್ಣಿಕಾಯಾಂ ಸುಸಂಸ್ಥಿತಾ।
ವಿನಾಯಕವದಾಸೀನಾ ದೇವೀ ಕಾರ್ಯಾ ಚತುರ್ಭುಜಾ
ಬೃಹಂನಾ(ನ್ನಾ)ಳಂ ಕರೆ ಕಾರ್ಯಂ ತಸ್ಯಾಶ್ಚ ಕಮಲಂ ಶುಭಂ।
ದಕ್ಷಿಣೆ ಯಾದವಶ್ರೇಷ್ಠ ಕೆಯೂರಪ್ರಾಂತಸಂಸ್ಥಿತಂ।
ವಾಮೆ(s)ಮೃತಘಟಃ ಕಾರ್ಯಸ್ತಥಾ ರಾಜನ್ಮನೋಹರಃ।
ತಸ್ಯಾ ಅನ್ಯಾ ಕರೌ ಕಾರ್ಯೌ ಬಿಲ್ವಶಂಖಿಧರೌ ದ್ವಿಜ।
ಆವರ್ಜಿತಕರಂ ಕಾರ್ಯಂ ತತ್ಪೃಷ್ಠೇ ಕುಂಜರದ್ವಯಂ॥
ದೇವ್ಯಶ್ಚ ಮಸ್ತಕೇ ಕಾರ್ಯಂ ಪದ್ಮಂ ಚಾಪಿ ಮನೋಹರಂ॥
ಸ್ವರ್ಣವರ್ಣಃ॥'

(ಬಹುಪ್ರಸಿದ್ಧವಾಗಿರುವ ಲಕ್ಷ್ಮೀರೂಪ ಇದು. ಮೇಲೆ ಕಾಣಿಸಿರುವ ಧ್ಯಾನಶ್ಲೋಕಗಳನ್ನು ಪಾಂಚರಾತ್ರದಿಂದ ಎತ್ತಿಕೊಂಡಿರುವಂತೆ ಕಾಣಿಸಿದೆ. ಯಾವ ಪಾಂಚರಾತ್ರಾಗಮವೆಂಬುದನ್ನು ನಿರ್ದೇಶಿಸಿಲ್ಲ. ಹೊಂಬಣ್ಣದ ಲಕ್ಷ್ಮಿ ಬಿಳಿಬಣ್ಣದ ಬಟ್ಟೆಯನ್ನುಟ್ಟು, ಸಿಂಹಾಸನದ ಮೇಲೆ, ಎಂಟುದಳಗಳ ಕಮಲದ ನಡುವೆ ಕುಳಿತಿದ್ದಾಳೆ. ನಾಲ್ಕು ಕೈಗಳು; ಎರಡು ಕೈಗಳಲ್ಲಿ ಕಮಲದ ದಂಟುಗಳು, ಮತ್ತೆರಡರಲ್ಲಿ ಶಂಖ, ಚಕ್ರ. ಎಡಭಾಗದಲ್ಲಿ ಅಮೃತಘಟ. ಅವಳ ಹಿಂಭಾಗದಿಂದ ಎರಡು ಆನೆಗಳು ಆಕೆಯ ತಲೆಯ ಮೇಲೆ ತಮ್ಮ ಸೊಂಡಿಲುಗಳನ್ನು ಚಾಚಿ ಬಾಗಿಸಿರುವಂತೆ ಕಾಣಿಸಬೇಕು)

೩. ಮಹಾಲಕ್ಷ್ಮೀ

'ತದುಕ್ತಂ ವಿಶ್ವಕರ್ಮಣಾ।
ಕ್ಷೆತ್ರಾತ್ಕೊಲ್ಲಾಪುರಾದನ್ಯಾ ಮಹಾಲಕ್ಷ್ಮೀರ್ಯದೋಚ್ಯತೇ।
ಲಕ್ಷ್ಮೀವತ್ಸಾ ತದಾ ಕಾರ್ಯಾ ಸರ್ವಾಭರಣಭೂಷಿತಾ।
ದಕ್ಷಿಣಾಧಃ ಕರೇ ಪಾತ್ರಮೂರ್ಧ್ವೇ ಕೌಮೋದಕೀಂ ತತಃ।
ವಾಮೇ ಧ (ಥ) ಖೇಟಕಂ ಧತ್ತೆ ಶ್ರೀಫಲಂ ತದಧಃ ಕರೆ।
ಬಿಭ್ರತೀ ಮಸ್ತಕೆ ಲಿಂಗಂ ಪೂಜನೀಯ್ಯಾ ವಿಭೂತಯೆ (॥)
ಸ್ವರ್ಣವರ್ಣಃ॥'

(ನೃಸಿಂಹಪ್ರಾಸಾದದಲ್ಲಿರುವ ಈ ಒಕ್ಕಣೆಯ ಪ್ರಕಾರ ಕೊಲ್ಲಾಪುರದ ಗುಡಿಯಲ್ಲಿರುವ ಮಹಾಲಕ್ಷ್ಮಿಯೇ ಮಹಾಲಕ್ಷ್ಮಿಯ ಮೂಲಾಕೃತಿ. ನಾಲ್ಕು ಕೈಗಳ ಈ ರೂಪದಲ್ಲಿ ಬಲಭಾಗದ ಕೈಗಳಲ್ಲಿ ಪಾನಪಾತ್ರೆ (ನಿಜಹಸ್ತ), ಗದೆ(ಪರಹಸ್ತ), ಎಡಭಾಗದ ಕೈಗಳಲ್ಲಿ ಶ್ರೀಫಲ(ನಿಜಹಸ್ತ), ಗುರಾಣಿ

(ಪರಹಸ್ತ), ಎಡಭಾಗದ ಕೈಗಳಲ್ಲಿ ಶ್ರೀಫಲ (ನಿಜಹಸ್ತ), ಗುರಾಣಿ (ಪರಹಸ್ತ) ಇವನ್ನೂ ತಲೆಯ ಮೇಲೆ ಲಿಂಗವಿರುವಂತೆಯೂ ಕಾಣಿಸಬೇಕು)

೪ ಶ್ರೀದೇವೀ

'ಪಾಶಾಕ್ಷಮಾಲಿಕಾಂಭೋಜಸೃಣಿಭಿರ್ಯಾಮ್ಯಸೌಮ್ಯಯೋಃ।
ಪದ್ಮಾಸನಸ್ಥಾಂ ಕುರ್ವೀತ ಶ್ರಿಯಂ ತ್ರೈಲೋಕ್ಯಮಾತರಂ॥
ಹೇಮವರ್ಣಃ॥

(ಮಯೂಖವೆಂಬ ಸ್ಮೃತಿಗ್ರಂಥದ ದಾನಖಂಡವೆಂಬ ಪರಿಚ್ಛೇದದಲ್ಲಿರುವ ಧ್ಯಾನಶ್ಲೋಕ ಇದು. ಇಲ್ಲಿನ ದೇವತೆ ಶ್ರೀದೇವಿಯೆಂಬ ಲಕ್ಷ್ಮೀರೂಪ. ಹೊಂಬಣ್ಣ; ತಾವರೆಯ ಮೇಲೆ ಕುಳಿತವಳು. ನಾಲ್ಕು ಕೈಗಳು; ನಿಜಹಸ್ತಗಳಲ್ಲಿ ಜಪಮಾಲೆ, ಕಮಲ; ಪರಹಸ್ತಗಳಲ್ಲಿ ಪಾಶ, ಅಂಕುಶಗಳು)

೫ ವೀರಲಕ್ಷ್ಮೀ

' ವೀರಲಕ್ಷ್ಮೀತಿ ವಿಖ್ಯಾತಾ ವರದಾಭಯಹಸ್ತಿನೀ।
ಊರ್ಧ್ವಪದ್ಮದ್ವಯೌ ಹಸ್ತೌ ತಥಾ ಪದ್ಮಾಸನೆ ಸ್ಥಿತಾ॥
ಸ್ವರ್ಣವರ್ಣಃ॥

(ಪಾಂಚರಾತ್ರಾಗಮದ ಈ ಮೂರ್ತಿಲಕ್ಷಣದಂತೆ ನಾಲ್ಕು ಕೈಗಳ ಹೊಂಬಣ್ಣದ ರೂಪ. ಕೆಳಗಿನೆರಡು ಕೈಗಳಲ್ಲಿ ವರದ, ಅಭಯ ಮುದ್ರೆಗಳು; ಮೇಲಿನೆರಡು ಕೈಗಳಲ್ಲಿ ಕಮಲಗಳು. ಕಮಲದ ಮೇಲೆ ಕುಳಿತಿದ್ದಾಳೆ)

೬. ದ್ವಿಭುಜವೀರಲಕ್ಷ್ಮೀ-

'ದಕ್ಷಿಣಂ ತ್ವಭಯಂ ಚೈವ ಉತ್ತರಂ ವರದಂ ತಥಾ।
ಊರೂ ಪದ್ಮದಳಾಕಾರಾ ವೀರಶ್ರೀಮೂರ್ತಿಲಕ್ಷಣಂ।
ಹೇಮವರ್ಣಃ॥'

(ಇದೂ ಪಾಂಚರಾತ್ರಾಗಮದ ಧ್ಯಾನಶ್ಲೋಕವೇ. ಎರಡು ಕೈಗಳು; ಅಭಯ ವರದ ಮುದ್ರೆಗಳಲ್ಲಿ. ಹೊಂಬಣ್ಣ. ಪದ್ಮಾಸನದಲ್ಲಿ ಕುಳಿತವಳು; ತೊಡೆಗಳೂ ತಾವರೆಯ ದಳಗಳಂತೆ).

೭. ಅಷ್ಟಭುಜವೀರಲಕ್ಷ್ಮೀ -

'ಪಾಶಾಂಕುಶಾಕ್ಷಸೂತ್ರವರಾಭಯಗದಾಪದ್ಮಪಾತ್ರಹಸ್ತಾ ಕಾರ್ಯಾ। (॥)
ಹೇಮವರ್ಣಃ॥'

(ಎಂಟು ಕೈಗಳ ವೀರಲಕ್ಷ್ಮಿಯ ಇನ್ನೊಂದು ರೂಪವನ್ನು ಅದೇ ಆಕರದಿಂದ ಆಯ್ದುಕೊಂಡಿದ್ದಾರೆ. ಎಂಟು ಕೈಗಳಲ್ಲಿ ಪಾಶ, ಅಂಕುಶ, ಜಪಮಾಲೆ, ಗದೆ, ಪದ್ಮ, ಪಾತ್ರೆ ಮತ್ತು ವರದ ಅಭಯ ಮುದ್ರೆಗಳು)

೮. ಪ್ರಸನ್ನಲಕ್ಷ್ಮೀ-

'ವಂದೆ ಲಕ್ಷ್ಮೀಂ ಪರಶಿವಮಯೀಂ ಶುದ್ಧಜಾಂಬೂನದಾಭಾಂ
ತೇಜೋರೂಪಾಂ ಕನಕವಸನಾಂ ಸರ್ವಭೂಷೋಜ್ವಲಾಂಗೀಂ।
ಬೀಜಾಪೂರಂ ಕನಕಕಲಶಂ ಹೇಮಪದ್ಮಂ ದಧಾನಾಮಾದ್ಯಾಂ ಶಕ್ತಿಂ
ಸಕಲಜನನೀಂ ವಿಷ್ಣುವಾಮಾಂಕಸಂಸ್ಥಾಂ॥'
ಸ್ವರ್ಣವರ್ಣಃ॥'

(ಅಥರ್ವಣರಹಸ್ಯದಿಂದ ಆರಿಸಿಕೊಂಡ ಧ್ಯಾನಶ್ಲೋಕ. ವಿಷ್ಣುವಿನ ಎಡತೊಡೆಯಮೇಲೆ ಕುಳಿತ ಹೊಂಬಣ್ಣದ ಮೈಯವಳು; ಆದಿಶಕ್ತಿ. ಬೀಜಾಪೂರ, ಹೇಮಕುಂಭ, ಕಮಲಗಳನ್ನು ಹಿಡಿದ್ದಾಳೆ)

ಮೇಲೆ ಕಾಣಿಸಿದ ಅಷ್ಟಲಕ್ಷ್ಮಿಯರ ನಿರೂಪಣೆಯಾದಮೇಲೆ 'ಅಥ ವಿಷ್ಣುಪರಿವಾರ ಶಕ್ತೀನಾಂ ಧ್ಯಾನಂ' ಎಂದು ಹೇಳಿ ಪದ್ಮಪುರಾಣದ ಶ್ಲೋಕವೊಂದನ್ನು ಕೊಡಲಾಗಿದೆ-

'ಸುವರ್ಣ ನಿಭಶೋಭಾಶ್ರೀಃ ಸ್ಯಾತ್ಸಾ ಭೂರರ್ಜುನಛ(ಚ್ಛ)ವಿಃ।
ಸರಸ್ವತೀ ಸಿತಾ ರಕ್ತಾ ಪ್ರೀತಿಃ ಶ್ಯಾಮನಿಭಾಕೃತೀ।
ಕೀರ್ತಿ(ರ್ತಿ)ರಕ್ತಾ ಭವೇಛಾಂ(ಚ್ಛಾಂ)ತಿಃ ಸ್ಫಟಿಕಾಭಾ ಸಮೀರಿತಾ।
ತುಷ್ಟಿಃ ಪೀತಾ ಭವೇತ್ಪುಷ್ಟಿಃ ಸ್ಯಾ(ಶ್ಯಾ)ಮಾ ದೇವ್ಯಸ್ತು ತಾಃ ಸ್ಮೃತಾ।
ಪದ್ಮದ್ವಯಕರಾಶ್ಚೈವ ವರಾಭಯಕರಾಸ್ತು ತಾಃ ॥೯॥

ಇಲ್ಲಿ ಶ್ರೀ, ಭೂ, ಸರಸ್ವತೀ, ಪ್ರೀತಿ, ಕೀರ್ತಿ, ಶಾಂತಿ, ತುಷ್ಟಿ, ಪುಷ್ಟಿ ಎಂಬ ಎಂಟು ಶಕ್ತಿಗಳನ್ನು ಅವುಗಳ ಬಣ್ಣಗಳೊಂದಿಗೆ ಎಣಿಕೆಮಾಡಿದ್ದಾರೆ. ಇವೆಲ್ಲ ಶಕ್ತಿಯರ ರೂಪ ನಾಲ್ಕು ಕೈಗಳದ್ದು; ಎರಡು ಕೈಗಳಲ್ಲಿ (ಪರಹಸ್ತ) ಕಮಲಗಳನ್ನು ಹಿಡಿದು, ಇನ್ನೆರಡು ಕೈಗಳಲ್ಲಿ (ನಿಜ ಹಸ್ತ) ವರದ, ಅಭಯ ಮುದ್ರೆಗಳನ್ನು ತೋರಿಸುವಂತೆ ಕಾಣಿಸಬೇಕೆಂದು ಹೇಳಿದೆ.

(೧೩) ತ್ರಿಸಂಧ್ಯೆಯರು

೧. ಗಾಯತ್ರೀ-

'ದೇವೀಂ ಪೂರ್ವಾನ್ಹ(ಹ್ಣ) ಸಂಧ್ಯಾಯಾಂ ಗಾಯತ್ರೀಂ
ವನ್ಹಿ(ಹ್ನಿ)ರೂಪಿಣೀಂ।
ಕುಮಾರೀಂ ರಕ್ತವಸ್ತ್ರಾಂಗೀಂ ರಕ್ತಸ್ರಗನುಲೇಪನಾಂ।
ಚತುರ್ಭುಜಾಂ ಚತುರ್ವಕ್ತ್ರಾಂ ವರದಾಂ ಚಾಪ್ಯಲೋಚನಾಂ।
ಪದ್ಮಾಕ್ಷಮಾಲಾವಲಯಂ ಬಿಭ್ರತೀ ದಕ್ಷಿಣೆ ಕರೆ
ವಾಮೇ ಕಮಂಡಲುಂ ಪಾಣೌ ಸ್ರುವಂ ಸವ್ಯೇ(s)ತರೆ ಕರೆ।
ಅಭಯಂ ವಾಮಹಸ್ತೆ ಚ ಪದ್ಮಪೀಠೆ ಪ್ರತಿಷ್ಠಿತಾಂ।
ಋಗ್ವೇದ ರೂಪಿಣೀಂ ಪ್ರಾತಸ್ಸವನಾಂ ಹಂಸವಾಹಿನೀಂ।
ಪೃಥ್ವ್ಯಯನಾಂ ಚ ಬೃಹತೀಂ ಗಾರ್ಹಪತ್ಯೆಪ್ರತಿಷ್ಠಿತಾಂ।(॥)
ರಕ್ತವರ್ಣಃ॥'



ಗಾಯತ್ರೀ



ಸಾವಿತ್ರೀ



ಸಮಷ್ಟಿ ಗಾಯತ್ರಿ



ಸಂಧ್ಯಾ ಸಾವಿತ್ರೀ

೨. ಸಾವಿತ್ರೀ -

ದೇವೀಂ ಮಧ್ಯಾನ್ಹ (ಹ್ನ) ಸಂಧ್ಯಾಯಾಂ ಸಾವಿತ್ರೀಂ ರುದ್ರರೂಪಿಣೀಂ।
ಯುವತೀಂ ಶ್ವೇತವಸ್ತ್ರಾಢ್ಯಾಂ ಶುಕ್ಲಸ್ರಗನುಲೇಪನಾಂ।
ರುದ್ರಾಕ್ಷಮಾಲಾವಲಯಂ ಬಿಭ್ರತೀಂ ದಕ್ಷಿಣೇ ಕರೆ।
ವಾಮಕರೆ ಖಟ್ವಾಂಗಂ ತ್ರಿಶೂಲಂ ದಕ್ಷಿಣೆ ಕರೆ।
ವಾಮಕರೆ(s)ಭಯಂ ದೇವೀಂ ತಥೈವಾರ್ಧೇಂದುಧಾರಿಣೀಂ।
ಸ್ವರ್ಣಪೀಠಾಸನೆ ಸೌಮ್ಯೆ ಯಜುರ್ವೇದ ಸ್ವರೂಪಿಣೀಂ।
ಮಾದ್ಯಂ(ಧ್ಯಂ)ದಿನಾಖ್ಯೆ ಸವನೆ ಸತೀಂ ಗೋವೃಷವಾಹನಾಂ।।
ಶುಕ್ಲವರ್ಣಃ।।'

೩. ಸರಸ್ವತೀ-

'ದೇವೀಂ ಸಾಯಾನ್ಹ(ಹ್ನ) ಸಂಧ್ಯಾಯಾಂ ಸರಸ್ವತೀಂ ವಿಷ್ಣುರೂಪಿಣೀಂ।
ಸ್ಥವಿರೇಂದೀವರಶ್ಯಾಮಾಂ ನೀಲಕುಂಚಿತಮೂರ್ಧಜಾಂ।
ಚತುರ್ಭುಜಾಂ ಚೈಕವಕ್ತ್ರಾಂ ಪದ್ಮಪತ್ರಾಯತೇಕ್ಷಣಾಂ।
ಶಂಖಚಕ್ರಗದಾಂ ಚೈವ ತಥೈವಾಭಯದಂ ಪುನಃ।
ಪೀತಾಂಬರಂ ದಧಾನಾಂ ಚ ದಿವ್ಯಸ್ರಗನುಲೆಪನಾಂ।
ತೃತೀಯ್ಯವಸನಾಖ್ಯಾಂ (ತೃತೀಯಸವನಾಖ್ಯಾಂ) ಚ ಧ್ಯಾಯೆದ್ವ್ಯೆ
ವಿಷ್ಣುರೂಪಿಣೀಂ।
ನೀಲಪೀಠಾಸನೆ ಸೌಮ್ಯೆ ಸಾಮವೇದಸ್ವರೂಪಿಣೀಂ।

ವರದಾಂ ಗರುಡಾರೂಢಾಮಾಹ್ವನೀಯೈ (ಮಾಹವನೀಯೇ)
ವ್ಯವಸ್ಥಿತಾಂ (II)
ಶ್ಯಾಮವರ್ಣಃII'



ಸರಸ್ವತೀ



ಸರಸ್ವತೀ ಸಂಧ್ಯಾ

ಸಂಧ್ಯೆಯೆಂದರೆ ಸೇರುವ ಸಮಯ. ಇರುಳು ಮುಗಿದು ಹಗಲು ಮೊದಲಾಗುವುದು ಪ್ರಾತಃಸಂಧ್ಯೆ. ಹಗಲ ಮೊದಲ ಭಾಗ ಮುಗಿದು ಎರಡನೆಯ ಭಾಗ ಮೊದಲಾಗುವುದು ಮಧ್ಯಾಹ್ನ, ನಡುವಣ ಸಂಧ್ಯೆ. ಹಗಲು ಮುಗಿದು ಇರುಳು ಮೊದಲಾಗುವುದು ಸಾಯಂಸಂಧ್ಯೆ. ಮೂರು ಸಂಧ್ಯೆಗಳಲ್ಲಿಯೂ ಸವನಗಳನ್ನು ಮಾಡಬೇಕೆನ್ನುವುದು ವಿಧಿ;



ಸಂಧ್ಯಾ ಸರಸ್ವತೀ

ಪ್ರಾತಃಸಂಧ್ಯೆಯಲ್ಲಿ ಪ್ರಾತಃಸವನ, ಮಧ್ಯಾಹ್ನದಲ್ಲಿ ಮಾಧ್ಯಂದಿನ ಸವನ, ಸಂಜೆಯಲ್ಲಿ ತೃತೀಯಸವನ. ಇವಕ್ಕೆ ಅನುಗುಣವಾಗಿ ಮೂರು ಅಗ್ನಿಗಳು; ಕ್ರಮವಾಗಿ ಗಾರ್ಹಪತ್ಯ, ಆಹವನೀಯ, ದಕ್ಷಿಣ ಎಂಬ ತ್ರೇತಾಗ್ನಿಗಳು.

ಮಾರ್ಕಂಡೇಯಪುರಾಣದಿಂದ ಆರಿಸಿಕೊಂಡಿರುವ ಮೇಲಿನ ಮೂರು ಧ್ಯಾನಶ್ಲೋಕಗಳಲ್ಲಿ ಮೂರು ಸಂಧ್ಯೆಯರಿಗೆ ಮೂರ್ತಿಲಕ್ಷಣವನ್ನು ಕಲ್ಪಿಸಿಕೊಂಡು, ಪ್ರಾತಃಸಂಧ್ಯೆಯನ್ನು ಗಾಯತ್ರಿಯೆಂದೂ, ನಡುವಣ ಸಂಧ್ಯೆಯನ್ನು ಸಾವಿತ್ರಿಯೆಂದೂ, ಸಾಯಂಸಂಧ್ಯೆಯನ್ನು ಸರಸ್ವತಿಯೆಂದೂ ನಿರ್ದೇಶಿಸಿದ್ದಾರೆ. ಗಾಯತ್ರಿ ಕುಮಾರಿಯಾದರೆ, ಸಾವಿತ್ರಿ ಯುವತಿ, ಸರಸ್ವತಿ ವೃದ್ಧೆ. ಮೊದಲನೆಯವಳು ಅಗ್ನಿರೂಪಿಣಿ, ಎರಡನೆಯವಳು ರುದ್ರರೂಪಿಣಿ, ಮೂರನೆಯವಳು ವಿಷ್ಣುರೂಪಿಣಿ. ಆದ್ದರಿಂದ ಅವರ ವಾಹನಗಳು ಕ್ರಮವಾಗಿ ಹಂಸ, ಎತ್ತು ಮತ್ತು ಗರುಡ. ಅವರು ಋಗ್ವೇದ, ಯಜುರ್ವೇದ, ಸಾಮವೇದಗಳನ್ನು ಪ್ರತಿನಿಧಿಸುತ್ತಾರೆ. ಗಾಯತ್ರಿಯದು ಕೆಂಪು ಬಟ್ಟೆ, ಕೆಂಪು ಹೂಗಳ ಮಾಲೆ, ಕೆಂಬಣ್ಣದ ಗಂಧ; ಸಾವಿತ್ರಿಯದು ಬಿಳಿ ಬಟ್ಟೆ, ಬಿಳಿ ಹೂಮಾಲೆ, ಬಿಳಿಬಣ್ಣದ ಗಂಧ; ಸರಸ್ವತಿಯದು ಪೀತಾಂಬರ, ದಿವ್ಯಸ್ರಗನುಲೇಪನ.

ಗಾಯತ್ರಿಗೆ ನಾಲ್ಕು ಮುಖಗಳು, ನಾಲ್ಕು ಕೈಗಳು, ಎಂಟು ಕಣ್ಣುಗಳು; ಕೈಗಳಲ್ಲಿ ಜಪಮಾಲೆ (ಕಮಲದಮಣಿಗಳದ್ದು), ಕಮಂಡಲು, ಸ್ರುವ ಮತ್ತು ಅಭಯಮುದ್ರೆ. ಕೆಂಪು ಮೈಬಣ್ಣ, ಸಾವಿತ್ರಿಗೆ ನಾಲ್ಕು ಮುಖಗಳು, ನಾಲ್ಕು ಕೈಗಳು, ಹನ್ನೆರಡು ಕಣ್ಣುಗಳು. ಕೈಗಳಲ್ಲಿ ಜಪಮಾಲೆ (ರುದ್ರಾಕ್ಷಿಮಣಿಗಳದ್ದು), ಖಟ್ವಾಂಗ, ತ್ರಿಶೂಲ ಮತ್ತು ಅಭಯಮುದ್ರೆ; ಬಿಳಿಯ ಮೈಬಣ್ಣ. ಸರಸ್ವತಿಗೆ ಒಂದೇ ಮುಖ, ನಾಲ್ಕು ಕೈಗಳು, ಪದ್ಮಪತ್ರದಂತೆ ಕಣ್ಣುಗಳು. ಕೈಗಳಲ್ಲಿ ಶಂಖ ಚಕ್ರ, ಗದೆ ಮತ್ತು ಅಭಯ ಮುದ್ರೆ. ಆಕೆಯ ಮೈಬಣ್ಣ ನೀಲಿಗಪ್ಪು.

(೧೪) ಅನ್ನಪೂರ್ಣಾರೂಪಗಳು

೧. ದ್ವಿಭುಜಾನ್ನಪೂರ್ಣಾ-

'ವಾಮೆ ಮಾಣಿಕ್ಯಪಾತ್ರಂ ಮಧುರಸಭರಿತಂ
ಬಿಭ್ರತೀಂ ಪಾಣಿಪದ್ಮೆ ದಿವ್ಯೈರನ್ನೈಃ ಪೂರ್ಣಾಂ
ಧೃತಮಣಿವಲಯೆ ದಕ್ಷಿಣೆ ರತ್ನದರ್ವೀಂ
ರಕ್ತಾಂಗೀಂ ಪೀನತುಂಗಸ್ತನಭರವಿಲಸತ್ತಾರಹಾರಾಂ
ತ್ರಿನೇತ್ರಾಂ ವಂದೆ ಪೂರ್ಣೇಂದುಬಿಂಬ
ಪ್ರತಿನಿಧಿವದನಾಮಂಬಿಕಾಮನ್ನಪೂರ್ಣಾಂ । (II)
ರಕ್ತವರ್ಣಃII'

(ಎರಡು ಕೈಗಳ ಕೆಂಪುಬಣ್ಣದ ಅನ್ನಪೂರ್ಣೆಯು ಎಡ ಕೈಯಲ್ಲಿ ಅನ್ನತುಂಬಿದ ಪಾತ್ರೆಯನ್ನು ಹಿಡಿದಂತೆಯೂ, ಬಲಗೈಯಿಂದ ರತ್ನದರ್ವಿಯನ್ನು, ಎಂದರೆ ಮಣಿಖಚಿತವಾದ ಸೌಟನ್ನು, ಹಿಡಿದಂತೆಯೂ, ಕೆಂಬಣ್ಣದ ಬಟ್ಟೆಯನ್ನುಟ್ಟಂತೆಯೂ, ಮೂರು ಕಣ್ಣುಗಳಿಂದ ಕೂಡಿದಂತೆಯೂ ಧ್ಯಾನಶ್ಲೋಕವು ತಿಳಿಸುತ್ತದೆ. ಇದರ ಆಕರ ಕಾರಣಾಗಮ)

೨. ಚತುರ್ಭುಜಾನ್ನಪೂರ್ಣಾ-

'ಸಿಂದೂರಾಭಾಂ ತ್ರಿನೇತ್ರಾಮಮೃತಶಶಿಕಲಾಂ
ಖೆಚರೀಂ ರಕ್ತವಸ್ತ್ರಾಂ ಪೀನೋತ್ತುಂಗಸ್ತನಾಢ್ಯಾ-
ಮಭಿನವ ವಿಲಸದ್ಯ(ದ್ಯೌ)ವ್ವ(ವ)ನಾರಂಭರಂಮ್ಯಾಂ
ನಾನಾಲಂಕಾರಯುಕ್ತಾಂ ಸರಸಿಜನಯನಾಮಿಂದುಸಂಕ್ರಾಂತಮೂರ್ತಿಂ
ದೆವೀಂ ಪಾಶಾಂಕುಶಾಢ್ಯಾಮಭಯವರಕರಾನ್ನಪೂರ್ಣಾಂ ನಮಾಮಿ(। (II)

(ಕಾರಣಾಗಮದಿಂದಲೇ ಸಂಗ್ರಹಿಸಿರುವ ಈ ಶ್ಲೋಕದ ವಸ್ತು ನಾಲ್ಕು ಕೈಗಳ ಅನ್ನಪೂರ್ಣೆ. ಸಿಂದೂರವರ್ಣದವಳು, ಮೂರು ಕಣ್ಣುಗಳು, ಕೆಂಪು ಬಟ್ಟೆಯುಟ್ಟವಳು; ನವಯುವತಿಯಂತೆ ಚೆಲುವೆ. ಮೇಲಿನೆರಡು ಕೈಗಳಲ್ಲಿ ಪಾಶ ಅಂಕುಶಗಳನ್ನೂ ಕೆಳಗಿನ ಕೈಗಳಲ್ಲಿ ಅಭಯ ವರದ ಮುದ್ರೆಗಳನ್ನು ಧರಿಸಿದ್ದಾಳೆ)

(೧೫) ವಾಗೀಶ್ವರೀ ರೂಪಗಳು

೧. ವಾಗೀಶ್ವರೀ-

'ಶ್ವೇತಪದ್ಮಾಸನಾರೂಢಾ ಶುಕ್ಲವರ್ಣಾ ಚತುರ್ಭುಜಾ।
ಜಟಾಮಕುಟಸಂಯುಕ್ತಾ ರತ್ನಕುಂಡಲಮಂಡಿತಾ।
ಯಜ್ಞೋಪವೀತಿನೀ ಹಾರಮುಕ್ತಾಭರಣಭೂಷಿತಾ।
ದುಕೂಲವಸನಾ ದೆವೀ ನೆತ್ರತ್ರಯಸಮನ್ವಿತಾ।
ಸುದಂಡಂ ದಕ್ಷಿಣೆ ಹಸ್ತೆ ವಾಮಹಸ್ತೆ ತು ಪುಸ್ತಕಂ।
ದಕ್ಷಿಣೆ ಚಾಕ್ಷಮಾಲಾಂ ಚ ಕುಂಡಿಕಾಂ ವಾಮಹಸ್ತಕೆ।
ವಾಗೀಶ್ಯಾಕೃತಿರಾಖ್ಯೆ(ಖ್ಯಾ)ತೇತಿ। (II)
ಶ್ವೆತವರ್ಣಃII'

(ವಾಗೀಶ್ವರಿಯೆನ್ನುವುದು ಸರಸ್ವತಿಯ ಕಲ್ಪನೆ. ಬಿಳಿಯ ಮೈಬಣ್ಣ; ಮೂರು ಕಣ್ಣುಗಳು; ಬಿಳಿದಾವರೆಯ ಮೇಲೆ ಕುಳಿತವಳು. ತಲೆಯಮೇಲೆ ಜಟಾಮಕುಟ; ಕಿವಿಗಳಲ್ಲಿ ರತ್ನಕುಂಡಲಗಳು. ಹಾರಗಳೊಂದಿಗೆ ಯಜ್ಞೋಪವೀತವೂ ಇದೆ. ನಾಲ್ಕು ಕೈಗಳು; ಮುಂದಿನ ಬಲಗೈಯಲ್ಲಿ ದಂಡ, ಎಡಗೈಯಲ್ಲಿ ಪುಸ್ತಕ; ಹಿಂದಿನ ಬಲಗೈಯಲ್ಲಿ ಜಪಮಾಲೆ, ಎಡಗೈಯಲ್ಲಿ ನೀರಿನ ಗಿಂಡಿ. ಈ ಧ್ಯಾನಶ್ಲೋಕವು ಪಾಂಚರಾತ್ರಾಗಮದ ಕ್ರಿಯಾಪಾದದಲ್ಲಿದೆಯೆಂಬ ಒಕ್ಕಣೆಯಿದೆ)



ವಾಗೀಶ್ವರೀ

೨. ಧೇನುವಾಗೀಶ್ವರೀ-

'ಶುದ್ಧಸ್ಫಟಿಕಸಂಕಾಶಾಂ ಶುಕ್ಲಮಾಲ್ಯಾಂಬರಾವೃತಾಂ।
ಅಂಕುಶೆನಾಕ್ಷಸೂತ್ರೆಣ ಪಾಶಪುಸ್ತಕಧಾರಿಣೀಂ।
ಮುಕ್ತಾಹಾರೈಸ್ಸಮಾಯುಕ್ತಾಂ ದೆವೀಂ ದಿವ್ಯಚತುರ್ಭುಜಾಂ।
ಸಿತೇನ ದರ್ಪಣಾಭೇನ ವಸ್ತ್ರೇಣ ಪರಿಭೂಷಿತಾಂ।
ಸುಸ್ತನೀಂ ವೇದಿಮಧ್ಯಾಂತಾಂ ಚಂದ್ರಾರ್ಧಕೃತಶೆಖರಾಂ।
ಜಟಾಕಲಾಪಸಂಯುಕ್ತಾಂ ಪೂರ್ಣಚಂದ್ರನಿಭಾನನಾಂ।
ತ್ರಿಲೊಚನಾಂ ಮಹಾದೆವೀಂ ಸ್ವರ್ಣನೂಪುರಧಾರಿಣೀಂ।
ಕಟಕೈಃ ಸ್ವರ್ಣರತ್ನಾಢ್ಯೈರ್ಮಹಾವಲಯಭೂಷಿತಾಂ।
ಕೆಯೂರೈರ್ಮಖಿಲಾದ್ಯೈಶ್ಚ ದ್ಯೋತಯಂತೀಂ ಜಗತ್ರ(ತ್ರ)ಯಂ।
ಶಬ್ದಬ್ರಹ್ಮಮಯೀಂ ಧ್ಯಾಯೇಧೆ(ದ್ಧೆ)ನುವಾಗೀಶ್ವರೀಂ ಪರಾಂ।।
ಶ್ವೆತವರ್ಣಃII'

(ಧೇನುವೆಂದರೆ ವೇದ; ವೇದಪ್ರತಿಪಾದ್ಯವಾದ ಪ್ರಣವವೇ ಶಬ್ದಬ್ರಹ್ಮ. ಧೇನುವಾಗೀಶ್ವರಿಯು ಶಬ್ದಬ್ರಹ್ಮಮಯಿ. ಹಾಗೆಂದೇ ಆಕೆಯು ಶುದ್ಧಸ್ಫಟಿಕದಂತೆ ಹೊಳೆಯುವವಳು, ಕನ್ನಡಿಯಂತೆ ಬೆಳಗುವ ಬಟ್ಟೆಯುಟ್ಟವಳು. ಮೂರು ಕಣ್ಣುಗಳುಳ್ಳವಳು; ಋಗ್ವೇದ (ಅಗ್ನಿ), ಯಜುರ್ವೇದ (ಸೂರ್ಯ), ಸಾಮವೇದ (ಚಂದ್ರ)ಗಳೇ ಮೂರು

ಕಣ್ಣುಗಳು, ತಲೆಯಮೇಲೆ ಜಡೆ, ಎಂದರೆ ತಪಸ್ವಿನಿ. ನಾಲ್ಕು ಕೈಗಳು; ಪಾಶ, ಅಂಕುಶ, ಜಪಮಾಲೆ, ಪುಸ್ತಕಗಳನ್ನು ಹಿಡಿದವಳು. ಮಾತು ಜಗತ್ತನ್ನೆಲ್ಲ ಬೆಳಗುವಂತೆ ಈ ದೇವತೆಯು ಮೂರು ಲೋಕಗಳನ್ನು ಬೆಳಗುವಳು. ಆಶ್ವಲಾಯನಕಲ್ಪದ್ದು ಈ ಧ್ಯಾನಶ್ಲೋಕ)

೩. ಸೌಭಾಗ್ಯವಾಗೀಶ್ವರೀ-

'ತರುಣಶಕಲಮಿಂದೋರ್ಬಿಭ್ರತೀ ಶುಭ್ರಕಾಂತಿಃ
ಕುಚಭರನಮಿತಾಂಗೀ ಸನ್ನಿಷಣ್ಣಾ ಸಿತಾಬ್ಜೇ।
ನಿಜಕರಕಮಳೊದ್ಯಲ್ಲೇಖಿನೀ ಪುಸ್ತಕಶ್ರೀಃ
ಸಕಲವಿಭವಸಂಪ್ಯೈಃ ಪಾತು ವಾಗ್ದೇವತಾ ವಃ॥
ಶ್ವೇತವರ್ಣಾ॥'

(ಶಾರದಾತಿಲಕತಂತ್ರದಿಂದ ಎತ್ತಿಕೊಂಡಿರುವ ಈ ಧ್ಯಾನಶ್ಲೋಕದ ದೇವತೆಯು ಬಿಳಿಯ ಕಮಲದ ಮೇಲೆ ಕುಳಿತು, ಎಲ್ಲ ಸಂಪತ್ತಿನಿಂದ ಕೂಡಿದವಳು; ತಲೆಯ ಮೇಲೆ ಬಾಲಚಂದ್ರನನ್ನು ಧರಿಸಿದವಳು. ಎರಡು ಕೈಗಳು; ಒಂದರಲ್ಲಿ ಪುಸ್ತಕ, ಇನ್ನೊಂದರಲ್ಲಿ ಲೇಖಿನಿ)

(೧೬) ಅರವತ್ತನಾಲ್ಕು ಯೋಗಿನಿಯರು

ತಂತ್ರಸಂಪ್ರದಾಯದಲ್ಲಿ ಚತುಃಷಷ್ಟಿಯೋಗಿನಿಯರು ಸಾಧಕರಿಗೆ ನೆರವಾಗುವರೆಂಬ ನಂಬಿಕೆಯಿದೆ; ಈ ಯೋಗಿನಿಯರಿಗೆ ಆಲಯಗಳನ್ನೂ ಕಟ್ಟಿರುವ ವಾಡಿಕೆಯಿದ್ದಿತು. ಅವರ ಆರಾಧನೆಯೂ ಜಾನಪದನೆಲೆಯಲ್ಲಿ ನಡೆಯುತ್ತಿದ್ದಿತು. ಶ್ರೀತತ್ತ್ವನಿಧಿಯಲ್ಲಿ ರುದ್ರಯಾಮಳವನ್ನನುಸರಿಸಿ ಅರವತ್ತನಾಲ್ಕು ಯೋಗನಿಯರನ್ನು ಎಂಟು ವರ್ಗಗಳಲ್ಲಿ ವಿಂಗಡಿಸಿ, ಒಂದೊಂದು ವರ್ಗದಲ್ಲೂ ಎಂಟು ಯೋಗಿನಿಯರನ್ನು ಎಣಿಸಿ, ಅವರ ಹೆಸರು, ಮೂರ್ತಿಲಕ್ಷಣಗಳನ್ನು ನಿರೂಪಿಸಲಾಗಿದೆ. ಈ ಕ್ರಮಕ್ಕೆ 'ಅಷ್ಟಾಷ್ಟಕ'ವೆಂದು ಹೆಸರು. ಒಂದೊಂದು ಅಷ್ಟಕದಲ್ಲಿ ಆಯಾ ಯೋಗಿನಿಯರ ವರ್ಣ, ಆಯುಧ ಮೊದಲಾದ ಮೂರ್ತಿಲಕ್ಷಣಗಳು ಒಂದೇ ಆಗಿರುತ್ತವೆ. ಅಷ್ಟಕಗಳ ನಡುವೆ ಇರುವ ಭೇದ ಇಷ್ಟೆ –

೧. ಆದ್ಯಷ್ಟಕಂ ಸುವರ್ಣಾಭಂ ತ್ರಿಶೂಲಂ ಡಮರುಂ ತಥಾ॥
ಪಾಶಂ ಚಾಸಿಂ ದಧಾನಂ ಚ ಧ್ಯಾನೆ ಸರ್ವಂಗಸುಂದರಂ॥೧॥

(ಮೊದಲ ಅಷ್ಟಕದ ಯೋಗಿನಿಯರು ಹೊಂಬಣ್ಣದವರು; ನಾಲ್ಕು ಕೈಗಳು; ತ್ರಿಶೂಲ, ಡಮರುಗ, ಪಾಶ, ಕತ್ತಿಗಳನ್ನು ಹಿಡಿದವರು; ಸರ್ವಾಂಗಸುಂದರಿಯರು)

೨. ದ್ವಿತೀಯ್ಯಕಂ ಧ್ಯಾಯೆದಕ್ಷಮಾಲಾಂ ತಥಾಂಕುಶಂ।
ದಧಾನಂ ಪುಸ್ತಕಂ ವೀಣಾಂ ಸುಸ್ವೆ(ಶ್ವೆ)ತಂ ಮಣಿಭೂಷಣಂ॥೨॥

(ಎರಡನೆಯ ಅಷ್ಟಕದ ಯೋಗಿನಿಯರು ಬಿಳಿಬಣ್ಣದವರು; ನಾಲ್ಕು ಕೈಗಳು; ಜಪಮಾಲೆ, ಅಂಕುಶ, ಪುಸ್ತಕ, ವೀಣೆಗಳನ್ನು ಹಿಡಿದವರು; ಮಣಿಗಳ ಆಭರಣ ಧರಿಸಿದವರು)



ಚತುಃಷಷ್ಟಿಯೋಗಿನೀ

೩. 'ಜ್ವಾಲಾಂ ಶಕ್ತಿಂ ಗದಾಂ ಕುಂತ್ತಂ(ತಂ) ದಧಾನಂ ನೀಲವರ್ಣಕಂ।
ಧ್ಯಾಯೆ ತ್ರಿತೀಯ್ಯಂ (ತೃತೀಯಂ) ಶುಭದಮಷ್ಟಕಂ ॥೩॥

(ಮೂರನೆಯ ಅಷ್ಟಕದ ಯೋಗಿನಿಯರು ನೀಲಬಣ್ಣದವರು, ಶುಭವನ್ನುಂಟುಮಾಡುವವರು. ನಾಲ್ಕು ಕೈಗಳು; ಕೈಗಳಲ್ಲಿ ಬೆಂಕಿ, ಶಕ್ತ್ಯಾಯುಧ, ಗದೆ, ಕುಂತಗಳನ್ನು ಹಿಡಿದವರು)

೪. ಖೇಟಂ ಪಟ್ಟಿಸ(ಶಂ) ಚ ದಧಾನಂ ಪರಶುಂ ತಥಾ।
ಧೂಮವರ್ಣಮಭಿಪ್ರೇತಂ ಧ್ಯಾಯೆದಷ್ಟಕಮಾದರಾತ್॥೪॥

(ನಾಲ್ಕನೆಯ ಅಷ್ಟಕದ ಯೋಗಿನಿಯರು ಧೂಮ್ರವರ್ಣದವರು; ನಾಲ್ಕು ಕೈಗಳಲ್ಲಿ ಕತ್ತಿ, ಗುರಾಣಿ, ಪಟ್ಟೀಶ, ಕೊಡಲಿಗಳನ್ನು ಹಿಡಿದವರು)

೫. 'ಕುಂತ್ತಂ(ತಂ) ಖೇಟಂ ಚ ಪರಿಘಂ ಭಿಂಡಿವಾಲಂ ತಥೈವ ಚ।
ಪಂಚಮಾಷ್ಟಕಮೆತದ್ಧಿ ಸ್ವೆ(ಶ್ವೆ)ತಂ ಸ್ಯಾತ್ಸುಮನೋಹರಂ॥೫॥'

(ಐದನೆಯ ಅಷ್ಟಕದ ಯೋಗಿನಿಯರು ಬಿಳಿಬಣ್ಣದವರು; ನಾಲ್ಕು ಕೈಗಳಲ್ಲಿ ಕುಂತ, ಖೇಟ, ಪರಿಘ, ಭಿಂಡಿವಾಲ ಎಂಬ ಆಯುಧಗಳನ್ನು ಹಿಡಿದವರು)

೬-೮ 'ಪೀತಂ ಷಷ್ಠಮೃಷೀರಕ್ತಮಷ್ಟಮಂ ಚ ತಟಿತ್ಪ್ರಭಂ।
ಕುಂತಾದಿಕಂ ಸಮಂ ಪ್ರೋಕ್ತಂ ಷಡಾರಭ್ಯಾಷ್ಟಮಾಂತಿಕಂ ॥೬॥೭॥೮॥'

(ಆರರಿಂದ ಎಂಟನೆಯ ಅಷ್ಟಕಗಳಲ್ಲಿರುವ ಯೋಗಿನಿಯರು ಕುಂತ ಮೊದಲಾದ ಆಯುಧಗಳನ್ನು ಐದನೆಯ ಅಷ್ಟಕದವರಂತೆಯೇ ಹಿಡಿದಿರುವರು. ಆದರೆ ಅವರ ಮೈಬಣ್ಣಗಳು ಬೇರೆಯಾಗಿವೆ. ಆರನೆಯ ಅಷ್ಟಕದ ಯೋಗಿನಿಯರದ್ದು ಹಳದಿ ಬಣ್ಣ, ಏಳನೆಯವರದ್ದು ಕೆಂಪು, ಎಂಟನೆಯವರದ್ದು ಮಿಂಚಿನಂತೆ ಹೊಳಪು)

ಮುಂದೆ ರುದ್ರಯಾಮಳವನ್ನನ್ನುಸರಿಸಿ ಯೋಗಿನಿಯರ ಹೆಸರುಗಳನ್ನು ಪಟ್ಟಿಮಾಡಿದ್ದಾರೆ

'ದಿವ್ಯಯೋಗೀ ಮಹಾಯೋಗೀ ಸಿದ್ಧಯೋಗೀ ಮಹೇಶ್ವರೀ।
ಪಿಶಾಚಿನೀ ಡಾಕಿನೀ ಚ ಕಾಳರಾತ್ರೀ ನಿಶಾಚರೀ।
ಕಂಕಾಳೀ ರೌದ್ರವೇತಾಳೀ ಹುಂಕಾರೀ ಭುವನೇಶ್ವರೀ।
ಊರ್ಧ್ವಕೇಶೀ ವಿರೂಪಾಕ್ಷೀ ಶುಷ್ಕಾಂಗೀ ನರಭೋಜಿನೀ।
ಷಟ್ಕಾರೀ ವೀರಭದ್ರೀ ಚ ಧೂಮ್ರಾಕ್ಷೀ ಕಲಹಪ್ರಿಯಾ।
ರಕ್ತಾಕ್ಷೀ ರಾಕ್ಷಸೀ ಘೋರಾ ವಿಶ್ವರೂಪಾ ಭಯಂಕರೀ।
ಕಾಮಾಕ್ಷೀ ಚೊಗ್ರಚಾಮುಂಡೀ ಭೀಷಣಾ ತ್ರಿಪುರಾಂತಕಾ।
ವೀರಕೌಮಾರಿಕೀ ಚಂಡೀ ವಾರಾಹೀ ಮುಂಡಧಾರಿಣೇ।
ಭೈರವೀ ಹಸ್ತಿನೀ ಕ್ರೊಧಾ ದುರ್ಮುಖೀ ಪ್ರೇತವಾಹಿನೀ।
ಖಟ್ವಾಂಗೀ ದೀರ್ಘಲಂಬೊಷ್ಠೀ ಮಾಲತೀ ಮಂತ್ರಯೋಗಿನೀ।
ಅಸ್ಥಿನೀ ಚಕ್ರಿಣೀ ಗ್ರಾಹೀ(ಹಾ) ಕಂಕಾಳೀ ಭುವನೇಶ್ವರೀ।
ಕಂಟಕೀ ತಾಟಕೀ ಶುಭ್ರಾ ಕ್ರಿಯಾ ದೂತೀ ಕರಾಳಿನೀ।
ಶಂಖಿನೀ ಪದ್ಮಿನೀ ಕ್ಷೀರಾ ಅ(ಹ್ಯ)ಸಂಘಾ ಚ ಪ್ರಹಾರಿಣೇ।
ಲಕ್ಷ್ಮೀಶ್ಚ ಕಾಮುಕೀ ಳೊ(ಲೋ)ಲ(ಲಾ) ಕಾಕದೃಷ್ಟಿರಧೋಮುಖೀ।
ಧೂರ್ಜಟೀ ಮಾಲಿನೀ ಘೋರಾ ಕಪಾಲೀ ವಿಷಭೋಜಿನೀ।
ಚತುಃಷಷ್ಟಿಸ್ಸಮಾಖ್ಯಾತಾ ಯೋಗಿನ್ಯೊ ವರಸಿದ್ಧಿದಾಃ।।'

(೧೭) ಶರೀರಸ್ಥ ಷಟ್ಚಕ್ರ ಕ್ರಮ

ನಮ್ಮ ಶರೀರದಲ್ಲಿ ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ, ಆಜ್ಞಾ ಎಂಬ ಆರು ಚಕ್ರಗಳು ವ್ಯವಸ್ಥಿತವಾಗಿವೆಯೆಂದು ಯೋಗ-ತಂತ್ರಗಳ ಒಕ್ಕಣೆಯಿರುವುದು ಪ್ರಸಿದ್ಧವಷ್ಟೆ. ಈ ಚಕ್ರಗಳನ್ನು ದಾಟಿದರೆ ಸಹಸ್ರಾರಚಕ್ರ. ಮೂಲಾಧಾರದಲ್ಲಿ ಶಕ್ತಿಯು ಕುಂಡಲಿನಿಯ ರೂಪದಲ್ಲಿರುವಳೆಂದೂ, ಸಹಸ್ರಾರದಲ್ಲಿ ಪರಶಿವನು ಚಿನ್ಮಯನಾಗಿ ನೆಲೆಸಿರುವನೆಂದೂ, ಇವೆರಡರ ಕೂಡುವಿಕೆಯೇ ಯೋಗವೆಂದೂ ವಿವರಣೆಯಿದೆ. ಸಾಮಾನ್ಯವಾಗಿ ಕುಂಡಲಿನಿಯು ಸುಪ್ತವಾಗಿದ್ದು ಸಾಧನೆಯಿಂದ ಜಾಗ್ರತವಾಗುತ್ತದೆ. ಆಗ



ಅಣಿಮಾದಿಸಿದ್ಧ ದೇವತೆಯರು

ಆರು ಚಕ್ರಗಳನ್ನು ಭೇದಿಸಿಕೊಂಡು ಸಹಸ್ರಾರದಲ್ಲಿರುವ ಶಿವನೊಂದಿಗೆ ಸೇರುತ್ತದೆ.

ಈ ಆರು ಚಕ್ರಗಳನ್ನು ಕುರಿತಂತೆ ಮುಮ್ಮಡಿಯವರು 'ವೇದಾಂತಯೋಗಶಾಸ್ತ್ರೀತ್ಯಾ' ಎಂಬ ಮಾತಿನೊಂದಿಗೆ ವಿವರಣೆಯೊಂದನ್ನು ಒದಗಿಸಿದ್ದಾರೆ. ಆದರೆ ವೇದಾಂತದಲ್ಲಾಗಲೀ ಪಾತಂಜಲಯೋಗದಲ್ಲಾಗಲೀ ಈ ಚಕ್ರಗಳನ್ನು ಗುರುತಿಸುವ ಸಂಪ್ರದಾಯವಿಲ್ಲ. ಇದು ತಂತ್ರಶಾಸ್ತ್ರಕ್ಕೇ ಸೇರಿದ್ದು

'ಆಧಾರೆ ಲಿಂಗನಾಭೌ ಹೃದಯಸರಸಿಜೆ ತಾಲುಮೂಲೆ
ಲಲಾಟೆ ದ್ವೆ(ದ್ವಿ)ಪತ್ರೆ ಷೋಡಶಾರೆ
ದ್ವಿದಶದಶದಳೆ ದ್ವಾದಶಾರ್ಧೆ ಚತುಷ್ಪೆ
ವಾಸಾಂತೆ ಬಾಲಮಧ್ಯೆ ಡಫಕಠಸಹಿತಂ ಕಂಠದೆಶೆ
ಸ್ವರಾಣಾಂ ಹಂಕ್ಷಂ ತತ್ವಾರ್ಥಯುಕ್ತಂ ಸಕಲದಳಗತಂ
ವರ್ಣರೂಪಂ ನಮಾಮಿ॥

(೧೮) ಅಕ್ಷರ ಸ್ವರೂಪಾಣಿ

ಶಕ್ತಿನಿಧಿಯ ಕಡೆಯಲ್ಲಿ ಸಿದ್ಧಶಾಬರತಂತ್ರದಲ್ಲಿರುವಂತೆ ವರ್ಣಮಾಲೆಯ ಅಕಾರದಿಂದ ತೊಡಗಿ ಕ್ಷಕಾರದವರೆಗೆ ಐವತ್ತು ಅಕ್ಷರಗಳಲ್ಲಿ ಒಂದೊಂದು ಅಕ್ಷರಕ್ಕೂ ಮೂರ್ತಿಲಕ್ಷಣವನ್ನು ಹೇಳಿದ್ದಾರೆ. ಒಂದೊಂದು ಅಕ್ಷರದೇವತೆಗೂ ಒಂದೊಂದು ಹೆಸರು, ಬಣ್ಣ, ವಾಹನ, ಬಟ್ಟೆ, ಆಯುಧ ಇವನ್ನು ನಮೂದಿಸಿರುವುದನ್ನು ಕಾಣಬಹುದು.

ಇದಾದಮೇಲೆ 'ಪ್ರಣವಾದಿವರ್ಣದೇವತಾಧ್ಯಾನ'ವನ್ನು ಪಾಂಚರಾತ್ರಗಮದಿಂದ ಉದ್ಧರಿಸಿ ಓಂಕಾರದಿಂದ ತೊಡಗಿ ಅಕಾರದಿಂದ ಕ್ಷಕಾರದವರೆಗೆ ವರ್ಣಮಾಲೆಯ ಐವತ್ತು ವರ್ಣಗಳಿಗೂ ದೇವತೆಗಳು (ಬಹುಮಟ್ಟಿಗೆ ವಿಷ್ಣುವಿನ ರೂಪಗಳು), ಆಯುಧಗಳು, ಸ್ವರೂಪಗಳನ್ನು ಹೇಳಿದ್ದಾರೆ. ಪ್ರಸಿದ್ಧವಾದ ಶ್ರೀಧರ, ನಾರಾಯಣ, ವಾಸುದೇವ, ಅಚ್ಯುತ, ದಾಮೋದರ ಮೊದಲಾದ ವಿಷ್ಣು ರೂಪಗಳಲ್ಲದೆ ಶಂಭು, ವಾಣಿ, ಶಾರ್ಙ್ಗಧರೀದೇವತಾ, ಅಂಕುಶಧಾರೀ, ಭೃಗು, ಗರುಡ, ಸಪ್ತಮಾತೃಕೆ, ಕುಬೇರ, ಲಂಬೋದರ, ಭೀಮನೃಹರಿ, ಚಂದ್ರ, ವಾಯು ಮೊದಲಾದ ದೇವತೆಗಳನ್ನೂ ವರ್ಣದೇವತೆಗಳಾಗಿ ಕಾಣಿಸಿದ್ದಾರೆ.

ಕಡೆಯಲ್ಲಿರುವ ಪುಷ್ಪಿಕೆ ಹೀಗಿದೆ-

'ಇತಿ ಶ್ರೀಮತ್ಸಮಸ್ತಭೂಮಂಡಲಮಂಡನಾಯಮಾನ ನಿಖಿಲ ದೆಶಾವತಂಸ ಕರ್ನಾಟಕ ಜನಪದ ಸಂಪದಧಿಷ್ಠಾನಭೂತ ಶ್ರೀಮನ್ಮಹಿ ಶೂರಮಹಾಸಂಸ್ಥಾನ ಮಧ್ಯದೆದೀಪ್ಯಮಾನಾವಿಕಲಕಲಾನಿಧಿ ಕುಲಕ್ರಮಗತರಾಜಕ್ಷಿತಪಾಲಪ್ರಮುಖ ನಿಖಿಲ ನಿಜರಾಜಾಧಿರಾಜ ಮಹಾರಾಜ ಚಕ್ರವರ್ತಿ ಮಂಡಲಾನುಭೂತ ದಿವ್ಯ ರತ್ನ ಸಿಂಹ್ಮಾಸನಾರೂಢ ಶ್ರೀಮದ್ರಾಜಾಧಿರಾಜರಾಜ ಪರಮೇಶ್ವರ ಪ್ರೌಢಪ್ರತಾಪಾಪ್ರತಿಮ ವೀರನರಪತಿ ಬಿರುದೆಂತೆಂಬರ ಗಂಡ ಲೋಕೈಕ ವೀರ ಯದುಕುಲ ಪಯಃಪಾರವಾರ ಕಳಾನಿಧಿ ಶಂಖ ಚಕ್ರಾಂಕುಶಕುಠಾರ ಮಕರ ಮತ್ಸ್ಯ ಶರಭಸಾಳ್ವಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೆಕ ಬಿರುದಾಂಕಿತ ಮಹಿಶೂರಪುರವರಾಧೀಶ ಕೃಷ್ಣರಾಜ ಮಹಾರಾಜ ವಿರಚಿತ ಶ್ರೀ ತತ್ವನಿಧ್ಯಾಖ್ಯಗ್ರಂಥೆ ಚಾಮುಂಡಾದಿ ಶಕ್ತಿಸ್ವರೂಪ ನಿರೂಪಣಂ ನಾಮ ಪ್ರಥಮೊ ನಿಧಿಃಸ್ಸಂಪೂರ್ಣಃ॥

ಎರಡನೆಯ ಪರಿಚ್ಛೇದ

ವಿಷ್ಣು-ವೈಷ್ಣವನಿಧಿಗಳು

ಪ್ರವೇಶ

ಶ್ರೀತತ್ತ್ವನಿಧಿಯ ಪ್ರಧಾನವಾದ ವಸ್ತುವೆಂದರೆ ಶಕ್ತಿನಿಧಿಯೇ. ಶ್ರೀವಿದ್ಯೆ, ಶ್ರೀಚಕ್ರ, ಶ್ರೀಕ್ರಮ ಮೊದಲಾದ ಮಾತುಗಳಲ್ಲಿರುವಂತೆ ಶ್ರೀತತ್ತ್ವವೆಂದರೆ ಶಕ್ತಿಯನ್ನು ಕುರಿತ ವಿಚಾರ. ಶ್ರೀವಿದ್ಯೆಯ ಹಿನ್ನೆಲೆಯಲ್ಲಿಯೇ, ಲಲಿತೋಪಾಖ್ಯಾನದ ಒಕ್ಕಣೆಯ ಜಾಡನ್ನು ಹಿಡಿದೇ ಶ್ರೀತತ್ತ್ವನಿಧಿ ಮೊದಲಾಗುತ್ತದೆ. ಶ್ರೀಚಕ್ರದ ಕಲ್ಪನೆ, ಸಂಕೇತ, ಸಂಪ್ರದಾಯಗಳೇ ಇಲ್ಲಿನ ಚೌಕಟ್ಟು. ಇಲ್ಲಿ ಕಾಣುವ ಶಕ್ತಿರೂಪಗಳು, ಯೋಗಿನಿಯರು, ಮಾತೃಕೆಯರು, ವರ್ಣದೇವತೆಗಳು, ಚಕ್ರದೇವತೆಯರು ಎಲ್ಲರೂ ನೇರವಾಗಿಯೋ ಬಳಸಾಗಿಯೋ ಶ್ರೀವಿದ್ಯೆಗೆ ಸಂಬಂಧಪಟ್ಟವರೇ. ಆದ್ದರಿಂದ ಶಕ್ತಿನಿಧಿಯ ಭಾಗವೇ ದಿಟವಾಗಿ ಶ್ರೀತತ್ತ್ವನಿಧಿ. ಇದನ್ನು ಬರೆದ ಅರಸರ ಉದ್ದೇಶವಾಗಲಿ ಮೊದಲಿಗೆ ಇಷ್ಟೇ ಇದ್ದಿರಬಹುದು. ಈ ಭಾಗವನ್ನು ಬರೆದು ಮುಗಿಸಿದಮೇಲೆ ಪುರುಷದೇವತೆಗಳಾದ ವಿಷ್ಣು, ಶಿವ, ಬ್ರಹ್ಮ ಇವರ ಕಡೆ ಅವರ ಗಮನ ಹರಿದಿರಬೇಕು. ಶ್ರೀಚಕ್ರಪುರವರ್ಣನೆಯಲ್ಲಿ ಇವರ ಪ್ರಸ್ತಾಪ ಹೇಗೂ ಬಂದಿದೆ. ಆದನ್ನೇ ವಿಸ್ತರಿಸಿ ಮತ್ತೆ ಕೆಲವು ನಿಧಿಗಳನ್ನು ಸೇರಿಸಿದರಾಯಿತು ಎಂದುಕೊಂಡಿರಬಹುದು. ಶ್ರೀಶಕ್ತಿನಿಧಿಯಲ್ಲಿ ಕಾಣುವ ವಿಸ್ತಾರ, ಕ್ರಮ, ಅಚ್ಚುಕಟ್ಟು ಉಳಿದ ನಿಧಿಗಳಲ್ಲಿ ಕಾಣುವುದಿಲ್ಲವೆಂಬುದೂ ದಿಟವೇ; ಅವೆಲ್ಲ ಶಕ್ತಿನಿಧಿಗೆ ಅನುಬಂಧಗಳಂತೆ ತೋರಿಕೊಂಡರೆ ಆಶ್ಚರ್ಯವಲ್ಲ.

ಮುಮ್ಮಡಿಯವರ ಕುಲದೈವ, ಇಷ್ಟದೈವ ಚಾಮುಂಡೇಶ್ವರಿ. ಬೆಟ್ಟದ ಮೇಲಿನ ಗುಡಿಗೆ ಅವರ ವಂಶದ ಮೂಲಪುರುಷರಾದ ಯದುರಾಯನೇ ನಡೆದುಕೊಂಡಿದ್ದನು. ಯದುರಾಯನಿಗೆ ಕ್ರಿಸ್ತಾಬ್ದ ೧೪೦೮ರಲ್ಲಿ ಮಗ ಹುಟ್ಟಿದಾಗ "ಶ್ರೀಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿರುವ ಸಂಪಗೆಮರಕ್ಕೆ ತೊಟ್ಟಿಲಂ ಕಟ್ಟಿ ಹರಕೆಯಂ ನೆರವೇರಿಸಿ"ದರೆಂಬ ಒಕ್ಕಣೆ 'ಶ್ರೀಮನ್ಮಹಾರಾಜರವರ ವಂಶಾವಳಿ' (ಭಾಗ ೧, ೧೯೧೬, ಪು.೧೨)ಯಲ್ಲಿ ಕಾಣಿಸಿಗುತ್ತದೆ; ಮಗುವಿಗೆ ಹೆಸರಿಟ್ಟುದೂ 'ಹಿರಿಯಬೆಟ್ಟದ' ಒಡೆಯರೆಂದು. ಈ ದೊರೆಯು ಬೆಟ್ಟದ ಮೇಲೆ, ಗುಡಿಯ ಹಿಂದೆ, ಕಟ್ಟಿಸಿದ ಕೆರೆಯು ಹಿರಿಯಕೆರೆಯೆಂದೇ ಹೆಸರನ್ನು ತಳೆಯಿತು. ಹಿರಿಯ ಬೆಟ್ಟವೆಂದರೆ ಚಾಮುಂಡಿಬೆಟ್ಟವೇ. ಕಿರಿಯಬೆಟ್ಟ ಮೇಲುಕೋಟೆ; 'ಯಾದವಗಿರಿಗೆ ಕೋಟೆಯಂ ಕಟ್ಟಿಸಿ ನಾಲ್ಕು ಬಾಗಿಲುಗಳನ್ನುಂಟುಮಾಡಿ ಮೇಲುಕೋಟೆ ಎಂಬುದಾಗಿ ನಾಮಧೇಯವನಿಟ್ಟ'ವನೂ ಯದುರಾಯನೇ. ಹಿರಿಯ ಬೆಟ್ಟದ ಮೇಲಿನ ಗುಡಿ ಶಾಕ್ತಸಂಪ್ರದಾಯಕ್ಕೆ ಸೇರಿದ್ದು. ಹೀಗಾಗಿ ಮುಮ್ಮಡಿಯವರಿಗೆ ತಾಂತ್ರಿಕ ಒಲವು ಮಾಡಿಕೊಂಡದ್ದಾಗಲಿ, ಶಕ್ತಿನಿಧಿಯನ್ನು ಸಿದ್ಧಪಡಿಸುವ ಬಯಕೆ ಒದಗಿಬಂದದ್ದಾಗಲಿ ಸಹಜವೇ.

ಆದರೆ ಮೈಸೂರು ಅರಸೊತ್ತಿಗೆಗೆ ಮೊದಲಿಂದಲೂ ಮೇಲುಕೋಟೆಯ ನಂಟು ಇದ್ದಿತಷ್ಟೆ. ಮೊದಲಿಗೆ ಅದು ಯಾದವಗಿರಿ. ಮೈಸೂರು ಅರಸರದ್ದೂ ಯದುವಂಶ; ಅವರ ಪೂರ್ವಪುರುಷರಲ್ಲಿ ಕೃಷ್ಣನೇ ಸೇರಿಕೊಂಡಿದ್ದಾನೆ. ಯಾದವಗಿರಿಯ ದೇವರು ನಾರಾಯಣ. ಮೈಸೂರಿನಲ್ಲಿಯೂ ಲಕ್ಷ್ಮೀರಮಣಸ್ವಾಮಿ ಗುಡಿಯು ಅರಮನೆಗೆ ಹೊಂದಿಕೊಂಡೇ ಇದ್ದಿತು. ರಾಜ ಒಡೆಯರ ಕಾಲದಲ್ಲಿ (೧೫೭೮ - ೧೬೧೭) ಮೇಲುಕೋಟೆಯ ಚೆಲುವನಾರಾಯಣನೂ ಮೈಸೂರಿನ ಲಕ್ಷ್ಮೀರಮಣನೂ ಪ್ರಸಿದ್ಧರಾದರು. ಚೆಲುವನಾರಾಯಣನಿಗೆ 'ರಾಜಮುಡಿ'ಯ ಮರ್ಯಾದೆಯೂ ಸಂದಿತು. ಅವರ ಕಾಲದಲ್ಲೇ ಶ್ರೀರಂಗಪಟ್ಟಣವೂ ರಾಜಧಾನಿಯಾಗಿ ಅಲ್ಲಿನ ರಂಗನಾಥಸ್ವಾಮಿಯೂ ಬಲಗೊಂಡ. ಶ್ರೀವೈಷ್ಣವಪ್ರಭಾವ ಅರಸೂತ್ತಿಗೆಯ ಮೇಲೆ ಬೀಳತೊಡಗಿದುದು ಆ ಕಾಲದಿಂದಲೇ. ಕಂಠೀರವ ನರಸರಾಜ ಒಡೆಯರು (ರಾಜ್ಯಭಾರ ೧೬೩೮-೧೬೫೯) ದೇಶದ ಹಲವಾರು ವಿಷ್ಣುದೇವಾಲಯಗಳಿಗೆ ಭಕ್ತಿಯಿಂದ ನಡೆದುಕೊಂಡರು. ಚಿಕ್ಕದೇವರಾಜ ಒಡೆಯರ ಆಳ್ವಿಕೆಯಲ್ಲಿ (೧೬೭೩-೧೭೦೮) ಶ್ರೀವೈಷ್ಣವರು ಅಧಿಕಾರದಲ್ಲೂ ಬಲಗೊಂಡದ್ದು 'ಮಂತ್ರಿತನದಲ್ಲಿರುವ ಪರಮಾಪ್ತನಾದ ತಿರುಮಲಯ್ಯಂಗಾರಿ'ಯ ಪ್ರಕರಣದಿಂದ ತಿಳಿದುಬರುತ್ತದೆ (ಅದೇ ಗ್ರಂಥ, ಪು.೧೩೨-೧೩೬). ಮುಮ್ಮಡಿಯವರ ಕಾಲದವರಿಗೂ ಶ್ರೀರಂಗಪಟ್ಟಣವೇ ಅರಸೊತ್ತಿಗೆಯ ರಾಜಧಾನಿಯಾಗಿದ್ದುದು ಹಿನ್ನೆಲೆಯಲ್ಲಿದ್ದಿರಬಹುದು.

ಮುಮ್ಮಡಿಯವರಿಗೆ ರಾಜ್ಯದ ಪಟ್ಟಾಭಿಷೇಕವಾದುದ್ದು ಮೈಸೂರಿನಲ್ಲಿ, ಲಕ್ಷ್ಮೀರಮಣ ಸ್ವಾಮಿಯ ಸನ್ನಿಧಿಯಲ್ಲಿ. ಆಗ ಅವರ ಆಸಕ್ತಿ ಹರಿದುದು ಹಿರಿಯಬೆಟ್ಟದ ಮೇಲಣ ಗುಡಿಯ ಮೇಲೆ. ಅರಸೂತ್ತಿಗೆಯು ಮೈಸೂರಿನಲ್ಲಿರುವಾಗಲೂ, ಶ್ರೀರಂಗಪಟ್ಟಣದಲ್ಲಿರುವಾಗಲೂ, ಮತ್ತೆ ಮೈಸೂರಿಗೆ ಬಂದಾಗಲೂ, ಅರಸರೆಲ್ಲರೂ ಶೈವ-ವೈಷ್ಣವ ಧರ್ಮಗಳನ್ನು ಸಮನಾದ ಆದರದಿಂದಲೇ ಕಾಣುತ್ತಿದ್ದರು, ಎಲ್ಲ ಗುಡಿಗುಂಡಾರಗಳಿಗೂ ಸಮಾನವಾಗಿಯೇ ದಾನಧರ್ಮಗಳನ್ನು ನಡೆಸುತ್ತಿದ್ದರು. ಆದರೆ ಸ್ವಂತ ಆಚಾರದಲ್ಲಿ ಕೆಲವರು ಅರಸರು ಶೈವರಾಗಿದ್ದರು, ಮತ್ತೆ ಕೆಲವರು ವೈಷ್ಣವರಾಗಿದ್ದರು. ನಿದರ್ಶನಕ್ಕೆ ರಾಜ ಒಡೆಯರೂ ಚಿಕ್ಕದೇವರಾಜ ಒಡೆಯರೂ ವೈಷ್ಣವಸಂಪ್ರದಾಯದವರಾದರೂ ಕುಲದೇವತೆ ಚಾಮುಂಡೇಶ್ವರಿಯೆ; ಶೈವಸಂಪ್ರದಾಯದವರಾದರೂ ರಾಜಗುರುಗಳು ಪರಕಾಲಮಠದ ಶ್ರೀವೈಷ್ಣವ ಸ್ವಾಮಿಗಳೇ.

ಮುಮ್ಮಡಿಯವರು ಶೈವಸಂಪ್ರದಾಯವರು, ಬೆಟ್ಟದ ಚಾಮುಂಡೇಶ್ವರಿಗೆ, ನಂಜನಗೂಡಿನ ಶ್ರೀಕಂಠೇಶ್ವರನಿಗೆ, ಮೈಸೂರು ಅರಮನೆಯ ತೃಣೇಶ್ವರನಿಗೆ ನಡೆದುಕೊಳ್ಳುತ್ತಿದ್ದವರು. ಅವರ

'ವಂಶಾವತರಣ ವೈಭವಗದ್ಯ'ದಲ್ಲಿ "ಶಿವಪೂಜಾಬದ್ಧದೀಕ್ಷಾಧುರೀಣಃ" ಎಂಬ ಒಕ್ಕಣೆಯಿದೆ; "ಶ್ರೀಕಂಠೇಶ್ವರ ಪ್ರಸಾದಲಬ್ಧ ಸರ್ವಸಾಮ್ರಾಜ್ಯಶಾಲಿ"ಯಂತೆ. "ಶ್ರೀಚಾಮುಂಡಾ ಪದಾಂಭೋಜ ಭ್ರಮರಾಯಿತ ಮಾನಸ"ರಂತೂ ಸರಿಯೇ ಸರಿ. ಆದರೆ ಶ್ರೀವೈಷ್ಣವ ಸಂಪ್ರದಾಯದ ಪರಕಾಲಮಠದ "ಶ್ರೀಘಂಟಾವತಾರ ಪರಕಾಲ ಸ್ವಾಮಿಗಳವರಲ್ಲಿ ಸಮಾಶ್ರಯಣವನ್ನು ಮಾಡಿಸಿಕೊಂಡು, ಸ್ವಾಮಿಗಳಿಗೂ ಮಠದ ಶ್ರೀಹಯಗ್ರೀವ ಲಕ್ಷ್ಮೀನಾರಾಯಣ ದೇವರಿಗೂ ಸೇವಾರ್ಥವಾಗಿ ಕೃಷ್ಣಾಪುರ, ಮೇಲುಕೋಟೆ, ಶ್ರೀರಂಗಪಟ್ಟಣದ ಕೊಪ್ಪಲು, ಮೈಸೂರು ಮುಂತಾದ ಸ್ಥಳಗಳಲ್ಲಿ ವಿಸ್ತಾರವಾಗಿ ಮಠಗಳನ್ನು ಕಟ್ಟಿಸಿಕೊಟ್ಟರು" (ಅದೇ ಗ್ರಂಥ, ಭಾಗ೨, ೧೯೨೨, ಪು.೧೬೧). ಹಿಂದೆ ಚಿಕ್ಕದೇವರಾಜ ಒಡೆಯರು ಶ್ರೀಮುಷ್ಣದಿಂದ ಶ್ವೇತವರಾಹಸ್ವಾಮಿಯನ್ನೂ ತಂಜಾವೂರಿನಿಂದ ನೀಲಮೇಘಶ್ಯಾಮಸ್ವಾಮಿಯನ್ನೂ ಶ್ರೀರಂಗಪಟ್ಟಣಕ್ಕೆ ತರಿಸಿಕೊಂಡು ಅರಮನೆಯಲ್ಲೇ ಶ್ರೀವೈಷ್ಣವಸಂಪ್ರದಾಯದಂತೆ ಆಲಯಪ್ರತಿಷ್ಠೆಮಾಡಿಸಿದ್ದರು. ಟೀಪುಸುಲ್ತಾನರ ಕಾಲದಲ್ಲಿ ಆಲಯವು ಹಾಳಾಯಿತಂತೆ. ಮುಮ್ಮಡಿಯವರು ಪಟ್ಟಕ್ಕೆ ಬಂದಮೇಲೆ ಶ್ವೇತವರಾಹಸ್ವಾಮಿಯ ಮೂರ್ತಿಯನ್ನು ಮೈಸೂರಿಗೆ ತರಿಸಿಕೊಂಡು, ಅದಕ್ಕೆ ವಿಸ್ತಾರವಾದ ಗುಡಿಯೊಂದನ್ನು ಕಟ್ಟಿಸಿ ವಿಧಿಯಂತೆ ಪ್ರತಿಷ್ಠೆಮಾಡಿಸಿ ಪೂಜೆ, ಉತ್ಸವಗಳಿಗೆ ಏರ್ಪಾಟುಮಾಡಿದರು. ಇದಲ್ಲದೆ ಅರಮನೆಗೆ ಸೇರಿದಂತೆ ಲಕ್ಷ್ಮೀರಮಣಸ್ವಾಮಿ ಗುಡಿ, ಪ್ರಸನ್ನಕೃಷ್ಣಸ್ವಾಮಿಗುಡಿಗಳ ವೈಭವಕ್ಕೂ ಕಾರಣರಾದರು. ತಿರುಪತಿ (ವೆಂಕಟರಮಣ), ಮೇಲುಕೋಟೆ (ಚೆಲುವನಾರಾಯಣ), ಶ್ರೀರಂಗಪಟ್ಟಣ (ಪಶ್ಚಿಮರಂಗನಾಥ), ಬಿಳಿಗಿರಿ (ರಂಗಸ್ವಾಮಿ), ಕಂಚಿ (ವರದರಾಜ), ಹಿಮವದ್ಗೋಪಾಲಸ್ವಾಮಿ, ಮೊದಲಾದ ವಿಷ್ಣುಸ್ಥಳಗಳನ್ನು ಸಂದರ್ಶಿಸಿ ದಾನಧರ್ಮಗಳನ್ನು ಮಾಡಿದರು. ಮೇಲುಕೋಟೆಯ ಚೆಲುವನಾರಾಯಣನಿಗೆ 'ಕೃಷ್ಣರಾಜಮುಡಿ'ಯನ್ನು ಸಮರ್ಪಿಸಿದರು. ಅಹೋಬಲಮಠ, ತೋತಾದ್ರಿಮಠ, ವ್ಯಾಸರಾಯಮಠ, ಉತ್ತರಾದಿಮಠ, ರಾಘವೇಂದ್ರಸ್ವಾಮಿಮಠ ಮೊದಲಾದ ವೈಷ್ಣವಮಠಗಳು ಮೈಸೂರುಸೀಮೆಯಲ್ಲಿ ನೆಲೆಗೊಳ್ಳಲು ನೆರವಾದರು.

ಅವರ ಆಸ್ಥಾನದಲ್ಲಿದ್ದ ಹಲವಾರು ಪ್ರಸಿದ್ಧ, ಪ್ರತಿಭಾವಂತ ವಿದ್ವಾಂಸರಲ್ಲಿ ರಾಮಾನುಜ, ಮಾಧ್ವಸಂಪ್ರದಾಯಗಳಿಗೆ ಸೇರಿದ್ದವರೂ ಇದ್ದರು. ತಿರುಪತಿ ಬಾಳಾಚಾರ್ಯರು, ಅವರ ಮಗ ಶ್ರೀನಿವಾಸಾಚಾರ್ಯರು, ತೆಂಗಲೆ ಸುದರ್ಶನಾಚಾರ್ಯರು, ಲಕ್ಷ್ಮೀಪಂಡಿತರ ಮಗ ಸೂರಪಂಡಿತರು, ಸುರಪುರದ ಶೇಷದಾಸರು, ಭೀಮದಾಸಾಚಾರ್ಯರು, ಮೊದಲಾದವರೊಂದಿಗೆ ಅರಸರು 'ಧರ್ಮಸಂಕಥಾವಿನೋದ'ವನ್ನು ನಡೆಸುತ್ತಿದ್ದು ವೈಷ್ಣವಸಂಪ್ರದಾಯಗಳನ್ನು ಕುರಿತಂತೆ ಪ್ರೌಢವಾದ ಪರಿಚಯವನ್ನು ಪಡೆದುಕೊಂಡಿದ್ದರು. ಪರಕಾಲಮಠದ ಶ್ರೀನಿವಾಸ ಬ್ರಹ್ಮತಂತ್ರಸ್ವಾಮಿಗಳ ಬಳಿ ಭಗವದ್ಗೀತೆಯನ್ನು ಪಾಠಮಾಡಿದ್ದರು. ತಿರುವಳ್ಳುವೂರಿನಿಂದ ಅಹೋಬಲಮಠದ ಸ್ವಾಮಿಗಳನ್ನು ಮೈಸೂರಿಗೆ ಕರೆಯಿಸಿಕೊಂಡು ಅವರಲ್ಲಿ ನಮ್ಮಾಳ್ವಾರರ ಪ್ರಬಂಧಗಳನ್ನು ಅಭ್ಯಾಸಮಾಡಿದ್ದರು. ಹೀಗೆಯೆ ತೋತಾದ್ರಿಮಠದ ವಾನಮಾಮಲೆ ರಾಮಾನುಜಜೀಯರ್‌ಸ್ವಾಮಿಗಳ ಬಳಿಯೂ, ಮಂಚಾಲೆಯ ರಾಘವೇಂದ್ರಮಠದ ಸುಜನೇಂದ್ರತೀರ್ಥಸ್ವಾಮಿಗಳ ಬಳಿಯೂ ಶಾಸ್ತ್ರಶ್ರವಣ ಮಾಡಿದ್ದರು.

ಎಂದಮೇಲೆ ಎರಡನೆಯದಾದ 'ವಿಷ್ಣುನಿಧಿ'ಯನ್ನೂ, ಆರನೆಯದಾದ 'ವೈಷ್ಣವನಿಧಿ'ಯನ್ನೂ ಸಿದ್ಧಪಡಿಸಲು ಅಗತ್ಯವಾದ ಅಧಿಕಾರವನ್ನು ಪಡೆದುಕೊಂಡಿದ್ದರೆನ್ನುವುದು ಸ್ಪಷ್ಟವಾಗುತ್ತದೆ. 'ವಿಷ್ಣುನಿಧಿ'ಯಲ್ಲಿ ಉದ್ದೇಶವನ್ನು "ವಿರಾಡ್ರೂಪಾದಿ ವಿಷ್ಣುಸ್ವರೂಪನಿರೂಪಣ"ವೆಂದೂ ಕಾಣಿಸಿದ್ದಾರೆ. ಇದರಲ್ಲಿ ವೈಷ್ಣವಮತಪ್ರಕ್ರಿಯೆಗಳು ಬರುವುದಿಲ್ಲ; ಅವು ಆರನೆಯ ನಿಧಿಯಲ್ಲಿ ಕಾಣಸಿಗುತ್ತವೆ. ಇಲ್ಲಿ ವಿಷ್ಣುವಿನ ವ್ಯೂಹ ಮೂರ್ತಿಗಳು, ದಶಾವತಾರಗಳು, ಚತುರ್ವಿಂಶತಿ ತತ್ತ್ವಮೂರ್ತಿಗಳು, ಪರಿವಾರಮೂರ್ತಿಗಳು ಇವೆಲ್ಲದರ ಮೂರ್ತಿಲಕ್ಷಣಗಳನ್ನು ತಿಳಿಯಹೇಳಿದ್ದಾರೆ.

ಆರನೆಯ ನಿಧಿಯಲ್ಲಿ ಶ್ರೀವೈಷ್ಣವಮತಪ್ರಕ್ರಿಯೆಯೇ ಅಧಿಕವಾಗಿದೆ. ನೂರಹದಿನಾರು ದಿವ್ಯಸ್ಥಳಗಳು, ದಿವ್ಯದೇಶಚತುಷ್ಟಯ, ಊರ್ಧ್ವಪುಂಡ್ರವಿಧಾನ, ರಾಮಾನುಜರ ಏಕಾಂತಿಶಿಷ್ಯರು, ರಾಮಾನುಜಾಚಾರ್ಯರ ಅಷ್ಟೋತ್ತರಶತನಾಮ, ಆಳ್ವಾರಾಚಾರ್ಯರ ಧ್ಯಾನಗಳು, ತುಳಸೀ ಬೃಂದಾವನವಿಚಾರ, ಇವಲ್ಲದೆ 'ಪ್ರಪತ್ತಿಸೋಪಾನ' ಮತ್ತು 'ಯತಿರಾಜಸಪ್ತತಿ' ಎಂಬೆರಡು ಪ್ರಕರಣಗ್ರಂಥಗಳ ಪೂರ್ಣಪಾಠವನ್ನೂ ಕೊಡಲಾಗಿದೆ. ಮುಮ್ಮಡಿಯವರಿಗೆ ಶ್ರೀವೈಷ್ಣವಸಂಪ್ರದಾಯದ ಬಗ್ಗೆ ಇದ್ದ ಪರಿಚಯವೂ, ಅಭಿಮಾನವೂ ಇದರಿಂದ ಸ್ಪಷ್ಟವಾಗುತ್ತದೆ. ಆದರೆ ಈ ನಿಧಿಯಲ್ಲಿ ಸೇರಿರುವ ಮುಖ್ಯವಿಚಾರವೆಂದರೆ ಸಾಲಿಗ್ರಾಮಗಳನ್ನು ಕುರಿತದ್ದು. ಸಾಲಿಗ್ರಾಮವು ವಿಷ್ಣುವಿನ ಸಾಕ್ಷಾತ್ ಪ್ರತೀಕವೆಂಬ ವಿಶ್ವಾಸ ವೈಷ್ಣವರಿಗೆ ಮಾತ್ರವಲ್ಲದೆ ಆಸ್ತಿಕರಾದ ಎಲ್ಲರಿಗೂ ಇದೆಯಷ್ಟೆ. ಸಾಲಿಗ್ರಾಮದ ಉತ್ಪತ್ತಿ, ಪರೀಕ್ಷೆ, ಮೂರ್ತಿಭೇದ, ಚಕ್ರಲಕ್ಷಣ, ಪೂಜೆ ಎಲ್ಲ ವಿಚಾರವಾಗಿಯೂ ಸಮಗ್ರವಾದ ಸಂಗ್ರಹವಾದ ವಿವರಗಳು ಈ ನಿಧಿಯ ಕಡೆಯಲ್ಲಿ ದೊರೆಯುತ್ತವೆ. ಇಷ್ಟು ವಿಸ್ತೃತವಾದ ಬೇರೊಂದು ವಿವೇಚನೆಯನ್ನು ಕನ್ನಡದಲ್ಲಾಗಲಿ ಇತರ ಯಾವ ಭಾಷೆಯಲ್ಲಾಗಲಿ ಕಾಣಲಾರೆವು; ಇದೊಂದು ಸಂಗ್ರಾಹ್ಯವಾದ, ಸ್ವಾರಸ್ಯವಾದ ಭಾಗ.

ಎರಡನೆಯದಾದ ವಿಷ್ಣುನಿಧಿಯಿಂದ ಮೂರ್ತಿಲಕ್ಷಣದ ದೃಷ್ಟಿಯಿಂದ ಪ್ರಸಕ್ತವಾಗುವ ವಿವರಗಳನ್ನೂ, ಆರನೆಯದಾದ ವೈಷ್ಣವನಿಧಿಯಿಂದ ಸಾಲಿಗ್ರಾಮಗಳನ್ನು ಕುರಿತಂತೆ ವಿವರಗಳನ್ನೂ ಆಯ್ದುಕೊಂಡು ಇನ್ನು ಮುಂದೆ ಈ ಪರಿಚ್ಛೇದದಲ್ಲಿ ಕಾಣಿಸಲೆತ್ನಿಸಿದ್ದೇನೆ.

(೧) ವಿರಾಡ್ರೂಪ

ವಿಷ್ಣು ಎಂಬ ಮಾತಿಗೆ ಎಲ್ಲೆಲ್ಲೂ ಇರುವುದು, ವ್ಯಾಪಕವಾದುದು ಎಂಬರ್ಥವಿದೆ. ಇದು ಸಾರ್ಥಕವಾಗುವುದು ವಿರೂಡ್ರೂಪದಲ್ಲಿ. ವಿರಾಟ್ ('ವಿಶೇಷೇಣ ರಾಜತೇ ಇತಿ') ಎಂದರೆ ಎಲ್ಲೆಡೆಯೂ ಹೆಚ್ಚಾಗಿ ಬೆಳಗುವುದು. ಈ ರೂಪದಲ್ಲಿ ದೇವರು ಬ್ರಹ್ಮಾಂಡವನ್ನೆಲ್ಲ ತನ್ನೊಳಗೆ

ಅಡಗಿಸಿಕೊಂಡು, ಸ್ಥೂಲ-ಸೂಕ್ಷ್ಮ, ಮೇಲೆ-ಕೆಳಗೆ, ಒಳಗೆ-ಹೊರಗೆ, ಜಡ-ಚೇತನ, ದೇವ-ದಾನವ ಎಲ್ಲ ಪ್ರಕಾರಗಳಲ್ಲಿಯೂ ತೋರಿಕೊಳ್ಳುವನು. ಇಡೀ ಬ್ರಹ್ಮಾಂಡವೇ ಅವನ ಶರೀರ.

ಭಾಗವತದ ಎರಡನೆಯ ಸ್ಕಂದದಿಂದ ಆಯ್ದುಕೊಂಡು ಇಲ್ಲಿ ಕೊಡಲಾಗಿರುವ ಧ್ಯಾನಶ್ಲೋಕ ಈ ರೂಪವನ್ನು ಬಣ್ಣಿಸುತ್ತದೆ-

'ಪಾತಾಳಮೇತಸ್ಯ ಹಿ ಪಾದಮೂಲಂ ಪಠಂತಿ ಪಾರ್ಷ್ಣಿಪ್ರಪದೇ
ರಸಾತಳಂ (I)
(ಮಹಾತಲಂ) ವಿಶ್ವಸೃಜಸ್ಗುಲ್ಫೌ ತಳಾತಳಂ ವೈ ಪುರುಷಸ್ಯ
ಜಂಘೇ । (II)
ದ್ವೇ ಜಾನುನೀ ಸುತಳಂ ವಿಶ್ವಮೂರ್ತೇರೂರುದ್ವಯಂ ವಿತಳಂ
ಚಾತಳಂಚ ।
ಮಹೀತಳಂ ತಜ್ಜಘನಂ ಮಹೀಪತೇ ನಭಸ್ಥಳಂ ನಾಭಿಸರೋ
ಗೃಣಂತಿ (II)
ಉರಸ್ಥಳಂ ಜ್ಯೋತಿರನೀಕಮಸ್ಯ ಗ್ರೀವಾಮಹರ್ವದನಂ
ವೈ ಜನೋ(s)ಸ್ಯ ।
ತಪೋ ಲಲಾಟಂ ವಿದುರಾದಿಪುಂಸಸ್ಸತ್ಯಂ ಚ(ತು) ಶೀರ್ಷಾಣಿ
ಸಹಸ್ರಶೀರ್ಷ್ಣಃ । (II)
ಇಂದ್ರಾದಯೋ ಬಾಹವ ಆಹುರುಸ್ರಾಃ । ಕರ್ಣಾ ದಿಶಃ
ಶ್ರೋತ್ರಮಮುಷ್ಯ ಶಬ್ದಃ ।
ನಾಸತ್ಯದಸ್ರಾ(ಸ್ರೌ) ಪರಮಸ್ಯ ನಾಸೇ ಘ್ರಾಣಂ ಚ ಕಂಧೋ
ಮುಖಮಗ್ನಿರಿದ್ಧಃ । (II)
ದ್ಯೌರಕ್ಷಿಣೀ ಚಕ್ಷುರಭೂತ್ಪತಂಗಃ ಪಕ್ಷ್ಮಾಣಿ ವಿಷ್ಣೋರಹನೀ
ಉಭೇ ಚ।
ತದ್ಭ್ರೂ ವಿಜೃಂಭಃ ಪರಮೇಷ್ಠಿ(ಷ್ಠಿ)ಧಿಷ್ಣ್ಯಂ ಆಪೋ(s)ಸ್ಯ
ತಾಲೂ ರಸ ಏವ ಜಿಹ್ವಾ। (II)
ಛಂದಾಂಸ್ಯನಂತಸ್ಯ ವಚೋ ಗೃಣಂತಿ ದಂಷ್ಟ್ರಾ(s)ರ್ಯ
ಮೇಂದೂಡುಗಣಾ
ದ್ವಿಜಾನಿ । ಹಾಸೋ ಜನೋನ್ಮಾದಕರೀ ಚ ಮಾಯಾ
ದುರಂತಸರ್ಗೋ
ಯದಪಾಂಗ ಮೋಕ್ಷಃ । (II)
ವ್ರೀಡೋತ್ತರೋಷ್ಠೋ(s)ಧರ ಏವ ಲೋಭೋ
ಧರ್ಮಸ್ತನೋ(s)ಧರ್ಮ ಪಥಶ್ಚ ಪೃಷ್ಠಃ(ಷ್ಮಃ) ।
ಕಸ್ತಸ್ಯ ಮೇಢ್ರಂ ವೃಷಣೌ ಚ ಮಿತ್ರಃ ಕುಕ್ಷಿಃ
ಸಮುದ್ರಾಗಿರಯೋ(s)ಸ್ಥಿಸಂಘಾಃ।।
ನದ್ಯೋ(s)ಸ್ಯ ನಾಡ್ಯೋ(ಡ್ಯೋ)(s)ಥ ತನೂರುಹಾಣಿ।
ಮಹೀರುಹಾ ವಿಶ್ವತನೋರ್ನರೇಂದ್ರ (ರ್ಯಪೇಂದ್ರ) ।
ಅನ್ನಂ ಚ ವೀರ್ಯಂ ಶ್ವಸಿತಂ ಮಾತರಿಶ್ವಾ ।
ಗತಿರ್ವಯಃ । ಕರ್ಮಗುಣ ಪ್ರವಾಹಃ । (II)
ಯೀ (ಈ) ಶಸ್ಯ ಕೇಶಾ - ನ್ವಿದುರಂಬುವಾಹಾನ್ವಾಸಸ್ತು
ಸಂಧ್ಯೇ ಕುರುವರ್ಯ ಭೂಮ್ನಃ ।
ಅವ್ಯಕ್ತ ಮಾಹು - ರ್ಹೃ(ರ್ಹೃ)ದಯಂ ಮನಶ್ಚ
ಸ್ಸ(ಸ)ಚಂದ್ರಮಾಸ್ಸರ್ವವಿಕಾರ ಕೋಶಃ । (II)
ವಿಜ್ಞಾನ - ಶಕ್ತಿಂ ಮತಿ(ಹಿ)ಮಾಮನಂತಿ
'ರ್ವಾತ್ಮನೋಂ(s)ತಃಕರಣಂ
ಗಿರಿತ್ರಃ (ತ್ರಂ) ಅಶ್ವಾಶ್ವತರ್ಯುಷ್ಟ್ರ-
ಗಜಾನಖಾನಿ ಸರ್ವೇ ಮೃಗಾಃ ಪಶವಃ ಶ್ರೋಣಿದೇಶೇ (ಶಃ?) ।
ವಚಾಂ(ಯಾಂ)ಸಿ ತದ್ವ್ಯಾಕರಣಂ ವಿಚಿತ್ರಂ ಮನುರ್ಮನೀಷಾ
ಮನುಜಾ(ಜೋ)ನಿವಾಸಃ।
ಗಂಧರ್ವ ವಿದ್ಯಾಧರ ಚಾರಣಾಪ್ಸರಃ ಸ್ವರ(ರಾಃ)
ಸ್ಮೃತಿರ್ಹ್ಯಸುರಾನೀಕವರ್ಯಃ । (II)
ಬ್ರಹ್ಮಾನನಂ ಕ್ಷತ್ರ ಭುಜಾ(ಜೋ) ಮಹಾತ್ಮನೋ (ಮಹಾತ್ಮಾ)
ವಿಡೂರುರಂಘ್ರೀ ಶ್ರಿತಕೃಷ್ಣವರ್ಣಃ ॥
ಸ್ವಾಹಾ ಸ್ವಧಾ ವೀರ್ಯಗುಣೋ ಪಪನ್ನೋ
ಹವ್ಯಾತ್ಮಕಃ ಕರ್ಮವಿತಾನಯೋಗಃ । (II)
ಇಯಾನ ಸಾವೀಶ್ವರವಿಗ್ರಹಸ್ಯ ಯಸ್ಸಂನಿವೇಶಃ
ಕಥಿತೋ ಮಯಾ ತೇ ।
ಸಂಧಾರ್ಯ ತೇ(s)ಸ್ಮಿನ್ ವಪುಷಿ (ಪುರುಷೇ) ಸ್ಥವಿಷ್ಠೇ ಮನಃ
ಸ್ವಬುಧ್ಯಾ(ದ್ಧ್ಯಾ) ನ ಯತೋಸ್ತಿ ಕಿಂಚಿತ್ । (II)

ಭಾಗವತಮಹಾಪುರಾಣದ ದ್ವಿತೀಯ ಸ್ಕಂಧದ ಮೊದಲ ಅಧ್ಯಾಯದಲ್ಲಿ ೨೯ರಿಂದ ೩೮ರವರೆಗಿನ ಶ್ಲೋಕಗಳನ್ನು ಮೇಲೆ ಉದ್ಧರಿಸಿಕೊಳ್ಳಲಾಗಿದೆ. ಶುಕಮುನಿಯು ಪರೀಕ್ಷಿದ್ರಾಜನಿಗೆ ಧ್ಯಾನಧಾರಣೆಯ ವಿಚಾರವಾಗಿ ಹೇಳುವ ಮಾತುಗಳು ಇವು. ಶ್ಲೋಕಗಳನ್ನು ಬರೆದುಕೊಳ್ಳುವಾಗ ಲಿಪಿಕಾರರು ಕೆಲವು ತಪ್ಪುಗಳನ್ನು ಮಾಡಿದ್ದಾರೆ; ಅವನ್ನು ಸರಿಪಡಿಸಿ ಕಂಸಗಳಲ್ಲಿ ಕಾಣಿಸಿದ್ದೇನೆ. ಶ್ಲೋಕಗಳ ವಿಂಗಡಣೆಯನ್ನೂ ಬರಹದ ಪ್ರತಿಯಲ್ಲಿ ಮಾಡಿಕೊಂಡಿರಲಿಲ್ಲ; ಕಂಸಗಳಲ್ಲಿ ಅದನ್ನು ಕಾಣಬಹುದು. ಈ ಭಾಗದ ತಾತ್ಪರ್ಯವೇನೆಂದರೆ–

ವಿರಾಡ್ರೂಪಕ್ಕೆ ಪಾತಾಳವೇ ಅಂಗಾಲು, ರಸಾತಳ ಹಿಮ್ಮಡಿ, ಮಹಾತಲ ಹರಡು, ತಲಾತಲ ಮೊಳಕಾಲು; ಸುತಲ ಮೊಳಕಾಲಗಂಟು; ವಿತಲ-ಅತಲ ತೊಡೆಗಳು; ಭೂತಲ ಜಘನ; ಭುವರ್ಲೋಕ ನಾಭಿ; ಸ್ವರ್ಲೋಕ ಎದೆ; ಮಹರ್ಲೋಕ ಕತ್ತು; ಜನೋಲೋಕ ಮುಖ; ತಪೋಲೋಕ ಹಣೆ; ಸತ್ಯಲೋಕವೆಂಬುದು ತಲೆ. ಹೀಗೆ ವಿರಾಟ್‌ಪುರುಷನ ಅಂಗಾಂಗಗಳೇ ಈ ಎಲ್ಲ ಲೋಕಗಳು. ಇಂದ್ರನೇ ಮೊದಲಾದ ದೇವತೆಗಳು ತೋಳುಗಳು; ದಿಕ್ಕುಗಳೇ ಕಿವಿಗಳು, ಶಬ್ದವೇ ಶ್ರೋತ್ರೇಂದಿಯ; ಅಶ್ವಿನೀ ದೇವತೆಗಳು ಮೂಗಿನ ಹೊಳ್ಳೆಗಳು; ಗಂಧವೇ ಘ್ರಾಣೇಂದ್ರಿಯ; ಅಗ್ನಿಯೇ ಮುಖ; ಅಂತರಿಕ್ಷವೇ ಕಣ್ಣುಗಳು; ಸೂರ್ಯನು ಚಕ್ಷುರಿಂದ್ರಿಯ; ಹಗಲು ಇರುಳು ಕಣ್ಣುರೆಪ್ಪೆಗಳು; ಬ್ರಹ್ಮಲೋಕವು ಹುಬ್ಬುಗಳು; ಜಲವು ದವಡೆ; ರಸವೇ ನಾಲಗೆ; ಛಂದಗಳು (ಎಂದರೆ ವೇದ) ಮಾತು; ಅರ್ಯಮನೇ ಕೋರೆದಾಡೆ, ನಕ್ಷತ್ರಗಳು ಹಲ್ಲುಗಳು. ಜನರನ್ನು ಮರಳುಮಾಡುವ ನಗೆ ಅವನ ಮಾಯೆ. ಅವನ ಒರೆನೋಟವೇ ಸೃಷ್ಟಿ. ನಾಚಿಕೆ ಮೇಲುತುಟಿ, ದುರಾಸೆ ಕೆಳತುಟಿ. ಧರ್ಮವೆಂಬುದು ಮುಂಭಾಗ, ಅಧರ್ಮ ಬೆನ್ನು. ನಾಲ್ಕುಮೊಗಗಳ ಬ್ರಹ್ಮನು ಮೇಢ್ರ, ಮಿತ್ರಾವರುಣರು ವೃಷಣಗಳು; ಸಮುದ್ರಗಳು ಹೊಟ್ಟೆ; ಎಲುಬುಗಳೆಂದರೆ ಬೆಟ್ಟಗುಡ್ಡಗಳು, ನದಿಗಳು

ನರಗಳು; ಗಿಡಗಳು ಮೈಕೂದಲು; ವಾಯುವು ಮೇಲುಸಿರು; ಕಾಲವೆಂಬುದು ವಯಸ್ಸು; ಜೀವರ ಕರ್ಮಗುಣಪ್ರವಾಹವು (ಎಂದರೆ ಸಂಸಾರವು) ನಡಿಗೆ; ಮೋಡಗಳು ಅವನ ತಲೆಗೂದಲು; ಸಂಧ್ಯಾಸಮಯವೇ ಉಡುವ ಬಟ್ಟೆ. ಅವ್ಯಕ್ತತತ್ತ್ವವೇ ಹೃದಯ, ಮನಸ್ತತ್ತ್ವವು ಚಂದ್ರ, ಮಹತ್ತತ್ತ್ವವು ಬುದ್ಧಿ; ರುದ್ರನು ಅಹಂಕಾರ; ಕುದುರೆ ಮೊದಲಾದ ಪ್ರಾಣಿಗಳು ಉಗುರುಗಳು, ಪಶುಸಮೂಹವು ಸೊಂಟ; ಹಾರುವ ಹಕ್ಕಿಗಳು ಅವನ ಮಾತಿನ ಬಗೆಗಳು; ಮನುವೇ ಅವನ ಮನೀಷೆ; ಮನುಷ್ಯನು ಅವನ ನೆಲೆ (ಎಂದರೆ ಎಲ್ಲರಿಗೂ ಅವನು ಅಂತರ್ಯಾಮಿ). ಗಂಧರ್ವರೇ ಮೊದಲಾದ ದೇವಯೋನಿ ಅವನಿಗೆ ಸ್ವರಗಳು. ಅಸುರರ ಗುಂಪು ಸ್ಮೃತಿ, ಬ್ರಾಹ್ಮಣನು ಮುಖ, ಕ್ಷತ್ರಿಯನು ಭುಜ, ವೈಶ್ಯನು ತೊಡೆ, ಶೂದ್ರನು ಕಾಲು. ಹವಿರ್ದಾನವೇ ಮೊದಲಾದ ಕರ್ಮಗಳು ಅವನ ಪೂಜೆ. ವಿರಾಡ್ದೇಹವೇ ಜೀವನ ಅಂತರ್ಯಾಮಿಯೆಂದು ಅನುಸಂಧಾನ ಮಾಡಬೇಕು.

(೨) ಮಹಾವೈಕುಂಠಮೂರ್ತಿ-

'ತಸ್ಮಿನ್ಮಣಿಮಯಸ್ತಂಭಸಹಸ್ರೇ ಸೂರ್ಯವರ್ಚಸಿ ।
ವಿಮಾನೇ ಸುಶುಭೇ ದಿವ್ಯೇ ಸಂಸ್ಥಿತೋ ಭಗವಾನ್ಹರಿಃ । (II)
ತತ್ರ ಚಾಧಾರಶಕ್ತ್ಯಾದಿ ಧೃತೇ ಪೀಠೇ ಹಿರಣ್ಮಯೇ ।
ನಾನಾರತ್ನಮಯೇ ದಿವ್ಯೇ ನಾನಾರತ್ನಸಮನ್ವಿತೇ । (II)
ತನ್ಮಧ್ಯೇ(s)ಷ್ಟದಳೇ ಪದ್ಮೇ ಮಂತ್ರಾಕ್ಷರಮಯೇ ಶುಭೇ ।
ಕರ್ಣಿಕಾಯಾಂ ಸರಂಮ್ಯಾಯಾಂ ಲಕ್ಷ್ಮೀಬೀಜೇ ಶುಭೇ(s)ಕ್ಷರೇ । (II)
ತಸ್ಮಿನ್ಬಾ(ನ್ಬಾ)ಲಾರ್ಕಸಾಹಸ್ರಕೋಟಿ ತುಲ್ಯಪ್ರಭಾನ್ವಿತಃ।
ದಿವ್ಯೋ ನಾರಾಯಣಃ ಶ್ರೀಮಾನಾಸೀನಃ ಪಂಕಜಾಸನೇ । (II)
ತಸ್ಯ ದಕ್ಷಿಣತಃ ಪಾರ್ಶ್ವೇ ಜಗನ್ಮಾತಾ ಹಿರಣ್ಮಯೀ।
ಸರ್ವಲಕ್ಷಣ ಸಂಪನ್ನಾ ದಿವ್ಯಾಭರಣಭೂಷಿತಾ । (II)
ವಸುಪಾತ್ರಂ ಮಾತುಳುಂಗಂ ಸ್ವರ್ಣಪದ್ಮೇ ಧೃತಾ ಕರೈಃ ।
ವಾಮತಃ ಪೃಥಿವೀ ದೇವೀ ನೀಲೋತ್ಪಲದಳಪ್ರಭಾ। (II)
ನಾನಾಲಂಕಾರ ಸಂಯುಕ್ತಾ ವಿಚಿತ್ರಾಂಬರಭೂಷಿತಾ।
ಧೃತಾ ಸಾ ಹ್ಯೂರ್ಧ್ವಬಾಹುಭ್ಯಾಂ ರಮ್ಯಂ ರಕ್ತೋತ್ಪಲದ್ವಯಂ। (II)
ಉತ್ತರಾಭ್ಯಾಂ ಧೃತಾ ದೇವೀ ಧಾನ್ಯಪಾತ್ರಂ ಶುಕಂ ತಥಾ।
ಗೃಹೀತಚಾಮರಾ ದಿವ್ಯಾಃ ಶಕ್ತಯೋ ವಿಮಲಾದಯಃ॥
ದಳಾಗ್ರೇಷು ಸಮಾಸೀನಾಸ್ಸರ್ವಲಕ್ಷಣ ಶೋಭಿತಾಃ।
ತಾಸಾಂ ಮಧ್ಯೇ ಸಮಾಸೀನೋ ಭಗವಾನಚ್ಚು(ಚ್ಯು)ತೋ ಹರಿಃ। (II)
ಶಂಖಚಕ್ರಗದಾಪದ್ಮಪಾಣಿಭಿರ್ದಿವ್ಯಭೂಷಣೈಃ।
ಕೇಯೂರಾಂಗದ ಹಾರಾದ್ಯೈರ್ಭೂಷಣೈರುಪಶೋಭಿತಃ। (II)
ಪ್ರಾತರುದ್ಯತ್ಸಹಸ್ರಾಂಶುಕುಂಡಲಾಭ್ಯಾಂ ವಿರಾಜಿತಃ।
ಪೂರ್ವೋಕ್ತೈಸ್ತ್ರಿದಶೈರ್ನಿತ್ಯಂ ಸೇವಿತಃ ಪುರುಷೋತ್ತಮಃ।
ಆಸ್ತೇ ವೈಕುಂಠನಗರೇ ನಿತ್ಯಮುಕ್ತೈಕಭೋಗವಾನ್। (II)
ಶ್ರೀಮದಷ್ಟಾಕ್ಷರೇ ಮಂತ್ರೇ ಸಿದ್ಧಾನಾಂ ವೈ ಮನೀಷಿಣಾಂ।
ಗಮ್ಯತೇ ವೈಷ್ಣವಂ ಲೋಕಂ ನೇತರೇಷಾಂ ಕಥಂಚನ। (II)
ರಕ್ತವರ್ಣಂ॥'

ಪಾದ್ಮೋತ್ತರಖಂಡದಲ್ಲಿರುವ ಈ ವರ್ಣನೆಯು ದಿವ್ಯವಾದ ವೈಕುಂಠದಲ್ಲಿ ದೇವತೆಗಳೆಲ್ಲ ಓಲಗದಲ್ಲಿ ನೆರೆದಿರಲು ಶ್ರೀದೇವಿ ಭೂದೇವಿಯೊಡಗೂಡಿ, ಶಕ್ತಿಯರಿಂದ ಪರಿವೃತನಾಗಿ, ನಾರಾಯಣನು ಅಷ್ಟದಳಪದ್ಮದ ಮೇಲೆ ಮಂಡಿಸಿರುವುದನ್ನು ಹೇಳುತ್ತದೆ. ವೈಕುಂಠನಗರವೇ ಒಂದು ಸಹಸ್ರಮಣಿಮಯ ಸ್ತಂಭಗಳ ಮಂಟಪದಂತೆ. ಅದರ ನಡುವೆ ಆಧಾರಶಕ್ತಿಯೇ ಮೊದಲಾದ ಶಕ್ತಿಯರಿಂದ ಸಿದ್ಧವಾದ ಬಂಗಾರದ ರತ್ನಮಯಪೀಠ. ಅದರ ಮೇಲೆ ಅಷ್ಟಾಕ್ಷರಮಂತ್ರವನ್ನು ಸೂಚಿಸುವ ಅಷ್ಟದಳಪದ್ಮ; ಆ ಪದ್ಮದ ನಡುವಣ ಎಡೆ(ಕರ್ಣಿಕೆ) 'ಶ್ರೀಂ' ಎಂಬ ಬೀಜಾಕ್ಷರ. ಆ ಪಂಕಜಾಸನದ ಮೇಲೆ ಶ್ರೀಮನ್ನಾರಾಯಣನು, ಸಾವಿರಸೂರ್ಯರ ಕಾಂತಿಯಿಂದ ಹೊಳೆಯುತ್ತ, ಕುಳಿತಿದ್ದಾನೆ. ಬಲಭಾಗದಲ್ಲಿ ಹಿರಣ್ಮಯಿಯಾದ, ಸರ್ವಲಕ್ಷಣಸಂಪನ್ನೆಯಾದ, ದಿವ್ಯಾಭರಣ ಭೂಷಿತೆಯಾದ ಲಕ್ಷ್ಮಿ. ನಾಲ್ಕು ಕೈಗಳ ಈ ದೇವತೆ ನಿಧಿಕುಂಭ, ಮಾತುಲುಂಗ, ಕಮಲಗಳೆರಡನ್ನು ಹಿಡಿದಿದ್ದಾಳೆ. ಎಡಭಾಗದಲ್ಲಿ ಕಪ್ಪುನೈದಿಲೆಯಂತೆ ಹೊಳೆಯುವ ಪೃಥ್ವೀದೇವಿ. ಅವಳು ತನ್ನ ನಾಲ್ಕು ಕೈಗಳಲ್ಲಿ ಧಾನ್ಯಪಾತ್ರೆ, ಶುಕ, ನೀಲೋತ್ಪಲಗಳೆರಡನ್ನು ಹಿಡಿದಿದ್ದಾಳೆ. ನಾರಾಯಣನು ಕುಳಿತಿರುವ ಕಮಲದ ದಳಾಗ್ರಭಾಗಗಳಲ್ಲಿ ವಿಮಲಾದಿ ಶಕ್ತಿಗಳು ಚಾಮರವನ್ನು ಹಿಡಿದು ಸೇವೆಯಲ್ಲಿ ತೊಡಗಿದ್ದಾರೆ. ನಾರಾಯಣನು ತನ್ನ ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಗದೆ, ಪದ್ಮಗಳನ್ನು ಹಿಡಿದಿದ್ದಾನೆ. ಅಷ್ಟಾಕ್ಷರಸಿದ್ಧಿಯಿಂದ ಪ್ರಾಪ್ಯನಾಗುವವನು, ನಿತ್ಯಮುಕ್ತರಿಂದ ಅನುಭವಿಸಲ್ಪಡುವವನು.

(೩) ವಿಷ್ಣು -

'ದೇವದೇವಸ್ತು ಕರ್ತವ್ಯಂ ಶೇಷಸುಪ್ತೋ ದ್ವಿಬಾಹುಕಃ।
ಏ (ಏ)ಕಪಾದೋ(s)ಸ್ಯ ಕರ್ತವ್ಯೋ ಲಕ್ಷ್ಮ್ಯುತ್ಸಂಗಗತಃ ಪ್ರಭೋಃ
ತಥಾಪರಶ್ಚ ಕರ್ತವ್ಯಶ್ಶೇಷಭೋಗಾಂಕ ಸಂಸ್ಥಿತಃ॥
ಏ(ಏ)ಕಃ ಕರೋ(s)ಸ್ಯ ಕರ್ತವ್ಯಸ್ಸವ್ಯಜಾನೌ ಪ್ರಸಾರಿತಃ।
ಕರ್ತವ್ಯೋ ಮೂರ್ಧಶಸ್ಥಸ್ತಥಾ ತಸ್ಯಾಪರಃ ಕರಃ। (II)
ನಾಭಿಸಂಭೂತ ಕಮಲೇ ಸುಖಾಸೀನಃ ಪಿತಾಮಹಃ।
ನಾಳಲಗ್ನೌ ತು ಕರ್ತವ್ಯೌ ಪದ್ಮಸ್ಯ ಮಧುಕೈಟಭೌ।
ಶಂಖಚಕ್ರಗದಾದೀನಿ ಮೂರ್ತಾನಿ ಪರಿತೋ ನ್ಯಸೇತ್॥
ಮೇಘವರ್ಣಃ॥'

ಪದ್ಮಪುರಾಣದಿಂದ ಎತ್ತಿಕೊಂಡಿರುವ ಈ ಧ್ಯಾನಶ್ಲೋಕದ ಪ್ರಕಾರ ವಿಷ್ಣುವು ಶೇಷನ ಮೇಲೆ ಪವಡಿಸಿರುವಂತೆ (ಅನಂತಶಯನನಾಗಿ) ತೋರಿಕೊಳ್ಳುವನು. ಎರಡೇ ಕೈಗಳು; ಎಡಗೈಯನ್ನು ಚಾಚಿ ಮಂಡಿಯ ಮೇಲಿರಿಸಿಕೊಂಡಿದ್ದಾನೆ, ಬಲಗೈ ತಲೆಯಡಿಯಲ್ಲಿದೆ. ಮಲಗಿರುವ ಭಂಗಿಯಲ್ಲಿ ಒಂದು ಕಾಲು ಲಕ್ಷ್ಮಿಯ ತೊಡೆಯ ಮೇಲಿದೆ; ಇನ್ನೊಂದು ಶೇಷನ ಮೈಮೇಲಿದೆ. ವಿಷ್ಣುವಿನ ಹೊಕ್ಕುಳಿನಿಂದ ಕಮಲವೊಂದು ಮೇಲೆದ್ದು ಅದರಲ್ಲಿ ಬ್ರಹ್ಮನು ಕುಳಿತಿದ್ದಾನೆ. ಕಮಲದ ದಂಟಿನ ಹತ್ತಿರ ಮಧುಕೈಟಭರೆಂಬ ಅಸುರರನ್ನು ಕಾಣಿಸಬೇಕು. ವಿಷ್ಣುವಿನ ಆಯುಧಗಳನ್ನು (ಶಂಖ, ಚಕ್ರ ಮೊದಲಾದುವನ್ನು) ಪುರುಷಾಕಾರಗಳಲ್ಲಿ ಸುತ್ತಲೂ ತೋರಿಸಬೇಕು. ಇಲ್ಲಿನ ವಿಷ್ಣುವು ಕಾರ್ಮೋಡ ಬಣ್ಣದವನು.



ಅನಂತಶಯನ

(೪) ಮೂವರು ದೇವಿಯರು


೧. ಲಕ್ಷ್ಮೀ-

'ಅರುಣ ಕಮಲಸಂಸ್ಥಾ ತದ್ರಜಃಪುಂಜವರ್ಣಾ
ಕರಕಮಲಧೃತೇ(s)ಷ್ಟಾಭೀತಿ ಯುಗ್ಮಾಂಬುಜಾ ಚ। (II)
ಮಣಿಮಕುಟವಿಚಿತ್ರಾಂಲಕೃತಾ ಕಲ್ಪಜಾಲೈ-
ರ್ಭವತು ಭುವನಮಾತಾ ಸಂತತಂ ಶ್ರೀಃ ಶ್ರಿಯೈ ನಃII
ಕನಕವರ್ಣಃII'

(ಶ್ರೀದೇವಿಯಾದ ಲಕ್ಷ್ಮಿಯು ಕೆಂದಾವರೆಯ ಮೇಲೆ ಕುಳಿತವಳು, ಬಂಗಾರದ ಮೈಬಣ್ಣದವಳು ಸರ್ವಾಲಂಕಾರ ಭೂಷಿತೆ; ಎರಡು ಕೈಗಳು, ಅಭಯ ವರದ ಮುದ್ರೆಗಳು. ಇದು ಮಹಾಲಕ್ಷ್ಮೀರತ್ನಕೋಶದಲ್ಲಿರುವ ಧ್ಯಾನಶ್ಲೋಕ)



ಲಕ್ಷ್ಮಿ



ವೈಕುಂಠನಾರಾಯಣ

೨. ಭೂದೇವಿ -

'ಸ್ವರ್ಣವರ್ಣಾ ದ್ವಿಹಸ್ತಾ ಚ ದಕ್ಷಿಣೇನಾಭಯಪ್ರದಾ।
ದಾಡಿಮೀ ಫಲಸಂಯುಕ್ತಾ ವಾಮೇ ಕಲ್ಪತರೋರಧಃ। (II)
ವಾಮಪಾದೇನ ಸಂಸ್ಪೃಷ್ಟ ನಿಧಿಕುಂಭಾದರಾ ಮತಾ।
ಸರ್ವಾಲಂಕಾರ ಭೂಷಾಢ್ಯಾ ಧ್ಯೇಯಾ ಸರ್ವಫಲಪ್ರದಾ। (II)'

(ಭೂದೇವಿಯದೂ ಬಂಗಾರದ ಮೈಬಣ್ಣವೇ, ಕೈಗಳೆರಡೇ. ಬಲಗೈಯಿಂದ ಅಭಯವನ್ನು ನೀಡುವವಳು, ಎಡಗೈಯಲ್ಲಿ ದಾಳಿಂಬೆಹಣ್ಣನ್ನು ಹಿಡಿದವಳು. ಕಲ್ಪವೃಕ್ಷದ ಕೆಳಗೆ ಕುಳಿತವಳು; ಎಡಗಾಲಿನ ಕೆಳಗೆ ನಿಧಿಕುಂಭವಿದೆ. ಪಾಂಚರಾತ್ರಾಗಮವು ಈ ಧ್ಯಾನಶ್ಲೋಕಕ್ಕೆ ಆಕರ)

೩. ನೀಳಾದೇವಿ _

'ನೀಲೋತ್ಪಲದಳಶ್ಯಾಮಾ ನೀಲವಸ್ತ್ರವಿಭೂಷಿತಾ।
ಚತುರ್ಭುಜಾ ಸುಖಾಸೀನಾ ವರಾಭಯಕರಾನ್ವಿತಾ। (II)
ಇತರಾಭ್ಯಾಂ ತು ಹಸ್ತಾಭ್ಯಾಂ ಕುಮುದದ್ವಯ ಧಾರಿಣೀ।
ಸರ್ವಾಭರಣ ಸಂಯುಕ್ತಾ ನೀಳಾದೇವೀ ಸಮೀರಿತಾ। (II)

(ಪಾಂಚರಾತ್ರಾಗಮದಲ್ಲೇ ಇರುವ ಈ ಶ್ಲೋಕದ ಪ್ರಕಾರ ನೀಳಾದೇವಿಯು ನೈದಿಲೆಯಂತೆ ನೀಲಿಗಪ್ಪು ಬಣ್ಣದವಳು. ನಾಲ್ಕು ಕೈಗಳು; ಮುಂದಿನ ಕೈಗಳಲ್ಲಿ ಅಭಯವರದ ಮುದ್ರೆಗಳು, ಹಿಂದಿನ ಕೈಗಳಲ್ಲಿ ಕುಮುದಗಳೆರಡು. ಸುಖಾಸೀನೆ).

೫. ಶ್ರೀ ವೈಕುಂಠನಾರಾಯಣ-



ವೈಕುಂಠನಾರಾಯಣ


'ಸವ್ಯಂ ಪಾದಂ ಪ್ರಸಾರ್ಯ ಶ್ರಿತದುರಿತಹರಂ ದಕ್ಷಿಣಂ ಕುಂಚಯಿತ್ವಾ
ಜಾನುನ್ಯಾಧಾಯ ಸವ್ಯೇ(s)ತರಮಿತರಭುಜಂ ನಾಗಭೋ
ಗೇ ನಿಧಾಯ।।
ಪಶ್ಚಾದ್ಬಾಹುದ್ವಯೇನ ಪ್ರತಿಭಟಶಮನೇ ಧಾರಯನ್ ಶಂಖಚಕ್ರೇ
ದೇವೀ ಭೂಷಾದಿ ಜುಷ್ಟೋ ಜನಯತಿ ಜಗತಾಂ
ಶರ್ಮ ವೈಕುಂಠನಾಥಃ। (II)
ಮೇಘವರ್ಣಃ।।'

(ಅಷ್ಟಾಕ್ಷರೀಕಲ್ಪವು ಈ ಧ್ಯಾನಶ್ಲೋಕದ ಆಕರ. ವೈಕುಂಠನಾರಾಯಣನು ಶೇಷನ ಮೇಲೆ ಸುಖಾಸನದಲ್ಲಿ ಕುಳಿತಿದ್ದಾನೆ. ಎಡಗಾಲು ಕೆಳಗೆ ಚಾಚಿದೆ; ಬಲಗಾಲು ಮೇಲೆತ್ತಿ ಮಡಚಿ, ಪಾದವು ಹಾವಿನ ಮೈಸುರುಳಿಯ ಮೇಲಿದೆ. ಬಲಗೈ(ನಿಜಹಸ್ತ)ಯನ್ನು ಮಂಡಿಯ ಮೇಲೆ ಚಾಚಿದ್ದಾನೆ; ಎಡಗೈಯಿಂದ ಹಾವಿನ ಮೈಮೇಲೆ ಊರಿಕೊಂಡಿದ್ದಾನೆ. ಪರಹಸ್ತಗಳಲ್ಲಿ ಶಂಖಚಕ್ರಗಳನ್ನು ಹಿಡಿದಿದ್ದಾನೆ)

೬. ತಾರಕರಾಮ –

'ವೈದೇಹೀ ಸಹಿತಂ ಸುರದ್ರುಮತಳೇ ಹೈಮೇ
ಮಹಾಮಂಟಪೇ ।
ಮಧ್ಯೇ ಪುಷ್ಪಕಮಾಸನೇ ಮಣಿಮಯೇವೀರಾಸನೇ
ಸಂಸ್ಥಿತಂ।
ಅಗ್ರೇ ವಾಚಯತಿ ಪ್ರಭಂಜನಸುತೇ ತತ್ತ್ವಂ ಮುನಿಭ್ಯಃ
ಪರಂ
ವ್ಯಾಖ್ಯಾಂತಂ ಭರತಾದಿಭಃ ಪರಿವೃತಂ ರಾಮಂ ಭಜೇ
ಶ್ಯಾಮಳಂ। (II)
ಶ್ಯಾಮವರ್ಣಃ।।'

(ಕಲ್ಪವೃಕ್ಷದಡಿಯಲ್ಲಿ ಬಂಗಾರದಿಂದ ಮಾಡಿದ ಮಹಾಮಂಟಪ; ಅದರ ನಡುವೆ ಪುಷ್ಪಕವೆಂಬ ಆಸನ. ಅದರ ಮೇಲೆ ವೀರಾಸನದಲ್ಲಿ ಕುಳಿತ ಶ್ರೀರಾಮ; ಪಕ್ಕದಲ್ಲಿ ಸೀತೆ. ಎದುರಿಗೆ ಹನುಮಂತ; ಸುತ್ತಲೂ ಭರತನೇ ಮೊದಲಾದ ಪರಿವಾರ. ಮುನಿಗಳಿಗೆ ತತ್ತ್ವವನ್ನು ತಿಳಿಯಹೇಳುತ್ತಿರುವಂತೆ ರಾಮ. ರಾಮನ ಮೈಬಣ್ಣ ನೀಲಿಗಪ್ಪು. ಶ್ರೀರಾಮಕಲ್ಪದಿಂದ ಎತ್ತಿಕೊಂಡ ಶ್ಲೋಕ)



ತಾರಕರಾಮ

೭. ಶಿಂಶುಮಾರಮೂರ್ತಿ -

'ಶಿಂಶುಮಾರಃ ಸ್ಫುರತ್ತಾರಾನಿಭಕಾಂತಿಶ್ಚತುರ್ಭುಜಃ।
ಶಂಖಚಕ್ರವರಾಭೀತಿಲಸತ್ಪಾ(ತ್ಪಾ)ಣಿಸ್ತ್ರಯಾಮಯಃ। (II)
ಜ್ಯೋತಿಶ್ಚಕ್ರಾಧಾರ ಪುಚ್ಛಶ್ರಿತದೇವಗಣೋಜ್ವಲಃ
ಕಾಲರೂಪೀ ಸದಾ ಧ್ಯೇಯೋ ಭಕ್ತಾಭೀಷ್ಟಪ್ರದೋ ಹರಿಃ। (II)
ಶ್ವೇತವರ್ಣಃII'

(ಶಿಂಶುಮಾರ ಅಥವಾ ಕಾಲಪುರುಷನ ಕಲ್ಪನೆ ಭಾಗವತದಲ್ಲಿ (೫, ೨೩) ಬಂದಿದೆ. ಇಲ್ಲಿನ ಧ್ಯಾನಶ್ಲೋಕವನ್ನು ಮಯೂಖವೆಂಬ ಸ್ಮೃತಿಗ್ರಂಥದ ದಾನಖಂಡದಿಂದ ತೆಗೆದುಕೊಳ್ಳಲಾಗಿದೆ. ಇಲ್ಲಿನ ಶಿಂಶುಮಾರನು 'ತ್ರಯೀಮಯ' ಎಂದರೆ ವೇದಪುರುಷ; 'ಕಾಲರೂಪೀ'. ನಕ್ಷತ್ರಗಳೆಲ್ಲದರ ಕಾಂತಿಯುಳ್ಳವನು. ನಾಲ್ಕುಕೈಗಳು; ಶಂಖ, ಚಕ್ರ ಮತ್ತು ವರದ ಅಭಯ ಮುದ್ರೆಗಳು. ಸಾಮಾನ್ಯವಾಗಿ ಜಲಜಂತುವಿನಂತೆ ಶಿಂಶುಮಾರನನ್ನು ಕಲ್ಪಿಸಿಕೊಂಡು ಅದರ ದಕ್ಷಿಣಾವರ್ತಕುಂಡಲದಂಥ



ಶಿಂಶುಮಾರ ಮೂರ್ತಿ



ಶಿಂಶುಮಾರ ಮೂರ್ತಿ

ಬಾಲದಲ್ಲಿ ಇಡೀ ನಕ್ಷತ್ರಲೋಕವನ್ನು ಧರಿಸಿದಂತೆ ಕಾಣಿಸುವುದು ವಾಡಿಕೆ. ಇಡೀ ಜಗತ್ತೇ ವಿಷ್ಣುವಿನ ಈ ರೂಪದಲ್ಲಿ ಅಡಗಿದಂತೆ ಭಾಗವತಪುರಾಣವು ಬಣ್ಣಿಸುತ್ತದೆ.)

೮. ತ್ರಿವಿಕ್ರಮ -

'ತ್ರಿವಿಕ್ರಮೋ ರಕ್ತವರ್ಣಃ ಶಂಖಚಕ್ರಗದಾಬ್ಜಭೃತ್।
ಕಿರೀಟಹಾರ ಕೇಯೂರ ಕುಂಡಲೈಶ್ಚ ವಿರಾಜಿತೇ ।
ಸ್ಫುರತ್ಕಿರೀಟಾಂಗದ ಮೀನಕುಂಡಲ ಶ್ರೀವತ್ಸರತ್ನೋತ್ತಮ
ಮೇಖಲಾಂಬರೈಃ।
ಮಧುವ್ರತ ಸ್ರಗ್ವನಮಾಲಯಾ(s) ವೃತೋ ರರಾಜ ರಾಜನ್
ಭಗವಾನುರುಕ್ರಮೋ ॥
ಕ್ಷಿತಿಂ ಪದೈಕೇನ ಬಲೇರ್ವಿಚಕ್ರಮೇ ನಭಃಶರೀರೇಣ
ದಿಶಶ್ಚ ಬಾಹುಭಿಃ। ಪದಂ ದ್ವಿತೀಯಾತ್ಮಮತಸ್ತ್ರಿವಿಷ್ಟಪಂ।
ನವೈತ್ರಿ(ತ್ರಿ)ತೀಯ್ಯಸ್ಯ ತದೀಯ್ಯಮಣ್ವಪಿ।
ಉರುಕ್ರಮಸ್ಯಾಂಘ್ರಿರುಪರ್ಯಧೋ
ದಿವೋ ಮಹರ್ಜನಾಭ್ಯಾಂ ತಪಸಃ ಪರಂ ಗತಃ॥
ರಕ್ತವರ್ಣಃ॥'

(ಋಗ್ವೇದದಲ್ಲೇ 'ತ್ರೀಣಿ ಪದಾ ವಿಚಕ್ರಮೇ' ಎಂಬ ಪ್ರಸ್ತಾಪವಿದ್ದು ತ್ರಿವಿಕ್ರಮನ ಕಲ್ಪನೆಯನ್ನಳವಡಿಸಿಕೊಂಡಿರುವುದು ಕಾಣುತ್ತದೆ. ಪುರಾಣಗಳಲ್ಲಿ ಪ್ರಹ್ಲಾದನ ಮೊಮ್ಮಗನಾದ ಬಲಿಚಕ್ರವರ್ತಿಯ ಪ್ರತಾಪವನ್ನಡಗಿಸಲು ವಿಷ್ಣುವು ವಾಮನಾವತಾರವನ್ನೆತ್ತಿ ತ್ರಿವಿಕ್ರಮನಾದ ಕಥೆ ಬರುತ್ತದೆ. ಶಿಲ್ಪಿಗಳಿಗೂ ತ್ರಿವಿಕ್ರಮನ ರೂಪಚಿತ್ರಣವೆಂದರೆ ಪ್ರಿಯವಾದುದೇ. ಬಲಿಯಿಂದ ದಾನವಾಗಿ ಪಡೆದುಕೊಂಡ ಮೂರುಹೆಜ್ಜೆಗಳಲ್ಲಿ ಒಂದರಿಂದ ಭೂಮಿಯೆಲ್ಲವನ್ನೂ ಅಳೆದು, ಎರಡನೆಯದರಿಂದ ಅಂತರಿಕ್ಷವನ್ನಾವರಿಸಿಕೊಂಡು, ಮೂರನೆಯ



ತ್ರಿವಿಕ್ರಮ

ಹೆಜ್ಜೆಯನ್ನಿಡಲು ಎಡೆಯೆ ಇಲ್ಲದಿರುವುದು ಧ್ಯಾನಶ್ಲೋಕದಲ್ಲಿ ಬಂದಿದೆ. ಅದನ್ನು ಬಲಿಯ ತಲೆಯ ಮೇಲಿಟ್ಟು ಅವನನ್ನು ಪಾತಾಳಕ್ಕೆ ಕಳುಹಿಸಿದುದು ಕಥೆಯ ವಿವರ. ಪಾಂಚರಾತ್ರ ವಿಭಾಗದಲ್ಲಿ, ಮಂತ್ರಸಾರಭಾಗವತ ಎಂಬ ಗ್ರಂಥದಿಂದ ಎತ್ತಿಕೊಂಡಿರುವ ಒಕ್ಕಣೆಯೆಂದು ಉಲ್ಲೇಖವಿದೆ. ಮೂರ್ತಿಲಕ್ಷಣ ಶಂಖ, ಚಕ್ರ, ಗದೆ, ಕಮಲಗಳನ್ನು ಹಿಡಿದ ನಾಲ್ಕು ಕೈಗಳದ್ದು; ಕೆಂಪು ಮೈಬಣ್ಣ.)


೯. ಹಯಗ್ರೀವ -

'ವಂದೇ ತುರಂಗವದನಂ ಶಶಿಬಿಂಬ ಸಂಸ್ಥಂ।
ಚಂದ್ರವದಾತಮಮೃತಾತ್ಮಕರೈಸ್ಸಮಂತಾತ್।
ಅಂಡಾಂತರಂ ಬಹಿರಪಿ ಪ್ರತಿಭಾಸಯಂತಂ
ಶಂಖಾಕ್ಷ ಪುಸ್ತಕಸುಬೋಧಯುತಾಬ್ಜಬಾಹುಂ। (॥)
ಶ್ವೇತವರ್ಣಃ॥'

(ವೈಷ್ಣವಸಂಪ್ರದಾಯದಲ್ಲಿ ಹಯಗ್ರೀವನು ಜ್ಞಾನಾಧಿದೇವತೆ. ಚಂದ್ರಮಂಡಲದ ನಡುವೆ ಕುಳಿತು ಬ್ರಹ್ಮಾಂಡವನ್ನೆಲ್ಲ ಒಳಗೆ ಹೊರಗೆ ಬೆಳಗುವ ಮೂರ್ತಿ; ಕುದುರೆಯ ಮುಖ; ಪುರುಷ ದೇಹ. ನಾಲ್ಕು ಕೈಗಳು; ಶಂಖ, ಜಪಮಾಲೆ, ಪುಸ್ತಕ, ಚಿನ್ಮುದ್ರೆಗಳನ್ನು ಹಿಡಿದವನು. ಬಿಳಿಯ ಮೈ ಬಣ್ಣ. ಈ ಧ್ಯಾನಶ್ಲೋಕ ಪಾಂಚರಾತ್ರಾಗಮದಲ್ಲಿದೆ. ವೇದಾಂತದೇಶಿಕರ ಹಯಗ್ರೀವ ಸ್ತುತಿಯಿಂದ ಇನ್ನೊಂದು ಧ್ಯಾನಶ್ಲೋಕವನ್ನೂ ಕೊಡಲಾಗಿದೆ-

'ವ್ಯಾಖ್ಯಾಮುದ್ರಾಂ ಕರಸಿರಜೈ (ಕರಸರಸಿಜೈಃ) ಪುಸ್ತಕಂ ಶಂಖಿಚಕ್ರೇ
ಬಿಭ್ರದ್ಭಿಂನ(ನ್ನ) ಸ್ಫಟಿಕರುಚಿರೇ ಪುಂಡರೀಕೇ ನಿಷಂಣಃ(ಣ್ಣಃ) ।
ಆಮ್ಲಾನ ಶ್ರೀರಮೃತವಿಶದೈರಂಶುಭಃ ಪ್ಲಾವಯನ್ಮಾಮಾವಿರ್ಭೂಯಾ -
ದನಘಮಹಿಮಾ ಮಾನಸೇ ವಾಗಧೀಶಃ। (II)
ಶ್ವೇತವರ್ಣಃII'

(ಈ ವರ್ಣನೆಯ ಪ್ರಕಾರ ಕೈಗಳಲ್ಲಿ ಶಂಖ, ಚಕ್ರ, ವ್ಯಾಖ್ಯಾನಮುದ್ರೆ, ಪುಸ್ತಕಗಳನ್ನು ಹಿಡಿದಿದ್ದಾನೆ. ಸ್ಫಟಿಕದಂತಿರುವ ಕಮಲದ ಮೇಲೆ ಕುಳಿತಿದ್ದಾನೆ.)



ಹಯಗ್ರೀವ



ಹಯಗ್ರೀವ

೧೦. ಭೂವರಾಹಮೂರ್ತಿ _

'ಶ್ಯಾಮಃ ಸುದರ್ಶನವ(ದ)ರಾಭಯಸದ್ಪರೇತೋ ಭೂಮ್ಯಾಯುತೋ(s)
ಖಿಲ
ನಿಜೋಕ್ತಪರಿಗ್ರಹೈಶ್ಚಾಧ್ಯೇಯೋ ನಿಜೈಶ್ಚ ತನುಭಃ ಸಕಲೈ-
ಸ್ಸಮೇತಃ। ಕೋಲೋ ಹರಿಸ್ಸಕಲವಾಂಛಿತ ಸಿದ್ಧಯೇ ನಃ॥
ಶ್ಯಾಮವರ್ಣಃ॥'

(ಹಿರಣ್ಯಾಕ್ಷನಿಂದ ಭೂದೇವಿಯು ಸಮುದ್ರದಲ್ಲಿ ಮುಳುಗಿದ್ದಾಗ, ಅಸುರನನ್ನು ಕೊಂದು ಭೂಮಿಯನ್ನು ಮೇಲೆತ್ತಲು ವಿಷ್ಣು ವರಾಹಾವತಾರ



ಭೂವರಾಹ

ಮಾಡಿದನಷ್ಟೆ. ಆ ರೂಪ ಇದು. ಹಂದಿಯ ಮೋರೆ, ಪುರುಷದೇಹ. ನಾಲ್ಕುಕೈಗಳು;ಶಂಖ, ಚಕ್ರ, ಅಭಯಮುದ್ರೆ, ಭೂಮಿಯನ್ನು ಹಿಡಿದೆತ್ತುವ ಇನ್ನೊಂದು ಕೈ)


೧೧. ಧರಣೀವರಾಹಮೂರ್ತಿ-

'ವರಾಹರೂಪಃ ಕಾರ್ಯಸ್ತು ಶೇಷೋಪರಿ ಗತಃ ಪ್ರಭುಃ॥ (I)
ಶೇಷಶ್ಚತುರ್ಭುಜಃ ಕಾರ್ಯಶ್ಚಾರುರತ್ನ ಫಣಾನ್ವಿತಃ॥
ಕರ್ತವ್ಯೌ ಸೀರಮುಸಲೌ ಕರಯೋಸ್ತಸ್ಯ ಯಾದವ॥ (I)
ಸರ್ಪರೂಪಶ್ಚ ಕರ್ತವ್ಯಸ್ತಥೈವ ರಚಿತಾಂಜಲಿಃ।
ಆಲೀಢಸ್ಥಾನಸಂಸ್ಥಾನಸ್ತತ್ಪೃಷ್ಠೇ(ಷ್ಠೇ) ಭಗವಾನ್ ಭವೇತ್। (II)
ವಾಮಾ ರತ್ನಿಗತಾ ತಸ್ಯ ಯೋಷಿದ್ರೂಪಾ ವಸುಂಧರಾ।
ನಮಸ್ಕಾರಪರಾ ತಸ್ಯ ಕರ್ತವ್ಯಾ ದ್ವಿಭುಜಾ ಶುಭಾ। (II)
ಯಸ್ಮಿನ್ ಭುಜೇ ಧರಾದೇವೀ ತತ್ರ ಶಂಖಃ ಕರೇ ಭವೇತ್।
ಅನ್ಯೇ ತಸ್ಯ ಕರಾಃ ಕಾರ್ಯಾಃ ಪದ್ಮಚಕ್ರಗದಾಧರಾ॥
ಪದ್ಮಾಸನಸ್ಥಾಂ ಕುರ್ವೀತ ಶ್ರಿಯಂ ತ್ರೈಲೋಕ್ಯಮಾತರಂ।
ಗೌರವರ್ಣಾಂ ಸುರೂಪಾಂ ಚ ಸರ್ವಾಲಂಕಾರಭೂಷಿತಾಂ।
ರೌಕ್ಮಪದ್ಮಕರವ್ಯಗ್ರಾಂ ವರದಾಂ ದಕ್ಷಿಣೇನ ತು। (II)
ವರಾಹಃ ಶ್ಯಾಮವರ್ಣಃ । ಭೂಮೀ (ಮಿಃ) ಶುಕ್ಲವರ್ಣಾ॥
ಶ್ರೀಃ ಸುವರ್ಣವರ್ಣಾ (I) ಶೇಷಃ ಶುಭ್ರವರ್ಣಃ ॥'

(ಹೇಮಾದ್ರಿಯ ದಾನಕಾಂಡದಿಂದ ಆಯ್ದುಕೊಂಡ ಈ ಶ್ಲೋಕಗಳು ಸಾಮಾನ್ಯವಾಗಿ ಎಲ್ಲೆಡೆ ಕಾಣುವ ವರಾಹಶಿಲ್ಪವನ್ನು ಕುರಿತವು. ಇಂಥ ಶಿಲ್ಪಫಲಕದಲ್ಲಿ ವರಾಹಮೂರ್ತಿಯು ಶೇಷನ ಮೇಲೆ ಕಾಲಿರಿಸಿಕೊಂಡಂತೆ, ಭುಜವೊಂದರ ಮೇಲೆ ಭೂದೇವಿಯನ್ನು ಕುಳ್ಳಿರಿಸಿಕೊಂಡಂತೆ, ಪಕ್ಕದಲ್ಲಿ ಲಕ್ಷ್ಮಿಯು ಕುಳಿತಂತೆ ಚಿತ್ರಣವಿರುತ್ತದೆ. ಶೇಷನು ಸರ್ಪಾಕಾರದಲ್ಲಿದ್ದರೂ ನಾಲ್ಕು ಕೈಗಳ ಪುರುಷರೂಪವು ಸೇರಿಕೊಳ್ಳುತ್ತದೆ; ನೇಗಿಲು, ಒನಕೆಗಳು ಪರಹಸ್ತಗಳಲ್ಲಿ; ನಿಜಹಸ್ತಗಳು ಬದ್ಧಾಂಜಲಿ ಮುದ್ರೆಯಲ್ಲಿ. ಭೂಮಿದೇವಿಯು ದ್ವಿಭುಜೆ; ಕೈಮುಗಿದಿರುವ ಭಂಗಿ. ಯಾವ ನಿಜ ಭುಜದ ಮೇಲೆ ಭೂದೇವಿ ಕುಳಿತಿರುವಳೋ ಅದೇ ಭಾಗದಲ್ಲಿ ವರಾಹನ ಪರಹಸ್ತವು ಶಂಖವನ್ನು ಹಿಡಿದಿದೆ. ವರಾಹನ ಉಳಿದ ಕೈಗಳಲ್ಲಿ ಚಕ್ರ, ಗದೆ ಮತ್ತು ಕಮಲಗಳು. ಲಕ್ಷ್ಮಿಯು ಪದ್ಮಾಸನದಲ್ಲಿದ್ದಾಳೆ; ಎರಡು ಕೈಗಳು, ಒಂದರಲ್ಲಿ(ಎಡ) ಕಮಲ, ಇನ್ನೊಂದರಲ್ಲಿ ವರದಮುದ್ರೆ. ವರಾಹನ ಮೈಬಣ್ಣ ನೀಲಿಗಪ್ಪು; ಭೂದೇವಿಯದು ಬಿಳಿ; ಲಕ್ಷ್ಮಿಯದು ಹಳದಿ; ಶೇಷನದು ಬಿಳಿ).

೧೨. ಶ್ರೀಕರಮೂರ್ತಿ -

'ಆದಿತ್ಯಚಂದ್ರಾವಪಿ ಶಂಖಚಕ್ರೇ ಶಂಖಪ್ರಸೂನಾಖ್ಯಾನಿಧೀ
ದಧಾನಃ।
ಚಿಂತ್ಯಃ ಕರಾಭ್ಯಾಂ ವಸುತರ್ಪಯಂತ್ಸ(ನ್ಸ)



ಧರಣೀವರಾಹ



ಧರಣೀವರಾಹ

ಸ್ವಾಂಕಸ್ಥಲಕ್ಷ್ಮ್ಯಾರ್ಗರುಡಾಂಸಸಂಸ್ಥಃ।
ಕಾಂಚನವರ್ಣಃ।। '

(ಶ್ರೀಕರಮೂರ್ತಿಯ ಮೂರ್ತಿಲಕ್ಷಣದಲ್ಲಿ ವಿಷ್ಣುವು ಬಂಗಾರದ ಮೈ ಬಣ್ಣದವನು, ನಾಲ್ಕುಕೈಗಳವನು; ಮೇಲಿನ ಕೈಗಳಲ್ಲಿ ಶಂಖಚಕ್ರಗಳು, ಕೆಳಗಿನ ಕೈಗಳಲ್ಲಿ ನಿಧಿಕುಂಭಗಳು. ಅವನ ತೊಡೆಯ ಮೇಲೆ ಲಕ್ಷ್ಮಿ



ಶ್ರೀಕರಮೂರ್ತಿ

ಕುಳಿತಿದ್ದಾಳೆ. ಗರುಡನ ಹೆಗಲೇರಿ ಸಾಗುವನು. ಪಾಂಚರಾತ್ರಾಗಮ ಈ ಮೂರ್ತಿಲಕ್ಷಣಕ್ಕೆ ಆಕರ).

೧೩. ಹಂಸಮೂರ್ತಿ -

'ಧ್ಯಾಯೇದ್ರವೀಂದುಕರಮಿಂದುಸಹಸ್ರಲಕ್ಷಕಾಂತಿಂ
ಪ್ರಿಯಾಸಹಿತಮಾಸ್ಥಿತಮಿಂದು ಬಿಂಬೇ ।
ಶಂಖಾರಿದೋರ್ಭ್ಯ(ರ್ವ್ಯ)ಯಮುದರ್ಕಮಹೇಂದು
ಬಿಂಬಾತ್ಸಂಸಿಚ್ಯಮಾನಮಮೃತೇನ ರಮಾಧಿನಾಥಂ।।
ಶುಕ್ಲವರ್ಣಃ।। '

(ಪಾಂಚರಾತ್ರ ಸಂಹಿತೆಯಲ್ಲಿ ಬರುವ ಈ ಧ್ಯಾನಶ್ಲೋಕದ ಪ್ರಕಾರ ವಿಷ್ಣುವಿನ ಹಂಸಮೂರ್ತಿ ರೂಪವು ಚಂದ್ರಬಿಂಬದೊಳಗಿದ್ದು ಚಂದ್ರನ ಅಮೃತಕಿರಣಗಳಿಂದ ಸೇಚನಗೊಳ್ಳುವಂತೆ ಇರಬೇಕು; ಲಕ್ಷ್ಮಿಯೊಡಗೂಡಿರುವ ಈ ದೇವತೆಯ ಕೈಗಳಲ್ಲಿ ಶಂಖಚಕ್ರಗಳಿರಬೇಕು.)



ಹಂಸಮೂರ್ತಿ

೧೪. ದಧಿವಾಮನಮೂರ್ತಿ -

'ಧ್ಯಾಯೇ(ತ್ಸು)ಶುಕ್ಲಮರವಿಂದದಳಾಯತಾಕ್ಷಂ।
ಸೌವರ್ಣಪಾತ್ರ ದಧಿಭೋಜ್ಯಮಥಾಮೃತಂ ಚ।
ದೋರ್ಭ್ಯಾಂ ದಧಾನಮಖಿಲೈಶ್ಚ ಸುರೈಸ್ಸಮೇತಂ(।)
ಶೀತಾಂಶುಮಂಡಲಗತಂ ರಮಯಾ ಸಮೇತಂ।।
ಶುಕ್ಲವರ್ಣಃ।।'

(ದಧಿವಾಮನಮೂರ್ತಿಯು ಹೆಸರಿಗೆ ತಕ್ಕಂತೆ ಬಿಳಿಬಣ್ಣ(ಹಾಲು, ಮೊಸರಿನ ಬಣ್ಣ); ಲಕ್ಷ್ಮಿಯಿಂದೊಡಗೂಡಿ ಚಂದ್ರಮಂಡಲದಲ್ಲಿ



ದಧಿವಾಮನಮೂರ್ತಿ

ಕುಳಿತಿದ್ದಾನೆ. ಎರಡು ಕೈಗಳು, ಒಂದರಲ್ಲಿ ಮೊಸರು ಅನ್ನ ತುಂಬಿದ ಬಂಗಾರದ ಪಾತ್ರೆ, ಇನ್ನೊಂದರಲ್ಲಿ ಅಮೃತಕುಂಭ.)

೧೫. ಅಶ್ವತ್ಥನಾರಾಯಣ -

'ಶ್ವೇತವರ್ಣಂ ಸಲಕ್ಷ್ಮೀಕಂ ಭುಜಾಷ್ಟಕವಿಭೂಷಿತಂ।
ಶಂಖಚಕ್ರಧರಂ ದೇವಂ ಪೀತವಾಸಸಮಚ್ಚು(ಚ್ಯು)ತಂ।
ಅಭಯಂ ವರದಂ ಶಾಂತಂ ಖಡ್ಗಖೇಟಕಧಾರಿಣಂ।
ಧನುರ್ಬಾಣ ಸಮಾಯುಕ್ತಂ ಚಿಂತಯೇತ್ಪುರುಷೋತ್ತಮಂ॥
ಶ್ವೇತವರ್ಣಃ॥ '

(ಬ್ರಹ್ಮಾಂಡಪುರಾಣದ ಅಶ್ವತ್ಥಕಲ್ಪ ಈ ಧ್ಯಾನಶ್ಲೋಕದ ಆಕರ. ಇದರ ಪ್ರಕಾರ ಅಶ್ವತ್ಥನಾರಾಯಣಮೂರ್ತಿಯು ಬಿಳಿಬಣ್ಣದವನು; ಹಳದಿ ಬಣ್ಣದ ಬಟ್ಟೆಯುಟ್ಟವನು. ಎಂಟು ಕೈಗಳು; ಶಂಖ, ಚಕ್ರ, ಕತ್ತಿ, ಗುರಾಣಿ, ಬಿಲ್ಲು, ಬಾಣ, ಅಭಯ ವರದ ಮುದ್ರೆಗಳು)


೧೬. ಲಕ್ಷ್ಮೀನೃಸಿಂಹ -

'ಶರಚ್ಚಂದ್ರನಿಭಂ ದೇವಂ ಶಂಖಚಕ್ರವರಾಭಯಾನ್
ಬಿಭ್ರಾಣಂ ಪುಂಡರೀಕಾಕ್ಷಂ ಲಕ್ಷ್ಮ್ಯಾಲಂಕೃತವಿಗ್ರಹಂ।
ಸಿಂಹವಕ್ತ್ರಂ ಮಹಾಕಾಯಂ ನೃಸಿಂಹಂ ಹೃದಿ ಭಾವಯೇ । (॥)
ಶ್ವೇತವರ್ಣಃ॥ '

(ಈ ಧ್ಯಾನಶ್ಲೋಕದ ಮೂಲವನ್ನು 'ತನ್ಮಂತ್ರಧ್ಯಾನೆ' ಎಂದು ಕಾಣಿಸಲಾಗಿದೆ. ಇದು ಯಾವುದೆಂದು ತಿಳಿಯದು. ಸಿಂಹದ ಮೊಗ, ಪುರುಷಶರೀರವುಳ್ಳ ಈ ರೂಪವು ಲಕ್ಷ್ಮಿಯಿಂದ ಕೂಡಿದೆ. ಶರತ್ಕಾಲದ ಚಂದ್ರನಂತೆ ಶುಭ್ರವಾದ ಮೈಬಣ್ಣ. ಶಂಖ, ಚಕ್ರ, ವರದ ಅಭಯ ಮುದ್ರೆಗಳನ್ನು ಹಿಡಿದ ನಾಲ್ಕು ಕೈಗಳು)

೧೭. ಕೇಶವಾದಿ ಚತುರ್ವಿಂಶತಿ ಮೂರ್ತಿಗಳು -

ವಿಷ್ಣುವಿನ ಹತ್ತು ಅವತಾರಗಳಂತೆಯೇ ಇಪ್ಪತ್ತುನಾಲ್ಕು ರೂಪಗಳು ಪ್ರಸಿದ್ಧವಾಗಿವೆ. ಈ ರೂಪಗಳ ಹೆಸರುಗಳನ್ನು ಜಪಿಸುವ ವಾಡಿಕೆಯಿದೆ; ಕೇಶವ, ನಾರಾಯಣ, ಮಾಧವ, ಗೋವಿಂದ ಇತ್ಯಾದಿ. ಈ ರೂಪಗಳಿಗೆ ಮುಖ್ಯವಾದ ಭೇದವಿರುವುದು ನಾಲ್ಕು ಆಯುಧಗಳನ್ನು (ಶಂಖ, ಚಕ್ರ, ಗದೆ, ಪದ್ಮ) ಹಿಡಿದಿರುವ ಪ್ರಾದಕ್ಷಿಣ್ಯ ಕ್ರಮದಲ್ಲಿ, ಮತ್ತು ಬಣ್ಣದಲ್ಲಿ. ಪಾಂಚರಾತ್ರಾಗಮದ ಕ್ರಿಯಾಪಾದದಿಂದ ಈ ವಿವರಗಳನ್ನು ಇಲ್ಲಿ ಎತ್ತಿಕೊಳ್ಳಲಾಗಿದೆ. ವಿವರಗಳು ಸ್ಪಷ್ಟವಾಗಿರುವುದರಿಂದ ವಿವರಣೆಯಿಲ್ಲದೆ ಮೂಲಶ್ಲೋಕಗಳನ್ನು ಮಾತ್ರ ಕೊಟ್ಟಿದ್ದೇನೆ. ಕಡೆಯಲ್ಲಿ ಪಟ್ಟಿಕೆಯೊಂದರಲ್ಲಿ ವಿವರಗಳು ಅಡಕವಾಗಿವೆ.



ಲಕ್ಷ್ಮೀನೃಸಿಂಹ



ಲಕ್ಷ್ಮೀನೃಸಿಂಹ



ಕೇಶವ

೧. ಕೇಶವ -

'ಕೇಶವಸ್ತು(ಸ್ಸು)ವರ್ಣಾಭಃ ಶಂಖಚಕ್ರಗದಾಬ್ಜಕಃ।
ಶುಕ್ಲಾಂಬರಧರ ಸ್ಸೌಮ್ಯೋ ಮುಕ್ತಾಭರಣಭೂಷಿತಃ। (II)
ದಕ್ಷಿಣೋರ್ಧ್ವಕರೇ ಶಂಖಃವಾಮೋರ್ಧ್ವಕರೇ ಚಕ್ರಂ।
ವಾಮಾಧಃಕರೇಗದಾದಕ್ಷಾ(S)ಧಃ ಕರೇ ಪದ್ಮಂ।
ಸ್ವರ್ಣಾಭಃಶುಕ್ಲಾಂಬರಃಮುಕ್ತಾಭರಣಃ ಕಾರ್ಯಃ
ಸ್ವರ್ಣವರ್ಣಃII '



ನಾರಾಯಣ

೨. ನಾರಾಯಣ -


'ನಾರಾಯಣೋ ಘನಶ್ಯಾಮಃ ಪದ್ಮಶಂಖಿಗದಾಬ್ಜಭೃತ್।
ಪೀತವಾಸಾ ಮಣಿಮಯೈ ರ್ಭೂಷಣೈರುತ್ತಮೈವ್ಯ(ರ್ವ್ಯ)ತಃ।
ದಕ್ಷಿಣಾಧಃ ಕರೇ ಶಂಖಃ ದಕ್ಷೋರ್ಧಕರೇಪದ್ಮಂ।
ವಾಮೋಚ್ಚಕರೇ ಗದಾ। ವಾಮಾಧಃಕರೇ ಚಕ್ರಂ।
ಮೇಘಶ್ಯಾಮವರ್ಣಃII೨II '



ಮಾಧವ

೩. ಮಾಧವ -

'माधवस्तूत्पलप्रख्यः शंखचक्रगदाब्जभृत्।
चित्रमाल्याम्बरधरः पुण्डरीकनिभेक्षणः। (॥)
वामोर्ध्वकरे शंखः।वामाधःकरे पद्मं
दक्षोर्ध्वकरे चक्रं दक्षाधःकरे गदा। (॥)
कृष्णवर्णः॥३॥ '



ಗೋವಿಂದ

೪. ಗೋವಿಂದ -

'गोविन्दश्शशिवर्णः स्यात्पद्मशंखगदारिभृत्।
रक्तारविन्दनयनस्तप्तकाञ्चनभूषणः॥
वामाधःकरे शंखः।दक्षाधःकरे चक्रं।
दक्षोर्ध्वकरे गदा वामोच्चकरे पद्मं। (॥)
श्वेतवर्णः॥४॥ '

೫. ವಿಷ್ಣು -

'ಧೌತವರ್ಣೋ ಭವೇದ್ವಿಷ್ಣುಶ್ಚಕ್ರಶಂಖಗದಾಬ್ಜಭೃತ್।
ಹೇಮಾಂಬರಧರಃ ಸ್ರಗ್ವೀ ಕೇಯೂರಾಂಗದಭೂಷಿತಃ । (॥)
ವಾಮೋರ್ಧ್ವಕರೇ ಶಂಖಃ।ದಕ್ಷಾ(ವಾಮಾ)ಧಃಕರೇ ಚಕ್ರಂ।
ದಕ್ಷಾಧಃಕರೇ ಗದಾ। ದಕ್ಷೋರ್ಧ್ವಕರೇ ಪದ್ಮಂ । (॥)
ಶ್ವೇತವರ್ಣಃ॥೫॥




ವಿಷ್ಣು



ಮಧುಸೂದನ

೬. ಮಧುಸೂದನ -

'ಅರವಿಂದನಿಭಃ ಶ್ರೀಮಾನ್ಮಧುಜಿತ್ಕಮಲಾಶ್ರಯಃ।
ಶಂಖಂ ಚಕ್ರಂ ಗದಾಂ ಪದ್ಮಂ ದೋರ್ಭಿರ್ನಿತ್ಯಂ
ಬಿಭರ್ತ್ಯಸೌ। (॥)
ದಕ್ಷೋರ್ಧ್ವಕರೇ ಶಂಖಃ ವಾಮೋಚ್ಚಕರೇ ಪದ್ಮಂ।
ವಾಮಾಧಃಕರೇ ಗದಾ।ದಕ್ಷಾಧಃಕರೇ ಚಕ್ರಂ। (॥)
ರಕ್ತವರ್ಣಃ॥೬॥ '



ತ್ರಿವಿಕ್ರಮ

೭. ತ್ರಿವಿಕ್ರಮ -

'ತ್ರಿವಿಕ್ರಮೋ ರಕ್ತವರ್ಣಃ ಶಂಖಚಕ್ರಗದಾಬ್ಜಭೃತ್।
ಕಿರೀಟಹಾರ ಕೇಯೂರ ಕುಂಡಲೈಶ್ಚವಿರಾಜಿತಃ। (II)
ವಾಮಾಧಃಕರೇ ಶಂಖಃ।ದಕ್ಷಾಧಃಕರೇ ಪದ್ಮಂ
ದಕ್ಷೋರ್ಧ್ವಕರೇ ಗದಾ।ವಾಮೋರ್ಧ್ವಕರೇ ಚಕ್ರಂ।
ರಕ್ತವರ್ಣಃ॥೭॥ '




ವಾಮನ

೮. ವಾಮನ –

'ವಾಮನಃ ಕುಂದವರ್ಣಃ ಸ್ಯಾತ್ಪುಂಡರೀಕಾಯತೇಕ್ಷಣಃ।
ದೋರ್ಭಿಶ್ಶಂಖಂ ಗದಾಂ ಚಕ್ರಂ ಪದ್ಮಂ ಚೈವ ಬಿಭರ್ತ್ಯಸೌ। (II)
ದಕ್ಷಾಧಃಕರೇ ಶಂಖಃ ದಕ್ಷೋಚ್ಚಕರೇ ಚಕ್ರಂ
ವಾಮೋಚ್ಚಕರೇ ಗದಾ।ವಾಮಾಧಃಕರೇ ಪದ್ಮಂ। (II)
ಶ್ವೇತವರ್ಣಃ॥೮॥ '

೯. ಶ್ರೀಧರ -

'ಶ್ರೀಧರಃ ಪುಂಡರೀಕಾಭಶ್ಚಕ್ರಶಂಖಗದಾಬ್ಜಭೃತ್।
ರಕ್ತಾರವಿಂದನಯನೋ ಮುಕ್ತಾದಾಮವಿಭೂಷಿತಃ। (II)
ವಾಮಾಧಃಕರೇ ಶಂಖಃ ದಕ್ಷಾಧಃಕರೇ ಪದ್ಮಂ।
ದಕ್ಷೋರ್ಧ್ವಕರೇ ಚಕ್ರಂ ವಾಮೋಚ್ಚಕರೇ ಗದಾ। (II)
ಶ್ವೇತವರ್ಣಃII೯II '




ಶ್ರೀಧರ



ಹೃಷೀಕೇಶ

೧೦. ಹೃಷೀಕೇಶ -


'ವಿದ್ಯುದ್ವರ್ಣೋ ಹೃಷೀಕೇಶಶ್ಚಕ್ರಶಂಖಗದಾಬ್ಜಭೃತ್।
ರಕ್ತಮಾಲ್ಯಾಂಬರಧರಃ ಪುಂಡರೀಕಾವತಂಸಕಃ। (II)
ವಾಮಾಧಃಕರೇ ಶಂಖಃIದಕ್ಷಾಧಃಕರೇ ಗದಾ।
ದಕ್ಷೋರ್ಧ್ವಕರೇ ಚಕ್ರಂ ವಾಮೋರ್ಧ್ವಕರೇ ಪದ್ಮಂ। (II)
ಕನಕವರ್ಣಃII೧೦II '



ಪದ್ಮನಾಭ

೧೧. ಪದ್ಮನಾಭ -


'ಇಂದ್ರನೀಲನಿಭಶ್ಚಕ್ರ ಶಂಖಪದ್ಮಗದಾಧರಃ।
ಪದ್ಮನಾಭಃ ಪೀತವಾಸಾಶ್ಚಿತ್ರ ಮಾಲ್ಯಾನುಲೇಪನಃ। (II)
ದಕ್ಷಾಧಃಕರೇ ಚಕ್ರಂ ವಾಮಾಧಃಕರೇ ಗದಾ। (II)
ನೀಲವರ್ಣಃ॥೧೧॥ '



ದಾಮೋದರ

೧೨. ದಾಮೋದರ -


'ದಾಮೋದರಶ್ಯಾದ್ವಲಾಭೋ ಗದಾಪದ್ಮಾರಿಶಂಖಭೃತ್।
ಪೀತವಾಸಾ ವಿಶಾಲಾಕ್ಷೋ ನಾನಾರತ್ನವಿಭೂಷಿತಃ। (II)
ದಕ್ಷೋರ್ಧ್ವಕರೇ ಶಂಖಃವಾಮೋರ್ಧ್ವಕರೇ ಗದಾ॥
ವಾಮಾಧಃಕರೇ ಚಕ್ರಂದಕ್ಷಾಧಃಕರೇ ಪದ್ಮಂ। (II)
ದೂರ್ವಾದಳಶ್ಯಾಮವರ್ಣಃ॥೧೨॥ '



ಸಂಕರ್ಷಣ

೧೩. ಸಂಕರ್ಷಣ -


'ಸಂಕರ್ಷಣಃ ಸಿತಾಭಃ ಸ್ಯಾಚ್ಛಂಖಪದ್ಮಾರಿಸದ್ಗದಃ।
ದಕ್ಷೋರ್ಧ್ವಕರೇ ಶಂಖಃ।ವಾಮೋಚ್ಚಕರೇ ಪದ್ಮಂ(।)
ವಾಮಾಧಃಕರೇ ಚಕ್ರಂ।ದಕ್ಷಾಧಃಕರೇ ಗದಾ। (॥)
ಶ್ವೇತವರ್ಣಃ॥೧೩॥ '



ವಾಸುದೇವ

೧೪. ವಾಸುದೇವ -


'ವಾಸುದೇವಃ ಶಂಖಚಕ್ರಗದಾಪದ್ಮಧರಸ್ಸಿತಃ।
ದಕ್ಷೋರ್ಧ್ವಕರೇ ಶಂಖಃ।ವಾಮೋರ್ಧ್ವಕರೇ ಚಕ್ರಂ।
ವಾಮಾಧಃಕರೇ ಪದ್ಮಂ।ದಕ್ಷಾಧಃಕರೇ ಗದಾ। (॥)
ಶ್ವೇತವರ್ಣಃ॥೧೪॥ '



ಪ್ರದ್ಯುಮ್ನ

೧೫. ಪ್ರದ್ಯುಮ್ನ -


'ಪ್ರದ್ಯುಮ್ನಃ ಕನಕಾಭಃ ಸ್ಯಾಚ್ಛಂಖಾಬ್ಜಾರಿಗದಾಧರಃ।
ದಕ್ಷೋರ್ಧ್ವಕರೇ ಶಂಖಃ।ವಾಮೋರ್ಧ್ವಕರೇ ಗದಾ।
ವಾಮಾಧಃಕರೇ ಪದ್ಮಂ।ದಕ್ಷಾಧಃಕರೇ ಚಕ್ರಂ। (II)
ಕನಕವರ್ಣಃII೧೫II '



ಅನಿರುದ್ಧ

೧೬. ಅನಿರುದ್ಧ -


'ಅನಿರುದ್ಧೋ ನೀಲವರ್ಣಃ।ಶಂಖಪದ್ಮಗದಾರಿಭೃತ್।
ವಾಮೋರ್ಧ್ವಕರೇ ಶಂಖಃ।ವಾಮಾಧಃಕರೇ ಪದ್ಮಂ
ದಕ್ಷಾಧಃಕರೇ ಚಕ್ರಂ ದಕ್ಷೋರ್ಧ್ವಕರೇ ಗದಾ(II)
ನೀಲವರ್ಣಃII೧೬II '



ಪುರುಷೋತ್ತಮ

೧೭. ಪುರುಷೋತ್ತಮ -


'ಪದ್ಮಶಂಖಿಗದಾಚಕ್ರೋ ಧವಳಃ ಪುರುಷೋತ್ತಮಃ।
ವಾಮೋರ್ಧ್ವಕರೇ ಶಂಖಃ ವಾಮಾಧಃಕರೇ ಗದಾ(।)
ದಕ್ಷಾಧಃಕರೇ ಚಕ್ರಂ।ದಕ್ಷೋಚ್ಚಕರೇ ಪದ್ಮಂ। (॥)
ಶ್ವೇತವರ್ಣಃ॥೧೭॥ '



ಅಧೋಕ್ಷಜ

೧೮. ಅಧೋಕ್ಷಜ -


'ಅಧೋಕ್ಷಜೋ ನೀಲವರ್ಣೋ ಗದಾಚಕ್ರಧ(ದ)ರಾಬ್ಜಕಃ।
ವಾಮೋರ್ಧ್ವಕರೇ ಶಂಖಃ ವಾಮಾಧಃಕರೇ ಚಕ್ರಂ।
ದಕ್ಷಾಧಃಕರೇ ಪದ್ಮಂ ದಕ್ಷೋರ್ಧ್ವಕರೇ ಗದಾ(॥)
ನೀಲವರ್ಣಃ॥೧೮॥ '



ನಾರಸಿಂಹ

೧೯. ನಾರಸಿಂಹ -

'ನೃಸಿಂಹಃ ಸ್ವೆ(ಶ್ವೇ)ತವರ್ಣಃ ಸ್ಯಾದ್ಗದಾಶಂಖಾರಿಪದ್ಮಭೃತ್।
ವಾಮಾಧಃಕರೇ ಶಂಖಃ।ದಕ್ಷಾಧಃಕರೇ ಚಕ್ರಂ।
ದಕ್ಷೋರ್ಧ್ವಕರೇ ಪದ್ಮಂ ವಾಮೋರ್ಧ್ವಕರೇ ಗದಾ। (ll)
ಶ್ವೇತವರ್ಣಃ।।೧೯।। '



ಅಚ್ಯುತ

೨೦. ಅಚ್ಯುತ -

'ಅಚ್ಚು(ಚ್ಯು)ತಃ ಕನಕಾಭಃ ಸ್ಯಾದ್ಗದಾಶಂಖಾರಿಸಾರಸಃ।
ವಾಮಧಃಕರೇ ಶಂಖಃ।ದಕ್ಷಾಧಃಕರೇ ಗದಾ।
ದಕ್ಷೋರ್ಧ್ವಕರೇ ಪದ್ಮಂ।ವಾಮೋಚ್ಚಕರೇ ಚಕ್ರಂ। (ll)
ಕನಕವರ್ಣಃ।।೨೦।। '



ಜನಾರ್ದನ

೨೧. ಜನಾರ್ದನ -

'ಜನಾರ್ದನೋ ರಕ್ತವರ್ಣಶ್ಚಕ್ರಶಂಖಗದಾಬ್ಜಭೃತ್।
ವಾಮೋರ್ಧ್ವಕರೇ ಶಂಖಃ ವಾಮಾಧಃಕರೇ ಗದಾ।
ದಕ್ಷಾಧಃಕರೇ ಪದ್ಮಂ ದಕ್ಷೋರ್ಧ್ವಕರೇ ಚಕ್ರಂ। (II)
ರಕ್ತವರ್ಣಃII೨೧II '



ಉಪೇಂದ್ರ

೨೨. ಉಪೇಂದ್ರ -


'ಉಪೇಂದ್ರೋ ನೀಲವರ್ಣಸ್ತು ಗದಾಚಕ್ರಾಬ್ಜಶಂಖಭೃತ್।
ದಕ್ಷಾಧಃಕರೇ ಶಂಖಃ।ದಕ್ಷೋರ್ಧ್ವಕರೇ ಗದಾ।
ವಾಮೋಚ್ಚಕರೇ ಚಕ್ರಂ ವಾಮಾಧಃಕರೇ ಪದ್ಮಂ। (II)
ನೀಲವರ್ಣಃII೨೨II '



ಹರಿ

೨೩. ಹರಿ -

'ಹರಿಃ ಕನಕವರ್ಣಃ ಸ್ಯಾಚ್ಚಕ್ರಶಂಖಗದಾಬ್ಜಭೃತ್॥ (೧)
ದಕ್ಷಾಧಃಕರೇ ಶಂಖಃ।ದಕ್ಷೋರ್ಧ್ವಕರೇ ಚಕ್ರಂ।
ವಾಮೋಚ್ಚಕರೇ ಪದ್ಮಂ ವಾಮಾಧಃಕರೇ ಚಕ್ರಂ॥
ಕನಕವರ್ಣಃ॥೨೩॥ '



ಕೃಷ್ಣ

೨೪. ಕೃಷ್ಣ -

'ಕೃಷ್ಣಸ್ತು ಕೃಷ್ಣವರ್ಣಃ ಸ್ಯಾದ್ಗದಾಬ್ಜದರಚಕ್ರಭೃತ್।
ದಕ್ಷಾಧಃಕರೇ ಶಂಖಃ ದಕ್ಷೋರ್ಧ್ವಕರೇ ಗದಾ।
ವಾಮೋಚ್ಚಕರೇ ಪದ್ಮಂ।ವಾಮಾಧಃಕರೇ ಚಕ್ರಂ॥
ಕೃಷ್ಣವರ್ಣಃ॥೨೪॥ '

(ಮುಂದೆ ಈ ಇಪ್ಪತ್ತುನಾಲ್ಕುಮೂರ್ತಿಗಳಿಗೆ ಬಣ್ಣಗಳನ್ನು ಪ್ರತ್ಯೇಕವಾಗಿ ಹೇಳಿರುವ ಶ್ಲೋಕಗಳನ್ನು ಪದ್ಮಪುರಾಣದಿಂದ ಆಯ್ದುಕೊಂಡು ಕೊಡಲಾಗಿದೆ.)

	ಮೂರ್ತಿ	ಬಣ್ಣ	ಆಯುಧಗಳು			
			ಬಲಗೈಗಳು		ಎಡಗೈಗಳು	
			ಕೆಳಗೆ	ಮೇಲೆ	ಮೇಲೆ	ಕೆಳಗೆ
೧	ಕೇಶವ	ಹಳದಿ	ಪದ್ಮ	ಶಂಖ	ಚಕ್ರ	ಗದೆ
೨	ನಾರಾಯಣ	ನೀಲಿಗಪ್ಪು	ಶಂಖ	ಪದ್ಮ	ಗದೆ	ಚಕ್ರ
೩	ಮಾಧವ	ಕಪ್ಪು	ಗದೆ	ಚಕ್ರ	ಶಂಖ	ಪದ್ಮ
೪	ಗೋವಿಂದ	ಬಿಳಿ	ಚಕ್ರ	ಗದೆ	ಪದ್ಮ	ಶಂಖ
೫	ವಿಷ್ಣು	ಬಿಳಿ	ಗದೆ	ಪದ್ಮ	ಶಂಖ	ಚಕ್ರ
೬	ಮಧುಸೂದನ	ಕೆಂಪು	ಚಕ್ರ	ಶಂಖ	ಪದ್ಮ	ಗದೆ
೭	ತ್ರಿವಿಕ್ರಮ	ಕೆಂಪು	ಪದ್ಮ	ಗದೆ	ಚಕ್ರ	ಶಂಖ
೮	ವಾಮನ	ಬಿಳಿ	ಶಂಖ	ಚಕ್ರ	ಗದೆ	ಪದ್ಮ
೯	ಶ್ರೀಧರ	ಬಿಳಿ	ಪದ್ಮ	ಚಕ್ರ	ಗದೆ	ಶಂಖ
೧೦	ಹೃಷೀಕೇಶ	ಹಳದಿ	ಗದೆ	ಚಕ್ರ	ಪದ್ಮ	ಶಂಖ
೧೧	ಪದ್ಮನಾಭ	ನೀಲಿ	ಶಂಖ	ಪದ್ಮ	ಚಕ್ರ	ಗದೆ
೧೨	ದಾಮೋದರ	ಎಲೆಹಸಿರು	ಪದ್ಮ	ಶಂಖ	ಗದೆ	ಚಕ್ರ
೧೩	ಸಂಕರ್ಷಣ	ಬಿಳಿ	ಗದೆ	ಶಂಖ	ಪದ್ಮ	ಚಕ್ರ
೧೪	ವಾಸುದೇವ	ಬಿಳಿ	ಗದೆ	ಶಂಖ	ಚಕ್ರ	ಪದ್ಮ
೧೫	ಪ್ರದ್ಯುಮ್ನ	ಹಳದಿ	ಚಕ್ರ	ಶಂಖ	ಗದೆ	ಪದ್ಮ
೧೬	ಅನಿರುದ್ಧ	ನೀಲಿ	ಚಕ್ರ	ಗದೆ	ಶಂಖ	ಪದ್ಮ
೧೭	ಪುರುಷೋತ್ತಮ	ಬಿಳಿ	ಚಕ್ರ	ಪದ್ಮ	ಶಂಖ	ಗದೆ
೧೮	ಅಧೋಕ್ಷಜ	ನೀಲಿ	ಪದ್ಮ	ಗದೆ	ಶಂಖ	ಚಕ್ರ
೧೯	ನಾರಸಿಂಹ	ಬಿಳಿ	ಚಕ್ರ	ಪದ್ಮ	ಗದೆ	ಶಂಖ
೨೦	ಅಚ್ಯುತ	ಹಳದಿ	ಗದೆ	ಪದ್ಮ	ಚಕ್ರ	ಶಂಖ
೨೧	ಜನಾರ್ದನ	ಕೆಂಪು	ಪದ್ಮ	ಚಕ್ರ	ಶಂಟ	ಗದೆ
೨೨	ಉಪೇಂದ್ರ	ನೀಲಿ	ಶಂಖ	ಗದೆ	ಚಕ್ರ	ಪದ್ಮ
೨೩	ಹರಿ	ಹಳದಿ	ಶಂಖ	ಚಕ್ರ	ಪದ್ಮ	ಗದೆ
೨೪	ಶ್ರೀಕೃಷ್ಣ	ಕಪ್ಪು	ಶಂಖ	ಗದೆ	ಪದ್ಮ	ಚಕ್ರ

(೧೪) ವ್ಯೂಹಚತುಷ್ಟಯ ಮೂರ್ತಿಗಳು

ಪಾಂಚರಾತ್ರ ಸಿದ್ಧಾಂತದಲ್ಲಿ ವಿಷ್ಣುಮೂರ್ತಿಗಳನ್ನು ಪರ, ವ್ಯೂಹ, ವಿಭವ, ಹಾರ್ದ, ಅರ್ಚಾ ಎಂದು ವಿಭಾಗಮಾಡುವುದುಂಟು. ವ್ಯೂಹದಲ್ಲಿ ನಾಲ್ಕು- ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂದು ಚತುಮೂರ್ತಿಗಳು. ವಿಭವಗಳು ಹತ್ತು ಅವತಾರಗಳು. ಹಾರ್ದವೆಂದರೆ ಎಲ್ಲ ಪ್ರಾಣಿಗಳಿಗೆ ಅಂತರ್ಯಾಮಿಯಾಗಿ ಹೃದಯದಲ್ಲಿರುವ ರೂಪ. ಅರ್ಚಾರ್ಮೂರ್ತಿಯೆಂದರೆ ಬಾಹ್ಯಪೂಜೆಯ ನಿಮಿತ್ತ ಸ್ವಯಂಭುವೋ ಮನುಷ್ಯನಿರ್ಮಿತವೋ ಆದ ಪುತ್ಥಳಿಗಳು. ಪರವೆನ್ನುವುದು ಮನಸ್ಸಿಗಾಗಲಿ ಮಾತಿಗಾಗಲಿ ಮೀರಿದ ತತ್ತ್ವ. ಇಲ್ಲಿ ನಾಲ್ಕು ವ್ಯೂಹಮೂರ್ತಿಗಳ ಲಕ್ಷಣಗಳನ್ನು ಭಟ್ಟಭಾಸ್ಕರೀಯವೆಂಬ ಗ್ರಂಥದಿಂದ ತೆಗೆದುಕೊಂಡಿದ್ದಾರೆ.

೧. ಸಂಕರ್ಷಣ -

'ವಾಸುದೇವಸ್ವರೂಪೇಣ ಕಾರ್ಯಃ ಸಂಕರ್ಷಣಃ ಪ್ರಭುಃ।
ಸ ತು ಶುಕ್ಲವಪುಃ ಕಾರ್ಯೋ ನೀಲವಾಸಾ ಯದೂತ್ತಮಃ।
ಗದಾಸ್ಥಾನೇ ಚ ಮುಸಲಂ ಚಕ್ರಸ್ಥಾನೇ ಚ ಲಾಂಗಲಮಿತಿ॥
ಶ್ವೇತವರ್ಣಃ॥೧॥ '

(ವ್ಯೂಹಕ್ರಮದಲ್ಲಿ ಸಾಮಾನ್ಯವಾಗಿ ವಾಸುದೇವ ಮೊದಲು; ಅನಂತರ ಸಂಕರ್ಷಣ. ಆದರೆ ಇಲ್ಲಿ ಸಂಕರ್ಷಣನನ್ನೇ ಮೊದಲು ಹೇಳಿದ್ದಾರೆ. ಆದರೆ ಲಕ್ಷಣವನ್ನು ಸೂಚಿಸುವಾಗ ವಾಸುದೇವನನ್ನು ಆಗಲೇ ಹೇಳಿರುವಂತೆ ಧ್ವನಿಯಿದೆ. ಸಂಕರ್ಷಣನನ್ನು ವಾಸುದೇವನಂತೆಯೇ ಮಾಡಬೇಕೆಂದೂ, ಆದರೆ ವಾಸುದೇವನ ಗದೆಯಿರುವ ಕೈಯಲ್ಲಿ ಸಂಕರ್ಷಣ ಒನಕೆಯನ್ನು ಹಿಡಿದಿರುವಂತೆ, ವಾಸುದೇವ ಚಕ್ರ ಹಿಡಿದಿರುವ ಕೈಯಲ್ಲಿ ಸಂಕರ್ಷಣ ನೇಗಿಲನ್ನು ಹಿಡಿದಿರುವಂತೆ ಮಾಡಬೇಕೆಂದು ಇಲ್ಲಿ ಕಾಣುವ ಒಕ್ಕಣೆ. ಸಂಕರ್ಷಣನ ಮೈಬಣ್ಣ ಬಿಳಿ.

೨. ವಾಸುದೇವ -

'ವಾಸುದೇವಸ್ಸಿತಃ ಶಾಂತಸ್ಸಿತಾಬ್ಜಸ್ಥಶ್ಚತುರ್ಭುಜಃ।
ಯೋಗಮೂರ್ಧೋರ್ಧ್ವಶಂಖಶ್ಚ ದಕ್ಷೇ ಶಾರ್ಙ್ಗಧರಃ ಸ್ಮೃತಃ। (॥)
ಧಾರಯೇದುತ್ತರೇ ಚಕ್ರಂ ದಕ್ಷಿಣೇ ಚ ಗದಾಮಿತಿ। (॥)
ಶ್ವೇತವರ್ಣಃ॥೨॥ '

(ವಾಸುದೇವನ ಮೈಬಣ್ಣವೂ ಬಿಳಿಯದು. ನಾಲ್ಕುಕೈಗಳು, ಶಂಖ, ಶಾರ್ಙ್ಗ(ಬಿಲ್ಲು), ಚಕ್ರ, ಗದೆಗಳನ್ನು ಹಿಡಿದಿದ್ದಾನೆ).

೩. ಪ್ರದ್ಯುಮ್ನ -

'ದಕ್ಷಿಣೋರ್ಧ್ವಕರೇ ಪದ್ಮಂ ದದ್ಯಾಚ್ಛಂಕಮಧಃಕರೇ।
ಚಕ್ರಮೂರ್ಧ್ವೇ ತಥಾ ವಾಮೇ ಗದಾಂ ದದ್ಯಾದಧಃಕರೇ ।
ಪೀತವರ್ಣಃ॥೩॥ '

(ಪ್ರದ್ಯುಮ್ನನ ಮೈಬಣ್ಣ ಹಳದಿ. ಬಲಮೇಲಗೈಯಲ್ಲಿ ಪದ್ಮ, ಬಲಕೆಳಗೈಯಲ್ಲಿ ಶಂಖ, ಎಡಮೇಲಗೈಯಲ್ಲಿ ಗದೆ ಇವನ್ನು ಹಿಡಿದಿದ್ದಾನೆ)

೪. ಅನಿರುದ್ಧ-

'ಕೃಷ್ಣಂ ಚತುರ್ಭುಜಂ ದಕ್ಷೇ ಶರಂ ಖಡ್ಗಂ ತಥೋತ್ತರೇ ।
ಧನುಃಖೇಟಧರಂ ವೀರಮನಿರುದ್ಧಂ ಪ್ರಚಕ್ಷತೇ॥
ಕೃಷ್ಣವರ್ಣಃ॥೪॥ '

(ಅನಿರುದ್ಧನ ಮೈಬಣ್ಣ ನೀಲಿಗಪ್ಪು. ಅವನು ವೀರನಂತೆ ನಾಲ್ಕುಕೈಗಳಲ್ಲಿ ಬಿಲ್ಲುಬಾಣ, ಕತ್ತಿ, ಗುರಾಣಿಗಳನ್ನು ಹಿಡಿದಿದ್ದಾನೆ. ಈ ನಾಲ್ವರನ್ನೂ ವೀರರೆಂದು ಹೇಳುವುದುಂಟು. ಇವರ ಜೊತೆಗೆ ಸಾಂಬನೆಂಬುವನನ್ನೂ ಸೇರಿಸಿ 'ಪಂಚವೀರ'ರೆನ್ನುವ ವಾಡಿಕೆಯೂ ಇದೆ. ಸಂಕರ್ಷಣನೆಂದರೆ ಬಲರಾಮ, ವಾಸುದೇವನು ವಸುದೇವನ ಮಗ ಕೃಷ್ಣ. ಕೃಷ್ಣನ ಮಗ ಪ್ರದ್ಯುಮ್ನ; ಮತ್ತು ಪ್ರದ್ಯುಮ್ನನ ಮಗ ಅನಿರುದ್ಧ. ಇವರು ಯದುವಂಶದ ಮಹಾಪುರುಷರು).

(೧೯) ದಶಾವತಾರಗಳು

ವಿಷ್ಣುವಿನ ರೂಪಗಳಲ್ಲಿ ತುಂಬ ಪ್ರಸಿದ್ಧವಾದುವು ಹತ್ತು ಪ್ರಾದುರ್ಭಾವರೂಪಗಳು. ದುಷ್ಟಶಿಕ್ಷಣಕ್ಕಾಗಿ ಶಿಷ್ಟರಕ್ಷಣೆಗಾಗಿ ದೇವರು ಅವತಾರಗಳನ್ನು ಎತ್ತಿದುದು ವೈದಿಕಸಾಹಿತ್ಯದಲ್ಲೇ ಕಂಡುಬರುತ್ತದೆ. ಅವತಾರಗಳು ದಿಟವಾಗಿ ಅಸಂಖ್ಯೇಯವಾದರೂ, ಭಾಗವತಾದಿ ಗ್ರಂಥಗಳಲ್ಲಿ ಇಪ್ಪತ್ತೆರಡು ಅವತಾರಗಳ ಪ್ರಸ್ತಾಪವಿದ್ದರೂ, ಪುರಾಣಗಳು ಹತ್ತು ಅವತಾರಗಳನ್ನು ಪ್ರಮುಖವಾಗಿ ಎಣಿಸಿದುವು. ಇವನ್ನು ವಿಭವಾವತಾರವೆಂದೂ ನಿರ್ದೇಶಿಸುವುದುಂಟು. ಈ ಅವತಾರಗಳಲ್ಲಿ ಮತ್ಸ್ಯ, ಕೂರ್ಮ, ವರಾಹ, ನೃಕೇಸರಿ, ವಾಮನ, ಜಾಮದಗ್ನಿ, (ಪರಶುರಾಮ),

ಶ್ರೀರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ ಎಂಬ ಕ್ರಮವಿದೆ. ಕೆಲವೊಮ್ಮೆ ಬುದ್ಧನ ಬದಲಿಗೆ ಹಂಸಮೂರ್ತಿಯನ್ನು ಅವತಾರವೆಂದು ಸೇರಿಸುತ್ತಾರೆ; ಮತ್ತೆ ಕೆಲವರು 'ರಾಮೋ ರಾಮಶ್ಚ ರಾಮಶ್ಚ' ಎಂದರೆ ಪರಶುರಾಮ, ದಾಶರಥಿರಾಮ, ಬಲರಾಮ ಎಂದು ಮೂವರು ರಾಮರನ್ನು ಎಣಿಸುವರು. ಕೃಷ್ಣನನ್ನು ಪೂರ್ಣಾವತಾರವೆಂದು ಗ್ರಹಿಸಿ ದಶಾವತಾರಗಳಲ್ಲಿ ಸೇರಿಸದೆ, ಕೃಷ್ಣನದೇ ಹತ್ತು ಅವತಾರಗಳೆಂದು ನಿರ್ದೇಶಿಸುವುದು ಗೀತಗೋವಿಂದವೇ ಮೊದಲಾದ ಗ್ರಂಥಗಳಲ್ಲಿ ಕಾಣಸಿಗುತ್ತದೆ. ಆಗ ಮೂವರು ರಾಮರೂ ಬುದ್ಧನೂ ಸೇರುತ್ತಾರೆ, ಕೃಷ್ಣ ಸೇರುವುದಿಲ್ಲ. ಮುಮ್ಮಡಿಯವರೂ ಇದೇ ಅಭಿಪ್ರಾಯದವರು; ಪಾಂಚರಾತ್ರವನ್ನು ಅವಲಂಬಿಸಿದ್ದಾರೆ.

೧. ಮತ್ಸ್ಯಮೂರ್ತಿ-

'ವಾಮೇ ಶಂಖಂ ಗದಾಂ ದಕ್ಷೇ ದ್ವಿಭುಜೋ ಮತ್ಸ್ಯರೂಪಧೃತ್।
ರ್ನ(ನ)ರಾಂಘ್ರಿರ್ಮತ್ಸ್ಯರೂಪೋ ವಾ ಮತ್ಸ್ಯರೂಪೀ ಜನಾರ್ದನಃ॥
ಶ್ವೇತವರ್ಣಃ॥೧॥ '

(ಮತ್ಸ್ಯರೂಪದ ವಿಷ್ಣುವು ದ್ವಿಭುಜ; ಎಡಗೈಯಲ್ಲಿ ಶಂಖವನ್ನೂ ಬಲಗೈಯಲ್ಲಿ ಗದೆಯನ್ನೂ ಹಿಡಿದಿದ್ದಾನೆ. ಕಾಲುಗಳು ಮನುಷ್ಯನದ್ದಾಗಿರಬಹುದು, ಅಥವಾ ಕೆಳಭಾಗವೆಲ್ಲ ಮೀನಿನದ್ದೇ ಆಗಿದ್ದು ಮೇಲ್ಭಾಗ ಪುರುಷಾಕೃತಿಯದಿರಬಹುದು. ಮೈಬಣ್ಣ ಬಿಳಿ)



ಮತ್ಸ್ಯಮೂರ್ತಿ

೨. ಕೂರ್ಮಮೂರ್ತಿ -

'ಕೂರ್ಮಸ್ತು ಕಚ್ಛಪಾಕಾರೋ ಮತ್ಸ್ಯರೂಪೋಕ್ತರೂಪವಾನ್। (II)
ಸ್ವರ್ಣವರ್ಣಃII೨II '

(ಕೂರ್ಮರೂಪವನ್ನೂ ಮೇಲೆ ಹೇಳಿದಂತೆಯೇ ಮಾಡಿ, ಮೀನಿನ ಆಕಾರದ ಬದಲಿಗೆ ಆಮೆಯ ಆಕಾರವನ್ನು ಮಾಡಬೇಕು. ಮೈಬಣ್ಣ ಬಂಗಾರದ್ದು.)



ಕೂರ್ಮಮೂರ್ತಿ

೩. ವರಾಹಮೂರ್ತಿ-

'ಮಧುಪಿಂಗಳವರ್ಣಂ ಚ ಚತುರ್ಬಾಹ್ವಾಯುಧೈರ್ವೃತಂ।
ನರಾಂಗಂ ಸೂಕರಾಸ್ಯಂ ಚ ಮನಾಕ್ಪೀನಂ ಸುಭೀಷಣಂ। (II)
ಶ್ರೀರ್ವಾಮಕೂರ್ಪರಸ್ಥಾ ಚ ಧರಾನಂತೌ ಪದಾನುಗೌ।
ಏತದ್ರೂಪಧರಂ ವಂದೇ ವರಾಹಂ ಭುಕ್ತಿಮುಕ್ತಿದಂ।।
ಶ್ಯಾಮವರ್ಣಃ।।೩।। '

(ವರಾಹಮೂರ್ತಿಯು ನಾಲ್ಕು ಕೈಗಳ ನೀಲಿಗಪ್ಪುಬಣ್ಣದ ರೂಪ; ಮುಖ ಹಂದಿಯದು, ಮೈ ಮನುಷ್ಯನದು. ನಾಲ್ಕು ಕೈಗಳು, ಆಯುಧಗಳನ್ನು ಹಿಡಿದಿರುವುವು. ನೋಡಲು ಭಯಂಕರವಾದ ರೂಪ. ಎಡತೋಳಿನ ಮೊಣಕೈಮೇಲೆ ಲಕ್ಷ್ಮಿ ಕುಳಿತಿದ್ದಾಳೆ; ಭೂದೇವಿಯೂ ಶೇಷನೂ ಕಾಲುಗಳ ಬಳಿ ಇದ್ದಾರೆ)



ವರಾಹಮೂರ್ತಿ

೪. ನೃಸಿಂಹಮೂರ್ತಿ -

'ಜ್ವಲದಗ್ನಿಸಮಾಕಾರಂ ಸಿಂಹವಕ್ತ್ರಂ ನರಾಂಗಕಂ।
ದಂಷ್ಟ್ರಾಕರಾಳವದನಂಲೊಲ್ಲ(ಲ)ಜ್ಜಿಹ್ವಾಸುಭೀಷಣಂ। (II)
ವೃತ್ತಾಸ್ಯಂ ಜಟಿನಂ ಕೃಧ(ಕ್ರುದ್ಧ)ಮಾಲೀಢಂ ಪೀನವಕ್ಷಸಂ।
ಅಭೇದ್ಯತೀಕ್ಷ್ಣ ನಖರಮಾತ್ಮೋರುಕೃತದಾನವಂII
ತದ್ವಕ್ಷೋ ದಾರಯಂತಂ ಚಕರಾಭ್ಯಾಂ ನಖಿರೈರ್ಭ್ರಶಂ।
ಗದಾಂ ಚಕ್ರಂ ಧರಂ(ಗದಾಚಕ್ರಧರಂ)ದ್ವಾಭ್ಯಾಂ ನರಸಿಂಹಂ ಜಗತ್ಪ್ರಭುಂII
ಶ್ವೇತವರ್ಣಃII೪II

(ಪ್ರಸಿದ್ಧವಾದ ನರಸಿಹನ ರೂಪವು ಸಿಂಹದ ಮೋರೆ, ಪುರುಷನ ದೇಹ ಉಳ್ಳದ್ದು; ಉರಿಯುವ ಬೆಂಕಿಯಂತೆ ಭಯಾನಕವಾದುದು. ಗುಂಡುಮುಖ, ತಲೆಯ ಸುತ್ತ ಜಟೆಗಳು, ಹೊರಚಾಚಿರುವ ನಾಲಗೆ; ಸಿಟ್ಟುಗೊಂಡಂತೆ ಕಾಣುವನು. ಹಿರಣ್ಯಕಶಿಪುವನ್ನು ತೊಡೆಯ ಮೇಲೆ ಬೀಳಿಸಿಕೊಂಡು ತನ್ನ ತೀಕ್ಷ್ಣವಾದ ಉಗುರುಗಳಿಂದ ಅವನ ಎದೆಯನ್ನು ಬಗೆಯುತ್ತಿರುವನು. ಮೇಲಿನೆರಡು ಕೈಗಳಲ್ಲಿ ಗದೆ, ಚಕ್ರಗಳನ್ನು ಹಿಡಿದಿರುವನು. ಮೈಬಣ್ಣ ಬಿಳಿ.)



ನೃಸಿಂಹಮೂರ್ತಿ

೫. ವಾಮನಮೂರ್ತಿ -

'ಕುಂಡೀ ಚ್ಛ(ಛ)ತ್ರಧರೋ ದ್ವಾಭ್ಯಾಂ ವಾಮನಃ ಪರಿಕೀರ್ತಿತಃ। (॥)
ಶ್ಯಾಮವರ್ಣಃ॥೫॥ '

(ವಾಮನಮೂರ್ತಿಗೆ ಎರಡೇ ಕೈಗಳು; ಒಂದರಲ್ಲಿ ಕಮಂಡಲುವನ್ನೂ, ಇನ್ನೊಂದರಲ್ಲಿ ಕೊಡೆಯನ್ನೂ ಹಿಡಿದಿದ್ದಾನೆ. ಮೈಬಣ್ಣ ಕಪ್ಪು)



ವಾಮನಮೂರ್ತಿ

೬. ಪರಶುರಾಮ -

'ಕ್ಷತ್ರಾಂತಕರಣಂ ಘೋರಮುದ್ವಹನ್ ಪರಶುಂ ಕರೇ ॥ (I)
ಜ್ಯಾ(ಜಾ)ಮದಗ್ನ್ಯಶ್ಚ ಕರ್ತವ್ಯೋ ರಾಮಶ್ಶತ್ರುನಿಷೂದನಃ। (II)
ಸ್ವರ್ಣವರ್ಣಃ॥೬॥ '

(ಘೋರವಾದ ಕೊಡಲಿಯನ್ನು ಕೈಯಲ್ಲಿ ಹಿಡಿದು, ಜಮದಗ್ನಿಯ ಮಗನಾದ ಪರಶುರಾಮನು ಶತ್ರುಗಳಾದ ಕ್ಷತ್ರಿಯರನ್ನು ಕೊಲ್ಲಲು ಹೊರಟಂತೆ ಕಾಣಬೇಕು; ಬಂಗಾರದ ಮೈಬಣ್ಣ)



ಪರಶುರಾಮ

೭. ಶ್ರೀರಾಮಮೂರ್ತಿ -

'ಯುವಾ ಪ್ರಸನ್ನವದನಸ್ಸಿಂಹಸ್ಕಂದೋರುಣೇಕ್ಷಣಃ।
ಆಜಾನುಬಾಹುಃ ಕರ್ತವ್ಯೋ ರಾಮೋ ಬಾಣಧನುರ್ಧರಃ। (II)
ಶ್ಯಾಮವರ್ಣಃ॥೭॥ '

(ದಾಶರಥಿರಾಮನನ್ನು ತರುಣನಂತೆ, ಶಾಂತವಾದ ಮುಖ, ಸಿಂಹದ ಹೆಗಲಿನಂತೆ ಹೆಗಲು, ಸ್ವಲ್ಪ ಕೆಂಪಾದ ಕಣ್ಣುಗಳು, ಮೊಳಕಾಲನ್ನು ಮುಟ್ಟುವ ತೋಳುಗಳುಳ್ಳವನಂತೆ, ಬಿಲ್ಲು-ಬಾಣಗಳನ್ನು ಹಿಡಿದಿರುವಂತೆ ಮಾಡಬೇಕು; ಅವನ ಮೈಬಣ್ಣ ನೀಲಿಗಪ್ಪು)



ಶ್ರೀರಾಮಮೂರ್ತಿ

೮. ಹಲರಾಮಮೂರ್ತಿ -

'ಮದ್ಯಪಾತ್ರಂ ಚ ಸೀರಂ ಚ ವಾಮದಕ್ಷಿಣಯೋಃ ಕ್ರಮಾತ್।
ಗದಾಮುಸಲವಜ್ರಂ ಚ ಹಲೀ ರಾಮಃ ಪ್ರಕೀರ್ತಿತಃ। (॥)
ಕ್ಷೀರವರ್ಣಃ॥೮॥ '

(ಬಲರಾಮನು ನೇಗಿಲನ್ನು ಹಿಡಿದಿದ್ದಾನೆ. ನೇಗಿಲನ್ನು ವಜ್ರಾಕಾರದಲ್ಲಿ ಕಾಣಿಸಿರುವುದುಂಟು. ಹಾಲಿನಂತೆ ಬಿಳಿಯ ಮೈಬಣ್ಣ)



ಹಲರಾಮಮೂರ್ತಿ

೯. ಬುದ್ಧಮೂರ್ತಿ -

'ಕಾಷಾಯವಸ್ತ್ರಸಂವೀತಃ।ಸ್ಕಂಧಸಂಸಕ್ತಚೀವರಃ।
ಪದ್ಮಾಸನಸ್ಥೋ ದ್ವಿಭುಜೋ ಧ್ಯೇಯೋ
ಬುದ್ಧಃ ಪ್ರಕೀರ್ತಿತಃ। (॥)
ಪಾಟಲವರ್ಣಃ॥ಪ್ರಸಿದ್ಧಃ॥ '

(ಪ್ರಸಿದ್ಧನಾದ ಗೌತಮಬುದ್ಧನನ್ನು ಕಾವಿಬಣ್ಣದ ಬಟ್ಟೆಯನ್ನು ಹೊದ್ದಂತೆ, ಹೆಗಲಮೇಲೆ ಭಿಕ್ಷುಗಳ ಚೀವರವನ್ನು ಧರಿಸಿದಂತೆ, ಪದ್ಮಾಸನದಲ್ಲಿ ಕುಳಿತಂತೆ, ಎರಡು ಕೈಗಳಿರುವಂತೆ ಚಿತ್ರಿಸಬೇಕು; ಮೈಬಣ್ಣ ನಸುಗೆಂಪು)

೧೦. ಕಲ್ಕಿಮೂರ್ತಿ -

'ಖಡ್ಗೋದ್ಯತಕರಃ ಕೃ(ಕ್ರು)ದ್ಧೋ ಹಯಾರೂಢೋಮರಾಬಲಃ।
ಮ್ಲೇಚ್ಛಭೇದ್ಯಕರಃ (ಮ್ಲೇಚ್ಛಚ್ಛೇದಕರಃ) ಕಲ್ಕೀ ದ್ವಿಭುಜಃ
ಪರಿಕೀರ್ತಿತಃ॥
ಶ್ವೇತವರ್ಣಃ॥೧೦॥ '

(ಕಲ್ಕಿಯು ಸಿಟ್ಟುಗೊಂಡು ಕತ್ತಿಯನ್ನೆತ್ತಿ ಹಿಡಿದು ಕುದುರೆಯೇರಿ ಮ್ಲೇಚ್ಛರನ್ನು ಕೊಲ್ಲಲು ಹೊರಟಂತೆ ಕಾಣಿಸಬೇಕು; ಎರಡುಕೈಗಳು; ಮೈಬಣ್ಣ ಬಿಳಿ).



ಕಲ್ಕಿ

ಕಡೆಯಲ್ಲಿ ಮುಮ್ಮಡಿಯವರು ಕೆಲವು ಗ್ರಂಥಗಳಲ್ಲಿ ಬುದ್ಧನ ಬದಲಿಗೆ ಕೃಷ್ಣನನ್ನು ಸೇರಿಸುವರೆಂದು ಹೇಳಿ ಕೃಷ್ಣನ ಧ್ಯಾನಶ್ಲೋಕವನ್ನು ಕೊಟ್ಟಿದ್ದಾರೆ. ಶ್ಯಾಮವರ್ಣದ ಕೃಷ್ಣನು ದ್ವಿಭುಜನೆಂದೂ ಶಂಖಚಕ್ರಗಳನ್ನು ಹಿಡಿದಿರುವನೆಂದೂ ಪಾದ್ಮಸಂಹಿತೆಯಿಂದ ಉದ್ಧರಿಸಿದ್ದಾರೆ.

'ಅಥ ಗ್ರಂಥಾಂತರೇ ದಶಾವತಾರಮೂರ್ತೀನಾಂ ಮಧ್ಯೇ
ಬುದ್ಧಸ್ಥಾನೇ
ಕೃಷ್ಣ ಯಿ(ಇ)ತಿತಧ್ಯಾ(ದ್ಯಾ)ನಂ ಪಾದ್ಮೇ ।


ಶಂಖಚಕ್ರಧರಃ ಶ್ಯಾಮೋ ದ್ವಿಭುಜಃ ಕೃಷ್ಣಸಂಜ್ಞಿತಃ।
ಶ್ಯಾಮವರ್ಣಃ॥ '

ಮುಂದೆ ದಶಾವತಾರಮೂರ್ತಿಗಳ ಮತ್ತು ಪರಿವಾರಗಳ ವರ್ಣಗಳನ್ನು ಪಾದ್ಮಸಂಹಿತೆಯಿಂದಲೆ ಆಯ್ದು ಪ್ರತ್ಯೇಕವಾಗಿ ಕೊಡಲಾಗಿದೆ -

ಮತ್ಸ್ಯ-ಸ್ಫಟಿಕಸಂಕಾಶ; ಕೂರ್ಮ-ಕಾಂಚನಸುಪ್ರಭ; ವರಾಹ-ಶ್ಯಾಮಳನಿಭ; ನೃಸಿಂಹ-ಚಂದ್ರವರ್ಣಪ್ರಭ; ಪ್ರಹ್ಲಾದ-ಕಾಂಚನಪ್ರಭ; ವಾಮನ-ಶ್ಯಾಮಳನಿಭ; ಮಹಾಬಲಿ-ಕಾಳವರ್ಣ; ಜಮದಗ್ನಿ-ಸುವರ್ಣಾಭ;



ಕೃಷ್ಣ



ಲಕ್ಷ್ಮೀನಾರಾಯಣ

ರಾಮ-ಶ್ಯಾಮಳಾಕೃತಿ; ಭರತ-ಶ್ಯಾಮಳ; ಲಕ್ಷ್ಮಣ-ಕನಕಪ್ರಭ; ಶತ್ರುಘ್ನ-ರಕ್ತವರ್ಣ; ಸೀತಾ-ಹೇಮನಿಭಾಕೃತಿ; ಮಾಂಡವೀ-ರಕ್ತವರ್ಣೆ; ಊರ್ಮಿಳಾ-ಶ್ಯಾಮಳಾಕೃತಿ; ಶ್ರುತಕೀರ್ತಿ-ಸಿತಾಂಗೆ; ಹನುಮಂತ-ಕನಕಪ್ರಭ; ಅಂಗದ-ರಕ್ತವರ್ಣಾಭ; ಸುಗ್ರೀವ-ಹೇಮಪಿಂಗಳ; ನೀಲ-ಉತ್ಪಲಪ್ರಭ; ಜಾಂಬವಾನ್-ಕನಕಪ್ರಭ; ಗುಹ-ತಿಲವರ್ಣ; ವಿಭೀಷಣ-ಕಾಳವರ್ಣ; ಬಲರಾಮ-ಕ್ಷೀರನಿಭ; ರೇವತೀ-ರಕ್ತವರ್ಣೆ; ಕೃಷ್ಣ-ಮೇಘಶ್ಯಾಮಳ; ರುಕ್ಮಿಣೀ-ಕನಕಪ್ರಭೆ; ಕಲ್ಕೀ-ಶ್ವೇತನಿಭ.

(೨೦) ಲಕ್ಷ್ಮೀನಾರಾಯಣ -

'ನಾರಾಯಣಶ್ಚತುರ್ಬಾಹುಶ್ಶಂಖಚಕ್ರೀ ತಥೋತ್ತರೇ ।
ದಕ್ಷಿಣೇ ತು ಗದಾಪದ್ಮೀ ನೀಲಜೀಮೂತಸನ್ನಿಭಃ । (II)
ವಾಮೇ ಶ್ರೀರ್ವಲ್ಲಕೀಹಸ್ತಾ ಪುಷ್ಪಾ ಪದ್ಮಕರಾ(s)ಪರೇ ।
ಶ್ಯಾಮವರ್ಣಃII '

ಲಕ್ಷ್ಮಿಯಿಂದೊಡಗೂಡಿದ ನಾರಾಯಣನು ಚತುರ್ಭುಜ; ಮೇಲಿನ ಕೈಗಳಲ್ಲಿ ಶಂಖಚಕ್ರಗಳು; ಕೆಳಗಿನ ಕೈಗಳಲ್ಲಿ ಗದಾಪದ್ಮಗಳು. ಅವನ ಮೈಬಣ್ಣ ಕಾರ್ಮೋಡದಂತೆ. ಎಡಗಡೆ ಲಕ್ಷ್ಮಿಯು ದ್ವಿಭುಜೆಯಾಗಿ ಒಂದು ಕೈಯಲ್ಲಿ ವಲ್ಲಕಿಯನ್ನೂ (ಎಂದರೆ ವೀಣೆಯನ್ನೂ) ಇನ್ನೊಂದು ಕೈಯಲ್ಲಿ ಕಮಲವನ್ನೂ ಹಿಡಿದು ಕುಳಿತಿದ್ದಾಳೆ. ಇದು ಭಾಟ್ಟಭಾಸ್ಕರೀಯದ ಒಕ್ಕಣೆ.

(೨೧) ಸೂರ್ಯನಾರಾಯಣ -

'ಧ್ಯೇಯಸ್ಸದಾ ಸವಿತೃ (ತೃ) ಮಂಡಲಮಧ್ಯವರ್ತಿ(ರ್ತೀ)
ನಾರಾಯಣಸ್ಸರಸಿಜಾಸನಸನ್ನಿವಿಷ್ಟಃ।
ಕೇಯೂರವಾನ್ ಮಕರಕುಂಡಲವಾನ್ಕಿರೀಟೀ
ಹಾರೀ ಹಿರಣ್ಮಯವಪುರ್ಧೃತಶಂಖಚಕ್ರಃ।(II)
ಸ್ವರ್ಣವರ್ಣಃ'

ಪ್ರಸಿದ್ಧವಾದ ಈ ಧ್ಯಾನಶ್ಲೋಕದ ಆಕರವನ್ನು 'ತ್ರಿಚಕಲ್ಪೋಕ್ತರೀತ್ಯಾ' ಎಂದು ಕಾಣಿಸಲಾಗಿದೆ. ಆಕರಗ್ರಂಥದ ಹೆಸರು ತ್ರ್ಯಚಾಕಲ್ಪ ಎಂದಿರಬೇಕು. ಸೂರ್ಯಮಂಡಲದ ನಡುವೆ ಪದ್ಮಾಸನದಲ್ಲಿ ಹೊಂಬಣ್ಣದ ನಾರಾಯಣನು ಶಂಖಚಕ್ರಗಳನ್ನು ಹಿಡಿದು ಸರ್ವಾಭರಣಭೂಷಿತನಾಗಿ ಕುಳಿತಿರುವಂತೆ ಧ್ಯಾನಮಾಡಬೇಕೆಂದು ಇಲ್ಲಿನ ಒಕ್ಕಣೆ.

(೨೨) ಅಷ್ಟಮುಖಿಗಂಡಭೇರುಂಡನೃಸಿಂಹ

'ವಂದೇಹಂ ಕ್ರೂರಘೋರ ಪ್ರಬಲತರಮಹಾಗಂಡ-
ಭೇರುಂಡಸಿಂಹ ವ್ಯಾಘ್ರಾಶ್ವಕ್ರೋಡಶಾಖಾಮೃಗ
ವರಖಗರಾದ್ಭ(ಟ್ಟ)ಲ್ಲುಕಾದ್ಯಷ್ಟವಕ್ತ್ರಂ।
ದ್ವಾತ್ರಿಂಶತ್ಕಿ(ತ್ಕೋ)ಟಿ ಬಾಹುಂ ಹಲಮುಸಲಗದಾ ಶಂಖಚಕ್ರಾದಿ
ಹೇತೀರ್ಬಿಭ್ರಾಣಂ ಭೀಮದಂಷ್ಟ್ರಂ
ಶರಭಖಗಗಜಾನ್ಭಕ್ಷಯಂತಂ ನೃಸಿಂಹಂ। (II)
ಶರೀರೇ ರಕ್ತವರ್ಣಃ।ಮುಖೇಷು ತತ್ತದ್ವರ್ಣಃ(ರ್ಣಾಃ) II

ಆಥರ್ವಣರಹಸ್ಯ-ಮಂತ್ರಸಾರವೆಂಬ ಪ್ರಾಚೀನ ಗ್ರಂಥದಿಂದ ಆಯ್ದುಕೊಂಡಿರುವ ಈ ಧ್ಯಾನಶ್ಲೋಕವು ಎಂಟು ಮುಖಿಗಳ ಗಂಡಭೇರುಂಡ-ನೃಸಿಂಹನನ್ನು ಕುರಿತದ್ದು. ನರಸಿಂಹಾವತಾರವಾದ ಮೇಲೆ - ನರಸಿಂಹನ ಕೋಪವನ್ನು ಶಮನಮಾಡಲು ಶಿವನು ಶರಭರೂಪಿಯಾಗಿ ಬಂದದ್ದು, ಶರಭನನ್ನೂ ದಮನಮಾಡಲು ವಿಷ್ಣು ಗಂಡಭೇರುಂಡನಾಗಿ ಬಂದದ್ದು ಮೊದಲಾದ ಪೌರಾಣಿಕ ಪ್ರಸಂಗಗಳ ಹಿನ್ನೆಲೆಯಲ್ಲಿ ಈ ರೂಪ. ಶೈವ-ವೈಷ್ಣವ ಪಂಥಗಳ ಮೇಲಾಟವನ್ನು ಇದರಲ್ಲಿ ಕಾಣಬಹುದು. ವಿಷ್ಣುವಿನ ಈ ರೂಪ ಭಯಂಕರವಾದುದು. ಸಿಂಹ, ಹುಲಿ, ಕುದುರೆ, ಹಂದಿ, ಕೋತಿ, ಗರುಡ, ಕರಡಿ, ಗಂಡಭೇರುಂಡವೆಂಬ ಎಂಟು ಮುಖಗಳು; ಮೂವತ್ತೆರಡುಕೋಟಿ ಕೈಗಳು; ಶಂಖ, ಚಕ್ರ, ಗದೆ, ನೇಗಿಲು, ಒನಕೆ ಮೊದಲಾದ ಆಯುಧಗಳು. ಇಷ್ಟು ಮಾತ್ರವಲ್ಲದೆ, ಶರಭ, ಆನೆ, ಹದ್ದು ಮೊದಲಾದುವನ್ನು ಕಬಳಿಸುತ್ತಿರುವಂತೆ ಕಾಣಿಸಲಾಗಿದೆ. ಈ ರೂಪವು ಕೆಂಪು ಮೈಬಣ್ಣದ್ದು; ಮುಖಿಗಳು ಬೇರೆ ಬೇರೆ ಬಣ್ಣದವು.

ಮಂತ್ರಸಾರದಲ್ಲಿಯೇ ಇರುವ ಇನ್ನೊಂದು ಮೂರ್ತಿಲಕ್ಷಣವನ್ನೂ ಇಲ್ಲಿ ಕೊಡಲಾಗಿದೆ. ಇದು ಇನ್ನಷ್ಟು ಸ್ವಾರಸ್ಯವಾಗಿದೆ, ಭಯಂಕರವಾಗಿದೆ. ವಿವರಗಳು ಹೆಚ್ಚಿವೆ. ಶರಭರೂಪಿಯಾದ ರುದ್ರನ ಮದವನ್ನಿಳಿಸಲು ತಳೆದ ರೂಪವಿದೆಂದು ಸ್ಪಷ್ಟವಾಗಿದೆ. ಆಯುಧಗಳ ನಿರ್ದೇಶನವೂ ಇದೆ. ಸೋಮಸೂರ್ಯಾಗ್ನಿಗಳೆಂಬ ಮೂರು ಕಣ್ಣುಗಳು.

'ಕಲ್ಪಾಂತಾಶನಿ ವಿಷ್ಣುಲಿಂಗ ಹುತಭುಗ್ವಾಜ್ವಲ್ಯನೇತ್ರತ್ರಯಂ
ಕೋಲಂ ವಜ್ರಸಮಾನತುಂಡನಖರಂ ದಂಷ್ಟ್ರಿದ್ವಿಜಿಹ್ವಾನನಂ। (II೧II)
ಋಕ್ಷಂ ಮಾರುತಿ ಸಪ್ತಿಮಾರ್ತಹರಿಣಂ ಚಾಷ್ಟಾನನಂ ಭೀಷಣಂ।
ಧ್ಯಾಯೇದ್ರುದ್ರಮದಾಂತಕಂ ಶರಭಹೃದ್ಭೇರುಂಡಸಿಂಹಂ ಸದಾII (೨)

ಅಷ್ಟಾಸ್ಯೋವಹ್ನಿದೃಷ್ಟಿರ್ಭದುರವರನಖೋ ವಿದ್ಯುದುಜ್ವಾಲಜಿಹ್ವೋ
ಹೀರಾದ್ಯೀಮೌ ಚ ಪಕ್ಷೌ ಹೃದಯ ಜಠರಗಾಹ್ಯಷ್ಟಕಾಳ್ಯಷ್ಟದುರ್ಗಾ।
ಊರೂ ದ್ವೌ ರುದ್ರಕಾಲೌ ಖಗಮೃಗನೃಹರಿಃ ಗಂಡಭೇರುಂಡರೂಪಃ
ಪಾಯಾದಸ್ಮಾನ್ಸಚಕ್ರೋ ಹರಿರಿಹ ಶರಭಾದ್ಯುಗ್ರಶತ್ರೂನ್
ಪ್ರವಿಧ್ಯನ್II೩II

ಹಸ್ತಾಂಜಲ್ಯಾಹೃತಾತ್ಮದ್ವಿಷದಸುರವರೋ ರೋಜ ಬಹ್ವಸ್ರಪಾನ
ವ್ಯಾತ್ತಾಸ್ಯಂ ದೋರ್ಯುಗಾಂಚನ್ನಖದಳಿತ ಮಹಾಶಾರಭಾಂಗಂ
ಸುಭೂಷಂ।
ಬಾಹುದ್ವಂದ್ವೋಪರುದ್ಧಾಸುರಕಚಚರಣಂ ದೋರ್ಯುಗೋದ್ಯ
ನ್ನಖಾಗ್ರಪ್ರಚ್ಛನ್ನಾರಾತಿ ದೇಹಂ ರವಿಶಶಿದಹನ ತ್ರೀಕ್ಷಣಂ
ವಜ್ರಪಕ್ಷಂII೪II

ಅಂಭೋಜಂ ವೀತಿಹೋತ್ರಾಂಕುಶವಿಶಿಖಮಹಾಪಾಶಕುಂತಾಸಿ
ಶಕ್ತೀರಾಂತ್ರಂ
ಚಕ್ರಂ ಕುಠಾರೋದ್ಧತಭುಜಯುಗಳದ್ವೇಷಿದೋಃ
ಖಡ್ಗಶಂಖಾನ್।
ಹೈರಣ್ಯಾಂತ್ರಂ ತ್ರಿಶೂಲಂ ಫಲಕಮಪಿ ಮಹಾಪಾಶಶೀರ್ಷಂ ಪಿನಾಕಂ।
ವಜ್ರಂ ಕೌಮೋದಕೀಂ ಚಾಪ್ಯತಿಬಲಮುಸಲಂ ಸಂದಧಾನಂ ಕರಾಗ್ರೈಃ।
ಶರೀರೇ ರಕ್ತವರ್ಣಃ। ಮುಖೇ ತತ್ತದ್ವರ್ಣಃ(ರ್ಣಾಃ) II೫II



ಅಷ್ಟಮುಖಗಂಡಭೇರುಂಡನೃಸಿಂಹ

(೨೩) ಪಂಚವಕ್ತ್ರನಾರಸಿಂಹ -

'ಪಂಚವಕ್ತ್ರಂ ಮಹಾಭೀಮಂ ಕಾಲಾನಲಸಮಪ್ರಭಂ।
ಮುಂಡಮಾಲಾಧರಂ ರೌದ್ರಂ ಕಂಠಹಾರೇಣ ಶೋಭಿತಂ।
ಚಂದ್ರಮೌಳಿಂ ನೀಲಕಂಠಂ ಪ್ರತಿವಕ್ತ್ರಂ ತ್ರಿಲೋಚನಂ।
ಭುಜೈಃ ಪರಿಘಸಂಕಾಶೈರ್ದಶಭಿಶ್ಚೋಪಶೋಭಿತಂ।
ಅಕ್ಷಸೂತ್ರಂ ಗದಾಂ ಪದ್ಮಂ ಶಂಖಿಂ ಗೋಕ್ಷೀರಸನ್ನಿಭಂ।
ಧನುಶ್ಚ ಮುಸಲಂ ಚೈವ ತಥಾ ಚಕ್ರಂ ಮಹತ್ಪ್ರಭಂ।
ಖಡ್ಗಂ ಚ ಶೂಲಪಾಶೇ ಚ ನೃಸಿಂಹಂ ರುದ್ರರೂಪಿಣಂ।
ಇಂದ್ರಗೋಪಕನೀಲಾಭಂ ಚಂದ್ರಾಭಂ ಸ್ವರ್ಣವರ್ಣಕಂ।
ಬಿಭ್ರಾಣಂ ಸರ್ವಜಗತಾಮಾಧಾರಂ ಗಿರಿಕನ್ಯಕೇ । (II)
ಶರೀರೇ ರಕ್ತವರ್ಣಃ।ಮುಖೇಷು ವರ್ಣಾನಾಂ ಪಂಚಕಂ॥ '

ಐದು ಮೋರೆಗಳ ನರಸಿಂಹನ ರೂಪವನ್ನು ಮಂತ್ರಸಾರಗ್ರಂಥದಿಂದ ಉದ್ಧರಿಸಿಕೊಂಡಿದೆ. ಇದು ರುದ್ರರೂಪವಾದುದರಿಂದ ಪಂಚವಕ್ತ್ರಗಳು (ಸದ್ಯೋಜಾತಾದಿ). ರುದ್ರನಂತೆಯೇ ಮುಂಡಮಾಲಾಧರ, ನೀಲಕಂಠ, ತ್ರಿಣೇತ್ರ, ನಾಗಯಜ್ಞೋಪವೀತಿ. ಹತ್ತುಕೈಗಳು; ಜಪಮಾಲೆ, ಗದೆ, ಪದ್ಮ, ಶಂಖ, ಧನುಸ್ಸು, ಮುಸಲ, ಚಕ್ರ, ಖಡ್ಗ, ಶೂಲ, ಪಾಶಗಳನ್ನು ಹಿಡಿದಿವೆ. ಐದು ಮುಖಗಳಲ್ಲಿ ನಾಲ್ಕು ನಾಲ್ಕುದಿಕ್ಕುಗಳ ಕಡೆ ತಿರುಗಿವೆ, ಒಂದು ಮೇಲಿದೆ. ಮೈಬಣ್ಣವೇನೋ ಕೆಂಪು;ಆದರೆ ಒಂದೊಂದು ಮುಖ ಒಂದೊಂದು ಬಣ್ಣ.




ಪಂಚವಕ್ತ್ರನಾರಸಿಂಹ

(೨೪) ಪ್ರತಾಪರಾಮ -

'ದೋರ್ಭಿಃ ಖಡ್ಗಂ ತ್ರಿಶೂಲಂ ಡಮರುಮಸಿಧನುಶ್ಚಂಡಬಾಣಂ
ಕುಠಾರಂ।
ಶಂಖಂ ಚಕ್ರಂ ಕೃಪಾಣಂ ಹಲಮಸಲಗದಾಭಿಂಡಿವಾಳಂ ಚ ಪಾಶಂ।
ಉದ್ಯದ್ಬಾಹುಂ ಚ ಮುಷ್ಟಿಂ ಹ್ಯಭಯವರಕರಂ ಬಿಭ್ರತಂ
ಶುಕ್ಲವರ್ಣಂ(।)
ವಂದೇ ರಾಮಂ ತ್ರಿನೇತ್ರಂ ತ್ವಮರರಿಪುಕುಲಂ ಮರ್ದಯಂತಂ
ಪ್ರತಾಪೈಃ।।
ಶುಕ್ಲವರ್ಣಃ।। '

ಮಂತ್ರಸಾರಗ್ರಂಥದಿಂದಲೇ ಎತ್ತಿಕೊಂಡಿರುವ ಈ ಧ್ಯಾನಶ್ಲೋಕವು ರಾಮನನ್ನು ವಿಚಿತ್ರವಾಗಿ ಕಲ್ಪಿಸಿಕೊಂಡಿದೆ. ಇಲ್ಲಿನ ರಾಮನಿಗೆ ಮೂರು ಕಣ್ಣುಗಳು. ಕತ್ತಿ, ತ್ರಿಶೂಲ, ಡಮರು, ಬಿಲ್ಲು, ಬಾಣ, ಕೊಡಲಿ, ಶಂಖ, ಚಕ್ರ, ತುಂಡುಗತ್ತಿ, ನೇಗಿಲು, ಒನಕೆ, ಗದೆ, ಬಿಂಡಿವಾಳ, ಪಾಶಗಳೆಂಬ ಆಯುಧಗಳನ್ನು ಹಿಡಿದ ಕೈಗಳು; ಇನ್ನೊಂದು ಕೈ ಮುಷ್ಟಿ; ಮತ್ತೆರಡು ಕೈಗಳು ಅಭಯವರದ ಮುದ್ರೆಯಲ್ಲಿ; ಮತ್ತೂ ಒಂದು ತೋಳನ್ನು ಎತ್ತಿದೆ(ಉದ್ಬಾಹು). ಒಟ್ಟು ಹದಿನೆಂಟು ಕೈಗಳು. ಮೈಬಣ್ಣ ಬಿಳಿ.




ಪ್ರತಾಪರಾಮ

(೨೪) ಪ್ರತಾಪರಾಮ -

'ದೋರ್ಭಿಃ ಖಡ್ಗಂ ತ್ರಿಶೂಲಂ ಡಮರುಮಸಿಧನುಶ್ಚಂಡಬಾಣಂ
ಕುಠಾರಂ।
ಶಂಖಂ ಚಕ್ರಂ ಕೃಪಾಣಂ ಹಲಮಸಲಗದಾಭಿಂಡಿವಾಳಂ ಚ ಪಾಶಂ।
ಉದ್ಯದ್ಬಾಹುಂ ಚ ಮುಷ್ಟಿಂ ಹ್ಯಭಯವರಕರಂ ಬಿಭ್ರತಂ
ಶುಕ್ಲವರ್ಣಂ(।)
ವಂದೇ ರಾಮಂ ತ್ರಿನೇತ್ರಂ ತ್ವಮರರಿಪುಕುಲಂ ಮರ್ದಯಂತಂ
ಪ್ರತಾಪೈಃ॥
ಶುಕ್ಲವರ್ಣಃ॥ '

ಮಂತ್ರಸಾರಗ್ರಂಥದಿಂದಲೇ ಎತ್ತಿಕೊಂಡಿರುವ ಈ ಧ್ಯಾನಶ್ಲೋಕವು ರಾಮನನ್ನು ವಿಚಿತ್ರವಾಗಿ ಕಲ್ಪಿಸಿಕೊಂಡಿದೆ. ಇಲ್ಲಿನ ರಾಮನಿಗೆ ಮೂರು ಕಣ್ಣುಗಳು. ಕತ್ತಿ, ತ್ರಿಶೂಲ, ಡಮರು, ಬಿಲ್ಲು, ಬಾಣ, ಕೊಡಲಿ, ಶಂಖ, ಚಕ್ರ, ತುಂಡುಗತ್ತಿ, ನೇಗಿಲು, ಒನಕೆ, ಗದೆ, ಬಿಂಡಿವಾಳ, ಪಾಶಗಳೆಂಬ ಆಯುಧಗಳನ್ನು ಹಿಡಿದ ಕೈಗಳು; ಇನ್ನೊಂದು ಕೈ ಮುಷ್ಟಿ; ಮತ್ತೆರಡು ಕೈಗಳು ಅಭಯವರದ ಮುದ್ರೆಯಲ್ಲಿ; ಮತ್ತೂ ಒಂದು ತೋಳನ್ನು ಎತ್ತಿದೆ(ಉದ್ಬಾಹು). ಒಟ್ಟು ಹದಿನೆಂಟು ಕೈಗಳು. ಮೈಬಣ್ಣ ಬಿಳಿ.




ಪ್ರತಾಪರಾಮ

(೨೫) ಸಪರಿವಾರ ಪಟ್ಟಾಭಿರಾಮ-

'ವಾಮೇ ಭೂಮಿಸುತಾ ಪುರಸ್ತು ಹನುಮಾನ್ಪಶ್ಚಾತ್ಸುಮಿತ್ರಾಸುತೋ
ಶತ್ರುಘ್ನೋ ಭರತಶ್ಚ ಪಾರ್ಶ್ವದಳಯೋರ್ವಾಯ್ವಾದಿಕೋಣೇಷು ಚ।
ಸುಗ್ರೀವಶ್ಚ ವಿಭೀಷಣಶ್ಚ ಯುವರಾಟ್ತಾರಾಸುತೋ ಜಾಂಬವಾನ್
ಮಧ್ಯೇ ನೀಲಸರೋಜಕೋಮಲ ರುಚಿಂ ರಾಮಂ ಭಜೇ ಶ್ಯಾಮಳಂ॥
ನೀಲವರ್ಣಃ॥

ರಾಮಾಷ್ಟೋತ್ತರವೆಂಬ ಗ್ರಂಥವನ್ನು ಪ್ರಸಿದ್ಧವಾದ ಈ ಧ್ಯಾನಶ್ಲೋಕಕ್ಕೆ ಆಕರವನ್ನಾಗಿ ಕಾಣಿಸಿದ್ದಾರೆ. ಇದು ಯಾವುದೆಂಬುದು ತಿಳಿಯುವುದಿಲ್ಲ. ರಾಮಾಷ್ಟೋತ್ತರಶತನಾಮಗಳೇನೋ ಹಲವಿವೆ. ಇಲ್ಲಿ ಬಂದಿರುವ ವರ್ಣನೆ ಸ್ಪಷ್ಟವಾಗಿಯೇ ಇದೆ.



ಸಪರಿವಾರ ಪಟ್ಟಾಭಿರಾಮ

(೨೬) ಅನಂತಮೂರ್ತಿ -

'ನವಾಮ್ರಪಲ್ಲವಾಭಾಸಂ ಪಿಂಗ ಭ್ರೂಶ್ಮಶ್ರುಲೋಚನಂ।
ದಕ್ಷಿಣೋರ್ಧ್ವಕರೇ ಪದ್ಮಂ ಶಂಖಂ ತಸ್ಯಾಪ್ಯಧಃಕರೇ । (II)
ಚಕ್ರಮೂರ್ಧ್ವಕರೇ ವಾಮೇ ಗದಾಂ ತಸ್ಯಾಪ್ಯಧಃಕರೇ ।
ಬಿಭ್ರತಂ ಪುಂಡರೀಕಾಕ್ಷಂ ಫಣಾಸಪ್ತಾನ್ವಿತಂ ಭಜೇII
ಗೋಮೂತ್ರವರ್ಣಃII '


ವಿಷ್ಣುವಿನ ಅನಂತರೂಪವು ಏಳು ಹೆಡೆಗಳಿಂದ ಕೂಡಿದ್ದು. ನಾಲ್ಕು ಕೈಗಳು: ಬಲಗಡೆ ಪರಹಸ್ತದಲ್ಲಿ ಪದ್ಮ, ನಿಜಹಸ್ತದಲ್ಲಿ ಶಂಖ; ಎಡಗಡೆ ಪರಹಸ್ತದಲ್ಲಿ ಚಕ್ರ, ನಿಜಹಸ್ತದಲ್ಲಿ ಗದೆ. ಎಳೆಯ ಮಾವಿನ ಚಿಗುರಿನಂತೆ ಹೊಳೆಯುವ ಮೈ; ಕೆಂಪಡರಿದ ಹುಬ್ಬು, ಮೀಸೆ, ಕಣ್ಣುಗಳು. ಮೈಬಣ್ಣ ಗೋಮೂತ್ರದಂತೆ. ಈ ಮೂರ್ತಿಲಕ್ಷಣವು ಭವಿಷ್ಯೋತ್ತರಪುರಾಣದ ಅನಂತಕಲ್ಪದಲ್ಲಿದೆ.

(೨೭) ಕೃಷ್ಣನ ರೂಪಗಳು

೧. ಗೋಪಾಲಕೃಷ್ಣ -

'ನೌಮೀಡ್ಯ(ಡ್ಯ) ತೇ(s)ಭ್ರವಪುಷೇ ತಟಿದಂಬರಾಯ
ಗುಂಜಾವತಂಸ ಶಿಖಿಪಿಂಛ(ಛ) ಲಸನ್ಮುಖಾಯ (ಲಸನ್ಮುಖಾಯ)
ವನ್ಯಸ್ರಜೇ ಕಬಳವೇತ್ರ ವಿಷಾಣವೇಣುಲಕ್ಷ್ಮಶ್ರಿಯೇ
ಮೃದುಪದೇ ಪಶುಪಾಂಗಜಾಯII
ನೀಲವರ್ಣಃII '

(ಭಾಗವತದ ಶ್ಲೋಕ. ಕೊಳಲನೂದುವ ಕೃಷ್ಣ; ಹಸುಗಳನ್ನೂ ಕಾಯುತ್ತಿರುವವನು)



ಗೋಪಾಲಕೃಷ್ಣ

೨. ಸಂತಾನಗೋಪಾಲ -

'ಪಿಬಂತಂ ಚ ಸ್ತನಂ ಮಾತುರ್ಮುಖಂ ಸಂವೀಕ್ಷ್ಯಸುಸ್ಮಿತಂ।
ಅಂಕುಳ್ಯಗ್ರೈಃ ಸ್ತನಂ ಚಾನ್ಯಂ ಸ್ಪೃಶಂತಂ ಚ ಮುಹುರ್ಮುಹುಃ।
ಯಶೋದಾಂಕಸ್ಥಿತಂ ರೂಪಂ ಧ್ಯಾಯೇತ್ಪುತ್ರದಂ ಸದಾ। (II)
ನೀಲವರ್ಣಃII '

(ಯಶೋದೆಯ ತೊಡೆಯ ಮೇಲೆ ಕುಳಿತು ಮೊಲೆಹಾಲನ್ನು ಕುಡಿಯುತ್ತಿರುವ ಹಸುಳೆ ತಾಯಿಯ ಮುಖವನ್ನು ನೋಡಿ ನಸುನಗುತ್ತಿರುವ ರೂಪ ಇದು. ಪಾಂಚರಾತ್ರಾಗಮದ ವರ್ಣನೆ)

೩. ಮದನಗೋಪಾಲ -

'ರಕ್ತವರ್ಣೋ ದಶಭುಜಃ ಸರ್ವಾಲಂಕಾರಭೂಷಿತಃ।
ಶಂಖಚಕ್ರಗದಾಪದ್ಮಪಾಶಾಂಕುಶಸುಮಾಶುಗಾನ್।
ಯಿ(ಇ)ಕ್ಷುಕೋದಂಡಮನ್ಯಾಭ್ಯಾಂ ವಾದಯನ್ವೇಣುಮಾದರಾತ್
ಷೋಡಶಚ್ಛದಪದ್ಮಸ್ಥ ಷಟ್ಕೋಣೋಪರಿಸಂಸ್ಥಿತಃ।
ಗೋಪಾಳೋ ಮದನಾಖ್ಯೋ(s)ಯಂ ಮಂದಸ್ಮಿತಮುಖಾಂಬುಜಃ।
ಸ್ವರಪತ್ರಸ್ಥ ಗೋಪೀಭಿರಾದರಾದೀಕ್ಷಿತೋ(s)ವತಾತ್II
ರಕ್ತವರ್ಣಃII '




ಮದನಗೋಪಾಲ

(ಪಾಂಚರಾತ್ರೋಕ್ತವಾದ ಈ ಕೃಷ್ಣರೂಪದ ಮೈಬಣ್ಣ ಕೆಂಪು. ಮನ್ಮಥನಂತೆ ಮೂರ್ತಿಲಕ್ಷಣವಿದ್ದರೂ ಕೊಳಲನ್ನೂದುತ್ತ ಗೋಪಿಯರನ್ನು ಆಕರ್ಷಿಸುತ್ತಿದ್ದಾನೆ. ಹತ್ತು ಕೈಗಳು; ಶಂಖ, ಚಕ್ರ, ಗದೆ, ಪದ್ಮಗಳು ವಿಷ್ಣುವಿನವು; ಪಾಶ, ಅಂಕುಶ, ಕಬ್ಬಿನ ಜಲ್ಲೆಯ ಬಿಲ್ಲು, ಹೂಬಾಣ ಇವು ಮನ್ಮಥನ ಚಿಹ್ನೆಗಳು; ಉಳಿದೆರಡು ಕೈಗಳಲ್ಲಿ ಕೊಳಲನ್ನು ಹಿಡಿದು ಊದುತ್ತಿದ್ದಾನೆ. ಷೋಡಶದಳಪದ್ಮದ ಮೇಲೆ ಷಟ್ಕೋಣಯಂತ್ರ; ಅದರ ಮೇಲೆ ಪದ್ಮಾಸನದಲ್ಲಿ ಕುಳಿತ ಮದನಗೋಪಾಲ).



ವೇಣುಗೋಪಾಲ



ಉಯ್ಯಾಲೆ ಕೃಷ್ಣ



ಕೃಷ್ಣ



ಕೃಷ್ಣ



ಸವಾರಿ ಕೃಷ್ಣ



ಸರ್ಪ ಕೃಷ್ಣ





ಕೃಷ್ಣ



ಸವನಾರೀಕುಂಜರ



ಪಾರ್ಥಸಾರಥಿ



ಮದನಗೋಪಾಲ

(೨೮) ವಿಷ್ಣುಪರಿವಾರ ದೇವತೆಗಳು

೧. ಸುದರ್ಶನ -

'ಶಂಖಂ ಚಕ್ರಂ ಪಾಶಂ ಪರಶುಮಸಿಮಿಷುಂ
ಶೂಲಚಾಪಾಂಕುಶಾಗ್ನಿಂ ಬಿಭ್ರಂತಂ ವಜ್ರಖೇಟಂ
ಹಲಮುಸಲಗದಾಕುಂತಮತ್ಯುಗ್ರದಂಷ್ಟ್ರಂ
ಜ್ವಾಲಾಕೇಶಂ ತ್ರಿನೇತ್ರಂ ಜ್ವಲದಲನನಿಭಂ
ಹಾರಕೇಯೂರಭೂಷಂ ಧ್ಯಾಯೇಚ್ಛಟ್ಕೋಣಸಂಸ್ಥಂ
ಸಕಲರಿಪುಜನಪ್ರಾಣಸಂಹಾರಚಕ್ರಂ (II)
ರಕ್ತವರ್ಣಃII '

(ಚಕ್ರದೇವತೆಯಾದ ಸುದರ್ಶನನು ಚಕ್ರದ ನಡುವೆ ಷಟ್ಕೋಣಯಂತ್ರದಲ್ಲಿ ನಿಂತಂತೆ, ಅಥವಾ ಸಾಗುತ್ತಿರುವಂತೆ ಕಲ್ಪಿಸಿಕೊಳ್ಳಲಾಗಿದೆ. ಹದಿನಾರು ಕೈಗಳು;ಶಂಖ, ಚಕ್ರ, ಪಾಶ, ಅಂಕುಶ, ಕೊಡಲಿ, ಕತ್ತಿ, ಗುರಾಣಿ, ಬಿಲ್ಲು, ಬಾಣ, ನೇಗಿಲು, ಒನಕೆ, ವಜ್ರಾಯುಧ, ಶೂಲ, ಅಗ್ನಿ, ಗದೆ, ಕುಂತಗಳನ್ನು ಹಿಡಿದಿದ್ದಾನೆ. ಉರಿಯುವ ಬೆಂಕಿಯಂತೆ ಮೈಬಣ್ಣ. ಉರಿಗಳೆ ಕೂದಲುಗಳು; ಮುಕ್ಕಣ್ಣ; ಬಾಯಲ್ಲಿ ಕೋರೆದಾಡೆಗಳು.)




ರಾಧಾ-ರುಕ್ಮಿಣೀ ಕೃಷ್ಣ




ಸುದರ್ಶನಮೂರ್ತಿ




ಸುದರ್ಶನ



ಚಕ್ರತ್ತಾಳ್ವಾರ್



ಸುದರ್ಶನ



ಸುದರ್ಶನ



ವಿಷ್ವಕ್ಸೇನ

೨. ವಿಷ್ವಕ್ಸೇನ -

'ಶ್ಯಾಮವರ್ಣಶ್ಚತುರ್ಭಿರ್ಭುಜೈಸ್ತರ್ಜನೀಶಂಖಚಕ್ರಗದಾ ದಧಾನಃ।
ಪೀಠಾದ(ಧ)ಸ್ತಾತ್ಪ್ರಸಾರಿತ ದಕ್ಷಿಣಪಾದಃ। ಆಕುಂಚಿತವಾಮಪಾದಃ।
ಕಿರೀಟಾದಿ ಸರ್ವಾಲಂಕಾರಭೂಷಿತೋ ವಿಷ್ವಕ್ಸೇನಃ। (॥)
ಶ್ಯಾಮವರ್ಣಃ॥ '

(ವಿಷ್ಣುವಿನ ಸೇನಾಧ್ಯಕ್ಷನಾದ ವಿಷ್ವಕ್ಸೇನನು ನೀಲಿಗಪ್ಪು ಮೈಬಣ್ಣದವನು. ನಾಲ್ಕು ಕೈಗಳು, ಮೇಲಿನ ಕೈಗಳಲ್ಲಿ ವಿಷ್ಣುವಿನಂತೆಯೇ ಶಂಖಚಕ್ರಗಳು, ಕೆಳಗಿನ ಕೈಗಳಲ್ಲಿ ಒಂದು ಗದೆಯನ್ನು ಹಿಡಿದಿದೆ, ಇನ್ನೊಂದು ತರ್ಜನೀಮುದ್ರೆಯನ್ನು ತೋರಿಸುತ್ತದೆ. ಪೀಠದ ಮೇಲೆ ಕುಳಿತ ಅವನ ಬಲಕಾಲು ಕೆಳಗೆ ಇಳಿಬಿದ್ದಿದೆ, ಎಡಗಾಲು ಪೀಠದ ಮೇಲೆ ಮಡಚಿದೆ. ಪಾದ್ಮಸಂಹಿತೆಯ ಮೂರ್ತಿಲಕ್ಷಣ ಇದು)

೩. ಹನುಮಂತ -

'ಸ್ಫಟಿಕಾಭಂ ಸ್ವರ್ಣಕಾಂತಿಂ ದ್ವಿಭುಜಂ ಕೃತಾಂಜಲಿಂ।
ಕುಂಡಲದ್ವಯಸಂಶೋಭಿ ಮುಖಾಂಬುಜಮಹಂ ಭಜೇ ।। (II)
ಸ್ವರ್ಣವರ್ಣಃII'

(ಹನೂಮನ್ಮಂತ್ರಧ್ಯಾನವೆಂಬ ಗ್ರಂಥ ಇದಕ್ಕೆ ಆಕರ. ಬಂಗಾರದ ಮೈಬಣ್ಣವಿರುವ ಭಕ್ತ ಹನುಮಂತನು ತನ್ನ ಎರಡು ಕೈಗಳನ್ನೂ ಅಂಜಲಿಬದ್ಧಮುದ್ರೆಯಲ್ಲಿರಿಸಿಕೊಂಡಿರುವನು. ಮೂರ್ತಿಲಕ್ಷಣದಲ್ಲಿ ಮುಖ್ಯವಾದುದು ಅವನ ಕರ್ಣಕುಂಡಲಗಳು)



ಹನುಮಂತ



ವೀಣಾಂಜನೇಯ

೪. ಪಂಚಮುಖಾಂಜನೇಯ -


'ಪಂಚವಕ್ತ್ರಂ ಮಹಾಭೀಮಂ ತ್ರಿಪಂಚನಯನೈರ್ಯುತಂ।
ಕೋಟಿ ಸೂರ್ಯಪ್ರತೀಕಾಶಂ ಕಪಿವಕ್ತ್ರಂ ಸುತೇಜಸಂ। (II)
ದಂಷ್ಟ್ರಾಕರಾಳವದನಂ ಭೃಕುಟೀಕುಟಿಲೇ ಕ್ಷಣಂ।
ಅಸ್ಯೈಕಂ ದಕ್ಷಿಣಂ ವಕ್ತ್ರಂ ನಾರಸಿಂಹಂ ಮಹಾದ್ಭುತಂ। (II)
ಅತ್ಯುಗ್ರತೇಜೋವಪುಷಂ ಭೀಷಣಂ ಭಯನಾಶನಂ।
ಪಶ್ಚಿಮೇಗಾರುಡಂ ವಕ್ತ್ರಂ ವಕ್ರತುಂಡಂ ಮಹಾದ್ಯುತಿಃ। (II)
ಪಾತಾಳಸಿದ್ಧಿದಂ ಘೋರಂ ವಿಷಭೂತಾದಿಕೃಂತನಂ।
ಉತ್ತರಂ ಸೌಕರಂ ವಕ್ತ್ರಂ ಕೃಷ್ಣಂ ದೀಪ್ತಂ ಶಿಖೋಜ್ವಲಂ। (II)
ಸರ್ವಭೂತಪ್ರಶಮನಂ ತಾಪಜ್ವರನಿವಾರಣಂ।
ಊರ್ಧ್ವಂ ಹಯಾನನಂ ಘೋರಂ ದಾನವಾಂತಕರಂ ಪರಂ। (II)
ಖಡ್ಗಂ ತ್ರಿಶೂಲ ಖಟ್ವಾಂಗ ಪಾಶಮಂಕುಶಪರ್ವತೌ।
ದ್ರುಮ ಗೋಮುದ್ರಿಕಾಮುಂಡಂ ದಧಾನಂ ಸುರವಂದಿತಂ। (II)
ಸ್ವರ್ಣವರ್ಣಃ॥ '



ಪಂಚಮುಖಿ ಆಂಜನೇಯ



(ಪಂಚಮುಖಿ ಹನುಮಂತನ ಮೂರ್ತಿಧ್ಯಾನವನ್ನು ಸುದರ್ಶನಸಂಹಿತೆಯಿಂದ ಆಯ್ದು ಕೊಳ್ಳಲಾಗಿದೆ. ಇದೊಂದು ತಾಂತ್ರಿಕರೂಪ. ಹನುಮಂತ, ನರಸಿಂಹ, ಗರುಡ, ವರಾಹ ಮತ್ತು ಹಯಗ್ರೀವ ಈ ಐದು ದೇವತೆಗಳ ಸಮಷ್ಟಿರೂಪ. ಹನುಮಂತನದು ದಂಷ್ಟ್ರಾಕರಾಳವಾದ ಮುಖ, ಹುಬ್ಬುಗಂಟಿಕ್ಕಿರುವ ಭಾವ. ನರಸಿಂಹನದಂತೂ ಭೀಷಣ, ಭಯಾನಕ, ಅತ್ಯುಗ್ರರೂಪ. ಗರುಡನು ಪಾತಾಳಸಿದ್ಧಿಯನ್ನೊದಗಿಸುವ ದೇವತೆ; ಘೋರವಾದ ವಿಷವನ್ನೂ ಪರಿಹರಿಸುವವನು. ವರಾಹನ ಕರಿಯ ಮೋರೆ ಎಲ್ಲ ಭೂತಗಳನ್ನೂ ಉಚ್ಚಾಟನೆಮಾಡುವಂಥದು, ಜ್ವರವನ್ನು ನೀಗಿಸುವಂಥದು. ನಾಲ್ಕು ಮುಖಗಳು ಒಂದು ಸಾಲಿನಲ್ಲೋ, ನಾಲ್ಕು ದಿಕ್ಕುಗಳಿಗೆ ಮುಖಮಾಡಿಯೋ ಇರುವುದು ವಾಡಿಕೆ. ಈ ಧ್ಯಾನಶ್ಲೋಕಗಳಲ್ಲಿ ಎದುರಿನ, ಎಂದರೆ ಪೂರ್ವದ, ಮುಖ ಹನುಮಂತನದು, ದಕ್ಷಿಣ ದಿಕ್ಕಿನಲ್ಲಿ ನರಸಿಂಹನ ಮುಖ, ಪಶ್ಚಿಮದಲ್ಲಿ ಗರುಡ, ಉತ್ತರದಲ್ಲಿ ವರಾಹ. ಹಯಗ್ರೀವ ಮೇಲೆ ಇರುವ ಮುಖ. ಅದು ಘೋರವಾದುದು, ಅಸುರರನ್ನು ಕೊಲ್ಲುವಂಥದು. ಈ ಹನುಮಂತನಿಗೆ ಹತ್ತು ಕೈಗಳು; ಖಡ್ಗ, ತ್ರಿಶೂಲ, ಖಟ್ವಾಂಗ, ಪಾಶ, ಅಂಕುಶ, ಪರ್ವತ, ಮರ, ಗೋಮುದ್ರಿಕೆ, ಕತ್ತರಿಸಿದ ತಲೆಗಳನ್ನು ಹಿಡಿದಿವೆ. ಬಂಗಾರದ ಮೈಬಣ್ಣ.)



'ಉಪೇಂದ್ರಸ್ಯಾಗ್ರತಃ ಪಕ್ಷೀ ಗುಡಾಕೇಶಃ ಕೃತಾಂಜಲಿಃ॥ (I)
ಸವ್ಯಜಾನುಕೃತೋ ಭೂಮೌ ಮೂರ್ಧ್ನಾ(ರ್) ಚ
ಫಣಿಮಂಡಿತಃ । (II)
ಸ್ಥೂಲಜಂಘೋ ನರಗ್ರೀವಸ್ತುಂಗನಾಸೋ ನರಾಂಗಕಃ।
ದ್ವಿಬಾಹುಃ ಪಕ್ಷಯುಕ್ತಶ್ಚ ಕರ್ತವ್ಯೋ ವಿನತಾಸುತಃ॥
ಸುವರ್ಣವರ್ಣಃ॥ '

(ವಿಷ್ಣುವಿನ ವಾಹನವಾದ ಗರುಡನು ಪಕ್ಷಿಯಾದರೂ ಪುರುಷಾಕಾರವುಳ್ಳವನು; ಗರುಡಪಕ್ಷಿಯಂತೆ ಉದ್ದವಾದ ಮೂಗು (ಕೊಕ್ಕು), ಎರಡೂ ಕಡೆಗಳಲ್ಲಿ ರೆಕ್ಕೆಗಳು. ಒಂದು ಕಾಲನ್ನು ಮಡಿಸಿ ಭೂಮಿಯ ಮೇಲಿರಿಸಿ ಮತ್ತೊಂದರ ಮಂಡಿಯನ್ನು ನೆಲಕ್ಕೆ ತಾಗಿಸಿ ಕಾಲನ್ನೆತ್ತಿರುವ ಭಂಗಿ; ಕೈಗಳೆರಡೂ ಬದ್ಧಾಂಜಲಿಮುದ್ರೆಯಲ್ಲಿವೆ. ತಲೆಯ ಮೇಲೆ ನಾಗದ ಹೆಡೆ. ಭಟ್ಟಭಾಸ್ಕರೀಯ್ಯ ಈ ವರ್ಣನೆಗೆ ಆಕರ.)



ಗರುಡ



ಗರುಡ

೬. ಶ್ರೀಕಾರ್ತವೀರ್ಯ -

'ಅವ್ಯಾತ್ಸರ್ವಭಯಾತ್ಪ್ರಭಾಕರನಿಭಃ।ಪ್ರದ್ಯೋತನದ್ಯೋತಿ
ತಸ್ಪರ್ಣಸ್ರಕ್ಪರಿ-
ವೀತಕಂಧರ ಧರೋ ರಕ್ತಾಂಶುಕೋ(s)ಷ್ಣೀಷವಾನ್ ಪ್ರಭುಃ॥
ರಕ್ತವರ್ಣಃ॥ '

'ಸಹಸ್ರಬಾಹುಂ ಸಶರಂ ಸಚಾಪಂ ರಕ್ತಾಂಬರಂ
ರತ್ನಕಿರೀಟಕುಂಡಲಂ
ಚೋರಾರಿದುಷ್ಪ್ರಭಯನಾಶನಮಿಷ್ಪದಂ
ತಂ ಧ್ಯಾಯೇನ್ಮಹಾಬಲವಿಜೃಂಭಿತ ಕಾರ್ತವೀರ್ಯಂ॥
ರಕ್ತವರ್ಣಃ॥ '



ಕಾರ್ತವೀರ್ಯ

(ಎರಡೂ ಧ್ಯಾನಶ್ಲೋಕಗಳು ಕಾರ್ತವೀರ್ಯಾರ್ಜುನನನ್ನು ಕುರಿತವು; ಮೊದಲನೆಯದನ್ನು ಉಡ್ಡಾಮರತಂತ್ರದಿಂದಲೂ ಎರಡನೆಯದನ್ನು ಕಾರ್ತವೀರ್ಯಾರ್ಜುನಕಲ್ಪವೆಂಬ ಗ್ರಂಥದಿಂದಲೂ ಎತ್ತಿಕೊಳ್ಳಲಾಗಿದೆ. ಮಾಹಿಷ್ಮತಿಯಲ್ಲಿ ಆಳುತ್ತಿದ್ದ ಹೈಹಯವಂಶದ ರಾಜ ಕೃತವೀರ್ಯನ ಮಗ ಇವನು; ಇವನನ್ನು ವಿಷ್ಣುವಿನ ಅವತಾರವೆಂದೋ (ಅವತೀರ್ಣೋ ಹರಿಃ ಸಾಕ್ಷಾತ್), ವಿಷ್ಣುಚಕ್ರದ ಅವತಾರವೆಂದೋ (ಚಕ್ರಾವತಾರೋ ಹರೇಃ) ಕಲ್ಪನೆ. ದತ್ತಾತ್ರೇಯನಿಗೆ ಪ್ರಿಯನಾದವನು, ರಾವಣನ ಗರ್ವವನ್ನು ಭಂಗಮಾಡಿದವನು, 'ಕ್ರೂರಾಕಾರಪ್ರದೀಪ್ತ',




ಕಾರ್ತವೀರ್ಯ

'ಮಹಾಬಲವಿಜೃಂಭಿತ', ಒಂದು ಸಾವಿರ ಕೈಗಳುಳ್ಳವನು ಎಂದೆಲ್ಲ ವರ್ಣನೆಗಳಿವೆ. ಬಂಗಾರದ ಮಾಲೆಗಳನ್ನೂ ರತ್ನಕಿರೀಟವನ್ನೂ, ಕೆಂಪುಬಣ್ಣದ ಬಟ್ಟೆಗಳನ್ನೂ, ತಲೆಯ ಮೇಲೆ ಉಷ್ಣೀಷವನ್ನೂ ಧರಿಸಿದವನು. ಒಂದು ಸಾವಿರ ಕೈಗಳಲ್ಲಿ ಖಡ್ಗ, ಪಾಶ, ಚಕ್ರ, ಮುಸಲ, ಅಂಕುಶ ಮೊದಲಾದ ಆಯುಧಗಳನ್ನು ಹಿಡಿದವನೆಂದು ಪ್ರಪಂಚಸಾರಸಂಗ್ರಹದ ಒಕ್ಕಣೆಯಿದೆ. ಆದರೆ ಮೇಲಿನ ವರ್ಣನೆಯಿಂದ ಐನೂರು ಕೈಗಳಲ್ಲಿ ಬಿಲ್ಲುಗಳನ್ನೂ ಐನೂರು ಕೈಗಳಲ್ಲಿ ಬಾಣಗಳನ್ನೂ ಹಿಡಿದಂತೆ ಕಾಣುತ್ತದೆ. ಕಳೆದುಹೋದ ವಸ್ತುಗಳನ್ನು ಮರಳಿ ಪಡೆಯುವುದಕ್ಕೂ ಕಳ್ಳಕಾಕರರ ಭಯದಿಂದ ಕಾಪಾಡುವುದಕ್ಕೂ ಈ ದೇವತೆಯ ಆರಾಧನೆಯನ್ನು ಮಾಡುವ ವಾಡಿಕೆಯಿದ್ದಿತು.)

೭. ಮನ್ಮಥ -

'ಕಾಮದೇವಸ್ತು ಕರ್ತವ್ಯೋ ರೂಪೇಣಾಪ್ರತಿಮಾ ಭುವಿ।
ಅಷ್ಟಬಾಹುಃ ಪ್ರಕರ್ತವ್ಯೋ ಶಂಖಪದ್ಮವಿಭೂಷಿತಃ। (II)
ಚಾಪಬಾಣಕರಶ್ಚೈವ ಮದೋದಂಚಿತಲೋಚನಃ।
ರತಿಃ ಪ್ರೀತಿಸ್ತಥಾ ಶಕ್ತಿರ್ಭೇದಶಕ್ತಿಸ್ತಥೋಜ್ವಲಾ। (II)
ಚತಸ್ರಸ್ತಸ್ಯ ಕರ್ತವ್ಯಾಃ ಪತ್ನ್ಯೋ ರೂಪಮನೋಹರಾಃ।
ಚತ್ವಾರಶ್ಚ ಕರಾಸ್ತಸ್ಯ ಕಾರ್ಯಾ ಭಾರ್ಯಾಸ್ತನೋಪಗಾಃ॥
ಕೇತೌ ತು ಮಕರಃ ಕಾರ್ಯಃ ಪಂಚಬಾಣಧರೋ ಮಹಾನ್॥
ಕಾಮಂ ಕಾಂಚನಸನ್ನಿಭಮಿತಿ ಶೈವಾಗಮೇ॥
ಸ್ವರ್ಣವರ್ಣಃ॥ '

(ಮನ್ಮಥನು ಕೃಷ್ಣನ ಮಗನೆಂದು ಪ್ರಸಿದ್ಧನಾದರೂ ವಿಷ್ಣುವಿನ ಅವತಾರಭೇದವೆಂಬ ಕಲ್ಪನೆಯೂ ಇದೆ. ಸುಂದರರೂಪ, ಆಕರ್ಷಕಮೂರ್ತಿ; ಮದೋನ್ಮತ್ತನಾದಂತೆ ಕಾಣಿಸಬೇಕು. ಎಂಟು ಕೈಗಳು; ಶಂಖ, ಪದ್ಮ, ಬಿಲ್ಲು, ಬಾಣಗಳನ್ನು ಹಿಡಿದಂತೆ ನಾಲ್ಕುಕೈಗಳು, ಉಳಿದ ನಾಲ್ಕು ಕೈಗಳು ನಾಲ್ವರು ಪ್ರಿಯೆಯರ ಸ್ತನಗಳನ್ನು ಹಿಡಿದಂತೆ. ರತಿ, ಪ್ರೀತಿ, ಶಕ್ತಿ, ಭೇದಶಕ್ತಿ, ಎಂಬುವರೇ ಅವನ ನಾಲ್ವರು ಪತ್ನಿಯರು, ಸುಂದರಿಯರು. ಅವನ ಧ್ವಜ ಮಕರಲಾಂಛನ. ಮೈಬಣ್ಣ ಬಂಗಾರದ್ದು. ಭಟ್ಟಭಾಸ್ಕರೀಯದಲ್ಲಿನ ಶ್ಲೋಕಗಳು.)



ವಿಷ್ಣುವಿನ ಮಗ ಮನ್ಮಥ

೮. ದತ್ತಾತ್ರೇಯ -

'ಮಂದಾರಮೂಲೇ ಮಣಿಮಂಟಪಸ್ಥಿತಂ
ಸುವರ್ಣದಾನೈಕನಿಬದ್ಧದೀಕ್ಷಂ
ಧ್ಯಾಯೇತ್ಪರೀತಂ ನವನಾಥಸಿದ್ಧೈಃ
ದಾರಿದ್ರ್ಯದಾವಾನಲ ಕಾಲಮೇಘಃ॥
ವ್ಯಾಖ್ಯಾಂ ಕರಸರಸಿಜೇ ದಕ್ಷಿಣೇ ಸಂದಧಾನೋ
ಜಾನು ನ್ಯಸ್ತಾವರಕರಸರೋಜಾತವಾಮೋನ್ನತಾಂಸಃ।
ಧ್ಯಾನಾಧಾರಾತ್ಸುಖಪರವಶಾದರ್ಧಮಾಮೀಲಿತಾಕ್ಷೋ
ದತ್ತಾತ್ರೇಯೋ ಭಸಿತದ್ಧ(ಧ)ವಳಃ ಪಾತು ನಃ ಕೃತ್ತಿವಾಸಾಃ। (॥)
ಶ್ವೇತವರ್ಣಃ॥ '

(ದತ್ತಾತ್ರೇಯನು ಅತ್ರಿ-ಅನಸೂಯೆಯರ ಮಗನಾಗಿ ತ್ರಿಮೂರ್ತಿಗಳ ಸ್ವರೂಪನೆಂದೂ, ನಾಥ-ಯೋಗಿ-ಸಿದ್ಧಪಂಥಗಳ ಆದ್ಯಪ್ರವರ್ತಕನೆಂದೂ, ಮುನಿಯೆಂದೂ ಹೆಸರಾಗಿದ್ದಾನೆ. ಅವನ ಮೂರ್ತಿ ಲಕ್ಷಣದಲ್ಲಿ ಸಾಮಾನ್ಯವಾಗಿ ಮೂರು ಮುಖಗಳು, ಆರು ಕೈಗಳಿದ್ದು ಬ್ರಹ್ಮ-ವಿಷ್ಣು-ಮಹೇಶ್ವರರ ಸಮಷ್ಟಿಚಿತ್ರಣವಿರುತ್ತದೆ. ಆದರೆ ದತ್ತಾತ್ರೇಯಕಲ್ಪದಿಂದ ಎತ್ತಿಕೊಂಡಿರುವ ಮೇಲಿನ ಶ್ಲೋಕಗಳಲ್ಲಿ ಇದು



ದತ್ತಾತ್ರೇಯ ಮೂರ್ತಿ



'ನೂರೆಂಟು ದಿವ್ಯದೇಶದ ವಟ್ಟು ಶ್ಲೋಕ'

ಎಂದು ಆರಂಭಿಸಿ ತೊಂಡೀರ ದೇಶದಲ್ಲಿ ೨೩, ಚೋಳಮಂಡಲದಲ್ಲಿ ೪೨, ಪಾಂಡ್ಯದೇಶದಲ್ಲಿ ೧೪, ಕೇರಳದಲ್ಲಿ ೧೩, ಉತ್ತರಭಾರತದಲ್ಲಿ ೧೨, ಹೀಗೆ ನೂರೆಂಟು 'ತಿರುಪತಿ ದಿವ್ಯದೇಶ'ಗಳನ್ನು ಎಣಿಸಿ, ಅಲ್ಲಲ್ಲಿಯ ಅರ್ಚಾಮೂರ್ತಿಗಳ ಹೆಸರುಗಳನ್ನೂ ಕೊಟ್ಟಿದ್ದಾರೆ. ಈ ಸಂಸ್ಕೃತ ಶ್ಲೋಕಗಳಾದ ಮೇಲೆ 'ಅಷ್ಟೋತ್ತರಶತ ತಿರುಪತಿ ದಿವ್ಯದೇಶಗಳು ಸಹಾ॥' ಎಂದು ಕನ್ನಡದಲ್ಲಿಯೇ ಕ್ಷೇತ್ರದ ಹೆಸರು, ಅಲ್ಲಿನ ದೇವಿ, ಅಲ್ಲಿನ ಗುಡಿಯ ವಿಮಾನ, ಅಲ್ಲಿರುವ ತೀರ್ಥ, ಗುಡಿ ಯಾವ ಮುಖವಾಗಿದೆ, ಯಾರಿಗೆ ಪ್ರತ್ಯಕ್ಷವಾದದ್ದು ಎಂಬ ವಿವರಗಳನ್ನು ಕೊಟ್ಟಿದ್ದಾರೆ. ನಿದರ್ಶನಕ್ಕೆ -

'ತಿರುಪತಿ।ವೆಂಕಟರಮಣದೇವರು।ಅಲಮೇಲು ಮಂಗಾದೇವಿ।
ಆನಂದನಿಲಯವಿಮಾನ।ಸ್ವಾಮಿಪುಷ್ಕರಿಣೀತೀರ್ಥ।ಪೂರ್ವಮುಖ
ನಿಂತ ಸೇವೆ।
ತೊಂಡಮಾನನಿಗೆ ಪ್ರತ್ಯಕ್ಷ॥೧೩॥

ಕಾಣುವುದಿಲ್ಲ. ಮಂದಾರವೃಕ್ಷದಡಿಯಲ್ಲಿರುವ ಮಣಿಮಂಟಪದಲ್ಲಿ ಕುಳಿತು, ಬಡತನವೆಂಬ ಕಾಡ್ಗಿಚ್ಚನ್ನು ತಣಿಸುವ ಕಾರ್ಮೋಡದಂತೆ, ಬೇಡಿದವರಿಗೆ ಬಂಗಾರವನ್ನು ನೀಡುವಂತೆ ಕಲ್ಪಿಸಿಕೊಳ್ಳಲಾಗಿದೆ. ಎರಡು ಕೈಗಳು; ಬಲಗೈಯಲ್ಲಿ ವ್ಯಾಖ್ಯಾನಮುದ್ರೆ, ಎಡಗೈ ಮಂಡಿಯಮೇಲೆ. ಧ್ಯಾನಸುಖದಲ್ಲಿರುವ ಭಂಗಿ.)

ಇಲ್ಲಿಗೆ ಶ್ರೀತತ್ತ್ವನಿಧಿಯ ಎರಡನೆಯದಾದ ವಿಷ್ಣುನಿಧಿಯು ಮುಗಿಯುತ್ತದೆ. ಹಿಂದಿನ ನಿಧಿಯ ಕಡೆಯಲ್ಲಿ ಬಂದಂತೆಯೇ ಗ್ರಂಥಕಾರಪ್ರಶಸ್ತಿಯನ್ನೊಳಗೊಂಡ ಪುಷ್ಪಿಕೆಯೂ ಬರುತ್ತದೆ. ಹಿಂದೆ ಹೇಳಿದಂತೆ, ವಿಷ್ಣುನಿಧಿಯ ವಸ್ತು ಮುಂದರಿಯುವುದು ಆರನೆಯ ವೈಷ್ಣವನಿಧಿಯಲ್ಲಿ. ಈ ನಿಧಿಯಲ್ಲಿ ಬರುವ ವಿವರಗಳನ್ನು ಆಗಲೇ ಸೂಚಿಸಿದ್ದೇನೆ. ಆದರೂ ಈ ನಿಧಿಯ ಸ್ಥೂಲವಾದ ಸಮಗ್ರಪರಿಚಯವನ್ನೂ ಮಾಡಿಕೊಡುವುದು ಉಚಿತವೆನಿಸುತ್ತದೆ.

ಈ ನಿಧಿಯು ಆರಂಭವಾಗುವುದು ಈ ಒಕ್ಕಣೆಯಿಂದ -

'ಶ್ರೀಕೃಷ್ಣರಾಜ ಮಹಾರಾಜ ಕಂಠೀರವ ವಿರಚಿತ
ಶ್ರೀತತ್ತ್ವನಿಧ್ಯಾಖ್ಯಗ್ರಂಥಾಂತ
ರ್ವರ್ತಿ ಷಷ್ಠೋ ವೈಷ್ಣವನಿಧಿಃ ಪ್ರಾರಭ್ಯತೇ '

ಅನಂತರ 'ಅಥ ಷೋಡಶೋತ್ತರ ಶತದಿವ್ಯಸ್ಥಲಾನಿ ಬ್ರಹ್ಮಾಂಡಪುರಾಣೇ ಲಕ್ಷ್ಮೀನಾರಾಯಣಸಂವಾದೇ' ಎಂದು ಮೊದಲುಮಾಡಿ ಒಂದು ನೂರು ಹದಿನಾರು ವಿಷ್ಣುಸ್ಥಾನಗಳನ್ನು ಪಟ್ಟಿಮಾಡಿದ್ದಾರೆ. ಮೊದಲ ಎಂಟು ಸ್ಥಳಗಳು ವಾಸುದೇವನಿರುವ ವೈಕುಂಠ, ಸಂಕರ್ಷಣನಿರುವ ಆಮೋದ, ಇತ್ಯಾದಿ. ಅನಂತರ




ದತ್ತಾತ್ರೇಯ



ವೆಂಕಟಾಚಲಸ್ವಾಮಿ



ವೆಂಕಟರಾಯಸ್ವಾಮಿ



ಚೆಲುವನಾರಾಯಣಸ್ವಾಮಿ




ಸಾರಂಗಪಾಣಿ (ಶಾರ್ಙ್ಗಪಾಣಿ) ದೇವರು



ರಂಗನಾಥ



ರಾಜಮನ್ನಾರು ಕೃಷ್ಣ



ರಾಮಾನುಜಾಚಾರ್ಯರು



ನಮ್ಮಾಳ್ವಾರ್

ಒಂದುನೂರು ಹದಿನಾರು ವಿಷ್ಣುಸ್ಥಾನಗಳಾದ ಮೇಲೆ -


'ಮೇಲುಕೋಟೆ।ತಿರುನಾರಾಯಣಪುರಂ।ರಾಮಪ್ರಿಯ ನಾರಾಯಣ ದೇವರು।ಯದುಗಿರಿದೇವಿ।ಆನಂದನಿಲಯವಿಮಾನ।ಯದುಗಿರಿ ಪರ್ವತ ತಿರುಕ್ಕಲ್ಯಾಣೀ ತೀರ್ಥ।ಪೂರ್ವಮುಖ ನಿಂತ ಭಾವ। ಶ್ರೀದೇವಿ ಭಾಷ್ಯಕಾರರಿಗೆ ರಾಜವಡೆಯರಿಗೆ ಸಹ ಪ್ರತ್ಯಕ್ಷ।। '

ಎಂಬುದನ್ನು ೧೧೭ನೆಯದಾಗಿ ಸೇರಿಸಿದ್ದಾರೆ. ಇವುಗಳಲ್ಲಿ ಶ್ರೀರಂಗ, ಶ್ರೀಮುಷ್ಣ, ವೆಂಕಟಾದ್ರಿ (ತಿರುಪತಿ), ಸಾಲಿಗ್ರಾಮ (ಗಂಡಕೀ), ನೈಮಿಷ, ತೋತಾದ್ರಿ, ಪುಷ್ಕರ, ನರನಾರಾಯಣಾಶ್ರಮ (ಬದರಿ) ಇವು ಎಂಟು ಸ್ವಯಂವ್ಯಕ್ತ ಕ್ಷೇತ್ರಗಳಂತೆ. 'ದಿವ್ಯದೇಶಚತುಷ್ಪಯ ಶ್ಲೋಕ'ವನ್ನು ಭಾಷ್ಯಕಾರೋಕ್ತವೆಂದು ಉದ್ಧರಿಸಿಕೊಂಡಿದ್ದಾರೆ–ಶ್ರೀರಂಗ, ವೆಂಕಟಾದ್ರಿ (ತಿರುಪತಿ), ಶ್ರೀಹಸ್ತಿಶೈಲ (ಕಾಂಚೀಪುರ) ಮತ್ತು ಯದುಶೈಲ (ಮೇಲುಕೋಟೆ). ಮುಂದೆ ಪ್ರಪತ್ತಿಸೋಪಾನವೆಂಬ ಪ್ರಕರಣಗ್ರಂಥದ ಇಪ್ಪತ್ತುಮೂರು ಶ್ಲೋಕಗಳನ್ನು ಕೊಟ್ಟಿದ್ದಾರೆ. ಮಹೋಪನಿಷತ್ತು, ಸಚ್ಚರಿತ್ರರಕ್ಷಾ, ಪಾದ್ಮೋತ್ತರ ಖಂಡ, ಪಾಂಚರಾತ್ರ ವೈಕುಂಠ ದೀಕ್ಷಿತೀಯ್ಯ ಧರ್ಮಶಾಸ್ತ್ರದ ಆಚಾರಖಂಡ, ಮೊದಲಾದ ಗ್ರಂಥಗಳಿಂದ ವೈಷ್ಣವರು ದ್ವಾದಶನಾಮಗಳನ್ನು ಧರಿಸುವ ವಿಧಾನ, ತಿರುಮಣ್ಣು, ಧರಿಸುವ ಅಂಗಾಂಗಗಳು, ಹೇಳುವ ಮಂತ್ರಗಳು, ಅಭಿಮಾನಿದೇವತೆಗಳು ಇತ್ಯಾದಿ ವಿವರಗಳು ಸೇರಿವೆ.

ಇದರನಂತರ ಪದ್ಮಪುರಾಣದಿಂದ ತುಳಸೀಮಾಹಾತ್ಮ್ಯೆಯ ಪೂರ್ಣಪಾಠ ಬಂದಿದೆ. ಮುಂದೆ ಭಾಷ್ಯಕಾರಾವತಾರ ಶ್ಲೋಕವೆಂದು ರಾಮಾನುಜಾಚಾರ್ಯರ ಜನ್ಮದಿನದ ಪ್ರಸ್ತಾಪವಿದೆ.

ರಾಮಾನುಜಾಚಾರ್ಯರನ್ನು ಕುರಿತ ಅಷ್ಟೋತ್ತರಶತನಾಮಗಳನ್ನು ಶ್ಲೋಕರೂಪದಲ್ಲಿ ಪಟ್ಟಿಮಾಡಿ ಅವರ ಬದುಕಿನ ಸಾಧನೆಗಳನ್ನು ತಿಳಿಯಹೇಳಿದ್ದಾರೆ. ಅನಂತರ ಅವರನ್ನೇ ಅಧಿಕರಿಸಿ ವೇದಾಂತ ದೇಶಿಕರು ರಚಿಸಿರುವ 'ಯತಿರಾಜ ಸಪ್ತತಿ'ಯ ಸಂಪೂರ್ಣಪಾಠ (೭೪ ಶ್ಲೋಕಗಳು) ಅಡಕವಾಗಿದೆ. ಇದಾದ ಮೇಲೆ 'ಹಂನೆರಡಾಳ್ವಾರು' ಎಂದು ಕನ್ನಡದಲ್ಲಿ ಕಾಣಿಸಿ ಆಳ್ವಾರರ ತಮಿಳು ಹೆಸರು, ಸಂಸ್ಕೃತ ಹೆಸರು, ಭಂಗಿ, ಮುದ್ರೆ, ಮೂರ್ತಿಲಕ್ಷಣಗಳನ್ನು ಸಂಸ್ಕೃತ ಕನ್ನಡ ಎರಡನ್ನೂ ಬೆರೆಸಿ ಕೊಟ್ಟನಂತರ ಮತ್ತೆ ರಾಮಾನುಜರ, ಕೂರತ್ತಾಳ್ವಾರರ, ಪಿಳ್ಳೆಲೋಕಾಚಾರ್ಯರ ಮೂರ್ತಿಲಕ್ಷಣಗಳನ್ನು ಕೊಟ್ಟಿದ್ದಾರೆ.

ಅನಂತರ 'ವೈಷ್ಣಾ(ಖಾ)ನಸಾಗಮರೀತ್ಯಾ' ವಿಷ್ಣುವಿನ ಪಂಚಬೇರಮೂರ್ತಿಗಳ ಹೆಸರುಗಳನ್ನೂ ಉಪಯೋಗಗಳನ್ನೂ ಕೊಡುವಾಗ ಭೃಗುಸಂಹಿತೆಯನ್ನವಲಂಬಿಸಿದ್ದಾರೆ. ಗ್ರಾಮರಕ್ಷಾರ್ಥವಾಗಿ ಧ್ರುವ, ಅರ್ಚನಾರ್ಥವಾಗಿ ಕೌತುಕ, ಸ್ನಪನಾರ್ಥವಾಗಿ ಸ್ನಪನ, ಉತ್ಸವಾರ್ಥವಾಗಿ ಉತ್ಸವ ಮತ್ತು ಬಲ್ಯರ್ಥವಾಗಿ ಬಲಿ ಹೀಗೆ ಪಂಚಬೇರಗಳು. ಮುಂದೆ ಸಾಲಿಗ್ರಾಮಗಳನ್ನು ಕುರಿತ ವಿವರಗಳು.



ನಾರಸಿಂಹ



ಕಪಿಲಮಹಾಮುನಿ



ಕೃಷ್ಣ



ಏಕಾಂತ ರಾಮ



ಸೀತಾರಾಮ



ಯೋಗಾನಾರಸಿಂಹ



ವಿನೋದ ಕೃಷ್ಣ



ಶ್ರೀ ಕೃಷ್ಣ

(೧) ಸಾಲಿಗ್ರಾಮಗಳ ಉತ್ಪತ್ತಿ

ನರಸಿಂಹಪುರಾಣದಲ್ಲಿ ಬ್ರಹ್ಮನಾರದಸಂವಾದದಿಂದ ಈ ಭಾಗವನ್ನು ಎತ್ತಿಕೊಂಡಿದ್ದಾರೆ. ನಾರದನು ಕೇಳುತ್ತಾನೆ - 'ಸಾಲಿಗ್ರಾಮದ ಲಕ್ಷಣವನ್ನೂ ಉತ್ಪತ್ತಿಯನ್ನೂ ವರ್ಣ ಮುಂತಾದ ವಿವರಗಳನ್ನೂ, ಮೂರ್ತಿಭೇದವನ್ನೂ ಅರ್ಚನಾಯೋಗ್ಯತ್ವವನ್ನೂ ತಿಳಿಯಹೇಳು' ಎಂದು. ಬ್ರಹ್ಮನು ಈ ವಿವರಗಳನ್ನು ಕುರಿತು ಹೇಳತೊಡಗುತ್ತಾನೆ.

ಅವಂತಿಕೆಯೆಂಬ ದೇಶದಲ್ಲಿ ಸಾಲಿಗ್ರಾಮವೆಂಬ ಕ್ಷೇತ್ರ; ಅಲ್ಲಿಯೇ ಗಂಡಕೀನದಿ ಹರಿಯುತ್ತದೆ. ಅಲ್ಲಿ ಹರಿಪರ್ವತವೆಂಬ ಬೆಟ್ಟದ ಬುಡದಲ್ಲಿ ಚಕ್ರತೀರ್ಥವೆಂಬ ಸರಸ್ಸು. ಅಲ್ಲಿಯೇ ವಿಷ್ಣುವು ಶ್ರೀದೇವಿ, ಭೂದೇವಿಯರೊಡಗೂಡಿ ವಾಸಿಸುವನು. ಅಲ್ಲಿರುವ ಬಂಡೆಗಳೊಳಗೆ ಸಾಲಿಗ್ರಾಮಶಿಲೆಗಳು ಪುಣ್ಯಕಾಲಗಳಲ್ಲಿ ಕಾಣಿಸಿಕೊಳ್ಳುತ್ತವೆ.

'ತಚ್ಛಿಲಾಸು ಚ ಸರ್ವಾಸು ಹರಿಕ್ಷೇತ್ರಗತಾಸು ಚ।
ಶೀತವಾತವಿನಿರ್ಮುಕ್ತೇ ಶೈಲಗರ್ಭೇ ಮುನೀಶ್ವರ। (II)
ಸರ್ವಲಕ್ಷಣಸಂಯುಕ್ತಾ ಸಾಲಿಗ್ರಾಮಶಿಲಾ ಭವೇತ್।
ಸಾಕ್ಷಾಲ್ಲಕ್ಷ್ಮೀಪತೇರ್ವಿಷ್ಣೋಃ ಪ್ರಸಾದಾತ್ಪರಮೇಷ್ಠಿ(ಷ್ಠಿ)ನಃ। (II)
ಉತ್ಪತ್ತಿಸ್ತಚ್ಛಿಲಾಯಾಸ್ತು ಪುಣ್ಯಕಾಲೇಷು ವಿದ್ಯತೇ।
ಪಶ್ಚಾತ್ಸಹಸ್ರವರ್ಷಾಣಾಂ ಸಾಲಿಗ್ರಾಮಸ್ಯ ಚಕ್ರತಃ॥
ವಜ್ರಕೀಟ ಇತಿ ಖ್ಯಾತೋ ಜಂತುರ್ಭೂತ್ವಾ ಹರಿಃ ಸ್ವಯಂ।
ಹಿರಣ್ಮಯೋ ಮಹಾವೀರ್ಯೋ ವಿದ್ಯುಲ್ಲೇಖಾಸಮಪ್ರಭಃ॥
ಸಾಲಿಗ್ರಾಮಶಿಲಾಗರ್ಭಮಾಸಾದ್ಯ ಕಳನಿಃಸ್ವನಃ।
ತತ್ರಸ್ಥ ಚಕ್ರಚಿಹ್ನಾನಿ ಮುಖೇನ ಕುರುತೇ ಮುನೇ॥
ನಾನಾವಿಧಾನಿ ಚಕ್ರಾಣಿ ನಾನಾರೂಪಾಣಿ ಲೀಲಯಾ।
ಅಂತರ್ದಧಾತಿ ತತ್ರೈವ ಬಹುಕಾಲಾದನಂತರಂ। (II)
ಸಾನ್ನಿಧ್ಯಂ ಕುರುತೇ ತತ್ರ ಸಾಕ್ಷಾಲ(ಲ್ಲ)ಕ್ಷ್ಮೀಪತಿಸ್ಸದ್ಯಾ(ದಾ) ।
ತದಾಲೋಕನಮಾತ್ರೇಣ ಸರ್ವಪಾಪಕ್ಷಯೋಭವೇತ್। (II)

ಸಾವಿರಾರು ವರ್ಷಗಳು ಕಳೆದ ಮೇಲೆ ವಿಷ್ಣುವು ವಜ್ರಕೀಟವಾಗಿ ಆ ಶಿಲೆಗಳೊಳಗೆ ಹೊಕ್ಕು ಅದರಲ್ಲೆಲ್ಲ ದೈವೀಕಳೆಯನ್ನು ತುಂಬಿದನು. ಅವುಗಳಲ್ಲಿ ವಿಷ್ಣುಸನ್ನಿಧಿಯನ್ನು ಸೂಚಿಸಲು ಚಕ್ರಗಳು ಕಾಣಿಸಿಕೊಂಡುವು; ಹಲವು ಬಗೆಗಳಲ್ಲಿ ವಿಷ್ಣುವಿನ ಸಾನ್ನಿಧ್ಯ ಈ ಶಿಲೆಗಳಲ್ಲಾಯಿತು. ಇದೇ ಸಾಲಿಗ್ರಾಮದ ಉತ್ಪತ್ತಿ. ಅವನ್ನು ನೋಡಿದಮಾತ್ರದಿಂದಲೇ ನಮ್ಮ ಪಾಪಗಳು ಹೇಳಹೆಸರಿಲ್ಲದೆ ತೊಲಗಿಹೋಗುತ್ತವೆ.

(೨) ಸಾಲಿಗ್ರಾಮದಲ್ಲಿ ಬಣ್ಣಗಳ ಭೇದ

'ಶ್ವೇತಾ ಪೀತಾ ತಥಾ ರಕ್ತಾ ಕೃಷ್ಣಾ ಶಾದ್ವಲಸನ್ನಿಭಾ।
ಕಪಿಲಾ ಚ ತಥಾ ಧೂಮ್ರಾ ಕಳಂಕಾ ಬಹುವರ್ಣಿನೀ। (II)

ಅತಿವರ್ಣಾ(ರ್ಣಾ) ವಿವರ್ಣಾ(ರ್ಣಾ) ಚ ತಥಾ ಸಂದಿಗ್ಧವರ್ಣಿನೀ।
ಎ(ಏ)ವಂವಿಧೈಸ್ತಥಾ ವರ್ಣೈ ರೂಪೈರ್ನಾನಾವಿಧಾ ಶಿಲಾ। (II) '

ಸಾಲಿಗ್ರಾಮಶಿಲೆಗಳು ಅನೇಕ ವಿಧವಾಗಿರುತ್ತವೆ. ಆಕಾರಗಳಲ್ಲಿಯೂ ಬಣ್ಣಗಳಲ್ಲಿಯೂ ಹಲವಾರು ಬಗೆಗಳು. ಬಣ್ಣಗಳಲ್ಲಿ ಬಿಳಿ, ಹಳದಿ, ಕೆಂಪು, ಕಪ್ಪು, ಹಸಿರು, ಕಂದು, ಬೂದಿ ಬಣ್ಣಗಳಿರುತ್ತವೆ. ಕೆಲವು ಶಿಲೆಗಳಲ್ಲಿ ಕೊಳೆಯಿರುವಂತೆ ಕಾಣುತ್ತದೆ; ಅನೇಕ ಬಣ್ಣಗಳು ಒಂದೇ ಶಿಲೆಯಲ್ಲಿರುವುದೂ, ಬಣ್ಣಗಳು ಹೆಚ್ಚಿರುವುದೂ ಮಾಸಲಾಗಿರುವುದೂ, ಯಾವ ಬಣ್ಣವೆಂದು ಹೇಳಲಾಗದಂತೆ ಇರುವುದೂ ಉಂಟು.

(೩) ಸಾಲಿಗ್ರಾಮಕ್ಷೇತ್ರಗಳು - ಬಣ್ಣ

ಸಾಲಿಗ್ರಾಮಗಳೆಲ್ಲವೂ ವಿಷ್ಣುರೂಪಗಳ ಪ್ರತೀಕ. ಒಂದೊಂದು ಸಾಲಿಗ್ರಾಮವೂ ಒಂದೊಂದು ವಿಷ್ಣುರೂಪದ ನೆಲೆ. ಅದನ್ನು ಸಾಲಿಗ್ರಾಮಕ್ಷೇತ್ರವೆಂದು ಕರೆಯುತ್ತಾರೆ. ಶಿಲೆಯ ಬಣ್ಣದಿಂದ ಯಾವ ರೂಪವೆಂದು ಹೇಳಬಹುದು.

'ಕ್ಷೇತ್ರಂ ತು ವಾಸುದೇವಸ್ಯ ಶ್ವೇತವರ್ಣಂ ಪ್ರಚಕ್ಷತೇ ॥ (I)
ಪೀತಾ ಹಿರಣ್ಯಗರ್ಭಾ ಸ್ಯಾದ್ರಕ್ತಾ ಪ್ರದ್ಯುಮ್ನರೂಪಿಣೀ
ಕೃಷ್ಣಾ ತು ವಿಷ್ಣುಸುಕ್ಷೇತ್ರಂ ಸ್ಯಾಚ್ಛಿಲಾ ಮುನಿಪುಂಗವ॥
ಶ್ರೀಮನ್ನಾರಾಯಣಂ ಕ್ಷೇತ್ರಂ ಹರಿತಾಂಗಂ ವಿದುರ್ಬುಧಾಃ।
ಕಪಿಲಾ ನಾರಸಿಂಹ(ಹೀ) ಸ್ಯಾದ್ವಾಮನಂ ತ್ವತಸೀನಿಭಾ। (II) '

ಬಿಳಿಯ ಬಣ್ಣದ ಶಿಲೆಯಾದರೆ ಅದು ವಾಸುದೇವರೂಪದ ಕ್ಷೇತ್ರ. ಹಳದಿಯಾದರೆ ಹಿರಣ್ಯಗರ್ಭಕ್ಷೇತ್ರ; ಕೆಂಪಾದರೆ ಪ್ರದ್ಯುಮ್ನನದು; ಕಪ್ಪಾದರೆ ವಿಷ್ಣುರೂಪದ್ದು. ಹಸಿರು ಬಣ್ಣದ ಛಾಯೆಯಿದ್ದರೆ ನಾರಾಯಣ ಸಾಲಿಗ್ರಾಮ; ಕಂದುಬಣ್ಣದ್ದಾದರೆ ನರಸಿಂಹರೂಪ; ಅಗಸೆಹೂವಿನ ಬಣ್ಣವಾದರೆ ವಾಮನ.

(೪) ಬಣ್ಣಗಳಿಗನುಸಾರವಾಗಿ ಫಲ

'ಪೂಜಿತಾನಾಂ (ಶ್ರೇಷ್ಠಾ ಸ್ಯಾತ್ತು) ವಿಶೇಷೇಣ ಧೂಮ್ರಾತು
ಯತಿಪೂಜನೇ ।
ಕಳಂಕಾ ಕ್ಷಯಕಾರೀ ಸ್ಯಾದನಂತೋ ಬಹುವರ್ಣಭಾಕ್। (II)
ಅತಿವರ್ಣಾ ದುಃಖದಾ ಸ್ಯಾದ್ವಿವರ್ಣಾ ತು ಕುಲನಾಶಿನೀ।
ಸಂದಿಗ್ಧವರ್ಣಾ ಹಂತ್ರೀ ಸ್ಯಾದಿತಿ ಕ್ಷೇತ್ರಫಲಂ ಮುನೇ ॥
ಕಪಿಲಾ ಪತ್ನಿಹಾನಿಃ ಸ್ಯಾನ್ನೀಲಾ ಲಕ್ಷ್ಮೀಪ್ರದಾಯಿನೀ।
ಪುಷ್ಪಿದಾ ವೃದ್ಧಿದಾ ಸ್ಯಾ(ಶ್ಯಾ)ಮಾ ರಕ್ತಾ ರಾಜ್ಯಕರೀ ತಥಾ। (II)
ಬಹುವರ್ಣಾ ಮೋಕ್ಷದಾ ಸಾತ್ಸಂದಿಗ್ಧಾ ಸರ್ವನಾಶಿನೀ। (II)

ಆಯಾವರ್ಣದ ಸಾಲಿಗ್ರಾಮಗಳನ್ನು ಪೂಜೆಮಾಡಿದ್ದರಿಂದ ಬರುವ ಫಲಗಳನ್ನು ಹೇಳುತ್ತಾರೆ. ಹೊಗೆ ಬಣ್ಣದ ಸಾಲಿಗ್ರಾಮವನ್ನು ಸಂನ್ಯಾಸಿಗಳು ಮಾತ್ರ ಪೂಜೆಮಾಡಬೇಕು. ಕೊಳೆಯಿದ್ದಾದರೆ ಹಾನಿಯನ್ನುಂಟುಮಾಡುವುದು; ಅನೇಕ ಬಣ್ಣಗಳಿದ್ದರೆ ಅನಂತಫಲ. ಬಣ್ಣ ಹೆಚ್ಚಿದ್ದರೆ ದುಃಖಕಾರಿ, ಬಣ್ಣ ಮಾಸಲಾಗಿದ್ದರೆ ವಂಶಕ್ಕೆ ಕೆಡುಕು. ಯಾವ ಬಣ್ಣವೆಂದು ಹೇಳಲಾಗದಿದ್ದರೆ ಅದನ್ನು ಪೂಜೆ ಮಾಡಿದರೆ ಕೇಡೇ. ಕಂದುಬಣ್ಣದ ಸಾಲಿಗ್ರಾಮದಿಂದ ಹೆಂಡತಿ ಸಾಯುವಳು. ನೀಲಿಬಣ್ಣದ್ದಾದರೆ ಐಶ್ವರ್ಯ ಒದಗುತ್ತದೆ. ಕಪ್ಪುಬಣ್ಣದ ಸಾಲಿಗ್ರಾಮ ಪುಷ್ಟಿಯನ್ನೂ ವೃದ್ಧಿಯನ್ನೂ ಉಂಟುಮಾಡುತ್ತದೆ. ಕೆಂಪು ಬಣ್ಣದ್ದು ಬಡತನವನ್ನೊದಗಿಸುತ್ತದೆ. ಅನೇಕ ಬಣ್ಣಗಳಿರುವ ಸಾಲಿಗ್ರಾಮವು ಸಂಪತ್ತನ್ನುಂಟುಮಾಡುವುದು. ಬಣ್ಣ ಹೋಗಿಬಿಟ್ಟಿದ್ದರೆ ಅಂಥ ಸಾಲಿಗ್ರಾಮವನ್ನು ಪೂಜೆಮಾಡಿ ಫಲವಿಲ್ಲ. ಬಿಳಿಬಣ್ಣದ ಸಾಲಿಗ್ರಾಮದ ಪೂಜೆಯಿಂದ ಮೋಕ್ಷಪ್ರಾಪ್ತಿ. ಸಂದಿಗ್ಧವರ್ಣದ(ಎಂದರೆ ಆಗಲೇ ಹೇಳಿದಂತೆ, ಯಾವ ಬಣ್ಣವೆಂದು ಹೇಳಲಾಗದುದು) ಸಾಲಿಗ್ರಾಮವನ್ನು ಪೂಜೆಮಾಡಿದರೆ ಸರ್ವನಾಶ.

(೫) ಸಾಲಿಗ್ರಾಮಭೇದ

'ಮೂರ್ತಯಶ್ಚಾಥ ಕಥ್ಯಂತೇ ಯಥಾವಚ್ಛ್ರುಣು ಸತ್ತಮ॥ (I)
ಮತ್ಸ್ಯಃ ಕೂರ್ಮೋ ವರಾಹಶ್ಚ ನಾರಸಿಂಹೋ(s)ಥ ವಾಮನಃ।
ರಾಮೋ ರಾಮಶ್ಚ ರಾಮಶ್ಚ ಬುದ್ಧಃ ಕಲ್ಕಿರಮೇ ದಶ॥ '

ಸಾಲಿಗ್ರಾಮಗಳು ಪ್ರಧಾನವಾಗಿ ದಶಾವತಾರಗಳನ್ನನುಸರಿಸಿ ಮತ್ಸ್ಯ, ಕೂರ್ಮ, ವರಾಹ, ನೃಸಿಂಹ, ವಾಮನ, ಪರುಶುರಾಮ, ಬಲರಾಮ, ಬುದ್ಧ, ಕಲ್ಕಿ ಎಂದು ಹತ್ತುಬಗೆಯಾಗಿರುತ್ತವೆ.

(೬) ಸಾಲಿಗ್ರಾಮ ಪರೀಕ್ಷೆ

'ಸೂತ್ರೇಣ ವೇಷ್ಟಯೇನ್ಮಧ್ಯೇ ಸಾಲಿಗ್ರಾಮಸ್ಯ ಬುದ್ಧಿಮಾನ್।
ತದಷ್ಟಾಂಶ ಪ್ರಮಾಣಂ ಸ್ಯಾತ್ಸಾಲಿಗ್ರಾಮಸ್ಯ (ಸ್ಯಾದುತ್ತಮಂ ಯಸ್ಯ)
ಗಹ್ವರಂ ॥
ಅಧೋವಕ್ತ್ರಂ ಭೂ(ಭೀ)ಕರಂ ಸ್ಯಾದೂರ್ಧ್ವಾಸ್ಯೋ(s)ಚ್ಚಾಟನಂ ಕ್ರಿಯಾ।
(ಸ್ಯಾದೂರ್ಧ್ವಾಸ್ಯಮುಚ್ಚಾಟನ ಕ್ರಿಯಂ।)
ಸಮವಕ್ತ್ರಂ ವಿಶಿಷ್ಟಂ ಸ್ಯಾತ್ಪಾರ್ಶ್ವಾಸ್ಯಂ ಭಾಗ್ಯಹೃದ್ಭವೇತ್। (II)
ವಕ್ರಾಸ್ಯಂ ವ್ಯಾಧಿಜನಕಂ ದೀರ್ಘಾಸ್ಯಂ ಸರ್ವಭಕ್ಷಣಂ(ಕ) ।
ಮೂರ್ತಿಭೇದಂ ಸಮಾಶೋಧ್ಯ ಪಶ್ಚಾಲ(ಲ್ಲ)ಕ್ಷಣಮಾದಿಶೇತ್॥

ಸಾಲಿಗ್ರಾಮದ ನಡುವೆ ದಾರವೊಂದನ್ನು ಕಟ್ಟಿದರೆ, ಅದರ ಅಷ್ಟಾಂಶಪ್ರಮಾಣದಲ್ಲಿ ಸಾಲಿಗ್ರಾಮದ ವಿವರ (ಎಂದರೆ ಡೊಗರು ಅಥವಾ ಬಾಯಿ) ಇದ್ದರೆ, ಅಂಥ ಸಾಲಿಗ್ರಾಮ ಉತ್ತಮವಾದುದು. ವಿವರವು ಕೆಳಮುಖವಾಗಿದ್ದರೆ ತೊಂದರೆಯನ್ನುಂಟುಮಾಡುವುದು, ಮೇಲುಮುಖವಾಗಿದ್ದರೆ ಆಭಿಚಾರಿಕ ಕ್ರಿಯೆಗಳಲ್ಲಿ ಅದರ ಉಪಯೋಗ. ಸಮವಾಗಿ ವಿವರವಿದ್ದರೆ ಒಳ್ಳೆಯದು; ಪಕ್ಕದಲ್ಲಿದ್ದರೆ ಐಶ್ವರ್ಯಹಾನಿ. ವಿವರವು ವಕ್ರವಾಗಿದ್ದರೆ ಅಂಥ ಸಾಲಿಗ್ರಾಮವನ್ನು ಪೂಜೆಮಾಡಿದ್ದರಿಂದ ರೋಗ ಒದಗಿಬರುವುದು. ವಿವರವು ಉದ್ದವಾಗಿದ್ದರೆ ಪೂಜೆಮಾಡುವವರ ಎಲ್ಲವನ್ನೂ ತಿಂದುಬಿಡುತ್ತದೆ. ಮೊದಲು ಯಾವ ವಿಷ್ಣುರೂಪದ ಸಾಲಿಗ್ರಾಮವೆಂದು ನಿಶ್ಚಯಮಾಡಿಕೊಂಡು ಅನಂತರ ಸಾಲಿಗ್ರಾಮಲಕ್ಷಣವನ್ನು ಹೇಳಬೇಕು. ಸಾಲಿಗ್ರಾಮವನ್ನು ಹಾಲಿನಲ್ಲೋ

ಅಕ್ಕಿಯಲ್ಲೋ ಇಟ್ಟು ಹಾಲಿನಲ್ಲಿ, ಅಕ್ಕಿಯಲ್ಲಿ ಆಗುವ ಮಾರ್ಪಾಟನ್ನು ಗಮನಿಸುವುದೂ ಉಂಟು–

'ಕ್ಷೀರೇ ವಾ ತಂಡುಲೇ ವಾಪಿ ಸಾಲಿಗ್ರಾಮಂ ನಿವೇಶಯೇತ್।
ಘನತ್ವಂ ವೃದ್ಧಮಾಲೋಕ್ಯ ಗೃಹ್ಣೀಯಾದ್ಬುದ್ಧಿಮಾನ್ನರಃ॥ '

(೭) ಸಾಲಿಗ್ರಾಮಗಳ ಮೂರ್ತಿಲಕ್ಷಣ

ಸಾಲಿಗ್ರಾಮಗಳ ಮೂರ್ತಿಲಕ್ಷಣದಲ್ಲಿ ಶಿಲೆಯ ಆಕಾರ (ದಪ್ಪ, ಉದ್ದ, ಅಂಡಾಕಾರ, ವೃತ್ತಾಕಾರ ಇತ್ಯಾದಿ), ಬಾಯಿ (ರಂಧ್ರ, ವದನ), ಚಕ್ರ, ರೇಖೆಗಳು (ಆಯುಧ ಸೂಚಕ), ಚಿಹ್ನೆಗಳು(ಪರಶು, ಪಂಚಾಯುಧ ಇತ್ಯಾದಿ) ಇವೆಲ್ಲವೂ ಸೇರುತ್ತವೆ. ರಂಧ್ರವಿರುವ ಎಡೆ; ಚಕ್ರಗಳು ಎಲ್ಲಿವೆ, ಎಷ್ಟಿವೆ, ಹೇಗಿವೆ ಎಂಬುದು; ರೇಖೆಗಳು ಎಲ್ಲಿವೆ, ಹೇಗಿವೆ, ಯಾವುದರ ಸಂಕೇತ ಮೊದಲಾದ ವಿವರಗಳು ಯಾವ ವಿಷ್ಣುರೂಪವನ್ನು ಸಾಲಿಗ್ರಾಮವು ಪ್ರತಿನಿಧಿಸುತ್ತದೆ ಎಂದು ನಿರ್ಧರಿಸಲು ನೆರವಾಗುತ್ತವೆ. ಕೆಲವು ಸಾಲಿಗ್ರಾಮಗಳಲ್ಲಿ ರಂಧ್ರಗಳೇ ಇಲ್ಲದಿರುವುದೂ ಉಂಟು (ಹಿರಣ್ಯಗರ್ಭ ಸಾಲಿಗ್ರಾಮದಂತೆ), ಆದರೆ ಬೇರೆ ಲಕ್ಷಣಗಳನ್ನು ಗಮನಿಸಬೇಕಾಗುತ್ತದೆ. ಸಾಲಿಗ್ರಾಮದ ಮುಖ್ಯಭಾಗ ಚಕ್ರ; ಇದರ ಸಂಖ್ಯೆಯಿಂದಲೂ ಮೂರ್ತಿಲಕ್ಷಣವನ್ನೋ 'ಕ್ಷೇತ್ರ'ವನ್ನೋ ಹೇಳುವುದೂ ಉಂಟು -

> 'ಒಂದೇ ಚಕ್ರವಿದ್ದರೆ ಸುದರ್ಶನ ಸಾಲಿಗ್ರಾಮ, ಎರಡು
> ಚಕ್ರಗಳಿದ್ದರೆ ಲಕ್ಷ್ಮೀನಾರಾಯಣ ಸಾಲಿಗ್ರಾಮ,
> ಮೂರುಚಕ್ರಗಳಿದ್ದರೆ ಅಚ್ಯುತಸಾಲಿಗ್ರಾಮ, ನಾಲ್ಕಿದ್ದರೆ
> ಜನಾರ್ದನ, ಐದು ಚಕ್ರಗಳಿದ್ದರೆ ವಾಸುದೇವ, ಆರಿದ್ದರೆ
> ಸಂಕರ್ಷಣ; ಏಳುಚಕ್ರಗಳಿದ್ದರೆ ವರಾಹಸಾಲಿಗ್ರಾಮ,
> ಎಂಟಿದ್ದರೆ ಪುರುಷೋತ್ತಮ; ಒಂಬತ್ತಿದ್ದರೆ
> ನರಸಿಂಹಸಾಲಿಗ್ರಾಮ, ಹತ್ತಿದ್ದರೆ ವಾಮನ; ಹನ್ನೊಂದು
> ಚಕ್ರಗಳಿದ್ದರೆ ಪ್ರದ್ಯುಮ್ನಸಾಲಿಗ್ರಾಮ, ಹನ್ನೆರಡಿದ್ದರೆ
> ಅನಂತಸಾಲಿಗ್ರಾಮ. ಇನ್ನೂ ಹೆಚ್ಚಿನ ಚಕ್ರಗಳಿದ್ದರೆ
> ಪರಮಾತ್ಮನ ಸಾನ್ನಿಧ್ಯ ವಿಶೇಷವಾಗಿಯೇ ಇರುತ್ತದೆ'.

ಶ್ರೀತತ್ತ್ವನಿಧಿಯಲ್ಲಿ ಎಂಭತ್ತೊಂಬತ್ತು ಸಾಲಿಗ್ರಾಮಗಳ ಮೂರ್ತಿಲಕ್ಷಣವನ್ನು ಮಾಡಿಕೊಟ್ಟಿದ್ದಾರೆ; ಮತ್ಸ್ಯ, ಮಹಾಕೂರ್ಮ, ವಾರಾಹ, ಬುದ್ಧ, ನಾರಸಿಂಹ, ಲಕ್ಷ್ಮೀನಾರಸಿಂಹ, ವಾಮನ, ಶ್ರೀಘನ, ದಧಿವಾಮನ, ದಧಿಗೋಪಾಲವಾಮನ, ಸಂತಾನಗೋಪಾಲ, ಹಯಗ್ರೀವ, ವಿಶ್ವರೂಪ, ಅನಂತಮೂರ್ತಿ, ಗೋವಿಂದ, ಹಿರಣ್ಯಗರ್ಭ, ಮದನಗೋಪಾಲ, ವನಮಾಲಿ, ಮಹಾಜ್ವಾಲಾನರಸಿಂಹ, ಶಿವನಾಭ, ಹರಿಹರಬ್ರಹ್ಮಮೂರ್ತಿ, ವಿಷ್ಣರಶ್ರವ, ವೈಕುಂಠ, ಸೀತಾರಾಮ ಮುಂತಾದುವು. ಇವುಗಳಲ್ಲಿ ವಿಷ್ಣುವಿನ ದಶಾವತಾರಮೂರ್ತಿಗಳೂ, ಚತುರ್ವ್ಯೂಹಮೂರ್ತಿಗಳೂ, ಚತುರ್ವಿಂಶತಿಮೂರ್ತಿಗಳೂ ಸೇರುತ್ತವೆ. ಇವಕ್ಕೆಲ್ಲ ವಿಶಿಷ್ಟಲಕ್ಷಣಗಳನ್ನು ಹೇಳಿ ಸಾಲಿಗ್ರಾಮಪರೀಕ್ಷೆಯ ಕ್ರಮವನ್ನು ತಿಳಿಸಿಕೊಡಲಾಗಿದೆ.

ಕೆಲವು ಸಾಲಿಗ್ರಾಮಗಳ ಮೂರ್ತಿಲಕ್ಷಣಗಳನ್ನು ಹೇಳುವುದೇ ಸಾಧ್ಯವಿಲ್ಲವಂತೆ. ವಿಷ್ಣುವಿನ ಮೂರ್ತಿಗಳು ದಿಟವಾಗಿ ಅಸಂಖ್ಯಾತವಲ್ಲವೆ? ಹಾಗೆಯೇ ಸಾಲಿಗ್ರಾಮಭೇದವೂ ಅನಂತವಾಗಿವೆಯೆಂದೂ, ಅವನ್ನೆಲ್ಲ ವಿಂಗಡಿಸಿ ನಿರ್ದೇಶಿಸುವುದು 'ನ ಶಕ್ಯತೇ ಕಲ್ಪಕೋಟಿಶತೈರಪಿ' ಎಂದು ಹೇಳಿ ಮುಗಿಸಿದ್ದಾರೆ.

ಆದರೆ ಕೆಲವು ಸಾಲಿಗ್ರಾಮಗಳು ವರ್ಜ್ಯ. ಅವುಗಳನ್ನು ಪೂಜೆಮಾಡಿದ್ದರಿಂದ ದುಃಖದಾರಿದ್ರ್ಯಗಳು, ಬಂಧಕುಲನಾಶ ಇತ್ಯಾದಿ ವಿಪತ್ಪರಂಪರೆ. ವರ್ಜ್ಯವಾದುವುಗಳ ಮೂರ್ತಿಲಕ್ಷಣಗಳು -

'ಕರಾಳಂ ವಿಕರಾಳಂ ಚ ವಕ್ರತುಂಡಂ ತಥೈವ ಚ।
ದರ್ದುರಂ ಸ್ಫುಟಿತಂ ಮು(ದ)ಗ್ಧಂ ತ್ರಿಕೋಣಂ ಪರಿವರ್ಜಯೇತ್॥
ಅಂತಃಸ್ಫುಟಿತ ಭಗ್ನಂ ಚ ಬದ್ಧಚಕ್ರಂ ತಥೈವ ಚ।
ಬಹುರೇಖಂ ಪರಿಚ್ಛಿದ್ರಂ ತಿರ್ಯಕ್ಚಕ್ರಂ ತಥಾ ತ್ಯಜೇತ್॥
ದರ್ದುರಂ ದಗ್ಧಮುಷ್ಣಂ ಚ ದಾರಿದ್ರ್ಯಂ ದುಃಖದಾಯಿ ಚ।
ಬಂಧನಂ ಬದ್ಧಚಕ್ರಂ ಚ ತ್ರಿಕೋಣಂ ಬಂಧುನಾಶನಂ।
ಅಂತಃಸ್ಫುಟಿತಚಕ್ರಂ ಚ ಬಂಧುಪುತ್ರವಿನಾಶನಂ। (॥) '

ಹೀಗೆ ಆಯಾ ಸಾಲಿಗ್ರಾಮಗಳನ್ನು ಪೂಜೆಮಾಡಿದಾಗ ನಿರೀಕ್ಷಿಸಬಹುದಾದ ವಿಶೇಷ ಫಲಗಳನ್ನು ವಿಸ್ತಾರವಾಗಿ ಹೇಳಲಾಗಿದೆ. ಒಳ್ಳೆಯ ಸಾಲಿಗ್ರಾಮಗಳನ್ನು ಪೂಜೆಮಾಡುವುದು 'ಭುಕ್ತಿಮುಕ್ತಿ ಪ್ರದಾಯಕಂ'. ಅಧ್ಯಾಯದ ಕೊನೆಯಲ್ಲಿ 'ಇತಿ ಮೂರ್ತಿನಿರ್ಣ(ರ್ಣ)ಯ ಸಾಲಿಗ್ರಮಲಕ್ಷಣಂ ಸಂಪೂರ್ಣಂ(ರ್ಣಂ) ' ಎಂಬ ಮಾತಿದೆ. ಮುಂದೆ ಯಥಾಕ್ರಮವಾದ ಪುಷ್ಪಿಕೆ **'ಶ್ರೀತತ್ತ್ವನಿಧ್ಯಾಖ್ಯಗ್ರಂಥೇ ವಿಷ್ಣುಕ್ಷೇತ್ರ ಸಾಲಿಗ್ರಾಮಾದಿ ಲಕ್ಷಣ ನಿರೂಪಣಂ ನಾಮ ಷಷ್ಠೋ ನಿಧಿಃ ಸಂಪೂರ್ಣಃ'** ಎಂದು ಮುಗಿಯುತ್ತದೆ.

ಮೂರನೆಯ ಪರಿಚ್ಛೇದ

ಶಿವ - ಶೈವ ನಿಧಿಗಳು

ಪ್ರವೇಶ

'ಕೃಷ್ಣರಾಜಮಹಾರಾಜ ಕಂಠೀರವ ವಿರಚಿತ ಶ್ರೀತತ್ವನಿಧ್ಯಾಖ್ಯ
ಗ್ರಂಥಾಂತರ್ವರ್ತೀ ತ್ರಿ(ತೃ)ತೀಯ್ಯೋ ಶೈವನಿಧಿಃ ಪ್ರಾರಭ್ಯತೇ'

ಎಂಬ ಒಕ್ಕಣೆಯು ನನ್ನ ಹಸ್ತಪ್ರತಿಯ ಮೂರನೆಯ ನಿಧಿಯ ಮೊದಲಲ್ಲಿ ಕಾಣುತ್ತದೆ. ಏಳನೆಯ ನಿಧಿಯ ಮೊದಲಲ್ಲೂ ಆ ನಿಧಿಯ ಹೆಸರನ್ನು ಶೈವನಿಧಿಯೆಂದೇ ಕಾಣಿಸಲಾಗಿದೆ ('ಸಪ್ತಮಶೈವನಿಧಿಃ ಪ್ರಾರಭ್ಯತೇ'). ಆದರೆ ಈ ಗ್ರಂಥದ ದೇವನಾಗರಲಿಪಿಯ ಪ್ರಕಟಣೆಯಲ್ಲಿ (ಖೇಮರಾಜ ಕೃಷ್ಣದಾಸ, ಶ್ರೀವೆಂಕಟೇಶ್ವರ ಸ್ಟೀಮ್ ಪ್ರೆಸ್, ಮುಂಬಯಿ, ಮುಮ್ಮಡಿಯವರು ಬದುಕಿದ್ದಾಗಲೇ ಅಚ್ಚಾದುದು) 'ತೃತೀಯಶ್ಶಿವನಿಧಿಃ' ಎಂದು ಮೂರನೆಯ ನಿಧಿಯನ್ನೂ 'ಸಪ್ತಮಶ್ಶೈವನಿಧಿಃ' ಎಂದು ಏಳನೆಯ ನಿಧಿಯನ್ನೂ ನಿರ್ದೇಶಿಸಿದ್ದಾರೆ. ವಿಷಯವನ್ನು ಕುರಿತು ಮೂರನೆಯ ನಿಧಿಯ ಕಡೆಯಲ್ಲಿರುವ ಪುಷ್ಪಿಕೆ "ಮಹಾಕೈಲಾಸಮೂರ್ತ್ಯಾದಿ ಶಿವಮೂರ್ತಿಸ್ವರೂಪನಿರೂಪಣಂ" ಎಂದೂ, ಏಳನೆಯದರಲ್ಲಿ "ಶಿವಕ್ಷೇತ್ರವಿಲ್ವರುದ್ರಾಕ್ಷಾದಿ ಕಥನಂ" ಎಂದೂ ಹೇಳುತ್ತವೆ. ಆದರೆ ಮೂರನೆಯ ನಿಧಿ ಆರಂಭವಾಗುವುದು ಮಹೇಶ್ವರಮೂರ್ತಿಯ ಧ್ಯಾನಶ್ಲೋಕದಿಂದ; ಮಹಾಕೈಲಾಸಮೂರ್ತಿಯ ಧ್ಯಾನವು ಮೂರನೆಯದಾಗಿ ಬರುತ್ತದೆ. ಈ ಧ್ಯಾನವು ಸುದೀರ್ಘವಾಗಿದೆಯೆಂಬ ಕಾರಣದಿಂದ ಪುಷ್ಪಿಕೆಯು ಅದನ್ನೇ ಹೇಳುವುದೋ ಏನೋ.

ಮೂರನೆಯದಾದ 'ಶಿವನಿಧಿ'ಯಲ್ಲಿ ಸದ್ಯೋಜಾತಾದಿ ಪಂಚಮೂರ್ತಿಗಳು, ಸಪ್ತತಾಂಡವಮೂರ್ತಿಗಳು, ಭವಾದಿ ಅಷ್ಟಮೂರ್ತಿಗಳು, ಇಪ್ಪತ್ತೈದು ಶಿವಲೀಲಾಮೂರ್ತಿಗಳಲ್ಲದೆ, ಮೂವತ್ತೆರಡು ಗಣಪತಿಭೇದಗಳೂ, ಹದಿನೇಳು ಸುಬ್ರಹ್ಮಣ್ಯಭೇದಗಳೂ, ಅರವತ್ತನಾಲ್ಕು ಭೈರವರೂ, ಮತ್ತು ವೀರಭದ್ರ, ಚಂಡೇಶ, ಖಡ್ಗರಾವಣ, ಮಲ್ಲಾರಿ ಮೊದಲಾದ ದೇವತೆಗಳ ವಿಚಾರ ಬರುತ್ತದೆ. ಏಳನೆಯದಾದ 'ಶೈವನಿಧಿ'ಯಲ್ಲಿ ಶಿವಕ್ಷೇತ್ರಗಳು ಲಿಂಗಗಳು, ವಿಭೂತಿ, ರುದ್ರಾಕ್ಷ, ಬಿಲ್ವಪತ್ರೆಯನ್ನು ಕುರಿತಂತೆ ವಿವರಗಳು ಬರುತ್ತವೆ; ಕಡೆಯಲ್ಲಿ ಅರವತ್ತುಮೂವರು ಪುರಾತನರ (ಮಹಾದೇವಭಕ್ತರ) ಪಟ್ಟಿಯೂ ಇದೆ.

ಮುಮ್ಮಡಿಯವರು ವೈಯಕ್ತಿಕವಾಗಿ ಮತ್ತು ಪ್ರಧಾನವಾಗಿ ಶೈವಸಂಪ್ರದಾಯಕ್ಕೆ ಸೇರಿದವರು. ಮೈಸೂರು ಅರಸೊತ್ತಿಗೆಯಲ್ಲಿ ಮೊದಲಿಂದಲೂ ಬೆಟ್ಟದ ಚಾಮುಂಡೇಶ್ವರಿ ದೇವಿ, ಉಮ್ಮತ್ತೂರು ಜ್ವಾಲಾಮುಖಿ ಅಮ್ಮನವರು, ಮತ್ತು ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ (ನಂಜುಂಡೇಶ್ವರ). ಈ ದೇವತೆಗಳ ವಿಚಾರವಾಗಿ ಹೆಚ್ಚಿನ ಭಕ್ತಿಶ್ರದ್ಧೆಗಳು. ಹಿರಿಯ ಬೆಟ್ಟದ ಚಾಮರಾಜ ಒಡೆಯರ ಕಾಲದಿಂದಲೂ (೧೪೯೨-೧೫೫೩) ನಂಜನಗೂಡಿನ ರಥೋತ್ಸವಕ್ಕೆ ಈ ಅರಸರು ಹೋಗುತ್ತಿದ್ದರು. ರಣಧೀರಕಂಠೀರವ ನರಸರಾಜ ಒಡೆಯರು ನಂಜನಗೂಡಿನ ಗುಡಿಗೆ ಗೌತಮರಥವನ್ನು ಮಾಡಿಸಿಕೊಟ್ಟಿದ್ದರು. ಖಾಸಾ ಚಾಮರಾಜಒಡೆಯರು(ಮುಮ್ಮಡಿಯವರ ತಂದೆ) ಸಂತಾನಾಪೇಕ್ಷೆಯಿಂದ ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ಸನ್ನಿಧಿಯಲ್ಲಿ ಕೋಟಿ ಶಿವಪಂಚಾಕ್ಷರೀಜಪ, ತರ್ಪಣ, ಹೋಮಗಳನ್ನು ಮಾಡಿದಮೇಲೆ ಶ್ರೀಕಂಠೇಶ್ವರನೇ ಶಿವಯೋಗಿಯಾಗಿ ಬಂದು ಅವರಿಗೆ ನವಾಕ್ಷರೀಮಂತ್ರೋಪದೇಶವನ್ನು ಮಾಡಿ ಅದರ ಫಲವಾಗಿ ಮಗನಾಗುವನೆಂದು ತಿಳಿಸಿ ಹೋದನಂತೆ. ನಂಜನಗೂಡಿನ ದೇವರ ಅನುಗ್ರಹದಿಂದಲೇ ಹುಟ್ಟಿದ ಮಗುವಿಗೆ ನಂಜರಾಜವರ್ಮನೆಂದೇ ಹೆಸರಿಟ್ಟರು; ಈ ಮಗು ಮುಂದೆ ಪಟ್ಟಾಭಿಷೇಕ ಸಮಯದಲ್ಲಿ ಕೃಷ್ಣರಾಜಒಡೆಯರೆಂದು ಹೆಸರಾದರೆನ್ನಿ. ಮುಮ್ಮಡಿಯವರಿಗೂ ತಾವು 'ಶ್ರೀಕಂಠೇಶ್ವರಪ್ರಸಾದಲಬ್ಧಸರ್ವಸಾಮ್ರಾಜ್ಯಶಾಲಿ'ಯೆಂಬ ನಂಬುಗೆಯಿದ್ದಿತು.

ಮುಮ್ಮಡಿಯವರು ನಡೆಸಿದ ಧರ್ಮಕಾರ್ಯಗಳಲ್ಲಿ ನಂಜನಗೂಡಿನ ಶಿವಾಲಯಕ್ಕೆ ಸಂದ ಸೇವೆಯದೇ ಸಿಂಹಪಾಲು. ಗುಡಿಗೆ ಏಳುನೆಲೆಯ ಗೋಪುರ, ಪಂಚರಥಗಳು, ಬೆಳ್ಳಿವಾಹನಗಳು, ಕೈಸಾಲೆಯ ವಿಸ್ತರಣ, ಶಿವಕೂಟದ ವ್ಯವಸ್ಥೆ, ಶ್ರೀಕಂಠಮುಡಿ, ಶಿವಪ್ರತಿಷ್ಠೆಗಳು ಎಲ್ಲವೂ ಅವರ ಸೇವೆಗಳೇ. ಕೈಸಾಲೆಯನ್ನು ಹಿಗ್ಗಿಸಿ ಅರವತ್ತುಮೂವರು ಪುರಾತನರ (ಶಿವಭಕ್ತರು, ನಾಯನ್ಮಾರರು) ಶಿಲಾವಿಗ್ರಹಗಳನ್ನೂ ಉತ್ಸವಮೂರ್ತಿಗಳನ್ನೂ ಮಾಡಿಸಿ ನಿಲ್ಲಿಸಿದರು. ಶಿವನ ಇಪ್ಪತ್ತೈದು ಲೀಲಾಮೂರ್ತಿಗಳನ್ನೂ ಶಿಲೆಯಲ್ಲಿ ಮಾಡಿಸಿಕೊಟ್ಟರು. ಹೊರಪ್ರಾಕಾರವನ್ನು ಹೊಸದಾಗಿ ಮಾಡಿಸಿ, ಗಾರೆಯಲ್ಲಿ ಗೂಡುಗಳನ್ನೂ, ಗೂಡುಗಳಲ್ಲಿ ಪಂಚವಿಂಶತಿಲೀಲಾಮೂರ್ತಿಗಳು, ಕೆಲವು ಪುರಾತನರು, ಸಪ್ತತಾಂಡವಮೂರ್ತಿಗಳು, ಕೆಲವು ದಕ್ಷಿಣಾಮೂರ್ತಿರೂಪಗಳು, ಸಪ್ತದಶ ಸುಬ್ರಹ್ಮಣ್ಯಮೂರ್ತಿಗಳು, ನವಗ್ರಹಗಳು, ಅಷ್ಟದಿಕ್ಪಾಲಕರು, ದ್ವಾತ್ರಿಂಶದ್ಗಣಪತಿರೂಪಗಳು ಇವೆಲ್ಲ ಪುತ್ಥಳಿಗಳನ್ನೂ ಮಾಡಿಸಿದರು. ಗುಡಿಯಲ್ಲಿ ಷಟ್ಕಾಲಪೂಜೆ, ಶಾಲ್ಯಾನ್ನಾಭಿಷೇಕ, ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವಗಳು, ನವರಾತ್ರಿಯ ವಿಶೇಷಪೂಜೆ, ಮೊದಲಾದುವನ್ನು ವ್ಯವಸ್ಥೆಮಾಡಿದರು. ಸೊಗಸಾದ ರುದ್ರಾಕ್ಷಿ ಮಂಟಪವನ್ನು ಮಾಡಿಸಿಕೊಟ್ಟರು. ಗುಡಿಯಲ್ಲಿ ಮುದ್ದುಕೃಷ್ಣೇಶ್ವರ, ಕೆಂಪನಂಜೇಶ್ವರ, ಬಾಲಕೆಂಪದೇವಾಜೇಶ್ವರ, ಭದ್ರಪಾಳೇಶ್ವರ ಎಂಬ ಪಂಚಲಿಂಗ ಪ್ರತಿಷ್ಠೆಯನ್ನು ಮಾಡಿಸಿದರು.

ಹಾಗೆಯೇ ಚಾಮರಾಜನಗರದಲ್ಲಿ ತಮ್ಮ ತಂದೆಯ ಹೆಸರಿನಲ್ಲಿ ಚಾಮರಾಜೇಶ್ವರ-ಪ್ರತಿಷ್ಠೆಯನ್ನು ಮಾಡಿಸಿ ದೇವಾಲಯವನ್ನು ವೈಭವಪೂರ್ಣವಾಗಿ ಶೈವಾಗಮೋಕ್ತವಾಗಿ ನಿರ್ಮಿಸಿದರು, ಅದು ನವಬೇರಗಳಿಂದ ಕೊಡಿದ್ದು ಸಾಂಗಾಲಯವೆನಿಸಿತು. ಇದಕ್ಕೂ ಅವರು ಸಲ್ಲಿಸಿದ ಸೇವೆ ವಿಶಿಷ್ಟವಾಯಿತು. ಚಾಮರಾಜನಗರದ ಹತ್ತಿರವೇ ಅಮಚವಾಡಿಗುಡ್ಡದಲ್ಲಿ ಮಹಾಲಿಂಗೇಶ್ವರಸ್ವಾಮಿ ಗುಡಿಯನ್ನು ಕಟ್ಟಿಸಿದರು. ತಿರುಮುಕೂಡಲಿನ ಅಗಸ್ತ್ಯೇಶ್ವರ ದೇವಸ್ಥಾನದಲ್ಲಿ ಚನ್ನಬಸವೇಶ್ವರಲಿಂಗವನ್ನು ಪ್ರತಿಷ್ಠೆಮಾಡಿಸಿದರು. ಮೈಸೂರು ಅರಮನೆಗೆ ಸೇರಿದ ತೃಣೇಶ್ವರ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿ,



ಶಿವಕುಟುಂಬ

ಹಲವಾರು ಶಿವಲಿಂಗಗಳನ್ನು (ಚಾಮರಾಜೇಶ್ವರ, ಪ್ರಸನ್ನ ನಂಜುಂಡೇಶ್ವರ, ದೇವದೇವೇಶ್ವರ, ದೇವರಾಜೇಶ್ವರ, ಮುದ್ದುಕೃಷ್ಣೇಶ್ವರ, ದೇವಾಂಬೇಶ್ವರ, ದೇವೇಶ್ವರ ಇತ್ಯಾದಿ) ಪ್ರತಿಷ್ಠೆಮಾಡಿಸಿದರು. ಕಾವೇರಿತೀರದ ಚಂದ್ರವನದಲ್ಲಿ ತಮ್ಮ ತಂದೆಯ ನೆನಪಿಗಾಗಿ ಚಾಮರಾಜೇಶ್ವರಲಿಂಗವನ್ನು ಪ್ರತಿಷ್ಠೆಮಾಡಿಸಿದರು. ಚಾಮುಂಡಿಬೆಟ್ಟದ ಮೇಲೆ ಪಾಳುಬಿದ್ದಿದ್ದ ಮಹಾಬಲೇಶ್ವರನ ಗುಡಿಯನ್ನು ಜೀರ್ಣೋದ್ಧಾರಮಾಡಿಸಿ ಮೂಲಸ್ಥಾನದ ಲಿಂಗಕ್ಕೆ ಬೆಳ್ಳಿಯ ಕೊಳಗ, ನಾಗಾಭರಣ ಮುಂತಾದುವನ್ನು ಮಾಡಿಸಿಕೊಟ್ಟು, ಕ್ರಮವಾಗಿ ಪೂಜೆನಡೆಯುವ ವ್ಯವಸ್ಥೆ ಮಾಡಿದರು.

ಇದಲ್ಲದೆ ಮುಡುಕುತೊರೆಯ ಮಲ್ಲಿಕಾರ್ಜುನ ಸ್ವಾಮಿಗುಡಿ, ತಲಕಾಡಿನ ವೈದ್ಯೇಶ್ವರ ಆಲಯ, ತಿರುಚ್ಚಂಗೋಡು ಅರ್ಧನಾರೀಶ್ವರನ ಗುಡಿ, ಶ್ರೀಶೈಲದ ಮಲ್ಲಿಕಾರ್ಜುನ ದೇವಸ್ಥಾನ, ಕಂಚಿಯ ಏಕಾಮ್ರೇಶ್ವರನ ಗುಡಿ, ಕುಕ್ಕೆ ಸುಬ್ರಹ್ಮಣ್ಯದ ಗುಡಿ ಮುಂತಾದ ಶಿವಾಲಯಗಳಿಗೆ ವಿಶೇಷವಾದ ಸೇವೆ ಸಲ್ಲಿಸಿದ್ದಾರೆ. ಶೃಂಗೇರಿ, ಕೂಡ್ಲಗಿ, ಶಿವಗಂಗೆ, ಪುಷ್ಪಗಿರಿ, ಆವಣಿ ಮೊದಲಾದ ಶೈವಸಂಪ್ರದಾಯದ ಮಠಗಳಿಗೆ ದಾನಧರ್ಮಗಳನ್ನು, ಅನೇಕ ಶಿವಾಧಲಯಗಳಲ್ಲಿ ತಾವೇ ಕೋಟಿಬಿಲ್ವಾರ್ಚನೆಗಳನ್ನೂ ಮಾಡಿದರು. ಶಿವರಾತ್ರಿಯನ್ನು ವೈಭವದಿಂದಲೂ ನಿಷ್ಠೆಯಿಂದಲೂ, ಶ್ರದ್ಧೆಯಿಂದಲೂ ಆಚರಿಸುತ್ತಿದ್ದರು.

ಹೀಗೆ ಅವರ ಶೈವಸಂಪ್ರದಾಯನಿಷ್ಠೆಯು ಸ್ಪಷ್ಟವಾಗಿದ್ದುದಲ್ಲದೆ, ಹಲವಾರು ಶೈವಾಗಮಪಂಡಿತರು, ಜಂಗಮರು, ಆರಾಧ್ಯರು ಇವರೆಲ್ಲರ ಸಂಪರ್ಕವನ್ನು ವಿಶೇಷವಾಗಿ ಬೆಳೆಸಿಕೊಂಡು, ಈ ಧರ್ಮ ಪ್ರಕ್ರಿಯೆಯ ಪ್ರೌಢ ಪರಿಚಯವನ್ನು ಪಡೆದುಕೊಂಡಿದ್ದರು. ಆದುದರಿಂದ ಶಿವ-ಶೈವನಿಧಿಗಳಲ್ಲಿ ಕಂಡುಬರುವ ವಿವರಗಳು ಅವರ ಪಾಂಡಿತ್ಯದ ಮಡಿಲಿಂದ ಎದ್ದವೇ ಎಂಬುದರಲ್ಲಿ ಸಂಶಯವಿರದು.

(೧) ಮೊದಲಿಗೆ ಶಿವನ ಕೆಲವು ರೂಪಗಳು

೧. ಮಹೇಶ್ವರ -

'ಶಾಂತ್ತಂ(ತಂ) ಪದ್ಮಾಸನಸ್ಥಂ ಶಶಧರಮಕುಟಂ
ಪಂಚವಕ್ತ್ರಂ ತ್ರಿನೇತ್ರಂ ಶೂಲಂ ವಜ್ರಂ ಚ ಖಡ್ಗಂ
ಪರಶುಮಭಯದಂ ದಕ್ಷಭಾಗೇ ವಹಂತಂ
ನಾಗಂ ಪಾಶಂ ಚ ಘಂಟಾಂ ಪ್ರಳಯಹುತವಹಂ
ಸಾಂಕುಶಂ ವಾಮಭಾಗೇ ನಾನಾಲಂಕಾರಯುಕ್ತಂ
ಸ್ಫಟಿಕಮಣಿನಿಭಂ ಪಾರ್ವತೀಶಂ ನಮಾಮಿ॥
ಶ್ವೇತವರ್ಣಃ॥ '

(ಶಿವಪಂಚಾಕ್ಷರೀಮಂತ್ರವೆಂಬ ಗ್ರಂಥದಲ್ಲಿರುವ ಈ ಧ್ಯಾನಶ್ಲೋಕವು ಐದು ಮುಖಗಳುಳ್ಳ ಶಿವನನ್ನು ಶಾಂತನಾಗಿ, ಪದ್ಮಾಸನದಲ್ಲಿ ಕುಳಿತಂತೆ ಚಿತ್ರಿಸಿಕೊಂಡಿದೆ. ಈ ಶಿವನಿಗೆ ಹತ್ತು ಕೈಗಳು. ತ್ರಿಶೂಲ, ವಜ್ರ, ಕತ್ತಿ, ಕೊಡಲಿ ಮತ್ತು ಅಭಯಮುದ್ರೆ ಬಲಭಾಗದ ಕೈಗಳಲ್ಲಿ; ಸರ್ಪ, ಪಾಶ, ಘಂಟೆ, ಅಗ್ನಿ, ಅಂಕುಶಗಳು ಎಡಭಾಗದ ಕೈಗಳಲ್ಲಿ, ಶಿವನು ಮುಕ್ಕಣ್ಣನಾಗಿಯೂ ಸ್ಫಟಿಕದಂತೆ ಶುಭ್ರನಾಗಿಯೂ ಬಿಳಿಬಣ್ಣದವನಾಗಿದ್ದಾನೆ).

೨. ಗೌರೀ -

'ಗೌರೀ ಶುಕ್ಲಾಂಬರದರಾ ದೇವೀ ರೂಪೇ/ಣಾ ಪ್ರತಿಮಾ ಭುವಿ।
ಪೃಥಕ್ಚತುರ್ಭುಜಾ ಕಾರ್ಯಾ ದೇವೀ ಸಿಂಹಾಸನೇ ಶುಭಾ॥
ಸಿಂಹಾಸನೇ(s)ಸ್ಯಾಃ ಕರ್ತವ್ಯಂ ಕಮಲಂ ಚಾರುಕರ್ಣಿಕಂ।
ಅಷ್ಟಪತ್ರಂ ಮಹಾಭಾಗ ಕರ್ಣಿಕಾಯಾಂ ಸುಸಂಸ್ಥಿತಾ । (॥)
ವಿನಾಯಕವದಾಸೀನಾ ದೇವೀ ಕಾರ್ಯಾ ಮಹಾಭುಜಾ।
ಬೃಹನ್ನಾಳಂ ಕರೇ ಕಾರ್ಯಂ ತಸ್ಯಾಶ್ಚ ಕಮಲಂ ಶುಭಂ। (॥)
ದಕ್ಷಿಣೇ ಯಾದವಶ್ರೇಷ್ಠ(ಷ್ಮ) ಕೇಯೂರಪ್ರಾಂತಸನ್ನಿಭಂ।
ವಾಮೇ(s) ಮೃತಘಟಃ ಕಾರ್ಯಸ್ತಥಾ ರಾಜನ್ ಮನೋಹರಃ।
ತಸ್ಯಾ ಅನ್ಯೌ ಕರೌ ಕಾರ್ಯೌ ಬಿಲ್ವಶಂಖಿದರಾವಿತಿ। (॥)
ಮರಕತವರ್ಣಃ॥'

(ನೃಸಿಂಹಪ್ರಸಾದದಿಂದ ಎತ್ತಿಕೊಂಡಿರುವ ಈ ಧ್ಯಾನಶ್ಲೋಕಗಳ ಪ್ರಕಾರ ಗೌರೀದೇವಿಯು ಸುಂದರಿ, ಮರಕತವರ್ಣದವಳು, ನಾಲ್ಕುಕೈಗಳವಳು. ಸಿಂಹಾಸನದ ಮೇಲೆ ಕಮಲವೊಂದರ ಕರ್ಣಿಕೆಯಲ್ಲಿ ವಿನಾಯಕನಂತೆ ಸುಖಾಸೀನಳಾಗಿದ್ದಾಳೆ. ಒಂದು ಕೈಯಲ್ಲಿ ತಾವರೆಹೂವಿನ ದಂಟೊಂದನ್ನೂ ಉಳಿದ ಮೂರು ಕೈಗಳಲ್ಲಿ ಅಮೃತಕುಂಭ, ಬಿಲ್ವಪತ್ರ ಮತ್ತು ಶಂಖಿಗಳನ್ನು ಹಿಡಿದಿದ್ದಾಳೆ).



ಪರಮೇಶ್ವರ ಚಿತ್ರ

೩. ಮಹಾಕೈಲಾಸಮೂರ್ತಿ -

'ಶ್ರುಣುತ ಬ್ರಾಹ್ಮಣಾಸ್ಸರ್ವೇ ಗುಹ್ಯಾದ್ಗುಹ್ಯತರಂ ಪರಂ।
ಅಸ್ತಿ ಮೇರೋರುದಗ್ಭಾಗೇ ಮಹಾನ್ ಕೈಲಾಸಪರ್ವತಃ। (II)
ಸಾಂಬಸ್ಯ ಸಗುಣಸ್ಯಾ(s)ಯಂ ಸಭಕ್ತಸ್ಯೇಂದುವಮೌಳಿನಃ।
ಸಂವಾಸೋ ಯೋಜನಾನಾಂ ಚ ವಿಂಶತ್ಕೋಟಿಭಿರಾಯತಃ। (II)
ಔನ್ನತ್ಯಮೇತದ್ವಿ(ದ್ವಿ)ಗುಣಮಸ್ಯ ಜ್ಞೇಯಂ ದ್ವಿಜೋತ್ತಮಾಃ।
ನವರತ್ನಮಯಂ ತಸ್ಯ ಮಧ್ಯೇ ಶಿಖಿರಮುತ್ತಮಂ। (II)
ತತ್ರಾಲಯಂ ಮಹೇಶಸ್ಯ ನಾನಾರತ್ನ ವಿಚಿತ್ರಿತಂ ।
ಪ್ರಾಕಾರ ಗೋಪುರಾಟ್ಟಾಲವಲಭೀಭಿರ್ವಿರಾಜಿತಂ। (II)
ತಥಾ ಸಿಂಹಾಸನೇ ತತ್ರ ಮಹಾನ್ಕಂಭುಸ್ಸದಾಶಿವಃ।
ಪ್ರಫುಲ್ಲರಕ್ತಾಂಬುಜಾತ ಶ್ರೀನಾಭ್ಯಂಘ್ರಿಯುಗಳೋಜ್ವ(ಜ್ಜ್ವ)ಲಃ। (II)
ವಿಚಿತ್ರರತ್ನೈಃ ಖಚಿತಭೂಷಣೈರಪಿ ಭೂಷಿತಃ।
ಅನೇಕ ಕೋಟಿಸೂರ್ಯಾಭಃ ಪರಮಾನಂದವಿಗ್ರಹಃ। (II)




ಮಹಾಕೈಲಾಸ ಮೂರ್ತಿ

ಅಪ್ರಾಕೃತತನುಃ ಶ್ರೀಮಾನ್ನ(ನ್ಲ)ಕ್ಷ್ಯ ಲಕ್ಷಣವರ್ಜಿತಃ॥ (I)
ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ। (II)
ಗಂಗಾಶ್ರಯಜಟಾಜೂಟಶ್ಚಂದ್ರರೇಖಾವಿಭೂಷಿತಃ।
ಭಸ್ಮೋದ್ಧೂಳಿತ ಸರ್ವಾಂಗೋ ವ್ಯಾಳಯಜ್ಞೋಪವೀತವಾನ್।(II)
ಕಪಾಲಮಾಲಾಧಾರೀ ಚ ವ್ಯಾಘ್ರ ಚರ್ಮಾಂಬರಾವೃತಃ(I)
ಪ್ರತಿವಕ್ತ್ರಂ ತ್ರಿಣಯನೋ ಭಕ್ತಸರ್ವಾರ್ಥಸಿದ್ಧಿದಃ। (II)
ಪ್ರಸಾರ್ಯ ದಕ್ಷಿಣಂ ಪಾದಂ ಕುಂಚಯಿತ್ವೇ(s)ತರಂ ಪದಂ।
ಅಭಯಂ ಚಕ್ರಶೂಲೇ ಚ ಟಂಕಬಾಣೌ ಗದಾಂಬುಜೇ। (II)
ಖಡ್ಗತೋಮರಶಕ್ತೀಶ್ಚ ಪರಶುಪ್ರಾಸಪನ್ನಗಾನ್।
ಹಲಾಂಕುಶಾಕ್ಷಮಾಲಾಶ್ಚ ಘುರಿಕಾಂ ಧ್ವಜದಂಡಕೌ। (II)
ವಜ್ರಕುಂತಾಸ್ಥಿದಂಷ್ಟ್ರಾಶ್ಚ ಕಚಂ ಭಿಂಡಿವಾಲಕಂ।
ಪಂಚವಿಂಶತಿಭಿರ್ಹಸ್ತೈರ್ದಧಾನೋ ದಕ್ಷಿಣೈಶ್ಶುಭೈಃ। (II)
ವರಚಾಪೌ ಮೃಗಂ ಶಂಖಂ ಖೇಟಪಾಶಪರಶ್ವಧಾನ್।
ಮುದ್ಗರಂ ಡಮರುಂ ಘಂಟಾಂ ರುದ್ರವೀಣಾಂ ಚ ಪುಸ್ತಕಂ। (II)
ಕಪಾಲ ಮುಂಡಖಟ್ವಾಂಗಭೃಶುಂಡೀಪರಿಘಾನ್ಯಪಿ।
ಫಲಕಂ ಪಟ್ಟಿಸಂ(ಶಂ) ವೇತ್ರಂ ಕಮಂಡಲುಹುತಾಶನೌ। (II)
ಕರ್ತರೀಂ ಮುಸಲಂ ಪಿಂಛಂ ಬಿಭ್ರದ್ವಾಮೈಸ್ತಥಾ ಕರೈಃ।
ಮಹಾನ್ ಸದಾಶಿವಸ್ಸೋ(s)ಯಂ ರಾಜತೇ ತತ್ರ ಪರ್ವತೇ ॥
ಶ್ವೇತವರ್ಣಃ॥ ॥ '

ಸ್ಕಾಂದಪುರಾಣದಲ್ಲಿ ಶಂಕರಸಂಹಿತೆಯೆಂಬ ಭಾಗದ ಉಪದೇಶಕಾಂಡದಿಂದ ಎತ್ತಿಕೊಳ್ಳಲಾದ ಹದಿನಾರು ಶ್ಲೋಕಗಳು ಕೈಲಾಸಪರ್ವತದಲ್ಲಿ ವಿರಾಜಮಾನನಾದ ಶಿವನನ್ನು ವರ್ಣಿಸುತ್ತವೆ. ಮೇರುಪರ್ವತ ಜಂಬೂದ್ವೀಪದ ನಟ್ಟನಡುವೆ ಇರುವುದು; ಅದರ ಉತ್ತರದಿಕ್ಕಿನಲ್ಲಿ ಇಪ್ಪತ್ತುಕೋಟಿ ಯೋಜನಗಳ ವಿಸ್ತಾರ(ಅಗಲ), ಇದಕ್ಕೆ ಎರಡು ಪಟ್ಟು ಉಚ್ಚ್ರಾಯ(ಎತ್ತರ)ವಿರುವ ಕೈಲಾಸಪರ್ವತ. ಅದರ ನಡುವೆ ನವರತ್ನಮಯವಾದ ಶಿಖರ, ಪ್ರಾಕಾರ, ಗೋಪುರ, ಅಟ್ಟಸಾಲ, ಕಂದಕಗಳುಳ್ಳದ್ದು. ಅಲ್ಲಿ ಸಿಂಹಾಸನದ ಮೇಲೆ ಪದ್ಮಾಸನ; ಅದರಲ್ಲಿ



ಕೈಲಾಸಪತಿ




ಮಹಾಕೈಲಾಸ ಮೂರ್ತಿ

ಕುಳಿತ ಶಿವನಿಗೆ ಇಪ್ಪತ್ತೈದು ಮುಖಗಳು, ಐವತ್ತು ಕೈಗಳು. ಅನೇಕ ಕೋಟಿಸೂರ್ಯರ ತೇಜಸ್ಸಿನಿಂದ ಪರಮಾನಂದವಿಗ್ರಹವಾಗಿ ಕಂಗೊಳಿಸುತ್ತಾನೆ. ದಿಟವಾಗಿ ಅವನಿಗೆ ಲಕ್ಷಣಗಳನ್ನೇನೂ ಹೇಳಲು ಬರುವುದಿಲ್ಲ; ಯಾವ ಚಿಂತನೆಗೆ ಲಕ್ಷ್ಯನೂ ಅಲ್ಲ. ಅವನದು ಅಪ್ರಾಕೃತಶರೀರ. ಉಪನಿಷತ್ತು 'ಅವನನ್ನು ಮಾತಾಗಲಿ ಮನಸ್ಸಾಗಲಿ ಮುಟ್ಟಲಾರದು' ಎಂದು ಹೇಳುವುದಷ್ಟೆ? ಆದರೂ ಭಕ್ತರ ಸಲುವಾಗಿ ಸರೂಪನಾಗಿದ್ದಾನೆ. ತಲೆಯ ಮೇಲೆ ಜಟೆ, ಅದರಲ್ಲಿ ಗಂಗೆ, ಚಂದ್ರ, ಮೈಯೆಲ್ಲ ಭಸ್ಮೋದ್ಧೂಳಿತ. ಹಾವೇ ಯಜ್ಞೋಪವೀತವಾಗಿದೆ. ಕಪಾಲಗಳ ಮಾಲೆ ಧರಿಸಿದ್ದಾನೆ; ಹುಲಿಯ ಚರ್ಮವನ್ನು ಹೊದ್ದಿದ್ದಾನೆ. ಒಂದೊಂದು ಮುಖದಲ್ಲೂ ಮೂರುಕಣ್ಣುಗಳು. ಬಲಗಾಲನ್ನು ಕೆಳಗಿಳಿಬಿಟ್ಟು ಎಡಗಾಲನ್ನು ಮಡಚಿಕೊಂಡು ಕುಳಿತಿದ್ದಾನೆ. ಎಡಭಾಗದ ಇಪ್ಪತ್ತೈದು ಕೈಗಳಲ್ಲೂ ಬಲಭಾಗದ ಇಪ್ಪತ್ತೈದು ಕೈಗಳಲ್ಲೂ ಹಿಡಿದಿರುವ ಆಯುಧಗಳನ್ನು ಮೇಲಿನ ಧ್ಯಾನಶ್ಲೋಕಗಳು ಪಟ್ಟಿಮಾಡಿವೆ. ಬಿಳಿಯ ಮೈಬಣ್ಣ.

೪. ಅಘೋರಮೂರ್ತಿ (ಮೂವತ್ತೆರಡು ಕೈಗಳ ರೂಪ)

'ಏಕಂ ವಕ್ತ್ರಂ ಸದಾನಂದಂ ದ್ವಾತ್ರಿಂಶದ್ಭುಜಸಂಯುತಂ।
ಜಟಾಮಕುಟಸಂಯುಕ್ತಂ ತ್ರಿನೇತ್ರಂ ಚಂದ್ರಶೇಖರಂ॥
ಅಭಯಂ ಖಡ್ಗಶೂಲಂ ಚ ಚಕ್ರಂ ಡಮರುಗಂ (ಡಮರುಂ) ತಥಾ।

ದಧಾನಮಸ್ಥಿ(ಷ್ಟಿ)ಬಾಣೌ ಚ ಗದಾಂ ಪದ್ಮಂ ಕಪಾಲಕಂ। (II)
ಜ್ಞಾನಮುದ್ರಾಂ ಕುಂತಹಸ್ತಮಂಕುಶಂ ಚಾಕ್ಷಮಾಲಿಕಾಂ।
ಖಟ್ವಾಂಗಂ ಪರಶುಂ ಚೈವ ಟಂಕಂ ಪಾಶಂ ಚ ಮುದ್ಗರಂ। (II)
ನಾಗಮಗ್ನಿಂ ಮೃಗಂ ಘಂಟಾಂ ಧನುಶ್ಚ ಕಟಿಹಸ್ತಕಂ।
ರತ್ನಂ ಚ ಕುಮುದಂ ಕುಂಭಂ ಮುಸಲಂ ಪುಸ್ತಕಂ ತಥಾ। (II)
ಏ(ಐ)ತದಾಯುಧಸಂಯುಕ್ತಂ ರುಂಡಮಾಲಾವಿಭೂಷಿತಂ।
ಕಾಲಮುಂಡಸ್ಯ ಶಿರಸಿ ಸ್ಥಿತಂ ಸರ್ವಾಭಯಪ್ರದಂ॥
ನೀಲವರ್ಣಃ॥ ॥ '



ಅಘೋರ ಮೂರ್ತಿ

ಅಘೋರಮೂರ್ತಿಯು ದಿಟವಾಗಿ ಘೋರಮೂರ್ತಿಯೇ. ಶಿವರತ್ನಾಕರದಲ್ಲಿರುವ ಮೇಲಿನ ವರ್ಣನೆ ಮೂವತ್ತೆರಡು ಕೈಗಳ ನೀಲಿ ಮೈಬಣ್ಣದ ಅಘೋರಮೂರ್ತಿಯನ್ನು ಕುರಿತದ್ದು. ಎಲ್ಲ ಕೈಗಳಲ್ಲೂ ಉಗ್ರಾಯುಧಗಳು. ಕೊರಳಲ್ಲಿ ರುಂಡಮಾಲೆ; ಕಾಲನ ತಲೆಯನ್ನು ಮೆಟ್ಟಿನಿಂತ ಭಂಗಿ. ತಲೆಯ ಮೇಲೆ ಜಟೆ, ಜಟೆಯಲ್ಲಿ ಚಂದ್ರ. ಮುಖದ ಮೇಲೆ ಮೂರು ಕಣ್ಣುಗಳು. ಘೋರವಾದ ಆಕಾರವಾದರೂ ಸದಾನಂದ, ಸರ್ವಾಭಯಪ್ರದ. ಹಾಗೆಂದೇ ಅಘೋರ. ಒಂದು ಕೈಯಲ್ಲಿ ಅಭಯಮುದ್ರೆಯಿದೆ. ಆಯುಧಗಳಲ್ಲಿ ಖಡ್ಗ, ಶೂಲ, ಚಕ್ರ, ಡಮರು, ಅಸ್ಥಿ, ಬಾಣ, ಗದೆ, ಪಾಶ, ಅಂಕುಶ, ಕಪಾಲ, ಖಟ್ವಾಂಗ, ಕೊಡಲಿ, ಟಂಕ, ಮದ್ಗರ, ನಾಗ, ಧನಸ್ಸುಗಳೂ ಇವೆ; ಜ್ಞಾನಮುದ್ರೆ, ಜಪಮಾಲೆ, ಪದ್ಮ, ರತ್ನ, ಕುಮುದ, ಕುಂಭ, ಪುಸ್ತಕಗಳೂ ಇವೆ.

ಅಘೋರಮೂರ್ತಿ (ಹತ್ತು ಕೈಗಳರೂಪ) -

'ಪರಶುಂ ಡಮರುಂ ಖಡ್ಗಖೇಟೌ ಬಾಣಶರಾಸನೇ।
ಶೂಲಂ ಚ ಕಪಾಲಮಭಯವರೌ ದಧತಮಿಷ್ಟದಂ। (II)
ತ್ರಿಲೋಚನಂ ಭೀಷಣಾಸ್ಯಂ ನೀಲಾಂಗಂ ರಕ್ತವಾಸಸಂ।
ಅಹಿಭೂಷಿತಸರ್ವಾಂಗಂ ತಮಘೋರಮುಪಾಸ್ಮಹೇ॥
ನೀಲವರ್ಣಃ॥ ॥ '

ಪಾಂಚರಾತ್ರಾಗಮದಲ್ಲಿ ಹೇಳಿರುವ ಈ ಅಘೋರಮೂರ್ತಿಯೂ ಮುಕ್ಕಣ್ಣ, ನೀಲಿಬಣ್ಣದವನೇ, ಆದರೆ ಅವನಿಗೆ ಹತ್ತೇ ಕೈಗಳು. ಕೊಡಲಿ, ಡಮರು, ಕತ್ತಿ, ಗುರಾಣಿ, ಬಿಲ್ಲು, ಬಾಣ, ಶೂಲ, ಕಪಾಲಗಳನ್ನು ಹಿಡಿದು ವರದ ಅಭಯ ಮುದ್ರೆಗಳನ್ನು ತೋರಿಸುತ್ತ ನಿಂತ ಮೂರ್ತಿ. ಘೋರವಾದ ಮುಖ; ಕೆಂಬಣ್ಣದ ಬಟ್ಟೆ; ಆಭರಣಗಳೆಲ್ಲವೂ ಹಾವುಗಳೇ.

೫. ಮಹಾಕಾಳೀಸಮೇತ ಮಹಾಕಾಳ -

'ಮಹಾಕಾಳೋ ಘನಶ್ಯಾಮಃ ಕಾಳ್ಯಾಲಂಗಿತವಿಗ್ರಹಃ।
ಶ್ಯಾಮಕಂಚುಕಧಾರೀ ಚ ಮದಾರುಣವಿಲೋಚನಃ। (II)
ಬ್ರಂಹ್ಮಾಂಡಚ್ಛ(ಚ)ಷಕೇ ಪೂರ್ಣಂ ಪಿಬನ್ವಿಶ್ವರಸಾಸವಂ।
ಮಹಾಕಾಳೀಂ ಘನಶ್ಯಾಮಾಮನಂಗಾರ್ದ್ರಾ ಮಪಾಂಗಯನ್। (II)
ಸಿಂಹಾಸನೇ ಸಮಾಸೀನಃ ಕಲ್ಯಾಣೆ(ಣ) ಕಲನಾತ್ಮಕೇ ।
ಕಾಲಮೃತ್ಯುಮುಖೈರ್ಯುಕ್ತಸ್ಸರ್ವಲೋಕೈಕಭಕ್ಷಕಃ । (II)
ಲಲಿತಾಧ್ಯಾನ ಸಂಪನ್ನೋ ಲಲಿತಾಪೂಜನೋತ್ಸುಕಃ।
ವಿತನ್ವನ್ ಲಲಿತಾಂ ಭಕ್ತೇಷ್ವಾಯುಷೋ ದೀರ್ಘದೀರ್ಘತಾಂ॥
ನೀಲವರ್ಣಃ ॥'

ಲಲಿತೋಪಾಖ್ಯಾನದಲ್ಲಿ ಆವರಣದೇವತೆಗಳಾದ ಮಹಾಕಾಳಿ-ಮಹಾಕಾಳರ ವಿಚಾರ ಶಕ್ತಿನಿಧಿಯಲ್ಲೇ ಬಂದಿದೆ. ಇಬ್ಬರೂ ನೀಲಿಮೈಬಣ್ಣದವರು, ಲಲಿತೆಯ ಧ್ಯಾನದಲ್ಲೇ ತೊಡಗಿರುವವರು, ಲಲಿತಾಭಕ್ತರಿಗೆ ಅನುಕೂಲವಾಗುವವರು. ಮಹಾಕಾಳನು ಸಿಂಹಾಸನಮೇಲೆ ಕುಳಿತು ಮಹಾಕಾಳಿಯನ್ನು ಎಡಭಾಗದಲ್ಲಿ ಕುಳ್ಳಿರಿಸಿಕೊಂಡು ಅಪ್ಪಿಕೊಂಡಿದ್ದಾನೆ. ಕೈಯಲ್ಲಿ ಸುರಾಪಾತ್ರೆಯನ್ನು ಹಿಡಿದು, ಅಮಲೇರಿದ ಕಣ್ಣುಗಳನ್ನು ಕೆಂಪಾಗಿಸಿಕೊಂಡು, ಲೋಕವನ್ನೆಲ್ಲ ಕಬಳಿಸಲುದ್ಯುಕ್ತನಾಗಿದ್ದಾನೆ. ಅವನ ಕೈಯಲ್ಲಿರುವ ಸುರಾಪಾತ್ರೆಯೆಂದರೆ ಬ್ರಹ್ಮಾಂಡದ ಬಟ್ಟಲು; ವಿಶ್ವರಸವೇ ಆದರಲ್ಲಿರುವ ಹೆಂಡ.

೬. ಅಮೃತ ಮೃತ್ಯುಂಜಯ -

'ಚಂದ್ರೋ ಪರಿಷ್ಟಾತ್ಸಂಬದ್ಧಪದ್ಮಾಸನವಿರಾಜಿತಂ।
ಚಂದ್ರವರ್ಣಂ ಸ್ರವದ್ವಿವ್ಯಾಮೃತಚಂದ್ರಕಳಾಧರಂ। (II)
ಯೋಗ ಮುದ್ರೈಕಸಂಬದ್ಧಾಧರ ಹಸ್ತದ್ವಯಾನ್ವಿತಂ।
ಅಮೃತಾಪೂರ್ಣಕನಕಕಲಶಾಪ್ತಕರದ್ವಯಂ। (II)
ಸೋಮಸೂರ್ಯಾಗ್ನಿನೇತ್ರಂ ಚ ಬದ್ಧಪಿಂಗಜಟಾಧರಂ।
ನಾಗಾಭರಣಸಂಭೂಷಂ ನಾಗಯಜ್ಞೋಪವೀತಿನಂ।



ಅಮೃತ ಮೃತ್ಯುಂಜಯ

ವ್ಯಾಘ್ರ ಚರ್ಮಾಂಬರಧರಂ ದೇವಂ ಭಕ್ತಾನುಕಂಪಿ।
ಭಸ್ಮಾನುಲೇಪನಂ ರುದ್ರಂ ಮೃತ್ಯುಂಜಯಮಿಮಂ ಸ್ಮರೇತ್॥
ಶ್ವೇತವರ್ಣಃ॥ ॥ '

ಮೃತ್ಯುಂಜಯನೆಂಬ ಶಿವನ ರೂಪವು ಚಂದ್ರಮಂಡಲದ ಮೇಲೆ ಪದ್ಮಾಸನದಲ್ಲಿ ಕುಳಿತದ್ದು; ನಿಜ ಹಸ್ತಗಳೆರಡೂ ಧ್ಯಾನಮುದ್ರೆಯಲ್ಲಿ ಸೇರಿವೆ. ಪರಹಸ್ತಗಳಲ್ಲಿ ಅಮೃತಕಲಶವನ್ನು ಹಿಡಿದಿದ್ದಾನೆ. ಚಂದ್ರನಿಂದ ಹೊರಹೊಮ್ಮುತ್ತಿರುವ ಅಮೃತವೇ ಚಂದ್ರಬಿಂಬವಾಗಿ ಅವನ ತಲೆಯ ಮೇಲಿದೆ. ಮುಕ್ಕಣ್ಣ; ಸೂರ್ಯ, ಚಂದ್ರ, ಅಗ್ನಿಗಳೇ ಮೂರು ಕಣ್ಣುಗಳು. ಜಟೆ ಕೆಂಬಣ್ಣದ್ದು; ನಾಗಾಭರಣ, ನಾಗಯಜ್ಞೋಪವೀತ; ಹುಲಿಯ ಚರ್ಮವನ್ನು ಹೊದ್ದಿದ್ದಾನೆ; ಮೈಯೆಲ್ಲ ಭಸ್ಮೋದ್ಧೂಳಿತವಾಗಿದೆ. ಭಕ್ತಾನುಕಂಪಿಯಾದ ರುದ್ರ ಬಿಳಿಯ ಮೈಬಣ್ಣದವನು. ಕಾರಣಾಗಮದ ವರ್ಣನೆಯಿದು.

೭. ನೀಲಕಂಠ -

'ಜಟಾಬದ್ಧ ಕಲಾನಾಥಂ ಭೋಗಿಭೂಷಣಭೂಷಿತಂ।
ಅಕ್ಷಮಾಲಾಂ ಚ ಶೂಲಂ ಚ ಕಪಾಲಂ ದಧತಂ ಕರೈಃ॥
ಖಟ್ವಾಂಗಮಪಿ ಪಂಚಾಸ್ಯಂ ವಸಾನಂ ವ್ಯಾಘ್ರ ಚರ್ಮ ಚ।
ತ್ರಿನೇತ್ರಮುಜ್ಜ್ವಲನಿಲಯಂ ಬಾಲಾರ್ಕಸದೃಶಪ್ರಭಂ।
ಸಾಧಕಾಭೀಷ್ಟದಾತಾರಂ ನೀಲಕಂಠಮಹಂ ಭಜೇ। (॥)
ಅರುಣವರ್ಣಃ॥ '

ಪಾಂಚರಾತ್ರಾಗಮದಲ್ಲಿ ಬಣ್ಣಿಸಲ್ಪಟ್ಟಿರುವ ನೀಲಕಂಠನು ಅರುಣವರ್ಣದವನು. ಐದುಮುಖಗಳ ರೂಪ, ಆದರೆ ನಾಲ್ಕೇ ಕೈಗಳು; ತಲೆಯ ಮೇಲೆ ಜಟೆಯಲ್ಲಿ ಚಂದ್ರನಿದ್ದಾನೆ. ಹಾವುಗಳೇ ಆಭರಣ; ಮುಕ್ಕಣ್ಣ. ಕಮಲದ ಮೇಲೆ ಕುಳಿತಿದ್ದಾನೆ; ಆಗತಾನೆ ಹುಟ್ಟಿದ ಸೂರ್ಯನಂತೆ ಕಾಂತಿ. ಕೈಗಳಲ್ಲಿ ಜಪಮಾಲೆ, ಶೂಲ, ಕಪಾಲ ಮತ್ತು ಖಟ್ವಾಂಗಗಳನ್ನು ಹಿಡಿದಿದ್ದಾನೆ. ಭಕ್ತರ ಆಸೆಗಳನ್ನು ಪೂರಯಿಸುವವನು.

೮. ರುದ್ರಮೂರ್ತಿ -

'ಕೈಲಾಸಾಭಂ ಪಂಚವಕ್ತ್ರಂ ದೇವ್ಯಾ ಯುಕ್ತಂ ತ್ರಿಲೋಚನಂ।
ನೀಲಕಂಠಂ ಸರ್ಪಭೂಷಂ ವ್ಯಾಘ್ರ ಚರ್ಮಾಂಬರಾವೃತಂ। (॥)
ಅಕ್ಷಮಾಲಾ ವರಾಭೀತಿಕಮಂಡಲುಲಸತ್ಕರಂ॥ (।)
ಚಂದ್ರ ಗಂಗಾ ಜಟಾಜೂಟಂ ರುದ್ರಂ ತಂ ಪ್ರಣಮಾಮ್ಯಹಂ। (॥)
ಶ್ವೇತವರ್ಣಃ॥ '

ಹಿಮಾಲಯದಂತೆ ಬಿಳಿಯ ಬಣ್ಣ; ಐದು ಮೋರೆಗಳು, ಮೂರು ಕಣ್ಣುಗಳು, ವಿಷದಿಂದ ನೀಲಿಗಟ್ಟಿದ ಕುತ್ತಿಗೆ, ಹಾವುಗಳೇ ಒಡವೆ, ಹುಲಿಯ ಚರ್ಮವನ್ನು ಹೊದ್ದವನು. ತಲೆಯ ಮೇಲೆ ಚಂದ್ರ, ಗಂಗೆ, ಜಪಮಾಲೆ, ಕಮಂಡಲು, ವರದ ಅಭಯಮುದ್ರೆಗಳನ್ನು ಕಾಣಿಸುವ ನಾಲ್ಕುಕೈಗಳು. ಪಾಂಚರಾತ್ರದ ವರ್ಣನೆ.

೯. ಪರಿವಾರೋಮಾಮಹೇಶ್ವರ -

'ವಾಮೇ ಶೈಲಸುತಾ ಪುರಸ್ತು ವೃಷಭಃ
ಪಶ್ಚಾತ್ಸುರೇಂದ್ರಾದಯೋ
ದೈತ್ಯಾರಿಶ್ಚ ವಿಧಿಶ್ಚ ಪಾರ್ಶ್ವದಳಯೋರ್ವಾ
ಯ್ವಾದಿ ಕೋಣೇಷು ಚ।
ಭೃಂಗೀ ನಾರದ ಬಾಣ ಭೈರವ ಗಜಾಸ್ಯ
ಸ್ಕಂದವೀರೇಶ್ವರಾ
ಮಧ್ಯೇ ಶುಭ್ರ ಸರೋಜ ಕೋಮಲರುಚಿಂ
ಶಂಭುಂ ಭಜೇಪಾಂಡುರಂ॥
ಶ್ವೇತವರ್ಣಃ॥ '

ಕಾರಣಾಗಮದ ಈ ಧ್ಯಾನಶ್ಲೋಕದಲ್ಲಿ ಶಿವನ ಪರಿವಾರವೆಲ್ಲದರ ಉಲ್ಲೇಖವಿದೆ. ಎಡಭಾಗದಲ್ಲಿ ಪಾರ್ವತಿ; ಎದುರಿಗೆ ನಂದಿ, ಹಿಂದೆ ದೇವತೆಗಳೆಲ್ಲ. ಎಡಬಲಪಕ್ಕಗಳಲ್ಲಿ ವಿಷ್ಣು ಮತ್ತು ಬ್ರಹ್ಮ.ವಾಯವ್ಯವೇ ಮೊದಲಾದ ವಿದಿಕ್ಕುಗಳಲ್ಲಿ ಭೃಂಗಿ, ನಾರದ, ಬಾಣಾಸುರ, ಭೈರವ, ಗಣಪತಿ, ಸುಬ್ರಹ್ಮಣ್ಯ, ವೀರಭದ್ರರು. ಎಲ್ಲರ ನಡುವೆ ಪದ್ಮಾಸನದಲ್ಲಿ ಬೆಳ್ಳಗೆ ಹೊಳೆಯುತ್ತ ಕುಳಿತ ಮಹೇಶ್ವರ.


೧೦. ಸಭಾಪತಿ -

'ಕೈಲಾಸ ಶೈಲ ಶಿಖರೇ ತ್ರಿಜಗಜ್ಜನಿತ್ರೀಂ
ಗೌರೀಂ ನಿವೇಶ್ಯ ಕನಕಾಂಚಿತ ರತ್ನ ಪೀಠೇ।
ನೃತ್ಯಂತಮಾದಿಪುರುಷಂ ಶಶಿಶೇಖರಂ ತಂ।
ದೇವಾಃ ಪ್ರದೋಷ ಸಮಯೇ(s)ನು ಭಜಂತಿ ಸರ್ವೇ ॥
ಬ್ರಹ್ಮಾ ತಾಳಧರೋ ಹರಿಸ್ಸಪಟಹೋ
ವೀಣಾ ಕರಾ ಭಾರತೀ ವಂಶದ್ವಂದ್ವಯುತೌ
ಸುಭಾಸ್ಕರಕರೌ ಮಾರ್ತಾಂಡ ಸೋಮೌ ಶುಭೌ
ಗೀತೌ ತುಂಬುರುನಾರದೌ ಸಮುರಜೌ ನಂದೀಕುಮಾರೌ ತಥಾ।
ರುದ್ರೋ ನೃತ್ತಕರಸ್ವಭಾವಜನಿತಂ ನಾಟ್ಯಂ ಸದಾ ಪಾತು ನಃ॥
ಗೌರವರ್ಣಃ॥ '

ಸಭೆಯೆಂದರೆ ಈಗ ಚಿದಂಬರದಲ್ಲಿನ ಕನಕಸಭೆ; ಶಿವನು ಪತಂಜಲಿ-ವ್ಯಾಘ್ರಪಾದಮುನಿಗಳೆದುರು ನೃತ್ಯಮಾಡಿದ ಸ್ಥಳ. ಆದರೆ ಕಾರಣಾಗಮವು ಕೈಲಾಸಪರ್ವತದ ಶಿಖರವನ್ನೇ ಸಭೆಯಾಗಿ ಕಲ್ಪಿಸಿಕೊಂಡಿದೆ. ಅಲ್ಲಿ ಪರಶಿವನು ನೃತ್ಯಮಾಡಿದ್ದು ಕನಕಖಚಿತವಾದ ರತ್ನಸಿಂಹಾಸನದ ಮೇಲೆ ಕುಳಿತ ತನ್ನ ಮಡದಿ ಗೌರಿಯೆದುರಿಗೆ. ನಾಟ್ಯವಾಡಿದ್ದು ಪ್ರದೋಷ ಸಮಯದಲ್ಲಿ. ದೇವತೆಗಳೆಲ್ಲ ನೆರೆದಿದ್ದಾರೆ. ಬ್ರಹ್ಮನು ತಾಳ ಹಿಡಿದಿದ್ದಾನೆ, ವಿಷ್ಣುವು ಪಟಹವನ್ನು ನುಡಿಸುತ್ತಿದ್ದಾನೆ, ಸರಸ್ವತಿಯು ವೀಣೆಯನ್ನು ನುಡಿಸುತ್ತಿದ್ದಾಳೆ, ಸೋಮ-ಸೂರ್ಯರು ಕೊಳಲುಗಳನ್ನೂದುತ್ತಿದ್ದಾರೆ. ತುಂಬುರ್ವ-ನಾರದರ್ವ ಹಾಡುತ್ತಿದ್ದಾರೆ; ನಂದಿಯೂ ಸುಬ್ರಹ್ಮಣ್ಯನೂ ಮುರಜವನ್ನು ಬಾರಿಸುತ್ತಿದ್ದಾರೆ.

(೨) ಪಂಚಮೂರ್ತಿಗಳು -

ಶಿವನ ಐದು ರೂಪಗಳು (ಐದು ಮುಖಗಳು) ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನ ಎಂಬುವು. ಅವು ಶೈವಸಿದ್ಧಾಂತದಲ್ಲಿ ಮುಖ್ಯವಾದುವು. ಸೂತಸಂಹಿತೆಯ ಪ್ರಕಾರ ಸದ್ಯೋಜಾತ ರೂಪವು ಪೃಥಿವೀತತ್ತ್ವ ಮತ್ತು ಅಹಂಕಾರತತ್ತ್ವಗಳಿಗೂ, ವಾಮದೇವ ರೂಪವು ಜಲತತ್ತ್ವ ಮತ್ತು ಮನಸ್ತತ್ತ್ವಗಳಿಗೂ, ಅಘೋರರೂಪವು ಅಗ್ನಿತತ್ತ್ವ ಮತ್ತು ಜೀವಗಳಿಗೂ ಸಂಕೇತವಾಗಿವೆ. ಈ ರೂಪಗಳನ್ನು ಪಂಚಬ್ರಹ್ಮರೆಂದೂ ಕರೆಯುವುದುಂಟು. ಶಿವನ ಐದು



ಪಂಚಮುಖ ಶಿವ

ಪ್ರಕಾರಗಳೆಂದು ಎಣಿಕೆ. ನಾಲ್ಕು ಮೂರ್ತಿಗಳು; ಈಶಾನವೆಂಬ ಪ್ರಕಾರ ಮೇಲಿನ ದಿಕ್ಕೆಂದೂ ಕಲ್ಪನೆಯಿದೆ. ಮುಂದಿನ ಶ್ಲೋಕಗಳು ಶೈವಕಾರಣಾಗಮದಿಂದ ಆಯ್ದುಕೊಂಡವು.

೧. ಸದ್ಯೋಜಾತ -

'ಕುಂದೇಂದು ಶಂಖಸ್ಫಟಿಕಾವಭಾಸೋ ವೇದಾಕ್ಷ ಮಾಲಾವರದಾಭಯಾಂಕಃ।
ತ್ರ್ಯಕ್ಷಶ್ಚತುರ್ವಕ್ತ್ರ ಉರುಪ್ರಭಾವಸ್ಸದ್ಯೋಧಿಜಾತೋ(s) ವತು ಮಾಂ ಪ್ರತೀಚ್ಯಾಂ॥
ಶ್ವೇತವರ್ಣಃ॥ '

(ಶುದ್ಧಶ್ವೇತ ವರ್ಣದ ಮೈ. ನಾಲ್ಕು ಮೋರೆಗಳು, ಒಂದೊಂದರಲ್ಲೂ ಮೂರುಕಣ್ಣುಗಳು. ನಾಲ್ಕು ಕೈಗಳು; ಪರಹಸ್ತಗಳಲ್ಲಿ ಜಪಮಾಲೆ, ಪುಸ್ತಕ; ನಿಜಹಸ್ತಗಳಲ್ಲಿ ವರದ ಅಭಯಮುದ್ರೆಗಳು. ಪಶ್ಚಿಮದಿಕ್ಕಿನ ಅಧಿದೇವತೆ)

೨. ವಾಮದೇವ -

'ವರಾಶಮಾಲಾಭಯಟಂಕಹಸ್ತ ಸರೋಜ ಕಿಂಜಲ್ಕ ಸಮಾನವರ್ಣಃ।
ತ್ರಿಲೋಚನಶ್ಚಾರುಚತುರ್ಮುಖೋ ಮಾಂ ಪಾಯಾದುದೀಚ್ಯಾಂ ದಿಶಿ ವಾಮದೇವಃ॥
ಕನಕವರ್ಣಃ॥ '

(ಹೊಂಬಣ್ಣದಿಂದ ಬೆಳಗುವ ಮೈಕಾಂತಿ. ನಾಲ್ಕು ಮೋರೆಗಳು, ಮುಕ್ಕಣ್ಣ. ನಾಲ್ಕುಕೈಗಳು; ವರದ ಅಭಯಮುದ್ರೆಗಳು ನಿಜಹಸ್ತಗಳಲ್ಲಿ;ಟಂಕ ಮತ್ತು ಜಪಮಾಲೆ ಪರಹಸ್ತಗಳಲ್ಲಿ. ಉತ್ತರ ದಿಕ್ಕಿನ ಅಭಿಮಾನಿ)

೩. ಅಘೋರ -

'ಕುಠಾರ ವೇದಾಂಕುಶಚಾಪಶೂಲಕಪಾಲ ಢಕಾ(ಕ್ಕಾ)ಕ್ಷಗುಣಾನ್ದಧಾನಃ।
ಚತುರ್ಮುಖೋ ನೀಲರುಚಿಸ್ತ್ರಿನೇತ್ರಃ
ಪಾಯಾದ ಘೋರೋ ದಿಶಿ ದಕ್ಷಿಣಾಸ್ಯಾಂ॥
ನೀಲವರ್ಣಃ॥ '

(ದಕ್ಷಿಣದಿಕ್ಕಿನ ಅಭಿಮಾನಿದೇವತೆಯಾದ ಅಘೋರನು ನೀಲಿಬಣ್ಣದ ರೂಪ, ಚತುರ್ಮುಖ. ಮುಕ್ಕಣ್ಣ, ಕೊಡಲಿ, ಪುಸ್ತಕ, ಅಂಕುಶ, ಬಿಲ್ಲು, ಶೂಲ, ಕಪಾಲ, ಡಕ್ಕೆ, ಜಪಮಾಲೆಗಳನ್ನು ಹಿಡಿದ ಎಂಟು ಕೈಗಳು)

೪. ತತ್ಪುರುಷ -

'ಪ್ರದೀಪ್ತವಿದ್ಯುತ್ಕನಕಾವಭಾಸೋ
ವಿದ್ಯಾವರಾಭೀತಿಕುಠಾರಪಾಣಿಃ।
ಚತುರ್ಮುಖಸ್ತ(ತ)ತ್ಪುರುಷಸ್ತ್ರಿನೇತ್ರಃ
ಪ್ರಾಚ್ಯಾಂ ಸ್ಥಿತೋ ರಕ್ಷತು ಮಾಮಜಸ್ರಂ॥ (॥)
ಕನಕವರ್ಣಃ॥ '

(ಬಂಗಾರದ ಮೈಬಣ್ಣದ ದೇವತೆ, ಚತುರ್ಮುಖ, ಮುಕ್ಕಣ್ಣ. ನಾಲ್ಕು ಕೈಗಳು; ಕೊಡಲಿ, ಪುಸ್ತಕಗಳು ಪರಹಸ್ತಗಳಲ್ಲಿ, ವರದ ಅಭಯ ಮುದ್ರೆಗಳು ನಿಜಹಸ್ತಗಳಲ್ಲಿ. ಪೂರ್ವದಿಕ್ಕಿಗೆ ಒಡೆಯ)

೫. ಈಶಾನ -

'ವೇದಾಭಯೇ(s)ಷ್ಟಾಂಕುಶಪಾಶ
ಟಂಕಕಪಾಲಢಕ್ಕಾಕ್ಷಕ ಶೂಲಪಾಣಿಃ।
ಸಿತದ್ಯುತಿಃ ಪಂಚಮುಖೋವತಾನ್ಮಾ-
ಮೀಶಾನ ಊರ್ಧ್ವಂ ಪರಮಪ್ರಕಾಶಃ। (II)
ಶ್ವೇತವರ್ಣಃII '


(ಈಶಾನನು ಮೇಲಿನ ದಿಕ್ಕಿನ ಅಭಿಮಾನಿದೇವತೆ. ಬಿಳಿಯ ಮೈಬಣ್ಣ; ಹೊಳೆಯುವ ಕಾಂತಿ. ಐದು ಮುಖಗಳು; ಪುಸ್ತಕ, ಅಭಯಮುದ್ರೆ, ವರದಮುದ್ರೆ, ಅಂಕುಶ, ಪಾಶ, ಟಂಕ, ಕಪಾಲ, ಡಕ್ಕೆ, ಜಪಮಾಲೆ, ಶೂಲಗಳನ್ನು ಹಿಡಿದಂತೆ ಹತ್ತು ಕೈಗಳು).

(೩) ಸಪ್ತತಾಂಡವ ಮೂರ್ತಿಗಳು -

ಮೂರ್ತಿಗಳಲ್ಲಿ ಸ್ಥಾನಕ (ನಿಂತಿರುವುದು), ಆಸೀನ (ಕುಳಿತಿರುವುದು), ಯಾನಕ (ನಡೆಯುತ್ತಿರುವುದು), ಶಯಾನ (ಮಲಗಿರುವುದು) ಮತ್ತು ನರ್ತನ (ಕುಣಿಯುತ್ತಿರುವುದು) ಎಂಬ ವಿಭಾಗಗಳಿವೆಯಷ್ಟೆ? ಇವುಗಳಲ್ಲಿ ನರ್ತನಮೂರ್ತಿಗಳು ಶಿವನಿಗೆ ವಿಶಿಷ್ಟವಾದುವು. ಗಣೇಶ, ಕೃಷ್ಣ, ಸರಸ್ವತಿಯರ ನರ್ತನಮೂರ್ತಿಗಳು ಶಿವನ ನರ್ತನಮೂರ್ತಿಗಳ ಜಾಡನ್ನೇ ಹಿಡಿದವು. ತಾಂಡವವೆಂಬ ನಾಟ್ಯಪ್ರಕಾರವು ಶಿವನಿಂದಲೇ ಆರಂಭಿಸಲ್ಪಟ್ಟು, ಶಿವನ ಗಣಗಳಲ್ಲೊಬ್ಬನಾದ ತಂಡು ಎಂಬುವನು ಶಿವನಿಂದಲೇ ಇದನ್ನು ಕಲಿತನಂತೆ; ಇದು ಪುರುಷಪ್ರಧಾನವಾದ ನೃತ್ಯಪದ್ಧತಿ; ಸ್ತ್ರೀಯರಿಗೆ ಹೊಂದಿಕೊಳ್ಳುವುದು ಲಾಸ್ಯ. ಆಗಮಗ್ರಂಥಗಳಲ್ಲಿ ಏಳು, ಎಂಟು, ಒಂಬತ್ತು ಬಗೆಯ ಶಿವತಾಂಡವಗಳನ್ನು ವರ್ಣಿಸಲಾಗಿದೆ. ಮುಮ್ಮಡಿಯವರು ಕಾರಣಾಗಮದಿಂದ ಏಳು ಬಗೆಯ ನರ್ತನಮೂರ್ತಿಗಳನ್ನು ಇಲ್ಲಿ ಆಯ್ದುಕೊಂಡಿದ್ದಾರೆ.

೧. ಆನಂದತಾಂಡವ -

'ಚತುರ್ಭುಜಂ ತ್ರಿನೇತ್ರಂ ಪ್ರಸಾರಿತಜಟಾನ್ವಿತಂ।
ಗೌರವರ್ಣಸಮಾಯುಕ್ತಂ ಬರ್ಹಿಪಿಂಛಸಮನ್ವಿತಂ। (II)
ಮೌಳೌ ದಕ್ಷಿಣದು(ಧು)ತ್ಥೂರಮರ್ಧಚಂದ್ರಸಮನ್ವಿತಂ।
ದಕ್ಷಿಣೇ ಸ್ವಜಟಾಗ್ರೇ ತು ಜಾನ್ಹ(ಹ್ನ)ವೀಪರಿಮಂಡಿತಂ। (II)
ಪತ್ರಂ ತು ವಾಮಕರ್ಣೇತು ದಕ್ಷಿಣೇ ನಕ್ರಕುಂಡಲಂ
ಸರ್ವಾಭರಣಸಂಯುಕ್ತಮುಪವೀತಸಮನ್ವಿತಂ। (II)
ವ್ಯಾಘ್ರಾಜಿನಾಂಬರೋ ಪೇತಂ ಪಾದಕಿಂಕಿಣಿಶೋಭಿತಂ।
ಭುಜಂ ಪ್ರಸಾರಿತಂ ವಾಮೇ ದಕ್ಷಿಣೇ(s)ಭಯಹಸ್ತಕಂ। (II)
ಡಮರುಂ ಸವ್ಯಹಸ್ತೇ ತು ವಹ್ನಿಂ ವೈ ವಾಮಹಸ್ತಕೇ ।
ವಕ್ರಂ ತು ದಕ್ಷಿಣಂ ಪಾದಮಪಸ್ಮಾರೋಪರಿ ಸ್ಥಿತಂ। (II)
ಊರ್ಧ್ವೇ ತು ವಾಮಪಾದಂ ತು ಪಾದಾಗ್ರಂ ದಕ್ಷಿಣಾನುಗಂ।
ಆನಂದತಾಂಡವಂ ಪ್ರೋಕ್ತಂ ಸಂಧ್ಯಾತಾಂಡವಮುಚ್ಯತೇ। (II) (II೧II)
ಗೌರವರ್ಣಃII '



ಆನಂದ ತಾಂಡವ

(ಮೊಲನೆಯದು ಆನಂದತಾಂಡವ. ಪ್ರಸಿದ್ಧವಾಗಿರುವ ನಟರಾಜರೂಪ. ಮುಕ್ಕಣ್ಣನಾದ ಶಿವನದು ಬಿಳಿಯಬಣ್ಣ. ತಲೆಯ ಮೇಲೆ ಹರಡಿಕೊಂಡಿರುವ ಜಟೆ;ನವಿಲುಗರಿ, ಧತ್ತೂರದ ಹೂ, ಅರ್ಧಚಂದ್ರ, ಗಂಗೆಯರಿಂದ ಕೊಡಿದ್ದು. ಎಡಕಿವಿಯಲ್ಲಿ ಪತ್ರಕೂಂಡಲವೂ ಬಲಗಿವಿಯಲ್ಲಿ, ಮಕರಕುಂಡಲವೂ, ಇರುವುದು ಅರ್ಧನಾರೀಶ್ವರ ಸಂಕೇತ. ಎಲ್ಲ ಆಭರಣಗಳೂ ಇವೆ; ಉಪವೀತ, ಹುಲಿಯ ಚರ್ಮ, ಪಾದಗಳಲ್ಲಿ ನೂಪುರ, ನಾಲ್ಕು ಕೈಗಳು. ಹಿಂದಿನ ಬಲಗೈಯಲ್ಲಿ ಡಮರು, ಹಿಂದಿನ ಎಡಗೈಯಲ್ಲಿ ಅಗ್ನಿ. ಮುಂದಿನ ಬಲಗೈ ಅಭಯಮುದ್ರೆಯನ್ನು ತೋರಿಸುತ್ತ ಎಡತೋಳನ್ನು ಬಲಗಡೆಗೆ ಚಾಚಲಾಗಿದೆ. ಬಲಗಾಲನ್ನು ಕೊಂಚ ಬಾಗಿಸಿಕೊಂಡು ಅಪಸ್ಮಾರಪುರುಷನ ಮೇಲೆ ಇರಿಸಿಕೊಂಡು, ಎಡಗಾಲನ್ನು ಮೇಲೆತ್ತಿ ಬಲಗಡೆಗೆ ಚಾಚಲಾಗಿದೆ.)

೨. ಸಂಧ್ಯಾತಾಂಡವ -

'ಚತುರ್ಭುಜಂ ತ್ರಿನೇತ್ರಂ ಚ ಜಟಾಮಕುಟಸಂಯುತಂ।
ಅಭಯಂ ಡಮರುಂ ಸವ್ಯೇಮೆ।, ಪಿಂಛಂ ಸವಿಸ್ಮಯಂ
ಅಪಸ್ಮಾರಂ ವಿನಾ ಪೀಠೇ ವಾಮಾಂಘ್ರಿಂ ಕುಂಚಿತಂ ಸ್ಥಿತಂ।
ಊರ್ಧ್ವೇ ತು ದಕ್ಷಿಣಂ ಪಾದಮಪೀ(ಪಿ) ಸವ್ಯಾನುಗಂ ಪದಂ। (II)
ತತ್ಪಾದಂ ಕುಂಚಿತಂ ವಾಥ ಸರ್ಪಕಂಕಣಭೂಷಿತಂ।

ಸಂಧ್ಯಾತಾಂಡವಮೇವಂ ಸ್ಯಾದುಮಾತಾಂಡವಮುಚ್ಯತೇ। (II) (II೨II)
ವರ್ಣಾದಿಕಂ ಪೂರ್ವವತ್।ಗೌರವರ್ಣಃII '




ಸಂಧ್ಯಾತಾಂಡವ

(ಸಂಧ್ಯಾತಾಂಡವದಲ್ಲಿಯೂ ಶಿವನು ಚತುರ್ಭುಜನೇ. ನಿಜಹಸ್ತಗಳಲ್ಲಿ ಬಲಗೈ ಅಭಯಮುದ್ರೆಯಲ್ಲಿದೆ, ಎಡಗೈ ವಿಸ್ಮಯಮುದ್ರೆಯಲ್ಲಿದೆ. ಪರಹಸ್ತಗಳಲ್ಲಿ ಬಲಗೈ ಡಮರುವನ್ನೂ ಎಡಗೈ ಮಯೂರ ಪಿಂಛವನ್ನೂ ಹಿಡಿದಿವೆ. ಎಡಗಾಲು ಬಾಗಿದೆ, ಕುಂಚಿತಪಾದು. ಬಲಗಾಲು ಎತ್ತಿ ಎಡಗಡೆಗೆ ಚಾಚಲಾಗಿದೆ. ಕಾಲಕೆಳಗೆ ಅಪಸ್ಮಾರಪುರುಷನಿಲ್ಲ. ತಲೆಗೂದಲು ಜಟಾಮುಕುಟ ರೀತಿಯಲ್ಲಿ ಕಟ್ಟಿದೆ. ಮೈಬಣ್ಣ ಬಿಳಿ)

೩. ಉಮಾತಾಂಡವ -

'ಏ(ಏ)ಕವಕ್ತ್ರಂ ತ್ರಿನಯನಂ ಜಟಾಮಂಡಲಭೂಷಿತಂ।
ಗೌರಾಂಗಂ ಷಡ್ಭುಜೋಪೇತಮಭಯಂ ಡಮರುಂ ತಥಾ। (II)
ಶೂಲಂ ದಕ್ಷಿಣ ಪಾರ್ಶ್ವೇ ತು ಕಪಾಲಂ ವಿಸ್ಮಯಂ ತಥಾ।
ಗಜಹಸ್ತೋಪಮಂ ಹಸ್ತಂ ಸವ್ಯಪಾರ್ಶ್ವಾನುಗಂ ಗರಂ। (II)
ತದೇವ ವಾಮಪಾದಂ ತು ಅಪಸ್ಮಾರೋಪರಿ ಸ್ಥಿತಂ।
ಉದ್ಧೃತಂ ದಕ್ಷಿಣಂ ಪಾದಂ ವಾಮಪಾದಾನುಗಂ ತಥಾ। (II)
ವಾಮಪಾರ್ಶ್ವೇ ಉಮಾದೇವೀಸಹಿತಂ ಜಾಹ್ನವೀಯುತಂ।
ಸರ್ವಾಭರಣಸಂಯುಕ್ತಂ ವ್ಯಾಘ್ರಚರ್ಮೋತ್ತರೀಯಕಂ। (II)
ಉಮಾತಾಂಡವಮೇವೋಕ್ತಂ ಗೌರೀತಾಂಡವಮುಚ್ಯತೇ ॥೩॥
ಶಿಷ್ಟಂ ಪೂರ್ವವತ್।ಗೌರವರ್ಣಃII '




ಉಮಾತಾಂಡವ

(ಉಮಾತಾಂಡವದಲ್ಲಿ ಶಿವನ ಜಟೆಯು ಮಂಡಲಾಕಾರವಾಗಿದೆ. ಆರು ಕೈಗಳು. ಬಲಗಡೆ, ನಿಜಹಸ್ತ ಅಭಯಮುದ್ರೆಯಲ್ಲಿ, ಉಳಿದೆರಡರಲ್ಲಿ ಶೂಲ ಮತ್ತು ಡಮರುಗಗಳನ್ನು ಹಿಡಿದಿದ್ದಾನೆ. ಎಡಗಡೆ, ಆನೆಯ ಸೊಂಡಿಲಂತೆ ಚಾಚಿರುವ ನಿಜಹಸ್ತ.; ಪರಹಸ್ತಗಳಲ್ಲಿ ತಲೆಯೋಡೆ ಮತ್ತು ವಿಸ್ಮಯಮುದ್ರೆ. ಎಡಗಾಲು ಅಪಸ್ಮಾರಪುರುಷನ ಮೇಲೆ. ಬಲಗಾಲನ್ನು ಎತ್ತಿ ಎಡೆಗಡೆಗೆ ಚಾಚಲಾಗಿದೆ. ಎಡಪಕ್ಕದಲ್ಲಿ ಉಮಾದೇವಿ ನಿಂತಿದ್ದಾಳೆ. ಗಂಗೆಯೂ ಇದ್ದಾಳೆ. ಹುಲಿಯ ಚರ್ಮ ಹೊದ್ದಿದ್ದಾನೆ)

೪. ಗೌರೀತಾಂಡವ -

'ಶಾಂತಂ ಚತುರ್ಭುಜೋಪೇತಂ ರಕ್ತವರ್ಣಂ ಸ್ಮಿತಾನನಂ।
ಕರೋಟೀಂ ಬಕಪುಷ್ಪಂ ಚ ದುತ್ತೂರಂ ಚಾರ್ಕಪುಷ್ಪಕಂ। (II)
ಬಾಲಚಂದ್ರಜಟಾಜೂಟಂ ಸುವಿಕೀರ್ಣಜಟಾನ್ವಿತಂ(I)
ಸರ್ಪಕಂಕಣಸಂಯುಕ್ತಮಪಸ್ಮಾರೋಪರಿ ಸ್ಥಿತಂ। (II)
ದಕ್ಷಿಣಂ ಕುಂಚಿತಂ ಪಾದಂ ವಾಮಪಾದಂ ತದೂರ್ಧ್ವಕಂ।
ಸವ್ಯೇ ತು ಪೂರ್ವಮಭಯಮನ್ಯೇ ಡಮರುಕಂ ಕರೇ। (II)
ಅನ್ಯಸ್ಮಿನ್ ವ್ಯಾಳಪೂರ್ವಂ ತು ಅಪರೇ ವನ್ಹಿ(ಹ್ನಿ) ಪಾತ್ರಕಂ।
ವಾಮೇ ಗೌರೀಸಮಾಯುಕ್ತಮವಾಮೇ ನಂದಿಕೇಶ್ವರಂ। (II)
ಸುವಿಕೀರ್ಣ ಜಟಾಭಾರಂ ಜಟಾಮಕುಟಸಂಯುತಂ।
ವಾಮೇ ಮೌಳಿಸಮಾಯುಕ್ತಂ ಶೇಷಂ ಪ್ರಥಮನೃತ್ಯವತ್। (II)
ಗೌರೀತಾಂಡವಮಿತ್ಯುಕ್ತಂ ಕಾಳಿಕಾತಾಂಡವಂ ಶೃಣು॥೪॥
ರಕ್ತವರ್ಣಃII '




ಗೌರೀತಾಂಡವ

(ಗೌರೀತಾಂಡವದಲ್ಲಿ ಕುಣಿಯುತ್ತಿರುವ ಶಿವನ ಎಡಭಾಗದಲ್ಲಿ ಗೌರಿಯೂ, ಬಲಭಾಗದಲ್ಲಿ ನಂದಿಕೇಶ್ವರನೂ ನಿಂತಿರುತ್ತಾರೆ. ಶಿವನು ಶಾಂತನಾಗಿ ಚತುರ್ಭುಜನಾಗಿದ್ದಾನೆ. ಮೈಬಣ್ಣ ಕೆಂಪು. ಜಟೆಯು ಜಟಾಭಾರ ರೀತಿಯಲ್ಲಿಯೂ ಜಟಾಮಕುಟರೀತಿಯಲ್ಲಿಯೂ ಇರುತ್ತದೆ. ಜಟೆಯಲ್ಲಿ ತಲೆಯೋಡೆ, ಬಕಪುಷ್ಪ, ದುತ್ತೂರಪುಷ್ಪ, ಅರ್ಕಪುಷ್ಪಗಳು ಮತ್ತು ಚಂದ್ರರೇಖೆ. ಜಟೆಯು ಹರಡಿಕೊಂಡಂತೆಯೂ ಇರುತ್ತದೆ. ಚತುರ್ಭುಜನಾದ ಶಿವನು ಅಭಯಮುದ್ರೆ, ಡಮರುಗ (ಬಲಗೈಗಳಲ್ಲಿ), ಹಾವು, ಅಗ್ನಿಪಾತ್ರೆ (ಎಡಗೈಗಳಲ್ಲಿ)ಗಳನ್ನು ಹಿಡಿದಿದ್ದಾನೆ ಕೈಗಳಲ್ಲಿ ಸರ್ಪಕಂಕಣವಿದೆ. ಬಲಗಾಲು ಕುಂಚಿತಪಾದ, ಎಡಗಾಲನ್ನು ಮೇಲೆತ್ತಿದ್ದಾನೆ ಕಾಲಕೆಳಗೆ ಅಪಸ್ಮಾರಪುರುಷ. ಉಳಿದೆಲ್ಲ ವಿವರಗಳೂ ಆನಂದತಾಂಡವದಲ್ಲಿರುವಂತೆಯೇ)

೫. ಕಾಳೀತಾಂಡವ -

'ಏ(ಏ)ಕ ವಕ್ತ್ರಂ ದ್ವಿನಯನಂ ಜಟಾಸಂಕೀರ್ಣಮಸ್ತಕಂ।
ಭುಜಾಷ್ಟಕಸಮಾಯುಕ್ತಂ ಸವ್ಯಪಾದಂ ಸಮುದ್ಧೃತಂ(II)
ಸವಕ್ರಂ ವಾಮಪಾದಂ ತು ಅಪಸ್ಮಾರೋಪರಿ ಸ್ಥಿತಂ।
ಅಭಯಂ ಶೂಲಪಾಶಂ ಚ ಡಮರುಂ ದಕ್ಷಿಣೇ ಕರೇ । (II)
ಕಪಾಲಂ ಚಾಗ್ನಿಪಾತ್ರಂ ಚ ಘಂಟಾಂ ವಾಮಕರೇ ವರಂ।
ಗಜಹಸ್ತೋಪಮಂ ಹಸ್ತಂ ಪ್ರಸಾರ್ಯಂ ದಕ್ಷಿಣಾನುಗಂ। (II)
ಸರ್ವಲಕ್ಷಣ ಸಂಯುಕ್ತಂ ಶೇಷಂ ಪ್ರಥಮನೃತ್ತ(ತ್ಯ)ವತ್।
ಕಾಳಿಕಾತಾಂಡವಂ ಪ್ರೋಕ್ತಂ ವಕ್ಷ್ಯೇತ್ರಿಪುರತಾಂಡವಂ। (II)
ಗೌರವರ್ಣಃ॥೫॥ '




ಕಾಳೀತಾಂಡವ

(ಕಾಳೀತಾಂಡವದಲ್ಲಿ ಶಿವನದು ಬಿಳಿಯ ಮೈಬಣ್ಣ;ಎರಡೇ ಕಣ್ಣುಗಳು, ಎಂಟುಕೈಗಳು, ಜಟೆಯು ಸಂಕೀರ್ಣವಾಗಿದೆ. ಕೈಗಳಲ್ಲಿ ಅಭಯಮುದ್ರೆ, ಶೂಲ, ಪಾಶ ಮತ್ತು ಡಮರುಗ (ಬಲಗಡೆ), ಗಜಹಸ್ತ, ತಲೆಯೋಡೆ, ಅಗ್ನಿಪಾತ್ರೆ ಮತ್ತು ಘಂಟೆ (ಎಡಗಡೆ). ಕಾಲಕೆಳಗೆ ಅಪಸ್ಮಾರ ಪುರುಷನಿದ್ದಾನೆ. ಅವನನ್ನು ಮೆಟ್ಟಿ ಎಡಗಾಲು ಕುಂಚಿತವಾಗಿದೆ. ಬಲಗಾಲನ್ನು ಎತ್ತಿದ್ದಾನೆ).

೬. ತ್ರಿಪುರತಾಂಡವ -

'ದೋರ್ಭಿಷ್ಷೋಡಶಭಿರ್ಯುಕ್ತಂ ವಾಮೇ ಗೌರೀ ಸಮಾಶ್ರಿ(ಶ್ರಿ)ತಂ।
ಸ್ಕಂದಂ ದಕ್ಷಿಣಪಾರ್ಶ್ವೇ ತು ಸವ್ಯಹಸ್ತೇ ಧೃತಾಂಜಲಿಂ। (II)
ಅಭಯಂ ಡಮರುಂ ಚೈವ ವಜ್ರಂ ಶೂಲಂ ತಥೈವ ಚ।
ಪಾಶಂ ಟಂಕಂ ತಥಾ ದಂಡಂ ನಾಗಂ ವೈ ದಕ್ಷಿಣೇ ಕರೇ । (II)
ಸವ್ಯಾನುಗಂ ಕರಂ ಚೈವ ವರದಂ ಕೇತುಖೇಟಕಂ । (II)
ಘಂಟಾಂ ಚೈವ ಕಪಾಲಂ ಚ ವಾಮಪಾರ್ಶ್ವೇಷ್ವಭಿಃ ಕರೈಃ।
ಸರ್ವಲಕ್ಷಣ ಸಂಯುಕ್ತಂ ಶೇಷಂ ಪ್ರಥಮನೃತ್ತ(ತ್ಯ)ವತ್। (II)
ತ್ರೈಪುರಂ ತಾಂಡವಂ ಪ್ರೋಕ್ತಂ ಸಂಹಾರಂ ಚ ತತ(ಃ) ಶ್ರುಣು।
ಗೌರವರ್ಣಃ॥೬॥ '

(ತ್ರಿಪುರ ತಾಂಡವದಲ್ಲಿ ಶಿವನದು ಹದಿನಾರು ಕೈಗಳ ರೂಪ. ಎಡಗಡೆ ಗೌರಿಯೂ, ಬಲಗಡೆ ಸ್ಕಂದ-ಸುಬ್ರಹ್ಮಣ್ಯನೂ ನಿಂತಿದ್ದಾರೆ. ಸ್ಕಂದನದು ಅಂಜಲಿಬದ್ಧಮುದ್ರೆ. ಬಲಗಡೆಯ ಎಂಟುಕೈಗಳಲ್ಲಿ ಅಭಯ, ಡಮರು,



ತ್ರಿಪುರತಾಂಡವ


ವಜ್ರ, ಶೂಲ, ಪಾಶ, ಟಂಕ, ದಂಡ, ನಾಗ: ಎಡಗಡೆಯ ಎಂಟುಕೈಗಳಲ್ಲಿ ಗಜಹಸ್ತ, ಅಗ್ನಿ, ಪುಸ್ತಕ, ವರದಮುದ್ರೆ, ಧ್ವಜ, ಖೇಟ, ಘಂಟೆ, ಕಪಾಲಗಳು, ಅಪಸ್ಮಾರನ ಉಲ್ಲೇಖವಿಲ್ಲ. ಆದರೆ ಉಳಿದ ವಿವರಗಳೆಲ್ಲವೂ ಮೊದಲತಾಂಡವದಂತೆಯೇ, ಎಂದರೆ ಆನಂದತಾಂಡವದಂತೆಯೇ ಎಂದು ಹೇಳಲಾಗಿದೆ).

೭. ಸಂಹಾರತಾಂಡವ -

'ತ್ರಿನೇತ್ರಂ ಚಾಷ್ಟಹಸ್ತಂ ಸುವಿಕೀರ್ಣಜಟಾನ್ವಿತಂ।
ಕುಂಚಿತಂ ವಾಮಪಾದಂ ಚ ಅಪಸ್ಮಾರೋಪರಿ ಸ್ಥಿತಂ। (II)
ಉದ್ಧೃತಂ ದಕ್ಷಿಣಂ ಪಾದಂ ವ್ಯಾಘ್ರಚರ್ಮೋತ್ತರೀಯಕಂ।
ಅಭಯಂ ಶೂಲಪಾಶೇ ಚ ಡಮರುಂ ದಕ್ಷಿಣೇ ಕರೇ। (II)
ಕಪಾಲಂ ಚಾಗ್ನಿಪಾತ್ರಂ ಚ ತಥಾ ವಿಸ್ಮಯಹಸ್ತಕಂ।
ಗಜಹಸ್ತೋಪಮಂ ವಾಮೇ ಚತುರ್ದೋರ್ಭಿ
ಸಾ(ಸ್ಸ)ಮನ್ವಿತಂ। (II)
ಗಜಹಸ್ತೋಪಮಂ ಸವ್ಯಮಪಸವ್ಯಾನುಗಂ ತಥಾ।
ನಂದೀಶಂ ಸವ್ಯಭಾಗೇ ತು ವಾಮೇ ಗೌರೀಸಮನ್ವಿತಂ। (II)
ಸಪ್ತಮಂ ನೃತ್ಯಮಾಖ್ಯಾತಂ ಜಗದ್ವೃದ್ಧಿಕರಂ ಭವೇತ್।
ಶಿಷ್ಟಂ ಪ್ರಥಮನೃತ್ತ(ತ್ಯ)ವತ್(।)ಗೌರವರ್ಣಃ॥೭೪॥ '





ತ್ರಿಪುರತಾಂಡವ





ಸಂಹಾರತಾಂಡವ


(ಸಂಹಾರತಾಂಡವದಲ್ಲಿ ಶಿವನು ಮುಕ್ಕಣ್ಣ, ಎಂಟುಕೈಗಳವನು; ಹರಡಿಕೊಂಡಿರುವ ಜಟೆ. ಎಡಗಾಲು ಬಾಗಿಕೊಂಡಿದ್ದು ಅಪಸ್ಮಾರನ ಮೇಲಿದೆ; ಬಲಗಾಲನ್ನು ಎತ್ತಿದ್ದಾನೆ. ಹುಲಿಯ ಚರ್ಮವನ್ನು ಹೊದ್ದಿದ್ದಾನೆ. ಬಲಭಾಗದಲ್ಲಿ ನಂದಿಕೇಶ್ವರನೂ, ಎಡಭಾಗದಲ್ಲಿ ಗೌರಿಯೂ ನಿಂತಿದ್ದಾರೆ. ಅಭಯಮುದ್ರೆ ಶೂಲ, ಪಾಶ, ಡಮರುಗ ಇವು ಬಲಗೈಗಳಲ್ಲಿಯೂ, ಗಜಹಸ್ತ, ಕಪಾಲ, ಅಗ್ನಿಪಾತ್ರೆ, ವಿಸ್ಮಯಮುದ್ರೆ ಇವು ಎಡಕೈಗಳಲ್ಲಿಯೂ ಕಾಣುತ್ತವೆ. ನಂಜನಗೂಡಿನ ಗುಡಿಯ ಪ್ರಾಕಾರದ ಮೇಲಿರುವ ಸಪ್ತತಾಂಡವಗಳ ಗಾರೆಶಿಲ್ಪಗಳಲ್ಲಿ ಒಂದರ ಕೆಳಗೆ 'ಸಂಹಾರತಾಂಡವ' ಎನ್ನುವ ಬರಹವಿದೆ. ಆದರೆ ಇದು ಈ ಮೂರ್ತಿಲಕ್ಷಣವನ್ನನುಸರಿಸಿಲ್ಲ. ಈ ಶಿಲ್ಪಗಳು ಮುಮ್ಮಡಿಯವರ ಕಾಲದಲ್ಲೇ ಆದವು)

















(೪) ಭವಾದ್ಯಷ್ಟಮೂರ್ತಿಗಳು -

ಶೈವಾಗಮ(ಶೇಖರ)ವೆಂಬ ಆಕರಗ್ರಂಥದಲ್ಲಿರುವ ಒಕ್ಕಣೆಯಿದು. ಶಿವನಿಗೆ ಭವನೇ ಮೊದಲಾದ ಎಂಟು ಹೆಸರುಗಳಿವೆಯಷ್ಟೆ? ಇವು ಶಿವನ ಎಂಟು ಶರೀರಗಳೆಂದು ಕಲ್ಪಹೆ. ಮಹಾಕವಿ ಕಾಳಿದಾಸನೂ 'ತನುಭಿರಷ್ಟಾಭಿರೀಶಃ ' ಎಂದು ಉಲ್ಲೇಖಿಸಿದ್ದಾನೆ.

'ಭವಶ್ಶರ್ವಸ್ತಥೇಶಾನಃ ಪಶುಪತ್ಯುಗ್ರಕೌ ತಥಾ।
ರುದ್ರೋಭೀಮೋಮಹಾದೇವಃ ಕೀರ್ತಿತಾಸ್ತ್ವಷ್ಟಮೂರ್ತಯಃ॥ '

ಈ ಎಂಟು ರೂಪಗಳ ಹೆಸರುಗಳು (೧)ಭವ, (೨)ಶರ್ವ, (೩)ಈಶಾನ, (೪)ಪಶುಪತಿ, (೫)ಉಗ್ರ, (೬)ರುದ್ರ, (೭)ಭೀಮ, (೮)ಮಹಾದೇವ. ಅವರೆಲ್ಲರ ಮೂರ್ತಿಲಕ್ಷಣ ಒಂದೇ;ಆದರೆ ಮೈಬಣ್ಣಗಳು ಬೇರೆ ಬೇರೆಯಾಗಿವೆ.

'ಚತುರ್ಭುಜಾಸ್ತ್ರಿನೇತ್ರಾಶ್ಚ ಜಟಾಮಕುಟಧಾರಿಣಃ।
ವರಾಭಯಕರಾ ಚೈವ ಟಂಕಕೃಷ್ಣಧರಾಸ್ತಥಾ। (॥)
ಸರ್ವಾಭರಣ ಸಂಯುಕ್ತಾ ರಕ್ತಕ್ಷೌಮಧರಾ ಇಮೇ
ಶುಕ್ಲಂ ಶ್ಯಾಮಂ ರಕ್ತಂ ಚ ಕೃಷ್ಣ ಗೋಕ್ಷೀರಸನ್ನಿಭಂ।
ಕಾಶ್ಮೀರಂ ವಿದ್ರುಮಂ ನೀಲಂ ಭವಾದೀನಾಂ ಚ ವರ್ಣಕಂ॥

ಎಂಟು ಮೂರ್ತಿಗಳೂ ನಾಲ್ಕು ಕೈಯವರು, ಜಟೆಯನ್ನು ಮಕುಟದಂತೆ ಕಟ್ಟಿಕೊಂಡಿರುವವರು, ಮೂರು ಕಣ್ಣುಗಳುಳ್ಳವರು, ಸರ್ವಾಭರಣಭೂಷಿತರು, ಕೆಂಬಣ್ಣದ ರೇಶ್ಮೆಬಟ್ಟೆಯನ್ನುಟ್ಟವರು. ಅವರ ನಿಜಹಸ್ತಗಳನ್ನು ಅಭಯವರದ ಮುದ್ರೆಯಲ್ಲಿರಿಸಿಕೊಂಡು ಪರಹಸ್ತಗಳಲ್ಲಿ ಟಂಕ ಮತ್ತು ಜಿಂಕೆ (ಕೃಷ್ಣಮೃಗ)ಗಳನ್ನು ಹಿಡಿದಿದ್ದಾರೆ. ಅವರ ಮೈಬಣ್ಣಗಳು ಕ್ರಮವಾಗಿ ಬಿಳಿ, ನೀಲಿಗಪ್ಪು, ಕೆಂಪು, ಕಪ್ಪು, ಹಸುವಿನ ಹಾಲಿನ ಬಣ್ಣ, ಕೇಸರಿಯ ಬಣ್ಣ, ಹವಳದ ಬಣ್ಣ ಮತ್ತು ನೀಲಿಬಣ್ಣ.

(೫) ಏಕಾದಶರುದ್ರರು -

ಶೈವಾಗಮದಲ್ಲಿ ಹನ್ನೊಂದು ಮಂದಿ ರುದ್ರರ ಹೆಸರುಗಳನ್ನು ಶಂಭು, ಪಿನಾಕಿ, ಗೌರೀಶ, ಸ್ಥಾಣು, ಭರ್ಗ, ಸದಾಶಿವ, ಶಿವ, ಹರ, ಶರ್ವ, ಕಪಾಲೀ ಮತ್ತು ಭವ ಎಂದು ಕೊಡಲಾಗಿದೆ. ಪದ್ಮಪುರಾಣದಲ್ಲಿ ಈ

ಒಂದೊಂದು ರೂಪಗಳಿಗೂ ಪ್ರತ್ಯೇಕವಾಗಿ ಧ್ಯಾನಶ್ಲೋಕಗಳನ್ನು ಕೊಟ್ಟಿದೆ. ಆದರೆ ಕಡೆಯಲ್ಲಿ ಈ ಎಲ್ಲ ರೂಪಗಳಿಗೂ ಸಮನಾದ ಮೂರ್ತಿಲಕ್ಷಣವನ್ನು ಹೇಳಿದ್ದಾರೆ-

'ತ್ರಿಣೇತ್ರಾ ರುದ್ರಸದೃಶಾ ಜಟಾಮಕುಟಧಾರಿಣಃ।
ರುದ್ರಂ ತ್ರಿಣೇತ್ರಮರುಣಂ ಜಟಾಮಂಡಲಧಾರಿಣಂ। (II)
ಚತುರ್ಭುಜಂ ನೀಲಕಂಠಮಿಂದುರೇಖಾ ವಿಭೂಷಿತಂ।
ವೈಯಾಘ್ರ ಚರ್ಮವಸನಂ ಸರ್ವಾಭರಣಭೂಷಿತಂ। (II)
ಕರಾಭ್ಯಾಮಪಿ ಮುಖ್ಯಾಭ್ಯಾಂ ವರದಾಭಯದಂ ಸ್ಥಿರಂ।
ಅಪರಾಭ್ಯಾಂ ಚ ಹಸ್ತಾಭ್ಯಾಂ ಬಿಭ್ರಾಣಂ ಪರಶುಂ ಮೃಗಂ ॥
ಏ(ಏ)ತೇಷಾಂ ವರ್ಣಾಃ॥
ಶೋಣಶ್ಚ ಹರಿತೋ ನೀಲಃ ಶ್ವೇತಶ್ಯಾಮಲಮೇಚ ಕೌ।
ಪೀತಃ ಕಾಳಸ್ತಥಾ ಬಭ್ರುವರ್ಣತಃ ಪಾಟಲಸ್ಸಿತಃ॥
ಏ(ಏ)ಕಾದಶ ರುದ್ರಾಣಾಂ ವರ್ಣೋ(s)ಯಂ ಸಮುದಾಹೃತಃ॥ '

ಎಲ್ಲರೂ ಮೂರು ಕಣ್ಣುಗಳುಳ್ಳವರು, ಜಟಾಮಕುಟಧಾರಿಗಳು. ರುದ್ರನ ರೂಪಾಂತರಗಳು. ರುದ್ರನಾದರೋ ತ್ರಿನೇತ್ರ, ಅರುಣವರ್ಣ, ಜಟಾಮಂಡಲಧಾರಿ, ಚತುರ್ಭುಜ, ನೀಲಕಂಠ, ಚಂದ್ರಶೇಖರ, ವ್ಯಾಘ್ರಚರ್ಮವನ್ನುಟ್ಟವನು, ಸರ್ವಾಭರಣಭೂಷಿತ. ನಾಲ್ಕುಕೈಗಳು; ನಿಜಹಸ್ತಗಳಲ್ಲಿ ವರದ ಅಭಯಮುದ್ರೆಗಳು; ಪರಹಸ್ತಗಳಲ್ಲಿ ಕೊಡಲಿ, ಜಿಂಕೆ. ಈ ಹನ್ನೊಂದು ರೂಪಾಂತರಗಳ ಬಣ್ಣಗಳು ಕ್ರಮವಾಗಿ ರಕ್ತದಂತೆ ಕೆಂಪು, ಹಸಿರು, ನೀಲಿ, ಬಿಳಿ, ನೀಲಿಗಪ್ಪು, ಮೇಚಕ, ಹಳದಿ, ಕಾಡುಗಪ್ಪು, ಬೂದಿಬಣ್ಣ, ನಸುಗೆಂಪು ಮತ್ತು ತಿಳಿಯಾದ ಬಿಳಿ.

(೬) ಪಂಚವಿಂಶತಿಲೀಲಾ ಮೂರ್ತಿಗಳು

ಶಿವನ ರೂಪಗಳಲ್ಲಿ ಪ್ರಧಾನವಾದುವು ಇವು; ಪ್ರಸಿದ್ಧವಾಗಿರುವುವೂ ಅವೇ. ಶಿವನ ಪೂಜೆಯು ಲಿಂಗರೂಪದಲ್ಲೇ ನಡೆಯುವುದಾದರೂ ಧ್ಯಾನಕ್ಕೆ, ಉಪಾಸನೆಗೆ, ಉತ್ಸವಗಳಿಗೆ, ಶಿಲ್ಪಚಿತ್ರಣಕ್ಕೆ ಈ ಮೂರ್ತಿಗಳನ್ನು ಕಲ್ಪಿಸಿಕೊಳ್ಳಲಾಗಿದೆ. ಶಿವನ ದಿಟವಾದ ಸ್ವರೂಪವು ಅಮೂರ್ತ, ನಿರಾಕಾರ. ಲಿಂಗವು ಮೂರ್ತಾಮೂರ್ತ, ಸಾಕಾರ-ನಿರಾಕಾರ. ಆದರೆ ಲೀಲಾಮೂರ್ತಿಗಳು ಮೂರ್ತ, ಸಾಕಾರ. ಪುರಾಣದ ಪ್ರಸಂಗಗಳನ್ನವಲಂಬಿಸಿ, ದುಷ್ಟನಿಗ್ರಹಕ್ಕೋ ಶಿಷ್ಟರಕ್ಷಣೆಗೋ ಶಿವನು ಲೀಲಾವತಾರಗಳಲ್ಲಿ ಕಾಣಿಸಿಕೊಂಡಂತೆ ಕಥೆಗಳಿವೆ. ಇವುಗಳಲ್ಲಿ ಅನುಗ್ರಹಮೂರ್ತಿಗಳು, ಸಂಹಾರಮೂರ್ತಿಗಳು, ಯೋಗಮೂರ್ತಿಗಳು, ನೃತ್ಯಮೂರ್ತಿಗಳು ಸೇರಿಕೊಳ್ಳುತ್ತವೆ. ಕಾರಣಾಗಮದಿಂದ ಎತ್ತಿಕೊಂಡಂತೆ, ಶಿವನ ಇಪ್ಪತ್ತೈದು ಲೀಲಾಮೂರ್ತಿಗಳ ವರ್ಣನೆಗಳನ್ನು ಶ್ರೀತತ್ತ್ವನಿಧಿಯಲ್ಲಿ ಕೊಡಲಾಗಿದೆ.

೧. ಚಂದ್ರಶೇಖರ -


'ಅಭಯಂ ವರದ ಹಸ್ತಂ ಸೌಮ್ಯಶೃಂಗಾರಭಾವಂ।
ವಿಪುಲವದನನೇತ್ರಂ ಚಂದ್ರಬಿಂಬಾಂಕ ಮೌಳಿಂ। (II)
ಬು(ಭು)ಜತನುಸಮಪಾದಸ್ಥಾನಕಂ ವಿದ್ರುಮಾಭಂ।
ಹರಿಣಪರಶುಪಾಣಿಂ ಪದ್ಮಪೀಠೋಪರಿಷ್ಠಂ॥
ಪ್ರವಾಳವರ್ಣಃ॥ '

(ಹವಳಬಣ್ಣದ ಪುರುಷಾಕಾರ; ಸೌಮ್ಯಭಾವ, ಶೃಂಗಾರವೇಷ, ಸಮಸ್ಥಾನಕಭಂಗಿ. ಪದ್ಮಪೀಠದ ಮೇಲೆ ನಿಂತಂತೆ ಅಥವಾ ಕುಳಿತಂತೆ ಕಾಣಿಸಿಕೊಳ್ಳುವವನು;ತಲೆಯ ಮೇಲೆ ಚಂದ್ರಬಿಂಬ. ನಾಲ್ಕುಕೈಗಳು. ಅಭಯವರದ ಮುದ್ರೆಗಳು ನಿಜಹಸ್ತಗಳಲ್ಲಿ; ಜಿಂಕೆ ಮತ್ತು ಕೊಡಲಿ ಪರಹಸ್ತಗಳಲ್ಲಿ)

ತತ್ಪಾರ್ಶ್ವಸ್ಥಗೌರೀ -

'ಶ್ಯಾಮಾಂ ತ್ರಿಣೇತ್ರಾಂ ದ್ವಿಭುಜಾಂ ತ್ರಿಭಂಗೀಂ।
ಸವ್ಯಾಪಸವ್ಯಸ್ಥಿತ ಕುಂಚಿತಾಂಘ್ರಿಂ
ಸರ್ವೇ ತು ನೀಲೋತ್ಪಲಚಾರುಹಸ್ತಾಂ
ದೇವಸ್ಯ ವಾಮಸ್ಥಿತ ಪದ್ಮಪೀಠಾಂ॥
ಶ್ಯಾಮವರ್ಣಃ॥೧॥

(ಚಂದ್ರಶೇಖರಮೂರ್ತಿಯಲ್ಲಿ 'ಕೇವಲ" ಎಂದರೆ ಒಬ್ಬನೇ ಇರುವುದು ಮತ್ತು 'ಸಹಿತ' ಎಂದರೆ ದೇವಿಯೊಡಗೂಡಿ ಇರುವುದು ಎಂಬೆರಡು ಭೇದಗಳಿವೆ. ಇಲ್ಲಿ 'ಸಹಿತ ಚಂದ್ರಶೇಖರ'ನನ್ನು ಹೇಳಲಾಗಿದೆ. ಚಂದ್ರಶೇಖರನ ಎಡಭಾಗದಲ್ಲಿ, ಆದರೆ ಬೇರೊಂದು ಪದ್ಮಪೀಠದಲ್ಲಿ ಕುಳಿತಿರುವಂತೆ ಗೌರಿಯನ್ನು ಕಾಣಿಸಬೇಕು. ನೀಲಿಗಪ್ಪು ಅವಳ ಮೈಬಣ್ಣ. ಮುಕ್ಕಣ್ಣೆ, ಆದರೆ ದ್ವಿಭುಜೆ. ಎಡಗೈಯಲ್ಲಿ ನೈದಿಲೆಹೂವನ್ನು ಹಿಡಿದಿದ್ದಾಳೆ)



ಚಂದ್ರಶೇಖರ ಮೂರ್ತಿ



ಚಂದ್ರಶೇಖರ

'ಧವಳಾಭಸುಖಾಸನದೇವೀಯುತಂ
ಮೃಗಶಿಶುಟಂಕವರಾಭಯಹಸ್ತಂ।
ಸುಮುಖೀಕೃತಮುತ್ಪಲದೃಗ್ವರದಂ
ಉಮಯಾ ಸಹ ದೇವ ಸರೂಪಮಿದಂ॥
ಶ್ವೇತವರ್ಣಃ॥೨॥'



ಉಮಾಮಹೇಶ್ವರ



ವೃಷಭಾರೂಢ



ಉಮಾಮಹೇಶ್ವರ


(ಉಮಾಮಹೇಶ್ವರನು 'ಸಹಿತ' ಎಂದರೆ ದೇವಿಯೊಡಗೂಡಿ ಒಂದೇ ಪೀಠದ ಮೇಲಿರುವ ಮೂರ್ತಿ. ಇಬ್ಬರೂ ಸುಖಾಸನದಲ್ಲಿ ಕುಳಿತಿದ್ದಾರೆ. ಮಹೇಶ್ವರನಿಗೆ ನಾಲ್ಕುಕೈಗಳು; ನಿಜಹಸ್ತಗಳಲ್ಲಿ ವರದ ಅಭಯಮುದ್ರೆಗಳು;ಪರಹಸ್ತಗಳಲ್ಲಿ ಜಿಂಕೆಯ ಮರಿ, ಟಂಕ. ಉಮೆಗೆ ಎರಡೇ ಕೈಗಳು, ಒಂದರಲ್ಲಿ ಉತ್ಪಲಪುಷ್ಪವನ್ನು ಹಿಡಿದಿದ್ದಾಳೆ, ಇನ್ನೊಂದು ವರದಮುದ್ರೆಯಲ್ಲಿದೆ).

೩. ವೃಷಭಾರೂಢ -


'ಸವ್ಯೇ ಸ್ಯಾದ್ವಕ್ರತುಂಡಾನ್ವಿತ ಕಟಕಕರಂ
ಗೋಪತೇಃ ಪೃಷ್ಮಸಂಸ್ಥಂ ವಾಮಸ್ಯಾರ್ಧಂ
ಸವಕ್ಷಂ ವರಕರಯುಗಳೇ ಟಂಕಕೃಷ್ಣಂ ದಧಾನಂ।
ಪೃಷ್ಪ(ಷ್ಮ)ಸ್ಫೋ(s)ಕ್ಷಂ ಪ್ರಸನ್ನಂ ತ್ರಿಣಯನ
ಲಸಿತಂ ಬಧ(ದ್ಧ)ವೇಣೀ ಕಿರೀಟಂ।
ವಾಮೇ ಗೌರ್ಯಾ ಸಮೇತಂ ನಮತ
ಶುಭಕರಂ ತಂ ವೃಷಾರೂಢ ಶಂಭುಂ॥
ಶ್ವೇತವರ್ಣಃ॥'



ಉಮಾಮಹೇಶ್ವರ



ವೃಷಭಾರೂಢ ಮೂರ್ತಿ



ವೃಷಭಾರೂಢ ಮೂರ್ತಿ

(ಶಿವನು ವೃಷಭವನ್ನು ಎಂದರೆ ನಂದಿಯನ್ನು ಏರಿ ಕುಳಿತು ಸಾಗುತ್ತಿರುವ ಚಿತ್ರಣ. ಮುಕ್ಕಣ್ಣನೂ ಬಿಳಿಬಣ್ಣದವನೂ ಜಟಾಮುಕುಟಧಾರಿಯೂ ಚತುರ್ಭುಜನೂ ಆದ ಶಿವನು ಗೌರಿಯೊಡನೆ ಕುಳಿತಿದ್ದಾನೆ; ಗಣಪತಿಯೂ ಬಲಭಾಗದಲ್ಲಿದ್ದಾನೆ)

೪. ನಾಟ್ಯಮೂರ್ತಿ -


'ಶೈ(ಶ)ಯ್ಯಾಪಸ್ಮಾರದೊ(ಕೋ)ರ್ಧ್ವಸ್ಥಿತ-
ಪದವಿಲಸದ್ವಾಮಮುದ್ಧೃತ್ಯ ಪಾದಂ
ಜ್ವಾಲಾಮಾಲಾಸುಮಧ್ಯೇ ನಟಫಣಿಶಿರಸಿ
ಸ್ಫೂಲಪಾದಾದಿಸೇವಾನ್ (ಸ್ಫೂಲಮಾಸೇದಿವಾನ್ ಯಃ)
ಭಸ್ಮೋದ್ಧೂಳಿತಮಂಗವಿದ್ಯುಮನಿಭಂ
ಹಸ್ತಾಗ್ರ ಪಾದಾಗ್ರ ಯೋರಗ್ನಿಂ
ಡೋಳಕ(ವ)ರಾಭಯಂ ಡಮರುಕಂ
ಧೃತ್ವಾ ನಟೇಶಂ ಭಜೇ ॥
ರಕ್ತವರ್ಣಃ॥೪॥ '

(ನಟೇಶನು ಹವಳದಂತೆ ಕೆಂಬಣ್ಣದ ಮೈಯುಳ್ಳವನು; ಅಪಸ್ಮಾರ ಪುರುಷನನ್ನು ಕಾಲಕೆಳಗೆ ತುಳಿದು ಅವನ ಮೇಲೆ ಕುಣಿಯುತ್ತಿರುವವನು. ಭಸ್ಮೋದ್ಧೂಳಿತ ದೇಹ; ಸುತ್ತಲೂ ಅಗ್ನಿಯ ಪ್ರಭಾಮಂಡಲ. ನಾಲ್ಕು ಕೈಗಳಲ್ಲಿ ಅಭಯಮುದ್ರೆ, ದೋಲಾಹಸ್ತ, ಡಮರುಕ, ಅಗ್ನಿ. ಶಿವನ



ನಾಟ್ಯಮೂರ್ತಿ


ಸಮೀಪದಲ್ಲಿ ಶಿವಕಾಮವಲ್ಲಿ ಎಂಬ ಗೌರಿಯ ರೂಪವನ್ನು ಕಾಣಬೇಕೆಂದೂ ನಿರ್ದೇಶನವಿದೆ).



ತಾಂಡವ ಮೂರ್ತಿ


೫೫. ವೈವಾಹಿಕಮೂರ್ತಿ

'ಸಿಂದಾರಾಭಂ ತ್ರಿನೇತ್ರಂ ಯುಗಭುಜಸಹಿತಂ(I)
ಹಾರಕೇಯೂರಭೂಷಂ ದಿವ್ಯೈರ್ವಸ್ತ್ರೈರ್ವ್ಯತಾಂಗಂ I (II)
ಕರಕಟಕಲಸದ್ಧೇಮಕಲ್ಹಾರಭೂಷಂ
ಶಂಭುಂ ದಕ್ಷಿಣಪಾರ್ವತೀಕರತಳಂ(II)
ಸವ್ಯೇತು(ನ) ಸಂಗೃಹ್ಯ ತಂ(ಸಂಗೃಹ್ಣಂತಂ) ಟಂಕಂ ಕೃಷ್ಣಮೃಗಂ(I)
ಧರಂ ವರಕರಂ ಚೂಡೇಂದುಬದ್ಧಂ ಹರಂ (ಬದ್ಧಾದರಂ) I (II)
ಜಟಾಮಕುಟಸಂಯುಕ್ತಂ ಚಂದ್ರಾರ್ಧಕೃತಭೂಷಣಂ I
ತ್ರ್ಯಕ್ಷಂ ಚತುರ್ಭುಜಂ ಶಾಂತಂ ನವಯವ್ವನ(ಯೌವನ)ಗರ್ವಿತಂ I (II)
ಸಮಭಂಗಯುತಂ ದೇವಂ ಸ್ಥಾನಕಂ ಸಂಪ್ರಕೀರ್ತಿತಂ I
ಕುಂಚಿತಂ ಸವ್ಯಪಾದಂ ತು(ಪಾದೇನ) ಸ್ಥಿತಸವ್ಯೇತರಾಂಘ್ರಿಕಂII
ಸಿಂದೂರವರ್ಣಃ(IIಖII)



(ಲಿಪಿಕಾರರು ಬರೆದುಕೊಂಡಿರುವ ಶ್ಲೋಕಗಳಲ್ಲಿ ಸ್ಖಲಿತ್ಯಗಳಿವೆ;ಅರ್ಥ ಸ್ಪಷ್ಟವಾಗುವುದಿಲ್ಲ. ಇದು ವೈವಾಹಿಕಮೂರ್ತಿ ಅಥವಾ ಕಲ್ಯಾಣಸುಂದರಮೂರ್ತಿಯನ್ನು ಕುರಿತ ವರ್ಣನೆ. ಪಾರ್ವತಿಯನ್ನು ಮದುವೆಯಾಗುವಾಗ ತರುಣವರನಾಗಿ ಕಾಣಿಸಿಕೊಂಡ ರೂಪ. ಶಾಂತವಾದ ಮುಖಮುದ್ರೆ, ನವಯೌವನದ ಗತ್ತು, ದಿವ್ಯಾಭರಣಭೂಷಿತ. ಎಡಗಾಲನ್ನು ಊರಿಕೊಂಡು ಬಲಗಾಲನ್ನು ಸ್ವಲ್ಪ ಬಾಗಿಸಿಕೊಂಡಿದ್ದಾನೆ; ಸಮಭಂಗಿ ಮುಕ್ಕಣ್ಣ; ತಲೆಯಮೇಲೆ ಜಟಾಮಕುಚ; ಅರ್ಧಚಂದ್ರ. ಚತುರ್ಭುಜ; ಹಿಂದಿನ ಕೈಗಳಲ್ಲಿ ಟಂಕವನ್ನೂ ಹರಿಣವನ್ನೂ ಹಿಡಿದಿದ್ದಾನೆ. ಮುಂದಿನ ಬಲಗೈಯಲ್ಲಿ ಪಾರ್ವತಿಯ ಕೈಯನ್ನು ಹಿಡಿದಿದ್ದಾನೆ; ಎಡಗೈಯಲ್ಲಿ ವರದಮುದ್ರೆ. ಸಿಂದೂರ ಮೈಬಣ್ಣ).

ಮುಂದೆ ವೈವಾಹಿಕಾಂಗ ಮೂರ್ತಿಗಳಾಗಿ ವಧುವಾದ ಗಿರಿಜೆ, ಪುರೋಹಿತನಾದ ಬ್ರಹ್ಮ, ವಧುವಿನ ತಾಯಿಯಾದ ಮೇನಕೆ, ತಂದೆಯಾದ ಹಿಮವಾನ್, ಸನಕ-ಸನಂದನರು, ವಿಷ್ಣುವೇ ಮೊದಲಾದ ದೇವತೆಗಳು ಎಲ್ಲರ ಮೂರ್ತಿಲಕ್ಷಣಗಳನ್ನು ಕೊಟ್ಟಿದ್ದಾರೆ.



ಕಲ್ಯಾಣ ಸುಂದರ ಮೂರ್ತಿ

೬. ಭಿಕ್ಷಾಟನಮೂರ್ತಿ -

'ಚತುರ್ಭುಜಂ ತ್ರಿನೇತ್ರಂ ಚ ನಗ್ನಂ ಚೈವ ಸ್ಮಿತಾನನಂ।
ಭಸ್ಮದಿಗ್ಧಂ ವಿದ್ರುಮಾಭಂ ಕಟ್ಯಾಂ ಪನ್ನಗಸಂವೃತಂ। (II)
ಆವೃತಾ(ತ್ತಾ)ಲಂಕೃತಂ ಭಂಗೀ ಪಾದೇ ಪಾದುಕಸಂಯುತಂ।
ದಕ್ಷಿಣಂ ತು ಕರಾಗ್ರಂ ಹರಿಣಾಸ್ಯಾನುಗಂ ಭವೇತ್। (II)
ದಕ್ಷಿಣೇ ಪರಹಸ್ತೇ ತು ಡಮರುಂ ಚೈವ ಕಾರಯೇತ್।
ವಾಮೇ ತ್ವಪರಹಸ್ತೇ ತು ತ್ರಿಶೂಲಂ ಪಿಂಛಧಾರಿಣಂ। (II)
ಕುಂಚಿತಂ ದಕ್ಷಿಣಂ ಪಾದಂ ವಾಮಪಾದಂ ತು ಸುಸ್ಥಿತಂ।
ಸಮಭಂಗಸ್ಥಾನಕಂ ಚ ಗಮನೋನ್ಮುಖರೂಪಕಂ। (II)
ಕಪಾಲೋಪೇತ ಹಸ್ತಂ ಚ ವೃಷನಾಭಿಸಮಂ ಭವೇತ್।
ಎ(ಏ)ವಂ ಭಿಕ್ಷಾಟನಂ ಪ್ರೋಕ್ತಂ ಗುಂ(ಕಂ)ಡೋದರಮಥ ಶ್ರುಣು॥
ದೇವಸ್ಯ ವಾಮಪಾರ್ಶ್ವೇತು ಗುಂ(ಕಂ)ಡೋದರಮಥ ಸ್ಥಿತಂ।
ಹಸ್ತದ್ವಯಸಮಾಯುಕ್ತಂ ಕಪಾಲಂ ಶಿರಸಿ ನ್ಯಸೇತ್। (II)
ಭೂತಾಕಾರ ಸಮಾಯುಕ್ತಂ ಕುಂಡಲಂ ಕರ್ಣಯೋನ್ಯ(ರ್ನ್ಯ)ಸೇತ್।
ದೇವಸ್ಯ ವಿದ್ರುಮವರ್ಣಃ ಗುಂ(ಕು)ಡೋದರಸ್ಯ ಶ್ಯಾಮವರ್ಣಃ॥೬॥

(ಬ್ರಹ್ಮನ ಗರ್ವಭಂಗಕ್ಕಾಗಿ ಅವನ ಶಿರಸ್ಸನ್ನು ಕತ್ತರಿಸಿ ಬ್ರಹ್ಮಹತ್ಯಾದೋಷವನ್ನು ಪಡೆದುಕೊಂಡ ಶಿವನು ದೋಷದ ಪ್ರಾಯಶ್ಚಿತ್ತರೂಪವಾಗಿ ಭಿಕ್ಷಾಟನಮೂರ್ತಿಯಾದದ್ದು ಹಿನ್ನೆಲೆಯ ಕಥೆ. ಭಿಕ್ಷಾಟನಮೂರ್ತಿಯು ಮೈಗೆಲ್ಲ ಬೂದಿಯನ್ನು ಬಳಿದುಕೊಂಡು ಬೆತ್ತಲೆಯಾಗಿ ತನ್ನ ಕೈಗಂಟಿಕೊಂಡ ಬ್ರಹ್ಮನ ತಲೆಯೋಡೆಯನ್ನೇ ಹಿಡಿದು ಭಿಕ್ಷೆಯೆತ್ತಲು ಹೊರಟ ರೂಪ. ಮೂರ್ತಿಲಕ್ಷಣದಲ್ಲಿ ಮೂರು ಕಣ್ಣುಗಳು, ನಾಲ್ಕು ಕೈಗಳು, ಮೇಲಿನ ಕೈಗಳಲ್ಲಿ ತ್ರಿಶೂಲಕ್ಕೆ ಕಟ್ಟಿದ ನವಿಲುಗರಿ ಮತ್ತು ಡಮರುಗ, ಕೆಳಗಿನ ಬಲಗೈ ಪಕ್ಕದಲ್ಲಿರುವ ಜಿಂಕೆಯ ಬಾಯಿಯತ್ತ ಚಾಚಿದೆ, ಎಡಗೈಯಲ್ಲಿ ಕಪಾಲ, ಬ್ರಹ್ಮನ ತಲೆಯೋಡೆ. ಬೆತ್ತಲೆಮೈ, ಟೊಂಕಕ್ಕೆ ಹಾವು ಸುತ್ತಿದೆ. ನಗುಮುಖ ಪಾದಗಳಲ್ಲಿ ಮರದ ಹಾವುಗೆಗಳು. ಎಡಗಾಲನ್ನು ಊರಿಕೊಂಡು ಬಲಗಾಲನ್ನು ಕೊಂಚ ಬಗ್ಗಿಸಿರುವ ಭಂಗಿ. ಭಿಕ್ಷಾಟನಮೂರ್ತಿಯ ಎಡಭಾಗದಲ್ಲಿ ಕುಂಡೋದರ ಭೂತ; ತನ್ನೆರಡು ಕೈಗಳಿಂದ ತಲೆಯ ಮೇಲೆ ಕಪಾಲವೊಂದನ್ನೆತ್ತಿ ಹಿಡಿದಿದ್ದಾನೆ. ಶಿವನದು ಹವಳದ ಬಣ್ಣ; ಕುಂಡೋದರನದು ನೀಲಿಗಪ್ಪು)



ವೈವಾಹಿಕ ಮೂರ್ತಿ ಕಾಮದಹನ ಮೂರ್ತಿ

೭. ಕಾಮದಹನಮೂರ್ತಿ -

'ಉಗ್ರರೂಪಂ ತು ಕಾಮಾರಿಂ ಚತುರ್ಭುಜಸಮನ್ವಿತಂ।
ಕೃಷ್ಣಟಂಕ ಸಮಾಯುಕ್ತಮಭಯಂ ವರದಾನ್ವಿತಂ (II)
ಕಾಮನಿಗ್ರಹರೂಪಂ ತು ಪದ್ಮಪೀಠೋಪರಿ ಸ್ಥಿತಂ।
ದಕ್ಷಿಣೇ ಲಂಬಿತಂ ಪಾದಂ ವಾಮಪಾದಂ ತು ಶಾಯಿತಂ। (II)
ಕಾರ್ಯಃ ಕಾಮರಿಪುರ್ಹ್ಯೇವಂ ವಕ್ಷ್ಯೇ(s)ಹಂ ಕಾಲನಾಶನಂ।
ರಕ್ತವರ್ಣಃII(೭II) '


(ತನ್ನ ತಪಸ್ಸನ್ನು ಭಂಗಮಾಡಿದ ಮನ್ಮಥನನ್ನು ಹಣೆಗಣ್ಣಿಂದ ಸುಟ್ಟುಬೂದಿಮಾಡಿದ ಕಥೆ ಹಿನ್ನೆಲೆಯಲ್ಲಿದೆ. ಪದ್ಮಪೀಠದ ಮೇಲೆ ಕುಳಿತು ಬಲಗಾಲನ್ನು ಕೆಳಚಾಚಿ ಎಡಗಾಲನ್ನು ಪೀಠದ ಮೇಲೆ ಅಡ್ಡಲಾಗಿರಿಸಿಕೊಂಡು, ಉಗ್ರಭಂಗಿಯಲ್ಲಿ ಕುಳಿತ ರೂಪ. ನಾಲ್ಕು ಕೈಗಳು, ಜಿಂಕೆ ಮತ್ತು ಟಂಕಗಳು ಮೇಲಿನ ಕೈಗಳಲ್ಲಿ;ಕೆಳಗಿನ ಕೈಗಳಲ್ಲಿ ವರದ ಅಭಯ ಮುದ್ರೆಗಳು. ಕಾಮನನ್ನು ನಿಗ್ರಹಿಸುತ್ತಿರುವ ಶಿವನದು ಕೆಂಬಣ್ಣದ ಮೈ)




ಭಿಕ್ಷಾಟನ ಮೂರ್ತಿ




ಭಿಕ್ಷಾಟನ ಮೂರ್ತಿ



ಭಿಕ್ಷಾಟನ ಮೂರ್ತಿ



ಕಾಮದಹನ ಮೂರ್ತಿ



ಕಾಮ ಸಂಹಾರ ಮೂರ್ತಿ



ಕಾಲಹರಮೂರ್ತಿ

೮. ಕಾಲಹರಮೂರ್ತಿ-

'ಬಂಧೂಕಾಭಂ ತ್ರಿನೇತ್ರಂ ಯುಗಭುಜಸಹಿತಂ
ಶೂಲಧೃತ್ವ(ಕ್ಪ)ದ್ಮ ಹಸ್ತಂ (ಶೂಲಹಸ್ತೋಜ್ಜ್ವಲಂ) ।
ಟಂಕಂ ಸೂಚಿವರಂ ಸುಪಾಶಸಹಿತಂ
ದಂಷ್ಟ್ರಾಕರಾಳಾಸ್ಯಕಂ (॥)
ಪಾದಂ ಕುಂಚಿತವಾಮಮುದ್ಧೃತತಲಂ
ಕಾಲಸ್ಯ ವಕ್ಷಃ ಸ್ಥಳೇಽರ್ಪಿತಂ।
ಸವ್ಯಪಾದಂ ಲಿಂಗ ಮೂರ್ಧ್ನಿ ಸ್ಥಿತಂ
ರೌದ್ರ ಮುಖಂ ಭವೇತ್। (॥)
ರಕ್ತವರ್ಣಃ॥ (॥೮॥')

(ತನ್ನ ಲಿಂಗಪೂಜೆಯಲ್ಲಿ ತೊಡಗಿದ್ದ ಭಕ್ತ ಮಾರ್ಕಂಡೇಯನ ಪ್ರಾಣವನ್ನು ಕೊಂಡೊಯ್ಯಲು ಬಂದ ಯಮನನ್ನು ನಿಗ್ರಹಮಾಡುವ ಶಿವನ ರೂಪ ಇದು. ಯಮನೇ ಕಾಲ. ಇಲ್ಲಿ ಶಿವನು ಲಿಂಗದಿಂದ ಆವಿರ್ಭೂತನಾಗಿ ಕಾಲನನ್ನು ಬೀಳಿಸಿ ಅವನ ಎದೆಯ ಮೇಲೆ ತನ್ನ ಎಡಗಾಲನ್ನು ಮೆಟ್ಟಿದ್ದಾನೆ;ಬಲಗಾಲು ಲಿಂಗದ ಮೇಲಿದೆ. ಮುಕ್ಕಣ್ಣನಾದ ಶಿವನಿಗೆ ನಾಲ್ಕು ಕೈಗಳು. ಟಂಕ, ಸೂಚೀಮುದ್ರೆ, ಪಾಶ ಮತ್ತು ಶೂಲಗಳು



ಕಾಲ ಸಂಹಾರ ಮೂರ್ತಿ

ಕೈಯಲ್ಲಿವೆ. ಶಿವನ ಮುಖದಲ್ಲಿ ಕೋರೆದಾಡೆಗಳು. ಶಿವನ ಮೈಬಣ್ಣ ಕೆಂಪು)

ಇದಕ್ಕೆ ಅಂಗಮೂರ್ತಿಗಳಾಗಿ ಮಾರ್ಕಂಡೇಯ ಮತ್ತು ಯಮ (ಮೃತ್ಯು) ಇವರ ಮೂರ್ತಿಲಕ್ಷಣಗಳನ್ನೂ ಕೊಡಲಾಗಿದೆ.



ಕಾಲಸಂಹಾರ ಮೂರ್ತಿ

೯. ತ್ರಿಪುರಾರಿ -

'ಪತ್ರಂ ತು ವಾಮಕರ್ಣೇ ತು ದಕ್ಷಿಣೇ ಕುಂಡಲಾನ್ವಿತಂ।
ಉಪವೀತಸಮಾಯುಕ್ತಂ ಸಮಭಂಗಯುತಂ ಶಿವಂ। (II)
ಜಟಾಮಕುಟಸಂಯುಕ್ತಂ ವಿಲಸದ್ವಿದ್ರುಮಾಂಗಕಂ।
ಏ(ಏ)ವಂ ತ್ರಿಪುರಸಂಹಾರಂ ಜಲಂದ್ಧ(ಧ)ರ ಮಥ ಶ್ರುಣುII
ವಿದ್ರುಮವರ್ಣಃ IIೇII)'

(ಲೋಕಕಂಟಕರಾದ ತ್ರಿಪುರರೆಂಬ ಅಸುರರನ್ನು ಕೊಲ್ಲಲು ಹೊರಟ ಶಿವನ ರೂಪ ಇದು. ತಲೆಯ ಮೇಲೆ ಜಟಾಮಕುಟ; ಸಮಭಂಗಿಯಲ್ಲಿ ನಿಂತ ನಿಲುವು. ಎಡಕಿವಿಯಲ್ಲಿ ಪತ್ರಕುಂಡಲ, ಬಲಕಿವಿಯಲ್ಲಿ ಮಕರಕುಂಡಲ. ಮೈಬಣ್ಣ ಹವಳದ್ದು).



ತ್ರಿಪುರ ಹರ ಮೂರ್ತಿ




ತ್ರಿಪುರಾ ಮೂರ್ತಿ



ಜಲಂಧರ ಮೂರ್ತಿ



ತ್ರಿಪುರ ಸಂಹಾರ ಮೂರ್ತಿ



ಜಲಂಧರ ಮೂರ್ತಿ

೧೦. ಜಲಂಧರಮೂರ್ತಿ -

'ರಕ್ತಾಭಮುಗ್ರನಯನಂ ದ್ವಿಭುಜಕಂ ತ್ರಿನೇತ್ರಕಂ।
ಉಪವೀತಸಮಾಯುಕ್ತಂ ಸರ್ವಾಲಂಕಾರಶೋಭಿತಂ (II)
ಪಾದೇ ಪಾದುಕಸಂಯುಕ್ತಂ ಕಿಂಚಿದ್ವೈ ಗಮನೋನ್ಮುಖಂ।
ದಕ್ಷಹಸ್ತೇ ಸ್ಥಿತಂ ಚ್ಛ(ಛ)ತ್ರಂ ವಾಮೇ ಪೂರ್ಣಂ ಕಮಂಡಲುಂ (II)
ಸುವಿಕೀರ್ಣ ಜಟಾಭಾರಂ ಗಂಗಾಚಂದ್ರಸಮನ್ವಿತಂ।
ಕರ್ನ(ರ್ಣ)ಕುಂಡಲಸಂಯುಕ್ತಂ ಹಾರನೂಪುರಸಂಯುತಂ (II)
ಜಲಂಧರಸ್ವರೂಪಂ ದ್ವಿಭುಜಂ ಚ ದ್ವಿನೇತ್ರಂ ಚ ಕಿರೀಟಕಟಕಾನ್ವಿತಂ।
ಸರ್ವಾಲಂಕಾರಸಂಯುಕ್ತಂ ಕಕ್ಷೇ ಖಡ್ಗಸಮನ್ವಿತಂ (II)
ಕೃತಾಂಜಲಿಪುಟೋಪೇತಂ ಹಸ್ತೇ ಚಕ್ರಂ ದಧಾನಕಂ।
ಜಲಂಧರಮಥ ಪ್ರೋಕ್ತಮಜಾರಿಂ ಚ ತತಃ ಶ್ರುಣುII
ದೇವಸ್ಯ ರಕ್ತವರ್ಣಾಃIಜಲಂಧರಃ ಪೀತವರ್ಣಾಃIIಗಂII'

(ದೇವಿಯನ್ನು ಬಯಸಿಬಂದ ದುಷ್ಟ ಜಲಂಧರನನ್ನು ನಿಗ್ರಹಮಾಡಿದ ಶಿವನ ರೂಪ. ಕೆಂಪು ಮೈಬಣ್ಣ, ಕಣ್ಣುಗಳಲ್ಲಿ ಕೋಪ ಕಾರುತ್ತಿವೆ. ಮೂರು ಕಣ್ಣುಗಳು, ಎರಡು ಕೈಗಳು. ಒಂದರಲ್ಲಿ ಕೊಡೆ (ಬಲಗೈ), ಇನ್ನೊಂದರಲ್ಲಿ ನೀರುತುಂಬಿದ ಕಮಂಡಲು (ಎಡಗೈ). ತಲೆಯ ಮೇಲೆ ಹರಡಿಕೊಂಡ ಜಟಾಭಾರ; ಗಂಗೆ ಮತ್ತು ಚಂದ್ರ ಇವರನ್ನು ತಲೆಯ ಮೇಲೆ ಕಾಣಬಹುದು. ಕಿವಿಯಲ್ಲಿ ಕರ್ಣಕುಂಡಲಗಳು; ಸರ್ವಾಭರಣಶೋಭಿತ. ಕಾಲುಗಳಲ್ಲಿ ಹಾವುಗೆಗಳು. ಜಲಂಧರನೂ ಎರಡು ಕೈಗಳವನು; ಆದರೆ ಎರಡು ಕಣ್ಣುಗಳು. ಕಿರೀಟ ಮೊದಲಾದ ಆಭರಣಗಳು. ಕೈಗಳು ಬದ್ಧಾಂಜಲಿಮುದ್ರೆಯಲ್ಲಿವೆ; ಚಕ್ರವೂ ಇದೆ. ಬಗಲಲ್ಲಿ ಕತ್ತಿಯನ್ನು ಸಿಕ್ಕಿಸಿಕೊಂಡಿದ್ದಾನೆ. ಶಿವನದು ಕೆಂಪು ಮೈಬಣ್ಣ, ಜಲಂಧರನದು ಹಳದಿ)



ಜಲಂಧರ ಮೂರ್ತಿ

೧೧. ಬ್ರಹ್ಮಶಿರಚ್ಛೇದಮೂರ್ತಿ -

'ಗೌರವರ್ಣಂ ತ್ರಿನೇತ್ರಂ ಜಟಾಮೌಳಿವಿರಾಜಿತಂ।
ತಾಟಂಕಂ ಕುಂಡಲಂ ಸವ್ಯವಾಮಕರ್ಣೇ ದಧಾನಕಂ (II)
ವ್ಯಾಘ್ರಚರ್ಮಾಂಬರಧರಂ ಚತುರ್ಭುಜಸಮನ್ವಿತಂ।
ವಜ್ರಂ ಪರಶುಪೂರ್ವಾಂಸೇ ವಾಮೇ ಬ್ರಹ್ಮಕರೋಟಕಂ। (II)
ಅಪರೇ ಶೂಲಹಸ್ತಂ ಚ ಶೇಷಂ ಪೂರ್ವೋಕ್ತವತ್ಕುರು।
ಗೌರವರ್ಣಃIIೀ೧IIೀ

(ಮೊದಲು ಪಂಚಮುಖನಾಗಿದ್ದ ಬ್ರಹ್ಮನ ಹೆಮ್ಮೆಯನ್ನು ಇಳಿಸಲು ಶಿವನು, ಅವನ ಮುಖವೊಂದನ್ನು ಕೈ ಬೆರಳ ಉಗುರಿನಿಂದಲೇ ಕಿತ್ತು ಚತುರ್ಮುಖನಾಗಿಸಿದ ಪ್ರಸಂಗದ ಹಿನ್ನೆಲೆಯಲ್ಲಿ ಈ ರೂಪ. ಬಿಳಿಯ ಮೈಬಣ್ಣದ ಶಿವನು ಮುಕ್ಕಣ್ಣ; ಜಟಾಧಾರಿ; ಬಲಗಿವಿಯಲ್ಲಿ ತಾಟಂಕ, ಎಡಗಿವಿಯಲ್ಲಿ ಕುಂಡಲ. ಹುಲಿಯ ಚರ್ಮವನ್ನು ಹೊದ್ದಿದ್ದಾನೆ. ನಾಲ್ಕು ಕೈಗಳು, ವಜ್ರ, ಕೊಡಲಿಗಳು ಬಲಗೈಗಳಲ್ಲಿ; ಶೂಲ ಮತ್ತು ಬ್ರಹ್ಮನ ತಲೆಯೋಡೆ ಎಡಗೈಗಳಲ್ಲಿ).



ಬ್ರಹ್ಮಶಿರಚ್ಛೇದ ಮೂರ್ತಿ



ಬ್ರಹ್ಮಶಿರಚ್ಛೇದ ಮೂರ್ತಿ

೧೨. ಗಜಾಸುರಸಂಹಾರಮೂರ್ತಿ-

'ಸ್ಥಿತ್ವಾ ಹಸ್ತಿಶಿರೋರ್ಧ್ವಸವ್ಯಚರಣಂ(ಹಸ್ತಿಶಿರಸ್ಯ ದಕ್ಷಚರಣಂ)
ವಾಮಾಂಗವ(ದ)ಕ್ಷೋದ್ಧೃತಂ
ಪುಚ್ಛೋರ್ಧ್ವಾವೃತ ಚರ್ಮ ಉ(ಮು)ದ್ಧೃತ ಕರೇ
ಶೂಲಾಸಿ ಶೃಂಗೋಜ್ವಲಂ।
ಟಂಕಂ ಕೃಷ್ಣಮೃಗಂ ಧರಂ ಪರಕರೇ
ಭೀಷ್ಮಾನನೇಂದು ಪ್ರಭಂ।
ವಾಮೇ ಗೌರೀವಾಮೋಮಾತಿ) ಭಯೋನ್ಮುಖೀ ಸುತಯುತಂ
ಸೂಚ್ಯಾಡ್ಯ(ಢ್ಯ)ಹಸ್ತಂ ವ(ಹ)ರಂ॥
ಶ್ವೇತವರ್ಣಃ ॥೧೨॥'

(ದಾರುಕವನದಲ್ಲಿ ಋಷಿಗಳು ತನ್ನ ಮೇಲಟ್ಟಿದ ಆಭಿಚಾರಿಕ ಆನೆಯನ್ನು ಶಿವನು ಸಂಹಾರಮಾಡಿದ ರೂಪ. ಆನೆಯ ತಲೆಯ ಮೇಲೆ ತನ್ನ ಬಲಗಾಲನ್ನಿಟ್ಟು ಅದರ ಚರ್ಮವನ್ನು ತನ್ನ ಕೈಗಳಿಂದ




ಗಜಾಸುರಸಂಹಾರ ಮೂರ್ತಿ



ಗಜಾಸುರಸಂಹಾರ ಮೂರ್ತಿ

ಸುಲಿಯುತ್ತಿರುವಂತೆ ಮೂರ್ತಿಲಕ್ಷಣ. ಆನೆಯ ಬಾಲವು ಮೇಲಿದೆ. ಶಿವನ ಕೈಗಳಲ್ಲಿ ಶೂಲ, ಕತ್ತಿ, ಟಂಕ, ಜಿಂಕೆ ಮೊದಲಾದ ಆಯುಧಗಳು; ಒಂದು ಕೈಯಲ್ಲಿ ಸೂಚೀಮುದ್ರೆ. ಎಡಭಾಗದಲ್ಲಿ ಈ ದೃಶ್ಯವನ್ನು ನೋಡಿ ಹೆದರಿರುವ ಪಾರ್ವತಿ, ತನ್ನ ಮಗನೊಡನೆ ನಿಂತಿದ್ದಾಳೆ. ಶಿವನ ಮೈಬಣ್ಣ ಬಿಳಿ).



ಗಜಾಸುರ ಮರ್ದನ ಮೂರ್ತಿ

೧೩. ವೀರಭದ್ರ-

'ಚತುರ್ಭುಜಂ ತ್ರಿನೇಎತ್ರಂ ಚ ಜಟಾಮಕುಟಸಂಯುತಂ।
ದಕ್ಷಿಣೇ ಖಡ್ಗಬಾಣೌ ಚ ವಾಮೇ ಚಾಪಗದಾಧರಂ। (II)
ದಂಷ್ಟ್ರಾಕರಾಳವದನ(ಂ) ಭೀಮಂ ಭೈರವಗರ್ಜಿತಂ।
ರುಂಡಮಾಲಾಸಮಾಯುಕ್ತಂ ಪಾದುಕೋಪರಿ ಸುಸ್ಥಿತಂ। (II)
ಭದ್ರಕಾಳೀ ಸಮಾಯುಕ್ತಂ ಕಪಾಲಂ ಪಾದುಕೆಸೇನ್ಯನೇತ್
(ಕರಾಳಂ ಹೃದಿ ವಿನ್ಯಸೇತ್)।
ನೀಲವರ್ಣಃII
ದಕ್ಷಬ್ರಹ್ಮಸ್ವರೂಪಂ।
ವೀರಸ್ಯ ದಕ್ಷಭಾಗೇತು ದಕ್ಷಬ್ರಹ್ಮಣಮಾಸ್ಥಿತಂ।
ಅಜವಕ್ತ್ರಂ ದ್ವಿನಯನಂ ಶೃಂಗದ್ವಯ ವಿಭೂಷಿತಂII
ನಮಸ್ಕಾರಾಂಜಲಿಂ ವಿಪ್ರಂ ಶಿವಧ್ಯಾನಪರಾಯಣಂ।
ಏ(ಐ)ವಂ ವೀರೇಶ್ವರಂ ಪ್ರೋಕ್ತಂ ಹರೇರರ್ಧಮಥ ಶ್ರುಣುII
ದಕ್ಷಸ್ಯ ಶ್ಯಾಮವರ್ಣಃII೧೩II'



ವೀರಭದ್ರ ಮೂರ್ತಿ

(ಶಿವನನ್ನು ಅವಮಾನಗೊಳಿಸಿದನೆಂದು ಗೌರಿಯು ತನ್ನ ತಂದೆಯಾದ ದಕ್ಷಬ್ರಹ್ಮನ ಯಾಗಕುಂಡದಲ್ಲೇ ಬಿದ್ದು ಸತಿಯಾದಮೇಲೆ, ಶಿವನು ಧರಿಸಿದ ಲೀಲಾಮೂರ್ತಿ ವೀರಭದ್ರನದೆಂದು ಇಲ್ಲಿನ ಒಕ್ಕಣೆ. ಶಿವನು ನೆಲಕ್ಕೆ ತನ್ನ ಜಟೆಯನ್ನಪ್ಪಳಿಸಲಾಗಿ ವೀರಭದ್ರನೆಂಬ ಗಣದೇವತೆಯು ರೂಪತಾಳಿಕೊಂಡು ದಕ್ಷಯಜ್ಞವನ್ನು ಧ್ವಂಸಗೊಳಿಸಿತೆಂದು ಇನ್ನೊಂದು ಒಕ್ಕಣೆ. ಈ ಮೂರ್ತಿಯು ಮುಕ್ಕಣ್ಣ, ಚತುರ್ಭುಜ, ರುಂಡಮಾಲೆ, ಜಟಾಮಕುಟ, ಭಯಾನಕ ರೂಪ; ಮುಖದಲ್ಲಿ ಕೋರೆದಾಡೆಗಳು, ಭಯಂಕರವಾದ ಗರ್ಜನೆ. ಬಲಗೈಗಳಲ್ಲಿ ಕತ್ತಿ, ಬಾಣ; ಎಡಗೈಗಳಲ್ಲಿ ಬಿಲ್ಲು, ಗದೆ. ಕಾಲುಗಳಲ್ಲಿ ಹಾವುಗೆ. ಎಡಭಾಗದಲ್ಲಿ ಭದ್ರಕಾಳಿಯಿದ್ದಾಳೆ. ವೀರಭದ್ರನ ಮೈಬಣ್ಣ ನೀಲಿ. ಬಲಭಾಗದಲ್ಲಿ ಆಡಿನ ಮುಖದ ದಕ್ಷಬ್ರಹ್ಮ ನಮಸ್ಕಾರಮುದ್ರೆಯಲ್ಲಿ ತನ್ನೆರಡೂ ಕೈಗಳನ್ನು




ವೀರಭದ್ರ

ಜೋಡಿಸಿಕೊಂಡು ಶಿವಧ್ಯಾನಮಾಡುತ್ತ ನಿಂತಿದ್ದಾನೆ. ಅವನ ಮೈಬಣ್ಣ ಕಪ್ಪು. ಅವನ ತಲೆಯ ಮೇಲೆ ಕೋಡುಗಳಿವೆ. ಎರಡೇ ಕಣ್ಣುಗಳು).

೧೪ ಹರ್ಯರ್ಧ (ಹರಿಹರ) ಮೂರ್ತಿ -

'ಸವ್ಯಾಂಗೇ ವಿದ್ರುಮಾಭಂ ಶಶಧರಮಕುಟಂ
ಭಸ್ಮರುದ್ರಾಕ್ಷಭೂಷಂ।
ವಾಮಾಂಗೇ ಶ್ಯಾಮಳಾಭಂ ಮಣಿಮಕುಟಯುತಂ
ಪೀತವಸ್ತ್ರಾತಿಶೋಭಂ।
ಸವ್ಯೇ ಟಂಕಾಭಯಂ ಸ್ಯಾದಿತರಕರಯುಗೇ ಶಂಖ
ಕೌಮೋದಕೀಂ ವಾ(।)
ಕಿಂಚಿತ್ಸವ್ಯಲಲಾಟನೇತ್ರ ವಿಲಸದ್ಧೂರ್ಧ್ವದೇಹಸ ಭಜೇ ॥
ರಕ್ತವರ್ಣಃ ಈಶ್ವರಭಾಗಃ।ವಿಷ್ಣುಭಾಗಃ ಶ್ಯಾಮವರ್ಣಃ॥೧೪॥ '

(ಇದು ಹರಿಹರ ಅಥವಾ ಶಂಕರನಾರಾಯಣ ಎನಿಸಿಕೊಳ್ಳುವ ರೂಪ. ಬಲಭಾಗ ಶಿವನದು, ಎಡಭಾಗ ವಿಷ್ಣುವಿನದು. ಶಿವನ ಭಾಗ ಕೆಂಪು ಮೈಬಣ್ಣ; ವಿಷ್ಣುವಿನದು ನೀಲಿಗಪ್ಪು. ಶಿವನ ಭಾಗದಲ್ಲಿ ತಲೆಯ ಮೇಲೆ ಜಟೆಯ ಮಕುಟ, ಅದರಲ್ಲಿ ಚಂದ್ರ, ರುದ್ರಾಕ್ಷಿಯ ಮಾಲೆ, ಆ ಭಾಗದ



ವೀರಭದ್ರ ಮೂರ್ತಿ

ಎರಡು ಕೈಗಳಲ್ಲಿ ಟಂಕ ಮತ್ತು ಅಭಯಮುದ್ರೆ;ಮತ್ತು ಹಣೆಯಲ್ಲಿ ಬಲಭಾಗ ಹಣೆಗಣ್ಣಿನ ಅರ್ಧರೂಪವನ್ನು ಕಾಣಿಸುತ್ತದೆ. ವಿಷ್ಣುವಿನ ಭಾಗದಲ್ಲಿ ತಲೆಯ ಮೇಲೆ ರತ್ನಕಿರೀಟ, ಕೈಗಳಲ್ಲಿ ಶಂಖ, ಗದೆ. ವಿಷ್ಣುವು ಉಟ್ಟಿರುವುದು ಪೀತಾಂಬರ; ಶಿವನದು ವ್ಯಾಘ್ರಚರ್ಮ. ಗ್ರಂಥದಲ್ಲಿ ಇದೇ ಅರ್ಥ ಬರುವ ಇನ್ನೊಂದು ಧ್ಯಾನಶ್ಲೋಕವನ್ನೂ ಕೊಡಲಾಗಿದೆ. ನಾನು ಅದನ್ನಿಲ್ಲಿ ಬಿಟ್ಟಿದ್ದೇನೆ)



ಹರಿಹರ ಮೂರ್ತಿ



ಹರಿಹರ ಮೂರ್ತಿ

೧೫ ಅರ್ಧನಾರೀಶ್ವರ -

'ಚತುರ್ಭುಜಂ ತ್ರಿನೇತ್ರಂ ಚ ಶಿವಾಂಶಂ ದಕ್ಷಪಾರ್ಶ್ವಕೇ
ವಾಮಾರ್ಧಂ ವಾಮಭಾಗೇ ತು ಸೀಮಂತ ತಿಳಕಾಳಕಂ। (II)
ನೇತ್ರಾರ್ಧಂ ತು ಲಲಾಟೇ ತು ಸಂಯುಕ್ತಂ ದಕ್ಷಿಣಾಂಶಕೇ ।
ದಕ್ಷಿಣೇ ಕುಂಡಲಂ ಕರ್ಣೇ ವಾಮೇ ಕರ್ಣೇ ತು ಪತ್ರಕಂ। (II)
ಕಟ್ಯಾಂ ವಾ ಕಲಿತಂ ವಾಮೇ(s) ಭಯಟಂಕೌ ಚ ದಕ್ಷಿಣೇ ।
ವರದೋತ್ಪಲಕೌ ವಾಮೇ ಕೇಯೂರಕಟಕಾನ್ವಿತಂ । (II)
ಉಮಾಂಶೇ ತು ಸ್ತನಂ ಕುರ್ಯಾತ್ಸ್ಫಾಹಾಕಾರಯುತಂ ತು ವಾ।
ಶ್ರೋಣ್ಯರ್ಧಂ ದಕ್ಷಿಣೇ ಶಂಭೋ ರ್ವ್ಯಾಘ್ರಚರ್ಮ
ಕೃತಾಂಬರಂ। (II)
ಉಮಾರ್ಧಂ ಕಟಿಸೂತ್ರಂ ತು ಚಿತ್ರವಸ್ತ್ರಂ ಪರಿಚ್ಛದಂ।
ನೂಪುರಾಲಂಕೃತಂ ವಾಮೇ ಸವ್ಯಪಾದಂ ತು ಕುಂಚಿತಂ। (II)
ಸವ್ಯಂ ಪ್ರವಾಳವರ್ಣಂ ಸ್ಯಾತ್ಸುಕೃಷ್ಣಂ ವಾಮಭಾಗಕಂ।
ಅರ್ಧನಾರೀಶ್ವರಂ ಪ್ರೋಕ್ತಂ ಕಿರಾತಾರ್ಜುನಮುಚ್ಯತೇ॥
ಈಶ್ವರ ಭಾಗಃ ರಕ್ತವರ್ಣಃ।ದೇವೀಭಾಗಃ ಶ್ಯಾಮವರ್ಣಃ ॥೧೫॥'

(ಈ ಚತುರ್ಭುಜ ಸ್ಥಾನಕಮೂರ್ತಿಯ ಎಡಭಾಗ ದೇವಿಯದು (ನಾರಿ), ಬಲಭಾಗ ಶಿವನದು. ಹೆಣ್ಣುಗಂಡುಗಳೆರಡರ ಸಮಷ್ಟಿರೂಪ. ಬಲಗಿವಿಯಲ್ಲಿ ಮಕರ ಕುಂಡಲ, ಎಡಗಿವಿಯಲ್ಲಿ ಪತ್ರಕುಂಡಲ. ಎಡಭಾಗದ ಕೈಗಳಲ್ಲಿ ವರದಮುದ್ರೆ, ಉತ್ಪಲಹಸ್ತ ಅಥವಾ ಕಟಿಹಸ್ತ. ಬಲಭಾಗದ ಕೈಗಳಲ್ಲಿ ಅಭಯಮುದ್ರೆ ಮತ್ತು ಟಂಕ. ದೇವಿಯ



ಅರ್ಧನಾರೀಶ್ವರ

ಭಾಗದಲ್ಲಿ ಒಂದು ಸ್ತನ. ಎಡಭಾಗದಲ್ಲಿ ಸೀರೆ, ಬಲಭಾಗದಲ್ಲಿ ಹುಲಿಯ ಚರ್ಮ. ಎಡಗಾಲಿನಲ್ಲಿ ನೂಪುರ;ಬಲಗಾಲು ಸ್ವಲ್ಪ ಬಾಗಿದೆ. ಶಿವನ ಮೈಬಣ್ಣ ಹವಳದಂತೆ, ದೇವಿಯ ಮೈಬಣ್ಣ ನೀಲಿಗಪ್ಪು).




ಅರ್ಧನಾರೀಶ್ವರ ಮೂರ್ತಿ

೧೬. ಕಿರಾತಾರ್ಜುನಮೂರ್ತಿ -


'ಚತುರ್ಭುಜಂ ತ್ರಿನೇತ್ರಂ ಚ ಜಟಾಮಕುಟಸಂಯುತಂ।
ದಿವ್ಯಾಭರಣಸಂಯುಕ್ತಂ ದಿವ್ಯಾಂಬರಸಮಾವೃತಂ। (II)
ಧನುರ್ಬಾಣಯುತಂ ರಕ್ತಂ ಕೃಷ್ಣಾಪರಶುಸಂಯುತಂ।



ಕಿರಾತಾರ್ಜುನ ಮೂರ್ತಿ



ಅರ್ಧನಾರೀಶ್ವರ ಮೂರ್ತಿ



ಕಿರಾತಕ ಮೂರ್ತಿ

ಉಪವೀತಸಮಾಯುಕ್ತಂ ಸಮಭಂಗತನುಂ ಕುರು। (II)
ವಾಮೇ ಗೌರೀಸಮಾಯುಕ್ತಂ ದಕ್ಷಿಣೇ ತ್ವರ್ಜುನಂ ಸ್ಥಿತಂ।
ಅರ್ಜುನಸ್ಯರೂಪಂ।
ಏ(ಏ)ಕ ವಕ್ತ್ರಂ ದ್ವಿನಯನಂ ಜಟಾಮಕುಟಸಂಯುತಂ।
ಸರ್ವಾಭರಣಸಂಯುಕ್ತಂ ಕೃತಾಂಜಲಿಪುಟಂ ಸ್ಥಿತಂ। (II)
ಏ(ಏ)ವಂ ಕಿರಾತಮಾಖ್ಯಾತಂ ಕಂಕಾಳಮಧುನೋಚ್ಯತೇ।
ದೇವಸ್ಯ ರಕ್ತವರ್ಣಃ।ಅರ್ಜುನಸ್ಯ ಶ್ಯಾಮವರ್ಣಃ ॥೧೬॥'

(ಇಂದ್ರಕೀಲ ಪರ್ವತದಲ್ಲಿ ತಪಸ್ಸುಮಾಡುತ್ತಿದ್ದ ಅರ್ಜುನನಿಗೆ ಪಾಶುಪತಾಸ್ತ್ರ ಪ್ರದಾನಮಾಡಿದ ಸಂದರ್ಭದಲ್ಲಿ, ಅರ್ಜುನನನ್ನು ಪರೀಕ್ಷಿಸಲು ಕಿರಾತರೂಪವನ್ನು ಧರಿಸಿದ ಹಿನ್ನೆಲೆ. ಚತುರ್ಭುಜ, ತ್ರಿನೇತ್ರ, ಸಮಭಂಗಿಯ ರೂಪ. ಕೈಗಳಲ್ಲಿ ಬಿಲ್ಲು, ಬಾಣ, ಕೊಡಲಿ, ಜಿಂಕೆ. ಎಡಭಾಗದಲ್ಲಿ ಗೌರಿ ನಿಂತಿದ್ದಾಳೆ, ಬಲಭಾಗದಲ್ಲಿ ಅರ್ಜುನನು ನಿಂತಿದ್ದಾನೆ. ಅರ್ಜುನನಿಗೆ ಎರಡು ಕಣ್ಣುಗಳು, ಜಟಾಮಕುಟ; ಎರಡೂ ಕೈಗಳು ಬದ್ಧಾಂಜಲಿ ಮುದ್ರೆಯಲ್ಲಿವೆ. ಶಿವನದು ಕೆಂಪು ಮೈಬಣ್ಣ, ಅರ್ಜುನನದು ನೀಲಿಗಪ್ಪು).



ಕಿರಾತಾರ್ಜುನ

೧೭. ಕಂಕಾಳಮೂರ್ತಿ-

'ಭಸ್ಮಾಲೇಪಂ ತ್ರಿಪುಂಡ್ರಂ ರುಚಿರಮಣಿಲಸತ್ಪಿಂಛ ಕಂಕಾಳದಕ್ಷಂ (ದಂಡಂ)।
ಟಂಕಂ ವಾಮೇ ಕರಾಬ್ಜೇ ದಧತಮಖಿಲಸತ್ಸಾಂದ್ರ ಸಿಂದೂರ ಶೋಭಂ। (II)
ಶೂಲಂ ಕೃಷ್ಣಮೃಗಾಸ್ಯಲಂಬಿತಕರಂ ಬದ್ಧೇಂದುಚೂಡಂ ಹರಂ(I)
ವಂದೇ ದೇವ ಋಷೀಶ್ವರೈಃ ಪರಿವೃತಂ ವ್ಯೆಯಾಘ್ರ ಚರ್ಮಾಂಬರಂ॥
ಚತುರ್ಭುಜಂ ತ್ರಿನೇತ್ರಂ ಚ ಜಟಾಮಕುಟಸಂಯುತಂ।
ಪಾದೇ ಪಾದುಕಸಂಯುಕ್ತಂ ಕಿಂಚಿದ್ವೈ ಗಮನೋನ್ಮುಖಂ॥
ಸರ್ವಾಭರಣಸಂಯುಕ್ತಂ ಯಜ್ಞಸೂತ್ರೋತ್ತರೀಯ್ಯಕಂ।
ಶಂಖಂ ತು ವಾಮಕರ್ಣೇ ತು ದಕ್ಷಿಣೇ ನಕ್ರಕುಂಡಲಂ। (II)
ಕಿಂಚಿತ್ಪ್ರಹಸಿತಾಸ್ಯಂ ಚ ನಾನಾಲೀಲಾಸಮಾವೃತಂ(I)
ಚ್ಛು(ಛು)ರಿಕಾಂ ದಕ್ಷಕಟ್ಯಾಂ ತು ದಧಾನಂ ಭೂತಸಂಯುತಂ। (II)
ಭಿಕ್ಷಾನಮೋಚನಾಯಾತ ಮೃಗ ಪಕ್ಷ್ಯಾದಿ ಸಂಯುತಂ।
ದೇವಸ್ಯ ವಾಮಪಾರ್ಶ್ವೇ ತು ಮಹಾಭೂತಂ ಪ್ರಕಲ್ಪಯೇತ್(II)
ದ್ವಿಭುಜಂ ಚ ದ್ವಿನೇತ್ರಂ ಚ ಕರಾಳವದನಾನ್ವಿತಂ।
ದೇವಸ್ಯ ರಕ್ತವರ್ಣಃ(I)ಭೂತಸ್ಯ ಕೃಷ್ಣವರ್ಣಃ॥೧೭॥




ಕಂಕಾಳಮೂರ್ತಿ

(ಭಿಕ್ಷಾಟನ ಮೂರ್ತಿಯ ಸಂದರ್ಭವೇ ಕಂಕಾಳಮೂರ್ತಿಯದು. ಮೂರ್ತಿಲಕ್ಷಣದಲ್ಲೂ ತುಂಬ ಸಾದೃಶ್ಯವಿದೆ. ಕಂಕಾಳಮೂರ್ತಿಯ ವೈಶಿಷ್ಟ್ಯವೆಂದರೆ ಹಿಡಿದಿರುವ ಕಂಕಾಳದಂಡ, ಎಂದರೆ ಮೂಳೆಯಿಂದ ಮಾಡಿದ ದಂಡ. ಅದಕ್ಕೆ ನವಿಲುಗರಿಗಳನ್ನು ಕಟ್ಟಿ ಹೆಗಲಮೇಲೆ ಹೊತ್ತು ಹೋಗುವಾಗ ಎಲ್ಲರಿಗೂ ಇವನು ಬ್ರಹ್ಮಹತ್ಯೆ ಮಾಡಿದ ಪಾಪಿಯೆಂದು ತಿಳಿಯುವುದು. ಶಿವನು ಬ್ರಹ್ಮನ ಶಿರಸ್ಸನ್ನು ತರಿದ ದೋಷಕ್ಕೆ ಪ್ರಾಯಶ್ಚಿತ್ತರೂಪವಾಗಿ ಕಂಕಾಳಮೂರ್ತಿಯಾದನೆಂದು ಕಥೆ).



ಕಂಕಾಳಮೂರ್ತಿ



ಕಂಕಾಳಮೂರ್ತಿ

೧೮. ಚಂಡೇಶಾನುಗ್ರಹಮೂರ್ತಿ-

'ಚಂಡೇಶಃ ಪೀತವರ್ಣಂ ಯುಗಕರಸಹಿತಂ ದಕ್ಷಹಸ್ತೇ ಚ ಟಂಕಂ
ವಾಮೇ ಟಂಕಂ (ಕೃಷ್ಣಂ) ದಧಾನಂ ವರಕರ-
ಸಹಿತಂ ಪಾರ್ವತೀಂ ವಾಮಭಾಗೇ
ಚಂಡೇಶಸ್ಯೋತ್ತಮಾಂಗೇ ಪ್ರತಿನಿಹಿತಕರಂ
ದಕ್ಷಭಾಗೇ ತ್ರಿನೇತ್ರಂ ಸರ್ವಾಲಂಕಾರಯುಕ್ತಂ
ಶಶಿಶಕಲಧರಂ ಗಂಗಯಾ ಯುಕ್ತಮೀಡೇ॥
ದೇವಸ್ಯ ದಕ್ಷಭಾಗೇ ತು ಚಂಡೇಶಂ ತು ಪ್ರಕಲ್ಪಯೇತ್।
ದೇವಸ್ಯ ಬಾಹುಮಾತ್ರೇಣ ಚಂಡೇಶಾಯಾಮ ಉಚ್ಯತೇ।
ನ್ಯಸ್ತವ್ಯೋ ಮತ್ಪ್ರಸಾದೇನ ಚಂಡೇಶೋ ಭಕ್ತಿಸಂಯುತಃ।
ಚಂಡೇಶ್ವರಂ ಸ್ವರ್ಣವರ್ಣಂ ಬಾಲಭೂಷಣಭೂಷಿತಂ।
ದೇವಂ ಶಿರಸಿ ಚಂಡಸ್ಯ ಲೀಲಯಾ ಪರಿಶೋಭಿತಂ।
ಚಂಡೇಶಾನುಗ್ರಹಂ ಪ್ರೋಕ್ತಂ ವಿಷಾಪಹರಣಂ ಶೃಣು॥
ದೇವಸ್ಯ ಚಂಡೇಶಸ್ಯ ಪೀತವರ್ಣಃ॥೧೮॥'


(ಶಿವನ ಗಣಾಧ್ಯಕ್ಷನೂ, ಸರ್ವಾಧಿಕಾರಿಯೂ ಆದ ಚಂಡಿಕೇಶ್ವರನನ್ನು ಸುಖಾಸೀನನಾದ ಶಿವನು ಅನುಗ್ರಹಿಸುತ್ತಿರುವ ರೂಪ ಇದು. ಶಿವಾಲಯಕ್ಕೆ ಹೋದ ಭಕ್ತರು ಚಂಡಿಕೇಶ್ವರನ ಸನ್ನಿಧಿಯಲ್ಲಿ ತಮ್ಮನ್ನು ತಾವು ಒಪ್ಪಿಸಿಕೊಳ್ಳದಿದ್ದರೆ, ಅವರ ಶಿವಾಲಯಗರ್ಶನಕ್ಕೆ ಫಲವಿರದೆಂಬ ನಂಬಿಕೆಯಿದೆ. ಶಿವನ ನಿರ್ಮಾಲ್ಯವನ್ನೂ ಪ್ರಸಾದರೂಪವಾಗಿ ಬಂದ ಪತ್ರಪುಷ್ಪಗಳನ್ನೂ ಚಂಡಿಕೇಶ್ವರನ ಸನ್ನಿಧಿಯಲ್ಲಿ ಸಮರ್ಪಿಸುವ ವಾಡಿಕೆಯಿದೆ. ಈ ರೂಪದಲ್ಲಿ ಶಿವನ ಬಲಭಾಗದಲ್ಲಿ ಚಂಡಕೇಶ್ವರನು ನಿಂತಿದ್ದು, ಶಿವನು ತನ್ನ ಕೈಯನ್ನು ಅವನ ತಲೆಯ ಮೇಲೆ ಇರಿಸಿರುವಂತೆಯೋ, ಅವನ ತಲೆಯ ಸುತ್ತ ಹೂಮಾಲೆಯನ್ನು ಹಾಕುತ್ತಿರುವಂತೆಯೋ ಮೂರ್ತಿಲಕ್ಷಣ. ಶಿವನು ಗಂಗಾಧರ, ಚಂದ್ರಚೂಡ; ಮೇಲಿನ ಎಡಗೈಯಲ್ಲಿ ಜಿಂಕೆ, ಬಲಗೈಯಲ್ಲಿ ಟಂಕ; ಕೆಳಗಿನ ಕೈಗಳು ಚಂಡಿಕೇಶ್ವರನಿಗೆ ಅನುಗ್ರಹ ಮಾಡುತ್ತಿರುವಂತೆ. ಶಿವನ ಪಕ್ಕದಲ್ಲಿ (ಎಡಗಡೆ) ಗೌರಿಯೂ ಕುಳಿತಿದ್ದಾಳೆ. ಶಿವನದ್ದೂ ಚಂಡಿಕೇಶ್ವರನದ್ದೂ ಮೈಬಣ್ಣ ಹಳದಿ).



ಚಂಡೇಶಾನುಗ್ರಹ ಮೂರ್ತಿ



ಚಂಡೇಶಾನುಗ್ರಹಮೂರ್ತಿ



ಚಂಡಿಕೇಶ್ವರ ಮೂರ್ತಿ

೧೯. ವಿಷಾಪಹರಮೂರ್ತಿ-


'ಏ(ಏ)ಕವಕ್ತ್ರಂ ತ್ರಿಣಯನಂ ಜಟಾಮಕುಟಸಂಯುತಂ।
ಚತುರ್ಬಾಹುಂ ಸುರಕ್ತಂ ಚ ಮೃಗಂ ಪರಶುಧಾರಿಣಂ। (II)
ದಕ್ಷಹಸ್ತೇ ಗರಂ ಧೃತ್ವಾ ಪಾನೋನ್ಮುಖಮದೇಕ್ಷಣಂ(I)
ವರದಂ ವಾಮಹಸ್ತೇ ತು ಸರ್ವಾಲಂಕಾರಸಂಯುತಂ।



ವಿಷಹರಮೂರ್ತಿ



ಚಂಡಿಕೇಶ್ವರವರ ಪ್ರಸನ್ನ ಮೂರ್ತಿ



ವಿಷಾಪಹರಮೂರ್ತಿ

ದೇವಸ್ಯ ವಾ(ಮ)ಪಾರ್ಶ್ವೇ ತು ದೇವೀಂ ಚೈವ ತು ಕಾರಯೇತ್॥
ಶ್ಯಾಮಾಂ ದ್ವಿನೇತ್ರಾಂ ದ್ವಿಭುಜಾಂ ತ್ರಿಭಂಗೀಂ।
ಸವ್ಯಾಪಸವ್ಯಸ್ಥಿತ ಕುಂಚಿತಾಂಘ್ರಿಂ ಕಂಠೇ ನಿಪೀಡ್ಯ
ಸ್ಥಿತಸವ್ಯಲಂಬಾಂ ಚಿಂತಾಕುಲಾಮೀಶ್ವರ ಸೆ(ತು)ಷ್ಟಿದಾಯೀ (ತ್ರೀಂ)।
ಪೀತವಸ್ತ್ರಾಂ ದ್ವಿನಯನಾಂ ವಾಂಛಿ(ಛಿ)ತಾರ್ಥಫಲಪ್ರದಾಂ॥
ದೇವಸ್ಯ ರಕ್ತವರ್ಣಃ।ದೇವ್ಯಾಃ ಶ್ಯಾಮವರ್ಣಃ॥೧೯॥'

(ಸಮುದ್ರಮಂಥನಕಾಲದಲ್ಲಿ ಹೊರಬಂದ ಕಾಲಕೂಟವೆಂಬ ಘೋರವಿಷದಿಂದ ಎಲ್ಲರೂ ತಲ್ಲಣಿಸುತ್ತಿದ್ದಾಗ, ಶಿವನು ಆದನ್ನು ಕುಡಿದು ಲೋಕಕಲ್ಯಾಣವನ್ನು ಮಾಡಿದ ಸಂದರ್ಭ. ಇಲ್ಲಿ ಶಿವನದ್ದು ಯಥಾಪ್ರಕಾರವಾದ ರೂಪವೇ. ನಾಲ್ಕು ಕೈಗಳು, ಪರಹಸ್ತಗಳಲ್ಲಿ ಜಿಂಕೆ, ಕೊಡಲಿ. ನಿಜಹಸ್ತಗಳಲ್ಲಿ ಬಲಗೈಯಲ್ಲಿ ವಿಷವನ್ನು ಹಿಡಿದು ಅದನ್ನು ಕುಡಿಯಲು ಹೊರಟಿರುವಂತೆಯೂ, ಎಡಗೈ ವರದ ಮುದ್ರೆಯಲ್ಲಿರುವಂತೆಯೂ ಮೂರ್ತಿಲಕ್ಷಣ. ಇದರಿಂದ ಕಾತರಳಾದ ಪಾರ್ವತಿಯು ಎಡಭಾಗದಲ್ಲಿ ನಿಂತು ಶಿವನ ಕತ್ತನ್ನು ಒತ್ತಿ, ವಿಷವು ಶರೀರಕ್ಕೆ ವ್ಯಾಪಿಸದಿರುವಂತೆ ಮಾಡುತ್ತಿದ್ದಾಳೆ. ಶಿವನ ಮೈಬಣ್ಣ ಕೆಂಪು, ಪಾರ್ವತಿಯದು ನೀಲಿಗಪ್ಪು.)



ವಿಷಹರಮೂರ್ತಿ

೨೦. ಚಕ್ರದಾನಮೂರ್ತಿ-

'ವಿಷ್ಣುಸ್ತ್ವೀಶಪುರಃ ಸ್ಥಿತೋಂ(s)ಜಲಿಕರೋ
ದೇವಸ್ಯ ಪಾದಾಬ್ಜಯೋ ಸ್ಸಾಕ್ಷೌ ಸ್ಥಾಪ್ಯ
ಲಸತ್ಸುಮಾಲ್ಯಮನಿಶಂ ಪೀತಾಂಬರಂ ಕೌಸ್ತುಭಂ
ಸ್ಥಿತ್ವಾ ಭಾವಪುರಸ್ಸರಂ ಪಶುಪತಿಂ ಪದ್ಮಾಕ್ಷ ಇತ್ಯಾಖ್ಯಯಾ
ಟಂಕಂ ಕೃಷ್ಣಮೃಗಂ ವರೇಣ ಸಹಿತಂ ಚಕ್ರಪ್ರದಾನಂ ಭಜೇ। (II)
ಎ(ಏ)ಕ ವಕ್ತ್ರಂ ತ್ರಿನೇತ್ರಂ ಚ ಜಟಾಮಕುಟಸಂಯುತಂ
ಎ(ಏ)ಣಾಪರಶು ಸಂಯುಕ್ತಂ ವರದಂ ಚೈವ ವಾಮಕೇ।
ದಕ್ಷಿಣೇ ಚಕ್ರ ಸಂಯುಕ್ತಂ ದಾನರೂಪಮಿಹೋಚ್ಯತೇ
ದೇವಸ್ಯ ವಾಮಭಾಗೇ ತು ಶ್ಯಾಮರೂಪಂ ಸುಸಂಸ್ಥಿತಂ।
ಸರ್ವಾಭರಣಸಂಯುಕ್ತಂ ಪೀತವಸ್ತ್ರೋತ್ತರೀಯ್ಯಕಂ।
ಶಂಖಚಕ್ರ ಸಮಾಯುಕ್ತಮುತ್ತರೇ ಚಾಂಜಲಿಂ ನ್ಯಸೇತ್।
ಎ(ಏ)ವಂ ಲಕ್ಷಣಸಂಯುಕ್ತಂ ವಿಷ್ಣುರೂಪಮಿಹೋಚ್ಯತೇII
ದೇವಸ್ಯ ಶ್ವೇತವರ್ಣಃIವಿಷ್ಣೋಃ ಶ್ಯಾಮವರ್ಣಃII೨೦II'

(ವಿಷ್ಣುವು ಶಿವನನ್ನು ಸಾವಿರಪದ್ಮಗಳಿಂದ ಪೂಜಿಸಲು ತೊಡಗಿ ಒಂದು ಪದ್ಮ ಕೊರತೆಯಾಗಲು ಪದ್ಮದಂತಿರುವ ತನ್ನ ಕಣ್ಣನ್ನೇ ಕಿತ್ತು




ಚಕ್ರಪ್ರದಾನಮೂರ್ತಿ

ಸಮರ್ಪಿಸಲು ಸಿದ್ಧನಾದಾಗ, ಶಿವನು ಪ್ರಸನ್ನನಾಗಿ ಅವನಿಗೆ ಚಕ್ರವನ್ನು ಅನುಗ್ರಹಿಸಿದ ಸಂದರ್ಭ. ಶಿವನು ಚತುರ್ಭುಜ; ಮೇಲಿನ ಕೈಗಳಲ್ಲಿ ಟಂಕ, ಹರಿಣ. ಕೆಳಗಿನ ಬಲಗೈಯಲ್ಲಿ ಚಕ್ರವನ್ನು ಹಿಡಿದು, ಎಡಭಾಗದಲ್ಲಿ ನಿಂತ ವಿಷ್ಣುವಿಗೆ ನೀಡುತ್ತಿದ್ದಾನೆ; ಎಡಗೈ ವರದ ಮುದ್ರೆಯಲ್ಲಿದೆ. ವಿಷ್ಣುವು ಮೇಲಿನ ಕೈಗಳಲ್ಲಿ ಶಂಖಚಕ್ರಗಳನ್ನು ಹಿಡಿದು, ಕೆಳಗಿನ ಕೈಗಳನ್ನು ಬದ್ಧಾಂಜಲಿ ಮುದ್ರೆಯಲ್ಲಿ ಜೋಡಿಸಿದ್ದಾನೆ. ಶಿವನ ಮೈಬಣ್ಣ ಬಿಳಿ; ವಿಷ್ಣುವಿನದು ನೀಲಿಗಪ್ಪು).



ಚಕ್ರದಾನಮೂರ್ತಿ




ಚಕ್ರದಾನಮೂರ್ತಿ

೨೧. ವಿಘ್ನೇಶ್ವರಪ್ರಸನ್ನ

'ಚತುರ್ಭುಜಂ ತ್ರಿನೇತ್ರಂ ಚ ಜಟಾಮಕುಟಸಂಯುತಂ।
ಅಭಯಂ ಸಿ(ಶಿ)ರಸಿ ನ್ಯಸ್ಯ ವರದಂ ವಾಮಹಸ್ತಕೇ। (II)
ಕೃಷ್ಣಾಪರಶುಸಂಯುಕ್ತಂ ವಿಘ್ನೇಶೋ ದಕ್ಷಿಣೇ ಸ್ಥಿತಃ।



ವಿಘ್ನೇಶ್ವರಪ್ರಸನ್ನ



ವಿಘ್ನೇಶ್ವರವರಪ್ರಸನಮೂರ್ತಿ

ಶಯಿ(ಯ)ನಂ ದಕ್ಷಿಣಂ ಪಾದಂ ವಾಮಪಾದಂ ತು ಲಂಬಿತಂ। (II)
ಸರ್ವಾಭರಣಸಂಯುಕ್ತಂ ಶ್ಯಾಮವರ್ಣಂ ಸುಶೋಭಿತಂ।
ದೇವಸ್ಯ ವಾಮಪಾರ್ಶ್ವೇ ತು ದೇವೀಂ ಪ್ರಹಸಿತಾನನಾಂ। (II)
ಸರ್ವಾಲಂಕಾರ ಸಂಯುಕ್ತಾಂ ಸವ್ಯೇ ತೂತ್ಪಲಧಾರಿಣೀಂ।
ವಾಮೇ ವರದಸಂಯುಕ್ತಾಂ ದ್ವಿಭುಜಾಂ ತ್ರಿನೇತ್ರಿಕಾಂ। (II)
ದಕ್ಷಿಣೇ ಶಯನಂ ಪಾದಂ ವಾಮಪಾದಂ ತು ಲಂಬಿತಂ।
ಏ(ಐ)ಕಪೀಠಸ್ಥಿತಾಂ ದೇವೀಮುಮಾಸ್ಕಂದೋಕ್ತವತ್ಕುರು। (II)
ವಿಘ್ನೇಶಂ ರಕ್ತವರ್ಣಂ ಚ ಕಿರೀಟಮಕುಟಾನ್ವಿತಂ। (II)

ನಮಸ್ಕಾರಾಂಜಲಿಂ ಹಸ್ತಂ ಪಾಶಾಂಕುಶಸಮನ್ವಿತಂ। (II)
ಸರ್ವಲಕ್ಷಣತಸಂಯುಕ್ತಂ ಸೋಮಾಸ್ಕಂದ ಮದ್ಧ(ಥ) ಶ್ರುಣು॥
ದೇವಸ್ಯ ದೇವ್ಯಾಶ್ಚ ಶ್ಯಾಮವರ್ಣಃ।ವಿಘ್ನೇಶ್ವರಸ್ಯ ರಕ್ತವರ್ಣಃ॥೨೧॥'

(ಗೌರೀಸುತನಾದ ಗಣೇಶನನ್ನು ಶಿವನು ತನ್ನ ಗಣಾಧ್ಯಕ್ಷನನ್ನಾಗಿ ನೇಮಿಸಿಕೊಂಡ ಸಂದರ್ಭ. ಇಲ್ಲಿ ಶಿವನ ಬಲಭಾಗದಲ್ಲಿ ಗಣೇಶ ನಿಂತಿದ್ದಾನೆ; ಶಿವನ ಎಡಗಡೆ ಅದೇ ಪೀಠದಲ್ಲಿ ಗೌರಿ ಸುಖಾಸೀನಳಾಗಿದ್ದಾಳೆ. ಶಿವನು ಎಂದಿನಂತೆ ಚತುರ್ಭುಜ, ತ್ರಿನೇತ್ರ, ಜಟಾಮಕುಟಸಂಯುತ. ಅವನ ಪರಹಸ್ತಗಳಲ್ಲಿ ಜಿಂಕೆ, ಕೊಡಲಿ.



ವಿಘ್ನೇಶ್ವರಪ್ರಸನ್ನ

ನಿಜಹಸ್ತಗಳಲ್ಲಿ, ಬಲಗೈ ಗಣೇಶನ ತಲೆಯಮೇಲೆ ಅಭಯಮುದ್ರೆಯಲ್ಲಿದೆ; ಎಡಗೈಯಲ್ಲಿ ವರದಮುದ್ರೆ. ಪಕ್ಕದಲ್ಲಿ ಗೌರಿ ಎಂದಿನಂತೆ ದ್ವಿಭುಜೆ, ದ್ವಿನೇತ್ರೆ. ಮುಖದಲ್ಲಿ ಮುಗುಳ್ನಗೆ. ಅವಳ ಬಲಗೈಯಲ್ಲಿ ಉತ್ಪಲಪುಷ್ಪ, ಎಡಗೈಯಲ್ಲಿ ವರದಮುದ್ರೆ. ಇಬ್ಬರು ಕುಳಿತಿರುವುದೂ ಒಂದೇ ಭಂಗಿಯಲ್ಲಿ, ಎಡಗಾಲನ್ನು ಕೆಳಗೆ ಇಳಿಬಿಟ್ಟು ಬಲಗಾಲನ್ನು ಪೀಠದ ಮೇಲೆ ಅಡ್ಡಲಾಗಿ ಮಡಚಿಕೊಂಡು. ಇವರಿಬ್ಬರ ಮೈಬಣ್ಣವೂ ನೀಲಿಗಪ್ಪು. ಗಣೇಶನು ಚತುರ್ಭುಜ; ಪರಹಸ್ತಗಳಲ್ಲಿ ಪಾಶ, ಅಂಕುಶ;ನಿಜಹಸ್ತಗಳು ನಮಸ್ಕಾರಾಂಜಲಿಯಲ್ಲಿ ಸೇರಿವೆ. ಗಣೇಶನ ಮೈಬಣ್ಣ ಕೆಂಪು.)

೨೨. ಸೋಮಾಸ್ಕಂದ -

'ಉದ್ಯದ್ಭಾನುನಿಭಂ ಚತುಷ್ಕರಯುತಂ ಕೇಯೂರಹಾರಾದಿಭಿ-
ರ್ದಿವ್ಯವಸ್ತ್ರಧರಂ ಜಟಾಮಕುಟಕಂ ಸಚ್ಚೋಭಿನೇತ್ರತ್ರಯಂ(I)
ವಾಮೇ ಗೌರಿಯುತಂ ಸುಖಾಸ(ನ) ಮುಭಯೋರ್ಮಧ್ಯೇ
ಕುಮಾರಂ ಸ್ಥಿತಂ ಸೋಮಾಸ್ಕಂದವಿಭುಂ ಮೃಗಾಭಯವರಾನ್
ಟಂಕಂ ದಧಾನಂ ಭಜೇI

ಸೋಮಾಸ್ಕಂದೇಶ್ವರಂ ಪ್ರೋಕ್ತಂ ಭೋಗಶಕ್ತಿಸಮನ್ವಿತಂI
ಚತುರ್ಭುಜಂ ತ್ರಿನೇತ್ರಂ ಚ ಜಟಾಮುಕುಟಸಂಯುತಂI
ಸರ್ವಾಭರಣಸಂಯುಕ್ತಂ ವರದಾಭಯ ಹಸ್ತಕಂI
ಕೃಷ್ಣಟಂಕಸಮಾಯುಕ್ತಂ ದಕ್ಷಿಣೇ ವಾಮಕೇಪಿ ಚI
ಪತ್ರಂ ತು ವಾಮಕರ್ಣೇ ತು ದಕ್ಷಿಣೇ ನಕ್ರಕುಂಡಲಂI
ಉಪವೀತಧರಂ ಚೈವ ಶಯನಂ ವಾಮಪಾದಕಂI
ಲಂಬಿತಂ ದಕ್ಷಿಣಂ ಪಾದಂ ವಾಮೇ ಗೌರೀಸಮಾಯುತಂI
ತಯೋರ್ಮಧ್ಯಗತಂ ಸ್ಕಂದಂ ಸರ್ವಲಕ್ಷಣಸಂಯುತಂI
ಸೋಮಾಸ್ಕಂದಮಿತಿ ಪ್ರೋಕ್ತಂ ಗಂಗಾಚಂದ್ರ ಸಮನ್ವಿತಂI
ಸೋಮಾಸ್ಕಂದಸ್ಯ ಪಾರ್ಶ್ವೇ ಆಸೀನಂ ತು ವಾ ಸ್ಥಿತಂ ತು ವಾI
ಪಂಚವಿಂಶತಿಮೂರ್ತೀನಾಂ ಸೋಮಾಂದೋ ವಿಶೇಷತಃI
ಉತ್ಸವಾರಂಭಕಾಲೇ ತು ಸೋಮಾಸ್ಕಂದೋ ವಿಶೇಷತಃI


ದೇವೀಧ್ಯಾನಂ-

ಸವ್ಯೋತ್ಪಲಧರಾಂ ದೇವೀಂ ವಾಮೇ ವರದಸಂಯುತಾಂI
ಶಯನಂ ದಕ್ಷಿಣಂ ಪಾದಂ ವಾಮಪಾದಂ ತು ಲಂಬಿತಂI
ಸ್ಕಂದಃ-
ಬಾಲರೂಪಸ್ಥಿತಂ ಸ್ಕಂದಂ ದ್ವಿನೇತ್ರಂ ದ್ವಿಭುಜಾನ್ವಿತಂI
ಸರಳಾಬ್ಜಧರಂ ಹಸ್ತೇ ಸರ್ವಾಭರಣಭೂಷಿತಂI
ಸೋಮಾಸ್ಕಂದಮಿತಿ ಪ್ರೋಪಿಕ್ತಮೇಕ ಪಾದಂ ತತಃ ಶ್ರುಣುI
ದೇವಸ್ಯ ರಕ್ತವರ್ಣಃIದೇವ್ಯಾ ಶ್ಯಾಮವರ್ಣಃಸ್ಕಂದಸ ನೀಲವರ್ಣಃII೨೨II'

(ಶಿವನ ಲೀಲಾಮೂರ್ತಿಗಳಲ್ಲೆಲ್ಲ ಪ್ರಧಾನವಾದುದು ಸೋಮಾಸ್ಕಂದಮೂರ್ತಿ ಎಂದರೆ ಉಮೆ, ಸ್ಕಂದರನ್ನೊಡಗೂಡಿದ ಶಿವ. ಇದರ ಮೂರ್ತಿಲಕ್ಷಣದಲ್ಲಿ ಶಿವಗೌರಿಯರು ಮೇಲಿನ ಮೂರ್ತಿಯಲ್ಲಿರುವಂತೆಯೇ, ಒಂದೇ ಪೀಠದ ಮೇಲೆ ಕುಳಿತಿದ್ದಾರೆ. ಇಬ್ಬರ ನಡುವೆ ಬಾಲರೂಪದ ಸ್ಕಂದ, ಎಂದರೆ ಕಾರ್ತಿಕೇಯ, ನಿಂತಿದ್ದಾನೆ. ಅವನು ದ್ವಿಭುಜ, ದ್ವಿನೇತ್ರ. ಕೈಗಳಲ್ಲಿ ತಾವರೆಹೂಗಳನ್ನು ಹಿಡಿದಿದ್ದಾನೆ. ಉಮೆ, ಶಿವ ಇವರ ಮೂರ್ತಿಲಕ್ಷಣಗಳು, ವಿಘ್ನೇಶ್ವರಪ್ರಸನ್ನ ಮೂರ್ತಿಯಲ್ಲಿರುವಂತೆಯೇ. ಸೋಮಾಸ್ಕಂದಮೂರ್ತಿಯ ಎಡಭಾಗದಲ್ಲಿ ಭೋಗಶಕ್ತಿಯನ್ನೂ, ಬಲಭಾಗದಲ್ಲಿ ವೀರಭದ್ರನನ್ನೂ ಕಾಣಿಸಬೇಕು. ಶಿವನ ಮೈಬಣ್ಣ ಕೆಂಪು, ಉಮೆಯದು ನೀಲಿಗಪ್ಪು. ಸ್ಕಂದನದು ನೀಲಿ.)



ಸೋಮಾಸ್ಕಂದಮೂರ್ತಿ



ಸೋಮಾಸ್ಕಂದಮೂರ್ತಿ

೨೩. ಏಕಪಾದಮೂರ್ತಿ-

'ಧ್ಯಾಯೇತ್ಕೋಟಿರವಿಪ್ರಭಂ ತ್ರಿಣಯನಂ ಸೀ(ಶೀ)ತಾಂಶು ಗಂಗಾಧರಂ
ಹಸ್ತೇ ಟಂಕಮೃಗಂ ವರಾಭಯಕರಂ ಪಾದೈಕಯುಕ್ತಂ ವಿಭುಂ।
ಶಂಭೋ ರ್ದಕ್ಷಿಣ ವಾಮಕಕ್ಷಭುಜಯೋಃ ಬ್ರಹ್ಮಾಚ್ಯುತಾಭ್ಯಾಂ ಸ್ಥಿತಂ।
ತತ್ತುಲ್ಯಕ್ಷಣಮಾಯುಧೈಃ ಪರಿವೃತಂ ಹಸ್ತದ್ವಯೋಂ(ಯಾಧ್ಯಾಂ)ಜಲಿಂ(ಲಿ)
ಬ್ರಹ್ಮಾಂಡಪ್ರಳಯೇ ಸುಸಂಸ್ಥಿತಪದಂ ಬ್ರಹ್ಮಾಂಡಮಧ್ಯಸ್ಥಿತಂ।
ಹ್ಯೇವಂ ಲಕ್ಷಣಸಂಯುತಂ ಪುರಹರಂ ಪಾದೈಕಮೂರ್ತೀಕೃತಂ॥
ಎ(ಏ)ಕಪಾದಮಿತಿ ಖ್ಯಾತಂ ಸುಖಾಸೀನಂ ತತಃ ಶೃಣು॥
ರಕ್ತವರ್ಣಃ॥ಪಕ್ಷಾಂತರೇ ಶ್ವೇತವರ್ಣೋ ಪಿ ಪ್ರಸಿದ್ಧಃ॥೨೩॥'

(ಬ್ರಹ್ಮಾಂಡವೆಲ್ಲವೂ ಪ್ರಳಯಕಾಲದಲ್ಲಿ ಕೊಚ್ಚಿಹೋಗಲು ಬ್ರಹ್ಮಾಂಡದ ನಡುವೆ ಸ್ಥಿರವಾಗಿ ಒಂದೇ ಕಾಲಮೇಲೆ ನಿಂತ ಶಿವನ ರೂಪ ಇದು. ಇಲ್ಲಿ ಶಿವನ ರೂಪ ಯಥಾಪ್ರಕಾರವಾಗಿ ಇದೆ; ಆದರೆ ಒಂದೇ ಕಾಲು. ಶಿವನ ಎರಡು ಕಂಕಳುಗಳಿಂದ ಬ್ರಹ್ಮನೂ (ಬಲಭಾಗದಲ್ಲಿ)



ಏಕಪಾದಮೂರ್ತಿ

ವಿಷ್ಣುವೂ (ಎಡಭಾಗದಲ್ಲಿ) ಹೊರಹೊಮ್ಮಿಕೊಂಡಿರುವಂತೆ ಮೂರ್ತಿಲಕ್ಷಣ. ಬ್ರಹ್ಮ, ವಿಷ್ಣುಗಳು ಅವರವರ ಆಯುಧಗಳನ್ನು ಪರಹಸ್ತಗಳಲ್ಲಿ ಹಿಡಿದು, ನಿಜಹಸ್ತಗಳನ್ನು ಬದ್ಧಾಂಜಲಿಮುದ್ರೆಯಲ್ಲಿ ಜೋಡಿಸಿದ್ದಾರೆ. ಬ್ರಹ್ಮನು ಮತ್ತೆ ಬ್ರಹ್ಮಾಂಡದ ಸೃಷ್ಟಿಗೂ ವಿಷ್ಣುವು ಅದರ ಪಾಲನೆಗೂ ಸಂಕೇತಗಳು.)




ವಿಕಪಾದಮೂರ್ತಿ

೨೪. ಸುಖಾಸೀನಮೂರ್ತಿ-


'ಅರುಣಾಭ ಸುಭಸ್ಮವಿಲೇಪನ ಧೃದ್ಧರಿಣೀ
ವರಟಂಕವರಾಭಯದಂ।
ಅರುಣಾಂಬರ ಶೋಭಿಲಸಚ್ಛುಭದಂ
ಗುಣನೇತ್ರ ಸುಖಾಸನರೂಪಮಿದಂ। (II)



ಸುಖಾಸೀನಮೂರ್ತಿ



ವಿಕಪಾದಮೂರ್ತಿ



ಸುಖಾಸೀನ ಮೂರ್ತಿ

ಚತುರ್ಭುಜಂ ತ್ರಿನೇತ್ರಂ ಚ ಜಟಾಮಕುಟಸಂಯುತಂ।
ಅಭಯಂ ದಕ್ಷಿಣೇ ಹಸ್ತೇ ವರದಂ ವಾಮಹಸ್ತಕೇ। (II)
ಕೃಷ್ಣಾಪರಶು ಸಂಯುಕ್ತಂ ವಾಮದಕ್ಷಿಣಹಸ್ತಯೋಃ।
ಶಯನಂ ದಕ್ಷಿಣಂ ಪಾದಂ ವಾಮಪಾದಂ ತು ಲಂಬಿತಂ। (II)
ಉಮಾಸಹಿತವತ್ಸರ್ವಂ ಸ್ಕಂದಗೌರೀವಿವರ್ಜಿತಂ।
ಸುಖಾಸೀನ ಮಿತಿ ಪ್ರೋಕ್ತಂ ವ್ಯಾಖ್ಯಾನಂ ತು ತತ(ಃ) ಶ್ರುಣು॥
ರಕ್ತವರ್ಣಃ॥೨೪॥'

(ಸುಖಾಸೀನ ಮೂರ್ತಿಯ ರೂಪವು ಸೋಮಾಸ್ಕಂದ ಮೂರ್ತಿಯಲ್ಲಿನ ಶಿವನಂತೆ;ಆದರೆ ಇಲ್ಲಿ ಉಮೆಯಾಗಲಿ ಸ್ಕಂದನಾಗಲಿ ಇಲ್ಲ. ಪರಹಸ್ತಗಳಲ್ಲಿ ಜಿಂಕೆ, ಕೊಡಲಿ;ನಿಜಹಸ್ತಗಳು ಅಭಯವರದ ಮುದ್ರೆಗಳಲ್ಲಿ, ಕುಳಿತಿರುವ ಭಂಗಿ ಸುಖಾಸನವೆನಿಸಿಕೊಳ್ಳುತ್ತದೆ. ಪೀಠದ ಮೇಲೆ ಬಲಗಾಲನ್ನು ಮಲಗಿರುವಂತೆ ಇರಿಸಿಕೊಂಡು ಎಡಗಾಲನ್ನು ಕೆಳಗೆ ಇಳಿಬಿದ್ದಂತೆ ಕಾಣಿಸಿದೆ. ಶಿವನ ಮೈಬಣ್ಣ ಕೆಂಪು.)




ಸುಖಾಸೀನಮೂರ್ತಿ

೨೫. ದಕ್ಷಿಣಾಮೂರ್ತಿ-


'ಭೂತಿ ವ್ಯಾಪಾಂಡರಾಂಗಶ್ಶಶಿಶಕಲಧರೋ
ಜ್ಞಾನ ಮುದ್ರಾಕ್ಷಮಾಲಾವೀಣಾನಾಗೈರ್ವಿ
ರಾಜತ್ಕರಕಮಲಧರೋಯೋಗಪಟ್ಟಾಭಿರಾಮಃ।
ವ್ಯಾಖ್ಯಾಪೀಠೇ ನಿಷಂಣ(ಣ್ಣ)ಸ್ಸಕಲ
ಮುನಿವರೈಸ್ಸೇವಿತಃ ಸುಪ್ರಸನ್ನಸ್ಸವ್ಯಾಳಃ
ಕೃತ್ತಿವಾಸಾಸ್ಸಕಲಶುಭತನುರ್ದಕ್ಷಿಣಾಮೂರ್ತಿರೀಶಃ॥

ನಾರದೋ ಜಮದಗ್ನಿಶ್ಚ ವಶಿಷ್ಠೋ ಭೃಗುದಕ್ಷಿಣೇ।
ಭರದ್ವಾಜಶ್ಶೌನಕಶ್ಚ ಅಗಸ್ತ್ಯೋ ಭಾರ್ಗವಸ್ತಥಾ। (॥)
ವಾಮಭಾಗೇ ವಿಧಾತವ್ಯಾಃ ಕಿನ್ನರಾದ್ಯೈಸ್ಸುಸೇವಿತೇ।
ಕೈಲಾಸಪರ್ವತೇ ತಸ್ಮಿನ್ವಟವೃಕ್ಷಸ್ಯ ಮೂಲಕೇ। (॥)
ಆಸೀನಂ ಸಕಲೇಶಂ ತು ಶಾಂತರೂಪಂ ಮಹೇಶ್ವರಂ।
ದಕ್ಷಿಣಾಮೂರ್ತಿರಿತ್ಯುಕ್ತಂ ಲಿಂಗೋದ್ಭವಮಥ ಶ್ರುಣು। (॥)
ಶುಭ್ರವರ್ಣಃ॥ಅಧಃ ಅಪಸ್ಮಾರಂ ಶಾಯಯೇತ್॥೨೫॥'



ದಕ್ಷಿಣಾಮೂರ್ತಿ


(ಕಡೆಯ ಲೀಲಾಮೂರ್ತಿ ವ್ಯಾಖ್ಯಾನದಕ್ಷಿಣಾಮೂರ್ತಿಯದು, ಇದೇ ಬಲು ಪ್ರಸಿದ್ಧವಾದುದು. ಶಿವನು ಕೈಲಾಸಪರ್ವತದಲ್ಲಿ ವಟವೃಕ್ಷದಡಿಯಲ್ಲಿ ಕುಳಿತು ನಾರದ ಮೊದಲಾದ ಋಷಿಗಳಿಗೆ ಜ್ಞಾನೋಪದೇಶಮಾಡುತ್ತಿರುವ ರೂಪ. ನಾಲ್ಕು ಕೈಗಳು. ಮುಂದಿನ ಬಲಗೈಯಲ್ಲಿ ಜ್ಞಾನಮುದ್ರೆ, ಇದನ್ನೇ ವ್ಯಾಖ್ಯಾನಮುದ್ರೆಯೆಂದೂ ಕರೆಯುವುದುಂಟು. ಇದರಲ್ಲಿಯೇ ಜಪಮಾಲೆಯನ್ನು ಅಳವಡಿಸುವುದೂ ಉಂಟು. ಮುಂದಿನ ಎಡಗೈಯಲ್ಲಿ ಪುಸ್ತಕವನ್ನು ತೋರಿಸುವುದು ವಾಡಿಕೆ; ಈ ಧ್ಯಾನಶ್ಲೋಕಗಳಲ್ಲಿ ಅದನ್ನು ಹೇಳಿಲ್ಲ. ಉಳಿದ ಕೈಗಳಲ್ಲಿ ವೀಣೆ, ಸರ್ಪ. ಕುಳಿತಿರುವ ಭಂಗಿ ಯೋಗಪಟ್ಟದ್ದು. ಋಷಿಗಳನ್ನು ಶಿವನ ಎಡಭಾಗದಲ್ಲಿ ತೋರಿಸಬೇಕೆಂದು ಹೇಳಿದೆ. ಕಿನ್ನರಾದಿ ದೇವಯೋನಿಯವರು ಶಿವನ ಸೇವೆಯಲ್ಲಿ ತೊಡಗಿರುವಂತೆ ಕಲ್ಪಿಸಿಕೊಳ್ಳಬೇಕು. ಶಾಂತನಾಗಿ ಕುಳಿತ ದಕ್ಷಿಣಾಮೂರ್ತಿಯ ಮೈಬಣ್ಣ ಬಿಳಿ.)



ದಕ್ಷಿಣಾಮೂರ್ತಿ



ದಕ್ಷಿಣಾಮೂರ್ತಿ




ವಟಮೂಲ



ವಿದ್ಯಾ ದಕ್ಷಿಣಾಮೂರ್ತಿ



ವ್ಯಾಖ್ಯಾನ ದಕ್ಷಿಣಾಮೂರ್ತಿ




ಅನುಷ್ಠಾನ ದಕ್ಷಿಣಾಮೂರ್ತಿ



ಜ್ಞಾನ ದಕ್ಷಿಣಾಮೂರ್ತಿ




ಶಕ್ತಿ ದಕ್ಷಿಣಾಮೂರ್ತಿ




ಸಂಹಾರ ದಕ್ಷಿಣಾಮೂರ್ತಿ



ಯೋಗ ದಕ್ಷಿಣಾಮೂರ್ತಿ



ಸಾಂಬ ದಕ್ಷಿಣಾಮೂರ್ತಿ



ವೀಣಾ ದಕ್ಷಿಣಾಮೂರ್ತಿ

(೭) ಲಿಂಗೋದ್ಭವ-ಶರಭಮೂರ್ತಿಗಳು

'ಲಿಂಗಾಕಾರಸ್ಯ ಮಧ್ಯೇ ತು ಚಂದ್ರಶೇಖರವತ್ ಸ್ಥಿತಂ।
ನಾಳಕಾಧಃ ಸ್ಥಿತಂ ಪಾದಂ ಲಿಂಗೋದ್ಭವ ಸಮನ್ವಿತಂ। (II)
ವಿರಿಂಚಿರ್ಹಂಸರೂಪೇಣ ಊರ್ಧ್ವಗೋ ವಾಮಪಾರ್ಶ್ವಕೇ।
ದಕ್ಷೇ ವರಾಹರೂಪಸ್ಯ ರೂಪೇಣಾಧೋಗತೋ ಹರಿಃ। (II)
ವಾಮದಕ್ಷಿಣಪಾರ್ಶ್ವಸ್ಥಾ(ಸ್ಥೌ) ಕೃತಾಂಜಲಿಸಮನ್ವಿತಾ(ತೌ)(।)
ಸ್ವರೂಪೇಣ ದ್ವಿಪಾದಸ್ಥಾವಜವಿಷ್ಣು(ಷ್ಣೂ) ವಿಭೋಃ ಪರೇ॥
ಏ(ಏ)ವಂ ಲಿಂಗಾವತಾರಂ ತು ಸರ್ವಶಾಂತಿಕರಃ ಸದಾ।
ತುಂಗಾಂಗವಿಸ್ತತಿನತಾಂ ಸಕಲಂಬಮಾನೈಸ್ಸಂಪನ್ನ
ಚಿನ್ಹ(ಹ್ನ)ಭುಜಭೂಷಣವರ್ಣ ಭೇದ್ಯೈಃ।
ಶೋಭಾನ್ವಿತಂ ಶುಭಕರಂ ಸಕಲಪ್ರಜಾನಾಮೈಶ್ವರ್ಯ
ಸಂಪದಭಿವೃದ್ಧಿಕರಂ ವಿದಧ್ಯಾತ್॥
ಪಕ್ಷಾಂತರೇ ಶುಭ್ರವರ್ಣೋ। ಹಿ (ಪಿ) ಪ್ರಶಿ(ಸಿ)ದ್ಧಃ॥

(ತಮ್ಮೆದುರಿಗೆ ಕಾಣಿಸಿಕೊಂಡ ಜ್ಯೋತಿಃಸ್ತಂಭವನ್ನು ಏನೆಂದು ಅರಿಯಲಾರದೆ ಅದರ ಅಡಿಮುಡಿಗಳನ್ನು ಹುಡುಕಿಬರಲು ಬ್ರಹ್ಮನೂ ವಿಷ್ಣುವೂ ಹೊರಟದ್ದೂ, ಅದರ ಗುಟ್ಟನ್ನು ಅರಿಯಲಾರದೆ ಹೋದುದೂ, ಲಿಂಗಾವತಾರದ ಸ್ವಾರಸ್ಯ. ಈ ರೂಪದಲ್ಲಿ ಲಿಂಗದೊಳಗಿಂದ ಮೇಲೆದ್ದು ಬಂದು ಚಂದ್ರಶೇಖರನಂತೆ ನಿಂತ ರೂಪ. ಕಾಲುಗಳು ಲಿಂಗದೊಳಗೆ



ಲಿಂಗೋದ್ಭವಮೂರ್ತಿ

ಅಡಗಿವೆ. ಲಿಂಗದ ಮೇಲ್ಭಾಗದಲ್ಲಿ ಎಡಗಡೆ ಬ್ರಹ್ಮನು ಹಂಸದಂತೆಯೂ, ಕೆಳಭಾಗದಲ್ಲಿ ಬಲಗಡೆ ವಿಷ್ಣುವು ಹಂದಿಯಂತೆಯೂ ಕಾಣಬೇಕು. ಶಿವನ ಎಡಬಲಪಕ್ಕಗಳಲ್ಲಿ ಬ್ರಹ್ಮ-ವಿಷ್ಣು ರೂಪಗಳನ್ನು ನಮಸ್ಕಾರಮುದ್ರೆಯಲ್ಲಿ ತೋರಿಸಬೇಕು. ಈ ರೂಪದಲ್ಲಿ ಶಿವನ ಕೈಗಳು ನಿರ್ದಿಷ್ಟವಾಗಿಲ್ಲ. ಮೈಬಣ್ಣವು ಬಿಳಿಯದು)



ಲಿಂಗೋದ್ಭವಮೂರ್ತಿ

ಶರಭಮೂರ್ತಿ -


'ಮಹಾಮೇರು ಸಮಾಕಾರಮಷ್ಟಪಾದಂ ರವಿಪ್ರಭಂ
ದ್ವಾತ್ರಿಂಶದ್ಬಾಹುಸಂಯುಕ್ತಂ ಸೂರ್ಯಸೋಮಾಗ್ನಿಲೋಚನಂ।



ಶರಭಮೂರ್ತಿ



ಲಿಂಗೋದ್ಭವಮೂರ್ತಿ



ಶರಭಮೂರ್ತಿ

ದುರ್ಗಾಕಾಳೀದ್ವಿಪಕ್ಷಂ ಚ ಸುತೀಕ್ಷ್ಣಘ್ನ ಗರ್ಜಿತಂ।
ಊರ್ಧ್ವಕೇಶಂ ಮಹಾಬಾಹುಂ ನಾನಾಲಂಕಾರಭೂಷಿತಂ।
ವಜ್ರಮುಷ್ಟ್ಯಭಯಂ ಚಕ್ರಂ ಶಕ್ತಿಂ ದಂಡಾಂಶುಕೌ ಕಥಾ।
ಖಡ್ಗಂ ಖಟ್ವಾಂಗ ಪರಶುಮಕ್ಷಮಾಲಾಸ್ಥಿಶೂಲಕಂ।
ಧನುಶ್ಚ ಮುಸಲಂ ಚಾಗ್ನಿಂ ದಧಾನಂ ದಕ್ಷಿಣೈಃ ಕರೈಃ।
ವರದಂ ಪಾಶಹಸ್ತಂ ಚ ಗದಾಂ ಬಾಣಧ್ವಜೌ ತಥಾ।
ಕ್ರಕಚಂ ಕ್ರೋಡಶಂಖೌ ಚ ಖೇಟಂ ನಾಗಂ ಚ ಪಂಕಜಂ।
ಕಪಾಲಂ ಪುಸ್ತಕಂ ಕುಂತಂ ದುರ್ಗಾಶ್ಲಿಷ್ಟಕರಾಂಬುಜಂ।
ಹಲಂ ವಾಮೇ ದಧಾನಂ ಚ ಭೀಷಣಂ ಕರಪಂಕಜೈಃ॥
ದಂಷ್ಟ್ರೋಲ್ಲಾಸಂ ಮಹಾಸಿಂಹ ಚ್ಛಟಚ್ಛಟನಿಪೀಡಿತಂ॥
ರಕ್ತವರ್ಣಃ॥'

(ಹಿರಣ್ಯಕಶಿಪುವನ್ನು ಕೊಂದಮೇಲೂ ಶಾಂತವಾಗದ ಉಗ್ರಕೋಪದಿಂದ ನರಸಿಂಹನು ಜಗತ್ತಿಗೆ ಭಯಾನಕನಾಗಿದ್ದಾಗ, ಅವನ ಕೋಪವನ್ನಿಳಿಸಲು ಶಿವನು ಇನ್ನಷ್ಟು ಉಗ್ರರೂಪವನ್ನು ತಳೆದದ್ದು ಶರಭಾವತಾರದ ಸಂದರ್ಭ. ಮೇರುಪರ್ವತದಂಥ ಮೈ, ಸೂರ್ಯನಂಥ ತೇಜಸ್ಸು. ಎಂಟು ಕಾಲುಗಳು, ಮೂವತ್ತೆರಡು ಕೈಗಳು. ಮೂರು ಕಣ್ಣುಗಳು, ಸೂರ್ಯ, ಚಂದ್ರ, ಅಗ್ನಿ. ಕೈಗಳಲ್ಲಿ ಘೋರವಾದ ಆಯುಧಗಳು. ಮೈಬಣ್ಣ ಕೆಂಪು.)



ಶರಭಮೂರ್ತಿ

(೮) ಗಣಪತಿಯ ರೂಪಗಳು

ದಕ್ಷಿಣದೇಶದ ದೇವಾಲಯಗಳಲ್ಲಿ ಗಣಪತಿಯ ರೂಪಭೇದವನ್ನು ಶಿಲ್ಪದಲ್ಲಿ ನಿರ್ದೇಶಿಸುವಾಗ ಶ್ರೀ ವಿದ್ಯಾರ್ಣವತಂತ್ರದಲ್ಲಿ ಹೇಳಿರುವ ಹದಿನೈದು ರೂಪಗಳ ವರ್ಣನೆಯನ್ನೇ ಆವಲಂಬಿಸುವುದು ವಾಡಿಕೆ. ಆದರೆ ಮುಮ್ಮಡಿಯವರು ಶ್ರೀತತ್ತ್ವನಿಧಿಯಲ್ಲಿ ಗಣಪತಿಯ ಧ್ಯಾನಶ್ಲೋಕಗಳನ್ನು ಮುದ್ಗಲಪುರಾಣದಿಂದ ಆಯ್ದುಕೊಂಡು ಮೂವತ್ತೆರಡು ರೂಪಗಳನ್ನು ಕಾಣಿಸಿದ್ದಾರೆ. ಮುದ್ಗಲಪುರಾಣವೆಂಬುದು ಒಂಬತ್ತು ಖಂಡಗಳಿರುವ ಒಂದು ಉಪಪುರಾಣ; ಗಣಪತಿಯ ಹಿರಿಮೆಯನ್ನೇ ಹೇಳುವಂಥದು. ಮಹಾರಾಷ್ಟ್ರ, ಗುಜರಾತು, ಮಧ್ಯಪ್ರದೇಶಗಳಲ್ಲಿ ಗಾಣಾಪತ್ಯ ಪಂಥದವರಿಗೆ ಇದು ಪ್ರಧಾನವಾದ ಗ್ರಂಥ. ಮಹಾರಾಷ್ಟ್ರದ ಕಡೆಯೇ ಗಣಪತಿಯ ಪೂಜೆ ವಿಶೇಷವಾಗಿ ಬೆಳೆದುಬಂದುದಕ್ಕೂ ಈ ಪುರಾಣದ ಪ್ರಭಾವವೇ ಕಾರಣ. ತಂಜಾವೂರಿನಲ್ಲೂ, ಮೈಸೂರಿನಲ್ಲೂ ಮಹಾರಾಷ್ಟ್ರದ ಪ್ರಭಾವ ಸುಮಾರಾಗಿಯೇ ಇದ್ದ ಕಾಲ ಮುಮ್ಮಡಿಯವರದ್ದು. ಆದ್ದರಿಂದ ಅವರು ಮುದ್ಗಲಪುರಾಣವನ್ನು ಗಣಪತಿಯ ಧ್ಯಾನಶ್ಲೋಕಗಳಿಗೆ ಆಕರವಾಗಿ ಗ್ರಹಿಸಿದ್ದೇನು ಸೋಜಿಗವಲ್ಲ.

ಈ ಮೂವತ್ತೆರಡು ರೂಪಗಳಿಗೂ ಧ್ಯಾನಶ್ಲೋಕಗಳಲ್ಲದೆ ಸೊಗಸಾದ ವರ್ಣಚಿತ್ರಗಳನ್ನು ತಮ್ಮ ಆಸ್ಥಾನ ಕಲಾವಿದರಿಂದ ಬರೆಯಿಸಿದ್ದಾರೆ. ಈ ಆಸ್ಥಾನ ಚಿತ್ರಗಾರರು ಶ್ರೀತತ್ತ್ವನಿಧಿಯ ಚಿತ್ರಣಕ್ಕೆ ಪೂರ್ವಭಾವಿಯಾಗಿ ಮಾಡಿಕೊಂಡಿರಬಹುದಾದ ರೇಖಾಚಿತ್ರಗಳ ಪಡಿಯಚ್ಚುಗಳನ್ನು ಹಿರಿಯರಾದ ಶ್ರಿ ಸುಬ್ರಹ್ಮಣ್ಯರಾಜು ಅವರ ಸೌಜನ್ಯದಿಂದ ನಾನು ಪಡೆದು ಕೊಳ್ಳುವುದಾಯಿತು. ಅವುಗಳನ್ನೂ ಇಲ್ಲಿ ಸೇರಿಸಿದ್ದೇನೆ. ಮುಮ್ಮಡಿಯವರೇ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದ ಹೊರ ಪ್ರಾಕಾರದ ಮೇಲೆ ಈ ಮೂವತ್ತೆರಡು ಗಣಪತಿರೂಪಗಳ ಶಿಲ್ಪಗಳನ್ನು ಗಾರೆಗಚ್ಚಿನಲ್ಲಿ ಮಾಡಿಸಿದ್ದಾರೆ. ಅವೂ ಬಹುಮಟ್ಟಿಗೆ ಮುದ್ಗಲಪುರಾಣದ ಧ್ಯಾನಶ್ಲೋಕಗಳನ್ನೆ ಅವಲಂಬಿಸಿವೆ. ಈ ಶಿಲ್ಪಗಳ ಕೆಲವು ಚಿತ್ರಗಳನ್ನೂ ಇಲ್ಲಿ ಕಾಣಿಸಲಾಗಿದೆ.

ಮೊದಲಲ್ಲಿ 'ಅಥ ದ್ವಾತ್ರಿಂಶದ್ಗಣಪತೀನಾಂ ಧ್ಯಾನಂ' ಎಂದು ಮುದ್ಗಲಪುರಾಣದ ಕೆಲವು ಶ್ಲೋಕಗಳನ್ನು ಕೊಟ್ಟು ಮೂವತ್ತೆರಡು ಗಣಪತಿರೂಪಗಳ ಹೆಸರುಗಳನ್ನು ತಿಳಿಸಿದ್ದಾರೆ-

'ಬಾಲಸ್ತರುಣಭಕ್ತೌ ಚ ವೀರಶಕ್ತಿರ್ದ್ವಿಜಸ್ತಥಾ।
ಸಿದ್ಧ ಉಚ್ಛಿಷ್ಟವಿಘ್ನೇಶೌ ಕ್ಷಿಪ್ರೋ ಹೇರಂಬನಾಮಕಃ। (II)
ಲಕ್ಷ್ಮೀಗಣಪತಿಶ್ಚೈವ ಮಹಾವಿಘ್ನೇಶ್ವರಸ್ತಥಾ।
ವಿಜಯಃ ಕಲ್ಪವೃತ್ತಶ್ಚ ಊರ್ಧ್ವವಿಘ್ನೇಶ ಉಚ್ಯತೇ। (II)
ಏ(ಏ)ಕಾಕ್ಷರೋ ವರಶ್ಚೈವ ತ್ರ್ಯಕ್ಷರಃ ಕ್ಷಿಪ್ರದಾಯಕಃ।
ಹರಿದ್ರಾಖ್ಯಶ್ಚೈಕದಂತಃ ಸೃಷ್ಟಿರುದ್ದಂಡನಾಮಕಃ। (II)
ಋಣಮೋಚನಕೋ ಧುಂಡೀ ದ್ವಿಮುಖಸ್ತ್ರಿಮುಖಸ್ತಥಾ।
ಸಿಂಹೋ ಯೋಗಶ್ಚ ದುರ್ಗಾ ಚ ದೇವಸ್ಸಂಕಟಹಾರಕಃ। (II)
ದ್ವಾತ್ರಿಂಶದ್ವಿಘ್ನರಾಜಾಖ್ಯಾಸ್ತೇಷಾಂ ಧ್ಯಾನಮಥೋಚ್ಯತೇ॥'


ಮುಂದೆ ಒಂದೊಂದು ರೂಪದ ಧ್ಯಾನಶ್ಲೋಕವನ್ನೂ ಕೊಟ್ಟಿದ್ದಾರೆ; ಇದನ್ನವಲಂಬಿಸಿ ವರ್ಣಚಿತ್ರಗಳನ್ನೂ ಬರೆಯಿಸಿದ್ದಾರೆ. ಬಹುಮಟ್ಟಿಗೆ ಧ್ಯಾನಶ್ಲೋಕಗಳಿಗೂ ಚಿತ್ರಗಳಿಗೂ ಹೊಂದಾಣಿಕೆಯಿರುವುದಾದರೂ ಕೆಲವೊಮ್ಮೆ ವಿವರಗಳು ಬೇರೆಬೇರೆಯಾಗಿವೆ. ಹೀಗೆ ವ್ಯತ್ಯಾಸವಾಗಿರುವುದನ್ನು ಅಲ್ಲಲ್ಲಿ ಕಾಣಿಸಿದ್ದೇನೆ.


೧. ಬಾಲಗಣಪತಿ



ಕರಸ್ಥ ಕದಲೀ ಚೂತಪನಸೇಕ್ಷುಕ ಮೋದಕಂ।
ಬಾಲಸೂರ್ಯನಿಭಂ ವಂದೇ ದೇವಂ ಬಾಲಗಣಾಧಿಪಂ। (॥)
ರಕ್ತವರ್ಣಃ॥೧॥'

(ಎಳೆಯ ಸೂರ್ಯನಂತೆ ಬೆಳಗುವನೆಂದು ಬಾಲಗಣಪತಿ. ನಾಲ್ಕು ಕೈಗಳು; ಕೈಗಳಲ್ಲಿ ಪ್ರದಕ್ಷಿಣಕ್ರಮವಾಗಿ ಮಾವಿನಹಣ್ಣು, ಮಾವಿನ ಚಿಗುರು (ಚೂತ), ಕಬ್ಬಿನ ಜಲ್ಲೆ (ಇಕ್ಷುದಂಡ), ಕಡಬು (ಮೋದಕ) ಇವನ್ನು ಚಿತ್ರದಲ್ಲಿ ಕಾಣಬಹುದು. ಧ್ಯಾನಶ್ಲೋಕದಲ್ಲಿ ಬಾಳೆಯ ಹಣ್ಣು (ಕದಲೀ) ಎಂದು ಇನ್ನೊಂದು ವಿವರನ್ನು ಸೂಚಿಸಿದ್ದಾರೆ; ಚಿತ್ರದಲ್ಲಿ ಇದು ಕಾಣುವುದಿಲ್ಲ.)






೨. ತರುಣಗಣಪತಿ

'ಪಾಶಾಂಕುಶಾಪೂಪಕಪಿತ್ಥ ಜಂಬೂ -
ಸ್ವದಂತ ಶಾಲೀಕ್ಷುಮಪಿ ಸ್ವಹಸ್ತೈಃ।
ಧತ್ತೇ ಸದಾ ಯಸ್ತರುಣಾರುಣಾಭಃ
ಪಾಯಾತ್ಸ ಯುಷ್ಮಾಂಸ್ತರುಣೋ ಗಣೇಶಃ॥
ರಕ್ತವರ್ಣಃ॥೨॥'

(ಸೂರ್ಯ ಹುಟ್ಟುವ ಮೊದಲು ಕಾಣಿಸಿಕೊಳ್ಳುವ ಕೆಂಪಡರಿದ ಬಣ್ಣ 'ತರುಣಾರುಣ' ಚಿತ್ರದಲ್ಲಿ 'ಶಿಂದೂರ ವರ್ಣ' ಎಂದು ಒಕ್ಕಣೆಯಿದೆ. ಇದರಂತಿರುವ ಗಣಪತಿ ತರುಣ ಗಣಪತಿ. ಎಂಟು ಕೈಗಳು; ಕೈಗಳಲ್ಲಿ ಪ್ರದಕ್ಷಿಣಕ್ರಮವಾಗಿ ತನ್ನ ದಾಡೆ (ಹಲ್ಲು, ದಂತ), ಬತ್ತದ ತೆನೆ (ಶಾಲಿ), ಕಬ್ಬಿನ ಜಲ್ಲೆ (ಇಕ್ಷು), ಅಂಕುಶ, ಪಾಶ, ಅಪೂಪ, ಹಲಸಿನ ಹಣ್ಣು (ಪನಸ), ಬೇಲದ ಕಾಯಿ (ಕಪಿತ್ಥ) ಇವು ಚಿತ್ರದಲ್ಲಿವೆ. ಧ್ಯಾನಶ್ಲೋಕದಲ್ಲಿ ಹಲಸಿನ ಹಣ್ಣಿನ ಬದಲು ಜಂಬೂಫಲವನ್ನು ಸೂಚಿಸಿದ್ದಾರೆ)








೩. ಭಕ್ತ ಗಣಪತಿ



'ನಾಳಿಕೇರಾಮ್ರಕದಲೀಗುಡಪಾಯಸಧಾರಿಣಂ।
ಶರಚ್ಚಂದ್ರಾಭವಪುಷಂ ಭಜೇ ಭಕ್ತ ಗಣಾಧಿಪಂ॥
ಶ್ವೇತವರ್ಣಃ॥೩॥'

(ಭಕ್ತವೆಂದರೆ ಅನ್ನ, ಆಹಾರ. ಕೈಗಳಲ್ಲಿ ಬರಿಯ ಆಹಾರ ಪದಾರ್ಥಗಳೆ ಇರುವುದರಿಂದ ಭಕ್ತ ಗಣಪತಿ. ನಾಲ್ಕು ಕೈಗಳು; ಪ್ರದಕ್ಷಿಣಕ್ರಮವಾಗಿ ಬಾಳೆಯಹಣ್ಣು (ಕದಲೀ), ಮಾವಿನ ಹಣ್ಣಿನೊಂದಿಗೆ ಚಿಗುರು (ಆಮ್ರ), ಹಲಸಿನ ಹಣ್ಣು (ಪನಸ) ಮತ್ತು ಬೆಲ್ಲದ ಪಾಯಸ ತುಂಬಿದ ಪಾತ್ರೆ. ಧ್ಯಾನಶ್ಲೋಕದಲ್ಲಿ ಹಲಸಿನ ಹಣ್ಣಿನ ಬದಲು ತೆಂಗಿನಕಾಯಿ (ನಾರಿಕೇಳ) ಎಂದಿದೆ. ಈ ಗಣಪತಿಯ ಬಣ್ಣ ಶರತ್ಕಾಲದ ಚಂದ್ರನಂತೆ ಎಂದು ಒಕ್ಕಣೆ.)






೪. ವೀರ ಗಣಪತಿ

ಭೇತಾಳ ಶಕ್ತಿ ವ(ಶ)ರ ಕಾರ್ಮುಕ ಚಕ್ರಖಡ್ಗ
ಖಟ್ವಾಂಗ ಮುದ್ಗರ ಗದಾಂಕುಶ ನಾಗಪಾಶಾನ್।
ಶೂಲಂ ಚ ಕುಂತಪರಶುಧ್ವಜಮುದ್ವಹಂತಂ
ವೀರಂ ಗಣೇಶಮರುಣಂ ಸತತಂ ಸ್ಮರಾಮಿ॥
ರಕ್ತವರ್ಣಃ॥೪॥'

(ವೀರೋತ್ಸಾಹ ಸೂಚಕವಾದ ಆಯುಧಗಳನ್ನು ಧರಿಸಿದವನಾಗಿ 'ವೀರ'. ಹದಿನಾರು ಕೈಗಳು; ಇವುಗಳಲ್ಲಿ ಪ್ರದಕ್ಷಿಣ ಕ್ರಮವಾಗಿ ನಾಗಪಾಶ, ಮುದ್ಗರ, ಗದೆ, ಚಕ್ರ, ಅಂಕುಶ, ಕುಂತ ಅಥವಾ ಶಕ್ತ್ಯಾಯುಧ, ಬಾಣ (ಶರ), ಬೇತಾಳ (ವೇತಾಲ), ಪಾಶ, ಧನುಸ್ಸು (ಕಾರ್ಮುಕ), ಬಾವುಟ (ಧ್ವಜ), ಕೊಡಲಿ (ಪರಶು), ಕತ್ತಿ (ಖಡ್ಗ), ತ್ರಿಶೂಲ, ಘಂಟೆ ಇವು ಚಿತ್ರದಲ್ಲಿವೆ. ಧ್ಯಾನಶ್ಲೋಕದಲ್ಲಿ ಖಟ್ವಾಂಗ (ಮೂಳೆಯ ಕಡ್ಡಿಗೆ ತಲೆಯೋಡೆಯನ್ನು ಸಿಕ್ಕಿಸಿ ಮಾಡಿದ ಆಯುಧ) ವೊಂದನ್ನು ಕಾಣಿಸಿದ್ದಾರೆ; ಚಿತ್ರದಲ್ಲಿ ಇಲ್ಲ.)








೫. ಶಕ್ತಿ ಗಣಪತಿ



'ಆಲಿಂಗ್ಯ ದೇವೀಂ ಹರಿತಾಂಗಯಷ್ಟಿಂ
ಪರಸ್ಪರಾಶ್ಲಿಷ್ಟ ಕಟಿ ಪ್ರದೇಶಂ।
ಸಂಧ್ಯಾರುಣಂ ಪಾಶಸೃಣೀ ವಹಂತಂ
ಭಯಾಪಹಂ ಶಕ್ತಿ ಗಣೇಶಮೀಡೇ॥
ಸಿಂದೂರವರ್ಣಃ॥೫॥'

(ಶಕ್ತಿಯನ್ನು, ಎಂದರೆ ದೇವಿಯನ್ನು, ತನ್ನ ಎಡತೊಡೆಯ ಮೇಲೆ ಕೂಡಿಸಿಕೊಂಡು ಸುಖಾಸೀನನಾಗಿ ಕುಳಿತಿರುವ ರೂಪ. ನಾಲ್ಕು ಕೈಗಳು; ಅಭಯ ಮುದ್ರೆ (ಭಯಾಪಹ), ಅಂಕುಶ (ಸೃಣೀ), ಪಾಶ ಮತ್ತು ಕಡಬು (ಮೋದಕ) ಇವು ಪ್ರದಕ್ಷಿಣಕ್ರಮವಾಗಿ ನಾಲ್ಕು ಕೈಗಳಲ್ಲಿ; ಸೊಂಡಿಲಲ್ಲಿ ದೇವಿಯ ಒಂದು ಸ್ತನವನ್ನು ಹಿಡಿದಿದ್ದಾನೆ. ದೇವಿಯ ಸೊಂಟವನ್ನು ಒಂದು ಕೈ ಬಳಸಿಬಂದಿದೆ. ಧ್ಯಾನಶ್ಲೋಕದಲ್ಲಿ ಕಡಬು ಸೇರುವುದಿಲ್ಲ. ಗಣಪತಿಯು ಸಂಜೆಯ ನಸುಗೆಂಪಿನ ಬಣ್ಣದವನು; ದೇವಿಯದು ಹಸಿರುಬಣ್ಣ.)







೬. ದ್ವಿಜ ಗಣಪತಿ

'ಯಂ ಪುಸ್ತಕಾಕ್ಷಗುಣದಂಡಕಮಂಡಲುಶ್ರೀ -
ವಿದ್ಯೋತಮಾನಕರಭೂಷಣಮಿಂದುವರ್ಣಂ ।
ಸ್ತಂಬೇರಮಾನನಚತುಷ್ಟಯ ಶೋಭಮಾನಂ
ತ್ವಾಂ ಯಃ ಸ್ಮರೇದ್ವಿ(ದ್ವಿ)ಜಗಣಾಧಿಪತೇ ಸ ಧನ್ಯಃ॥
ಶುಭ್ರವರ್ಣಃ॥೬॥'

(ದ್ವಿಜನೆಂದರೆ ಇಲ್ಲಿ ಬ್ರಹ್ಮ; ಚತುರ್ಮುಖ ಬ್ರಹ್ಮನ ಗುಣವಿಶೇಷಗಳನ್ನು ಅಳವಡಿಸಿಕೊಂಡ ರೂಪ ಇದು. ನಾಲ್ಕು ತಲೆಗಳು, ನಾಲ್ಕು ಕೈಗಳು; ಕೈಗಳಲ್ಲಿ ಅಕ್ಷಮಾಲೆ, ದಂಡ, ಕಮಂಡಲು ಮತ್ತು ಪುಸ್ತಕ (ವೇದ). ಚಂದ್ರನ ಬಣ್ಣ, ಎಂದರೆ ಬಿಳಿಯ ಬಣ್ಣ.)







೭. ಸಿದ್ಧಿ ಗಣಪತಿ

'ಪಕ್ವಚೂತ ಫಲಪುಷ್ಪಮಂಜರೀ -
ಮೀಕ್ಷು ದಂಡತಿಲಮೋದಕೈಃ ಸಹ।
ಉದ್ವಹನ್ ಪರಶುಮಸ್ತುತೇ ನಮಃ
ಶ್ರೀ ಸಮೃದ್ಧಿಯುತ ಹೇಮಪಿಂಗಳ॥
ಪಿಂಗಳವರ್ಣಃ॥೭॥'

(ಸಿದ್ಧಿಯನ್ನು ಸೂಚಿಸುವ ಕಳಿತ ಮಾವಿನ ಹಣ್ಣು (ಪಕ್ವಚೂತ ಫಲ), ಕೊಡಲಿ (ಪರಶು), ಕಬ್ಬಿನ ಜಲ್ಲೆ (ಇಕ್ಷುದಂಡ), ಮತ್ತು ಅಕ್ಷಮಾಲೆ ಹಿಡಿದ ನಾಲ್ಕು ಕೈಗಳು. ಧ್ಯಾನಶ್ಲೋಕದಲ್ಲಿ ಚಿತ್ರದಲ್ಲಿಲ್ಲದ ಹೂ ಗೊಂಚಲು (ಪುಷ್ಪಮಂಜರಿ) ಮತ್ತು ಎಳ್ಳಿನ ಕಡಬು (ತಿಲಮೋದಕ)ಗಳನ್ನು ಹೇಳಿದ್ದಾರೆ; ಚಿತ್ರದಲ್ಲಿರುವ ಅಕ್ಷಮಾಲೆಯನ್ನು ಬಿಟ್ಟಿದ್ದಾರೆ. ಗಣಪತಿಯ ಬಣ್ಣ ಬಂಗಾರದ್ದು.)





೮. ಉಚ್ಛಿಷ್ಟ ಗಣಪತಿ

'ನೀಲಾಬ್ಜದಾಡಿಮ ವೀಣಾ ಶಾಲಿಗುಂಜಾಕ್ಷ ಸೂತ್ರಕಂ।
ದಧದುಚ್ಛಿಷ್ಟನಾಮಾಯಂ ಗಣೇಶಃ ಪಾತು ಮೇಚಕಃ॥
ಗ್ರಂಥಾಂತರೇ 'ನಾರೀಯೋನಿರಸಾಸ್ವಾದಲೋಲುಪಂ
ಕಾಮಮೋಹಿತ' ಮಿತಿ।
ನೀಲವರ್ಣಃ॥೮॥'

(ತಾಂತ್ರಿಕ ಸಾಧನೆಯಲ್ಲಿ ವಾಮಮಾರ್ಗಿಗಳು ಈ ರೂಪವನ್ನು ಬಳಸುವುದರಿಂದ ಇದು 'ಉಚ್ಛಿಷ್ಟ'. ತೊಡೆಯ ಮೇಲೆ ತನ್ನ ಶಕ್ತಿ (ದೇವಿ); ಸೊಂಡಿಲು ಆಕೆಯ ಗುಹ್ಯಸ್ಥಾನವನ್ನು ಮುಟ್ಟುತ್ತಿದೆ, ಒಂದು ಕೈ ಆಕೆಯನ್ನು ಅಪ್ಪಿ ಹಿಡಿದಿದೆ. ಆರು ಕೈಗಳು: ವೀಣೆ ಅಕ್ಷಮಾಲೆ, ದಾಳಿಂಬೆ ಹಣ್ಣು (ದಾಡಿಮ), ಬತ್ತದ ತೆನೆ (ಶಾಲಿ), ನೀಲಕಮಲ ಮತ್ತು ಗುಂಜಾಫಲ ಇವು ಪ್ರದಕ್ಷಿಣಕ್ರಮವಾಗಿ ಕೈಗಳಲ್ಲಿವೆ. ಗಣಪತಿಯ ಬಣ್ಣ ನೀಲಿಯೆಂದೂ ದೇವಿಯ ಬಣ್ಣ ಸಿಂಧೂರವೆಂದೂ ಚಿತ್ರದಲ್ಲಿ ಒಕ್ಕಣೆಯಿದೆ; ಧ್ಯಾನಶ್ಲೋಕದಲ್ಲಿ ಈ ವಿವರವಿಲ್ಲ.





೯. ವಿಘ್ನ ಗಣಪತಿ

'ಶಂಖೇಕ್ಷುಚಾಪ ಕುಸುಮೇಷು ಕುಠಾರ ಪಾಶ
ಚಕ್ರ ಸ್ವದಂತ ಸೃಣಿ ಮಂಜರಿಕಾಶನಾದ್ಯೈಃ(ಶರೌಘೈಃ)
ಪಾಣಿಶ್ರಿತೈಃ ಪರಿಸಮೀಹಿತಃ (ಪರಶುವಿಹಿತ ಭೂಷಣ) ಶ್ರೀಃ
ವಿಘ್ನೇಶ್ವರೋ ವಿಜಯತೇ ತಪನೀಯ್ಯ ಗೌರಃ॥
ಸ್ವರ್ಣವರ್ಣಃ॥೯॥'

(ತೊಂದರೆಗಳನ್ನೊಡ್ಡುವ, ನೀಗಿಸುವ ರೂಪ. ಎಂಟು ಕೈಗಳು; ಕೈಗಳಲ್ಲಿ ಪ್ರದಕ್ಷಿಣಕ್ರಮವಾಗಿ ಚಕ್ರ, ದಾಡೆ (ದಂತ), ಕೊಡಲಿ (ಪರಶು), ಹೂಬಾಣ (ಕುಸುಮೇಷು), ಕಬ್ಬಿನ ಜಲ್ಲೆ (ಇಕ್ಷು ಚಾಪ), ಪಾಶ, ಕುಠಾರ ಮತ್ತು ಶಂಖ. ಸೊಂಡಿಲಲ್ಲಿ ಚಿಗುರೆಲೆಳ ಗೊಂಚಲು (ಮಂಜರಿಕಾ). ಬಣ್ಣ, ಬಿಳಿಯದು.)





೧೦. ಕ್ಷಿಪ್ರ ಗಣಪತಿ

'ದಂತಕಲ್ಪಲತಾ ಪಾಶರತ್ನ ಗರ್ಭಾಂ(ಕುಂಭಾ)ಕುಶೋಜ್ಜ್ವಲಂ।
ಬಂಧೂಕಕಮನೀಯಾಭಂ ಧ್ಯಾಯೇತ್ ಕ್ಷಿಪ್ರಗಣಾಧಿಪಂ॥
ರಕ್ತವರ್ಣಃ॥೧೦॥'

(ಒಡನೆಯೆ ತೋರಿಕೊಳ್ಳುವ ರೂಪ, ನಾಲ್ಕು ಕೈಗಳು ದಾಡೆ (ದಂತ), ಅಂಕುಶ, ಪಾಶ ಮತ್ತು ಕಲ್ಪವೃಕ್ಷದ ರೆಂಬೆ. ಇವು ಪ್ರದಕ್ಷಿಣಕ್ರಮವಾಗಿ, ಮತ್ತು ಸೊಂಡಿಲಲ್ಲಿ ಹಿಡಿದ ರತ್ನಕುಂಭ, ಬಂಧೂಕಪುಷ್ಪದಂತೆ ಮೈಬಣ್ಣ; ಚಿತ್ರದಲ್ಲಿ 'ಶಿಂಧೂರವರ್ಣ' ಎಂದು ಕಾಣಿಸಿದೆ.)






ಹೇರಂಬ ಗಣಪತಿ




'ಅಭಯವರದಹಸ್ತಂ(:) ಪಾಶದಂತಾಕ್ಷಮಾಲಾ
ಸೃಣಿ ಪರಶು ದಧಾನಂ(ನೋ) ಮುದ್ಗರಂ ಮೋದಕಂ ಚ।
ಫಲಮಧಿಗತಸಿಂಹಃ ಪಂಚಮಾತಂಗವಕ್ತ್ರೋ
ಗಣಪತಿರತಿಗೌರಃ ಪಾತು ಹೇರಂಬನಾಮಾ॥
ಗೌರವರ್ಣಃ॥೧೧॥'

(ಐದು ತಲೆಗಳ ರೂಪ. ಸಿಂಹವಾಹನ, ಹತ್ತು ಕೈಗಳು; ಕ್ರಮವಾಗಿ ಅಭಯಮುದ್ರೆ, ಕಲ್ಹಾರ, ಅಕ್ಷಮಾಲೆ, ಗದೆ, ದಾಡೆ(ದಂತ), ಪಾಶ, ಅಂಕುಶ (ಸೃಣಿ), ಕೊಡಲಿ (ಪರಶು), ಮತ್ತು ಹಣ್ಣು(ಫಲ) ಚಿತ್ರದಲ್ಲಿ ಕಾಣುತ್ತವೆ. ಧ್ಯಾನಶ್ಲೋಕದಲ್ಲಿ ಕಲ್ಹಾರಕ್ಕೆ ಬದಲು ಮುದ್ಗರ ಎಂದಿದೆ. ಗದೆಯಿಲ್ಲ; ಮೋದಕವನ್ನು ಸೇರಿಸಿದ್ದಾರೆ. ಬಿಳಿಯ ಮೈಬಣ್ಣ.)










೧೨. ಲಕ್ಷ್ಮೀಗಣಪತಿ

'ಬಿಭ್ರಾಣಶ್ಯಕಬೀಜಪೂರಕ ಮಿಳಿನ್ಮಾಣಿಕ್ಯ ಕುಂಭಾಂಕುಶಾನ್
ಪಾಶಂ ಕಲ್ಪಲತಾಂ ಚ ಖಡ್ಗವಿಲಸಜ್ಜ್ಯೋತಿಸ್ಸುಧಾನಿರ್ಝರಃ।
ಶ್ಯಾಮೇನಾತ್ತ ಸರೋರುಹೇಣ ಸಹಿತಂ ದೇವೀದ್ವಯಂ ಚಾಂತಿಕೇ
ಗೌರಾಂಗೋ ವರದಾನಹಸ್ತಸಹಿತೋ ಲಕ್ಷ್ಮೀ
ಗಣೇಶೋವತಾತ್॥
ಗೌರವರ್ಣಃ॥೧೨॥'

(ಎಡ-ಬಲ ತೊಡೆಗಳ ಮೇಲೆ ದೇವಿಯರಿಬ್ಬರನ್ನು ಕೂಡಿಸಿಕೊಂಡಿರುವ ರೂಪ. ಎಂಟು ಕೈಗಳು; ಕೈಗಳಲ್ಲಿ ಕ್ರಮವಾಗಿ ದಾಳಿಂಬೆ ಹಣ್ಣು (ಬೀಜಪೂರಕ), ರತ್ನಕುಂಭ, ಗಿಣಿ (ಶುಕ), ಅಂಕುಶ, ಪಾಶ, ಕಲ್ಪಲತೆ, ಕತ್ತಿ (ಖಡ್ಗ) ಮತ್ತು ವರದಾನಮುದ್ರೆ. ದೇವಿಯರ ಕೈಗಳಲ್ಲಿ ನೀಲಕಮಲ(ಶ್ಯಾಮಸರೋರುಹ). ಧ್ಯಾನಶ್ಲೋಕದಲ್ಲಿ ಇವೆಲ್ಲ ವಿವರಗಳೂ ಇವೆ. ಆದರೆ ಅಲ್ಲಿ ಗಣಪತಿಯ ಮೈಬಣ್ಣ ಬಿಳಿ (ಗೌರ) ಎಂದಿದ್ದರೆ, ಚಿತ್ರಕಾರರು 'ಕನಕವರ್ಣಾ' ಎಂದು ಸೂಚಿಸಿ'ಅಂಮನವರು ಗೌರವವರ್ಣಾ' ಎಂದು ಕಾಣಿಸಿದ್ದಾರೆ. ಇಬ್ಬರು ದೈವಿಯರನ್ನು 'ಸಿದ್ಧಿ' ಮತ್ತು 'ಬುದ್ಧಿ' ಎಂದು ನಿರ್ದೇಶಿಸುವುದು ವಾಡಿಕೆ.)








೧೩. ಮಹಾ ಗಣಪತಿ

'ಹಸ್ತೇಂದ್ರಾನನಮಿಂದುಚೂಡಮರುಣಚ್ಛಾಯಂ ತ್ರಿಣೇತ್ರಂ ರಸಾ-
ದಾಶ್ಲಿಷ್ಟಂ ಪ್ರಿಯಯಾ ಸಪದ್ಮಕರಯಾ ಸ್ವಾಂಕಸ್ಥಯಾ
ಸಂತತಂ॥ (I)
ಬೀಜಾಪೂರಗದೇಕ್ಷು ಕಾರ್ಮುಕಲಸಚ್ಚಕ್ರಾಬ್ಜಪಾಶೋತ್ಪಲ-
ವ್ರೀಹ್ಯಗ್ರ ಸ್ವವಿಷಾಣ ರತ್ನಕಲಶಾನ್ ಹಸ್ತೈರ್ವಹಂತಂ ಭಜೇ॥
ರಕ್ತವರ್ಣಂ॥೧೩॥'

(ದೇವಿಯೊಬ್ಬಳನ್ನು ಎಡತೊಡೆಯ ಮೇಲೆ ಕುಳ್ಳಿರಿಸಿಕೊಂಡಿರುವ ರೂಪ. ಹತ್ತು ಕೈಗಳು; ಕೈಗಳಲ್ಲಿ ಕ್ರಮವಾಗಿ ಗದೆ, ದಾಡೆ (ಸ್ವದಂತ), ರತ್ನಕಲಶ, ಬತ್ತದ ತೆನೆ (ವೀಹ್ಯಗ್ರ), ಚಕ್ರ, ಶಂಖ, ಕಬ್ಬಿನ ಜಲ್ಲೆ (ಇಕ್ಷುದಂಡ), ಕನ್ನೈದಿಲೆ ಹೂ (ಉತ್ಪಲ), ಮತ್ತು ಲಡ್ಡು (ವರದಾನ ಮುದ್ರೆಯಲ್ಲಿ). ಧ್ಯಾನಶ್ಲೋಕದಲ್ಲಿ ಉಳಿದೆಲ್ಲ ಆಯುಧಗಳೂ ಸಮನಾಗಿದ್ದು, ಲಡ್ಡುವಿಗೆ ಬದಲು ದಾಳಿಂಬೆ ಹಣ್ಣು (ಬೀಜಪೂರ) ಎಂದು ಒಕ್ಕಣೆಯಿದೆ. ದೇವಿಯ ಕೈಯಲ್ಲಿ ಕಮಲ. ಧ್ಯಾನಶ್ಲೋಕದ ಪ್ರಕಾರ, ತಲೆಯ ಮೇಲೆ ಚಂದ್ರ (ಇಂದುಚೂಡ), ಮತ್ತು ಮೂರು ಕಣ್ಣುಗಳು(ತ್ರಿಣೇತ್ರ) ಇರಬೇಕು. ಚಿತ್ರದಲ್ಲಿ ಈ ವಿವರಗಳು ಕಾಣುವುದಿಲ್ಲ. ಗಣಪತಿಯ ಮೈಬಣ್ಣ ನಸುಗೆಂಪು (ಅರುಣಚ್ಛಾಯ) ಎಂದು ಧ್ಯಾನಶ್ಲೋಕದಲ್ಲಿದೆ; ಚಿತ್ರಗಾರರು 'ಶಿಂಧೂರವರ್ಣಾ' ಎಂದು ಬರೆದುಕೊಂಡಿದ್ದಾರೆ. 'ಅಂಮನವರು ಕನಕವರ್ಣಾ' ಎಂದು ಚಿತ್ರಗಾರರು ಬರೆದುಕೊಂಡಿರುವ ವಿವರ ಧ್ಯಾನಶ್ಲೋಕದಲ್ಲಿಲ್ಲ.)








೧೪. ವಿಜಯ ಗಣಪತಿ

'ಪಾಶಾಂಕುಶ ಸ್ವದಂತಾಮ್ರಫಲವಾನಾಕು(ಖು)ವಾಹನಃ।
ವಿಘ್ನಂ ನಿಹಂತು ನ(ಃ) ಸರ್ವಂ ರಕ್ತವರ್ಣೋ ವಿನಾಯಕಃ॥
ರಕ್ತವರ್ಣಃ॥೧೪॥'

(ಇಲಿಯ ಮೇಲೇರಿ ಹೋಗುತ್ತಿರುವ (ಆಖುವಾಹನ) ರೂಪ. ನಾಲ್ಕು ಕೈಗಳು; ಕೈಗಳಲ್ಲಿ ಕ್ರಮವಾಗಿ ತನ್ನ ದಾಡೆ (ದಂತ), ಅಂಕುಶ, ಪಾಶ ಮತ್ತು ಮಾವಿನ ಹಣ್ಣು (ಆಮ್ರಫಲ). ಧ್ಯಾನಶ್ಲೋಕದ ಪ್ರಕಾರ ಮೈಬಣ್ಣ ಕೆಂಪು (ರಕ್ತವರ್ಣ); ಚಿತ್ರದಲ್ಲಿ 'ಶಿಂಧೂರವರ್ಣಾ' ಎಂದು ಕಾಣಿಸಿದೆ.)









೧೫. ನೃತ್ಯ ಗಣಪತಿ

'ಪಾಶಾಂಕುಶಾಪೂಪ ಕುಠಾರದಂತ -
ಶ್ಚಂಚತ್ಕರಾಕ್ಲಪ್ತ ವರಾಂಗುಳೀ(ಯ)ಕಂ।
ಪೀತಪ್ರಭಂ ಕಲ್ಪತರೋರಧಸ್ಥಂ
ಭಜಾಮಿ ನೃತ್ತೋಪಪದಂ ಗಣೇಶಂ॥
ರಕ್ತವರ್ಣಃ॥೧೫॥'

(ಕುಣಿತದಲ್ಲಿ ತೊಡಗಿರುವ ರೂಪ. ನಾಲ್ಕು ಕೈಗಳು; ಕೈಗಳಲ್ಲಿ ಕ್ರಮವಾಗಿ ದಾಡೆ (ದಂತ), ಅಂಕುಶ, ಪಾಶ ಮತ್ತು ಸಣ್ಣ ಕೊಡಲಿ (ಕುಠಾರ). ಧ್ಯಾನಶ್ಲೋಕದಲ್ಲಿ ಅಪೂಪ ಎಂಬುದನ್ನು ಒಂದು ಕೈಯಲ್ಲಿ ಕಾಣಿಸಬೇಕೆಂದೂ, ಕಲ್ಪವೃಕ್ಷದ ಅಡಿಯಲ್ಲಿ ಕುಣಿಯುತ್ತಿರಬೇಕೆಂದೂ (ಕಲ್ಪತರೋರಧಸ್ಥಂ) ವಿವರಗಳಿವೆ. ಇವು ಚಿತ್ರದಲ್ಲಿ ಇಲ್ಲ. ಮೈಬಣ್ಣ ಹಳದಿ (ಪೀತ) ಎಂದು ಧ್ಯಾನಶ್ಲೋಕ; ಚಿತ್ರದ ಪ್ರಕಾರ 'ಕನಕವರ್ಣ'.)








೧೬. ಊರ್ಧ್ವ ಗಣಪತಿ

'ಕಲ್ಹಾ(ಹ್ಲಾ)ರಶಾಲಿಕಮಲೇಕ್ಷುಕ ಚಾಪಬಾಣ
ದಂತ ಪ್ರರೋಹ ಗದಭೃತ್ಕ ನಕೋಜ್ವಲಾಂಗಃ
ಆಲಿಂಗನೋದ್ಯತಕರೋ ಹರಿತಾಂಗಯಷ್ಟ್ಯಾ
ದೇವ್ಯಾ ಕರೋತು ಶುಭಮೂರ್ಧ್ವಗಣಾಧಿಪೋ ಮೇ॥
ಕನಕವರ್ಣಃ॥೧೬॥'

(ದೇವಿಯೊಬ್ಬಳನ್ನು ಎಡತೊಡೆಯಮೇಲೆ ಕೂಡಿಸಿಕೊಂಡು ಒಂದು ಕೈಯಿಂದ ಆಕೆಯ ನಡುವನ್ನು ಆಲಿಂಗಿಸಿಕೊಂಡು ಸುಖಾಸೀನನಾಗಿ ಕುಳಿತಿರುವ ರೂಪ. ಎಂಟು ಕೈಗಳು; ಕ್ರಮವಾಗಿ ದಾಡೆ (ದಂತ), ಕಮಲ, ಕಲ್ಹಾರ, ಹೂಗೊಂಚಲು (ಧ್ಯಾನಶ್ಲೋಕದಲ್ಲಿ ಶಾಲಿ ಅಥವಾ ಬತ್ತದ ತೆನೆ ಎಂದಿದೆ), ಕಬ್ಬಿನ ಜಲ್ಲೆ (ಇಕ್ಷುಚಾಪ), ಗದೆ, ಹೂಗಳ ಬಾಣ (ಧ್ಯಾನಶ್ಲೋಕದಲ್ಲಿ ಬರಿಯ ಬಾಣ); ಉಳಿದ ಕೈ ಮೇಲೆ ಹೇಳಿದಂತೆ ದೇವಿಯನ್ನು ಆಲಿಂಗಿಸಿದೆ. ಸೊಂಡಿಲು ದೇವಿಯ ಸ್ತನವೊಂದನ್ನು ಅಪ್ಪಿಕೊಂಡಿದೆ. ಗಣಪತಿಯ ಮೈಬಣ್ಣ ಬಂಗಾರದ ಬಣ್ಣವೆಂದು ಧ್ಯಾನಶ್ಲೋಕದಲ್ಲೂ ('ಕನಕೋಜ್ವಲಾಂಗಂ') ಚಿತ್ರದಲ್ಲೂ ಇದೆ; ಹಾಗೆಯೇ ದೇವಿಯದು ಹಸಿರು ಬಣ್ಣವೆಂದು ಚಿತ್ರದಲ್ಲೂ 'ಹರಿತಾಂಗಯಷ್ಟಿ'ಯೆಂದು ಧ್ಯಾನಶ್ಲೋಕದಲ್ಲೂ ಹೇಳಿದೆ.)








೧೭. ಏಕಾಕ್ಷರ ಗಣಪತಿ

'ರಕ್ತೋ ರಕ್ತಾಂಗ ರಾಗಾಂಶುಕ ಕುಸುಮಯುತಸ್ತುಂದಿಲಶ್ಚಂದ್ರಮೌಳಿ
ರ್ನೇತ್ರೈರ್ಯುಕ್ತಸ್ತ್ರಿಭಿರ್ವಾಮನಕರಚರಣೋ ಬೀಜಪೂರಂ
ದಧಾನಃ
ಹಸ್ತಾಗ್ರಾಕ್ಷಪ್ತ ಪಾಶಾಂಕುಶರದಲರದೋ ನಾಗವಕ್ತ್ರೋಹಿಭೂಷೋ
ದೇವಃ ಪದ್ಮಾಸನಸ್ಥೋ ಭವತು ಸುಖಕರೋ ಭೂತಯೇ
ವಿಘ್ನರಾಜಃ॥
ರಕ್ತವರ್ಣಃ॥೧೭॥'

(ಏಕಾಕ್ಷರವೆಂದರೆ ಪ್ರಣವ, ಓಂಕಾರ; ಅಥವಾ ಗಣಪತಿಯ ಬೀಜಾಕ್ಷರವಾದ 'ಗಂ'. ಬೊಜ್ಜು ಹೊಟ್ಟೆ (ತುಂದಿಲ); ಗಿಡ್ಡ ಮೈ (ವಾಮನ); ಪದ್ಮಾಸನದಲ್ಲಿ ಕುಳಿತ ರೂಪ. ನಾಲ್ಕು ಕೈಗಳು; ಕ್ರಮವಾಗಿ ಕೈಗಳಲ್ಲಿ ದಾಡೆ (ದಂತ), ಅಂಕುಶ, ಪಾಶ, ಕಡಬು (ಮೋದಕ); ಸೊಂಡಿಲಲ್ಲಿ ದಾಳಿಂಬೆ ಹಣ್ಣು (ಬೀಜಪೂರ). ಧ್ಯಾನಶ್ಲೋಕದಲ್ಲಿ ಕಡುಬಿಗೆ ಬದಲು ವರದಹಸ್ತವೆಂದು ಕಾಣಿಸಿದ್ದಾರೆ. ಆದರೆ 'ಹೂವನ್ನು ಹೊಂದಿದ್ದಾನೆ' ('ಕುಸುಮಯುತಃ') ಎಂದೂ, ಚಂದ್ರನನ್ನು ತಲೆಯ ಮೇಲೆ ಧರಿಸಿದ್ದಾನೆ ('ಚಂದ್ರಮೌಳಿ') ಎಂದೂ, ಹಾವಿನ ಆಭರಣವೆಂದೂ ('ಅಹಿಭೂಷಾ') ಅಲ್ಲಿ ಇರುವ ಒಕ್ಕಣೆ ಚಿತ್ರದಲ್ಲಿ ಕಾಣಿಸಿಗುವುದಿಲ್ಲ. ಧ್ಯಾನಶ್ಲೋಕದಂತೆ ಮೈಬಣ್ಣ ಕೆಂಪು (ರಕ್ತ, ಚಿತ್ರದಲ್ಲಿ ಶಿಂಧೂರ). ಅಂಗರಾಗ ಮತ್ತು ಬಟ್ಟೆಯೂ ಕೆಂಪು.)







೧೮. ವರ ಗಣಪತಿ

'ಸಿಂಧೂರಾಭಮಿಭಾನನಂ ತ್ರಿಣಯನಂ ಹಸ್ತೇ ಚ ಪಾಶಾಂಕುಶೌ
ಬಿಭ್ರಾಣಂ ಮಧುಮತ್ಕಪಾಲಮನಿಶಂ ಸಾಧ್ವಿಂದುಮೌಳಿಂ ಭಜೇ।
ಪುಷ್ಪ್ಯಾಶ್ಲಿಷ್ಟತನುಂ ಧ್ವಜಾಗ್ರಕರಯಾ ಪದ್ಮೋಲ್ಲಸದ್ಧಸ್ತಯಾ।
ತದ್ಯೋನ್ಯಾಹಿತ ಪಾಣಿಮಾತ್ತವಸುಮತ್ಪಾತ್ರೋಲ್ಲಸತ್ಪು
ಷ್ಕರಂ॥
ರಕ್ತವರ್ಣಃ॥೧೮॥'

[ಎಡತೊಡೆಯ ಮೇಲೆ ಪುಷ್ಪಿಯೆಂಬ ಹೆಸರಿನ ದೇವಿಯನ್ನು ಕೂಡಿಸಿಕೊಂಡು ಒಂದು ಕೈಯಿಂದ ಆಕೆಯ ನಡುವನ್ನು ಅಪ್ಪಿ ಆಕೆಯ ಗುಹ್ಯಾಂಗದಲ್ಲಿ ಕೈಬೆರಳುಗಳನ್ನಿರಿಸಿಕೊಂಡು ಮಹಾರಾಜಲೀಲೆಯಲ್ಲಿ ಕುಳಿತಿರುವ ರೂಪ. ನಾಲ್ಕು ಕೈಗಳು; ಮೂರು ಕೈಗಳಲ್ಲಿ ಕ್ರಮವಾಗಿ ತಲೆಯೋಡೆ(ಕಪಾಲ, ಹೆಂಡದಿಂದ ತುಂಬಿರುವುದೆಂದು ಧ್ಯಾನಶ್ಲೋಕದ ವಿವರ, 'ಮಧುಮತ್ ಕಪಾಲ'), ಅಂಕುಶ, ಪಾಶ; ದೇವಿಯ ಕೈಯಲ್ಲಿ ಕೆಂದಾವರೆ (ಪದ್ಮ)ಹೂ; ಧ್ವಜವನ್ನೂ ಇರಿಸಿಕೊಂಡಿದ್ದಾಳೆ. ಗಣಪತಿಯ ಸೊಂಡಿಲಲ್ಲಿ ರತ್ನಗಳು ತುಂಬಿದ ಕೊಡ ('ವಸುಮತ್ ಪಾತ್ರ'). ಧ್ಯಾನಶ್ಲೋಕದಲ್ಲಿ ಈ ವಿವರಗಳೊಂದಿಗೆ ಮೂರು ಕಣ್ಣುಗಳೆಂದೂ ('ತ್ರಿನಯನ'), ಚಂದ್ರನನ್ನು ತಲೆಯ ಮೇಲೆ ಧರಿಸಿದ್ದಾನೆಂದು ('ಇಂದುಮೌಳಿ') ಇದೆ; ಇವು ಚಿತ್ರದಲ್ಲಿ ಕಾಣಿಸಿಗುವುದಿಲ್ಲ, ಗಣಪತಿಯ ಮೈಬಣ್ಣಕೆಂಪು (ಸಿಂಧೂರ)]






೧೯. ತ್ರ್ಯಕ್ಷರ ಗಣಪತಿ

'ಗಜೇಂದ್ರವದನಂ ಸಾಕ್ಷಾಚ್ಚಲತ್ಕರ್ಣಂ ಸಚಾಮರಂ।
ಹೇಮವರ್ಣಂ ಚತುರ್ಬಾಹುಂ ಪಾಶಾಂಕುಶಧರಂ ವರಂ।
ಸ್ವದಂತಂ ದಕ್ಷಿಣೇ ಹಸ್ತೇ ಸವ್ಯೇತ್ವಾಮ್ರಫಲಂ ತಥಾ
ಪುಷ್ಕರೇ ಮೋದಕಂ ಚೈವ ಧಾರಯಂತಮನುಸ್ಮರೇತ್॥
ಸ್ವರ್ಣವರ್ಣಃ॥೧೯॥'

(ಮೂರು ಅಕ್ಷರಗಳ, ಎಂದರೆ ಓಂಕಾರದಲ್ಲಿ ಅಡಕವಾಗಿರುವ ಅ, ಉ ಮತ್ತು ಮ ಎಂಬ ವರ್ಣಗಳ, ರೂಪ, ನಾಲ್ಕು ಕೈಗಳು; ಕೈಗಳಲ್ಲಿ ಕ್ರಮವಾಗಿ ದಾಡೆ (ಸ್ವದಂತ), ಅಂಕುಶ, ಪಾಶ ಮತ್ತು ಮಾವಿನ ಹಣ್ಣು (ಆಮ್ರ ಫಲ). ಮಾವಿನ ಹಣ್ಣು ಹಿಡಿದಿರುವ ಕೈ ವರದಾನ ಮುದ್ರೆಯಲ್ಲೂ ಇದೆ; ಸೊಂಡಿಲಲ್ಲಿ ಲಡ್ಡು (ಮೋದಕ ಎಂದು ಧ್ಯಾನಶ್ಲೋಕ). ಚಿತ್ರವು ಧ್ಯಾನಶ್ಲೋಕಕ್ಕೆ ಸರಿಯಾಗಿದೆ). ಆದರೆ ನಂಜನಗೂಡಿನ ಶಿಲ್ಪದಲ್ಲಿ ಆರು ಕೈಗಳಿವೆ. ಶಿಲ್ಪದ ಕೆಳಗೆ ಬಿತ್ರಕ್ಷರಗಣಪತಿಃ ಎಂಬ ಬರಹವಿದೆ.







೨೦. ಕ್ಷಿಪ್ರಪ್ರಸಾದ ಗಣಪತಿ

'ಧೃತಪಾಶಾಂಕುಶ ಕಲ್ಪಲತಾ ಸ್ವರದಶ್ಚ ಬೀಜಪೂರಯುತಃ।
ಶಶಿಶಕಲಕಲಿತಮೌಳಿ ಸ್ತ್ರಿಲೋಚನೋ(s)ರುಣಶ್ಚ ಗಜವದನಃ॥
ಭಾಸುರಭೂಷಣದೀಪ್ತೋ ಬೃಹದುದರಃ ಪದ್ಮವಿಷ್ಟರೋಲ್ಲಸಿತಃ।
ವಿಘ್ನಪಯೋಧರ ಪವನಃ ಕರಧೃತ ಕಮಲಸ್ಸದಾಸ್ತು ಮೇ ಭೂತ್ಯೈ॥
ರಕ್ತವರ್ಣಃ॥೨೦॥'

(ಪೂಜಿಸಿದರೆ ಒಡನೆಯೆ ಪ್ರಸನ್ನವಾಗುವ ರೂಪ. ಆರು ಕೈಗಳಲ್ಲಿ ಕ್ರಮವಾಗಿ ದಾಡೆ (ದಂತ), ಕಲ್ಪಲತೆ, ಅಂಕುಶ, ಪಾಶ, ಕೆಂದಾವರೆ (ಕಮಲ ಹೂ) ಮತ್ತು ದಾಳಿಂಬೆ ಹಣ್ಣು (ಬೀಜಪೂರ). ಧ್ಯಾನಶ್ಲೋಕದಲ್ಲಿ ಈ ವಿವರಗಳೊಂದಿಗೆ ತಲೆಯ ಮೇಲೆ ಚಂದ್ರಖಂಡ ('ಶಶಿ ಶಕಲ ಕಲಿತ ಮೌಳಿ'). ಮೂರು ಕಣ್ಣುಗಳು (ತ್ರಿಲೋಚನ), ದೊಡ್ಡ ಹೊಟ್ಟೆ (ಬೃಹದುದರ). ತಾವರೆ ಹೂಗ ಮೇಲೆ ಕುಳಿತವನು (ಪದ್ಮವಿಷ್ಟರೋಲ್ಲಸಿತ) ಎಂದೂ ಇದೆ. ಆದರೆ ಚಿತ್ರಕಾರರು ಇದನ್ನು ಗಮನಿಸಿಲ್ಲ. ಮೈಬಣ್ಣ ನಸುಗೆಂಪು (ಅರುಣ) ಎಂದು ಧ್ಯಾನಶ್ಲೋಕ; 'ಶಿಂಧೂರ' ಎಂದು ಚಿತ್ರದಲ್ಲಿ ಒಕ್ಕಣೆ.)








೨೧. ಹರಿದ್ರಾ ಗಣಪತಿ

'ಹರಿದ್ರಾಭಂ ಚತುರ್ಬಾಹುಂ ಹರಿದ್ರವದನಂ ಪ್ರಭುಂ।
ಪಾಶಾಂಕುಶ ಧರಂ ದೇವಂ ಮೋದಕಂ ದಂತಮೇವ ಚ।
ಭಕ್ತಾಭಯಪ್ರದಾತಾರಂ ವಂದೇ ವಿಘ್ನವಿನಾಯಕಂ॥
ಹರಿದ್ರಾವರ್ಣಃ॥೨೧॥'

(ಅರಿಶಿನ ಬಣ್ಣದ ಮೈಯಿಂದು ಹರಿದ್ರಾ ಗಣಪತಿ. ಅರಿಶಿನದ ಕೊಂಬಿನಲ್ಲಿ ಗಣಪತಿಯನ್ನು ಆವಾಹಿಸಿ ಪೂಜೆ ಮಾಡುವ ವಾಡಿಕೆಯಿದೆ; ಗಣಪತಿಯ ಕಳೆಯನ್ನು ತಳೆದ ಅರಿಶಿನದ ಕೊಂಬೇ ದಿಟವಾಗಿ 'ಹರಿದ್ರಾ ಗಣಪತಿ'. ಆದರೆ ಇಲ್ಲಿ ಇದೊಂದು ಮೂರ್ತಿಯನ್ನೆ ಕಲ್ಪಿಸಿಕೊಂಡಿದ್ದಾರೆ. ನಾಲ್ಕು ಕೈಗಳು; ಕೈಗಳಲ್ಲಿ ಕ್ರಮವಾಗಿ ದಾಡೆ (ದಂತ), ಅಂಕುಶ, ಪಾಶ ಮತ್ತು ಮೋದಕ. ದಾಡೆಯನ್ನು ಹಿಡಿದ ಬಲಗೈ ಅಭಯಮುದ್ರೆಯಲ್ಲಿದೆ. ಮೋದಕವನ್ನು ಹಿಡಿದ ಎಡಗೈ ವರದಮುದ್ರೆಯಲ್ಲಿ. ಧ್ಯಾನಶ್ಲೋಕದ ವಿವರಗಳೇ ಚಿತ್ರದಲ್ಲಿ.)









೨೨. ಏಕದಂತ ಗಣಪತಿ

'ಲಂಬೋದರಂ ಶ್ಯಾತನುಂ ಗಣೇಶಂ
ಕುಠಾರಮಕ್ಷಸ್ರಜಮೂರ್ಧ್ವಗಾತ್ರಂ।
ಸಲಡ್ಡುಕಂ ದಂತಮಧಃ ಕರಾಭ್ಯಾಂ ಚ
(ವಾಮೇತರಾಭ್ಯಾಂ ಚ) ದಧಾನಮೀಡೇ॥'
ಶ್ಯಾವವರ್ಣಃ॥೨೨॥'

(ಗಣಪತಿಯ ಎಲ್ಲಾರೂಪಗಳಲ್ಲೂ ಸಾಮಾನ್ಯವಾಗಿ ಒಂದೇ ದಾಡೆಯಾದರೂ 'ಏಕದಂತ'ವೆಂಬುದೆ ಒಂದು ರೂಪಭೇದ; ಏಕದಂತವಾದ ಸಂದರ್ಭದ ಸೂಚನೆಯಿದ್ದೀತು. ನಾಲ್ಕು ಕೈಗಳು; ಕೈಗಳಲ್ಲಿ ಕ್ರಮವಾಗಿ ದಾಡೆ (ದಂತ), ಅಕ್ಷಮಾಲೆ, ಸಣ್ಣ ಕೊಡಲಿ (ಕುಠಾರ), ಲಡ್ಡು, ಧ್ಯಾನಶ್ಲೋಕದಲ್ಲಿ ಇದೇ ವಿವರಗಳಿದ್ದು, ಈ ರೂಪವು 'ಶ್ಯಾಮತನು' ಎಂದಿದೆ; ಚಿತ್ರಗಾರರು ಇದನ್ನು 'ಹಸಿರುವರ್ಣ' ಎಂದು ಗ್ರಹಿಸಿದ್ದಾರೆ.)








೨೩. ಸೃಷ್ಟಿ ಗಣಪತಿ



'ಪಾಶಾಂಕುಶ ಸ್ವದಂತಾಮ್ರಫಲವಾನಾಖುವಾಹನಂ।
ವಿಘ್ನಂ ನಿಹಂತು ನಶ್ಶೋಣಃ ಸೃಷ್ಟಿದಕ್ಷೋ ವಿನಾಯಕಃ॥
ರಕ್ತವರ್ಣಃ॥೨೩॥'

(ಇಲಿಯನ್ನೇರಿ ಸಾಗುತ್ತಿರುವ ರೂಪ. ನಾಲ್ಕು ಕೈಗಳು; ಕೈಗಳಲ್ಲಿ ಕ್ರಮವಾಗಿ ದಾಡೆ (ದಂತ), ಅಂಕುಶ, ಪಾಶ, ಮಾವಿನ ಹಣ್ಣು (ಆಮ್ರಫಲ). ಧ್ಯಾನಶ್ಲೋಕದಲ್ಲಿ ಇದೇ ವಿವರಗಳಿದ್ದು ಈ ರೂಪವು ಗಣಪತಿಯೂ 'ಸೃಷ್ಟಿದಕ್ಷ'ನೆಂಬುದನ್ನು ಹೇಳುವುದೆನ್ನುತ್ತದೆ. ಮೈಬಣ್ಣ ಕೆಂಪು(ಶೋಣ, ಚಿತ್ರದಲ್ಲಿ ಸಿಂಧೂರ).





೨೪. ಉದ್ದಂಡ ಗಣಪತಿ

'ಕಲ್ಪಾ(ಹ್ಲಾ)ರಾಂಬುಜ ಬೀಜಪೂರಕ ಗದಾ ದಂತೇಕ್ಷುಚಾಪಂ ಸುಮಂ।
ಬಿಭ್ರಾಣೋಮಣಿಕುಂಭಶಾಲಿಕಲಶೌ ಪಾಶಂ ಸೃಣಿಂ ಚಾಬ್ಜಕಂ।
ಗೌರಾಂಗ್ಯಾ ರುಚಿರಾರವಿಂದ ಕರಯಾ ದೇವ್ಯಾ ಸಮಾಲಿಂಗತ॥
ಶೋಣಾಂಗಶ್ಶುಭಮಾತನೋತು ಭಜತಾಮುದ್ದಂಡ
ವಿಘ್ನೇಶ್ವರಃ॥
ರಕ್ತವರ್ಣಃ॥೨೪॥'

(ದೇವಿಯನ್ನು ಎಡತೊಡೆಯಮೇಲೆ ಕೂಡಿಸಿಕೊಂಡು ಪದ್ಮಾಸನದಲ್ಲಿ ಕುಳಿತಿರುವ ರೂಪ. ಹನ್ನೆರಡು ಕೈಗಳು; ಕೈಗಳಲ್ಲಿ ಕ್ರಮವಾಗಿ ಗದೆ, ದಾಡೆ (ದಂತ), ಕಲಶ, ತಾವರೆ ಹೂ(ಅಂಬುಜ), ಕಲ್ಹಾರ ಹೂ, ಶಂಖ, ಅಂಕುಶ, ಬತ್ತದ ತೆನೆ (ಶಾಲಿ), ಪಾಶ, ಚಕ್ರ, ದಾಳಿಂಬೆ ಹಣ್ಣು (ಬೀಜಪೂರ), ಕಬ್ಬಿನ ಜಲ್ಲೆ (ಇಕ್ಷುಚಾಪ). ಸೊಂಡಿಲಲ್ಲಿ ಮಣಿಕುಂಭ. ಧ್ಯಾನಶ್ಲೋಕದಲ್ಲಿ ಈ ವಿವರಗಳೊಂದಿಗೆ 'ಸುಮ' (ಎಂದರೆ ಹೂವು) ಎಂಬುದನ್ನು ಒಂದು ಕೈಯಲ್ಲಿ ಕಾಣಿಸಬೇಕೆಂದಿದೆ; 'ಅಂಬುಜ', 'ಅಬ್ಜಕ' (ತಾವರೆ ಹೂ) ಎಂದು ಬೇರಿ ಬೇರೆಯಾಗಿ ಕಾಣಿಸಿದೆ. ಬಹುಶಃ ಎರಡನೆಯ (ಎಂದರೆ 'ಅಬ್ಜಕ') ಉಲ್ಲೇಖ ಆಸನಕ್ಕೆ ಸಂಬಂಧಿಸಿದಂತೆ ಇರಬೇಕು. ದೇವಿಯು ಬಿಳಿ ಬಣ್ಣದವಳೆಂದೂ (ಗೌರಾಂಗಿ), ಕೈಯಲ್ಲಿ ತಾವರೆ ಹೂ (ಅರವಿಂದ) ಹಿಡಿದಿದ್ದಾಳೆಂದೂ ವಿವರಗಳಿವೆ. ಗಣಪತಿಯ ಮೈಬಣ್ಣ ಕೆಂಪೆಂದೂ ('ಶೋಣಾಂಗಃ') ಒಕ್ಕಣೆಯಿದೆ. ಆದರೆ ಚಿತ್ರದಲ್ಲಿ ಗಣಪತಿಯು 'ಕನಕವರ್ಣ'ವೆಂದೂ, 'ಅಂಮ್ಮನವರು ಹಸಿರುವರ್ಣ'ವೆಂದೂ ಬರಹವಿದೆ.)







೨೫. ಋಣ ವಿಮೋಚಕ (ಋಣಮೋಚನ) ಗಣಪತಿ

'ಪಾಶಾಂಕುಶೌ ದಂತಜಂಬೂ ದಧಾನ(ಃ) ಸ್ಫಟಿಕಪ್ರಭಃ।
ರಕ್ತಾಂಶುಕೋ ಗಣಪತಿರ್ಮುದೇ ಸ್ಯಾದೃಣಮೋಚಕಃ॥
ಶ್ವೇತವರ್ಣಃ॥೨೫॥'



(ಸಾಲಗಾರರ ಸಂಕಟವನ್ನು ತೀರಿಸುವ ರೂಪ. ನಾಲ್ಕು ಕೈಗಳು; ಕೈಗಳಲ್ಲಿ ಕ್ರಮವಾಗಿ ದಾಡೆ (ದಂತ), ಅಂಕುಶ, ಪಾಶ, ಜಂಬೂಫಲ. ಗಣಪತಿಯ ಮೈಬಣ್ಣ ಸ್ಫಟಿಕದಂತೆ ಬೆಳ್ಳಗೆ ಹೊಳೆಯುವುದು ('ಸ್ಫಾಟಿಕ ಪ್ರಭ'); ಚಿತ್ರಗಾರರು 'ಸ್ವೇತವರ್ಣ' ಎಂದು ಕಾಣಿಸಿದ್ದಾರೆ. ಧ್ಯಾನಶ್ಲೋಕದ ಪ್ರಕಾರ ಆವನು ಉಟ್ಟಿರುವ ಬಟ್ಟೆ ಕೆಂಪು ಬಣ್ಣದ್ದು.)







೨೬. ಧುಂಢಿ ಗಣಪತಿ

'ಅಕ್ಷಮಾಲಾಂ ಕುಠಾರಂ ಚ ರತ್ನಪಾತ್ರಂ ಸ್ವದಂತಕಂ।
ಧತ್ತೇಕರೈರ್ವಿಘ್ನರಾಜೋ ಧುಂಢಿನಾಮಾ ಮುದೇ(s)ಸ್ತು ನಃ॥
ರಕ್ತವರ್ಣಃ॥೨೬॥'

(ಚಿತ್ರದಲ್ಲಿ ಧುಂಡಿ ಗಣಪತಿ), ಕಾಶಿಯಲ್ಲಿರುವ ಪ್ರಸಿದ್ಧ ಗಣಪತಿಯ ರೂಪ; ಹೆಸರಿಗೆ ಕಾರಣ ತಿಳಿಯದು. ನಾಲ್ಕು ಕೈಗಳು; ಕೈಗಳಲ್ಲಿ ಕ್ರಮವಾಗಿ ತನ್ನ ದಾಡೆ (ಸ್ವದಂತ), ಅಕ್ಷಮಾಲೆ, ಸಣ್ಣ ಕೊಡಲಿ (ಕುಠಾರ), ಮತ್ತು ರತ್ನಪಾತ್ರೆ. ಧ್ಯಾನಶ್ಲೋಕದಲ್ಲಿ ಇಷ್ಟೇ ವಿವರಗಳು. ಚಿತ್ರದಲ್ಲಿ ಗಣಪತಿಯ ಮೈಬಣ್ಣ 'ಶಿಂಧೂರ'ವೆಂದು ಕಾಣಿಸಿದೆ.)







೨೭. ದ್ವಿಮುಖ ಗಣಪತಿ

ಸ್ವದಂತ ಪಾಶಾಂಕುಶರತ್ನಪಾತ್ರಂ
ಕರೈರ್ದಧಾನೋ ಹರಿನೀಲಗಾತ್ರಃ।
ರಕ್ತಾಂಶುಕೋ ರತ್ನಕಿರೀಟಮಾಲೀ
ಭೂತ್ಯೈ ಸದಾ ಭವತು ಮೇ ದ್ವಿಮುಖೋ ಗಣೇಶಃ॥
ಹರಿದ್ವರ್ಣಃ॥೨೭॥'

(ಎರಡು ತಲೆಗಳ ರೂಪ. ನಾಲ್ಕು ಕೈಗಳು; ಕೈಗಳಲ್ಲಿ ಕ್ರಮವಾಗಿ ತನ್ನ ದಾಡೆ (ಸ್ವದಂತ), ಅಂಕುಶ, ಪಾಶ ಮತ್ತು ಕಮಂಡಲು (ಧ್ಯಾನಶ್ಲೋಕದಲ್ಲಿ 'ರತ್ನಪಾತ್ರ'). ಮೈಬಣ್ಣ ಹಸಿರು ಎಂದು ಚಿತ್ರದಲ್ಲಿದೆ; ಧ್ಯಾನಶ್ಲೋಕ 'ಹರಿನೀಲಗಾತ್ರಃ' ಎನ್ನುತ್ತದೆ. ಧ್ಯಾನಶ್ಲೋಕದ ಪ್ರಕಾರ ಅವನು ಉಟ್ಟಿರುವ ಬಟ್ಟೆ ಕೆಂಪುಬಣ್ಣದ್ದು ('ರಕ್ತಾಂಶುಕ'); ಅವನ ತಲೆಯ ಮೇಲೆ ರತ್ನಕಿರೀಟ.)





೨೮. ತ್ರಿಮುಖ ಗಣಪತಿ

'ಶ್ರಿಮತ್ತೀಕ್ಷ್ಣಶಿಖಾಂಕುಶಾಕ್ಷವರದಾನ್ದಕ್ಷೇ ದಧಾನಃ ಕರೈಃ
ಪಾಶಂ ಚಾಮೃತಪೂರ್ಣಕುಂಭಮಭಯಂ ವಾಮೇ ದಧಾನೋ
ಮುದಾ।
ಪೀಠೇ ಸ್ವರ್ಣಮಯಾರವಿಂದವಿಲಸತ್ಕರ್ಣಿಕಾ ಭಾಸುರೇ
ಸ್ವಾಸೀನಸ್ತ್ರಿಮುಖಃ ಪಲಾಶರುಚಿರೋ ನಾಗಾನನಃ ಪಾತು ನಃ॥
ರಕ್ತವರ್ಣಃ॥೨೮॥'

(ಮೂರು ತಲೆಗಳ ರೂಪ. ಆರು ಕೈಗಳು; ಕೈಗಳಲ್ಲಿ ಕ್ರಮವಾಗಿ ವರದಮುದ್ರೆ, ಅಂಕುಶ, ಅಕ್ಷಮಾಲೆ, ಪಾಶ, ಅಮೃತಪೂರ್ಣಕುಂಭ ಮತ್ತು ಅಭಯಮುದ್ರೆ. ಬಂಗಾರದ ಕಮಲದ ಮೇಲೆ ('ಸ್ವರ್ಣಮಯಾರವಿಂದ') ಕುಳಿತಿದ್ದಾನೆ. ಮೈಬಣ್ಣ ಮುತ್ತುಗದ ಹೂವಿನಂತೆ ('ಪಲಾಶರುಚಿರ') ಎಂದು ಧ್ಯಾನಶ್ಲೋಕ; ಚಿತ್ರದಲ್ಲಿ 'ಶಿಂಧೂರವರ್ಣ'.)





೨೯. ಸಿಂಹ ಗಣಪತಿ



'ವೀಣಾಂ ಕಲ್ಪಲತಾಮರಿಂ ಚ ವರದಂ ಧತ್ತೇ ವಿಧತ್ತೇ ಕರೈ
ರ್ವಾಮೇ ತಾಮರಸಂ ಚ ರತ್ನಕಲಶಂ ಸನ್ಮಂಜರೀಂ ಚಾಭಯಂ।
ಶುಂಡಾದಂಡಲಸನ್ಮೃಗೇಂದ್ರವದನಶ್ಶಂಖೇಂದುಗೌರಶ್ಶುಭೋ
ದೀವ್ಯದ್ರತ್ನನಿಭಾಂಶುಕೋ/ ಗಣಪತಿಃ ಪಾಯಾದಪಾಯಾತ್ಸ ನಃ॥
ಶ್ವೇತವರ್ಣಃ॥೨೯॥'

(ಸಿಂಹದ ಮುಖ, ಆನೆಯ ಸೊಂಡಿಲು ಕೂಡಿರುವ ರೂಪ. ಎಂಟು ಕೈಗಳು; ಕೈಗಳಲ್ಲಿ ಕ್ರಮವಾಗಿ ವರದಮುದ್ರೆ, ಚಕ್ರ (ಅರಿ), ಕಲ್ಪಲತೆ, ವೀಣೆ, ತಾವರೆ ಹೂ (ತಾಮರಸ), ಹೂಗೊಂಚಲು (ಸನ್ಮಂಜರಿ), ರತ್ನಕಲಶ ಮತ್ತು ಅಭಯಮುದ್ರೆಯೊಂದಿಗೆ ದಾಳಿಂಬೆ ಹಣ್ಣು, ಧ್ಯಾನಶ್ಲೋಕದಲ್ಲೂ ಇದೇ ವಿವರಗಳಿವೆ. ಧ್ಯಾನಶ್ಲೋಕದ ಪ್ರಕಾರ ಶಂಖದಂತೆ ಬೆಳ್ಳಗಿರುವ ಮೈಬಣ್ಣ; ಚಿತ್ರದಲ್ಲಿ 'ಸ್ವೇತವರ್ಣಾ'.)







೩೦. ಯೋಗ ಗಣಪತಿ

'ಯೋಗಾರೂಢೋ ಯೋಗಪಟ್ಟಾಭಿರಾಮೋ
ಬಾಲಾರ್ಕಾಭಶ್ಚಂದ್ರನೀಲಾಂಶುಕಾಢ್ಯಃ।
ಪಾಶೇಕ್ಷ್ವಕ್ಷಾನ್ಯೋಗದಂಡಂ ದಧಾನೋ
ಪಾಯಾನ್ನಿತ್ಯಂ ಯೋಗವಿಘ್ನೇಶ್ವರೋ ನಃ॥

(ಯೋಗ ಪಟ್ಟದಲ್ಲಿ ಯೋಗಾರೂಢನಾಗಿ ಕುಳಿತ ರೂಪ, ನಾಲ್ಕು ಕೈಗಳು; ಕೈಗಳಲ್ಲಿ ಕ್ರಮವಾಗಿ ಅಕ್ಷಮಾಲೆ, ಕಬ್ಬಿನ ಜಲ್ಲೆ (ಇಕ್ಷು), ಪಾಶ ಮತ್ತು ಯೋಗದಂಡ, ಧ್ಯಾನಶ್ಲೋಕದಲ್ಲಿ ಇದೇ ವಿವರಗಳು, ಚಿತ್ರದಲ್ಲಿ 'ಶಿಂಧೂರವರ್ಣ'ವೆಂಬ ಒಕ್ಕಣೆಯಿದ್ದರೆ ಧ್ಯಾನಶ್ಲೋಕದಲ್ಲಿ 'ಎಳೆಸೂರ್ಯನ ಬೆಳಕಿನಂತೆ ಹೊಳೆಯುವವ' ('ಬಾಲಾರ್ಕಾಭ') ಎಂಬ ವರ್ಣನೆಯಿದೆ.)








೩೧. ದುರ್ಗಾ ಗಣಪತಿ



'ತಪ್ತಕಾಂಚನಸಂಕಾಶಶ್ಚಾಷ್ಟಹಸ್ತೋ ಮಹತ್ತನುಃ
ದೀಪ್ತಾಂಕುಶಂ ಶರ ಚಾಕ್ಷಂ ದಂತಂ ದಕ್ಷೇ ವಹನ್ಕರೈಃ।
ವಾಮೇ ಪಾಶಂ ಕಾರ್ಮುಕಂ ಚ ಲತಾಂ ಜಂಬೂಂ ದಧತ್ಕರೈಃ
ರಕ್ತಾಂಶುಕಸ್ಸದಾ ಭೂಯಾದ್ದುರ್ಗಾಗಣಪತಿರ್ಮುದೇ॥
ಕನಕವರ್ಣಃ॥೩೧॥'

(ಕಷ್ಟಗಳಿಂದ ದಾಟಿಸುವ ರೂಪ. ಎಂಟು ಕೈಗಳು; ಕೈಗಳಲ್ಲಿ ಕ್ರಮವಾಗಿ ಅಂಕುಶ, ದಾಡೆ (ದಂತ), ಅಕ್ಷಮಾಲೆ, ಬಾಣ, ಅಂಕುಶ, ಧನಸ್ಸು (ಕಾರ್ಮುಕ), ಕಲ್ಪಲತೆ, ಜಂಬೂಫಲ ಮತ್ತು ಪಾಶ. ಧ್ಯಾನಶ್ಲೋಕಕ್ಕೆ ಚಿತ್ರ ಸರಿಯಾಗಿದೆ. ಚಿತ್ರದಲ್ಲಿ 'ಕನಕವರ್ನ'ವೆಂದು ಕಾಣಿಸಿದ್ದರೆ ಧ್ಯಾನಶ್ಲೋಕವೂ 'ತಪ್ತಕಾಂಚನ ಸಂಕಾಶ' ಎನ್ನುತ್ತದೆ. ಧ್ಯಾನಶ್ಲೋಕದ ಪ್ರಕಾರ ಅವನು ಉಟ್ಟಿರುವ ಬಟ್ಟೆ ಕೆಂಪುಬಣ್ಣದ್ದು ('ರಕ್ತಾಂಶುಕಃ')





೩೨. ಸಂಕಟಹರ ಗಣಪತಿ


'ಬಾಲಾರ್ಕಾರುಣಕಾಂತಿರ್ವಾಮೇ ಬಾಲಾಂ ವಹನ್ನಂಕೇ।
ಲಸದಿಂದೀವರಹಸ್ತಾಂ ಗೌರಾಂಗೀಂ ರತ್ನಶೋ ಭಾಢ್ಯಾಂ।
ದಕ್ಷೇ(s)ಂಕುಶವರದಾನಂ ವಾಮೇ ಪಾಶಂ ಚ ಪಾಯಸಪಾತ್ರಂ।
ನೀಲಾಂಶುಕಲಸಮಾನಃ ಪೀಠೇ ಪದ್ಮಾರುಣೇ ತಿಷ್ಠನ್।
ಸಂಕಟಹರಣಃ ಪಾಯಾತ್ಸಂಕಟಪೂಗಾದ್ಗಜಾನನೋ
ನಿತ್ಯಂ॥
ರಕ್ತವರ್ಣಃ॥೩೨॥'


(ಮೇಲಡರಿಬರುವ ತೊಂದರೆಗಳನ್ನು ನೀಗಿಸುವ ರೂಪ. ಎಡತೊಡೆಯ ಮೇಲೆ ದೇವಿಯನ್ನು ಕೂಡಿಸಿಕೊಂಡಿದ್ದಾನೆ. ನಾಲ್ಕು ಕೈಗಳು; ಕೈಗಳಲ್ಲಿ ಕ್ರಮವಾಗಿ ವರದಮುದ್ರೆ(ವರದಾನ), ಅಂಕುಶ, ಪಾಶ ಮತ್ತು ಪಾಯಸಪಾತ್ರೆ. ಕೆಂದಾವರೆ ಹೂವಿನ ಮೇಲೆ ('ಪೀಠೇ ಪದ್ಮಾರುಣೆ') ಕುಳಿತಿದ್ದಾನೆ. ಧ್ಯಾನಶ್ಲೋಕಕ್ಕೆ ಚಿತ್ರ ಸರಿಯಾಗಿದೆ. ದೇವಿಯ ಕೈಯಲ್ಲಿ ಕನ್ನೈದಿಲೆ ಹೂ (ಇಂದೀವರ). ಗಣಪತಿಯ ಮೈಬಣ್ಣ ನಸುಗೆಂಪು ('ಬಾಲಾರ್ಕಾರುಣ ಕಾಂತಿ') ಎಂದು ಧ್ಯಾನಶ್ಲೋಕ; ಶಿಂಧೂರವರ್ಣವೆಂದು ಚಿತ್ರದಲ್ಲಿ ಒಕ್ಕಣೆ. ದೇವಿಯ ಮೈಬಣ್ಣ ಬಿಳಿ (ಗೌರಾಂಗಿ)ಯೆಂದು ಧ್ಯಾನಶ್ಲೋಕ; ಕನಕವರ್ಣವೆಂದು ಚಿತ್ರದಲ್ಲಿ ಒಕ್ಕಣೆ.)



ನಂಜನಗೂಡಿನ ಗುಡಿಯ ಪೌಳಿಯಮೇಲೆ ಮತ್ತೆ ಕೆಲವು ಗಣಪತಿರೂಪಗಳು ಶಿಲ್ಪದಲ್ಲಿ ಮೂಡಿಬಂದಿವೆ. ಸದಾಶಿವಗಣಪತಿ, ಸರ್ವಾರ್ಧಸಿದ್ಧಿಗಣಪತಿ, ಶೂರಗಣಪತಿ, ವಿಘ್ನರಾಜಗಣಪತಿ, ಇತ್ಯಾದಿ. ಇವುಗಳಲ್ಲಿ ಕೆಲವನ್ನು ಚಿತ್ರಗಳಲ್ಲಿ ಕಾಣಬಹುದು.


















(೯) ಸುಬ್ರಹ್ಮಣ್ಯರೂಪಗಳು

ಶಿವನ ಇನ್ನೊಬ್ಬ ಮಗನೆಂದು ಪ್ರಸಿದ್ಧನಾದ ಸುಬ್ರಹ್ಮಣ್ಯನ ಹದಿನೇಳು ರೂಪಗಳು. ರೂಪಗಳ ವರ್ಣನೆಯನ್ನು 'ಶೈವಾಗಮೇಶೇಖರೇ' ಎಂಬ ಒಕ್ಕಣೆಯೊಂದಿಗೆ ಕೂಟ್ಟಿದ್ದಾರೆ. ಆಕರಗ್ರಂಥವು ಸಿದ್ಧಾಂತಶೇಖರವೆಂಬುದು; ಶೈವಾಗಮಕ್ಕೆ ಸೇರಿದ್ದು.

೧. ಜ್ಞಾನಶಕ್ತಿಸುಬ್ರಹ್ಮಣ್ಯ -

'ಏ(ಏ)ಕವಕ್ತ್ರಂ ದ್ವಿನೇತ್ರಂ ಚ ಜಟಾಮಕುಟಸಂಯುತಂ।
ಶ್ವೇತಾರ್ಕಪುಷ್ಪಮಾಲಂ ಚ ಹೇಮರತ್ನಕಿರೀಟಿನಂ। (II)
ಚತುರ್ಭುಜೈರ್ವಜ್ರಶಕ್ತಿಕುಕ್ಕುಟಾಭಯ ಧಾರಿಣಂ।
ದಿವ್ಯಗಂಧಾನುಲಿಪ್ತಾಂಗಂ ಶುಕ್ಲಯಜ್ಞೋಪವೀತಿನಂ।
ಶಿವಶಕ್ತಿಜ್ಞಾನಯೋಗಂ ಜ್ಞಾನಶಕ್ತಿಸ್ವರೂಪಕಂ। (II)
ಶ್ವೇತವರ್ಣಃ॥೧॥'





ಜ್ಞಾನಶಕ್ತಿ ಸುಬ್ರಹ್ಮಣ್ಯ


(ಒಂದೇ ಮುಖ, ಎರಡು ಕಣ್ಣುಗಳು; ಜಟಾಮುಕುಟ, ರತ್ನಕಿರೀಟ, ಬಿಳಿಯ ಉಪವೀತ, ದಿವ್ಯಗಂಧ ಮಾಲೆಗಳನ್ನು ಧರಿಸಿದ್ದಾನೆ. ನಾಲ್ಕು ಕೈಗಳು; ವಜ್ರಾಯುಧ, ಶಕ್ತ್ಯಾಯುಧ, ಹುಂಜ ಮತ್ತು ಅಭಯ ಮುದ್ರೆಗಳನ್ನು ಹಿಡಿದಿದ್ದಾನೆ, ಬಿಳಿಯ ಮೈಬಣ್ಣ).

೨. ಸ್ಕಂದಸುಬ್ರಹ್ಮಣ್ಯ -

'ಚತುರ್ಭುಜಂ ದ್ವಿನೇತ್ರಂ ಚ ಶ್ವೇತಪದ್ಮಾಸನಸ್ಥಿತಂ।
ಕುಕ್ಕುಟಾಭಯ ವಜ್ರಾಣಿ ವರದಂ ಚೈವ ಹಸ್ತಕೇ। (II)
ಕಿಂಚಿತ್ಕೇಶ ಶಿಖಾಬದ್ಧಂ ಪುಷ್ಪಮಾಲಾಭಿರಾವೃತಂ।
ಮೇಖಲಾಂಬರ ಸಂವೀತಂ ರತ್ನಭೂಷಣ ಭೂಷಿತಂ। (II)
ಧೂಮ್ರವರ್ಣನಿಭಂ ಸ್ಕಂದಂ ಪ್ರಭಾಮಂಡಲಮಂಡಿತಂ।
ಸ್ಕಂದರೂಪಮಿದಂ ಪ್ರೋಕ್ತಂ ಅಗ್ನಿಜಾತಮಥ ಶ್ರುಣು। (II)
ಧೂಮ್ರವರ್ಣಃ॥೨॥'

(ಒಂದು ಮುಖ, ಎರಡು ಕಣ್ಣುಗಳು, ನಾಲ್ಕು ಕೈಗಳು. ಸರ್ವಾಲಂಕಾರಭೂಷಿತನಾಗಿ ಬಿಳಿಯ ತಾವರೆಯೆಲೆಯ ಮೇಲೆ ಕುಳಿತಿದ್ದಾನೆ. ಕೈಗಳಲ್ಲಿ ಹುಂಜ, ವಜ್ರಾಯುಧ, ಅಭಯ ವರದಮುದ್ರೆಗಳು. ಹೊಗೆಯ ಮೈಬಣ್ಣ; ತಲೆಯ ಮೇಲೆ ಸ್ವಲ್ಪ ಕೂದಲನ್ನು ಶಿಖೆಯಾಗಿ ಗಂಟುಹಾಕಿಕೊಂಡಿದ್ದಾನೆ)






ಸ್ಕಂದ ಸುಬ್ರಹ್ಮಣ್ಯ

೩. ಅಗ್ನಿಜಾತ ಸುಬ್ರಹ್ಮಣ್ಯ -

'ದ್ವಿಮುಖಂ ಚಾಷ್ಟಬಾಹುಂ ಚ ಶ್ವೇತಂ ವಾ ಶ್ಯಾಮವರ್ಣಕಂ॥ (I)
ಸ್ರುವಾಕ್ಷಮಾಲಾ ಖಡ್ಗಂ ಚ ಸ್ವಸ್ತಿಕಂ ದಕ್ಷಿಣೇ ಕರೇ ॥
ಕುಕ್ಕುಟಂ ಖೇಟಕಂ ವಜ್ರಮಾಜ್ಯಪಾತ್ರಂ ತು ವಾಮಕೇ।
ಅಗ್ನಿಹೋತ್ರವಿಧಿಂ ದೇವ ಮಗ್ನಿಜಾತಸ್ವರೂಪಕಂ। (II)
ನೀಲವರ್ಣಃ॥೩॥'

(ಅಗ್ನಿಜಾತಸುಬ್ರಹ್ಮಣ್ಯನು ಅಗ್ನಿಹೋತ್ರವಿಧಿಯ ಮೂರ್ತರೂಪ. ಅಗ್ನಿಯಂತೆ ಎರಡು ಮುಖಗಳು, ಎಂಟು ಕೈಗಳು. ಬಲಗಡೆಯ ಕೈಗಳಲ್ಲಿ





ಅಗ್ನಿಪಾತ ಸುಬ್ರಹ್ಮಣ್ಯ

ಯಜ್ಞದಲ್ಲಿ ಬಳಸುವ ತುಪ್ಪದ ಪಾತ್ರೆ, ಹುಂಜ, ಗುರಾಣಿ, ವಜ್ರಾಯುಧಗಳಿವೆ. ಬಿಳಿಯ ಮೈಬಣ್ಣದವನಂತೆ ಅಥವಾ ನೀಲಿಗಪ್ಪಿನ ಬಣ್ಣದವನಂತೆ ಕಾಣಿಸಬಹುದು.)

೪. ಸೌರಭೇಯಸುಬ್ರಹ್ಮಣ್ಯ -

'ಚತುರ್ವಕ್ತ್ರಾಷ್ಟನಯನಂ ಭುಜಾಷ್ಟಕಮಲಾಸನಂ।
ಕುಂಚಿತಂ ವಾಮಪಾದಂ ಚ ಸುಸ್ಥಿತಂ ದಕ್ಷಿಣಂ ಪದಂ। (II)
ಶಕ್ತ್ಯುತ್ಪಲಪುಷ್ಪಬಾಣಮಭಯಂ ದಕ್ಷಿಣೇ ಕರೇ।
ವಜ್ರಂ ಚೇಕ್ಷುಧನುಶ್ಶೂಲಂ ವರದಂ ವಾಮಹಸ್ತಕೇ।
ಪದ್ಮಪುಷ್ಪನಿಭಂ ಚೈವ ಸೌರಭೇಯಸ್ವರೂಪಕಂ। (II)
ಪಾಟಲವರ್ಣಃ॥೪॥'





ಸೌರಭೇಯ ಸುಬ್ರಹ್ಮಣ್ಯ

(ನಾಲ್ಕು ಮುಖಿಗಳು, ಎಂಟು ಕಣ್ಣುಗಳು, ಎಂಟು ಕೈಗಳು. ಕಮಲದ ಮೇಲೆ ಎಡಗಾಲನ್ನು ಮಡಚಿ ಬಲಗಾಲನ್ನು ಇಳಿಬಿಟ್ಟು ನೆಲಕ್ಕೂರಿ ಕುಳಿತಿದ್ದಾನೆ. ಮೈಬಣ್ಣ ಕೆಂದಾವರೆಯದು. ಕೈಗಳಲ್ಲಿ ಶಕ್ತ್ಯಾಯುಧ, ಉತ್ಪಲ, ಹೂಬಾಣ, ಅಭಯಮುದ್ರೆ (ಬಲಗಡೆ) ಮತ್ತು ವಜ್ರಾಯುಧ, ಕಬ್ಬಿನ ಜಲ್ಲೆಯ ಬಿಲ್ಲು, ಶೂಲ ಮತ್ತು ವರದಮುದ್ರೆ (ಎಡಗಡೆ). ಇದು ಸೌರಭೇಯಸ್ವರೂಪ.)

೫. ಗಾಂಗೇಯ ಸುಬ್ರಹ್ಮಣ್ಯ -

'ಏ(ಐ)ಕವಕ್ತ್ರಂ ತ್ರಿನಯನಂ ದಾಡಿಮೀಕುಸುಮಪ್ರಭಂ।
ಕರಂಡಮಕುಟೋಪೇತಂ ಕುಕ್ಕುಟಧ್ವಜ ಧಾರಿಣಂ। (II)
ನೀಲೋತ್ಪಲಧರಂ ದೇವಂ ಮಕರಾರೂಢಮವ್ಯಯಂ।
ಪರುಶುಂ ಪೂರ್ಣಕುಂಭಂ ಚ ಸವ್ಯಹಸ್ತೇ ತು ಧಾರಯನ್।
ಅರಣಿಂ ಕುಕ್ಕುಟಂ ವಾಮೇ ಗಾಂಗೇಯಸ್ಯ ಸ್ವರೂಪಕಂ। (II)
ಪಾಟಲವರ್ಣಃ॥೫॥'






ಗಾಂಗೇಯ ಸುಬ್ರಹ್ಮಣ್ಯ

(ಗಾಂಗೇಯ ಸುಬ್ರಹ್ಮಣ್ಯನದು ದಾಳಿಂಬೆಹೂವಿನಂತೆ ಕೆಂಪು ಮೈಬಣ್ಣ. ಒಂದೇ ಮುಖ, ಮೂರು ಕಣ್ಣುಗಳು, ನಾಲ್ಕು ಕೈಗಳು. ಗಂಗಾದೇವಿಯ ಮಗನೆಂದು ಕಾಣಿಸಲು ಮಕರವೇ ವಾಹನವಾಗಿದ್ದಾನೆ. ತಲೆಯ ಮೇಲೆ ಕರಂಡಮಕುಟ. ಬಲಗೈಗಳಲ್ಲಿ ಕೊಡಲಿ, ನೀರು ತುಂಬಿದ ಕುಂಭ; ಎಡಗೈಗಳಲ್ಲಿ ಅರಣಿ ಮತ್ತು ಹುಂಜ)

೬. ಶರವಣೋದ್ಭವಸುಬ್ರಹ್ಮಣ್ಯ -

'ಷಡ್ಭುಜಂ ಚೈಕವದನಂ ಬಾಲಸೂರ್ಯಸಮಪ್ರಭಂ।
ಸರ್ವಾಭರಣಸಂಯುಕ್ತಂ ಸಿಂಹಸ್ಯೋಪರಿ ಸಂಸ್ಥಿತಂ। (II)
ತ್ರಿನೇತ್ರಂ ಭಸಿತೋದ್ಧೂಳಂ ಪುಷ್ಪಬಾಣೇಕ್ಷುಕಾರ್ಮುಕಂ।
ಖಡ್ಗಂ ಖೇಟಂ ಚ ಪದ್ಮಂ ಚ ಕುಕ್ಕುಟಧ್ವಜಧಾರಿಣಂ।
ರಕ್ತವರ್ಣಃ॥'






ಶರವಣೋದ್ಭವ ಸುಬ್ರಹ್ಮಣ್ಯ

(ನದಿಯ ದಡದಲ್ಲಿ ಶರವೆಂಬ ಜೊಂಡು ಹುಲ್ಲಿನ ಮೇಲೆ ಕಾಣಿಸಿಕೊಂಡ ಈ ರೂಪ ಒಂದು ಮುಖ, ಮೂರು ಕಣ್ಣುಗಳು ಮತ್ತು ಆರು ಭುಜಗಳದ್ದು. ಆಗತಾನೆ ಹುಟ್ಟಿದ ಸೂರ್ಯನಂತೆ ಕಂಗೊಳಿಸುವ ಅವನ ಮೈಬಣ್ಣ ಕೆಂಪು. ಮೈಗೆಲ್ಲ ಭಸ್ಮವನ್ನು ಬಳಿದುಕೊಂಡಿದ್ದಾನೆ. ಕೈಗಳಲ್ಲಿ ಕತ್ತಿ, ಗುರಾಣಿ, ವಜ್ರಾಯುಧ, ಕುಕ್ಕುಟಧ್ವಜ, ಹೂಬಾಣ, ಕಬ್ಬಿನ ಜಲ್ಲೆಯ ಬಿಲ್ಲುಗಳನ್ನು ಹಿಡಿದಿದ್ದಾನೆ. ಸಿಂಹದ ಮೇಲೆ ಕುಳಿತಿದ್ದಾನೆ)

೭. ಕಾರ್ತಿಕೇಯ ಸುಬ್ರಹ್ಮಣ್ಯ -

'ತ್ರಿನೇತ್ರಂ ದಶಹಸ್ತಂ ಚ ಮಸ್ತಕೇ ಬಿಲ್ವಧಾರಿಣಂ।
ಶಕ್ತಿಂ ಶೂಲಂ ತಥಾ ಚಕ್ರಮಂಕುಶಾಭಯ ದಕ್ಷಿಣೇ। (II)
ವರದಂ ತೋಮರಂ ಪಾಶಂ ಶಂಖಂ ವಜ್ರಂ ಚ ವಾಮಕೇ।
ಮಯೂರವಾಹನಾರೂಢಂ ಸರ್ವಾಭರಣಭೂಷಿತಂ।
ಬಾಲಸೂರ್ಯಪ್ರತೀಕಾಶಂ ಕಾರ್ತಿಕೇಯಂ ಶಿವಾತ್ಮಜಂII
ರಕ್ತವರ್ಣಃII೭II'





ಕಾರ್ತಿಕೇಯ ಸುಬ್ರಹ್ಮಣ್ಯ

(ಕಾರ್ತಿಕೇಯ ಸುಬ್ರಹ್ಮಣ್ಯನಿಗೆ ಒಂದು ಮುಖ, ಮೂರುಕಣ್ಣುಗಳು, ಹತ್ತುಕೈಗಳು. ತಲೆಯ ಮೇಲೆ ಬಿಲ್ವವನ್ನು ಧರಿಸಿದ್ದಾನೆ. ಸರ್ವಾಭರಣಯುಕ್ತ; ನವಿಲಿನ ಮೇಲೆ ಕುಳಿತಿದ್ದಾನೆ. ಬಲಗೈಗಳಲ್ಲಿ ಶಕ್ತ್ಯಾಯುಧ, ಶೂಲ, ಚಕ್ರ, ಅಂಕುಶ ಮತ್ತು ಅಭಯಮುದ್ರೆ; ಎಡಗೈಗಳಲ್ಲಿ ವರದಮುದ್ರೆ, ತೋಮರ, ಪಾಶ, ಶಂಖ, ವಜ್ರಾಯುಧಗಳು. ಕೆಂಪು ಮೈಬಣ್ಣ, ಉದಯರವಿಯಂತೆ)

೮. ಕುಮಾರ ಸುಬ್ರಹ್ಮಣ್ಯ -

'ಚತುರ್ಭುಜಂ ಚೈಕವಕ್ತ್ರಂ ಕರಂಡಮಕುಟಾನ್ವಿತಂ।
ಶಕ್ತಿಂ ಚಾಭಯದಂ ದಕ್ಷೇ ಸವ್ಯೇ ವರದಚಕ್ರಕೇ।
ಪದ್ಮಪುಷ್ಪಧರಾಂ(ರಂ) ಕಂಠೇ ದೇವಂ ಬಾಲಸ್ವರೂಪಕಂII
ರಕ್ತವರ್ಣಃII೮II'





ಕುಮಾರ ಸುಬ್ರಹ್ಮಣ್ಯ

(ಕುಮಾರಸುಬ್ರಹ್ಮಣ್ಯನಿಗೆ ಒಂದೇ ಮುಖ, ನಾಲ್ಕು ಕೈಗಳು. ಬಲಗೈಗಳಲ್ಲಿ ಶಕ್ತ್ಯಾಯುಧ ಮತ್ತು ಅಭಯಮುದ್ರೆ; ಎಡಗೈಗಳಲ್ಲಿ ವರದಮುದ್ರೆ ಮತ್ತು ಚಕ್ರ. ಕೊರಳಲ್ಲಿ ತಾವರೆಹೂಮಾಲೆ. ತಲೆಯ ಮೇಲೆ ಕರಂಡಮಕುಟ. ಕೆಂಪು ಮೈಬಣ್ಣ. ಸಣ್ಣ ಹುಡುಗನಂತೆ ರೂಪ)

೯. ಷಣ್ಮುಖಸುಬ್ರಹ್ಮಣ್ಯ -

'ಶಕ್ತಿಂ ಶರಂ ಚ ಖಡ್ಗಂ ಚ ಚಕ್ರಂ ಪಾಶಾಭಯೌ ತಥಾ।
ಕುಕ್ಕುಟಂ ಚ ಧನುಃ ಖೇಟ ಶಂಖಂ ಧತ್ತೇ ಹಲಂ ವರಂ। (II)
ಮಯೂರವಾಹನೋಪೇತಂ ಸರ್ವಲಕ್ಷಣಸಂಯುತಂ।
ಜಯಾ ಚ ವಿಜಯಾ ಚೈವ ವಾಮದಕ್ಷಿಣ ಪಾರ್ಶ್ವಯೋಃ। (II)
ಸರ್ವಾಲಂಕಾರಸಂಯುಕ್ತಂ ಸರ್ವಾಭರಣಭೂಷಿತಂ।
ಷಣ್ಮುಖಂ ಚೇತಿ ವಿಖ್ಯಾತಂ ತಾರಕಾರಿಮಥ ಶೃಣುII೯II
ರಕ್ತವರ್ಣಃII'







ಷಣ್ಮುಖ ಸುಬ್ರಹ್ಮಣ್ಯ

(ಆರು ಮೊಗಗಳ ಸುಬ್ರಹ್ಮಣ್ಯನು ಸರ್ವಾಲಂಕಾರಭೂಷಿತನಾಗಿ ನವಿಲನ್ನೇರಿ ಹೊರಟಿದ್ದಾನೆ; ಬಲಗಡೆ ವಿಜಯಾ ಎಂಬುವಳೂ ಎಡಗಡೆ ಜಯಾ ಎಂಬುವಳೂ ಇದ್ದಾರೆ. ಹನ್ನೆರಡು ಕೈಗಳು. ರಕ್ತಾಯುಧ, ಬಾಣ, ಕತ್ತಿ, ಚಕ್ರ, ಪಾಶ, ಅಭಯಮುದ್ರೆ, ಹುಂಜ, ಬಿಲ್ಲು, ಗುರಾಣಿ, ಶಂಖ, ನೇಗಿಲು ಮತ್ತು ವರದಮುದ್ರೆಗಳು. ಕೆಂಪು ಮೈಬಣ್ಣ)

೧೦. ತಾರಕಾರಿ ಸುಬ್ರಹ್ಮಣ್ಯ -

'ಏ(ಐ)ಕವಕ್ತ್ರಂ ತ್ರಿಣಯನಂ ಗಜಪೃಷ್ಠೋಪರಿ ಸ್ಥಿತಂ।
ಷಡ್ಭುಜಂ ಚಾಭಯಂ ಖಡ್ಗಂ ಶಕ್ತಿಂ ದಕ್ಷಿಣ ಪಾರ್ಶ್ವಕೇ। (II)
ಖೇಟಕಂ ಚಾಕ್ಷಮಾಲಾಂ ಚ ಕುಕ್ಕುಟಂ ವಾಮಹಸ್ತಕೇ।
ತಾರಕಾರಿರಿತಿ ಖ್ಯಾತಸ್ಸೇನಾನೀಶ್ಚ ತಥೋ ಚ್ಯತೇ॥
ರಕ್ತವರ್ಣಃ॥೧೦॥'





ತಾರಕಾರಿ ಸುಬ್ರಹ್ಮಣ್ಯ


(ತಾರಕಾಸುರನನ್ನು ಸಂಹರಿಸಲು ಆನೆಯೇರಿ ಹೊರಟ ರೂಪ. ಒಂದು ಮೊಗ, ಮೂರು ಕಣ್ಣುಗಳು, ಆರು ಕೈಗಳು. ಬಲಗೈಗಳಲ್ಲಿ ಅಭಯಮುದ್ರೆ, ಕತ್ತಿ, ಶಕ್ತ್ಯಾಯುಧಗಳು, ಎಡಗೈಗಳಲ್ಲಿ ಗುರಾಣಿ, ಜಪಮಾಲೆ, ಹುಂಜಗಳು. ಕೆಂಪು ಮೈಬಣ್ಣ)

೧೧. ಸೇನಾನೀ ಸುಬ್ರಹ್ಮಣ್ಯ -

'ಏ(ಐ)ಕವಕ್ತ್ರಂ ದ್ವಿನಯನಂ ಶಂಖಚಕ್ರವರಾಭಯಂ।
ಸರ್ವಾಭರಣಸಂಯುಕ್ತಂ ದಿವ್ಯಗಂಧಾನುಲೇಪನಂ। (II)
ಶ್ಯಾಮವರ್ಣನಿಭಂ ಚೈವ ಶುಕ್ಲಯಜ್ಞೋಪವೀತಿನಂ।
ಸುಸ್ಮಿತಂ ಚಾರುವದನಂ ದೇವಸೇನಾಪತಿಂ ಭಜೇ॥
ಶ್ಯಾಮವರ್ಣಃ॥೧೧॥'

(ದೇವತೆಗಳ ಸೇನೆಯನ್ನೇ ಹೆಂಗಳೆಯನ್ನಾಗಿ ಕಲ್ಪಿಸಿಕೊಂಡು, ದೇವಸೇನೆಗೆ ನಾಯಕನಾಗಿ ನಿಂತು ದೈತ್ಯರನ್ನು ಸೋಲಿಸಿದ ರೂಪ ದೇವಸೇನಾಪತಿಯಾದ ಸೇನಾನಿಸುಬ್ರಹ್ಮಣ್ಯನದು. ಒಂದು ಮುಖ, ಎರಡೇ






ಸೇನಾನೀ ಸುಬ್ರಹ್ಮಣ್ಯ

ಕಣ್ಣುಗಳು, ನಾಲ್ಕು ಕೈಗಳು. ಹಿಂದಿನ ಕೈಗಳಲ್ಲಿ ಶಂಖ ಮತ್ತು ಚಕ್ರ, ಮುಂದಿನ ಕೈಗಳಲ್ಲಿ ಅಭಯ ವರದ ಮುದ್ರೆಗಳು. ಮೈಬಣ್ಣ ಕಪ್ಪು. ಬಿಳಿಬಣ್ಣದ ಯಜ್ಞೋಪವೀತವನ್ನು ಧರಿಸಿದ್ದಾನೆ; ನಗುಮುಖ)

೧೨. ಗುಹಸುಬ್ರಹ್ಮಣ್ಯ -

'ಚತುರ್ಭುಜಂ ತ್ರಿನೇತ್ರಂ ಹೇಮರತ್ನಕಿರೀಟಿನಂ।
ಶೂಲಂ ವಜ್ರಂ ಸವ್ಯ(ವ್ಯೇ) ವಾಮೇ ವರಾಭಯಕರದ್ವಯಂ। (II)
ಶ್ವೇತವಸ್ತ್ರಧರಂ ದೇವಂ ಸರ್ವೇಷಾಂ ರಕ್ಷಣಾರ್ಥಕಂ।
ಜಯಯಾ ವಾಮಪಾರ್ಶ್ವೇ ತು ಕಲ್ಯಾಣೋತ್ಸವವಿಗ್ರಹಂ।
ಪಾದಾಂಬುಜಂ ಹೃದಿ ಧ್ಯಾತ್ವಾ ಗುಹರೂಪಂ ಸಮಾಶ್ರಯೇ॥
ಶ್ಯಾಮವರ್ಣಃ॥೧೨॥'






ಗುಹ ಸುಬ್ರಹ್ಮಣ್ಯ

(ಗುಹಸುಬ್ರಹ್ಮಣ್ಯನದೂ ಕಪ್ಪು ಮೈಬಣ್ಣವೇ; ಅವನು ಮೂರು ಕಣ್ಣುಗಳುಳ್ಳವನು. ತಲೆಯ ಮೇಲೆ ರತ್ನಕಿರೀಟವನ್ನೂ, ಮೈಮೇಲೆ ಬಿಳಿಬಟ್ಟೆಯನ್ನೂ ಧರಿಸಿದ್ದಾನೆ. ನಾಲ್ಕು ಕೈಗಳು; ಪರಹಸ್ತಗಳಲ್ಲಿ ಶೂಲ ಮತ್ತು ವಜ್ರಾಯುಧ, ನಿಜಹಸ್ತಗಳಲ್ಲಿ ವರದ ಅಭಯ ಮುದ್ರೆಗಳು. ಪಕ್ಕದಲ್ಲಿ ಜಯೆಯೆಂಬ ದೇವಿ ನಿಂತಿದ್ದಾಳೆ. ಕಲ್ಯಾಣಸುಂದರ ಮೂರ್ತಿಯಿದು)

೧೩. ಬ್ರಹ್ಮಚಾರಿ ಸುಬ್ರಹ್ಮಣ್ಯ -

'ದ್ವಿನೇತ್ರಂ ದ್ವಿಭುಜಂ ಚೈವ ಬಾಲಸೂರ್ಯಸಮಪ್ರಭಂ
ದಕ್ಷಭಾಗೇ ದಂಡಹಸ್ತಂ ವಜ್ರಂ ವಾಮೋರು ಹಸ್ತಕಂ (II)
ಸವ್ಯಾಪಸವ್ಯಪಾದಂ ತು ಸ್ಥಿತಂ ವಾ ಕುಂಚಿತಂ ತು ವಾ
ಶಿಖಾಯಜ್ಞೋಪವೀತಂ ಚ ಮೌಂಜೀಕೌ(ಕೌ)ಪೀನ ಸಂಯುತಂ (II)
ಮೇಖಲೋಪರಿ ವಧ್ಯಾ(ಡ್ಯಾ)ಣಂ ರಕ್ತಪದ್ಮೋಪರಿ ಸ್ಥಿತಂ
ದಿವ್ಯರೂಪಧರಂ ದೇವಂ ಬ್ರಹ್ಮಚಾರಿಣಮಾಶ್ರಯೇII
ರಕ್ತವರ್ಣಃ II೧೩II'




ಬ್ರಹ್ಮಚಾರಿ ಸುಬ್ರಹ್ಮಣ್ಯ

(ಬ್ರಹ್ಮಚಾರಿಯ ರೂಪವನ್ನು ಧರಿಸಿದ ಸುಬ್ರಹ್ಮಣ್ಯನಿಗೆ ಎರಡೇ ಕೈಗಳು, ಎರಡೇ ಕಣ್ಣುಗಳು. ಬ್ರಹ್ಮಚಾರಿಯಂತೆ ಶಿಖೆ, ಯಜ್ಞೋಪವೀತ, ಮೌಂಜಿಗಳನ್ನು ಧರಿಸಿ ಕೆಂದಾವರೆಯ ಮೇಲೆ ನಿಂತಿದ್ದಾನೆ. ಮೈಬಣ್ಣ ಕೆಂಪು. ಬಲಗೈಯಲ್ಲಿ ದಂಡವನ್ನು ಹಿಡಿದಿದ್ದಾನೆ; ಎಡಗೈ ವಜ್ರವನ್ನು ಹಿಡಿದು ತೊಡೆಯ ಮೇಲೆ ಇದೆ. ಬಲಗಾಲನ್ನು ಎಡಗಾಲಿನ ಎಡಪಕ್ಕದಲ್ಲಿ ಇರಿಸಿಕೊಂಡ ಭಂಗಿ)

೧೪. ದೇಶಿಕಸುಬ್ರಹ್ಮಣ್ಯ -

'ಷಡ್ಭುಜಂ ಚೈಕವದನಂ ಕರಂಡಮಕುಟಾನ್ವಿತಂ
ಶಕ್ತಿಹಸ್ತದ್ವಯಂ ಚೈವ ಜಪಮಾಲಾಧರಂ ಶುಭಂ (II)
ಮಯೂರವಾಹನಾರೂಢಂ ವರಾಭಯಕರಾಂಬುಜಂ
ಇತ್ಯೇವಂ ವಿಧಿವಧ್ಯಾ(ಧ್ಯಾ)ಯೇಚ್ಛಿವದೇವಸ್ಯ ದೇಶಿಕಂ (II)
ರಕ್ತವರ್ಣಃII೧೪II'





ದೇಶಿಕ ಸುಬ್ರಹ್ಮಣ್ಯ

(ತನ್ನ ತಂದೆಯಾದ ಶಿವನಿಗೇ ಪ್ರಣವೋಪದೇಶಮಾಡಿದ ರೂಪ ದೇಶಿಕಸುಬ್ರಹ್ಮಣ್ಯನದು. ಒಂದು ಮುಖ, ತಲೆಯ ಮೇಲೆ ಕರಂಡಮಕುಟಆರುಕೈಗಳು: ಕೈಗಳಲ್ಲಿ ಅಭಯವರದ ಮುದ್ರೆಗಳು ನಿಜಹಸ್ತಗಳಲ್ಲಿ; ಉಳಿದ ಕೈಗಳಲ್ಲಿ ಎರಡು ಶಕ್ತ್ಯಾಯುಧವನ್ನೂ, ಮತ್ತೊಂದು ಜಪಮಾಲೆಯನ್ನೂ ಹಿಡಿದಿವೆ. ನವಿಲಮೇಲೆ ಕುಳಿತವನು)

೧೫. ಕ್ರೌಂಚಭೇದನ ಸುಬ್ರಹ್ಮಣ್ಯ -

'ಚತುರ್ಭುಜಂ ತ್ರಿನೇತ್ರಂ ಚ ಸ್ಥಿತಂ ಸಿಂಹಾಸನೋಪರಿ
ವರದಾಭಯ ಸಂಯುಕ್ತಂ ಪುಷ್ಪಬಾಣೇಕ್ಷುಕಾರ್ಮುಕಂ (II)
ಮಯೂರವಾಹನಾರೂಢಂ ಸರ್ವೇಷಾಂ ರಕ್ಷಣಾರ್ಥಕಂ
ಕ್ರೌಂಚಭೇದಕರದ್ವಂದ್ವಂ ಕ್ರೌಂಚಭೇದಿಸ್ವರೂಪಕಂII
ರಕ್ತವರ್ಣಃII೧೫II'




ಕ್ರೌಂಚಭೇದನ ಸುಬ್ರಹ್ಮಣ್ಯ

(ಕ್ರೌಂಚಾಸುರನನ್ನು ಕೊಂದ ರೂಪದಲ್ಲಿ ಸುಬ್ರಹ್ಮಣ್ಯನು ಒಂದು ಮೊಗದವನು, ಮೂರು ಕಣ್ಣುಗಳುಳ್ಳವನು, ನಾಲ್ಕುಕೈಗಳವನು. ಸಿಂಹಾಸನದ ಮೇಲೆ ಕುಳಿತವನು; ಮಯೂರವಾಹನನೂ ಹೌದೆಂದು ಧ್ಯಾನಶ್ಲೋಕದ ಒಕ್ಕಣೆಯಿದೆ. ಕೈಗಳಲ್ಲಿ ಹೂಬಾಣ, ಕಬ್ಬಿನ ಜಲ್ಲೆಯ ಬಿಲ್ಲು, ಅಭಯವರದ ಮುದ್ರೆಗಳು. ಬಿಲ್ಲು-ಬಾಣಗಳು ಅಸುರನ ಸಂಹಾರಕ್ಕೆಂದು ಸಿದ್ಧವಾಗಿವೆ. ಕೆಂಪು ಮೈಬಣ್ಣ)

೧೬. ಶಿಖಿವಾಹನಸುಬ್ರಹ್ಮಣ್ಯ -

'ಚತುರ್ಭುಜಂ ಚೈಕವಕ್ತ್ರಂ ತ್ರಿನೇತ್ರಮಭಯಂ ವರಂ।
ಪಾಶಾಂಕುಶಧರಂ ಚೈವ ಜ್ವಾಲಾಕೇಶಶಿಖಂಡಕಂ। (II)
ಇಂದ್ರನೀಲರಥಾರೂಢಂ ರಕ್ತೋತ್ಪಲಸಮಪ್ರಭಂ।
ಚತುರ್ದಶಾಧಿಭವನಂ ಶಿಖಿವಾಹನಮಾಚರೇತ್। (II)
ರಕ್ತವರ್ಣಃ ॥೧೬॥'




ಶಿಖಿವಾಹನ ಸುಬ್ರಹ್ಮಣ್ಯ

(ನೀಲಿಬಣ್ಣದ ನವಿಲಿನ ಮೇಲೇರಿ ಸಾಗುವ ರೂಪ ಇದು. ಒಂದು ಮೋರೆ, ಮೂರು ಕಣ್ಣುಗಳು, ನಾಲ್ಕು ಕೈಗಳು. ಕೈಗಳಲ್ಲಿ ಪಾಶ, ಅಂಕುಶ, ಅಭಯವರದ ಮುದ್ರೆಗಳು. ಮೈಬಣ್ಣ ಕೆಂಪು, ತಲೆಯ ಮೇಲೆ ಶಿಖಂಡವೆಂಬ ಕೇಶಬಂಧ).


೧೭. ವೇಲಾಯುಧಸುಬ್ರಹ್ಮಣ್ಯ -

'ಕಲ್ಪದ್ರುಮಂ ಪ್ರಣಮತಾಂ ಕಮಲಾರುಣಾಭಂ
ಸ್ಕಂದಂ ಭುಜದ್ವಯಮನಾಮಯಮೇಕವಕ್ತ್ರಂ
ಕಾತ್ಯಾಯನೀಸುತಮಹಂ ಕಟಿಬದ್ಧವಾಮಹಸ್ತಂ ಚ
ದಂಡಧರಂ ದಕ್ಷಿಣ ಹಸ್ತಮೀಡೇ॥೧೭॥'



ವೇಲಾಯುಧ ಸುಬ್ರಹ್ಮಣ್ಯ


'ವೇಲವೆಂಬ ಆಯುಧವನ್ನು ಹಿಡಿದ ಈ ರೂಪದಲ್ಲಿ ಸ್ಕಂದನಿಗೆ ಎರಡೇ ಕೈಗಳು. ಎಡಗೈ ಕಟ್ಯವಲಂಬಿತವಾಗಿದೆ, ಬಲಗೈಯಲ್ಲಿ ದಂಡವಿದೆ. ತಾವರೆಹೂವಿನ ಮೈಬಣ್ಣ)




ವಲ್ಲೀ ಸುಬ್ರಹ್ಮಣ್ಯ



ಶಾಸ್ತ ಸುಬ್ರಹ್ಮಣ್ಯ



ಷಣ್ಮುಖ ಸುಬ್ರಹ್ಮಣ್ಯ



ಸುಬ್ರಹ್ಮಣ್ಯ



ಷಣ್ಮುಖ ಸುಬ್ರಹ್ಮಣ್ಯ

(೧೦) ಇತರ ಮೂರ್ತಿಗಳು

೧. ವೀರಭದ್ರ

(ದಕ್ಷಯಾಗದ ಸಂದರ್ಭದಲ್ಲಿ ದಕ್ಷಪ್ರಜಾಪತಿಯು ತನ್ನ ಅಳಿಯನಾದ ಶಿವನು ಸ್ಮಶಾನವಾಸಿಯೆಂದೂ ದಿಗಂಬರನೆಂದೂ ಭೂತಪತಿಯೆಂದೂ ಬಗೆದು ಯಜ್ಞಕ್ಕೆ ಬರಲು ಅವನಿಗೆ ಆಹ್ವಾನವನ್ನು ನೀಡದೆ ಅಪಮಾನಗೊಳಿಸಿದನಾದರೂ, ಮಗಳಾದ ದಾಕ್ಷಾಯಿಣಿಯು ಯಜ್ಞಸಮಾರಂಭಕ್ಕೆ ಹೋಗಿ ಅಗ್ನಿಕುಂಡದಲ್ಲಿ ಬಿದ್ದು ಪ್ರಾಣಬಿಟ್ಟಳು. ಅದನ್ನು ತಿಳಿದ ಶಿವನು ಕೆರಳಿ ದಕ್ಷನ ತಲೆಯನ್ನು ತರಿದು ಯಾಗವನ್ನು ಧ್ವಂಸಮಾಡಿದನೆಂದು ಕತೆ. ವೀರಭದ್ರನನ್ನು ಶಿವನ ಅನುಚರನೆಂದೂ ಲೀಲಾವತಾರವೆಂದೂ ಬೇರೆ ಬೇರೆ ಕಲ್ಪನೆಗಳಿವೆ. ಇಲ್ಲಿ ಇವನ ಧ್ಯಾನಶ್ಲೋಕವು ಚಂಡೇಶ, ಭೈರವ, ಮಲ್ಲಾರಿಯರೊಂದಿಗೆ ಬಂದಿರುವುದರಿಂದ ಶಿವನ ಪರಿವಾರಕ್ಕೆ ಸೇರಿದವನೆಂದೇ ಭಾವಿಸಲಾಗಿದೆ)

'ನೀಲವರ್ಣಂ ತ್ರಿನೇತ್ರಂ ಚ ಖಡ್ಗಬಾಣಧನುರ್ಗದಾಃ।
ದಧತಂ ರುಂಡಮಾಲಾಂ ಚ ಪಾದುಕಾದ್ವಯಮಂಡಿತಂ।
ದಂಷ್ಟ್ರಿಣಂ ಪೀತವಸನಂ ವೀರಭದ್ರಮುಪಾಸ್ಮಹೇ। (II)
ನೀಲವರ್ಣಃII'

(ಪಾಂಚರಾತ್ರದಿಂದ ಎತ್ತಿಕೊಂಡಿರುವ ಶ್ಲೋಕ ಇದು. ವೀರಭದ್ರನ ಮೈಬಣ್ಣ ನೀಲಿ, ಉಟ್ಟಿರುವ ಉಡುಗೆ ಹಳದಿಬಣ್ಣದ್ದು: ಕೊರಳಿನಲ್ಲಿ ರುಂಡಮಾಲೆಯೂ ಕಾಲುಗಳಲ್ಲಿ ಹಾವುಗೆಗಳೂ ಇವೆ. ಬಾಯಲ್ಲಿ ಕೋರೆದಾಡೆಗಳು ಕಾಣುತ್ತವೆ. ಮುಕ್ಕಣ್ಣ; ನಾಲ್ಕುಕೈಗಳು, ಕತ್ತಿ, ಗದೆ, ಬಿಲ್ಲು, ಬಾಣಗಳನ್ನು ಹಿಡಿದಿದ್ದಾನೆ)

೨. ಭೈರವರು

ಸ್ವರ್ಣಾಕರ್ಷಣಭೈರವ -

'ಪೀತವರ್ಣಂ ಚತುರ್ಬಾಹುಂ ತ್ರಿನೇತ್ರಂ ಪೀತವಸನಂ (ವಾಸನಂ)।
ಅಕ್ಷಯಂ ಸ್ವರ್ಣಮಾಣಿಕ್ಯಗಣಪೂರಿತಪಾತ್ರಕಂ। (II)
ಅಂಸಾಹಿತಮಹಾಶೂಲ ಚಾಮರಂ ತೋಮರೋದ್ವಹಂ।
ಸತತಂ ಚಿಂತಯೇದ್ಭಕ್ತ್ಯಾ ಭೈರವಂ ಸರ್ವಸಿದ್ಧಿದಂ। (II)
ನಾನಾಭರಣಶೋಭಾಢ್ಯಮಾನಂದಸುಖರೂಪಿಣಂ।
ಮದೋನ್ಮತ್ತಂ ಸದಾನಂದಂ ಸರ್ವದೇವನಮಸ್ಕೃತಂ। (II)
ಏ(ಐ)ವಂ ಧ್ಯಾಯೇಚ್ಚ ಮಂತ್ರಜ್ಞಃ ಸ್ವರ್ಣಾಕರ್ಷಣ ಭೈರವಂ।
ಪೀತವರ್ಣಃII'



ಪ್ರಳಯಕಾಲದ ವೀರಭದ್ರ



ಭೈರವ




ಸ್ವರ್ಣಾಕರ್ಷಣ ಭೈರವ



ವಟುಕ ಭೈರವ

(ಭೈರವಮೂರ್ತಿಗಳು ಶಿವನ ಪರಿವಾರಕ್ಕೆ ಸೇರಿದ ಉಗ್ರರೂಪಗಳು. ಇವರಲ್ಲಿ ಸ್ವರ್ಣಾಕರ್ಷಣಭೈರವನ ಪೂಜೆ ತಾಂತ್ರಿಕರ ನಡುವೆ ಬಹುವಾಗಿ ಬಳಕೆಯಲ್ಲಿದ್ದಿತು. ಬಂಗಾರವನ್ನು ಬರಮಾಡಿಕೊಳ್ಳಲು ಈ ಭೈರವನು ನೆರವಾಗುವನೆಂಬ ನಂಬಿಕೆ ಇದಕ್ಕೆ ಕಾರಣ. ಬಂಗಾರದ ಬಣ್ಣವೇ ಆದ ಹಳದಿ ಅವನಮೈಬಣ್ಣ, ಉಟ್ಟಿರುವುದೂ ಹಳದಿಬಣ್ಣದ ಬಟ್ಟೆಯೇ. ಮೂರು ಕಣ್ಣುಗಳು, ನಾಲ್ಕುಕೈಗಳು. ಒಂದು ಕೈಯಲ್ಲಿ ಬಂಗಾರದ ಅಕ್ಷಯಪಾತ್ರೆ, ಉಳಿದ ಕೈಗಳಲ್ಲಿ ಶೂಲ, ಚಾಮರ, ತೋಮರ. ಮದೋನ್ಮತ್ತನಂತೆ, ಆನಂದರೂಪಿಯಂತೆ ಕಾಣುವನು)

ವಟುಕಭೈರವ -




ಭೈರವ




ಭೈರವ




ಭೈರವ



ಸಂಹಾರ ಭೈರವ




ಕಾಳಭೈರವ




ಕಪಾಲ ಭೈರವ (ವಾಯವ್ಯ)



ಭೀಷಣ ಭೈರವ (ಕೌಬೇರ)



ಕ್ರೋಧ ಭೈರವ (ನಿರ್ಋತಿ)



ಉನ್ಮತ್ತ ಭೈರವ (ವರುಣ)

'ವಿಕೀರ್ಣಲೋಹಿತಜಟಂ ತ್ರಿಣೇತ್ರಂ ರಕ್ತವಿಗ್ರಹಂ।
ಶೂಲಂ ಕಪಾಲಂ ಪಾಶಂ ಚ ಡಮರುಂ ದಧತಃ ಕರೈಃ। (II)
ನಾನಾರೂಪೈಃ ಪಿಶಾಚೈಶ್ಚ ನಾನಾರೂಪಗಣೈವೃ(ರ್ವ)ತಂ।
ಶ್ವಾನಾರೂಢಂ ಚ ನಿರ್ವಾಣಂ ವಟುಕಂ ಭೈರವಂ ಭಜೇ। (II)
ರಕ್ತವರ್ಣಃII'

(ವಟುಕಭೈರವನು ಕೆಂಪು ಮೈಬಣ್ಣದವನು. ಮುಕ್ಕಣ್ಣ. ತಲೆಯ ಮೇಲೆ ಜಟೆ ಹರಡಿಕೊಂಡಿದೆ. ನಾಲ್ಕು ಕೈಗಳಲ್ಲಿ ಶೂಲ, ಕಪಾಲ, ಪಾಶ, ಡಮರುಗಳನ್ನು ಹಿಡಿದಿದ್ದಾನೆ. ಅವನು ನಗ್ನನಾಗಿ, ನಾಯಿಯನ್ನೇರಿ ಕುಳಿತಿದ್ದಾನೆ. ಹಲವು ಪಿಶಾಚಿಗಳೂ ಭೂತಗಳೂ ಅವನನ್ನು ಸುತ್ತರಿದಿವೆ. ವಟುಕಭೈರವ ಕಲ್ಪದಿಂದ ಆಯ್ದುಕೊಂಡ ಧ್ಯಾನಶ್ಲೋಕ).

೩. ಮಲ್ಹಾರಿಶಿವ -

(ಮಹಾರಾಷ್ಟ್ರದ ಕಡೆ ವಿಶೇಷವಾಗಿ ಪೂಡೆಗೊಳ್ಳುವ ಶಿವನ ರೂಪ, ಮಾರ್ತಂಡಭೈರವನೆಂದೂ ಕರೆಯುತ್ತಾರೆ. ಕರ್ನಾಟಕದ ಉತ್ತರಭಾಗದಲ್ಲೂ ಅವನ ಪೂಜೆಯುಂಟು. ಅವನನ್ನು ಶಿವನ ಅನುಚರನೆಂದೇ ಕತೆಗಳು ನಿರ್ದೇಶಿಸುವುದು. ಏಳುಕೋಟಿದೇವತೆಗಳು ನಾಯಿಗಳ ರೂಪವನ್ನು ತಾಳಿ ಅವನ ಸೇನೆಯಲ್ಲಿದ್ದರೆಂದೂ, ಪಾರ್ವತಿಯ ಅಂಶಾವತಾರವಾದ ಮ್ಹಾಲಸಾ ಎಂಬುವಳು ಅವನ ಮಡದಿಯೆಂದೂ ಕಲ್ಪನೆ. ಮಲ್ಹಾರಿಮಾಹಾತ್ಮ್ಯೆಯಲ್ಲಿರುವ ಧ್ಯಾನಶ್ಲೋಕಗಳನ್ನು ಇಲ್ಲಿ ಉದ್ಧರಿಸಿಕೊಂಡಿದ್ದಾರೆ. 'ಸಕಲನಿಗಮಗುಹ್ಯ'ನಾದ ಈ ದೇವತೆಯು

ಹೊಂಬಣ್ಣದ ಮೈಯುಳ್ಳವನೆಂದೂ, ಕೈಯಲ್ಲಿ ಕತ್ತಿಯನ್ನು ಹಿಡಿದು, ಬಿಳಿಕುದುರೆಯನ್ನೇರಿ, ಏಳು ಭಯಂಕರವಾದ ನಾಯಿಗಳಿಂದ ಸುತ್ತರಿದು, ಸರ್ವಾಲಂಕಾರಭೂಷಿತನಾದವನು.)

೪. ಚಂಡೇಶ -

(ಶಿವನ ನೆಚ್ಚಿನ ಬಂಟನಾದ ಚಂಡೇಶ ಅಥವಾ ಚಂಡಿಕೇಶ್ವರನು ಎಲ್ಲ ಶಿವಾಲಯಗಳಲ್ಲೂ ಪೂಜೆಗೊಳ್ಳುತ್ತಾನೆ. ಅವನ ಮೈಬಣ್ಣ ಕೆಂಪು, ಹುಲಿಯ ಚರ್ಮವನ್ನುಟ್ಟಿದ್ದಾನೆ. ನಾಲ್ಕು ಮೊಗಗಳು, ಮುಕ್ಕಣ್ಣ, ತಲೆಯ ಮೇಲೆ ಜಟೆ, ಜಟೆಯಲ್ಲಿ ಚಂದ್ರಬಿಂಬ. ನಾಲ್ಕು ಕೈಗಳು; ಟಂಕ, ಶೂಲ, ಅಭಯಮುದ್ರೆ, ಜಪಸರಗಳನ್ನು ಹಿಡಿದಿದ್ದಾನೆ. ಕಾರಣಾಗಮದ ವರ್ಣನೆಯಿದು.)

೫. ಪಾಶುಪತಾಸ್ತ್ರ -

(ಶಿವನ ಅಸ್ತ್ರಗಳನ್ನೂ ದೇವತೆಗಳೆಂದು ಬಗೆದು ಅವುಗಳಿಗೆ ಪೂಜೆ ಸಲ್ಲಿಸುವ ಪದ್ಧತಿಯಿದೆ. ಇವುಗಳಲ್ಲಿ ಪ್ರಧಾನವಾದುದು ಪಾಶುಪತಾಸ್ತ್ರ. ಇದನ್ನು ಅರ್ಜುನನಿಗೆ ನೀಡಿದ ಸಂದರ್ಭ ಕಿರಾತಾರ್ಜುನನೆಂಬ ಶಿವಲೀಲಾಮೂರ್ತಿಯದು. ಶೈವಾಗಮದ ಪ್ರಕಾರ ಪಾಶುಪತಾಸ್ತ್ರದೇವತೆಗೆ ನಾಲ್ಕು ಮೊಗಗಳು. ಒಂದೊಂದು ಮೊಗದಲ್ಲೂ ಮೂರು ಕಣ್ಣುಗಳು. ನಾಲ್ಕು ಕೈಗಳು; ಕೋಟಿಸೂರ್ಯರ ತೇಜಸ್ಸು. ಹಲ್ಲುಗಳು, ಕೂದಲು ಎಲ್ಲವೂ ಉರಿಯುವಂತೆ ತೋರುತ್ತವೆ. ಕೈಗಳಲ್ಲಿ ಶಕ್ತ್ಯಾಯುಧ, ಮುದ್ಗರ, ಶಂಖ, ಕತ್ತಿಗಳನ್ನು ಹಿಡಿದಿದ್ದಾನೆ. ಪದ್ಮಾಸನದಲ್ಲಿ ಕುಳಿತಂತೆ ಚಿತ್ರಣ.)

೬. ಖಿಡ್ಗರಾವಣ -

(ಜಾನಪದನೆಲೆಯಲ್ಲಿ ಖಿಡ್ಗರಾವಣನೆಂಬ ದೇವತೆಯನ್ನು ಮಕ್ಕಳ ರೋಗರುಜಿನಗಳ ಪರಿಹಾರಕ್ಕೆ ಪೂಜೆಮಾಡುವ ಪದ್ಧತಿಯಿದೆ. ಅವನ ಮೈಬಣ್ಣ ಕೆಂಪು. ಐದು ಮುಖಗಳು, ಒಂದೊಂದರಲ್ಲೂ ಮೂರು ಕಣ್ಣುಗಳು. ತಲೆಯ ಮೇಲೆ ಚಂದ್ರರೇಖೆ. ಕೆಂಪು ಬಟ್ಟೆಯನ್ನುಟ್ಟಿದ್ದಾನೆ. ಹತ್ತು ಕೈಗಳು; ಅವುಗಳಲ್ಲಿ ಘಂಟೆ, ತಲೆಯೋಡೆ, ಪಾಶ, ತರಿದ ತಲೆ, ಕೈಗತ್ತಿ, ಗುರಾಣಿ, ಖಟ್ವಾಂಗ, ಶೂಲ, ಡಮರು ಮತ್ತು ಅಭಯಮುದ್ರೆ.)

೭. ಭೈರವಾಷ್ಟಕ-ಚತುಃಷಷ್ಠಿಭೈರವರು -

(ಅರವತ್ತುನಾಲ್ಕು ಭೈರವರನ್ನು ಶಿವನ ಪರಿವಾರವೆಂದೋ ಶಿವನ ರೂಪಾಂತರಗಳೇ ಎಂದೋ ಪರಿಗಣಿಸುವುದಿದೆ. ಇವರಲ್ಲಿ ಎಂಟೆಂಟು ಮಂದಿ ಭೈರವರನ್ನು ಒಂದು ಗುಂಪಾಗಿ ಎಣಿಸಿದರೆ ಭೈರವಾಷ್ಟಕವಾಯಿತು; ಇಂಥ ಎಂಟು ಅಷ್ಟಕಗಳಲ್ಲಿ ಅರವತ್ತುನಾಲ್ಕು ಭೈರವರು ಸೇರಿಕೊಂಡಾಗ ಅದು ಅಷ್ಟಾಷ್ಟಕ. ಒಂದೊಂದು ಅಷ್ಟಕಕ್ಕೂ ವಿಶಿಷ್ಟವಾದ ಆಯುಧಗಳೂ, ವರ್ಣವೂ ಧ್ಯಾನಶ್ಲೋಕಗಳಲ್ಲಿ ಕಾಣಿಸಲ್ಪಟ್ಟಿವೆ. ರುದ್ರಯಾಮಳವನ್ನವಲಂಬಿಸಿ ಭೈರವಾಷ್ಟಕಗಳ ಮೂರ್ತಿಲಕ್ಷಣಗಳನ್ನು ಹೇಳಿ ಕಡೆಯಲ್ಲಿ ಚತುಃಷಷ್ಟಿಭೈರವರ ಹೆಸರುಗಳನ್ನೂ ಕೊಡಲಾಗಿದೆ.)

ಇಲ್ಲಿಗೆ ಶಿವನಿಧಿಯೆಂಬ ಮೂರನೆಯ ನಿಧಿಯು ಮುಗಿಯುತ್ತದೆ. ಇಲ್ಲಿ ಬಂದಿರುವ ಮತಪ್ರಕ್ರಿಯೆಯ ಧೋರಣೆ ಏಳನೆಯದಾದ ಶೈವನಿಧಿಯಲ್ಲಿ ಮುಂದುವರೆಯುತ್ತದೆ. ಈ ನಿಧಿಯು ಆರಂಭವಾಗುವುದು ಲಲಿತಾಗಮದ ಜ್ಞಾನಪಾದದಲ್ಲಿ ಶಿವಲಿಂಗಪ್ರಾದುರ್ಭಾವವೆಂಬ ಅಧ್ಯಾಯದಲ್ಲಿ ಬರುವ ಒಂದು ನೂರು ಹದಿಮೂರು ಸ್ವಯಂವ್ಯಕ್ತ ಶೈವಕ್ಷೇತ್ರಗಳ ಎಣಿಕೆಯಿಂದ. ಕೈಲಾಸದಲ್ಲಿ ಪರಶಿವ. ಸೂರ್ಯಬಿಂಬದಲ್ಲಿ ಸದಾಶಿವ, ವೈಕುಂಠದಲ್ಲಿ ನಾರಾಯಣೇಶ, ಪಾತಾಳದಲ್ಲಿ ಹಾಟಕೇಶ್ವರ, ಸೂರ್ಯಜ್ಯೋತಿಯಲ್ಲಿ ಸಿದ್ಧೇಶ ಇವು ಐದನ್ನು ಬಿಟ್ಟರೆ ಉಳಿದ ನೂರೆಂಟು ಕ್ಷೇತ್ರಗಳು ಭೂಮಿಯ ಮೇಲೆ ಇರುವಂಥವು. ಕೈವಲ್ಯಶೈಲದಲ್ಲಿ ಶ್ರೀಕಂಠ, ಹಿಮಾಲಯದಲ್ಲಿ ಕೇದಾರ, ಕಾಶಿಯಲ್ಲಿ ವಿಶ್ವನಾಥ, ಶ್ರೀಶೈಲದಲ್ಲಿ ಮಲ್ಲಿಕಾರ್ಜುನ ಹೀಗೆ ಪಟ್ಟಿ ಮುಂದರಿಯುತ್ತದೆ. ಈ ಪಟ್ಟಿಯಾದ ಮೇಲೆ 'ಪೃಥ್ವ್ಯಾದಿಪಂಚಭೂತತಂತ್ರಾದಿಲಿಂಗ'ಗಳ ಪಟ್ಟಿ ಬರುತ್ತದೆ. ಏಕಾಂಬರೇಶ್ವರದಲ್ಲಿ ಪೃಥ್ವೀಲಿಂಗ. ಜಂಬುನಾಥದಲ್ಲಿ ಜಲಲಿಂಗ, ಅರುಣಾಚಲದಲ್ಲಿ ಅಗ್ನಿಲಿಂಗ, ಕಾಳಹಸ್ತಿಗಿರಿಯಲ್ಲಿ ವಾಯುಲಿಂಗ, ಚಿದಂಬರದಲ್ಲಿ ಆಕಾಶಲಿಂಗ. ಪಂಚಲಿಂಗಗಳನ್ನು ಪೂಜೆಮಾಡಿದ್ದರ, ಸ್ಮರಿಸಿಕೊಂಡಿದ್ದರ ಫಲವನ್ನೂ ಹೇಳಲಾಗಿದೆ.

ಶಿವಾಲಯಗಳಲ್ಲಿ ಆಗಮೋಕ್ತವಾದ ಪೂಜೆ ನಡೆಯುವಾಗ ಒಂಬತ್ತು ಬೇರಗಳನ್ನು ಇರಿಸಿಕೊಳ್ಳುವ ವಾಡಿಕೆಯಿದೆ. ಗಣಪತಿ, ತ್ರಿಶೂಲ (ಅಸ್ತ್ರದೇವತೆ), ಉಮಾಮಹೇಶ್ವರ, ಚಂದ್ರಶೇಖರಮೂರ್ತಿ, ಸೋಮಾಸ್ಕಂದಮೂರ್ತಿ, ಗೌರಿ, ಚಂಡಿಕೇಶ್ವರ, ಕಿರಾತಮೂರ್ತಿ ಮತ್ತು ತಾಂಡವೇಶ್ವರ (ನಟರಾಜ) ಇವು ನವಬೇರಗಳೆಂದು ಸ್ಕಾಂದಪುರಾಣದ ಒಕ್ಕಣೆ. ಇದನ್ನು ಇಲ್ಲಿ ಉದ್ಧರಿಸಿಕೊಳ್ಳಲಾಗಿದೆ.

ಮುಂದೆ ಶಿವರಹಸ್ಯದಿಂದ ಲಿಂಗಭೇದಗಳು, ಅವುಗಳನ್ನು ಪೂಜೆಮಾಡುವ ಕ್ರಮ ಮತ್ತು ಪೂಜಾಫಲ ಇವುಗಳನ್ನು ಹೇಳಿ, ಶಿವಲಿಂಗಾರ್ಚನೆಯ ಆವಶ್ಯಕತೆಯನ್ನು ವಿವರಿಸಿದ್ದಾರೆ. ಅದೇ ಗ್ರಂಥದಿಂದ ಪಾಷಾಣ, ಸ್ಫಟಿಕ, ಪದ್ಮರಾಗ, ಕಾಶ್ಮೀರ, ಪುಷ್ಯರಾಗ, ಇಂದ್ರನೀಲ, ಗೋಮೇದ, ಮುಂತಾದ ದ್ರವ್ಯಗಳಿಂದ ಶಿವಲಿಂಗನಿರ್ಮಾಣವನ್ನೂ, ಆ ದ್ರವ್ಯಗಳಲ್ಲಿ ಉತ್ತರೋತ್ತರವಾಗಿ ಇರುವ ಉತ್ಕರ್ಷೆಯನ್ನೂ ಸೂಚಿಸಲಾಗಿದೆ. ಕೃತಯುಗದಲ್ಲಿ ಮಣಿಮಯವಾದ ಲಿಂಗವೂ, ತ್ರೇತಾಯುಗದಲ್ಲಿ ಬಂಗಾರದ ಲಿಂಗವೂ, ದ್ವಾಪರಯುಗದಲ್ಲಿ ಪಾದರಸದ ಲಿಂಗವೂ, ಕಲಿಯುಗದಲ್ಲಿ ಮಣ್ಣಿನಿಂದ ಮಾಡಿದ ಲಿಂಗವೂ ಶ್ರೇಷ್ಠವೆಂತೆ. ಪಾರ್ಥಿವಲಿಂಗದ, ಎಂದರೆ ಮಣ್ಣಿನಿಂದ ಮಾಡಿದ ಲಿಂಗದ ಉತ್ತಮತ್ವವನ್ನು ಸೂಚಿಸುವ ಐದು ಶ್ಲೋಕಗಳಿವೆ.

ಅನಂತರ ಶಿವನಿರ್ಮಾಲ್ಯ, ಲಿಂಗನಿರ್ಮಾಣ, ಬಾಣಲಿಂಗಲಕ್ಷಣ, ಒಂಬತ್ತು ಬಗೆಯ ಚರಲಿಂಗಗಳು, ರಸಲಿಂಗ, ರುದ್ರಾಷ್ಟಕದಾನಗಳ

ವಿಚಾರಗಳನ್ನು ಹೇಳಿದ್ದಾರೆ. ಇಷ್ಟಾದಮೇಲೆ ಸ್ಕಾಂದಪುರಾಣದಿಂದ ಮೈಲಾರಲಿಂಗ ಮತ್ತು ಮಾಲಾಚೀ (ಮ್ಹಾಳಚಿ) ದೇವಿಯರ ಸ್ತೋತ್ರಗಳ ಪೂರ್ಣಪಾಠಗಳನ್ನು ಕೊಟ್ಟಿದ್ದಾರೆ.

ಶಿವರಹಸ್ಯದಿಂದ ವಿಭೂತಿಯೇ ಮೊದಲಾದ ಶೈವವಿವರಗಳ ವಿಸ್ತಾರವಾದ ನಿರೂಪಣೆಗಳಿವೆ: ಭಸ್ಮೋತ್ಪತ್ತಿ, ಭಸ್ಮಧಾರಣೆ, ಭಸಭೇದ, ಭಸ್ಮಸ್ನಾನ, ಭಸ್ಮತ್ರಿಪುಂಡ್ರ ಮಹಿಮೆ ಇತ್ಯಾದಿ. ಮುಂದೆ ರುದ್ರಾಕ್ಷಿಯ ಉತ್ಪತ್ತಿ, ಮುಖಿಸಂಖ್ಯಾಭೇದ, ಧಾರಣಸ್ಥಾನ, ಮಾಲೆ, ಧಾರಣಮಹಿಮೆ, ಜಪಾದಿಗಳಲ್ಲಿ ಬಳಕೆ ಮುಂತಾದ ವಿವರಗಳನ್ನು ಕೊಡಲಾಗಿದೆ. ಹಾಗೆಯೇ ಶಿವಪೂಜೆಗೆ ಪ್ರಶಸ್ತವಾದ ಬಿಲ್ವಪತ್ರೆಯ ವಿಚಾರವೂ ವಿಸ್ತಾರವಾಗಿ ಬಂದಿದೆ.

ಶೈವಸಂಸ್ಕೃತಿಯ ಮಹಾಪುರುಷರೆಂದು ಪ್ರಸಿದ್ಧರಾದ ಅರವತ್ತು ಮೂವರು ಶೈವಸಂತರ ಹೆಸರುಗಳು, ಜಾತಿ, ಮೂರ್ತಿಲಕ್ಷಣಗಳನ್ನು ಕೊಟ್ಟಿದ್ದಾರೆ. ಈ ಶೈವಸಂತರನ್ನು ಪುರಾತನರೆಂದೂ ನಾಯನ್ಮಾರರೆಂದೂ ಕರೆಯುವುದು ವಾಡಿಕೆ. ತಮಿಳುನಾಡಿನಲ್ಲಿ ಶೈವಾಗಮದ ಪ್ರಭಾವದಿಂದ ಶಿವಾಲಯಗಳಲ್ಲಿ ಈ ಸಂತರ ಪ್ರತಿಮೆಗಳೂ, ಅವರ ಅವತಾರದಿನದ ಆಚರಣೆಯೂ, ಅವರ ತಮಿಳು ಹಾಡುಗಳ ಅಭ್ಯಾಸವೂ ಬಳಕೆಗೆ ಬಂದುವು. ಬಹುಮಟ್ಟಿಗೆ ಅವರೆಲ್ಲ ಚೋಳ, ಪಾಂಡ್ಯ ಮತ್ತು ಚೇರದೇಶಗಳವರು. ಇವರನ್ನು ಗೌರವಿಸುವ ಪದ್ಧತಿ ಕರ್ನಾಟಕದಲ್ಲಿಯೂ ಮುಮ್ಮಡಿಯವರ ಕಾಲದಲ್ಲೇ ಬೇರೂರಿತು. ಈ ಅರಸರು ನಂಜನಗೂಡಿನ ಶ್ರೀಕಂಠೇಶ್ವರದೇವಾಲಯದಲ್ಲಿಯೂ ಚಾಮರಾಜನಗರದ ಚಾಮರಾಜೇಶ್ವರ ದೇವಾಲಯದಲ್ಲಿಯೂ ಈ ಶೈವಸಂತರ ಶಿಲಾಪುತ್ಥಳಿಗಳನ್ನು ಮಾಡಿಸಿಟ್ಟರು.

ಇಲ್ಲಿ ಇವರ ಉಲ್ಲೇಖಕ್ಕೆ ಮೊದಲು

'ಪುರಾತ(ನ)ರು ಸ್ಕಾಂದಪುರಾಣ ವೀರಮಾಹೇಶ್ವರ ಕಾಂಡದಲ್ಲಿ
ಭಕ್ತವಿಲಾಸದೊಳ್ ಹೇಳಿಯಿರುವ ಭಕ್ತರ ಲಕ್ಷಣ -
ನಾಮಧೇಯವರ್ಣಾಶ್ರಮದ ದ(ಧ)ರ್ಮಸಹಿತವಾಗಿ ಹೇಳಿಯಿರುವ
ಮೇರೆ॥'

ಎಂದು ಒಕ್ಕಣೆಯಿದೆ. ಎಣಿಕೆ ಅರವತ್ತುಮೂವರು ಪುರಾತನರೆಂಬುದು ವಾಡಿಕೆಯಾದರೂ ಇಲ್ಲಿ ಅರವತ್ತುನಾಲ್ಕು ಪುರಾತನರ ಉಲ್ಲೇಖವಿದೆ; ಕಡೆಯವರು ಗೀತಾನಂದರೆಂಬುವರು. ಮೊದಲನೆಯವರು ಸುಂದರಮೂರ್ತಿನಾಯನಾರರು. ಎರಡನೆಯವರು ಅಪ್ಪರ್

'ಸುಂದರಮೂರ್ತಿ ಬ್ರಾಹ್ಮಣ ಅಂಜಲಿಬಂಧ ಉಭಯಪಾರ್ಶ್ವದಲ್ಲು
ನಾಗಬೆತ್ತ ಪಾರ್ಶ್ವಧ್ವಯದಲ್ಲಿ ಕಮಲಿನೀ ನಂದಿನೀರು ಪದ್ಮ-
ಹಸ್ತರಾಗಿರುವರು॥೧॥'

'ಅಪ್ಪರು ಕುಲಾಲರು ಅಂಜಲಿಬಂಧ ಯಡಗೈಲಿ ಗರ್ಘಣೆ
ಹಲಗೆ ಹಿಡಿದಿರುವರು॥೨॥'

ಹೀಗೆ ಒಬ್ಬೊಬ್ಬ ಪುರಾತನರಿಗೂ ಹೆಸರು, ಜಾತಿ, ಮೂರ್ತಿಲಕ್ಷಣಗಳನ್ನು ಕ್ರಮವಾಗಿ ಕಾಣಿಸಿದ್ದಾರೆ. ಕಡೆಯವರಾದ ಗೀತಾನಂದರ ವಿಚಾರವಾಗಿ -

'ಗೀತಾನಂದರು ಬ್ರಾಹ್ಮಣರು ಅಂಜಲಿಬಂಧ ಜಟಾಮಕುಟ।
ಯಡಗಡೆ ವೀಣೆ॥೬॥'

ಇದಾದನಂತರ ನನ್ನಲ್ಲಿರುವ ಮಾತೃಕೆಯಲ್ಲಿ 'ಇತಿಶ್ರೀಮನ್ಮಹೀಶೂರ ಮಹಾಸಂಸ್ಥಾನಮಧ್ಯದೇ ದೀಪ್ಯಮಾನ.....' ಇತ್ಯಾದಿಯಾಗಿ ಸಾಂಪ್ರದಾಯಿಕ ಪುಷ್ಪಿಕೆಯಿದ್ದು 'ಶ್ರೀತತ್ತ್ವನಿಧ್ಯಾಖ್ಯಿಗ್ರಂಥೇ ಶಿವಕ್ಷೇತ್ರಬಿಲ್ವಾದಿಮಾಹಾತ್ಮ್ಯಕಥನಂ ನಾಮ ಸಪ್ತಮೋ ನಿಧಿಸ್ಸಂಪೂರ್ಣಃ' ಎಂದು ಮುಗಿಯುತ್ತದೆ. ಆದರೆ ಶ್ರೀತತ್ತ್ವನಿಧಿಯ ದೇವನಾಗರೀಲಿಪಿಯ ಪುಸ್ತಕದಲ್ಲಿ (ಖೇಮರಾಜ ಶ್ರೀಕೃಷ್ಣದಾಸ, ಶ್ರೀವೆಂಕಟೇಶ್ವರ ಮುದ್ರಾಲಯ, ಮುಂಬಯಿ) ಇನ್ನೂ ಕೆಲವು ವಿವರಗಳನಂತರ ಪುಷ್ಪಿಕೆ ಬರುತ್ತದೆ. ಈ ವಿವರಗಳಲ್ಲಿ ಮುಖ್ಯವಾದುವು ಪಂಚಾಯತನ ಪೂಜೆಯನ್ನು ಕುರಿತ ವಿವರಗಳು.

ಪಂಚಾಯತನಪೂಜೆಯು ನಮ್ಮ ದೇಶದಲ್ಲಿ ನಡುಯುಗದಿಂದ ಪ್ರಚಲಿತವಾಗಿದೆಯಷ್ಟೆ. ಪಂಚಾಯತನವೆಂದರೆ ಐದು ಪಂಥಗಳು ಕೂಡಿಕೊಂಡದ್ದು. ಶೈವ, ವೈಷ್ಣವ, ಶಾಕ್ತ, ಸೌರ ಮತ್ತು ಗಾಣಪತ್ಯ ಎಂಬುವೇ ಐದು ಪಂಥಗಳು. ಈ ಪಂಥಗಳ ಆರಾಧ್ಯದೈವಗಳು ಶಿವ, ವಿಷ್ಣು, ದೇವಿ, ಸೂರ್ಯ ಮತ್ತು ಗಣಪತಿ. ಈ ಐದು ದೇವತೆಗಳನ್ನು ಒಂದೇ ವೇದಿಕೆಯ ಮೇಲಿರಿಸಿಕೊಳ್ಳುವಾಗ ನಟ್ಟನಡುವೆ ಇರಿಸುವ ದೈವವೇ ಪ್ರಮುಖವಾದುದು. ಇದು ಶಿವಲಿಂಗವಾದರೆ ಶಿವಪಂಚಾಯತನವೆನಿಸಿಕೊಳ್ಳುತ್ತದೆ, ವಿಷ್ಣುವಾದರೆ ವಿಷ್ಣುಪಂಚಾಯತನ, ಗಣಪತಿಯಾದರೆ ಗಣಪತಿಪಂಚಾಯತನ ಹೀಗೆ. ಉಳಿದ ನಾಲ್ಕು ದಿಕ್ಕುಗಳಲ್ಲೋ ವಿದಿಕ್ಕು(ಕೋಣ)ಗಳಲ್ಲೋ ಇತರ ನಾಲ್ಕು ದೇವತೆಗಳ ಬಿಂಬಗಳನ್ನು ಇರಿಸಿಕೊಳ್ಳುತ್ತಾರೆ. ಬಿಂಬಗಳ ಬದಲಿಗೆ ಶಿವನನ್ನು ಪ್ರತಿನಿಧಿಸಲು ಬಾಣಲಿಂಗ, ವಿಷ್ಣುವಿನ ಪ್ರತೀಕವಾಗಿ ಸಾಲಿಗ್ರಾಮ, ಶಕ್ತಿಯನ್ನು ಸೂಚಿಸಲು ಲೋಹಶಿಲೆ, ಗಣಪತಿಯನ್ನು ಸಂಕೇತಿಸಿ ಶೋಣಶಿಲೆ, ಸೂರ್ಯನನ್ನು ಸಂಕೇತಿಸಲು ಮಣಿ ಇವನ್ನು ಇರಿಸಿಕೊಳ್ಳುವುದೂ ಉಂಟು.

ನನ್ನ ಹಸ್ತಪ್ರತಿಯಲ್ಲಿ ಪಂಚಾಯತನಪೂಜೆಯ ವಿಚಾರವು 'ಆಗಮನಿಧಿ'ಯೆಂಬ ಎಂಟನೆಯ ನಿಧಿಯಲ್ಲಿ ವೈಖಾನಸಾಗಮವನ್ನು ಹೇಳಿದಮೇಲೆ 'ಅಥ ಪಂಚಾಯತನಪೂಜಾಕ್ರಮಃ' ಎಂದು ಆರಂಭವಾಗುತ್ತದೆ. ಸದಾಚಾರಸಂಗ್ರಹವೆಂಬ ಗ್ರಂಥದಿಂದ

'ಆದಿತ್ಯಮಂಬಿಕಾಂ ವಿಷ್ಣುಂ ಗಣನಾಥಂ ಮಹೇಶ್ವರಂ।
ಬ್ರಾಹಾಹ್ಮಣಃ ಪೂಜಯೇತ್ಪಂಚ ಪಂಚಯಜ್ಞ ಪರಾಯಣಃ॥'

ಎಂಬ ಶ್ಲೋಕವನ್ನುದ್ಧರಿಸಿ ಬ್ರಾಹಾಹ್ಮಣರ ನಿತ್ಯಕರ್ಮವಾದ ಪಂಚಯಜ್ಞ (ಎಂದರೆ ಬ್ರಹ್ಮಯಜ್ಞ, ದೇವಯಜ್ಞ, ಪಿತೃಯಜ್ಞ,

ಮನುಷ್ಯಯಜ್ಞ, ಭೂತಯಜ್ಞಗಳು) ಮತ್ತು ಈ ಪಂಚಾಯತನ ಇವೆರಡರ ನಡುವೆ ಇರುವ ನಂಟನ್ನು ಹೇಳಲಾಗಿದೆ. ಇದಕ್ಕೆ ಆಧಾರ ಶೈವರತ್ನಾಕರವೆಂಬ ಗ್ರಂಥ-

'ಸಂಧ್ಯಾಂಬಿಕಾ ದೇವಹವಿರ್ದಿನಾಧಿಪೋ
ಪಿತುರ್ಮನುಷ್ಯಸ್ಯ ಚ ವಿಷ್ಣುರೀರಿತಃ।
ಬ್ರಹ್ಮೇಶ್ವರೌ ಭೂತಬಲಿರ್ಗಣಾಧಿಪೋ
ಯಜ್ಞೇಶ್ವರಾಃ ಸ್ಯುರ್ಯಜನೀಯ್ಯ ದೇವತಾಃ॥'

ಈ ಐದು ದೇವತೆಗಳೂ ಯಜ್ಞೇಶ್ವರರೇ ಮುಂದೆ ಐದು ದೇವತಾಪಂಚಾಯತನಗಳನ್ನು ಹೇಳಿ ನಡುವೆ ಆಯಾ ಪ್ರಧಾನದೇವತೆಯೂ, ಅದು ಮುಖಮಾಡಿರುವ ದಿಕ್ಕನ್ನೇ ಪೂರ್ವವೆಂದು ಬಗೆದು ಈಶಾನ್ಯಾದಿ ಕ್ರಮದಲ್ಲಿ ಇತರ ದೇವತೆಗಳೂ ಇರಬೇಕೆಂದು ಸೂಚಿಸಲಾಗಿದೆ

'ಮಧ್ಯಸ್ಥಿತಸ್ಯ ದೇವಸ್ಯ ದೇವಾ ಈಶಾನ್ಯತಶ್ಶುಭಾಃ।
ದೇವಸ್ಯ ಮುಖಮಾರಭ್ಯ ದಿಶಂ ಪ್ರಾಚೀಂ ಪ್ರಕಲ್ಪಯೇತ್॥'

ಗ್ರಂಥದಲ್ಲಿ ಐದು ಪಂಚಾಯುತನಗಳನ್ನೂ ಹೀಗೆ ಕಾಣಿಸಿದ್ದಾರೆ

ಮೇಲೆ ಹೇಳಿರುವುದು ವೈದಿಕಪಂಚಾಯತನವೆಂಬುದು; ಮುಂದೆ ಹೇಳಿರುವುದು ತಾಂತ್ರಿಕ ಪಂಚಾಯತನ. ಇದನ್ನು ಕಾಳಹಸ್ತಿವಿಲಾಸದ ಪಂಚಾಯತನಕಲ್ಪದಿಂದ ಸಂಗ್ರಹಿಸಿದ್ದಾರೆ.

'ಶೈವಪಂಚಾಯತನಕ್ಕೆ॥ ಪಾರ್ವತೀ ಪರಮೇಶಾನೌ
ಗಣೇಶಸ್ಕಂದನಂದಿನಃ॥
ವಿಷ್ಣುಪಂಚಾಯತನಕ್ಕೆ॥ ಶ್ರೀಭೂದೇವ್ಯೌ
ಮಹಾವಿಷ್ಣುರ್ವಿಷ್ವಕ್ಸೇನಃ ಖಗೇಶ್ವರಃ॥
ದೇವೀಪಂಚಾಯತನಕ್ಕೆ॥ ಕಾಳೀ ದುರ್ಗಾಭವಾನೀ ಚ ವಿಷ್ಣುಶ್ಚೈವ
ಮನೋನ್ಮನೀ॥
ಸೂರ್ಯಪಂಚಾಯತನಕ್ಕೆ॥ ಭಾನು ಛಾ(ಚ್ಛಾ)ಯಾ ತಥಾ ದಂಡಸ್ತಥಾ
ಮಾಠರಪಿಂಗಳೌ॥
ಗಣೇಶಪಂಚಾಯತನಕ್ಕೆ॥ ಗಣೇಶೋ ವಲ್ಲಭಾ ಯಕ್ಷಃ
ಕುಂಡೋದರ ಮಹೋದರೌ॥'

ಇದೇ ಪ್ರಕರಣದ ಕೊನೆಯಲ್ಲಿ 'ಗೌರೀಪಂಚಾಯತನ'ವೆಂಬುದನ್ನು ಹೇಳುತ್ತ 'ಗೌರೀಪಂಚಾಯತನವೇನೆಂದರೆ' ಎಂಬ ಒಕ್ಕಣೆಯೊಡನೆ ಈ ಕ್ರಮವನ್ನು ಕಾಣಿಸಿದ್ದಾರೆ-

ನಾಲ್ಕನೆಯ ಪರಿಚ್ಛೇದ

ಬ್ರಹ್ಮ, ಆಗಮ ನಿಧಿಗಳು

- ಪ್ರವೇಶ -

'ಶ್ರೀಕೃಷ್ಣರಾಜಮಹಾರಾಜ ಕಂಠೀರವ ವಿರಚಿತ ಶ್ರೀತತ್ತ್ವನಿಧ್ಯಾಖ್ಯ ಗ್ರಂಥ್ಥಾಂ(ಥಾ)ಂತರ್ವರ್ತಿ ಚತುರ್ಥೋ ಬ್ರಹ್ಮನಿಧಿಃ ಪ್ರಾರಭ್ಯತೇ' ಎಂಬ ಪ್ರಸ್ತಾವದಿಂದ ಆರಂಭವಾಗುವ ಈ ನಿಧಿಯಲ್ಲಿ ಬ್ರಹ್ಮನ ವಿಚಾರವನ್ನು ಹೇಳಿರುವುದೇನೋ ಸರಿಯೆ. ತ್ರಿಮೂರ್ತಿಗಳಲ್ಲಿ ವಿಷ್ಣು ಮತ್ತು ಶಿವ ಇವರಿಗೆ ಪ್ರತ್ಯೇಕವಾದ ನಿಧಿಗಳೇ ಇವೆ; ಆ ದೇವತೆಗಳ ಅವತಾರಗಳನ್ನೂ ರೂಪಗಳನ್ನೂ ವಿವರಗಳನ್ನೂ ಹೇಳುವುದಲ್ಲದೆ ವೈಷ್ಣವ, ಶೈವನಿಧಿಗಳಲ್ಲಿ ಈ ಇಬ್ಬರು ದೇವತೆಗಳು ಪೂಜೆಗೊಳ್ಳುವ ಪಂಥಗಳ ಪ್ರಕ್ರಿಯೆಗಳಾಗಲಿ ಇಲ್ಲ. ಬ್ರಹ್ಮನು ಪುಷ್ಕರಕ್ಷೇತ್ರವೊಂದನ್ನು ಬಿಟ್ಟರೆ ಬೇರೆಲ್ಲಿಯೂ ಸ್ವತಂತ್ರವಾಗಿ ಪೂಜೆಗೊಳ್ಳುವ ಭಾಗ್ಯವನ್ನು ಪಡೆದುಕೊಂಡಿಲ್ಲ. ಆದರೆ 'ತ್ರೈಪುರುಷ' ಕಲ್ಪನೆಯು ರೂಢಮೂಲವಾಗಿರುವುದರಿಂದ ಬ್ರಹ್ಮನನ್ನು ಕೈಬಿಡುವಹಾಗಿಲ್ಲ. ಬ್ರಹ್ಮನಿಗೊಂದು ನಿಧಿಯನ್ನು ಮೀಸಲಾಗಿರಿಸಿರುವುದು ನ್ಯಾಯವೇ.

ಬ್ರಹ್ಮನು ಪ್ರಸಿದ್ಧನಾಗಿರುವುದು ಸೃಷ್ಟಿಕರ್ತನೆಂದು. ತ್ರೈಪುರುಷ ಕಲ್ಪನೆಯಿರುವುದೇ ಸೃಷ್ಟಿ, ಸ್ಥಿತಿ, ಲಯ ಎಂಬ ವಿಭಾಗವನ್ನವಲಂಬಿಸಿ. ಆದ್ದರಿಂದ ಬ್ರಹ್ಮನ ವಿಚಾರವನ್ನು ಹೇಳಲು ತೊಡಗಿದಾಗ ಸೃಷ್ಟಿಯ ಸಂದರ್ಭದಲ್ಲಿ ಸೇರಿಕೊಂಡು ಬಂದ ನವಪ್ರಜಾಪತಿಗಳು, ಸಪ್ತರ್ಷಿಗಳು, ಪಂಚಭೂತಗಳು, ಅಷ್ಟದಿಕ್ಪಾಲಕರು, ಅಷ್ಟವಸುಗಳು, ಸಪ್ತಮರುತ್ತುಗಳು, ಸಪ್ತಸಮುದ್ರಗಳು, ಚತುರ್ದಶಮನುಗಳು, ಇವೆಲ್ಲ ಗಮನಕ್ಕೆ ಬಾರದೆ ಇರುವುದು ಹೇಗೆ? ವಿಷ್ಣುವಿಗೆ ವ್ಯೂಹಗಳೂ ಅವತಾರಗಳೂ ಇದ್ದಂತೆ, ಶಿವನಿಗೆ ಲೀಲಾಮೂರ್ತಿಗಳೂ ಪ್ರಕಾರಗಳೂ ಇದ್ದಂತೆ, ಬ್ರಹ್ಮನ ರೂಪಾಂತರಗಳೇ ಇವೆಲ್ಲ ಎಂದರೂ ತಪ್ಪಾಗದು. ಇವೆಲ್ಲ ವಿವರಗಳಿಗೂ ಮೂರ್ತರೂಪವನ್ನು ಒದಗಿಸಿರುವುದು ಇಲ್ಲಿನ ಸ್ವಾರಸ್ಯ.

ಬ್ರಹ್ಮನ ಉಸಿರಾಟವೇ ವೇದವೆಂದು ಕಲ್ಪನೆಯಿಲ್ಲವೆ? 'ಯಸ್ಯ ನಿಃಶ್ವಸಿತಂ ವೇದಾಃ'. ಬ್ರಹ್ಮನ ನಾಲ್ಕು ಮುಖಗಳು ನಾಲ್ಕು ವೇದಗಳನ್ನು ಪ್ರತಿನಿಧಿಸುತ್ತವೆ; ಬ್ರಹ್ಮನ ಬಾಯಿಂದ ಹೊರಹೊಮ್ಮಿಬಂದುದೇ ವೇದವಲ್ಲವೆ? ಬ್ರಹ್ಮವೆಂಬ ಮಾತಿಗೆ ವೇದವೆಂದೂ ಒಂದರ್ಥವಿದೆ; ವೇದದ ವಿನಿಯೋಗವು ಯಜ್ಞದಲ್ಲಾಗುವುದರಿಂದ ಯಜ್ಞವೇ ವೇದವೆನಿಸಿಕೊಳ್ಳುತ್ತದೆ. ಯಜ್ಞವನ್ನು ಕುರಿತ ವೇದಭಾಗವೇ ಬ್ರಾಹ್ಮಣ; ವೇದದ ತಾತ್ಪರ್ಯವನ್ನು ಹುಡುಕಲು ಹೊರಟವನೂ ಬ್ರಾಹ್ಮಣನೇ. ಹೀಗಾಗಿ ಬ್ರಹ್ಮನಿಗೂ ವೇದಗಳಿಗೂ ನಂಟು ಸಹಜವಾಗಿಯೇ ಸಿದ್ಧವಾಗಿದೆ. ಆದ್ದರಿಂದ ಬ್ರಹ್ಮನಿಧಿಯಲ್ಲಿ ನಾಲ್ಕು ವೇದಗಳೂ, ಉಪವೇದಗಳೂ, ಆರು ವೇದಾಂಗಗಳೂ, ಅವನ್ನವಲಂಬಿಸಿ ಬೆಳೆದು ಬಂದ ದರ್ಶನಗಳೂ ಸೇರಿಕೊಂಡಿವೆ. ಇವೆಲ್ಲಕ್ಕೂ ರೂಪನಿರ್ಣಯ ಮಾಡಿರುವುದು ಸಾಹಸದ ಮಾತೆನ್ನಬಹುದಾದರೂ ಸ್ವಾರಸ್ಯವಂತೂ ಇದೆಯಷ್ಟೆ?

ಬ್ರಹ್ಮನಿಧಿಯಲ್ಲಿ ಬಂದಿರುವ ವಿಚಾರ ಮುಂದರಿಯುವುದು ಎಂಟನೆಯದಾದ ಆಗಮನಿಧಿಯಲ್ಲಿ. ಆಗಮವೆಂದರೆ ದೇವತೆಗಳ ಆಲಯಾರ್ಚನೆಗೆ ಉಪಯುಕ್ತವಾದ ಶಾಸ್ತ್ರವಿಶೇಷ. ಪೂಜೆಯಲ್ಲಿ ಗೃಹಾರ್ಚಾ (ಮನೆಯಲ್ಲಿ ಮಾಡುವ ಪೂಜೆ) ಮತ್ತು ಆಲಯಾರ್ಚಾ (ಗುಡಿಗಳಲ್ಲಿ ಮೂರ್ತಿಪ್ರತಿಷ್ಠೆಮಾಡಿ ತ್ರಿಕಾಲ ಅಥವಾ ಷಟ್ಕಾಲಪೂಜೆ, ಉತ್ಸವಗಳು ಮೊದಲಾದುವನ್ನು ಆರ್ಚಕರು ಪರಾರ್ಥವಾಗಿ ಮಾಡುವುದು) ಎಂಬ ವಿಭಾಗವಿದೆಯಷ್ಟೆ? ಆಗಮ ಗ್ರಂಥಗಳು, ಆಗಮಭೇದ, ಆಗಮದೇವತಾಸ್ವರೂಪ ಇವುಗಳನ್ನು ಈ ನಿಧಿಯಲ್ಲಿ ಚರ್ಚಿಸಿರುವುದೇನೋ ದಿಟ. ಆದರೆ ಆಗಮನಿಧಿಯಲ್ಲಿ ಇಷ್ಟೇ ಅಲ್ಲದೆ ವೇದಗಳನ್ನು ಕುರಿತಂತೆ ವಿವೇಚನೆ ಮತ್ತೆ ಇಲ್ಲಿ ಬಂದಿದೆ. ವೇದಗಳು, ಉಪವೇದಗಳು, ವೇದಾಂಗಗಳು, ವೇದಗಳಿಂದ ಹುಟ್ಟಿಕೊಂಡ ಶಾಸ್ತ್ರಗಳು, ಉಪಶಾಸ್ತ್ರಗಳು ಇವೆಲ್ಲ ವಿವರಗಳನ್ನು ಈ ನಿಧಿಯಲ್ಲಿ ಮತ್ತೆ ಕಾಣುತ್ತೇವೆ. ಹದಿನೆಂಟು ಮಹಾಪುರಾಣಗಳ ಸ್ವರೂಪ, ಪರಿಮಿತಿ, ವಿಷಯವಿಭಾಗಗಳನ್ನೂ; ಮಹಾಭಾರತ, ಭಾಗವತ, ರಾಮಾಯಣಾದಿ ಗ್ರಂಥಗಳ ವಿಭಾಗಗಳನ್ನೂ; ಕಾವ್ಯ, ಇತಿಹಾಸ, ಕಲ್ಪ, ಸ್ಮೃತಿ, ಉಪಸ್ಮೃತಿಗಳನ್ನೂ; ವೈದಿಕ ಮತ್ತು ಅವೈದಿಕತಂತ್ರಗಳನ್ನೂ ಇಲ್ಲಿ ಎಣಿಕೆಮಾಡಿದ್ದಾರೆ.

ಆ ಕಾಲದಲ್ಲಿ ನಿರ್ದಿಷ್ಟವಾಗಿದ್ದ ಸಾಂಪ್ರದಾಯಿಕ ವಾಙ್ಮಯದ ಸ್ವರೂಪವನ್ನೂ ವ್ಯಾಪ್ತಿಯನ್ನೂ ಅರಿತುಕೊಳ್ಳಲು ಆಗಮನಿಧಿಯು ನೆರವಾಗುತ್ತದೆ. ಇದಕ್ಕೆ ಹಿನ್ನೆಲೆಯನ್ನು ಬ್ರಹ್ಮನಿಧಿಯು ಒದಗಿಸುತ್ತದೆ. ಇವೆರಡೂ ನಿಧಿಗಳನ್ನು ಇಲ್ಲಿ ಒಟ್ಟಿಗೆ ಪರಿಶೀಲಿಸಿರುವುದು ಈ ಕಾರಣಕ್ಕಾಗಿ. ಮುಮ್ಮಡಿಯವರು ಸಂಪ್ರದಾಯದಲ್ಲಿ ಶ್ರದ್ಧೆಯಿದ್ದವರು; ಶ್ರದ್ಧಾವಂತರಾದ ಪಂಡಿತರ ಸಹಕಾರವನ್ನು ಪಡೆದುಕೊಂಡೇ ಈ ಗ್ರಂಥವನ್ನು ರಚಿಸಿರಬೇಕು. ಆಗಮನಿಧಿಯ ಹರವಿನಲ್ಲಿ ಅವೈದಿಕವೆಂಬ ತಂತ್ರಗ್ರಂಥಗಳನ್ನು ಕಾಣಬಹುದು. ವೈದಿಕ ಸಂಪ್ರದಾಯದೊಂದಿಗೆ ಶ್ರೀವಿದ್ಯೆಯೇ ಮೊದಲಾದ ತಾಂತ್ರಿಕಪ್ರಕ್ರಿಯೆಗಳು ಸೇರಿಕೊಂಡು ಬಂದಿದ್ದ

ಕಾಲ ಅದು. ಆಗ ಶಾಕ್ತಪ್ರಕ್ರಿಯೆಗಳು ಆಲಯಾರ್ಚನೆ, ಗೃಹಾರ್ಚನೆಗಳಲ್ಲಿ ಹೊಂದಿಕೊಂಡುಬಂದಿದ್ದವು. ಇದು ಈ ಕಾಲದಲ್ಲೂ ಸಾಗಿಬಂದಿದೆಯಷ್ಟೆ?

ಆದರೆ ಆಗಮನಿಧಿಯಲ್ಲಿ ಜೈನ, ಬೌದ್ಧಶಾಸ್ತ್ರಗಳಾಗಲಿ ಪ್ರಕ್ರಿಯೆಗಳಾಗಲಿ ಸೇರಿಲ್ಲವೆಂಬುದು ಸೋಜಿಗವೇ. ಕನ್ನಡಸೀಮೆಯಲ್ಲಿ ಬೌದ್ಧಪಂಥಗಳು ಅಷ್ಟಾಗಿ ಇರಲಿಲ್ಲವೆಂದರೂ, ಶಾಸ್ತ್ರಪ್ರಕ್ರಿಯೆಯಲ್ಲಿ ಬೌದ್ಧದರ್ಶನವು ಸೇರಿಬಂದಿದೆಯಲ್ಲವೆ? ಮಾಧವರ 'ಸರ್ವದರ್ಶನಸಂಗ್ರಹ' ದಲ್ಲಿಯೂ ಸೌಗತದರ್ಶನದ ಸೇರ್ಪಡೆಯಾಗಿದೆ. ಇದು ಹೋಗಲಿ, ಜೈನಪಂಥಗಳಂತೂ ಕರ್ನಾಟಕದಲ್ಲಿ ತುಂಬ ಹಿಂದಿನ ಕಾಲದಿಂದಲೂ ಊರ್ಜಿತವಾಗಿವೆಯಷ್ಟೆ? ಇಂದಿಗೂ ಅವುಗಳ ಪ್ರಾಬಲ್ಯವೇನು ಕುಗ್ಗಿಲ್ಲ. ಮುಮ್ಮಡಿಯವರ ಕಾಲದಲ್ಲೂ ಜೈನಮತವು ಹರಡಿಕೊಂಡೇ ಇದ್ದಿತು. ಹಿಂದಿನ ಅರಸೊತ್ತಿಗೆಗಳು ಜೈನಧರ್ಮಕ್ಕೆ ಉದಾರವಾದ ಆಶ್ರಯವನ್ನು ನೀಡಿದ್ದವು. ಮೈಸೂರಿನ ಒಡೆಯರು ಕೂಡ ಈ ಧರ್ಮವನ್ನು ಪುರಸ್ಕರಿಸಿದ್ದುದುಂಟು. ಇಷ್ಟಾದರೂ ಮುಮ್ಮಡಿಯವರು ಜಿನಬಿಂಬಗಳ ವಿಚಾರವಾಗಿ ಆಗಲಿ, ಜೈನಾಗಮದ ವಿಚಾರವಾಗಿ ಆಗಲಿ, ಜೈನಧರ್ಮದ ವಿಚಾರವಾಗಿ ಆಗಲಿ, ಏನೊಂದೂ ಹೇಳದಿರುವುದರ ಕಾರಣ ತಿಳಿಯುವುದಿಲ್ಲ.

ಈ ಕೊರತೆಯೊಂದನ್ನು ಬಿಟ್ಟರೆ ಉಳಿದಂತೆ ಪರಂಪರಾಗತವಾದ ವಿದ್ಯೆಯ ಪರಿಚಯವು ಈ ಎರಡು ನಿಧಿಗಳಿಂದ ಸುಮಾರಾಗಿ ಸಮಗ್ರವಾಗಿಯೇ ಆಗಿದೆಯೆನ್ನಬಹುದು. ಆದರೆ ವಿದ್ಯೆಯೆಂದರೆ ಇಲ್ಲಿ ಬಹುಮಟ್ಟಿಗೆ ಅಧ್ಯಾತ್ಮವಿದ್ಯೆಯೇ; ಅದಕ್ಕೆ ನೆರವಾಗುವ ವಿದ್ಯಾವಿಭಾಗಗಳನ್ನು ಮಾತ್ರ ಇಲ್ಲಿ ಗಣನೆಗೆ ತಂದುಕೊಂಡಿದ್ದಾರೆ. ಒಂದೇ ಅಪವಾದವೆಂದರೆ ಬ್ರಹ್ಮನಿಧಿಯಲ್ಲಿ 'ಭರತಶಾಸ್ತ್ರ'ವನ್ನು ಕುರಿತ ಭಾಗ; ಈ ಶಾಸ್ತ್ರದಲ್ಲಿ ನಾಟ್ಯವೂ ಸಂಗೀತವೂ ಸೇರುತ್ತವೆ. ಚಿತ್ರಕರ್ಮ, ಶಿಲ್ಪ, ವಾಸ್ತು ಮೊದಲಾಗಿ ಇತರ ವಿದ್ಯಾವಿಭಾಗಗಳ ಸೊಲ್ಲು ಇಲ್ಲಿ ಸೇರಿಲ್ಲ .

(೧) ಬ್ರಹ್ಮನ ರೂಪಗಳು

ಬ್ರಹ್ಮನಿಧಿಯಲ್ಲಿ ಬ್ರಹ್ಮನ ರೂಪವೇ ಮೊಟ್ಟಮೊದಲಿಗೆ ಕಾಣಿಸಿಕೊಳ್ಳುವುದು ಸಹಜವೇ. ಬ್ರಹ್ಮನನ್ನು ಚತುರ್ಮುಖನೆಂದು ಕರೆದು ಇತರ ಬ್ರಹ್ಮರೂಪಗಳಿಂದ ಬೇರ್ಪಡಿಸಿ, ಹೇಳಿ ಅವನ ಮಡದಿಯಾದ ಸರಸ್ವತಿಯ ಮೂರ್ತಿಲಕ್ಷಣವನ್ನೂ ಸೂಚಿಸಿದ್ದಾರೆ.

೧. ಚತುರ್ಮುಖ -

'ಚತುರ್ಮುಖಂ ಚತುರ್ಬಾಹುಂ ಕಮಂಡಲ್ವಕ್ಷಧಾರಿಣಂ।
ಯಜ್ಞಸೂತ್ರೋತ್ತರೀಯ್ಯಂ ಚ ಜಟಾಮಕುಟಸಂಯುತಂ॥
ಸವ್ಯಹಸ್ತೇ(s)ಕ್ಷಮಾಲಾಂ ಚ ವಾಮಹಸ್ತೇ ಕಮಂಡಲುಂ।
ಸ್ರುವಂ ದಕ್ಷಿಣಹಸ್ತೇ ತು ವಾಮಹಸ್ತೇ ತು ಪುಸ್ತಕಂ (॥)
ಅಂಬುಜಾಸನಮಾಸೀನಂ ಧ್ಯಾನಸಂಮೀಲಿತೇಕ್ಷಣಂ।



ಬ್ರಹ್ಮ

ಪದ್ಮಪತ್ರದಳಾಗ್ರಾಭಂ ಧ್ಯಾಯೇದೇವಂ ಚತುರ್ಮುಖಂ (II)
ಪಾಟಲವರ್ಣಃII'

(ಚತುರ್ಮುಖ ಬ್ರಹ್ಮನು ನಾಲ್ಕು ಮೊಗ, ನಾಲ್ಕು ಕೈಗಳುಳ್ಳವನು. ಮೈಬಣ್ಣ ಕೆಂದಾವರೆ ಹೂವಿನದು. ತಲೆಯ ಮೇಲೆ ಜಟೆ; ಮೈಮೇಲೆ ಯಜ್ಞೋಪವೀತ ಮತ್ತು ಉತ್ತರೀಯ. ಬಲ ಪರಹಸ್ತದಲ್ಲಿ ಜಪಮಾಲೆ, ಎಡಪರಹಸ್ತದಲ್ಲಿ ಕಮಂಡಲು, ಬಲನಿಜಹಸ್ತದಲ್ಲಿ ಯಜ್ಞಾಯುಧವಾದ ಸ್ರುವ ಮತ್ತು ಎಡನಿಜಹಸ್ತದಲ್ಲಿ ಪುಸ್ತಕ. ಕಮಲದ ಮೇಲೆ ಕುಳಿತಿದ್ದಾನೆ. ಧ್ಯಾನಶ್ಲೋಕಕ್ಕೆ ಆಕರ ಶೈವಾಗಮ)

೨. ಸರಸ್ವತೀ -

'ದೇವೀ ಸರಸ್ವತೀ ಕಾರ್ಯಾ ಸರ್ವಾಭರಣಭೂಷಿತಾ।
ಚತುರ್ಭುಜಾ ಸಾ ಕರ್ತವ್ಯಾ ತಥೈವ ಚ ಸಮಸ್ಥಿತಾII
ಪುಸ್ತಕಂ ಚಾಕ್ಷಮಾಲಾಂ ಚ ತಸ್ಯಾ ದಕ್ಷಿಣಹಸ್ತಯೋಃ।
ವಾಮಯೋಶ್ಚ ತಥಾ ಕಾರ್ಯಂ ವೈಣವೀಂ ಚ ಕಮಂಡಲುಂ।
ಸಮಪಾದಾ ಪ್ರತಿಷ್ಠಾಪ್ಯಾ ಕಾರ್ಯಾ ಸೌಮ್ಯಮುಖೀ ಸಿತಾ। (II)
ಶ್ವೇತವರ್ಣಃII'

(ಚತುರ್ಮುಖಬ್ರಹ್ಮನ ಶಕ್ತಿಸ್ವರೂಪಳಾದ ಸರಸ್ವತಿಯು ಸರ್ವಾಭರಣಭೂಷಿತೆಯಾಗಿ ಸಮಭಂಗಿಯಲ್ಲಿ ಕುಳಿತಂತೆ ಅಥವಾ ನಿಂತಂತೆ ಕಾಣಿಸಿಕೊಳ್ಳುತ್ತಾಳೆ. ಬಿಳಿಯ ಮೈಬಣ್ಣದ ಈ ದೇವಿಗೆ ನಾಲ್ಕುಕೈಗಳು, ಬಲಗೈಗಳಲ್ಲಿ ಜಪಮಾಲೆ ಮತ್ತು ಪುಸ್ತಕ; ಎಡಗೈಗಳಲ್ಲಿ ವೀಣೆ ಮತ್ತು ಕಮಂಡಲು, ಸೌಮ್ಯಮುಖಭಾವ. ನೃಸಿಂಹಪ್ರಾಸಾದದ ಧ್ಯಾನಶ್ಲೋಕ)

೩. ಪಂಚಬ್ರಹ್ಮರು -

(೧) ಆದ್ಯಬ್ರಹ್ಮನು ಚತುರ್ಮುಖನೇ. ಏಳುಹಂಸಗಳಿಂದ ಕೂಡಿದ ರಥದ ಮೇಲೆ ಪದ್ಮಾಸನದಲ್ಲಿ ಕುಳಿತವನು. ಏಳು ಹಂಸಗಳೆಂದರೆ ಏಳು ಛಂದಸ್ಸುಗಳು; ಆದ್ಯಬ್ರಹ್ಮನು ವೇದಮೂರ್ತಿಯಾದುದರಿಂದ ಛಂದಸ್ಸು ಅವನಿಗೆ ವಾಹನವಾಯಿತು. ಕೃಷ್ಣಾಜಿನಾಂಬರ, ಜಟಾಧರ, ಪಾಟಲವರ್ಣ, ಧ್ಯಾನದಲ್ಲಿ ತೊಡಗಿದ್ದು ಕಣ್ಣುಗಳನ್ನು ಮುಚ್ಚಿದವನು (ಧ್ಯಾನಸಮ್ಮೀಲಿತೇಕ್ಷಣ).

(೨) ಲೋಕಪಾಲಬ್ರಹ್ಮನು ಪದ್ಮಪತ್ರಾಸನಸ್ಥ, ಚತುರ್ಮುಖ, ಆದಿತ್ಯವರ್ಣ.

(೩) ಪ್ರಜಾಪತಿಬ್ರಹ್ಮನು ಹಂಸದ ಮೇಲೆ ಕುಳಿತವನು, ಚತುರ್ಮುಖನಲ್ಲ (ಒಂದೇ ಮುಖದವನು). ಎಡತೊಡೆಯ ಮೇಲೆ ಸಾವಿತ್ರಿಯು ಕುಳಿತಂತೆ ಕಾಣಿಸಬೇಕು. ಪಾಟಲವರ್ಣ.



ಸರಸ್ವತಿ



ಸರಸ್ವತೀ

(೪) ವಿಧಿಬ್ರಹ್ಮನು ಸೂರ್ಯರೂಪಧರ, ತೇಜೋಮೂರ್ತಿ. ಎರಡು ತೋಳುಗಳು, ಹತ್ತು ಕೈಗಳು ('ದ್ವಿಭುಜೋ ದಶಪಾಣಿಶ್ಚ'), ಪಾಟಲವರ್ಣ.

(೫) ವಿಶ್ವಕರ್ಮಬ್ರಹ್ಮನಿಗೆ ನಾಲ್ಕುಮುಖಗಳು, ನಾಲ್ಕುಕೈಗಳು, ನಾಲ್ಕು ಕಾಲುಗಳು. ಶಾಂತ ಸ್ವರೂಪ, ಬಿಳಿಬಟ್ಟೆಯುಟ್ಟಿದ್ದಾನೆ. ಬಲಗೈಯಲ್ಲಿ ಜಪಮಾಲೆ, ಎಡಗೈಯಲ್ಲಿ ಪುಸ್ತಕ. ಮತ್ತೆರಡು ಕೈಗಳಲ್ಲಿ ತಾವರೆ ಹೂಗಳು, ಮೇಲೆತ್ತಿದ ಕೈಗಳು. ಬಲಭಾಗದ ಮುಖ ವ್ಯವಸಾಯ, ಎಡಭಾಗದ ಮುಖ ಬಲು ಚೆಲುವಾಗಿದೆ, ಪಾಟಲವರ್ಣ.

ನೃಸಿಂಹಪ್ರಾಸಾದವೆಂಬ ಗ್ರಂಥದಿಂದ ಎತ್ತಿಕೊಂಡ ಧ್ಯಾನಶ್ಲೋಕಗಳು

೪. ನವಪ್ರಜಾಪತಿಗಳು -

ಸ್ಕಾಂದಪುರಾಣದ ಲಕ್ಷ್ಮೀನಾರಾಯಣಸಂಹಿತೆಯಿಂದ ಎತ್ತಿಕೊಂಡ ಭಾಗ ಇದು. 'ನವ ಪ್ರಜೇಶ್ವರರ ಧ್ಯಾನ'; ಒಂಬತ್ತುಮಂದಿ ಪ್ರಜಾಪತಿಗಳು

'ಮರೀಚಿಸ್ತ್ವಂಗಿರಾಶ್ಚಾತ್ರಿಃ ಪುಲಸ್ತ್ಯಃ ಪುಲಹಃ ಕ್ರತುಃ।
ಕರ್ದಮಃ ಕಶ್ಯ(ಶ್ಯ)ಪೋ ದಕ್ಷೋ ನವೈತೇ ಬ್ರಹ್ಮಸೂನವಃ॥'

ಮರೀಚಿ, ಅಂಗಿರಸ್, ಅತ್ರಿ, ಪುಲಸ್ತ್ಯ, ಪುಲಹ, ಕ್ರತು, ಕರ್ದಮ, ಕಶ್ಯಪ ಮತ್ತು ದಕ್ಷ, ಇವರನ್ನು ಬ್ರಹ್ಮನ ಮಕ್ಕಳೆಂದು ಕಲ್ಪಿಸಿಕೊಳ್ಳಲಾಗಿದೆ. ಇವರಲ್ಲಿ ಮರೀಚಿಯು 'ಆದ್ಯಪ್ರಜೇಶ್ವರ'; ಬ್ರಹ್ಮನ ಮಾನಸಪುತ್ರ. ಅತ್ರಿಯನ್ನು ಮರೀಚಿಯ ಮಗನೆಂದು('ಮರೀಚಿತನಯಂ') ಧ್ಯಾನಶ್ಲೋಕ ಹೇಳುತ್ತದೆ. ಮತ್ತೆ ಪುಲಸ್ತ್ಯನನ್ನೂ 'ಬ್ರಹ್ಮಣೋ ಮಾನಸಂ ಸುತಂ' ಎಂದು ಕಾಣಿಸಿದ್ದಾರೆ. ಕಶ್ಯಪನೂ ಮರೀಚಿತನಯನೇ. ದಕ್ಷನು ಸ್ವಾಯಂಭುವ.

(೧) ಮರೀಚಿಯು ಕನಕಾಚಲಸಂಕಾಶ, ಜಟಾವಲ್ಕಲಭೂಷಿತ, ಪ್ರಣವಜಪತತ್ಪರ, ಎರಡು ಕೈಗಳು, ಒಂದರಲ್ಲಿ ಜಪಮಾಲೆ, ಇನ್ನೊಂದರಲ್ಲಿ ಕುಂಡಿಕೆ

(೨) ಆಂಗಿರಸನೂ ಕನಕಪ್ರಭನೇ; ಮರೀಚಿಯಂತೆಯೇ ಜಪಮಾಲೆ, ಕುಂಡಿಕೆಗಳನ್ನು ಹಿಡಿದವನು, ಆದರೆ 'ತ್ರಿಪುಂಡ್ರಾಂಕಿತಮಸ್ತಕ'

(೩) ಅತ್ರಿಯದು ಶ್ಯಾಮವರ್ಣ; ತಲೆಯ ಮೇಲೆ ಜಟೆ, ಗಡ್ಡಮೀಸೆಗಳಿವೆ. ಕೈಗಳಲ್ಲಿ ಜಪಮಾಲೆ, ಕಮಂಡಲು; ಶಾಂತಮುಖಮುದ್ರೆ

(೪) ಪುಲಸ್ತ್ಯನು ಪಿಂಗಳವರ್ಣದವನು; ಕೈಗಳಲ್ಲಿ ಜಪಮಾಲೆ, ದಂಡಗಳನ್ನು ಹಿಡಿದವನು. ಕೃಷ್ಣಾಜಿನವನ್ನು ಹೊದ್ದವನು; ಅರಿಷಡ್ವರ್ಗವನ್ನು ಗೆದ್ದವನು, ಶಾಂತಮೂರ್ತಿ

(೫) ಪುಲಹನು ತಪೋನಿಧಿ, ಶಾಂತ; ಕೈಗಳಲ್ಲಿ ಜಪಮಾಲೆ, ಕುಂಡಿಕೆ, ನೀಲವರ್ಣ

(೬) ಕ್ರತುವು ಜಟಿಲ, ಶ್ಮಶ್ರುಲ, ಸಪ್ತಾರ್ಚಿಭಾಸ್ವರ, ತಪೋನಿಧಿ, ದಂಡಕಮಂಡಲುಧರ, ರಕ್ತವರ್ಣ

(೭) ಕರ್ದಮನು ಪಾಪವೆಂಬ ಕೆಸರನ್ನು ತೊಳೆಯುವವನು; ಕರ್ದಮವೆಂದರೆ ಕೆಸರು. ಜಟಾಮಕುಟಶೋಭಿತ, ಸಿಂದೂರವರ್ಣ, ಕೃಷ್ಣಾಜಿನಾಂಬರ; ಜಪಮಾಲೆ, ಸ್ರುಕ್ ಮತ್ತು ಕುಂಡಿಕೆಗಳನ್ನು ಹಿಡಿದವನು

(೮) ಕಶ್ಯಪನು ಕಾಂಚನಪ್ರಭ, ಚೀರವಲ್ಕಲಧರ, ಜಟಾಮಂಡಲಮಂಡಿತ; ಜಪಮಾಲೆ ಕುಂಡಿಕೆಗಳನ್ನು ಹಿಡಿದವನು, 'ಪ್ರಣವಬ್ರಹ್ಮಸಂಸಕ್ತಚಿತ್ತ'

(೯) ದಕ್ಷನು ಆಡಿನ ತಲೆಯುಳ್ಳವನು, ಎರಡು ಕಣ್ಣುಗಳು, ಎರಡು ಕೋಡುಗಳು, ನಮಸ್ಕಾರಾಂಜಲಿ ಮುದ್ರೆಯಲ್ಲಿ ಕೈಗಳು, ಶ್ಯಾಮವರ್ಣ, ಯಜ್ಞದಲ್ಲಿ ತೊಡಗಿದವನು

೫. ಸಪ್ತರ್ಷಿಗಳು -

ಒಂದೊಂದು ಮನ್ವಂತರದಲ್ಲಿ ಏಳು ಋಷಿಗಳು ಬೇರೆ ಬೇರೆಯಾಗಿರುತ್ತಾರೆ. ವೈವಸ್ವತಮನ್ವಂತರದಲ್ಲಿ ಗೌತಮ, ಭರದ್ವಾಜ, ವಿಶ್ವಾಮಿತ್ರ, ಕಾಶ್ಯಪ, ಜಮದಗ್ನಿ, ವಶಿಷ್ಠ ಮತ್ತು ಅತ್ರಿ ಇವರು ಸಪ್ತರ್ಷಿಗಳು. ಇವರೆಲ್ಲರ ಮೂರ್ತಿಲಕ್ಷಣವನ್ನು ಸಮಷ್ಟಿಯಾಗಿ ಹೀಗೆ ಹೇಳಲಾಗಿದೆ -

'ಉದಾಸೀನಾಸ್ಸೋಪವೀತಾಃ ಕಮಂಡಲ್ವಕ್ಷಸೂತ್ರಿಣಃ।
ಜಟಿಲಾ ಶ್ಮಶ್ರುಳಾಶ್ಯಾಂತಾ ಆಸೀನಾ ಧ್ಯಾನತತ್ಪರಾಃ।
ಸಪ್ತ ಋಷಯೋ ವಶಿಷ್ಠಸ್ತು ಕಾರ್ಯೋ ಭಾರ್ಯಾಸಮನ್ವಿತಃ॥

ಏಳು ಋಷಿಗಳನ್ನೂ ಉದಾಸೀನಭಾವದಲ್ಲಿರುವಂತೆ, ಶಾಂತ ಮುಖಮುದ್ರೆಯಿರುವಂತೆ, ಧ್ಯಾನದಲ್ಲಿ ತೊಡಗಿ ಕುಳಿತಿರುವಂತೆ ಕಾಣಿಸಬೇಕು. ಅವರೆಲ್ಲರೂ ಜಟೆಯುಳ್ಳವರು, ಗಡ್ಡಮೀಸೆಗಳುಳ್ಳವರು; ಉಪವೀತಧರರು. ಎಲ್ಲರಿಗೂ ಎರಡೇ ಕೈಗಳು; ಕೈಗಳಲ್ಲಿ ಜಪಮಾಲೆ, ಕಮಂಡಲುಗಳನ್ನು ಹಿಡಿದವರು. ಇವರಲ್ಲಿ ವಶಿಷ್ಠನೊಬ್ಬನು ಮಾತ್ರ ತನ್ನ ಹೆಂಡತಿ(ಅರುಂಧತಿ)ಯೊಡಗೂಡಿ ಇರುವನು.

(೧) ಗೌತಮನು ರಹೂಗಣಾತ್ಮಜ, ತ್ರಿಪುಂಡ್ರಾಂಕಿತಮಸ್ತಕ, ಕನಕವರ್ಣ

(೨) ಭರದ್ವಾಜನು ಮಹಾಶಾಂತ, ಶ್ಯಾಮವರ್ಣ, ಅವನ ಹೆಂಡತಿ ಸುಶೀಲೆಯೆಂಬುವಳು

(೩) ವಿಶ್ವಾಮಿತ್ರನು ಹಿರಣ್ಯಗರ್ಭಸದೃಶ, ಪೀತವರ್ಣ, ಕುಮುದ್ವತಿ ಅವನ ಹೆಂಡತಿ

(೪) ಕಾಶ್ಯಪನು ಮರೀಚಿತನಯ, ಕೃಷ್ಣವರ್ಣ, ಜಟಾವಲ್ಕಲಧಾರಿ

(೫) ಜಮದಗ್ನಿಯು ಭೃಗುಪುತ್ರ, ಶಾಂತ, ಜಿತಾರಿಷಡ್ವರ್ಗ, ಮಹಾದ್ಯುತಿ, ರಕ್ತವರ್ಣ

(೬) ವಸಿಷ್ಠನು ಮಿತ್ರಾವರುಣಸಂಭವ, ತಪೋನಿಧಿ, ದಯಾಸಿಂಧು, ಸಿತವರ್ಣ

(೭) ಅತ್ರಿಯು ವಿರಂಚಿತನಯ, ಶಾಂತ, ನಿಷ್ಕಲ್ಮಷ, ಅಸಿತವರ್ಣ, ಅವನ ಹೆಂಡತಿ ಅನಸೂಯೆ

೬. ಧರ್ಮಾದಿಚತುಷ್ಟಯ -

ಧರ್ಮ, ಜ್ಞಾನ, ವೈರಾಗ್ಯ ಮತ್ತು ಐಶ್ವರ್ಯ ಎಂಬಿವು ಕ್ರಮವಾಗಿ ಬಿಳಿ, ನಸುಗೆಂಪು, ಹಳದಿ ಮತ್ತು ಕಪ್ಪು ಬಣ್ಣಗಳವೆಂದೂ, ಯಮ, ವಾಯು, ಈಶಾನ ಮತ್ತು ಇಂದ್ರರು ಇವಕ್ಕೆ ಕ್ರಮವಾಗಿ ಅಭಿಮಾನಿದೇವತೆಗಳೆಂದೂ, ಈ ನಾಲ್ಕು ಸಿಂಹದ ರೂಪದವೆಂದೂ ನೃಸಿಂಹಪ್ರಾಸಾದದ ಒಕ್ಕಣೆ. ಈ ನಾಲ್ಕಕ್ಕೆ ಸರಿಯಾಗಿ ಅಧರ್ಮ, ಅಜ್ಞಾನ, ಅವೈರಾಗ್ಯ ಮತ್ತು ಅನೈಶ್ವರ್ಯಗಳನ್ನು ಪಾಂಚರಾತ್ರಾಗಮವಾದ ಪಾದ್ಮಸಂಹಿತೆಯು ಪುರುಷಾಕೃತಿಯಲ್ಲಿ ಕಲ್ಪಿಸಿಕೊಂಡಿದೆ. ಮನುಷ್ಯನ ಮೈ, ಸಿಂಹದ ಮುಖ. ಮುಖದ ಬಣ್ಣ ಬಿಳಿ, ಮೈಬಣ್ಣ ನಸುಗೆಂಪು. ನಾಲ್ಕು ಕೈಗಳು; ಮುಂದಿನೆರಡು ಕೈಗಳು ಅಂಜಲಿಬದ್ಧಮುದ್ರೆಯಲ್ಲಿ. ಅಧರ್ಮಕ್ಕೆ ಅಭಿಮಾನಿ ದೇವತೆ ನಿರ್ಋತಿ, ಅಜ್ಞಾನಕ್ಕೆ ದುರ್ಗೆ, ಅವೈರಾಗ್ಯಕ್ಕೆ ಕಾಮ(ಮನ್ಮಥ), ಅನೈಶ್ವರ್ಯಕ್ಕೆ ರುದ್ರ.

೭. ಪುಣ್ಯಪಾಪಪುರುಷರು -

ಕಾರಣಾಗಮದಲ್ಲಿ ಪುಣ್ಯವನ್ನು ಮನುಷ್ಯಾಕಾರದಲ್ಲೂ ಪಾಂಚರಾತ್ರದಲ್ಲಿ ಪಾಪವನ್ನು ಮನುಷ್ಯಾಕಾರದಲ್ಲೂ ಕಲ್ಪಿಸಿಕೊಂಡಿರುವುದನ್ನು ಇಲ್ಲಿ ಉದ್ಧರಿಸಿಕೊಂಡಿದ್ದಾರೆ -

'ಸಿಂಹಾಸನೇ(ನ) ಸಮಾಸೀನಂ ಸ್ವರ್ಣವರ್ಣಂ ಕಿರೀಟಿನಂ।
ಸುರಾಪಾನಹೃದಾಯುಕ್ತಂ ಗುರುತಲ್ಪಕಟಿದ್ವಯಂ॥
ತತ್ಸಂಯೋಗಿಪದದ್ವಂದ್ವಮಂಗಪ್ರತ್ಯಂಗಪಾತಕಂ।
ಉಪಪಾತಕರೋಮಾಣಂ ಪಿಂಗಭ್ರೂಶ್ಮಶ್ರುಲೋಚನಂ॥
ಖಡ್ಗಚರ್ಮಧರಂ ಕೃಷ್ಣಂ ಕುಕ್ಷೌ ವಾಮೇ ವಿಚಿಂತಯೇತ್॥
ಕೃಷ್ಣವರ್ಣಃ॥'

ನಮ್ಮೆಲ್ಲರ ಹೃದಯದಲ್ಲಿ ಪುಣ್ಯಪುರುಷನಿದ್ದಾನೆ; ಬಂಗಾರದ ಬಣ್ಣದವನು. ಹೊಟ್ಟೆಯ ಎಡಭಾಗದಲ್ಲಿ ಪಾಪಪುರುಷ, ಕರಿಯ ಬಣ್ಣದವನು. ದೇವತೆಗಳೆಲ್ಲ ಪುಣ್ಯಪುರುಷನ ಕಾಲಿಗೆ ಬೀಳುತ್ತಾರೆ. ಪಾಪಪುರುಷನಾದರೋ ಬ್ರಹ್ಮಹತ್ಯೆ, ಸುರಾಪಾನ, ಸ್ತೇಯ ಮೊದಲಾದ ಪಾಪಗಳೇ ತನ್ನ ಅವಯವಗಳಾಗಿ ಉಳ್ಳವನು. ಕತ್ತಿ, ಗುರಾಣಿಗಳನ್ನು ಹಿಡಿದವನು.

೮. ವೇದಚತುಷ್ಟಯ -

ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದಗಳೆಂಬ ನಾಲ್ಕು ವೇದಗಳಿಗೆ ಇಲ್ಲಿ ಮೂರ್ತಿಲಕ್ಷಣವನ್ನು ಕಲ್ಪಿಸಿಕೊಂಡಿದ್ದಾರೆ. ನೃಸಿಂಹಪ್ರಾಸಾದದಿಂದ ಎತ್ತಿಕೊಂಡ ಧ್ಯಾನಶ್ಲೋಕಗಳು ಹೀಗಿವೆ -

(೧)

'ಋಗ್ವೇದ(ಃ) ಶ್ವೇತವರ್ಣ(ಃ) ಸ್ಯಾದ್ವಿ(ದ್ವಿ)ಭುಜೋ ರಾಸಭಾನನಃ।
ಅಕ್ಷಮಾಲಾಧರಸ್ಸೌಮ್ಯಃ ಪ್ರೀತೋ ವ್ಯಾಖ್ಯಾಪನೋದ್ಯತಃ॥
ಶ್ವೇವರ್ಣಃ॥ (॥೧॥)

(ಋಗ್ವೇದದ ಮೈಬಣ್ಣ ಬಿಳಿ; ಎರಡು ಕೈಗಳ ಮನುಷ್ಯಾಕಾರ, ಆದರೆ ಕತ್ತೆಯ ಮುಖ. ಒಂದು ಕೈಯಲ್ಲಿ ಜಪಮಾಲೆ, ಇನ್ನೊಂದರಲ್ಲಿ ವ್ಯಾಖ್ಯಾನಮುದ್ರೆ. ಸೌಮ್ಯಮುಖಭಾವ; ಸುಪ್ರೀತನಾದವನು)

(೨)

'ಅಜಾಸ್ಯಃ ಪೀತವರ್ಣ(ಃ) ಸ್ಯಾದ್ಯಜುರ್ವೇದೊ(s)ಕ್ಷಸೂತ್ರ ಧೃತ್।
ವಾಮೇ ಕುಲಿಶಪಾಣಿಸ್ತು ಭೂತಿದೋ ಮಂಗಳಪ್ರದಃ॥೨॥'

(ಯಜುರ್ವೇದದ ಮೈಬಣ್ಣ ಹಳದಿ; ಎರಡು ಕೈಗಳ ಮನುಷ್ಯಾಕಾರ, ಆದರೆ ಆಡಿನ ಮುಖ. ಒಂದು ಕೈಯಲ್ಲಿ ಜಪಮಾಲೆ, ಇನ್ನೊಂದರಲ್ಲಿ ವಜ್ರಾಯುಧ. ಮಂಗಳಪ್ರದನಾದವನು)

(೩)

'ನೀಲೋತ್ಪಲದಳಾಭಾಸಃ ಸಾಮವೇದೋ ಹಯಾನನಃ।
ಅಕ್ಷಮಾಲಾನ್ವಿತೋ ದಕ್ಷೇ ವಾಮೇ ಕುಂಭಧರಃ ಸ್ಮೃತಃ। (॥)
ನೀಲವರ್ಣಃ॥೩॥'

(ಸಾಮವೇದವು ನೀಲಿಯ ಮೈಬಣ್ಣದ ರೂಪ. ಮನುಷ್ಯನ ದೇಹ, ಕುದುರೆಯ ಮುಖ. ಬಲಗೈಯಲ್ಲಿ ಜಪಮಾಲೆ, ಎಡಗೈಯಲ್ಲಿ ಕುಂಭ)

(೪)

'ಅಥರ್ವಣಾಭದೋ ವೇದೋ ಧವಳೋ ಮರ್ಕಟಾನನಃ।
ಅಕ್ಷಮಾಲಾನ್ವಿತೋ ವಾಮೇ ದಕ್ಷೇ ಕುಂಭಧರಃ ಸ್ಮೃತಃ ॥
ಶ್ವೇತವರ್ಣಃ॥೪॥'

(ಅಥರ್ವಣವೆಂಬ ವೇದಕ್ಕೆ ಮನುಷ್ಯನ ದೇಹ, ಕೋತಿಯ ಮೋರೆ; ಎಡಗೈಯಲ್ಲಿ ಜಪಮಾಲೆ, ಬಲಗೈಯಲ್ಲಿ ಕುಂಭ; ಬಿಳಿಯ ಮೈಬಣ್ಣ)

ಮುಂದೆ ಈ ನಾಲ್ಕು ವೇದಗಳಿಗೂ ಪತ್ನಿಯರನ್ನು ಹೇಳಿದ್ದಾರೆ. ಋಗ್ವೇದಪುರುಷನ ಮಡದಿ ಸಾಮಿಧೇನೀ ಎಂಬುವಳು ನವಿಲಿನ ಮುಖವಿಳ್ಳ ಹೆಂಗಸು; ಬಿಳಿಬಣ್ಣ, ಕಟಕಗಳೆರಡನ್ನು ಧರಿಸಿದ್ದಾಳೆ; ಎರಡು ಕೈಗಳಲ್ಲೂ ತಾವರೆ ಹೂಗಳನ್ನು ಹಿಡಿದಿದ್ದಾಳೆ. ಯಜುರ್ವೇದದ ಹೆಂಗಳೆ ಸೃಗಾ ಎನ್ನುವವಳು ಕೆಂಪು ಮೈಬಣ್ಣದವಳು, ವಿಶಾಲಾಕ್ಷಿ, ಕೃಶೋದರಿ; ಕೈಯಲ್ಲಿ ತಾವರೆಗಳನ್ನು ಹಿಡಿದಿದ್ದಾಳೆ. ಸಾಮವೇದದ ಪತ್ನಿ ಕುಹೂ ಎಂಬುವಳು ಬಿಳಿಯ ಮೈಬಣ್ಣದವಳು; ಹುಣ್ಣಿಮೆಯ ಚಂದ್ರನಂತೆ

ಮುಖವುಳ್ಳವಳು; ಎರಡು ಕೈಗಳಲ್ಲಿ ಎಡಗೈಯಲ್ಲಿ ಗಿಣಿಯನ್ನೂ ಬಲಗೈಯಲ್ಲಿ ಧಾನ್ಯಮಂಜರಿಯನ್ನೂ ಹಿಡಿದಿದ್ದಾಳೆ. ಅಥರ್ವಣವೇದದ ಸ್ತ್ರೀ ಸಮಿತ್ ಎಂಬುವಳು, ಅವಳ ಮೋರೆ ಹಂದಿಯದು, ಕಣ್ಣು ಚಕೋರಪಕ್ಷಿಯದು; ಬಿಳಿಯ ಬಣ್ಣದ ಬಟ್ಟೆ ಉಟ್ಟವಳು, ಮೈಬಣ್ಣ ಬಂಗಾರದ್ದು. ಆವಳಿಗೆ ನಾಲ್ಕು ಕೈಗಳು; ಕೈಗಳಲ್ಲಿ ಸ್ರುಕ್, ಸ್ರುವ, ಕಮಲ, ಘಟಗಳನ್ನು ಹಿಡಿದಿದ್ದಾಳೆ.

ವೇದಗಳನ್ನು ಕುರಿತಂತೆ ಇನ್ನೂ ಕೆಲವು ವಿವರಗಳನ್ನು ಕಾಣಿಸಿದ್ದಾರೆ. ಋಗ್ವೇದದ ಗೋತ್ರ ಆತ್ರೇಯ, ದೈವ ಸೋಮ. ಯಜುರ್ವೇದದ ಗೋತ್ರ ಕಾಶ್ಯಪ, ದೈವ ರುದ್ರ. ಸಾಮವೇದದ ಗೋತ್ರ ಭರದ್ವಾಜ, ದೈವ ಇಂದ್ರ. ಅಥರ್ವಣವೇದದ ಗೋತ್ರ ವೈತಾನ, ದೈವ ಬ್ರಹ್ಮ.

೯. ಎರಡು ಉಪವೇದಗಳು

ನಾಲ್ಕು ವೇದಗಳಲ್ಲಿ ಒಂದೊಂದಕ್ಕೂ ಒಂದೊಂದು ಉಪವೇದವಿದೆ- ಋಗ್ವೇದಕ್ಕೆ ಆಯುರ್ವೇದ, ಯಜುರ್ವೇದಕ್ಕೆ ಧನುರ್ವೇದ, ಸಾಮವೇದಕ್ಕೆ ಗಾಂಧರ್ವವೇದ, ಅಥರ್ವವೇದಕ್ಕೆ ಸ್ಥಾಪತ್ಯವೇದ. ಇವುಗಳಲ್ಲಿ ಮೊದಲ ಎರಡನ್ನು ಮಾತ್ರ ಬ್ರಹ್ಮನಿಧಿಯಲ್ಲಿ ಎತ್ತಿಕೊಳ್ಳಲಾಗಿದೆ.

ಆಯುರ್ವೇದಕ್ಕೆ ಮೂರ್ತಿಲಕ್ಷಣವನ್ನು ನೃಸಿಂಹಪ್ರಾಸಾದವು ಹೀಗೆ ಕಾಣಿಸಿದೆ -

'ಆಯುರ್ವೇದೋ ಹರಿದ್ರಾಭೋ ವಾನರಾಸ್ಯೋ ವಿಶಾಲದೃಕ್।
ಅಕ್ಷಸೂತ್ರಂ ಸುಧಾಕುಂಭಂ ಬಿಭ್ರದಾರೋಗ್ಯದೋ ಭೃಶಂ॥
ಪೀತವರ್ಣಃ॥'

(ಆಯುರ್ವೇದವನ್ನು ಮನುಷ್ಯಾಕೃತಿಯಲ್ಲಿ ಕಲ್ಪಿಸಿಕೊಂಡು ಮುಖವು ಮಾತ್ರ ಕೋತಿಯದೆಂದೂ, ವಿಶಾಲವಾದ ಕಣ್ಣುಗಳುಳ್ಳದ್ದೆಂದೂ, ಎರಡು ಕೈಗಳೆಂದೂ, ಒಂದು ಕೈಯಲ್ಲಿ ಜಪಮಾಲೆಯನ್ನು, ಇನ್ನೊಂದರಲ್ಲಿ ಅಮೃತಕಲಶವನ್ನು ಹಿಡಿದಂತೆಯೂ ವಿವರಗಳನ್ನು ಹೇಳಿದ್ದಾರೆ)

ಇನ್ನು ಆಯರ್ವೇದದ ಅಭಿಮಾನಿದೇವತೆ ಧನ್ವಂತರಿಯ ರೂಪವನ್ನು ನಿರೂಪಿಸುವ ಶ್ಲೋಕಗಳನ್ನು ಭಾಗವತ, ಆಯುರ್ವೇದ ತಂತ್ರ, ಮಂತ್ರಾಗಮ, ವೈದ್ಯಶಾಸ್ತ್ರಗಳಿಂದ ಆಯ್ದುಕೊಂಡಿದ್ದಾರೆ. ನನ್ನಲ್ಲಿರುವ ಹಸ್ತಪ್ರತಿಯಲ್ಲಿ ಈ ಶ್ಲೋಕಗಳು ಕಲಸಿಹೋಗಿವೆ. ಆದ್ದರಿಂದ ದೇವನಾಗರೀಲಿಪಿಯ ಪುಸ್ತಕದಿಂದ ಈ ಭಾಗವನ್ನು ಬರೆದುಕೊಂಡಿದ್ದೇನೆ-

'ಅಥೋದಧೇರ್ಮಥ್ಯಮಾನಾತ್ಕಾಶ್ಯಪೈರಮೃತಾರ್ಥಿಭಿಃ।
ಉದತಿಷ್ಠನ್ಮಹಾರಾಜ ಪುರುಷಃ ಪರಮಾದ್ಭುತಃ॥
ದೀರ್ಘಪೀವರ ದೋರ್ದಂಡಃ ಕಂಬುಗ್ರೀವೋರುಣೇಕ್ಷಣಃ।
ಶ್ಯಾಮಲಸ್ತರುಣಃ ಸ್ರಗ್ವೀ ಸರ್ವಾಭರಣಭೂಷಿತಃ॥
ಪೀತವಾಸಾ ಮಹೋರಸ್ಕಃ ಸುಮೃಷ್ಟಮಣಿಕುಂಡಲಃ।
ನೀಲಕುಂಚಿತಕೇಶಾಂತಸುಭಗಃ ಸಿಂಹವಿಕ್ರಮಃ॥
ಅಮೃತಾ(ss)ಪೂರ್ಣಕಲಶಂ ಬಿಭ್ರದ್ವಲಯಸಂಯುತಃ।
ಸ ವೈ ಭಗವತಃ ಸಾಕ್ಷಾದ್ವಿಷ್ಣೋರಂಶಾಂಶಸಂಭವಃ॥
ಧನ್ವಂತರಿಃ ಸ ಸ್ಯಾದ್ವಿಖ್ಯಾತ ಆಯುರ್ವೇದ ದೃಗಿಜ್ಯಯಾ॥
ಶ್ಯಾಮವರ್ಣಃ॥'

ಇದು ಭಾಗವತದ ವರ್ಣನೆ. ಅಮೃತಕ್ಕಾಗಿ ಸಮುದ್ರಮಂಥನಮಾಡಿದಾಗ, ನೀರಿನಿಂದ ಮೇಲೆದ್ದು ಕಾಣಿಸಿಕೊಂಡ ಧನ್ವಂತರಿಯು ವಿಷ್ಣುವಿನ ಅಂಶಸಂಭವ. ನೀಲಿಗಪ್ಪು ದೇಹದ ಸುಂದರ ತರುಣನಾಗಿ ಹಳದಿಬಟ್ಟೆಯನ್ನುಟ್ಟು ಕೈಗಳಲ್ಲಿ ಅಮೃತಕಳಶವನ್ನು ಹಿಡಿದ ಪರಮಾದ್ಭುತರೂಪದವನು. ಆಯುರ್ವೇದತಂತ್ರವೆಂಬ ಗ್ರಂಥದಲ್ಲಿ ಇದೇ ದೇವತೆಯ ವರ್ಣನೆ ಹೀಗಿದೆ -

'ಅರಿಜಲಜಜಲೂಕಾರತ್ನಪೀಯೂಷಕುಂಜ ಪ್ರಕಟಿತಕರಕಾಂತಕಾಂತ
ಪೀತಾಂಬರಾಢ್ಯಃ।
ಸಿತವಸನವಿರಾಜನ್ಮೌಳಿರಾರೋಗ್ಯದಾಯೀ ಶತಮುಖಮಣಿವರ್ಣಃ ಪಾತು
ಧನ್ವಂತಿರರ್ನಃ॥
ನೀಲವರ್ಣಃ॥'

ಇಲ್ಲಿನ ಧನ್ವಂತರಿಯು ಇಂದ್ರನೀಲಮಣಿಯ ಬಣ್ಣದವನು. ನಾಲ್ಕು ಕೈಗಳು; ಚಕ್ರ, ಶಂಖ, ಜಲೂಕ (ಜಿಗಣೆ) ಮತ್ತು ಅಮೃತ ಕಳಶಗಳನ್ನು ಹಿಡಿದವನು. ಇದೇ ವರ್ಣನೆ ಮಂತ್ರಾಗಮದಲ್ಲೂ ಇದೆ-

'ಶಂಖಂ ಚಕ್ರಂ ಜಲೂಕಾಂ ದಧದಮೃತಘಟಂ
ಚಾಪಿ ದೋರ್ಭಿಶ್ಚತುರ್ಭಿಃ ಸೂಕ್ಷ್ಮಂ
ಸ್ವಚ್ಛಂದಹೃದ್ಯಂ ಕುಶಪರಿವಿಲಸನ್ಮೌಳಿಮಂಭೋಜನೇತ್ರಂ।
ಕಾಲಾಂಭೋದೋಜ್ವಲಾಂಗಂ ಕಟಿತಟವಿಲಸಚ್ಚಾರು
ಪೀತಾಂಬರಾಢ್ಯಂ
ವಂದೇ ಧನ್ವಂತರಿಂ ತಂ ನಿಖಿಲಗದವನವ್ರಾತದಾವಾಗ್ನಿಲೀಲಂ॥'

ವೈದ್ಯಶಾಸ್ತ್ರವೆಂಬ ಗ್ರಂಥದಿಂದ ಆಯ್ದುಕೊಂಡಿರುವ ಶ್ಲೋಕವು ಧನ್ವಂತರಿಯ ಮೂರ್ತಿಲಕ್ಷಣವನ್ನು ಸ್ಪಷ್ಟವಾಗಿ ಹೇಳುತ್ತದೆ-

'ಶಂಖಂ ಚಕ್ರಮುಪರ್ಯಧಃಸ್ಥಕರಯೋಃ
ದಿವ್ಯೌಷಧಿಂ ದಕ್ಷಿಣೇ ವಾಮೇನಾನ್ಯಕರೇಣ
ನಿರ್ಮಲಸುಧಾಕುಂಡಂ ಜಲೂಕಾವಲಿಂ।
ಬಿಭ್ರಾಣಃ ಕರುಣಾಕರಶ್ಶುಭಕರಸ್ಸರ್ವಾಮಯಧ್ವಂಸಕಃ
ಸರ್ವಂ ತೇ ದುರಿತಂ ಛಿನತ್ತು ಭಗವಾನ್ ಧನ್ವಂತರಿಃ ಸಂತತಂ॥'

ಇನ್ನು ಧನುರ್ವೇದವೆಂಬುದಕ್ಕೆ ಪುರುಷರೂಪವನ್ನು ಕಲ್ಪಿಸಿಕೊಂಡು, ಪೀತವರ್ಣ, ಪಿಕವಕ್ತ್ರ, ಮಹತ್ತನು, ಧನುರ್ಬಾಣಧರ, ರೌದ್ರ ಎಂದು ಲಕ್ಷಣಗಳನ್ನು ಹೇಳಲಾಗಿದೆ; ತಲೆಯ ಮೇಲೆ ಕೆಂಬಣ್ಣದ ಜಟೆಯಂತೆ. ಧನುರ್ವೇದಕ್ಕೆ ಅಭಿಮಾನಿದೇವತೆ ಇಂದ್ರ. ಬಿಳಿಯ ಆನೆಯನ್ನೇರಿ, ಕೈಗಳಲ್ಲಿ ಅಂಕುಶವನ್ನೂ ವಜ್ರಾಯುಧವನ್ನೂ ಹಿಡಿದು ಬರುವ ಹಳದಿ ಮೈಬಣ್ಣದ ಸಹಸ್ರಾಕ್ಷ.

೧೦. ಷಡಂಗಗಳು-

ವೇದವಾಙ್ಮಯದ ಅಧ್ಯಯನ, ಅಭ್ಯಾಸಗಳಿಗೆ ಅನುಕೂಲವಾಗುವ ಆರು ಅಂಗಗಳನ್ನು ಸಂಪ್ರದಾಯ ಸಿದ್ಧಪಡಿಸಿದೆ. ಇವನ್ನು ವೇದಾಂಗಗಳೆಂದು ಕರೆದು, ಶಿಕ್ಷಾ, ಕಲ್ಪ, ವ್ಯಾಕರಣ,. ನಿರುಕ್ತ, ಛಂದ ಮತ್ತು ಜ್ಯೋತಿಷ ಎಂದು ಎಣಿಸಿದ್ದಾರೆ. ನೃಸಿಂಹಪ್ರಾಸಾದದಲ್ಲಿ ಒಂದೊಂದು ಅಂಗಕ್ಕೂ ಮೂರ್ತಿಲಕ್ಷಣ, ಅಭಿಮಾನಿದೇವತೆಯ ಸ್ವರೂಪಗಳನ್ನು ಹೇಳಲಾಗಿದೆ.

(೧) ಶಿಕ್ಷಾ - ಶುಭ್ರವರ್ಣ; ಷಡ್ಭುಜಗಳು, ಅಭಯಮುದ್ರೆ, ಜ್ಞಾನಮುದ್ರೆ, ಜಪಮಾಲೆ, ಕಳಶ, ದಂಡ, ಕಮಲಗಳನ್ನು ಹಿಡಿದಿವೆ. ಅಭಿಮಾನಿದೇವತೆ ಪ್ರಜಾಪತಿಬ್ರಹ್ಮ.

(೨) ಕಲ್ಪ - ಕುಮುದವರ್ಣ; ಕಾಗೆಯ ಮುಖ, ದೊಡ್ಡಹೊಟ್ಟೆ, ಕುಂಡಲಗಳು, ನಡುಪಟ್ಟಿ. ಕೈಗಳಲ್ಲಿ ಕುಠಾರ, ದಂಡ, ಕಮಲಗಳು. ಕಲ್ಪಾಭಿಮಾನಿಯು ತ್ರಿಮೂರ್ತಿಗಳಲ್ಲೊಬ್ಬನಾದ ಬ್ರಹ್ಮ.

(೩) ವ್ಯಾಕರಣ - ಶುಭ್ರವರ್ಣ, ನವಿಲಿನ ಮುಖ, ದಿವ್ಯವಸ್ತ್ರವಿಭೂಷಿತ; ವೀಣಾಪಾಣಿ. ಅಭಿಮಾನಿದೇವತೆ ಸರಸ್ವತಿ.

(೪) ನಿರುಕ್ತ - ಚಂದ್ರನಂತೆ ನಿರ್ಮಲವರ್ಣ, ಕೊಕ್ಕರೆಯ ಮುಖ, ಕೃಶೋದರ, ನಾಲ್ಕು ಕೈಗಳು. ಪಾಶ, ಅಂಕುಶ, ಜಪಮಾಲೆ, ಪುಸ್ತಕಗಳನ್ನು ಹಿಡಿದವನು. ಅಭಿಮಾನಿದೇವತೆ ವರುಣ, ದಿಕ್ಪಾಲಕರಲ್ಲೊಬ್ಬ.

(೫) ಛಂದಸ್ಸು - ರಕ್ತವರ್ಣ, ಚಕೋರಪಕ್ಷಿಯ ಮುಖ, ತಲೆಯಲ್ಲಿ ಶಿಖೆಯಿದೆ, ಕಿವಿಯಲ್ಲಿ ಕಬ್ಬಿಣದ ಓಲೆಗಳು, ಹವಳದ ಸರಗಳು, ಕೈಗಳಲ್ಲಿ ಜಪಾಪುಷ್ಪ ಮತ್ತು ಶಕ್ತ್ಯಾಯುಧಗಳು. ಅಭಿಮಾನಿದೇವತೆ ಅದಿತಿ; ಹಳದಿ ಬಣ್ಣದವಳು, ಸ್ರುಕ್-ಸ್ರುವ-ಜಪಮಾಲೆ-ಕಮಂಡಲುಗಳನ್ನು ಹಿಡಿದವಳು; ದೇವಮಾತೆ

(೬) ಜ್ಯೋತಿಷ - ರಕ್ತವರ್ಣ, ಬೆಕ್ಕಿನ ಮುಖ, ಎರಡು ಕೈಗಳು. ಬಲಗೈಯಲ್ಲಿ ಜಪಮಾಲೆ, ಎಡಗೈಯಲ್ಲಿ ಜಪಾಕುಸುಮ. ಅಭಿಮಾನಿದೇವತೆ ಹರಿ, ಚತುರ್ವಿಂಶತಿ ವಿಷ್ಣುಮೂರ್ತಿಗಳಲ್ಲೊಬ್ಬ.

೧೧. ವೈದಿಕಶಾಸ್ತ್ರಗಳು -

ಚತುರ್ವೇದ, ಷಡಂಗಗಳನ್ನವಲಂಬಿಸಿ ಸಿದ್ಧವಾದ ಕೆಲವು ಸಾಂಪ್ರದಾಯಿಕಶಾಸ್ತ್ರಗಳಿಗೆ ಇದೇ ರೀತಿ ವಿವರಗಳನ್ನು ಹೊಂದಿಸಿದ್ದಾರೆ.

(೧) ಮೀಮಾಂಸಾಶಾಸ್ತ್ರ - ಬಿಳಿಯ ಬಣ್ಣ, ಎರಡು ಕೈಗಳು, ಬಲಗೈಯಲ್ಲಿ ಜಪಮಾಲೆ, ಎಡಗೈಯಲ್ಲಿ ಅಮೃತಘಟ. ಇದಕ್ಕೆ ಅಧಿದೇವತೆ ಅಥವಾ ಅಭಿಮಾನಿದೇವತೆ ಚಂದ್ರ, ನವಗ್ರಹಗಳಲ್ಲೊಬ್ಬ.

(೨) ನ್ಯಾಯಶಾಸ್ತ್ರ - ನೀಲವರ್ಣ, ಸಿಂಹದ ಮುಖ, ಬಲಗೈಯಲ್ಲಿ ಸೂತ್ರ, ಎಡಗೈಯಲ್ಲಿ ಧ್ವಜ. ಅಭಿಮಾನಿದೇವತೆ ವಾಯು, ಪಂಚಭೂತಗಳಲ್ಲೊಂದು.

(೩) ಧರ್ಮಶಾಸ್ತ್ರ - ಶಾಂತಭಾವ, ಸುಂದರಮುಖ, ಕುಶಾಸನಸ್ಥ, ಜಪಮಾಲೆ ಬಲಗೈಯಲ್ಲಿ, ಎಡಗೈಯಲ್ಲಿ ತ್ರಾಸು (ತುಲಾ). ಅಭಿಮಾನಿದೇವತೆ ಧರ್ಮಪುರುಷ. ಅವನಿಗೆ ನಾಲ್ಕು ಮುಖಗಳು, ನಾಲ್ಕು ಕೈಗಳು, ನಾಲ್ಕು ಕಾಲುಗಳು; ಬಿಳಿಯ ಬಟ್ಟೆಯನ್ನುಟ್ಟಿದ್ದಾನೆ, ಸರ್ವಾಭರಣಭೂಷಿತ; ಶ್ವೇತವರ್ಣದ ಮೈ; ಮೇಲಿನ ಬಲಗೈಯಲ್ಲಿ ಜಪಮಾಲೆ, ಎಡಗೈಯಲ್ಲಿ ಪುಸ್ತಕ; ಕೆಳಗಿನ ಬಲಗೈಯಲ್ಲಿ ವರದಮುದ್ರೆ, ಎಡಗೈಯಲ್ಲಿ ಅಭಯಮುದ್ರೆ.

(೪) ಪುರಾಣಶಾಸ್ತ್ರ - ಚಂಪಕವರ್ಣ, ಗಿಳಿಯ ಮುಖ, ಕೊಕ್ಕಿದೆ; ಎರಡು ಕೈಗಳು; ಜಪಮಾಲೆ, ಅಭಯಮುದ್ರೆ. ಅಭಿಮಾನಿದೇವತೆ ಸ್ವಾಯಂಭುವ ಮನು.

(೫) ಇತಿಹಾಸಶಾಸ್ತ್ರ - ದೂರ್ವಾಶ್ಯಾಮವರ್ಣ, ಹಂದಿಯ ಮುಖ, ದೊಡ್ಡ ಹೊಟ್ಟೆ, ಕೈಗಳಲ್ಲಿ ಜಪಮಾಲೆ, ಕಳಶ. ಅಭಿಮಾನಿ ದೇವತೆ ಪ್ರಜಾಪತಿ (ಪಂಚಬ್ರಹ್ಮರಲ್ಲೊಬ್ಬ)

(೬) ಭರತಶಾಸ್ತ್ರ-(ನೃತ್ಯಶಾಸ್ತ್ರ) - ಶ್ವೇತವರ್ಣ, ಜಿಂಕೆಯ ಮುಖ, ತಲೆಯ ಮೇಲೆ ಜಟೆ, ಮೂರು ಕಣ್ಣುಗಳು, ಕೈಗಳಲ್ಲಿ ಜಪಮಾಲೆ, ತ್ರಿಶೂಲ. ಅಭಿಮಾನಿದೇವತೆಗಳು ಉಮಾಮಹೇಶ್ವರರು.

(೭) ಪಾಂಚರಾತ್ರಶಾಸ್ತ್ರ - ಶ್ವೇತವರ್ಣ, ವೃಷವಾಹನ, ವನಮಾಲಾವಿಭೂಷಿತ, ಕೈಗಳಲ್ಲಿ ಜಪಮಾಲೆ, ನೇಗಿಲು (ಸಂಕರ್ಷಣನ ಸಂಕೇತ). ಅಭಿಮಾನಿದೇವತೆ ಸಂಕರ್ಷಣ, ವ್ಯೂಹಮೂರ್ತಿಗಳಲ್ಲೊಬ್ಬ.

(೮) ಪಾಶುಪತಶಾಸ್ತ್ರ - ಶ್ವೇತವರ್ಣ, ಶಾಂತಭಾವ, ವ್ಯಾಳವಕ್ತ್ರ, ಕೃಶೋದರ, ವ್ಯಾಘ್ರಚರ್ಮಧರ, ಕೈಗಳಲ್ಲಿ ಜಪಮಾಲೆ, ಪಾತ್ರೆ. ಅಭಿಮಾನಿದೇವತೆ ರುದ್ರ.

(೯) ಪಾತಂಜಲಶಾಸ್ತ್ರ (ಯೋಗಶಾಸ್ತ್ರ) - ರಕ್ತವರ್ಣ, ಸರ್ಪವಕ್ತ್ರ, ತೇಜಸ್ವಿ, ಕುಂಡಲಾನ್ವಿತ, ಕೈಗಳಲ್ಲಿ ಜಪಮಾಲೆ, ಧ್ವಜಗಳು. ಅಭಿಮಾನಿದೇವತೆ ಅನಂತ. ಇವನ ಸ್ವರೂಪ -

'ನವಾಮ್ರಪಲ್ಲವಾಭಾಸಂ ಪಿಂಗಭ್ರೂಶ್ಮಶ್ರುಲೋಚನಂ।
ದಕ್ಷಿಣೋರ್ಧ್ವಕರೇ ಪದ್ಮಂ ಶಂಖಂ ತಸ್ಯಾಪ್ಯಧಃಕರೇ॥
ಚಕ್ರಮೂರ್ಧ್ವಕರೇ ವಾಮೇ ಗದಾಂ ತಸ್ಯಾಪ್ಯಧಃಕರೇ।
ಬಿಭ್ರತಂ ಪುಂಡರೀಕಾಕ್ಷಂ ಫಣಾಸಪ್ತಾನ್ವಿತಂ ಭಜೇ॥
ಗೋಮೂತ್ರವರ್ಣಃ॥'

(೧೦) ಸಾಂಖ್ಯಶಾಸ್ತ್ರ - ಕಪಿಲವರ್ಣ, ಬಭ್ರುವಕ್ತ್ರ, ಉಜ್ವಲಕುಂಡಲ, ದಿರ್ಘನಖಿಲೋಮಜಟಾಧರ, ಕೈಗಳಲ್ಲಿ ಜಪಮಾಲೆ, ದಂಡ. ಅಭಿಮಾನಿದೇವತೆ ಕಪಿಲ. ಇವನ ಸ್ವರೂಪ ಪಾಂಚರಾತ್ರದ ಮಂತ್ರಾಧ್ಯಾಯದಲ್ಲಿ ಹೀಗಿದೆ -

'ಪ್ರೋದ್ಯದ್ದಿವಾಕರಸಮಾನತನುಂ ಸಹಸ್ರಸೂರ್ಯೋರು
ದೀಧಿತಿಭಿರಾಪ್ತಸಮಸ್ತಲೋಕಂ

ಜ್ಞಾನಾಭಯಾಂಕಿತಕರಂ ಕಪಿಲಂ ಚ ದತ್ತಂ
ಧ್ಯಾಯೇದಜಾದಿಸಮಿತಿಂ ಪ್ರತಿಬೋಧಯಂತ್ತಂ (ತಂ)॥
ರಕ್ತವರ್ಣಃ॥'

೧೨. ಚತುಃಷಷ್ಟಿಕಲೆಗಳು -

ನಮ್ಮಲ್ಲಿ ಅರವತ್ತುನಾಲ್ಕು ಕಲೆಗಳ ಎಣಿಕೆಯಿದೆಯಷ್ಟೆ. ಈ ಕಲೆಗಳಲ್ಲಿ ಚತುರ್ದಶ ವಿದ್ಯಾಸ್ಥಾನಗಳೂ, ಶಾಸ್ತ್ರಭಾಗಗಳೂ, ಜನಪದಕ್ರೀಡೆಗಳೂ, ಕುಶಲಕಲೆಗಳೂ, ಆಭಿಚಾರಿಕಕರ್ಮಗಳೂ ಸೇರುತ್ತವೆ. ಇಲ್ಲಿ ಕೊಟ್ಟಿರುವ ಪಟ್ಟಿ ಶಿವತತ್ತ್ವರತ್ನಾಕರದಿಂದ ಎತ್ತಿಕೊಂಡದ್ದು -

ವೇದಗಳು (೪), ವೇದಾಂಗಗಳು (೬), ಇತಿಹಾಸ, ಆಗಮ, ನ್ಯಾಯಶಾಸ್ತ್ರ, ಕಾವ್ಯ, ಅಲಂಕಾರ, ನಾಟಕ, ಕವಿತ್ವ(ಕಾವ್ಯ), ಕಾಮಶಾಸ್ತ್ರ, ದ್ಯೂತ, ದೇಶ-ಭಾಷಾಪಜ್ಞಾನ, ಲಿಪಿಜ್ಞಾನ, ಲಿಪಿಕ್ರಿಯೆ, ಅವಧಾನ, ಸ್ವರಶಾಸ್ತ್ರ, ವಾಚಕ, ಸಾಮುದ್ರಿಕ, ಶಕುನ, ರತ್ನಪರೀಕ್ಷೆ, ಸ್ವರ್ಣಪರೀಕ್ಷೆ, ಅಶ್ವಲಕ್ಷಣ-ಪರೀಕ್ಷೆ, ಗಜಶಾಸ್ತ್ರ, ಮಲ್ಲವಿದ್ಯೆ, ಪಾಕಕರ್ಮ, ದಶದೋಹದ ವಿದ್ಯೆ, ಗಂಧಕವಾದ, ಧಾತುವಾದ, ಖನೀವಾದ, ರಸವಾದ, ಅಗ್ನಿಸ್ತಂಭ, ಜಲಸ್ತಂಭ, ಅಸಿಸ್ತಂಭನ, ವಾಯುಸ್ತಂಭ, ವಶ್ಯ (ವಶೀಕರಣ), ಮೋಹನ, ಆಕರ್ಷಣ, ಉಚ್ಚಾಟನ, ವಿದ್ವೇಷಣ, ಮಾರಣ (ಇವು ಆರು ಷಟ್ಕರ್ಮಗಳು), ಕಾಲವಂಚನ (ಮೃತ್ಯುವಂಚನ), ವಾಣಿಜ್ಯ, ಪಶುಪಾಲನೆ, ಕೃಷಿ, ಆಸವಕರ್ಮ, ಲಾವುಕಾಯೋಧನಪ್ರೌಢಿಮೆ, ಮೇಷಯುದ್ಧ (ಟಗರುಕಾಳಗ), ರತಿಕೌಶಲ, ಆಖೇಟ, ಅದೃಶ್ಯಕರಣ, ಚಿತ್ರಕರ್ಮ, ಲೋಹಶಿಲ್ಪ, ಅಶ್ಮ (ಶಿಲಾಶಿಲ್ಪ), ಮೃತ್ (ಮಣ್ಣಿನ ಗೊಂಬೆಗಳನ್ನು ಮಾಡುವುದು), ದಾರುಶಿಲ್ಪ (ಮರದಲ್ಲಿ ಕಡೆಯುವುದು), ವೇಣು (ಬೊಂಬು-ಬಿದಿರುಗಳ ಕೆಲಸ), ಚರ್ಮಕ್ರಿಯೆ (ಚರ್ಮದಿಂದ ಉಡುಗೆ ತಯಾರಿಗೆ), ದ್ಯೂತಕರಣಿ (ಜೂಜು), ಚೋರಕರ್ಮ(ಕಳ್ಳತನ), ಅಂಜನವಿದ್ಯೆ, ಮಂತ್ರೌಷಧ, ಸಿದ್ಧಿ, ಸ್ವರದೃಷ್ಟಿ, ವಂಚನ, ಜಲಪ್ಲವನ (ಈಜು), ವಾಕ್ಸಿದ್ಧಿ, ಘುಟಿಕಾಸಿದ್ಧಿ, ಪಾದುಕಾಸಿದ್ಧಿ, ಇಂದ್ರಜಾಲ, ಮಹೇಂದ್ರಜಾಲ.

ಈ ಅರವತ್ತುನಾಲ್ಕು ಕಲೆಗಳ ಬೇರೆ ಬೇರೆ ಎಣಿಕೆಗಳನ್ನು ಭಾಗವತ (೧೦, ೪೫, ೩೬, ಶ್ರೀಧರೀಯ ವ್ಯಾಖ್ಯಾನ) ಮತ್ತು ಶುಕ್ರನೀತಿ (೪ನೇ ಅಧ್ಯಾಯ) ಇವುಗಳಲ್ಲಿ ಕಾಣಬಹುದೆಂಬ ಒಕ್ಕಣೆಯೂ ಇದೆ.

೧೩. ಪಂಚಭೂತಸ್ವರೂಪ -

ನೆಲ, ನೀರು, ಗಾಳಿ, ಬೆಂಕಿ, ಆಕಾಶಗಳೆಂಬ ಐದು ಮೂಲಸಾಮಗ್ರಿಗಳಿಂದಲೇ ಭೌತಿಕವಾದ ಈ ಜಗತ್ತು ಸಿದ್ಧವಾದುದೆಂಬ ಕಲ್ಪನೆಯಿದೆಯಷ್ಟೆ. ಇವುಗಳಿಗೆ ಮೂರ್ತಿಲಕ್ಷಣವನ್ನು ಶೈವಾಗಮದಲ್ಲಿರುವಂತೆ ಕಾಣಿಸಲಾಗಿದೆ

(೧) ಪೃಥ್ವೀದೇವತೆ -

ಬಿಳಿಬಣ್ಣದವಳು, ದಿವ್ಯಾಭರಣಭೂಷಿತೆ, ನಾಲ್ಕು ಕೈಗಳು, ಸೌಮ್ಯಭಾವ, ಬಿಸಿಲಿನಂತೆ ಬಟ್ಟೆ, ಕೈಗಳಲ್ಲಿ ರತ್ನಪಾತ್ರ, ಸಸ್ಯಭಾಜನ, ಪದ್ಮ ಮತ್ತು ಔಷಧೀಪೂರಿತ ಪಾತ್ರೆ. ನಾಲ್ಕು ದಿಗ್ಗಜಗಳ ಬೆನ್ನಮೇಲೆ ಕುಳಿತವಳು. ಎಲ್ಲ ಬೆಳೆಗಳಿಗೂ ಆಸರೆಯಾದ ಭೂದೇವಿ.

(೨) ಅಬ್ದೇವತೆ -

ನೀರಿನ ಅಭಿಮಾನಿದೇವತೆಯರು ಹೆಂಗಸರು. ಶುಭ್ರವರ್ಣದವರು, ಮಾಧುರ್ಯಗುಣಯುಕ್ತರು, ಸರ್ವಾಲಂಕಾರಶೋಭಿತೆಯರು, ದ್ವಿಭುಜೆಯರು, ಪಾಶ ಕಲಶಗಳನ್ನು ಹಿಡಿದವರು.

(೩) ತೇಜೋದೇವತೆ -

ಅಗ್ನಿಯು ಹೊಂಬಣ್ಣದ ದೇವತೆ, ಏಳು ಜ್ವಾಲೆಗಳುಳ್ಳವನು, ಟಗರಿನ ಮೇಲೆ ಕುಳಿತವನು; ಏಳು ಕೈಗಳು, ಕೈಗಳಲ್ಲಿ ಶಕ್ತ್ಯಾಯುಧವೇ ಮೊದಲಾದ ಆಯುಧಗಳು; ಸ್ವಾಹಾದೇವಿಯಿಂದ ಕೂಡಿದವನು

(೪) ವಾಯುದೇವತೆ -

ಓಡುತ್ತಿರುವ ಜಿಂಕೆಯ ಮೇಲೆ ಕುಳಿತು ಧ್ವಜವನ್ನೊಂದು ಕೈಯಲ್ಲಿ ವರದಮುದ್ರೆಯನ್ನು ಇನ್ನೊಂದು ಕೈಯಲ್ಲಿ ಹಿಡಿದವನು; ಮೈಬಣ್ಣ ಹೊಗೆಯದು (ಧೂಮ್ರವರ್ಣ)

(೫) ಆಕಾಶದೇವತೆ -

ನೀಲಿಬಣ್ಣದ ಗಗನವೇ ದೇವತೆ, ನೀಲಿಬಣ್ಣದ ಬಟ್ಟೆಯುಟ್ಟವನು (ನೀಲಾಂಬರ), ದ್ವಿಭುಜ, ಒಂದು ಕೈಯಲ್ಲಿ ಚಂದ್ರ ಇನ್ನೊಂದರಲ್ಲಿ ಸೂರ್ಯ, ಸರ್ವಾಭರಣಭೂಷಿತ.

೧೪. ದಿಕ್ಕುಗಳು, ದಿಕ್ಪಾಲಕರು

ಪಂಚಭೂತಗಳ ಒಕ್ಕಣೆಯಾದಮೇಲೆ ದಶದಿಕ್ಕುಗಳನ್ನು ಮೂರ್ತೀಕರಿಸಿಕೊಂಡಿದ್ದಾರೆ

(೧) ಪೂರ್ವ (ಗಜವಾಹನೆ, ಬಾಲೆ, ರಕ್ತವರ್ಣ)

(೨) ಆಗ್ನೇಯ (ಪೂರ್ವಕ್ಕೂ ದಕ್ಷಿಣಕ್ಕೂ ನಡುವೆ, ಕಾರಂಡಗಾಮಿನಿ, ಬೃಹತ್ಕಾಯೆ, ಪದ್ಮವರ್ಣ)

(೩) ದಕ್ಷಿಣ (ಹದ್ದಿನ ಮೇಲೆ ಕುಳಿತವಳು, ಹದ್ದಿನ ಮೋರೆ, ಯುವತಿ, ಪೀತವರ್ಣ)

(೪) ನಿರ್ಋತಿ (ದಕ್ಷಿಣಕ್ಕೂ ಪಶ್ಚಿಮಕ್ಕೂ ನಡುವೆ, ಒಂಟೆಯ ವಾಹನ, ತರುಣೆ, ಹರಿದ್ವರ್ಣ)

(೫) ಪಶ್ಚಿಮ (ಯುವತಿ, ದ್ವಿಭುಜೆ, ಕುದುರೆ ವಾಹನ, ಕೃಷ್ಣವರ್ಣ)

(೬) ವಾಯವ್ಯ (ನೀಲವರ್ಣ, ಧನುರ್ವಾದನ ತತ್ಪರೆ)

(೭) ಉತ್ತರ (ಬಿಳಿಯ ಮುಖ, ಕೆಂಪು ಮೈ, ಕೋಪಗೊಂಡವಳು, ರಕ್ತವರ್ಣ)

(೮) ಈಶಾನ (ಪೂರ್ವಕ್ಕೂ ಉತ್ತರಕ್ಕೂ ನಡುವೆ, ತುಂಬ ಮುದುಕಿ, ಗೂಳಿಯ ವಾಹನ, ಶ್ವೇತವರ್ಣ)

(೯) ಊರ್ಧ್ವ (ಆಕಾಶದಂತೆ, ನೀಲವರ್ಣ)

(೧೦) ಅಧಃ (ಪೃಥ್ವಿಯಂತೆ, ಶ್ವೇತವರ್ಣ)

ಅನಂತರ ಎಂಟು ನಾಗಗಳ ಸ್ವರೂಪವನ್ನು ಹೇಳಿದ್ದಾರೆ. ಎಂಟುನಾಗಗಳೆಂದರೆ -

'ಅನಂತೋ ವಾಸುಕಿಶ್ಚೈವ ತಕ್ಷಕಕರ್ಕೋಟ ಪದ್ಮಕಾಃ।
ಮಹಾಪದ್ಮಶ್ಚ ಶಂಖಶ್ಚ ಕುಲಿಕೋ(s)ಷ್ಟೌ ಕುಳಾನಿ ಹಿ॥'

ಇವುಗಳಲ್ಲಿ ಅನಂತ, ಕುಲಿಕ, ಇವೆರಡೂ ಬ್ರಾಹ್ಮಣಜಾತಿಯಂತೆ, ಬಿಳಿಯ ಬಣ್ಣ. ವಾಸುಕಿ, ಶಂಖಪಾಲ ಇವೆರಡೂ ಕ್ಷತ್ರಿಯಜಾತಿ, ಕೆಂಪು ಬಣ್ಣ. ತಕ್ಷಕ, ಮಹಾಪದ್ಮ ಇವೆರಡೂ ವೈಶ್ಯಜಾತಿ, ಹಳದಿ ಬಣ್ಣ. ಪದ್ಮ, ಕರ್ಕೋಟಕ ಇವೆರಡೂ ಶೂದ್ರಜಾತಿ, ನೀಲಿಬಣ್ಣ. ಬಿಳಿಯ ಬಣ್ಣದ ನಾಗಗಳಿಗೆ ಎಂಟು ಸಾವಿರ ಹೆಡೆಗಳು, ಕೆಂಪು ಬಣ್ಣದ ನಾಗಗಳಿಗೆ ಏಳುನೂರು ಹೆಡೆಗಳು, ಹಳದಿಬಣ್ಣದ ನಾಗಗಳಿಗೆ ಐನೂರು ಹೆಡೆಗಳು, ನೀಲಿಬಣ್ಣದ ನಾಗಗಳಿಗೆ ಮುನ್ನೂರು ಹೆಡೆಗಳು. ಹೀಗೆಂದು ನೃಸಿಂಹ ಪ್ರಾಸಾದದ ಒಕ್ಕಣೆ.

ಮುಂದೆ ಎಂಟು ದಿಗ್ಗಜಗಳ ವಿಚಾರವನ್ನು ಆಗ್ನೇಯಪುರಾಣದಿಂದ ಎತ್ತಿಕೊಂಡಿದ್ದಾರೆ. ಈ ಆನೆಗಳಿಗೆ ಹೆಸರುಗಳು ಐರಾವತ, ಪುಂಡರೀಕ, ವಾಮನ, ಕುಮುದ, ಅಂಜನ, ಪುಷ್ಪದಂತ, ಸಾರ್ವಭೌಮ ಮತ್ತು ಸುಪ್ರತೀಕ. ಐರಾವತದ ಬಣ್ಣ ಬಿಳಿ, ನಾಲ್ಕು ದಂತಗಳು. ಪುಷ್ಪದಂತಕ್ಕೆ ಆರು ದಂತಗಳು, ಅದರ ಮೈಬಣ್ಣ ತುಂಬ ಕಪ್ಪು. ಇತರ ದಿಗ್ಗಜಗಳೆಲ್ಲ ಸಾಮಾನ್ಯವಾದ ಆನೆಗಳಂತೆಯೇ. ಈ ಎಂಟು ದಿಗ್ಗಜಗಳಿಗೆ ಪತ್ನಿಯರೂ ಇದ್ದಾರೆ - ಕ್ರಮವಾಗಿ ಅಭ್ರಮು, ಕಪಿಲಾ, ಪಿಂಗಳಾ, ಅನುಪಮಾ, ತಾಮ್ರಪರ್ಣೀ, ಸುದಂತೀ, ಅಂಜನಾ, ಅಂಜನಾವತೀ.

ಇದಾದಮೇಲೆ ಅಷ್ಟದಿಕ್ಪಾಲಕರ ಧ್ಯಾನಶ್ಲೋಕಗಳು ಬರುತ್ತವೆ, ಭಟ್ಟಭಾಸ್ಕರೀಯ, ಮಯೂಖ, ಸಿಂಗಾಭಟ್ಟೀಯ, ಶೈವಾಗಮಗಳಿಂದ ಆಯ್ದುಕೊಂಡುವು.

(೧) ಇಂದ್ರ -

ಸಹಸ್ರಾಕ್ಷ, ಚತುರ್ಭುಜ. ಕೆಳಗಿನ ಕೈಗಳಲ್ಲಿ ಅಭಯವರದ ಮುದ್ರೆಗಳು, ಮೇಲಿನ ಕೈಗಳಲ್ಲಿ ವಜ್ರಾಯುಧ, ಅಂಕುಶಗಳು. ಸರ್ವಾಭರಣಭೂಷಿತ, ಕುಂಡಲಗಳು, ಯಜ್ಞೋಪವೀತ. ಬಂಗಾರದ ಮೈಬಣ್ಣ; ಶಚೀದೇವಿಯೊಂದಿಗೆ ಐರಾವತದ ಮೇಲೆ ಕುಳಿತಿದ್ದಾನೆ.



ಇಂದ್ರ



ಇಂದ್ರ

(೨) ಅಗ್ನಿ -

ಏಳು ಕೈಗಳು, ನಾಲ್ಕು ಕೋಡುಗಳು, ಎರಡು ತಲೆಗಳು, ಏಳು ನಾಲಗೆಗಳು. ಪ್ರಸನ್ನವಸನ, ಸುಖಾಸೀನ, ಶುಚಿಸ್ಮಿತ; ಕೈಗಳಲ್ಲಿ ಶಕ್ತ್ಯಾಯುಧ, ಅನ್ನ, ಸ್ರುವ, ಸ್ರುಚ. ತೋಮರ, ವ್ಯಜನ ಮತ್ತು ಘೃತಪಾತ್ರೆಗಳು. ಎಡಭಾಗದಲ್ಲಿ ಸ್ವಧಾದೇವಿ, ಬಲಭಾಗದಲ್ಲಿ ಸ್ವಾಹಾದೇವಿ. ಮೇಷಾರೂಢ, ಜಟಾಮಕುಟ, ಧೂಮಧ್ವಜ, ರಕ್ತವರ್ಣ.



ಅಗ್ನಿ

(೩) ಯಮ -

ಕರಾಳಮಹಿಷಾರೂಢ, ಕಾಲದಂಡಧರ, ಶ್ಯಾಮವರ್ಣ, ಪಾಶಹಸ್ತ. ಇಳಾ ಎಂಬ ಪತ್ನಿಯೊಡನಿದ್ದಾನೆ. ಲೋಕಗಳಿಗೆ ಕರ್ಮಫಲಪ್ರದ.



ಯಮಧರ್ಮ



ಅಗ್ನಿದೇವರು



ಯಮಧರ್ಮ

(೪) ನಿರ್ಋತಿ -

ನೀಲವರ್ಣ, ಊರ್ಧ್ವಕೇಶ, ವಿರೂಪಾಕ್ಷ, ಕರಾಳ; ಕೈಗಳಲ್ಲಿ ಕತ್ತಿ-ಗುರಾಣಿಗಳು; ಅವನ ಹೆಂಡತಿ ಕಾಳಿಕಾ.



ನೈಋತ್ಯ



ನೈಋತ್ಯ

(೫) ವರುಣ -

ನಾಗಪಾಶಧರ, ರಕ್ತಭೂಷಣ, ಅಂಬುಪತಿ, ಮಕರವಾಹನ, ಸ್ವರ್ಣವರ್ಣ, ಹೆಂಡತಿ ಪದ್ಮಿನಿ.



ವರುಣ



ವರುಣ

(೬) ವಾಯು -

ಜಗತ್ತಿನ ಪ್ರಾಣಬಂಧು, ಕೃಷ್ಣಮೃಗದ ಮೇಲೆ ಕುಳಿತಿದ್ದಾನೆ, ಕೈಗಳಲ್ಲಿ ಬಂಗಾರದ ಕೋಲು ಮತ್ತು ಧ್ವಜಗಳನ್ನು ಹಿಡಿದಿದ್ದಾನೆ. ಶ್ಯಾಮವರ್ಣ. ಹೆಂಡತಿ ಮೋಹಿನೀ.



ವಾಯು



ಕುಬೇರ

(೭) ಕುಬೇರ -

ಅಶ್ವಾರೂಢ, ಕುಂತಪಾಣಿ, ನಿಧೀಶ್ವರ, ಧನದ, ಸ್ವರ್ಣವರ್ಣ. ಹೆಂಡತಿ ಚಿತ್ರಿಣೀ.



ಕುಬೇರ

(೮) ಈಶಾನ -

ಶುದ್ಧಸ್ಫಟಿಕ ಸಂಕಾಶ, ವೃಷಭವಾಹನ; ನಾಲ್ಕು ಕೈಗಳು, ಜಪಮಾಲೆ, ಶೂಲ, ಅಭಯವರದಮುದ್ರೆಗಳು. ಪಂಡಿತ ಗೌರಿ.



ಈಶಾನ



ಈಶಾನ

ಅಷ್ಟದಿಕ್ಪಾಲಕರಾದಮೇಲೆ ಧ್ರುವ, ಅಧ್ವರ, ಸೋಮ, ಆಪ್, ಅನಿಲ, ಅನಲ, ಪ್ರತ್ಯೂಷ ಮತ್ತು ಪ್ರಭಾವಸು ಎಂಬ ಅಷ್ಟವಸುಗಳು; ವಿಶ್ವೇದೇವತೆಗಳು; ಲವಣ, ಇಕ್ಷು, ಸುರಾ, ಸರ್ಪಿ, ದಧಿ, ಕ್ಷೀರ ಮತ್ತು ಶುದ್ಧೋದಕಗಳೆಂಬ ಸಪ್ತಸಮುದ್ರಗಳು; ಗಂಗಾ, ಯಮುನಾ, ಗೋದಾವರೀ, ಕೃಷ್ಣಾ, ರೇವಾ, ತಾಪೀ, ವೇಣೀ ಮತ್ತು ಸರಸ್ವತೀ ಎಂಬ ಅಷ್ಟನದಿಗಳು; ಪರ್ಜನ್ಯ; ಅಶ್ವಿನೀದೇವತೆಗಳು; ಕಾಮಧೇನು; ದ್ವಾದಶಾಯುಧಗಳ ಮೂರ್ತಿಲಕ್ಷಣಗಳನ್ನು ತಿಳಿಯಹೇಳಿದ್ದಾರೆ.



ಅಶ್ವಿನೀ ದೇವತೆಗಳು

ವಜ್ರಾಯುಧ, ಶಕ್ತ್ಯಾಯುಧ, ದಂಡ, ಖಡ್ಗ, ಪಾಶ, ಅಂಕುಶ, ಗದೆ, ತ್ರಿಶೂಲ, ಚಕ್ರ, ಪದ್ಮ ಇವನ್ನು ದಶಾಯುಧಗಳೆಂದು ಕರೆದಿದ್ದಾರೆ. ಇವೆಲ್ಲವನ್ನೂ ದ್ವಿಭುಜ, ದ್ವಿನೇತ್ರ, ಸರ್ವಾಭರಣಭೂಷಿತ, ಕರಂಡಮಕುಟ, ಬದ್ಧಾಂಜಲಿಪುಟ ಹೀಗೆ ಅಸ್ತ್ರಮೂರ್ತಿಗಳಂತೆ ಕಾಣಿಸಬೇಕಂತೆ. ಅವುಗಳ ಮೈಬಣ್ಣ ಹಲವು; ವಿದ್ಯುತ್, ನೀಲಜೀಮೂತ, ಪಾವಕ, ಪದ್ಮರಾಗ, ತುಷಾರ, ಇಂದ್ರನೀಲ, ಶಾರದಭ್ರ, ರಕ್ತ ಹೀಗೆ. ಈ ಹತ್ತು ಆಯುಧಗಳಿಗೆ ಧನಸ್ಸು, ಶರ (ಬಿಲ್ಲು-ಬಾಣ) ಸೇರಿಸಿದರೆ ದ್ವಾದಶಾಯುಧಗಳು. ಇವುಗಳಲ್ಲಿ ಗದೆ, ಬಿಲ್ಲು ಸ್ತ್ರೀಯರು; ಪಾಶ, ಪದ್ಮ ಎರಡೂ ನಪುಂಸಕ, ಉಳಿದುವೆಲ್ಲ ಪುರುಷರು. ಮೂರ್ತಿಗಳನ್ನು ಮಾಡಿ ತಲೆಯ ಮೇಲೆ ಆಯುಧಗಳನ್ನು ಎರಡು ಕೈಗಳಿಂದಲೂ ಎತ್ತಿಹಿಡಿದಂತೆ ಕಾಣಿಸಬೇಕು. ಬಿಲ್ಲು ಕೆಂದಾವರೆ ಬಣ್ಣದ ಹೆಂಗಸು; ಬಾಣ ದಿವ್ಯರಕ್ತಾಂಗ.

೧೫. ಶಕ್ತಿತ್ರಯ, ಉಪಾಯ ಚತುಷ್ಟಯ -

ಶಕ್ತಿಗಳಲ್ಲಿ ಪ್ರಭುಶಕ್ತಿ, ಮಂತ್ರಶಕ್ತಿ ಮತ್ತು ಉತ್ಸಾಹಶಕ್ತಿ ಎಂಬುವು ಮುಖ್ಯವಾದುವು.

(೧) ಪ್ರಭುಶಕ್ತಿಯು ಪ್ರಭಾವವೆಂದೂ ಹೆಸರಾಗಿದೆ. ಇದು ಹೆಂಗಸಿನ ರೂಪದ್ದು, ಕ್ಷಾತ್ರಗುಣ. ಪಾಟಲವರ್ಣ; ಬಿಳಿಬಣ್ಣದ ಕುದುರೆಯೇರಿ ಕುಳಿತವಳು; ತಲೆಯ ಮೇಲೆ ಕರಂಡಮಕುಟ. ಹತ್ತು ಕೈಗಳು - ಚಕ್ರ, ಶಕ್ತ್ಯಾಯುಧ, ಖಡ್ಗ, ಅಂಕುಶ, ವರದಮುದ್ರೆಗಳು ಬಲಗೈಗಳಲ್ಲಿ; ಶಂಖ, ಘಂಟೆ, ಖೇಟ (ಗುರಾಣಿ), ಗದೆ, ಅಭಯಮುದ್ರೆಗಳು ಎಡಗೈಗಳಲ್ಲಿ. ಶತ್ರುಗಳನ್ನು ಧ್ವಂಸಮಾಡಲು ಹೊರಟವಳು.

(೨) ಮಂತ್ರಶಕ್ತಿಯು ಕುಂಕುಮದಂತೆ ಕೆಂಪು ಮೈಬಣ್ಣವುಳ್ಳವಳು; ಮುಖ ಮಾತ್ರ ಬಂಗಾರದಂತೆ ಹಳದಿಯ ಬಣ್ಣ. ತಲೆಯ ಮೇಲೆ ಕಿರೀಟಮಕುಟ. ಹದಿನಾಲ್ಕು ಕೈಗಳು; ಮದಿಸಿದ ಆನೆಯನ್ನೇರಿ ಸಾಗುವವಳು. ಕೈಗಳಲ್ಲಿ ಬಿಲ್ಲು, ಬಾಣ, ಕತ್ತಿ, ಶೂಲ ಮೊದಲಾದ ಆಯುಧಗಳಿವೆ.

(೩) ಉತ್ಸಾಹಶಕ್ತಿಯು ಸಿಂದೂರವರ್ಣದ ಮುಖವುಳ್ಳವಳು; ಜಾಂಬೂನದರುಚಿ, ಕುಣಿಯುತ್ತ ನವಿಲನ್ನೇರಿ ಬರುವಂತೆ ರೂಪ. ಆರು ಕೈಗಳು - ಶಕ್ತ್ಯಾಯುಧ, ಬಿಲ್ಲು, ಪಾಶ, ಬಾಣ, ವರದ ಅಭಯಮುದ್ರೆಗಳು. ಬಣ್ಣಬಣ್ಣದ ಬಟ್ಟೆಯುಟ್ಟವಳು; ಶುಚಿಸ್ಮಿತೆ.

ಈ ವಿವರಗಳು ಕಾರಣಾಗಮದಿಂದ ಎತ್ತಿಕೊಂಡವು

ಹೀಗೆಯೇ ಸಾಮ, ದಾನ, ಭೇದ, ದಂಡಗಳೆಂಬ ನಾಲ್ಕು ಉಪಾಯಗಳಿಗೂ ಮೂರ್ತಿಲಕ್ಷಣವನ್ನು ಹೇಳಲಾಗಿದೆ.

(೧) ಸಾಮೋಪಾಯವೆಂಬುದು ಹೊಂಬಣ್ಣದ ಹೆಣ್ಣು. ಆನೆಯನ್ನೇರಿ ನಗುಮೊಗದಿಂದ ಕುಳಿತವಳು. ಅವಳಿಗೆ ಆರು ಕೈಗಳು; ಕೈಗಳಲ್ಲಿ ಚಕ್ರ, ಶಂಖ, ವರದ ಅಭಯ ಮುದ್ರೆಗಳು. ಶತ್ರುಗಳನ್ನು ವಶಪಡಿಸಿಕೊಳ್ಳುವುದರಲ್ಲಿ ಜಾಣೆ

(೨) ದಾನೋಪಾಯವು ಸಂಜೆಗೆಂಪು ಮೈಬಣ್ಣದ ಗಂಡು; ಶಿಬಿಕೆಯನ್ನೇರಿ ಬರುವವನು. ಎಂಟು ಕೈಗಳವನು; ಕೈಗಳಲ್ಲಿ ಚಕ್ರ, ಪದ್ಮನಿಧಿ, ಬಿಲ್ಲು, ಶಂಖ, ಅಂಕುಶ, ಬಾಣ, ಅಭಯ ವರದ ಮುದ್ರೆಗಳು. ಹಳದಿಬಣ್ಣದ ಬಟ್ಟೆಯುಟ್ಟವನು. ಕಿರೀಟ ಮೊದಲಾದ ಆಭರಣಗಳನ್ನು ಧರಿಸಿದವನು.

(೩) ಭೇದೋಪಾಯವು ಮೋಡದ ಮೈಬಣ್ಣದ ಗಂಡಸು. ಕರಾಳವಾದ ಮೋರೆ, ಕ್ರೂರವಾದ ಕೋರೆದಾಡೆಗಳು. ತರಕ್ಷುವಾಹನ (ಹುಲಿಯ ಒಂದು ಜಾತಿ). ಹತ್ತು ಕೈಗಳು; ಚಕ್ರ, ಶೂಲ, ಬಿಲ್ಲು, ಪಾಶ, ವರದ ಮುದ್ರೆಗಳು ಬಲಗೈಗಳಲ್ಲಿ, ಶಂಖ, ದಂಡ, ಬಾಣ, ಖಟ್ವಾಂಗ, ಅಭಯ ಮುದ್ರೆಗಳು ಎಡಗೈಗಳಲ್ಲಿ. ಕಿರೀಟ ಕವಚೋಜ್ವಲ

(೪) ದಂಡೋಪಾಯವು ರಕ್ತವರ್ಣದ ಮತ್ತು ಸಿಂಹದ ಮೋರೆಯುಳ್ಳ ಗಂಡಸು. ಹೆಣದ ಮೇಲೆ ಕುಳಿತವನು. ಚಕ್ರ, ಶೂಲ, ಗದೆ, ದಂಡ, ಕತ್ತಿ, ಘಂಟೆ, ಬಿಲ್ಲು, ಕಶ (ಚಾವಟಿ), ಅಂಕುಶ, ಬಾಣ, ಬೆಂಕಿ, ಗುರಾಣಿ, ಪಾಶ, ಶಂಖ, ಅಭಯವರದ ಮುದ್ರೆಗಳನ್ನು ಹಿಡಿದ ಹದಿನಾರು ಕೈಗಳು. ನೀಲಿ ಬಣ್ಣದ ಬಟ್ಟೆ. ಯುದ್ಧದಲ್ಲಿ ಶತ್ರುಗಳನ್ನು ಕೊಲ್ಲುವವನು.

೧೬. ಮನುಗಳು, ಚಿರಂಜೀವಿಗಳು.

ಈ ನಿಧಿಯ ಕಡೆಯಲ್ಲಿ ಚತುರ್ದಶಮನುಗಳ ಹೆಸರು, ಮನೆತನ, ಹೆಂಡತಿ, ಜಾತಿ, ಬಣ್ಣ, ಆಯುಸ್ಸು ಮೊದಲಾದ ವಿವರಗಳನ್ನು




ಸ್ವಾಯಂಭುವ ಮನು



ಸ್ವಾರೋಚಿಷ ಮನು



ಉತ್ತಮ ಮನು



ತಾಮಸ ಮನು



ರೈವತ ಮನು



ಚಾಕ್ಷುಷ ಮನು



ವೈವಸ್ವತ ಮನು



ಸೂರ್ಯಸಾವರ್ಣಿ ಮನು



ದಕ್ಷಸಾವರ್ಣಿ ಮನು



ಬ್ರಹ್ಮಸಾವರ್ಣಿ ಮನು



ಧರ್ಮಸಾವರ್ಣಿ ಮನು



ರುದ್ರಸಾವರ್ಣಿ ಮನು



ವೇದಸಾವರ್ಣಿ ಮನು

ಕೊಡಲಾಗಿದೆ. ಸ್ವಾಯಂಭುವ, ಸ್ವಾರೋಚಿಷ, ಉತ್ತಮ, ತಾಮಸ, ರೈವತ, ಚಾಕ್ಷುಷ, ವೈವಸ್ವತ, ಸೂರ್ಯಸಾವರ್ಣಿ, ದಕ್ಷಸಾವರ್ಣಿ, ಬ್ರಹ್ಮಸಾವರ್ಣಿ, ಧರ್ಮಸಾವರ್ಣಿ, ರುದ್ರಸಾವರ್ಣಿ, ವೇದಸಾವರ್ಣಿ, ಇಂದ್ರಸಾವರ್ಣಿ ಇವರೇ ಹದಿನಾಲ್ಕು ಮನುಗಳು.

ಅನಂತರ ಒಂಬತ್ತು ಮಂದಿ ಚಿರಂಜೀವಿಗಳನ್ನು ಕುರಿತಂತೆ ವಿವರಗಳಿವೆ. ಅಶ್ವತ್ಥಾಮ, ಬಲಿ, ವ್ಯಾಸ, ಹನುಮಾನ್, ವಿಭೀಷಣ, ಕೃಪ, ಪರಶುರಾಮ, ಪ್ರಹ್ಲಾದ, ಮಾರ್ಕಂಡೇಯ ಇವರು ಎಂದೆಂದಿಗೂ ಇರುವರೆಂಬ ನಂಬಿಕೆಯಿದೆ; ಹಾಗಾಗಿ ಇವರು ಚಿರಂಜೀವಿಗಳು.



ಇಂದ್ರಸಾವರ್ಣಿ ಮನು

ಮರೀಚಿಯೇ ಮೊದಲಾಗಿ ಹತ್ತು ಋಷಿಗಳು, ಭೃಗುಗಣದ ಋಷಿಗಳು, ಅಂಗಿರಗಣದ ಋಷಿಗಳು, ಶಾಸ್ತ್ರಾಭಿಮಾನಿದೇವತೆಗಳು, ವಿಶ್ವಕರ್ಮಸ್ವರೂಪ ಇವನ್ನು ಹೇಳಿ ಬ್ರಹ್ಮನಿಧಿಯು ಮುಗಿಯುತ್ತದೆ. ಶಾಸ್ತ್ರಾಭಿಮಾನಿದೇವತೆಗಳನ್ನು ನೃಸಿಂಹಪ್ರಸಾದವು ಹೀಗೆ ಕಾಣಿಸಿದೆ -

ವೇದಾಂಗಗಳಲ್ಲಿ ಶಿಕ್ಷಾ ಶಾಸ್ತ್ರಕ್ಕೆ ಪ್ರಜಾಪತಿ, ಕಲ್ಪಕ್ಕೆ ಬ್ರಹ್ಮ, ವ್ಯಾಕರಣಕ್ಕೆ ಸರಸ್ವತಿ, ನಿರುಕ್ತಕ್ಕೆ ವರುಣ, ಛಂದಃಶಾಸ್ತ್ರಕ್ಕೆ ಅದಿತಿ, ಜ್ಯೋತಿಷಕ್ಕೆ ವಿಷ್ಣು (ಅಗ್ನಿ); ಇತರ ಶಾಸ್ತ್ರಗಳಲ್ಲಿ ಮೀಮಾಂಸಾಶಾಸ್ತ್ರಕ್ಕೆ ಸೋಮ, ನ್ಯಾಯಶಾಸ್ತ್ರಕ್ಕೆ ವಾಯು, ಧರ್ಮಶಾಸ್ತ್ರಕ್ಕೆ ಯಮಧರ್ಮ, ಪುರಾಣಕ್ಕೆ ಮನು, ಇತಿಹಾಸಕ್ಕೆ ಪ್ರಜಾಧ್ಯಕ್ಷ, ಧನುರ್ವೇದಕ್ಕೆ ಇಂದ್ರ, ಆಯುರ್ವೇದಕ್ಕೆ ಧನ್ವಂತರಿ, ಫಲವೇದಕ್ಕೆ ಮಹಾದೇವ, ನೃತ್ತಶಾಸ್ತ್ರಕ್ಕೆ ಮಹೇಶ್ವರ, ಪಾಂಚರಾತ್ರಕ್ಕೆ ಸಂಕರ್ಷಣ, ಪಾಶುಪತಕ್ಕೆ ರುದ್ರ, ಯೋಗಕ್ಕೆ ಅನಂತ, ಸಾಂಖ್ಯಕ್ಕೆ ಕಪಿಲಮುನಿ, ಅರ್ಥಶಾಸ್ತ್ರಕ್ಕೆ ಕುಬೇರ, ಕಲೆಗಳಿಗೆ ಕಾಮದೇವ (ಮನ್ಮಥ).

ಯಕ್ಷರ ಸ್ವರೂಪವನ್ನು ಇಲ್ಲಿ ಸೇರಿಸಲಾಗಿದೆ -

'ಯಕ್ಷಾಃ ಸರ್ವೇ ಗಣಾಧ್ಯಕ್ಷಾಃ ಖಡ್ಗಖೇಟಧರಾಶ್ಯುಭಾಃ।
ಖೇಚರಾ ಯೇ ದೇವಚರಾಸ್ತಾನ್ನಮಸ್ಯೇ॥'

ಹೇಮಾದ್ರಿಯ ದಾನಖಂಡದಲ್ಲಿ ಬರುವ ವಿಶ್ವಕರ್ಮನ ಮೂರ್ತಿಲಕ್ಷಣ -

'ವಿಶ್ವಕರ್ಮಾತು ಕರ್ತವ್ಯಃ ಶ್ಮಶ್ರುಳೋ ರಶನಾಧರಃ।
ಸದಂಶಪಾಣಿದ್ವಿ(ರ್ದ್ವಿ)ಭುಜಸ್ತೇಜೋರೂಪಧರೋ ಮಹಾನ್॥
ಕನಕವರ್ಣಃ॥'

ಇಲ್ಲಿಗೆ ನಾಲ್ಕನೆಯದಾದ ಬ್ರಹ್ಮನಿಧಿಯು ಮುಗಿಯುತ್ತದೆ.

೧೭. ಆಗಮನಿಧಿ -

ಎಂಟನೆಯದಾದ ಆಗಮನಿಧಿ ಮೊದಲಾಗುವುದು ಹದಿನೆಂಟುಮಹಾಪುರಾಣಗಳ ಒಕ್ಕಣೆಯಿಂದ. ಪರಾಶರನ ಮಗನಾದ ವ್ಯಾಸನೇ ಎಲ್ಲ ಪುರಾಣಗಳ ಪ್ರವರ್ತಕನೆಂದೂ, ಪುರಾಣವು 'ಅಖಿಲಾರ್ಥಬೋಧಕ'ವೆಂದೂ 'ಶ್ರುತಿಸಂಮಿತ'ವೆಂದೂ, ದೇವಲೋಕದಲ್ಲಿ ಶತಕೋಟಿಪ್ರವಿಸ್ತರವಾದುದು ಭೂಲೋಕದಲ್ಲಿ ಹದಿನೆಂಟು ಪುರಾಣಗಳಾಗಿ ತೋರಿಕೊಂಡವೆಂದೂ ಪುರಾಣಸಾರವೆಂಬ ಗ್ರಂಥದಿಂದ ಪ್ರಸ್ತಾವವಾಗಿ ಎತ್ತಿಕೊಳ್ಳಲಾಗಿದೆ. ಬ್ರಹ್ಮ, ಪಾದ್ಮ, ವರಾಹ, ವಾಯು, ಭಾಗವತ, ಭವಿಷ್ಯ, ನಾರದೀಯ, ಮಾರ್ಕಂಡೇಯ, ಆಗ್ನೇಯ, ಬ್ರಹ್ಮಕೈ(ವೈ)ವರ್ತ, ಲೈಂಗ್ಯ, ವಾರಾಹ, ಸ್ಕಂದ, ವಾಮನ, ಕೂರ್ಮ, ಮಾತ್ಸ್ಯ, ಗರುಡ, ಬ್ರಹ್ಮಾಂಡಪುರಾಣಗಳ ಲಕ್ಷಣಗಳನ್ನು ಹೇಳಿದ್ದಾರೆ. ಈ ಎಲ್ಲ ಪುರಾಣಗಳೂ ಸೇರಿ ಶ್ಲೋಕಸಂಖ್ಯೆಯು ನಾಲ್ಕುಲಕ್ಷವೆಂದು ಎಣಿಸಲಾಗಿದೆ.

ಅನಂತರ ಮಹಾಭಾರತದ ಪರ್ವಗಳು, ಅಧ್ಯಾಯಗಳು, ಶ್ಲೋಕಗಳ ಸಂಖ್ಯೆಯನ್ನು ಮಹಾಭಾರತದ ಅನುಕ್ರಮಣಿಕಾಧ್ಯಾಯದಲ್ಲಿರುವಂತೆ ಹೇಳಿದ್ದಾರೆ. ಅನಂತರ ಶ್ರೀಮದ್ಭಾಗವತದ ಸ್ಕಂದಗಳು, ಅಧ್ಯಾಯಗಳು, ಶ್ಲೋಕಗಳ ಸಂಖ್ಯೆ; ರಾಮಾಯಣದ ಕಾಂಡಗಳು, ಸರ್ಗಗಳು, ಶ್ಲೋಕಗಳ ಸಂಖ್ಯೆ; ಸ್ಕಾಂದಪುರಾಣದ ಖಂಡಗಳು, ಅಧ್ಯಾಯಗಳು, ಶ್ಲೋಕಗಳ ಸಂಖ್ಯೆ ಇವು ಹೇಳಲ್ಪಟ್ಟಿವೆ.

ನಾಲ್ಕು ವೇದಗಳು, ನಾಲ್ಕು ಉಪವೇದಗಳು (ಅಂಗವೇದಗಳು), ನಾಲ್ಕು ವೇದಗಳಿಂದ ಹುಟ್ಟಿಕೊಂಡ ನಾಲ್ಕು ಶಾಸ್ತ್ರಗಳು (ಆಯುಃ ಶಾಸ್ತ್ರ, ಶಿಲ್ಪಶಾಸ್ತ್ರ, ಜ್ಯೋತಿಷ, ಧಾತುವಾದ), ವೇದಗಳ ಷಡಂಗಗಳು (ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಜ್ಯೋತಿಷ, ಛಂದಸ್ಸು), ವೇದಗಳ ಆರು ಉಪಾಂಗಗಳು (ಪದ, ಪ್ರತಿಪದ, ಛಂದೋಜ್ಞಾನ, ಸ್ವರಶಾಸ್ತ್ರ, ನ್ಯಾಯ, ಬ್ರಹ್ಮಮೀಮಾಂಸಾ), ವೇದಪತ್ನಿಯರು (ಸಾಮಿಧೇನೀ, ಸ್ರುಕ್, ಜುಹೂ, ಸಮಿತ್) ಮೂವತ್ತೆರಡು ಉಪನಿಷತ್ತುಗಳು (ಈಶಾವಾಸ್ಯ, ಕೇನ, ಕಠ, ಮುಂಡಕ, ಮಾಂಡೂಕ್ಯ, ಛಾಂದೋಗ್ಯ, ತೈತ್ತಿರೀಯ, ಪ್ರಶ್ನ, ಬೃಹದಾರಣ್ಯಕ, ಐತರೇಯ, ಗರ್ಭ, ಕೈವಲ್ಯ, ಶ್ವೇತಾಶ್ವತರ, ಕಾಲಾಗ್ನಿರುದ್ರ, ಹಂಸ, ನಾರಾಯಣ, ಶಾರೀರ, ನಾದಬಿಂದು, ಮಂತ್ರ, ಅಮೃತಬಿಂದು, ಬ್ರಹ್ಮ, ಜಾಬಾಲ, ಅಥರ್ವಶಿರ, ಬೃಹಜ್ಜಾಬಾಲ, ಸುಬಾಲಕ, ಮೈತ್ರೇಯ, ಪರಮಹಂಸ, ಕ್ಷುರಿಕ, ಕೌಷೀತಕ, ತಾಪನೀಯ, ಅರುಣೇ, ಮೈತ್ರಾಯಣೇ, ಅಥರ್ವಶಿಖಾ), ವೇದಗತ ಭೇದಗಳು (ವಿಧಿ, ಮಂತ್ರ, ಅರ್ಥವಾದ), ಆರು ಶಾಸ್ತ್ರಗಳು (ತರ್ಕ, ವೈಶೇಷಿಕ, ಮೀಮಾಂಸಾ, ವೇದಾಂತ, ಯೋಗ, ಸಾಂಖ್ಯ), ಆರು ಉಪಶಾಸ್ತ್ರಗಳು (ತರ್ಕಶಾಸ್ತ್ರದಿಂದ ನೀತಿಶಾಸ್ತ್ರ, ವೈಶೇಷಿಕದಿಂದ ಯುಕ್ತಿವಿಗುಂಭಿತವಾದ ಪ್ರಮಾಣಶಾಸ್ತ್ರ, ಮಿಮಾಂಸಾದಿಂದ ಕರ್ಮಕ್ರಿಯೆಗೆ ಅನುಕೂಲವಾಗುವ ಧರ್ಮಶಾಸ್ತ್ರ, ವೇದಾಂತದಿಂದ ಶೋಕಕ್ಕೆಲ್ಲ ಮದ್ದಾದ ಅಧ್ಯಾತ್ಮಶಾಸ್ತ್ರ, ಯೋಗದಿಂದ ಆತ್ಮಜ್ಞಾನಪ್ರದರ್ಶಕವಾದ ತತ್ತ್ವಶಾಸ್ತ್ರ, ಸಾಂಖ್ಯದಿಂದ ಸರ್ವದುಃಖಿಹರವಾದ ಮೋಕ್ಷಶಾಸ್ತ್ರ) ಇವುಗಳನ್ನು ಪಟ್ಟಿಮಾಡಲಾಗಿದೆ.

ಶಾಸ್ತ್ರದಲ್ಲಿರುವ ವಿಭಾಗವನ್ನು ಸೂತ್ರ, ಭಾಷ್ಯ, ವಾರ್ತಿಕಗಳೆಂದು ಸೂಚಿಸಿದ್ದಾರೆ. ವ್ಯಾಖ್ಯಾನಲಕ್ಷಣವನ್ನು -

'ಪದಚ್ಛೇದಃ ಪದಾರ್ಥೋಕ್ತಿಃ ವಿಗ್ರಹೋ ವಾಕ್ಯಯೋಜನಾ।
ಆಕ್ಷೇಪೋ(s)ಸ್ಯ ಸಮಾಧಾನಂ ವ್ಯಾಖ್ಯಾನಂ ಷಡ್ವಿಧಂ॥'

ಎಂದು ಹೇಳಿದ್ದಾರೆ. ಮತ್ತೆ ಮಹಾಪುರಾಣಗಳ, ಉಪಪುರಾಣಗಳ ಹೆಸರುಗಳನ್ನು ಹೇಳಿದ್ದಾರೆ. ಪುರಾಣವೃತ್ತಗಳ, ಕಲ್ಪಗ್ರಂಥಗಳ, ಸ್ಮೃತಿಗಳ, ಉಪಸ್ಮೃತಿಗಳ ಪಟ್ಟಿಯನ್ನು ಕೊಡಲಾಗಿದೆ. ಸ್ಮೃತಿಗ್ರಂಥಗಳಲ್ಲಿ ಆಚಾರ, ವ್ಯವಹಾರ, ಕಾಲನಿರ್ಣಯ, ಪ್ರಾಯಶ್ಚಿತ್ತಕ್ರಮ, ಶ್ರಾದ್ಧ ಎಂಬ ಐದು ವಿಷಯಗಳಿವೆಯಂತೆ. ಸರ್ಗ, ಪ್ರತಿಸರ್ಗ, ವಂಶ, ಮನ್ವಂತರ, ವಂಶಾನುಚರಿತಗಳು ಪುರಾಣಗಳ ವಿಷಯಗಳಂತೆ. ಕಾವ್ಯದಲ್ಲಿ ಬರುವ ಅಷ್ಟಾದಶವಿಧವರ್ಣನೆಗಳನ್ನು (ನಗರ, ಅರ್ಣವ, ಶೈಲ, ಋತು, ಸೂರ್ಯೋದಯ, ಚಂದ್ರೋದಯ, ಉದ್ಯಾನ, ಸಲಿಲ, ಕ್ರೀಡೆ, ಮಧುಪಾನ, ರತಿ, ವಿಪ್ರಲಂಭ, ವಿವಾಹ, ಕುಮಾರೋದಯ, ಮಂತ್ರ, ದ್ಯೂತ, ಪ್ರಮಾಣ, ನಾಯಕಾಭ್ಯುದಯ) ಸೂಚಿಸಿದ್ದಾರೆ.

ಮುಂದೆ ಆಗಮಪ್ರಭೇದಗಳಾದ ವೈದಿಕತಾಂತ್ರಿಕಗ್ರಂಥಗಳ ಪಟ್ಟಿಯಿದೆ. 'ಅನುಸೃತ್ಯ ತು ವೇದೋಕ್ತಕರ್ಮಾಣಿ ಅನುಚರಂತಿ ಹಿ' ಎಂದು ಲಕ್ಷಣವನ್ನು ಹೇಳಿ ಮೂವತ್ತೊಂದು ಗ್ರಂಥಗಳನ್ನು ಹೆಸರಿಸಿದ್ದಾರೆ. ಅವು ಯಾವುವೆಂದರೆ -

'ಸರ್ವಜ್ಞಾನೋತ್ತರ, ಚಂದ್ರಜ್ಞಾನ, ಜ್ಞಾನಾರ್ಣವ, ಆರುಣೇಶ್ವರ, ವಿಶುದ್ಧೇಶ್ವರ, ತ್ರೈಪುರ, ಮಹಾದೇವ, ನ್ಯಾಯೋತ್ತರ, ಕಾಲಾಸಾರ, ಕಾಲವಾದ, ಯೋಗೀಶ್ವರೀಮತ, ಪೂರ್ವಾಮ್ನಾಯ, ದಕ್ಷಿಣಾಮ್ನಾಯ, ಪಶ್ಚಿಮಾಮ್ನಾಯ, ಉತ್ತರಾಮ್ನಾಯ, ಅನುತ್ತರಾಮ್ನಾಯ, ಊರ್ಧ್ವಾಮ್ನಾಯ, ಕುಂಡೀಶ್ವರಮತ, ವೀಣಾತಂತ್ರ, ಗುಹ್ಯತಂತ್ರ, ಕುಲಚೂಡಾಮಣಿ, ಕುಲಾಸಾರ, ಹೃದ್ಭೇದ, ಮಾತೃಭೇದ, ವಾತುಲ, ವಾತುಲೋತ್ತರ, ಸರ್ವವೀರಮತ, ತ್ರೋತಲ, ತ್ರೋತಲೋತ್ತರ, ಬಹುರೂಪಾಷ್ಟಕ(ಲ), ಯಾಮಲಾಷ್ಟಕ(ಲ) ತಂತ್ರಗಳು.

ಇದಾದಮೇಲೆ ಅವೈದಿಕತಂತ್ರಗಳೆಂದು ಮುಂದಿನವನ್ನು ಹೆಸರಿಸಿದ್ದಾರೆ. ಇವನ್ನು 'ಅವೈದಿಕಾಚಾರವತಾಂ ತಂತ್ರಾಣಾಂ' ಎಂದು ನಿರ್ದೇಶಿಸಿದ್ದಾರೆ. ಅವು ಮೂವತ್ತಮೂರೆಂದು (ತ್ರಯಸ್ತ್ರಿಂಶತ್) ಎಣಿಕೆ-

ಮಹಾಮಾಯಾಶಂಬರ, ಯೋಗಿನೀಜಾಲಶಂಬರ, ತತ್ತ್ವಶಂಬರ, ಕುಲಾರ್ಣವ, ಮಹಾಸಂಮೋಹನ, ರೂಪಿಕಾಮತ, ವಿರೂಪಿಕಾಮತ, ನಿತ್ಯಾಷೋಡಶಿಕಾ, ಪರಿಶಿಷ್ಟಾನಂದ, ಅಮರೇಶ್ವರ, ವಾಮಜುಷ್ಟ, ಕಲೋದ್ದಿಷ್ಟ, ರೂಪಭೇದ, ಕಾಮಿಕ, ಪಂಚಾಮೃತ, ಕಲ್ಯಾಣಂ, ಭೂತ, ವೈಭವಾಷ್ಟಕಂ (ಲ), ರಾಜಿತ, ಗಾರುಡ, ಬಾಲಾ, ವಾಸುಕಿ, ಮಹಾಕಾಲೀಮತ, ಮಹಾವೀರಾವತೀಮತ, ಲಲಿತಾಜ್ಞಾನ, ಲಲಿತಾ, ಮಹಾಕುಲೇಶ್ವರೀಚೂಡಾಮಣಿ ತಂತ್ರಗಳು.

ಈ ತಂತ್ರಗಳ ಇನ್ನೊಂದು ಎಣಿಕೆಯನ್ನು 'ಪ್ರಕಾರಾಂತರ'ವೆಂದು ಕಾಣಿಸಿದ್ದಾರೆ. ಇವನ್ನು 'ಮಾತೃಣಾಮುತ್ತಮಂ' ಎಂದರೆ ಮಾತೃಕಾತಂತ್ರಗಳಲ್ಲಿ ಶ್ರೇಷ್ಠವಾದವು ಎಂದು ನಿರ್ದೇಶಿಸಲಾಗಿದೆ.

ಅನಂತರ ಭೈರವಾಷ್ಟಕಗ್ರಂಥಗಳು (ಸಿದ್ಧಭೈರವತಂತ್ರ, ಮಾಯಿಕಭೈರವತಂತ್ರ, ಕಂಕಾಲಭೈರವತಂತ್ರ, ಕಾಲಾಗ್ನ್ಯಾಖ್ಯ ಭೈರವತಂತ್ರ, ಶಕ್ತಿಭೈರವತಂತ್ರ, ಯೋಗಿನೀಭೈರವತಂತ್ರ, ಮಹಾಭೈರವತಂತ್ರ, ಭೈರವನಾಥತಂತ್ರ) ಮತ್ತು ಬಹುರೂಪಾಷ್ಟಕ ತಂತ್ರಗಳು (ಬ್ರಾಹ್ಮೀ, ಮಾಹೇಶ್ವರೀ, ವಾರಾಹೀ, ವೈಷ್ಣವೀ, ಇಂದ್ರಾಣೀ, ಚಾಮುಂಡಾ, ಶಿವದೂತೀ, ಕುಮಾರಿಕಾ), ಶಿವನ ಐದು ಮುಖಗಳಿಂದ ಹೊರಹೊಮ್ಮಿದ ಹದಿನಾರು ಉಪತಂತ್ರಗಳು (ಮಂತ್ರಾರ್ಣವ, ಮಂತ್ರಸಾರ, ಮಹಾಕಾಲ, ಶಾಂಭವ, ಷಟ್ಕಾಲಾಗಮ, ಮೂಲಶಾಕ್ತೇಯ,

ಉಡ್ಡಾಮರೇಶ್ವರ, ರಾಜತಂತ್ರ, ಲಾಕುಲಿಕೇಶ್ವರ, ಮೃಗಮುಖೀ, ಚಂಡರುದ್ರೇಶ್ವರ, ಸೌಭಾಗ್ಯವಲ್ಲರೀ, ತಾಲಚಂಡೇಶ್ವರ, ಹಲಮೇಖಿಲಕ, ಶೈವ, ಕೌತುಕ) ಉಲ್ಲೇಖಕ್ಕೆ ಬಂದಿವೆ. ಇವೆಲ್ಲ ಶಾಕ್ತಸಂಪ್ರದಾಯದವು.

ಮುಂದೆ ಆಗಮಗ್ರಂಥಗಳನ್ನು ಹೇಳಲುತೊಡಗಿ ಇಪ್ಪತ್ತೆಂಟು ಶೈವಾಗಮಗಳನ್ನು ಪಟ್ಟಿಮಾಡಲಾಗಿದೆ. ಕಾಮಿಕ, ಕಾರಣ, ಅಜಿತ, ಚಿತ್ತ (ಚಿತ್ರ), ಯೋಗಜ, ಈ ಐದು ಶಿವನ ಸದ್ಯೋಜಾತಮುಖದಿಂದ ಹೊರಬಂದವು. ಜಯ, ವೀರಸಂಜ್ಞಾ, ನಿಃಶ್ವಾಸಕ, ಸ್ವಾಯಂಭುವ, ನಲ, ಇವು ಅಘೋರಮುಖದಿಂದ ಹೊರಬಂದವು. ಕಾರಣ, ಮಕುಟ, ಚಂದ್ರಜ್ಞಾನ, ಬಿಂಬ, ವಿಮಲ, ಇವು ತತ್ಪುರುಷಮುಖದಿಂದ ಹೊರಬಂದವು. ಪ್ರೋದ್ಗೀತ, ಸಿದ್ಧಿ, ಲಲಿತ, ಸರ್ವೋತ್ತರ, ಸಂತಾನ, ಕಿರಣ, ಪಾರಮೇಶ್ವರ, ವಾತುಳ ಇವು ಈಶಾನಮುಖದಿಂದ ಹೊರಬಂದವು. ಇಲಿ ಎಣಿಕೆಗೆ ಬಂದಿರುವ ಆಗಮಗಳು ಇಪ್ಪತ್ತುಮೂರೇ. ವಾಮದೇವಮುಖದಿಂದ ಹೊರಬಂದ ಆಗಮಗಳನ್ನು ಉಲ್ಲೇಖಿಸಲು ಮರೆತಿದ್ದಾರೆ.

ಇನ್ನು ವೈಷ್ಣವಾಗಮದಲ್ಲಿ ನಾಲ್ಕು ಬಗೆಗಳೆಂದು ಕಾಣಿಸಿದ್ದಾರೆ -

'ವೈಖಾನಸಂ ಪಾಂಚರಾತ್ರಂ ಪ್ರತಿಷ್ಠಾಸಾರಮೇವ ಚ।
ವಿಜ್ಞಾನಲಲಿತಂ ಚೇತಿ ಚತ್ವಾರೋ ವೈಷ್ಣವಾಗಮಾಃ॥'

ಈ ಆಗಮದ ಸಂಹಿತಾಶಾಸ್ತ್ರಗಳನ್ನು ಮಾಡಿದವರು ನೂರು ಋಷಿಗಳಂತೆ. ಈ 'ಸಂಹಿತಾಪ್ರಣೇತಾರ ಋಷಿ'ಗಳ ಹೆಸರುಗಳನ್ನೂ ಕ್ರಮವಿಡಿದು ('ಕ್ರಮಾತ್') ಕಾಣಿಸಿದ್ದಾರೆ. ಈ ಪಟ್ಟಿಯು ಹಯಗ್ರೀವನಿಂದ ಆರಂಭವಾಗಿ ವಾಲಖಿಲ್ಯನಲ್ಲಿ ಮುಗಿಯುತ್ತದೆ. ಈ ಇಡೀ ಪ್ರಕರಣವನ್ನು ಮುಮ್ಮಡಿಯವರು ತಮ್ಮ ಮಾತಿನಲ್ಲಿಯೇ ಹೀಗೆ ಮುಗಿಸಿದ್ದಾರೆ -

'ವೇದೋಪವೇದಾಂಗಾಗಮತಂತ್ರಕ್ರಮಾದಿಕಂ।
ತತ್ತತ್ಕರ್ತೃಪ್ರಭೇದಶ್ಚ ಕೀರ್ತಿತಶ್ಚೈವಮತ್ರ ಹಿ॥'

ಮುಂದೆ ಶೈವಾಗಮವನ್ನೇ ದೇವತೆಯೆಂದು ಬಗೆದು ಅದರ ಸ್ವರೂಪವನ್ನು ಸ್ಕಾಂದಪುರಾಣದ ಲಕ್ಷ್ಮೀನಾರಾಯಣಸಂವಾದವೆಂಬ ಅಧ್ಯಾಯದಿಂದ ಆಯ್ದುಕೊಂಡು ಕಾಣಿಸಿದ್ದಾರೆ.

'ಶೈವಾಗಮಃ ಶೈವದೀಕ್ಷಾವಹಃ ಪಂಚಾಕ್ಷರೋ ಋಷಿಃ।
ಶುದ್ಧಸ್ಫಟಿಕಸಂಕಾಶಸ್ತ್ರಿಪುಂಡ್ರಾಂಕಿತಮಸ್ತಕಃ॥ (॥)
ಸ್ಫ್ಯಕ್ಷಶ್ಚರ್ಮಪರಿಧಾನೋ ವೈಯಾಘ್ರಾಜಿನಸಂಸ್ಥಿತಃ।
ಬದ್ಧಪದ್ಮಾಸನೋ ದ್ವ್ಯಷ್ಟಭುಜೈಃ ಖಟ್ವಾಂಗಶೂಲಕೇ॥ (॥)
ಖಡ್ಗಖೇಟೌ ದಧಾನೋ(s)ಯಂ ಪಾಯಾಥ್ಸೈ (ಚ್ಛೈ)ವಾಗಮೋನ್ವಹಂ॥
ಶ್ವೇತವರ್ಣಃ॥'

ಶೈವಾಗಮಪುರುಷನು 'ಓಂನಮಃಶಿವಾಯ' ಎಂಬ ಪಂಚಾಕ್ಷರೀಮಂತ್ರಸ್ವರೂಪ ಋಷಿ. ಅವನ ಮೈಬಣ್ಣ ಬಿಳಿಯದು; ಹಣೆಯ ಮೇಲೆ ಭಸ್ಮತ್ರಿಪುಂಡ್ರವಿದೆ. ಮೂರು ಕಣ್ಣುಗಳು; ಚರ್ಮವನ್ನು ಹೊದ್ದಿದ್ದಾನೆ. ಹುಲಿಯ ಚರ್ಮದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದಾನೆ. ಹದಿನಾರು ಕೈಗಳು. ಕೈಗಳಲ್ಲಿ ಖಟ್ವಾಂಗ, ಶೂಲ, ಶಕ್ತ್ಯಾಯುಧ, ದಂಡ, ಬಿಲ್ಲು, ಬಾಣ, ವರದಮುದ್ರೆ, ಅಭಯಮುದ್ರೆ, ಗದೆ, ಅಂಕುಶ, ಚಿನ್ಮುದ್ರೆ, ಜಪಮಾಲೆ, ಪುಸ್ತಕ, ಕಮಂಡಲು, ಕತ್ತಿ, ಗುರಾಣಿಗಳನ್ನು ಹಿಡಿದಿದ್ದಾನೆ.

ಅನಂತರ ವೈಖಾನಸಾಗಮವನ್ನು ದೇವತಾಪುರುಷನೆಂದು ಬಗೆದಿರುವ ಒಕ್ಕಣೆ.

'ವೈಖಾನಸಾಗಮೋ ದೇವಸ್ತ್ರೈಣಕೃತ್ತಿವರಾಸನಃ।
ಬದ್ಧಪದ್ಮಾಸನಃ ಪ್ರೋಕ್ತಃ ಶ್ವೇತವರ್ಣಶ್ಚತುರ್ಮುಖಃ॥ (॥)
ಅಷ್ಟಭಿಸ್ತು ಭುಜೈರ್ಧತ್ತೇ ದರಾರೀ ಚ ವರಾಭಯೌ।
ಚಿನ್ಮುದ್ರಾಂ ಪುಸ್ತಕಂ ಕುಂಡೀಮಕ್ಷಂ ದಕ್ಷಾದಿತಃ ಕ್ರಮಾತ್॥ (॥)
ಪೀತಂ ವಸಾನೋ ವಸನಂ ತ್ರಿಪುಂಡ್ರಾಂಚಿತಮಸ್ತಕಃ।
ಜಟೀ ಬದ್ಧಕರೀಟೀ ಚ ಸದಾ ದದ್ಯಾಥ್ಸು(ಚ್ಛು)ಭಾನಿ ನಃ॥
ಶ್ವೇತವರ್ಣಃ॥'

ವೈಖಾನಸಾಗಮಪುರುಷನು ಬಿಳಿಯ ಬಣ್ಣದವನು, ನಾಲ್ಕು ಮೊಗದವನು, ಎಂಟು ಕೈಗಳವನು. ಕೈಗಳಲ್ಲಿ ಶಂಖ, ಚಕ್ರ, ಅಭಯವರದಮುದ್ರೆಗಳು, ಚಿನ್ಮುದ್ರೆ, ಪುಸ್ತಕ, ಕಮಂಡಲು, ಜಪಮಾಲೆಗಳನ್ನು ಹಿಡಿದಿದ್ದಾನೆ. ತಲೆಯ ಮೇಲೆ ಜಟಾಮಕುಟ, ಹಣೆಯ ಮೇಲೆ ಊರ್ಧ್ವತ್ರಿಪುಂಡ್ರ, ಹಳದಿ ಬಟ್ಟೆಯನ್ನುಟ್ಟಿದ್ದಾನೆ. ಕರಿಬಣ್ಣದ ಜಿಂಕೆಯ ಚರ್ಮದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದಾನೆ.

ಇಲ್ಲಿಗೆ ಆಗಮನಿಧಿಯ ಭಾಗ ಮುಗಿಯುತ್ತದೆ. ಮುಂದೆ ಐದು ವರ್ಗದ ಗುರುಗಳು (ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸಿ, ಅತಿವರ್ಣಾಶ್ರಮಿ), ಅವರಲ್ಲಿ ತಾರತಮ್ಯ, ಸ್ತ್ರೀಯರನ್ನು ಕುರಿತಂತೆ ಕೆಲವು ವಿಚಾರಗಳು, ಮೊದಲಾಗಿ ಅಪ್ರಸಕ್ತವಿಷಯಗಳನ್ನು ಸೇರಿಸಿದ್ದಾರೆ; ಇದರಲ್ಲಿ ಅನಪೇಕ್ಷಿತವಾದ, ಅನುಚಿತವೆಂಬಂಥ ವಿವರಗಳೂ ಇವೆ. ಕಡೆಯಲ್ಲಿ 'ಸಂವತ್ಸರಾದಿಗ್ರಹಾಂತನಾಮ್ನಾಂ ವರ್ಣಸಂಖ್ಯಾ' ಎಂಬ ಭಾಗ, ಹದಿಮೂರು ಶ್ಲೋಕಗಳದ್ದು, ಮುಮ್ಮಡಿಯವರೇ ರಚಿಸಿದ್ದು. ಇದರಲ್ಲಿ ಮುಖ್ಯವಾದ ವಿವರವೆಂದರೆ ಈ ಬರಹದ ದಿನವನ್ನು ತಿಳಿಸಿರುವುದು. ಮೊದಲಲ್ಲೇ

'ಶಾಲೀವಾಹನ ಶಕವರ್ಷಂಗಳು ೧೭೫೪ ವರ್ತಮಾನವಾದಾ
ಖರಸಂವತ್ಸರದ ಜೆ(ಜ್ಯೇ)ಷ್ಠ
ಶು(ಶುದ್ಧ) ೭ ಗುರುವಾರದಲ್ಲು ಶ್ರೀಕೃಷ್ಣರಾಜ ಮಹಾರಾಜಕಂಠೀರವರು
ಸಂವತ್ಸರ ಮೊದಲುಗೊಂಡು ಗ್ರಹಪರ್ಯಂತವಾಗಿ ನಾಮಗಳಲ್ಲಿರುವ
ವರ್ನ(ರ್ಣ) ಸಂಖ್ಯೆಯಂನು ಚಮತ್ಕಾರದಿಂದಾ ರಚಿಶಿಯಿರುವ ಶ್ಲೋಕಾ॥'

ಎಂಬ ಒಕ್ಕಣೆಯು ನನ್ನಲ್ಲಿರುವ ಹಸ್ತಪ್ರತಿಯಲ್ಲಿ ಕಾಣುತ್ತದೆ. ಇದರಲ್ಲಿ ಕಡೆಯ ಶ್ಲೋಕಗಳು-

'ಗ್ರಹಾಣಾಂ ಕಥಿತಾ ವರ್ಣಾ(ರ್ಣಾ) ನವಾನಾಂ ಜ್ಞಪ್ತಯೇ ಬುಧೈಃ।
ಶ್ರೀಮಚ್ಚಂಡಿಕೃಪಾದೃಷ್ಟ್ಯಾ ಕಥಿತಾ ಕೃಷ್ಣಭೂಭುಜಾ।
ಅಬ್ದಾದಿ ಗ್ರಹಪರ್ಯಂತಾ ವರ್ಣ(ರ್ಣ)ಸಂಖ್ಯಾ ಸತಾಂ ಮುದೇ॥

ಎಂದಿವೆ. ಈ ಗ್ರಂಥದ ದೇವನಾಗರೀಲಿಪಿಯ ಸಂಸ್ಕರಣದಲ್ಲಿ (ಖೇಮರಾಜ ಶ್ರೀಕೃಷ್ಣದಾಸ, ಮುಂಬಯಿ, ಪು.೩೫೯) ಮೇಲೆ ಕಾಣಿಸಿರುವ ಕನ್ನಡದ ಒಕ್ಕಣೆಯನ್ನು ಬಿಟ್ಟಿದ್ದಾರೆ; ಕಡೆಯಲ್ಲಿ ಬರುವ ಶ್ಲೋಕಗಳಲ್ಲಿ ಹೀಗೆ ಮಾರ್ಪಡಿಸಿಕೊಂಡಿದ್ದಾರೆ -

'ಗ್ರಹಾಣಾಂ ಕಥಿತಾ ವರ್ಣಾ ನವಾನಾಂ ಜ್ಞಪ್ತಯೇ ಬುಧೈಃ।
ಶಕೇ ಶಾಲೀವಾಹನಸ್ಯ ಚತುಷ್ಪಂಚ ಮುನೀಂದುಕೇ ॥೧೧॥
ಖರಜ್ಯೇಷ್ಠೇ ಸಿತೇ ಪಕ್ಷೇ ಸಪ್ತಮ್ಯಾಂ ಗುರುವಾಸರೇ।
ಶ್ರೀಮಚ್ಚಂಡೀಕೃಪಾದೃಷ್ಟ್ಯಾ ಕಥಿತಾ ಕೃಷ್ಣಭೂಭುಜಾ॥೧೨॥
ಅಬ್ದಾದಿ ಗ್ರಹಪರ್ಯಂತಾ ವರ್ಣಸಂಖ್ಯಾ ಸತಾಂ ಮುದೇ॥೧೩॥'

(ಚತುಷ್ಪಂಚಮುನೀಂದು = ೪೫೭೧, 'ಅಂಕಾನಾಂ ವಾಮತೋ ಗತಿಃ' ಎಂದರೆ ೧೭೫೪)

ಶಾಲೀವಾಹನಶಕೆ ೧೭೫೪ (ಎಂದರೆ ಕ್ರಿಸ್ತಾಬ್ದ ೧೮೩೧) ಖರನಾಮ ಸಂವತ್ಸರದಲ್ಲಿ, ಜ್ಯೇಷ್ಠಮಾಸದ ಶುಕ್ಲಪಕ್ಷ ಸಪ್ತಮೀ ಗುರುವಾರದಂದು ಈ ಶ್ಲೋಕಗಳನ್ನು ರಚಿಸಿದ್ದರೆ ಆ ವೇಳೆಗಾಗಲೆ ಶ್ರೀತತ್ತ್ವನಿಧಿಯ ಆಗಮನಿಧಿಯನ್ನು ಅವರು ಬರೆದು ಮುಗಿಸಿದ್ದಿರಬೇಕು. ಆವೇಳೆಗೆ ಅವರಿಗಿನ್ನೂ ಮೂವತ್ತಾರು-ಮುವತ್ತೇಳು ವರ್ಷ ವಯಸ್ಸು (ಅವರ ಜನನ ಶಾಲೀವಾಹನ ಶಕೆ ೧೭೧೭, ಎಂದರೆ ಕ್ರಿ.೧೭೯೪).

ಐದನೆಯ ಪರಿಚ್ಛೇದ

ಗ್ರಹನಿಧಿ ಮತ್ತು ಕೌತುಕನಿಧಿ

ಪ್ರವೇಶ

ವಿಷ್ಣುನಿಧಿ-ವೈಷ್ಣವನಿಧಿಗಳಾಗಲಿ, ಶಿವನಿಧಿ-ಶೈವನಿಧಿಗಳಾಗಲಿ, ಬ್ರಹ್ಮನಿಧಿ-ಆಗಮನಿಧಿಗಳಾಗಲಿ ಪರಸ್ಪರಪೂರಕವಾಗಿವೆ; ವಿಷಯದಲ್ಲಿ ಏಕಕೂಟವಿದೆ. ಹಾಗೆಂದೇ ಎರಡೆರಡನ್ನು ಒಂದೊಂದು ಪರಿಚ್ಛೇದದಲ್ಲಿ ಪರಿಶೀಲಿಸುವುದಾಯಿತು. ಐದನೆಯದಾದ ಗ್ರಹನಿಧಿ ಮತ್ತು ಒಂಬತ್ತನೆಯದಾದ ಕೌತುಕನಿಧಿಗಳ ವಿಚಾರವಾಗಿ ಇದು ಸಲ್ಲುವುದಿಲ್ಲವಾದರೂ ನನ್ನ ಕಡೆಯಿಂದ ಅವೆರಡರಲ್ಲಿ ಏಕಕೂಟವಿದೆ- ಅವೆರಡೂ ವಿಷಯಗಳ ಪರಿಚಯ ನನಗೆ ತೀರ ಕಡಮೆ. ಗ್ರಹನಿಧಿಯು ಜ್ಯೋತಿಷವನ್ನು ಕುರಿತದ್ದು. ಜ್ಯೋತಿಷ್ಯಭಾಗದಲ್ಲಿ ನನಗೆ ಪರಿಚಯ-ಪರಿಶ್ರಮಗಳಿರಲಿ, ಆಸಕ್ತಿಯೇ ಇರದು, ನಂಬಿಕೆಯೂ ಸಾಲದು! ಇನ್ನು ಕೌತುಕನಿಧಿಯಲ್ಲಿ ಬರುವ ಚದುರಂಗ, ಪಗಡೆ, ಗಂಜೀಫ ಮುಂತಾದ ಆಟಗಳ ಅನುಭವ ನನಗೇನೇನೂ ಇರದು. ಈ ಪುಸ್ತಕ ಬರೆಯಬೇಕಾಗಿ ಬಂದುದರಿಂದ ಗಂಜೀಫದ ವಿಚಾರ ಸ್ವಲ್ಪಮಟ್ಟಿಗೆ ತಿಳಿದುಕೊಳ್ಳಲು ಯತ್ನಿಸಿದ್ದುಂಟು. ಆದರೆ ತುಂಬ ಗಹನವಾಗಿ, ಜಟಿಲವಾಗಿರುವಂತೆ ಕಂಡುಬಂದದ್ದರಿಂದ ಕೈಬಿಟ್ಟೆ!

ಹೀಗಾಗಿ ಈ ಪರಿಚ್ಛೇದದಲ್ಲಿ ಇವೆರಡೂ ನಿಧಿಗಳನ್ನು ಕುರಿತಂತೆ ಸಂಗ್ರಹವಾಗಿ ಪರಿವಿಡಿಗಳನ್ನು ಮಾತ್ರ ಸೂಚಿಸಿ ಕೃತಾರ್ಥನಾಗುತ್ತೇನೆ. ಗಂಜೀಫದ ವಿಚಾರವಾಗೇನೋ ಓದಿಕೊಂಡಷ್ಟು ವಿವರಗಳನ್ನು ಬರೆದಿಡುವ ಸಾಹಸ ಮಾಡಿದ್ದೇನೆ. ಆದರೆ ಆ ಆಟವನ್ನು ನಾನು ಆಡಿಯೂ ಇಲ್ಲ, ಆಡಲು ಬಲ್ಲವರನ್ನು ನೋಡಿಯೂ ಇಲ್ಲ. ಅಲ್ಲಿನ ಚಿತ್ರಗಳನ್ನು ಕುರಿತಂತೆ ನನ್ನ ಆಸಕ್ತಿಯಿರುವುದು ಸಹಜ; ಅವನ್ನು ಕುರಿತು ಸ್ವಲ್ಪ ಬರೆದಿದ್ದೇನೆ.

-೧-
ಗ್ರಹನಿಧಿ

ನವಗ್ರಹಗಳಿಂದ ಆರಂಭವಾಗುವ ನಿಧಿಯಾದುದರಿಂದ ಗ್ರಹನಿಧಿಯೆನಿಸಿಕೊಂಡಿದೆ. ಶ್ರೀತತ್ತ್ವನಿಧಿಯ ನಿಧಿಗಳಲ್ಲೆಲ್ಲ ಇದೇ ದೊಡ್ಡದು. ಮುಮ್ಮಡಿಯವರಿಗೆ ಜ್ಯೋತಿಷ್ಯದಲ್ಲಿ ತುಂಬ ಅಭಿಮಾನವಿದ್ದುದು, ವಿಶೇಷವಾದ ಪ್ರವೇಶವಿದ್ದುದು ಈ ನಿಧಿಯಿಂದಲೂ ಅವರ ಇತರ ಗ್ರಂಥಗಳಿಂದಲೂ ತಿಳಿದುಬರುತ್ತದೆ. ಈ ನಿಧಿಯಲ್ಲಿ ಜ್ಯೋತಿಃಶಾಸ್ತ್ರದ ಸಮಗ್ರಪರಿಚಯವನ್ನು ಮಾಡಿಕೊಟ್ಟಿದ್ದಾರೆ; ಸಿದ್ಧಾಂತಭಾಗ, ಫಲಜ್ಯೋತಿಷ ಎರಡೂ ವಿಭಾಗಗಳಲ್ಲಿ ಅಗತ್ಯವಾದ ವಿವರಗಳನ್ನು ಒದಗಿಸಿದ್ದಾರೆ. ಮೊದಲಲ್ಲಿ ಬರುವುದು ನವಗ್ರಹಗಳ ವಿಚಾರ. ನವಗ್ರಹಗಳಿಗೆ ಜ್ಯೋತಿಷದಲ್ಲಿ ಅಗ್ರಸ್ಥಾನ; ಜನಜೀವನದಲ್ಲೂ ನವಗ್ರಹಗಳ ಪೂಜೆ ಪ್ರಚಲಿತವಾಗಿದೆಯಷ್ಟೆ. ನವಗ್ರಹಗಳಲ್ಲಿ ಪ್ರಧಾನವಾದವನು ಸೂರ್ಯ. ಸೂರ್ಯನ ವಿಚಾರದಿಂದಲೇ ಈ ನಿಧಿಯು ಮೊದಲಾಗುವುದು ಸಹಜವೇ.


(೧) ನವಗ್ರಹಗಳು

ಆರಂಭದ ಒಕ್ಕಣೆ ಹೀಗಿದೆ -

'ಅಥ ಅಧಿದೇವತಾಪ್ರತ್ಯಧಿದೇವತಾಸಹಿತನವಗ್ರಹಸ್ವರೂಪಾಣಿ'

ಈ ಭಾಗವನ್ನು ನಾರಣಭಟ್ಟೀಯ ಪ್ರಯೋಗರತ್ನದಿಂದಲೂ ಮಯೂಖವೆಂಬ ಗ್ರಂಥದಿಂದಲೂ ಕಾಣಿಸಿದ್ದಾರೆ. ಒಂದೊಂದು ಗ್ರಹದ ವಿಚಾರವಾಗಿಯೂ ಮೊದಲಲ್ಲಿ ಗದ್ಯಭಾಗವಿದ್ದು('ವಾಕ್ಯಾನಿ') ಅನಂತರ ಮೂರ್ತಿಲಕ್ಷಣವನ್ನು ಹೇಳುವ ಶ್ಲೋಕವೊಂದನ್ನು ಕೊಡುತ್ತಾರೆ. ವಾಕ್ಯಗಳು ಪ್ರಯೋಗರತ್ನದಿಂದಲೂ ಶ್ಲೋಕಗಳು ಮಯೂಖದಿಂದಲೂ ಸಂಗ್ರಹಿಸಲ್ಪಟ್ಟಿವೆ. ಒಂದೊಂದು ಗ್ರಹಕ್ಕೂ ಮೂರ್ತಿಲಕ್ಷಣವನ್ನು ಹೇಳಿದನಂತರ, ಆ ಗ್ರಹದ ಅಧಿದೇವತೆ, ಪ್ರತ್ಯಧಿದೇವತೆಗಳ ಸ್ವರೂಪಗಳನ್ನೂ ಕಾಣಿಸಿದ್ದಾರೆ.

೧. ಸೂರ್ಯ -



ಸೂರ್ಯ

ವಾಕ್ಯಭಾಗದಲ್ಲಿ ಬಂದಿರುವ ಒಕ್ಕಣೆಯ ಪ್ರಕಾರ ಗ್ರಹಾಧಿಪತಿಯಾದ ಸೂರ್ಯನು ಕಾಶ್ಯಪಗೋತ್ರದವನು, ಕಳಿಂಗದೇಶದ ಒಡೆಯ, ಸಪ್ತಮಿಯಂದು ವಿಶಾಖಾನಕ್ಷತ್ರದಲ್ಲಿ ಹುಟ್ಟಿದವನು. ಅವನ ಮೈಬಣ್ಣ ಕೆಂಪು, ಜಪಾಪುಷ್ಪಸಂಕಾಶ. ಎರಡು ಕೈಗಳು; ಬಲಗೈಯಲ್ಲಿ ಅಭಯ ಮುದ್ರೆ, ಎಡಗೈಯಲ್ಲಿ ತಾವರೆ. ಸಿಂದೂರವರ್ಣದ ಬಟ್ಟೆಯನ್ನುಟ್ಟಿದ್ದಾನೆ. ಅದೇ ಬಣ್ಣದ ಮಾಲೆಯನ್ನೂ, ಗಂಧವನ್ನೂ ಧರಿಸಿದ್ದಾನೆ. ತೇಜೋನಿಧಿ; ಮೂರು ಲೋಕಗಳನ್ನೂ ಬೆಳಗುವವನು. ಬ್ರಹ್ಮ, ವಿಷ್ಣು ಶಿವರೆಂಬ ತ್ರಿಮೂರ್ತಿಗಳನ್ನು ಒಳಗೊಂಡವನು. ಅವನು ಧ್ವಜವೇ ಮೊದಲಾದುವುಗಳಿಂದ ಅಲಂಕೃತವಾದ, ಏಳು ಕುದುರೆಗಳನ್ನು ಹೂಡಿದ, ಒಂದೇ ಚಕ್ರವಿರುವ ರಥವನ್ನೇರಿ ಮೇರುಪರ್ವತವನ್ನು ಪ್ರದಕ್ಷಿಣೆ ಮಾಡುತ್ತ ಬರುತ್ತಾನೆ. ಅವನೊಂದಿಗೆ ಅಗ್ನಿಯೂ ರುದ್ರನೂ ಇರುತ್ತಾರೆ. ವರ್ತುಲಪೀಠ; ತಾಮ್ರಪ್ರತಿಮೆ.

ಶ್ಲೋಕವು ಈ ವಿವರಗಳನ್ನು ಹೀಗೆ ಸಂಗ್ರಹಿಸಿದೆ -

'ಪದ್ಮಾಸನಃ ಪದ್ಮಕರಃ ಪದ್ಮಗರ್ಭಸಮದ್ಯುತಿಃ।
ಸಪ್ತಾಶ್ವರಥಸಂಯುಕ್ತೋ ದ್ವಿಭುಜಃ ಸ್ಯಾತ್ಸದಾ ರವಿಃ॥
ಪಾಟಲವರ್ಣಃ॥೧॥'

ಈ ಪುಸ್ತಕದ ದೇವನಾಗರೀಲಿಪಿಯ ಸಂಸ್ಕರಣದಲ್ಲಿ (ಖೇಮರಾಜ ಶ್ರೀಕೃಷ್ಣದಾಸ, ಮುಂಬಯಿ, ಪುಟ ೧೨೧). ಇದಾದ ಮೇಲೆ 'ಚತುರ್ವಕ್ತ್ರ ಸೂರ್ಯಧ್ಯಾನ'ವೆಂಬ ಇನ್ನೊಂದು ವಿವರವನ್ನು ಕಾಣಿಸಿದ್ದಾರೆ. ಶಾರದಾತಿಲಕದಿಂದ ಆಯ್ದುಕೊಂಡಿರುವ ಈ ವಿವರದಲ್ಲಿ ಸೂರ್ಯನಿಗೆ ನಾಲ್ಕು ಮುಖಗಳು, ಎಂಟು ಕೈಗಳು. ಕೈಗಳಲ್ಲಿ ಖಟ್ವಾಂಗ, ಪದ್ಮ, ಶಕ್ತ್ಯಾಯುಧ, ಬಿಲ್ಲು, ಪಾಶ, ಅಂಕುಶ, ಜಪಮಾಲೆ, ಕಪಾಲಗಳನ್ನು ಹಿಡಿದಿದ್ದಾನೆ. ನನ್ನಲ್ಲಿರುವ ಹಸ್ತಪ್ರತಿಯಲ್ಲಿ ಇದು ನವಗ್ರಹಗಳನ್ನೆಲ್ಲ ಹೇಳಿದ ಮೇಲೆ ಕಡೆಯಲ್ಲಿ ಬಂದಿದೆ.


ಸೂರ್ಯನಿಗೆ ಅಧಿದೇವತೆ ಅಗ್ನಿ, ಪ್ರತ್ಯಧಿದೇವತೆ ರುದ್ರ.

ಅಗ್ನಿಯು ಅರುಣವರ್ಣದವನು, ಕೆಂಪಾಗಿರುವ ಗಡ್ಡಮೀಸೆಗಳು, ಕೆಂಪಡರಿದ ಕಣ್ಣುಗಳು. ಕ್ಷತ್ರಿಯಜಾತಿ, ಟಗರಿನ ಮೇಲೆ ಕುಳಿತವನು, ಶಕ್ತ್ಯಾಯುಧವನ್ನೂ ಜಪಮಾಲೆಯನ್ನೂ ವರದಮುದ್ರೆಯನ್ನೂ ಕೈಗಳಲ್ಲಿ ಹಿಡಿದಿದ್ದಾನೆ.

ರುದ್ರನು ಐದು ಮುಖಿಗಳವನು, ಒಂದೊಂದು ಮುಖದಲ್ಲೂ ಮೂರು ಕಣ್ಣುಗಳು, ತಲೆಯ ಮೇಲೆ ಚಂದ್ರ. ಎತ್ತಿನ ಮೇಲೆ ಕುಳಿತವನು. ಕೈಗಳಲ್ಲಿ ಕಪಾಲ, ಖಟ್ವಾಂಗ, ಶೂಲ, ಬಿಲ್ಲು(ಪಿನಾಕ)ಗಳನ್ನು ಹಿಡಿದಿದ್ದಾನೆ.

೨. ಚಂದ್ರ -

ಚಂದ್ರ(ಸೋಮ)ನು ದ್ವಿಜಾಧಿಪತಿ, ಅತ್ರಿಗೋತ್ರ, ಯಾಮುನದೇಶೇಶ್ವರ. ಅಮೃತಮಯವಾದ ದೇಹವುಳ್ಳವನು; ಹಸುವಿನ ಹಾಲಿನಂತೆ ಬೆಳ್ಳಗಿರುವ ಮೈ ಅವನದ್ದು. ಬಿಳಿಯ ಬಣ್ಣದ ಬಟ್ಟೆ, ಮಾಲ್ಯ, ಲೇಪನ, ಎರಡು ಕೈಗಳು; ಒಂದರಲ್ಲಿ ಗದೆ, ಇನ್ನೊಂದರಲ್ಲಿ ವರದಮುದ್ರೆ. ಎಲ್ಲ ಲೋಕವನ್ನೂ ತಣಿಸುವಂಥ ಚೆಲುವಾದ ರೂಪ.



ಚಂದ್ರ

ಹತ್ತು ಕುದುರೆಗಳನ್ನು ಹೂಡಿದ ರಥದಲ್ಲಿ ಕುಳಿತು ಮೇರುವನ್ನು ಸುತ್ತರಿದು ಬರುವನು. ಅವನೊಂದಿಗೆ ನೀರುಗಳೂ ಉಮೆಯೂ ಇರುವರು ಚತುರಸ್ರಪೀಠ; ಸ್ಫಟಿಕಪ್ರತಿಮೆ.

ಶ್ಲೋಕವು ವಿವರಗಳನ್ನು ಹೀಗೆ ಸಂಗ್ರಹಿಸಿದೆ-

'ಶ್ವೇತಃ ಶ್ವೇತಾಂಬರಧರೋ ದಶಾಶ್ವಃ ಶ್ವೇ(ತ)ಭೂಷಣಃ।
ಗದಾಪಾಣಿರ್ದ್ವಿಬಾಹುಶ್ಚ ಕರ್ತವ್ಯೋ ವರದಶ್ಶಶೀ॥೨॥
ಶ್ವೇತವರ್ಣಃ॥'

ಚಂದ್ರನಿಗೆ ಅಧಿದೇವತೆ ಅಬ್ದೇವತೆಗಳು (ನೀರಿನ ಅಭಿಮಾನಿಗಳು), ಪ್ರತ್ಯಧಿದೇವತೆ ಉಮಾ. ಅಬ್ದೇವತೆಗಳು ಸ್ತ್ರೀರೂಪದವರು, ಬಿಳಿಬಣ್ಣದ ಮಕರವನ್ನೇರಿದವರು, ಮುತ್ತಿನ ಆಭರಣಗಳನ್ನು ಧರಿಸಿದವರು. ಪಾಶ, ಕಲಶಗಳನ್ನು ಕೈಗಳಲ್ಲಿ ಹಿಡಿದವರು.


ಉಮೆಯು ದೇವತೆಗಳಿಂದಲೂ ಪೂಜಿಸಲ್ಪಡುವ ದೇವತೆ. ನಾಲ್ಕು ಕೈಗಳು; ಜಪಮಾಲೆ, ಕಮಲ, ಕಮಂಡಲು ಮತ್ತು ಕನ್ನಡಿಗಳನ್ನು ಹಿಡಿದವಳು.

ದೇವನಾಗರೀಲಿಪಿಯ ಪ್ರಕಟಣೆಯಲ್ಲಿ ಶಾರದಾತಿಲಕದಿಂದ ಚಂದ್ರಧ್ಯಾನವೊಂದನ್ನೂ ಸೇರಿಸಲಾಗಿದೆ. ಇಲ್ಲಿನ ಚಂದ್ರನು ಕೈಗಳಲ್ಲಿ ಕುಮುದಪುಷ್ಪವನ್ನೂ ವರದಮುದ್ರೆಯನ್ನೂ ಹಿಡಿದಿದ್ದಾನೆ.

೩. ಅಂಗಾರಕ -

ಅಂಗಾರಕನದು ಅಗ್ನಿಯ ಆಕೃತಿ, ಭರದ್ವಾಜ ಗೋತ್ರ; ಅವಂತೀ ದೇಶದ ಒಡೆಯ, ಶ್ರವಣ ನಕ್ಷತ್ರ, ಅಷ್ಟಮೀತಿಥಿಯಲ್ಲಿ ಹುಟ್ಟಿದವನು. ಅಗ್ನಿಯ ಜ್ವಾಲೆಗಳಂತೆ ಕಾಂತಿಯುಳ್ಳ ದೇಹ. ನಾಲ್ಕು ಕೈಗಳು;

ಶಕ್ತ್ಯಾಯುಧ, ಶೂಲ, ಗದೆ, ಖಟ್ವಾಂಗಗಳನ್ನು ಹಿಡಿದಿದ್ದಾನೆ. ಹವಳದ ಆಭರಣಗಳನ್ನು ಧರಿಸಿದ್ದಾನೆ. ಕೆಂಪುಬಣ್ಣದ ಎಂಟು ಮೇಕೆಗಳನ್ನು ಹೂಡಿದ, ಕೆಂಬಣ್ಣದ ಬಾವುಟವುಳ್ಳ ರಥವನ್ನೇರಿ ಮೇರುಪರ್ವತವನ್ನು ಸುತ್ತರಿದು ಬರುವನು. ಅವನೊಂದಿಗೆ ಭೂಮಿಯೂ ಸ್ಕಂದನೂ ಇದ್ದಾರೆ. ತ್ರಿಕೋಣಪೀಠ; ರಕ್ತಚಂದನ ಪ್ರತಿಮೆ.



ಅಂಗಾರಕ

ಸಂಗ್ರಹಶ್ಲೋಕ -

'ರಕ್ತಮಾಲ್ಯಾಂಬರಧರಃ ಶಕ್ತಿಶೂಲಗದಾಧರಃ।
ಚತುರ್ಭುಜೋ ಮೇಷಗಮೋ ವರದಃ ಸ್ಯಾದ್ಧರಾಸುತಃ॥
ರಕ್ತವರ್ಣಃ॥೩॥'


ಇದರ ಪ್ರಕಾರ, ಅವನ ಕೈಯೊಂದರಲ್ಲಿ ಮೇಲೆ ಕಾಣಿಸಿದ ಖಟ್ವಾಂಗಕ್ಕೆ ಬದಲು ವರದಮುದ್ರೆಯಿದೆ. ಅಂಗಾರಕನ ಅಧಿದೇವತೆ ಭೂಮಿ, ಅವನು ಭೂಮಿಯ ಮಗನೆಂದೇ ಕಲ್ಪನೆ, ಪ್ರತ್ಯಧಿದೇವತೆ ಸ್ಕಂದ.

ಭೂಮಿಯದು ಬಿಳಿಯ ಮೈಬಣ್ಣ, ದಿವ್ಯಾಭರಣಭೂಷಿತೆ, ಸೌಮ್ಯಭಾವ, ಉರಿಯುವ ಸೂರ್ಯನಂತೆ ಉಡುಗೆ ತೊಟ್ಟವಳು. ನಾಲ್ಕು ದಿಗ್ಗಜಗಳ ಬೆನ್ನಮೇಲೆ ಕುಳಿತವಳು. ನಾಲ್ಕು ಕೈಗಳು; ರತ್ನಪಾತ್ರೆ, ಔಷಧಿಪಾತ್ರೆ ಮತ್ತು ಪದ್ಮಗಳನ್ನು ಹಿಡಿದವಳು.

ಸ್ಕಂದನದು ಪಾಟಲವರ್ಣ. ಆರುಮೋರೆಗಳು (ಷಣ್ಮುಖ), ತಲೆಯ ಮೇಲೆ ಶಶಿಖಂಡ. ಕೆಂಪು ಬಟ್ಟೆ ಉಟ್ಟಿದ್ದಾನೆ, ನವಿಲನ್ನೇರಿದ್ದಾನೆ. ನಾಲ್ಕು ಕೈಗಳು, ಹುಂಜ, ಘಂಟೆ, ಬಾವುಟ, ಶಕ್ತ್ಯಾಯುಧಗಳನ್ನು ಹಿಡಿದಿದ್ದಾನೆ.

೪. ಬುಧ -

ಬುಧನದು ಅತ್ರಿಗೋತ್ರ, ದ್ವಾದಶಿಯಂದು ಧನಿಷ್ಠಾನಕ್ಷತ್ರದಲ್ಲಿ ಹುಟ್ಟಿದವನು, ಮಗಧದೇಶದ ಒಡೆಯ. ಮೈಬಣ್ಣ ಕುಂಕುಮದಂತೆ ಕೆಂಪು. ಮರಕತದ ಆಭರಣಗಳು. ಹಳದಿಬಣ್ಣದ ಬಟ್ಟೆ, ಮಾಲೆ, ಅನುಲೇಪನಗಳು. ನಾಲ್ಕು ಕೈಗಳು; ಕತ್ತಿ, ಗುರಾಣಿ, ಗದೆ, ವರದಮುದ್ರೆಗಳು. ನಾಲ್ಕು ಸಿಂಹಗಳನ್ನು ಹೂಡಿದ, ಹಸಿರುಬಣ್ಣದ ಬಾವುಟ ಕಟ್ಟಿದ ರಥದಲ್ಲಿ ಕುಳಿತು ಮೇರುಪರ್ವತವನ್ನು ಸುತ್ತರಿದು ಬರುತ್ತಾನೆ. ವಿಷ್ಣು ಮತ್ತು ಪುರುಷರು ಅವನೊಂದಿಗಿರುವರು. ಬಾಣಾಕಾರವಾದ ಪೀಠ; ಚಿನ್ನದ ಪ್ರತಿಮೆ.



ಬುಧ

ಸಂಗ್ರಹಶ್ಲೋಕ -

'ಪೀತಮಾಲ್ಯಾಂಬರಧರಃ ಕರ್ಣಿಕಾರಸಮದ್ಯುತಿಃ।
ಖಡ್ಗಚರ್ಮಗದಾಪಾಣಿ/ ಸಿಂಹಸ್ಥೋ ವರದೋ ಬುಧಃ।
ಕನಕವರ್ಣಃ॥೪॥

ಇದರ ಪ್ರಕಾರ ಮೈಬಣ್ಣ ಬಂಗಾರದ್ದು; ಸಿಂಹವೇ ಅವನ ವಾಹನ.

ಬುಧನ ಅಧಿದೇವತೆ ವಿಷ್ಣು; ನಾಲ್ಕು ಕೈಗಳಲ್ಲಿ ಪ್ರಾದಕ್ಷಿಣ್ಯ ಕ್ರಮದಿಂದ ಗದೆ, ಪದ್ಮ, ಶಂಖ, ಚಕ್ರಗಳನ್ನು ಹಿಡಿದವನು; ಬಿಳಿಯ ಮೈಬಣ್ಣದವನು. ಬುಧನ ಪ್ರತ್ಯಧಿದೇವತೆ ಪುರುಷಮೂರ್ತಿ; ಬಂಗಾರದ ಮೈಬಣ್ಣ; ಶಂಖ, ಚಕ್ರ, ಗದೆ, ಪದ್ಮಗಳನ್ನು ಹಿಡಿದ ನಾಲ್ಕು ಕೈಗಳು.

೫. ಬೃಹಸ್ಪತಿ -

ದೇವತೆಗಳ ಆಚಾರ್ಯನಾದ ಬೃಹಸ್ಪತಿಯದು ಆಂಗಿರಸಗೋತ್ರ; ಸಿಂಧುದೇಶದ ಒಡೆಯ ಅವನು. ಹೊಳೆಯುವ ಬಂಗಾರದ ಮೈಬಣ್ಣ; ಹಳದಿ ಬಣ್ಣದ ಬಟ್ಟೆ, ಮಾಲೆ, ಅನುಲೇಪನ. ನಾಲ್ಕು ಕೈಗಳು; ದಂಡ, ಕಮಂಡಲು, ಜಪಮಾಲೆ, ವರದಮುದ್ರೆಗಳು. ಸಮಸ್ತವಿದ್ಯಾಧಿಪತಿ. ಪುಷ್ಪರಾಗದ ಆಭರಣಗಳು. ಎಂಟು ಬಿಳಿ ಕುದುರೆಗಳನ್ನು ಕಟ್ಟಿದ ರಥದ ಮೇಲೆ ಕುಳಿತಿದ್ದಾನೆ; ಹಳದಿ ಬಣ್ಣದ ಬಾವುಟ ರಥದ ಮೇಲೆ

ಹಾರಾಡುತ್ತದೆ. ಅವನೊಂದಿಗೆ ಇಂದ್ರನೂ ಬ್ರಹ್ಮನೂ ಇದ್ದಾರೆ. ದೀರ್ಘಚತುರಸ್ರಪೀಠ; ಚಿನ್ನದ ಪ್ರತಿಮೆ.



ಬೃಹಸ್ಪತಿ

ಸಂಗ್ರಹಶ್ಲೋಕ -


'ಅಷ್ಟಭಿಃ ಪಾಂಡುರೈರ್ಯುಕ್ತೋ ವಾಜಭಿಃ ಕಾಂಚನೇ ರಥೇ
ತಿಷ್ಠನ್ ತರತಿ ವೈ ವರ್ಷಂ ರಾಶೌ ರಾಶೌ ಬೃಹಸ್ಪತಿಃ॥
ಕನಕವರ್ಣಃ॥೫॥

ಬೃಹಸ್ಪತಿಯ (ಅಥವಾ ಗುರುವಿನ) ಅಧಿದೇವತೆ ಇಂದ್ರ; ನಾಲ್ಕು ದಂತಗಳುಳ್ಳ ಆನೆಯನ್ನೇರಿದ ಪ್ರಜಾಪತಿ, ಬಂಗಾರದ ಮೈಬಣ್ಣ. ವಜ್ರಾಯುಧವನ್ನೂ ಅಂಕುಶವನ್ನೂ ಹಿಡಿದಿದ್ದಾನೆ.

ಪ್ರತ್ಯಧಿದೇವತೆ ಬ್ರಹ್ಮ. ಪದ್ಮಾಸನಸ್ಥನಾಗಿ ಜಟೆಯನ್ನು ಧರಿಸಿದ ಚತುರ್ಮುಖ; ನಾಲ್ಕು ಕೈಗಳಲ್ಲಿ ಜಪಮಾಲೆ, ಸ್ರುವ, ಪುಸ್ತಕ ಮತ್ತು ಕಮಂಡಲು; ಪಕ್ಕದಲ್ಲಿ ಹಂಸ.

೬. ಶುಕ್ರ -

ಭಾರ್ಗವಗೋತ್ರದ, ಭೋಜಕಟದೇಶೇಶ್ವರನಾದ ಶುಕ್ರನು ದೈತ್ಯರ ಗುರು, ಬೆಳ್ಳಿಯ ಮೈಬಣ್ಣದವನು. ಬಿಳಿಯ ಬಣ್ಣದ ಬಟ್ಟೆ, ಮಾಲೆ, ಅನುಲೇಪನಗಳು. ವಜ್ರದಿಂದ ಮಾಡಿದ ಆಭರಣಗಳು. ನಾಲ್ಕು ಕೈಗಳಲ್ಲಿ ದಂಡ, ಕಮಂಡಲು, ಜಪಮಾಲೆ, ವರದಮುದ್ರೆಗಳು. ನೀತಿಶಾಸ್ತ್ರನಿಪುಣ. ಬಿಳಿಯ ಬಣ್ಣದ ಎಂಟು ಕುದುರೆಗಳನ್ನು ಕಟ್ಟಿ, ಬಿಳಿಬಣ್ಣದ ಬಾವುಟವನ್ನು ಹೊತ್ತ ರಥದ ಮೇಲೇರಿದ್ದಾನೆ. ಅವನೊಂದಿಗೆ ಇಂದ್ರನೂ ಇಂದ್ರಾಣಿಯೂ ಇದ್ದಾರೆ. ಪಂಚಕೋಣಪೀಠ; ಬೆಳ್ಳಿಯ ಪ್ರತಿಮೆ.



ಶುಕ್ರ

ಸಂಗ್ರಹಶ್ಲೋಕ -

'ಸವರೂಥಸ್ಸಾನುಕರ್ಷೋ ಯುಕ್ತೋ ಭೂಸಂಭವೈರ್ಹಯೈಃ॥
ಸೋಪಾಸಂಗಪತಾಕಸ್ತು ಶುಕ್ರಃ ಸ್ಯಾಪಿ ರಥೋ ಮಹಾನ್॥
ದೇವದೈತ್ಯಗುರೂ ಶುದ್ಧೌ ಪೀತಶ್ವೇತೌ ಚತುರ್ಭುಜೌ॥
ದಂಡಿನೌ ವರದೌ ಕಾರ್ಯೌ ಸಾಕ್ಷಸೂತ್ರಕಮಂಡಲೂ॥'
ಶ್ವೇತವರ್ಣಃ॥೬॥'

ಶುಕ್ರನ ಅಧಿದೇವತೆ ಇಂದ್ರಾಣಿ (ಶಚಿ); ಎರಡು ಕೈಗಳು, ಬಂಗಾರದ ಮೈಬಣ್ಣ. ಒಂದು ಕೈಯಲ್ಲಿ ಸಂತಾನಮಂಜರಿ, ಇನ್ನೊಂದು ಕೈಯಲ್ಲಿ ಅಭಯಮುದ್ರೆ


ಪ್ರತ್ಯಧಿದೇವತೆ ಇಂದ್ರ; ಅವನದ್ದೂ ಬಂಗಾರದ ಮೈಬಣ್ಣವೇ. ಬಿಳಿಯ ಆನೆಯನ್ನೇರಿದ್ದಾನೆ. ವಜ್ರಾಯುಧ ಅಂಕುಶಗಳನ್ನು ಹಿಡಿದಿದ್ದಾನೆ. ಸಹಸ್ರನೇತ್ರ.

೭. ಶನೈಶ್ಚರ -

ಸೂರ್ಯನ ಮಗನಾದ ಶನಿಯು ಕಾಶ್ಯಪಗೋತ್ರದವನು, ಸೌರಾಷ್ಟ್ರದೇಶದ ಒಡೆಯ. ಕಾಡಿಗೆಯಂತೆ ಕಪ್ಪು ಮೈಬಣ್ಣ; ನೀಲಿಬಣ್ಣದ ಬಟ್ಟೆಯನ್ನುಟ್ಟು ಅದೇ ಬಣ್ಣದ ಮಾಲೆಯನ್ನೂ ಅನುಲೇಪನವನ್ನೂ ಧರಿಸಿದ್ದಾನೆ. ನೀಲರತ್ನಗಳ ಆಭರಣ. 'ಸಮಸ್ತಭುವನ ಭೀಷಣಾಮರ್ಷಮೂರ್ತಿ'. ನಾಲ್ಕು ಕೈಗಳಲ್ಲಿ ಬಿಲ್ಲು, ಬಾಣ, ಕತ್ತಿ, ಅಭಯಮುದ್ರೆಗಳನ್ನು ಹಿಡಿದಿದ್ದಾನೆ. ನೀಲಿಬಣ್ಣದ ಹದ್ದನ್ನು ಕಟ್ಟಿದ ರಥ ಅವನದ್ದು. ರಥದ ಮೇಲೆ ನೀಲಿಬಣ್ಣದ ಬಾವುಟ ಹಾರಾಡುತ್ತದೆ. ಅವನೊಂದಿಗೆ ಪ್ರಜಾಪತಿಯೂ, ಯಮನೂ ಇದ್ದಾರೆ. ಬಿಲ್ಲಿನ ಆಕಾರದ ಪೀಠ (ಚಾಪಾಕಾರ). ಕರಿಯ ಕಬ್ಬಿಣದ ಪ್ರತಿಮೆ.



ಶನಿ



ರಾಹು

ಸಂಗ್ರಹಶ್ಲೋಕ -

'ಇಂದ್ರನೀಲದ್ಯುತಿಃ ಖಡ್ಗೀ ವರದೋ ಗೃಧ್ರವಾಹನಃ।
ಬಾಣಚಾಪಧರೋ ವೀರಃ ಕರ್ತವ್ಯೋ(s)ರ್ಕಸುತಸ್ಸದಾ॥
ಕೃಷ್ಣವರ್ಣಃ॥೭॥'

ಶನೈಶ್ಚರನ ಅಧಿದೇವತೆ ಪ್ರಜಾಪತಿ; ಹಂಸವಾಹನನಾದ ಬ್ರಹ್ಮ, ಆದರೆ ಚತುರ್ಮುಖನಲ್ಲ. ಎಡತೊಡೆಯ ಮೇಲೆ ಸಾವಿತ್ರಿ ಕುಳಿತಿದ್ದಾಳೆ. ಅವನಿಗೆ ನಾಲ್ಕು ಕೈಗಳು; ಜಪಮಾಲೆ, ಸ್ರುವ, ಕುಂಡಿಕೆ, ಪುಸ್ತಕಗಳು ಕೈಗಳಲ್ಲಿವೆ. ಮೈಬಣ್ಣ ತಾವರೆಗೆಂಪು.

ಪ್ರತ್ಯಧಿದೇವತೆ ಯಮ; ನೀಲಿಗಪ್ಪು ಮೈಬಣ್ಣದ ಭಯಂಕರ ರೂಪ, ಕರಾಳವಾದ ಮೋರೆ, ಕೆಂಗಣ್ಣು. ಮಹಿಷವಾಹನ, ಪಾಶಧರ.

೮. ರಾಹು -

ಸಿಂಹಿಕೆಯ ಮಗನಾದ ರಾಹುವು ಪೈಠೀನಸಿಗೋತ್ರದವನು, ಬರ್ಬರದೇಶಾಧಿಪತಿ. ಕಾರ್ಮೋಡದಂತೆ ಕಪ್ಪು ಮೈಬಣ್ಣ; ಅವನಿಗೆ ಹುಲಿಯ ಮುಖ. ಉಟ್ಟಿರುವ ಬಟ್ಟೆ ಕಪ್ಪುಬಣ್ಣದ್ದು. ಗೋಮೇಧಿಕದ ಆಭರಣಗಳು. ನಾಲ್ಕು ಕೈಗಳಲ್ಲಿ ಕತ್ತಿ, ಕುರಾಣಿ, ಶೂಲ, ವರದಮುದ್ರೆಗಳು. ಶೂರ; ಸೂರ್ಯಚಂದ್ರರನ್ನೇ ಹಿಂಸಿಸುವವನು. ಕರಿಯ ಬಣ್ಣದ ಸಿಂಹವನ್ನು ಹೂಡಿದ ರಥದ ಮೇಲೇರಿದ್ದಾನೆ; ಅದರ ಮೇಲೆ ಹಾರುವ ಬಾವುಟವೂ ಕರಿಯದೇ. ಅವನೊಂದಿಗೆ ಸರ್ಪವೂ ಕಾಲನೂ ಇದ್ದಾರೆ. ಮೊರದ ಆಕಾರದ ಪೀಠ (ಶೂರ್ಪಾಕಾರ); ಸೀಸದ ಪ್ರತಿಮೆ.

ಸಂಗ್ರಹಶ್ಲೋಕ -

'ಕರಾಳವದನಃ ಖಡ್ಗ ಚರ್ಮಶೂಲೀ ವರಪ್ರದಃ।
ನೀಲಸಿಂಹಾಸನಸ್ಥಶ್ಚ ರಾಹುಸ್ತತ್ರ ಪ್ರದೃಶ್ಯತೇ॥
(ರಾಹುರ್ಮೇ ಸ್ಯಾಚ್ಛುಭಪ್ರದಃ) (ದೇವನಾಗರಿಲಿಪಿಯಲ್ಲಿನ ಪಾಠ)
ನೀಲಮೇಘವರ್ಣಃ॥೮॥'

ರಾಹುವಿನ ಅಧಿದೇವತೆ ಕೆಂಬಣ್ಣದ ಭಯಂಕರವಾದ ಸರ್ಪಗಳು; ಒಂದೋ ಮೂರೋ ಹೆಡೆಯವು. ಕೈಗಳಲ್ಲಿ ಜಪಮಾಲೆ, ಕುಂಡಿಕೆಗಳನ್ನು ಹಿಡಿದವು.

ರಾಹುವಿನ ಪ್ರತ್ಯಧಿದೇವತೆ ಕಾಲ; ಕರಿಯ ಮೈಬಣ್ಣದ ಕರಾಳಮೂರ್ತಿ; ಪಾಶವನ್ನೂ ದಂಡವನ್ನೂ ಹಿಡಿದು ಭಯಂಕರನಾಗಿದ್ದಾನೆ. ಅವನ ಮೈಗೂದಲುಗಳು ಹಾವುಗಳು, ಚೇಳುಗಳು!


೯. ಕೇತು -

ಹೊಗೆಬಣ್ಣದ ಮೈಯುಳ್ಳ ಕೇತುವು ಜೈಮಿನಿಗೋತ್ರದವನು, ಮಧ್ಯದೇಶದ ಒಡೆಯ. ಎರಡು ಕೈಗಳು, ಒಂದರಲ್ಲಿ ಗದೆ, ಇನ್ನೊಂದರಲ್ಲಿ ವರದಮುದ್ರೆ. ಬೇರೆ ಬೇರೆ ಬಣ್ಣಗಳ (ವಿಚಿತ್ರ) ಉಡುಗೆ; ಅಂಥದೇ ಮಾಲೆ, ಅನುಲೇಪನ, ವೈಡೂರ್ಯದ ಆಭರಣಗಳು. ರಥದ ಮೇಲಿರುವುದು ಚಿತ್ರಧ್ವಜ. ಅವನೊಂದಿಗೆ ಬ್ರಹ್ಮನೂ, ಚಿತ್ರಗುಪ್ತನೂ ಇದ್ದಾರೆ. ಬಾವುಟದ ಆಕಾರದ ಪೀಠ (ಧ್ವಜಾಕಾರ), ಕಂಚಿನ ಪ್ರತಿಮೆ.

ಸಂಗ್ರಹಶ್ಲೋಕ -

'ಧೂಮ್ರಾಸ್ಸುಖಾವಹಾಸ್ಸರ್ವೇ ಗದಿನೋ ವಿಕೃತಾನನಾಃ।
ಕಪೋತವಾಹನಾ ನಿತ್ಯಂ ಕೇತವಸ್ಯುರ್ವರ ಪ್ರದಾಃ॥
ಸರ್ವೇ ಕಿರೀಟಿನಃ ಕಾರ್ಯಾ ಗ್ರಹಾ ಲೋಕಹಿತಾವಹಾಃ।

ಕೇತೂನಾಂ ಬಹುತ್ವೇ(s)ಪಿ ಎ(ಏ)ಕಸ್ಯೈವ ಪ್ರಾಧಾನ್ಯಂ॥
ಧೂಮ್ರವರ್ಣಃ॥೯॥'



ಕೇತು

[ಟಿಪ್ಪಣಿ - ಮೇಲಿನ ಶ್ಲೋಕದಲ್ಲಿ ಕೇತುಗಳು ಬಹುಮಂದಿಯೆಂದು ಕಾಣಿಸಲಾಗಿದೆ. ರಾಹುವಿನ ಶರೀರವೇ ಕೇತುವೆಂದೂ ಪಾಪಗ್ರಹವೆಂದೂ ನಂಬಿಕೆಯಿದೆ. 'ಸಮಾಸಸಂಹಿತೆ'ಯಲ್ಲಿ ಕೇತುಗಳ ಸಂಖ್ಯೆ ಒಂದು ಸಾವಿರವೆಂದೂ ನೂರೊಂದೆಂದೂ ಅಭಿಪ್ರಾಯಗಳಿವೆಯೆಂದು ಸೂಚಿಸಿ, ನಾರದಮತದಲ್ಲಿ ಒಂದೇ ಕೇತುವೆಂದೂ ತ್ರಿಸ್ಥಾನಸಮುದ್ಭವನಾಗಿ ವಿವಿಧರೂಪಗಳನ್ನು ತಳೆಯುವನೆಂದೂ ಹೇಳಿದ್ದಾರೆ. ಕೆಲವು ರೂಪಗಳು ಶುಭವನ್ನೂ ಮತ್ತೆ ಕೆಲವು ಅಶುಭವನ್ನೂ ಉಂಟುಮಾಡುವುವು. ಕೇತುಗಳಲ್ಲಿ ಮೂವತ್ತೆರಡು ಮಂದಿ ಭೂಪುತ್ರರನ್ನೂ, ಅರವತ್ತು ಮಂದಿ ಶನೈಶ್ಚರಪುತ್ರರನ್ನೂ, ಅರವತ್ತೈದು ಮಂದಿ ಬೃಹಸ್ಪತಿಪುತ್ರರನ್ನೂ, ಐವತ್ತೊಂದು ಮಂದಿ ಬುಧಪುತ್ರರನ್ನೂ, ನೂರ ಇಪ್ಪತ್ತು ಮಂದಿ ಅಗ್ನಿಪುತ್ರರನ್ನೂ, ಎಪ್ಪತ್ತೇಳು ಮಂದಿ ವಾಯುಪುತ್ರರನ್ನೂ, ಮೂವತ್ತೆರಡು ಮಂದಿ ವರುಣಪುತ್ರರನ್ನೂ ಎಣಿಸುವುದುಂಟು. ಕುಮುದಕೇತುಗಳು, ಭವಕೇತುಗಳು, ಪದ್ಮಕೇತುಗಳು, ಆವರ್ತಕೇತುಗಳು, ಸಂವರ್ತಕೇತುಗಳು ಎಂಬ ವಿಭಾಗವೂ ಇದೆ.]

ಕೇತುವಿನ ಅಧಿದೇವತೆ ಬ್ರಹ್ಮ; ವಿರಿಂಚಿ, ವಾಕ್ಪತಿ; ಬಿಳಿಬಣ್ಣದ ತಾವರೆಯ ಮೇಲೆ ಕುಳಿತವನು; ಇವನ ಮೈಬಣ್ಣ ಪದ್ಮ. ನಾಲ್ಕು ಕೈಗಳಲ್ಲಿ ಜಪಮಾಲೆ, ಕುಂಡಿಕೆ, ವರದಅಭಯಮುದ್ರೆಗಳು.

ಪ್ರತ್ಯಧಿದೇವತೆ ಯಮನ ಸೇವಕನಾದ ಚಿತ್ರಗುಪ್ತ. ಬಂಗಾರದ ಮೈಬಣ್ಣ; ಪಿಂಗಳವರ್ಣದ ಗಡ್ಡಮೀಸೆಗಳು ಮತ್ತು ತಲೆಗೂದಲು; ಕಣ್ಣುಗಳೂ ಅದೇ ಬಣ್ಣದವೇ. ಸೌಮ್ಯಭಾವದವನು. ಎರಡು ಕೈಗಳು, ಬಲಗೈಯಲ್ಲಿ ಲೇಖನಿ, ಎಡಗೈಯಲ್ಲಿ ಕಾಗದ (ಪತ್ರಕ).

(೨) ಕರ್ಮಸಾದ್ಗುಣ್ಯದೇವತೆಗಳು

ಸದ್ಗುಣಗಳನ್ನು ಹೊಂದಿರುವ ಭಾವ ಸಾದ್ಗುಣ್ಯ. ಕರ್ಮಸಾದ್ಗುಣವೆಂದರೆ ಶ್ರುತಿವಿಹಿತವಾದ ಕರ್ಮಗಳಲ್ಲಿರುವ ಉತ್ತಮ ಗುಣಗಳು. ಇವಕ್ಕೆ ಆರುಮಂದಿ ಅಧಿದೇವತೆಗಳನ್ನು ಹೇಳಿದ್ದಾರೆ

(೧) ದುರ್ಗೆ -

'ದುರ್ಗಾಂ ವಿಪತ್ತಿಧುತಯೇ ಭುಜಾಷ್ಟಕವಿಭೂಷಿತಾಂ।
ಧ್ಯಾಯಾಮಿ ದೈತ್ಯಹಂತ್ರೀಂ ತಾಂ ರಕ್ತಾಸ್ವಾದನತತ್ಪರಾಂ॥
ನೀಲವರ್ಣಃ॥ '

(ಬರುವ ತೊಂದರೆಗಳನ್ನು ತೊಡೆದುಹಾಕಲು ದುರ್ಗೆಯ ಧ್ಯಾನ. ಎಂಟು ಕೈಗಳ ರೂಪ)

(೨) ಗಣಪತಿ -

(ಎಡರು ತೊಡರುಗಳ ಪರಿಹಾರಕ್ಕೆ ಗಣಪತಿ ದೇವತೆ. ರಕ್ತವರ್ಣ)

(೩) ಕ್ಷೇತ್ರಪಾಲ -

(ಕರ್ಮಸ್ಥಾನದ ಒಡೆಯ ಕ್ಷೇತ್ರಪಾಲ. ಇವನ ಅನುಜ್ಞೆಯಿಂದಲೇ ಕರ್ಮವು ಫಲಕಾರಿಯಾಗುವುದು. ಶ್ಯಾಮವರ್ಣ, ಭ್ರುಕುಟೀಕುಟಿಲಾನನ; ತ್ರಿಲೋಚನ, ಊರ್ಧ್ವಕೇಶ, ಅತಿಕ್ರುದ್ಧಭಾವ, ದಂಷ್ಟ್ರಾಕರಾಳ, ಸರ್ಪಶ್ಯಂಖಿಲಭೂಷಿತ, ಕ್ಷುದ್ರಘಂಟಾಬದ್ಧಗುಲ್ಫ (ಕೆಳಕಾಲಿಗೆ ಕಟ್ಟಿದ ಕಿರುಗಂಟೆ), ನಾಗಯಜ್ಞೋಪವೀತ, ಚಂದ್ರಮೌಳಿ, ದಿಗಂಬರ, ಬಲಗೈಗಳಲ್ಲಿ ಶೂಲ, ಭೇತಾಳ, ಕತ್ತಿ, ದುಂದುಭಿಗಳು. ಎಡಗೈಗಳಲ್ಲಿ ಕಪಾಲ, ಘಂಟೆ, ಗುರಾಣಿ, ಬಿಲ್ಲುಗಳು; ಒಟ್ಟು ಎಂಟು ಕೈಗಳು)

(೪) ಅಭಯಂಕರ -

(ಜನರ ಆತಂಕಗಳನ್ನೂ ಭಯಗಳನ್ನೂ ನೀಗಿಸಿ ಅಭಯವನ್ನು ನೀಡುವ ದೇವತೆ; ನಗುಮೊಗದವನು, ಸುಖಿಸಂತೋಷವನ್ನುಂಟು ಮಾಡುವವನು. ಬಂಗಾರದ ಮೈಬಣ್ಣ. ಇಂದ್ರನಂತೆ ಕಲ್ಪಿಸಿಕೊಳ್ಳಬೇಕೆಂದು ಹೇಳಿದೆ ('ವರ್ಣಾದಿ ಸರ್ವಮಿಂದ್ರವತ್')

(೫) ವಾಸ್ತುಪುರುಷ -

'ಮಾನದಂಡಂ ಕರಾಬ್ಜೇನ ವಹಂತಂ ಭೂಮಿಶೋಧಕರಂ।
ವಂದೇಹಂ ವಾಸ್ತುಪುರುಷಂ ಶಯಾನಂ ಶಯನೇ ಶುಭೇ॥
ಅಸ್ಯ ನೀಲವರ್ಣಂ॥ ಭುಜದ್ವಿತಯಂ॥'

(ಮೂರ್ತಿಸ್ವರೂಪ ಸ್ಪಷ್ಟವಾಗಿದೆ)

(೬) ಮೃತ್ಯುಂಜಯ -

(ಕಮಲದ ನಡುವೆ ಕುಳಿತು ಭಕ್ತರ ಕಷ್ಟಗಳನ್ನು ಪರಿಹರಿಸುವ ಈಶ್ವರನ ರೂಪ ಇದು. ಅವನಿಗೆ ಮೂರು ಕಣ್ಣುಗಳು; ಸೂರ್ಯ, ಚಂದ್ರ, ಅಗ್ನಿ ಎಂಬುವು. ಬಿಳಿಯ ಮೈಬಣ್ಣ. ತಲೆಯ ಮೇಲಿರುವ ಚಂದ್ರನಿಂದ ಅಮೃತವು ಸ್ರವಿಸುತ್ತಿದೆ. ನಾಲ್ಕು ಕೈಗಳಲ್ಲಿ ಮುದ್ರೆ, ಪಾಶ, ಪುಸ್ತಕ, ಜಪಮಾಲೆಗಳು.)


(೩) ಪಂಚಾಂಗವಿಚಾರ

ಜ್ಯೋತಿಃಶಾಸ್ತ್ರಕ್ಕೆ ಮುಖ್ಯವಾದ ಕಾಲಗಣನೆಯನ್ನು ಮಾಡುತ್ತ, ಮೊದಲಲ್ಲಿ ನಾಲ್ಕು ಯುಗಗಳು (ಕೃತ, ತ್ರೇತಾ, ದ್ವಾಪರ, ಕಲಿ); ಅರವತ್ತು ಸಂವತ್ಸರಗಳು (ಪ್ರಭವ, ವಿಭವ ಇತ್ಯಾದಿ), ಸಂವತ್ಸರಗಳ ಅಭಿಮಾನಿದೇವತೆಗಳು; ಉತ್ತರಾಯಣ-ದಕ್ಷಿಣಾಯನಗಳೆಂಬ ಎರಡು ಅಯನಗಳ ಸ್ವರೂಪ, ಉಪಯೋಗ, ಕರ್ತವ್ಯದಾನವಿಶೇಷ, ಆರ್ಜಿತಗುಣ, ಅಯನಗಳ ಅಭಿಮಾನಿಗಳಾದ ಸೋಮ-ಸೂರ್ಯದೇವತೆಗಳು; ಆರು ಋತುಗಳ (ವಸಂತ, ಗ್ರೀಷ್ಮ, ವರ್ಷ, ಶರತ್, ಹೇಮಂತ, ಶಿಶಿರ) ಸ್ವರೂಪ, ಅವುಗಳಲ್ಲಿ ಮಾಡಬೇಕಾದ ದಾನ, ಆ ಋತುಗಳಲ್ಲಿ ಹುಟ್ಟಿದವರ ಗುಣಗಳು, ಋತುಗಳ ಅಭಿಮಾನಿದೇವತೆಗಳು (ಕ್ರಮವಾಗಿ ಕಾಮದೇವ, ಅಗ್ನಿ, ವರುಣ, ಗಿರಿಜಾ, ಸರ್ಪ, ಈಶ್ವರ); ಚಾಂದ್ರಮಾನರೀತ್ಯಾ ಚೈತ್ರಾದಿಮಾಸಗಳ ಸ್ವರೂಪ, ಆಯಾ ಮಾಸಗಳಲ್ಲಿ ಕರ್ತವ್ಯಸ್ನಾನ, ದಾನ ಪೂಜೆ, ಉಪಾಯನ ಮೊದಲಾದವು, ಆಯಾ ಮಾಸಗಳಲ್ಲಿ ಹುಟ್ಟಿದವರ ಗುಣಗಳು, ಮಾಸಾಭಿಮಾನಿದೇವತೆಗಳು; ಮೇಷಾದಿ ಮೀನ ಪರ್ಯಂತ ಹನ್ನೆರಡು ಸಂಕ್ರಾಂತಿಗಳು, ಸಂಕ್ರಾಂತಿಪುರುಷರ ಸ್ವರೂಪ, ವಾಹನ ಇವೆಲ್ಲವೂ ನಿರ್ದೇಶಿಸಲ್ಪಟ್ಟಿವೆ.


ಮುಂದೆ ದ್ವಾದಶಾದಿತ್ಯರ ಹೆಸರುಗಳು, ಮೂರ್ತಿಲಕ್ಷಣ, ರಥಾಶ್ವಗಳು, ವರ್ಣಾದಿಲಕ್ಷಣಗಳನ್ನು ಹೇಳಿದಮೇಲೆ ಅಧಿಮಾಸ-ಕ್ಷಯಮಾಸಗಳ ಲಕ್ಷಣ, ಕರ್ತವ್ಯದಾನ ಇವನ್ನು ಹೇಳಿ ಮತ್ತೆ ಸಂಕ್ರಾಂತಿಯ ವಿಚಾರವನ್ನು ಎತ್ತಿಕೊಂಡು ವಾರಭೇದದಿಂದ ಒದಗುವ ಏಳುಬಗೆಯ ಸಂಕ್ರಾಂತಿಗಳ ಸ್ವರೂಪವನ್ನು ಪ್ರಸ್ತಾಪಿಸಿದ್ದಾರೆ; ಭಾನುವಾರದಲ್ಲಿ ಬರುವ ಘೋರಾಸಂಕ್ರಾಂತಿ, ಸೋಮವಾರದಲ್ಲಿ ಬರುವ ಧ್ವಾಂಕ್ಷೀ, ಮಂಗಳವಾರ ಬರುವ ಮಹೋದರೀ, ಬುಧವಾರದಲ್ಲಿನ ಮಂದಾಕಿನೀ, ಗುರುವಾರದಲ್ಲಿನ ಮಂದಾ, ಶುಕ್ರವಾರದಲ್ಲಿನ ಮಿಶ್ರಿಕಾ ಮತ್ತು ಶನಿವಾರದಲ್ಲಿ ಬರುವ ರಾಕ್ಷಸೀಸಂಕ್ರಾಂತಿಗಳು. ಸಂಕ್ರಾಂತಿ ಪುರುಷನ ಸಾಮಾನ್ಯಲಕ್ಷಣವನ್ನು ಜ್ಯೋತಿಷಸಂಗ್ರಹದಿಂದ ಹೀಗೆ ಹೇಳಿದ್ದಾರೆ -

'ಅಷ್ಟಬಾಹುಶ್ಚತುರ್ವಕ್ತ್ರಾ ಹ್ಯಷ್ಟಕರ್ಣಾಷ್ಟಲೋಚನಾ।
ಷಷ್ಟಿಯೋಜನ ವಿಸ್ತೀರ್ಣಾ ಶತಯೋಜನಮುನ್ನತಾ॥
ಸಪ್ತಾಯುಧಕರಾ ಪೂಜ್ಯಾ ಪ್ರಲಂಬೋಷ್ಠೀ ತ್ರಿಪಾದಿಕಾ।
ಊರ್ಧ್ವಕೇಶೀ ವಿರೂಪಾಕ್ಷೀ ಸಂಕ್ರಾಂತಿಃ ಪುರುಷಾಕೃತಿಃ॥
ನೀಲವರ್ಣಾ॥ '


ಬವ ಮೊದಲಾದ ಕರಣಗಳ ಪ್ರವೇಶದಿಂದ ಒದಗುವ ಹನ್ನೊಂದು ಸಂಕ್ರಾಂತಿಭೇದಗಳನ್ನು ನಿರೂಪಿಸಿ, ಶುಕ್ಲ ಮತ್ತು ಕೃಷ್ಣ ಎಂಬೆರಡು ಪಕ್ಷಗಳ ಸ್ವರೂಪ, ಕರ್ತವ್ಯದಾನ, ಆ ಪಕ್ಷಗಳಲ್ಲಿ ಹುಟ್ಟಿದವರ ಗುಣಗಳು ಇವನ್ನು ತಿಳಿಯಹೇಳಿದ್ದಾರೆ.




ಅಶ್ವಿನೀ




భరణీ




కృత్తికా




ರೋಹಿಣೀ




ಮೃಗಶಿರಾ




ಆರ್ದ್ರಾ




ಪುನರ್ವಸು




ಪುಷ್ಯ




ಆಶ್ಲೇಷಾ




ಮುಖ




ಪುಚ್ಛ




ಉತ್ತರಾ




ಹಸ್ತಾ




ಚಿತ್ತಾ




ಸ್ವಾತಿ




ವಿಶಾಖಾ




ಅನೂರಾಧಾ




ಜ್ಯೇಷ್ಠಾ




ಮೂಲಾ




ಪೂರ್ವಾಷಾಢಾ




ಉತ್ತರಾಷಾಢಾ




ಶ್ರವಣ




ಧನಿಷ್ಠಾ




ಶತಭಿಷ



ಪೂರ್ವಾಭಾದ್ರ



ಉತ್ತರಾಭಾದ್ರ



ರೇವತಿ

ಈ ಎರಡು ಪಕ್ಷಗಳಿಂದಾಗುವ ಮೂವತ್ತು ತಿಥಿಗಳ ಪ್ರಸ್ತಾಪ ಮುಂದೆ ಬಂದಿದೆ. ಶುಕ್ಲ ಪ್ರತಿಪತ್ತಿನಿಂದ ಆರಂಭಿಸಿ ಪೂರ್ಣಿಮೆಯವರೆಗೆ, ಕೃಷ್ಣಪ್ರತಿಪತ್ತಿನಿಂದ ಆರಂಭಿಸಿ ಅಮಾವಾಸ್ಯೆಯವರೆಗೆ ತಿಥಿಗಳ ಸ್ವರೂಪ, ಕರ್ತವ್ಯಕೃತ್ಯಗಳು, ಆಯಾ ತಿಥಿಯಲ್ಲಿ ಬರುವ ನಾಡೀಪ್ರವೇಶಕಾಲ, ಕರ್ತವ್ಯದಾನ, ತಿಥಿಗಳ ಅಭಿಮಾನಿದೇವತೆಗಳು, ಅವರುಗಳ ಸ್ವರೂಪಗಳನ್ನು ನಿರ್ದೇಶಿಸಲಾಗಿದೆ. ಅನಂತರ ವಾರಗಳ ವಿಚಾರ, ಸ್ವರೂಪ, ವಿಷನಾಡೀಪ್ರವೇಶ, ಕರ್ತವ್ಯದಾನ, ಆಯಾವಾರದಲ್ಲಿ ಹುಟ್ಟಿದವರ ಗುಣಗಳು, ವಾರಗಳ ಅಭಿಮಾನಿದೇವತೆಗಳು, ಅವರ ಹೆಸರುಗಳು, ಸ್ವರೂಪ, ಅಭಿಮಾನಿದೇವತೆಗಳು (ಕ್ರಮವಾಗಿ ಶಿವ, ದುರ್ಗಾ, ಷಣ್ಮುಖ, ವಿಷ್ಣು, ಚತುರ್ಮುಖಬ್ರಹ್ಮ, ಇಂದ್ರ ಮತ್ತು ಯಮ), ವರ್ಣಗಳು(ಶುಭ್ರ, ಮೇಘ, ರಕ್ತ, ನೀಲ, ಪದ್ಮ, ಪೀತ, ನೀಲ) ಇವನ್ನು ಹೇಳಿದ್ದಾರೆ.

ಇಷ್ಟಾದಮೇಲೆ ನಕ್ಷತ್ರಗಳ ವಿಚಾರವನ್ನು ಎತ್ತಿಕೊಂಡಿದ್ದಾರೆ. ಅಶ್ವಿನಿ ಮೊದಲಾದ ಇಪ್ಪತ್ತೇಳು ನಕ್ಷತ್ರಗಳಲ್ಲಿ ಒಂದೊಂದಕ್ಕೂ ಮೂರ್ತಿಲಕ್ಷಣ, ವರ್ಣ, ತಾರಾಸಂಖ್ಯೆ, ಸ್ಥಾನ, ಲಿಂಗ, ಗಣ, ಮುಖ (ತಿರ್ಯಕ್, ಊರ್ಧ್ವ, ಅಧ), ವೃಕ್ಷ, ಪಕ್ಷಿ, ಜಾತಿ, ಯೋನಿ, ಸ್ವರ, ಆಕಾರ, ಮೊದಲಾದ ವಿವರಗಳನ್ನೂ, ಆ ನಕ್ಷತ್ರದಲ್ಲಿ ರೋಗ ಉಂಟಾದರೆ ರೋಗದ ಅವಧಿ, ಕ್ರಮ, ಇತ್ಯಾದಿ ವಿವರಗಳನ್ನೂ, ಪ್ರಥಮರಜಸ್ವಲಾದರ್ಶನವಾದರೆ ಫಲವನ್ನೂ ಆ ನಕ್ಷತ್ರದಲ್ಲಿ ಹುಟ್ಟಿದವನ ಗುಣಗಳನ್ನೂ, ಆಯಾ ನಕ್ಷತ್ರಗಳಲ್ಲಿ ಮಾಡಬಹುದಾದ ಕೆಲಸಗಳನ್ನೂ, ಮಾಡಬೇಕಾದ ದಾನಗಳನ್ನೂ ಪಟ್ಟಿಮಾಡಲಾಗಿದೆ.

ಮುಂದೆ ವಿಷ್ಕಂಭಕವೇ ಮೊದಲಾದ ಇಪ್ಪತ್ತೇಳು ಯೋಗಗಳ ಸ್ವರೂಪ, ಈ ಯೋಗಗಳಲ್ಲಿ ಹುಟ್ಟಿದವನ ಗುಣಗಳು, ಯೋಗಾಭಿಮಾನಿದೇವತೆಗಳು, ಅನಂತರ ಬವವೇ ಮೊದಲಾದ ಹನ್ನೊಂದು ಕರಣಗಳ ವಿಚಾರ ಬರುತ್ತವೆ.

ಹೀಗೆ ಪಂಚಾಂಗದ ಐದು ಅಂಗಗಳನ್ನು, ಎಂದರೆ ತಿಥಿ, ವಾರ, ನಕ್ಷತ್ರ, ಯೋಗ, ಕರಣಗಳನ್ನು, ವಿಸ್ತಾರವಾಗಿ ನಿರೂಪಿಸಿದ್ದಾರೆ.

(೪) ಇತರ ಜ್ಯೋತಿಷವಿವರಗಳು

ಹನ್ನೊಂದು ಕರಣಗಳ ಒಕ್ಕಣೆಯಾದಮೇಲೆ 'ಅಥ ತ್ಯಾಜ್ಯಸ್ವರೂಪಂ' ಎಂದು ರುದ್ರಯಾಮಳದ ಕುಹೂಕಲ್ಪದಿಂದ ಕೆಲವು ಮೂರ್ತಿಧ್ಯಾನಗಳನ್ನು ಸಂಗ್ರಹಿಸಿದ್ದಾರೆ. ತ್ಯಾಜ್ಯವೆನ್ನುವ ಮಾತಿಗೆ 'ತ್ಯಾಗಯೋಗ್ಯ' (ಬಿಡಲು ತಕ್ಕದ್ದು), 'ವರ್ಜನೀಯ' (ಬಿಡಬೇಕಾದುದು) ಎಂಬರ್ಥವಿದೆ. ಪ್ರಾಯಶ್ಚಿತ್ತತತ್ತ್ವ'ವೆಂಬ ಗ್ರಂಥದಲ್ಲಿ 'ತ್ಯಾಜ್ಯೋ ಧರ್ಮಸ್ಯ ವಿಕ್ರಯಃ' ಎಂಬ ಮಾತು ಬರುತ್ತದೆ, ಧರ್ಮವನ್ನು ಮಾರಾಟಕ್ಕೆ ಒಳಪಡಿಸುವುದು ಸಲ್ಲದು ಎಂಬರ್ಥದಲ್ಲಿ. ಒಳ್ಳೆಯ ಕೆಲಸಕ್ಕೆ ತಕ್ಕದ್ದಲ್ಲದ ಕಾಲವಿಭಾಗವೂ ತ್ಯಾಜ್ಯವೇ; ಸ್ಮೃತಿಯಲ್ಲಿ ನಿಷಿದ್ಧವಾದ ಕೆಲಸವನ್ನು ಮಾಡುವುದೂ ತ್ಯಾಜ್ಯವೇ. ಇದರಿಂದ ಅನಿಷ್ಟವಾದ ಫಲ ಒದಗುತ್ತದೆ ಎನ್ನುವ ಕಾರಣದಿಂದ ಅದು ತ್ಯಾಜ್ಯ. ಒಂದು ವೇಳೆ ಮಾಡಿದಾಗ ಅದಕ್ಕೆ ಶಾಂತಿಯನ್ನೋ ಪ್ರಾಯಶ್ಚಿತ್ತವನ್ನೋ ವಿಧಿಸುವುದಿದೆ. ತ್ಯಾಜ್ಯವೆನ್ನುವುದು ಪಾಪದ ಸ್ವರೂಪದ್ದೇ. ಅದರ ಮೂರ್ತಿಲಕ್ಷಣ ಸ್ವಾರಸ್ಯವಾಗಿದೆ.

ತ್ಯಾಜ್ಯಮೂರ್ತಿಗೆ ನೀಲಿಯ ಮೈಬಣ್ಣ, ಕತ್ತೆಯ ಮುಖ, ಸಿಂಹದ ಕತ್ತು, ಮೂರು ಕಾಲುಗಳು, ಸೊರಗಿದ ಹೊಟ್ಟೆ, ಸಿಟ್ಟಿಗೆದ್ದ ಹಾವಿನ ಕಣ್ಣುಗಳು. ನಾಲ್ಕು ಕೈಗಳು; ತಲೆಯೋಡೆ, ಹಗ್ಗ, ಅಂಕುಶ, ನೇಗಿಲುಗಳನ್ನು ಹಿಡೆದಿವೆ. ಯಾವಾಗಲೂ ಜನರಿಗೆ ಭಯವನ್ನುಂಟುಮಾಡುವ ಭಾವ.ನಕ್ಷತ್ರಗಳಲ್ಲಿಯೂ ರಾಶಿಗಳಲ್ಲಿಯೂ ಕುಣಿಯುತ್ತಿರುವಂತೆ ಕಲ್ಪನೆ; ಹೆಣವನ್ನೇರಿ ಸಾಗುವ ಮೂರ್ತಿ. ಶೌನಕೀಯ ಶಾಂತಿ ಪ್ರಕರಣದಲ್ಲಿ ತ್ಯಾಜ್ಯಮೂರ್ತಿಯನ್ನು ಹೆಂಗುಸೆಂದು ಭಾವಿಸಲಾಗಿದೆ. ಉರಿಯುವ ಬೆಂಕಿಯಂತೆ ಕೂದಲು, ಕಾರ್ಮೋಡದಂತೆ ಮೈಬಣ್ಣ, ಕಬ್ಬಿಣದ ಆಭರಣಗಳು; ಕೋರೆದಾಡೆಗಳಿದ್ದು ಭಯಂಕರವಾದ ಮುಖ. ಕೋಣವನ್ನೇರಿ ಕುಳಿತ ಇವಳಿಗೆ ಎಂಟು ಕೈಗಳು; ಕೈಗಳಲ್ಲಿ ಕತ್ತಿ, ಶೂಲ, ಗದೆ, ಮಾಂಸದ ತುಂಡು, ಪಾಶ, ದಂಡ, ಅಂಕುಶ, ಬಿಲ್ಲುಗಳು. ಹೀಗೆ ವಿಷದ ಸ್ವರೂಪವನ್ನು ಕಲ್ಪಿಸಿಕೊಂಡು ('ಏವಂ ವಿಷಸ್ವರೂಪಸ್ಯ ಕೃತ್ವಾ' ಎಂದು ನನ್ನ ಹಸ್ತಪ್ರತಿಯಲ್ಲಿರುವ ಪಾಠ; ದೇವನಾಗರಿ ಲಿಪಿಯ ಪ್ರಕಟಣೆಯಲ್ಲಿ 'ಏವಂ ವಿಧಸ್ವರೂಪಂ ವೈ ಕೃತ್ವಾ' ಎಂದಿದೆ) ಪಾತ್ರೆಯಲ್ಲಿ ಬಿಡಬೇಕೆಂದು ವಿಧಿ. ತ್ಯಾಜ್ಯಕಾಲವಾದರೆ ಮೊದಲ ಘಟಿಕೆಯ ದೇವತೆ ರುದ್ರ, ಎರಡನೆಯ ಘಟಿಕೆಗೆ ಯಮ, ಮೂರನೆಯದಕ್ಕೆ ಅಗ್ನಿ, ನಾಲ್ಕನೆಯದಕ್ಕೆ ಮೃತ್ಯು (ಸಾವು).

ಮೃತ್ಯುವಿನ ಸ್ವರೂಪ ಹೀಗಿದೆ-

'ದಂಷ್ಟ್ರಾಕರಾಳವದನೋ ನೀಲಾಂಜನಸಮಾಕೃತಿಃ।
ಪಾಶಖಿಡ್ಗಾಂಕುಶಗದಾಪಾಣಿರ್ಮೃತ್ಯುಸ್ಸದಾ(s)ವತು ॥ '
ನೀಲವರ್ಣಃ ॥ '

(ಮೃತ್ಯುಪುರುಷನಿಗೆ ಕೋರೆದಾಡೆಗಳಿಂದ ಕರಾಳವಾದ ಮುಖ; ಕಾಡು ಕಪ್ಪು ಮೈಬಣ್ಣ; ನಾಲ್ಕು ಕೈಗಳು; ಕೈಗಳಲ್ಲಿ ಪಾಶ, ಅಂಕುಶ, ಕತ್ತಿ, ಗದೆಗಳು)

ಇದಕ್ಕೆ ವಿರುದ್ಧವಾದುದು ಅಮೃತಪುರುಷನ ಮೂರ್ತಿ. ಬಿಳಿಯ ಬಣ್ಣದ ತೇಜಸ್ವಿರೂಪ, ಮಧುರರಸವನ್ನು ಸೂಸುವಂಥದು; ಹಸಿವೆ, ನೀರಡಿಕೆ ಮುಂತಾದ ಬಯಕೆಗಳಿಲ್ಲದುದು; ಹುಟ್ಟು, ಸಾವು, ಮುಪ್ಪು ಮುಂತಾದ ದೋಷಗಳಿಲ್ಲದುದು; ದೇವತೆಗಳಿಂದ ಸೇವಿಸಲ್ಪಡುವುದು. ಶುಭದೈವ.


'ಮಧುರರಸಸಮೇತಂ ಕ್ಷುತೃ(ತೃ)ಡಾಶಾನಿವಾರಂ।
ಜನನಮರಣವಾರ್ಧಿ(ರ್ಧ)ಕ್ಯಾದಿ ದೋಷಾಪನೋದಂ ॥
ದಿವಿಜಜನಸುಸೇವ್ಯಂ ಶುಕ್ಲವರ್ಣಂ ಮಹೌಜ-
ಸ್ತದಮೃತಶುಭದೈವಂ ಸರ್ವದಾ ಭಾವಯಾಮಿ ॥
ಶುಕ್ಲವರ್ಣ ॥ '

ಇದನ್ನು ಆಯುರ್ವೇದತಂತ್ರದಿಂದ ಆಯ್ದುಕೊಂಡಿದ್ದಾರೆ. ಮುಂದೆ ಗುಳಿಕಕಾಲವನ್ನು ಮೂರ್ತಿಮತ್ತಾಗಿ ಭಾವಿಸಿಕೊಂಡಿರುವುದು ಜ್ಯೋತಿಷರತ್ನಾಕರವೆಂಬ ಗ್ರಂಥ. ಗುಳಿಕಕಾಲವೂ ಅಪ್ರಶಸ್ತವಾದುದೇ, ತ್ಯಾಜ್ಯವೇ. ಅದರದ್ದು ಕಾಡಿಗೆಕಪ್ಪು ದೇಹ, ಕೆಂಪಡರಿದ ಕಣ್ಣು, ಬೆಸಸಂಖ್ಯೆಯ, ಎಂದರೆ ಮೂರು, ಕಣ್ಣುಗಳು, ಐದು ಮುಖಗಳು, ದಪ್ಪ ಹಲ್ಲುಗಳು, ಕೈಯಲ್ಲೊಂದು ಭಲ್ಲೆ, ಕುಳಿತಿರುವುದು ಕತ್ತೆಯ ಮೇಲೆ.


ಮೇಷ


ವೃಷಭ

ಮಿಥುನ



ಕರ್ಕಾಟಕ






ಸಿಂಹ



ಕನ್ಯಾ


ಧನಸ್ಸು
ಮಕರ


ಕುಂಭ


ಮೀನ

ಮುಂದಿನ ವಿವರಗಳು ಮಹಾಪಾತ, ವ್ಯತೀಪಾತ, ವ್ಯಪ್ರಪಾತ, ವೈಪ್ರಪಾತ ಎಂಬ ತ್ಯಾಜ್ಯ ಕಾಲವಿಭಾಗಗಳು. ಇವೆಲ್ಲ ಅಶುಭಕಾರಕಯೋಗಗಳು; ಸರ್ವಕರ್ಮವರ್ಜನಕಾಲ. ಮಹಾಪಾತ ಎಂಬುದು ಕಪ್ಪುಬಣ್ಣದ ಮೂರ್ತಿ; ಕೆಂಗಣ್ಣುಗಳು, ದೊಡ್ಡಹೊಟ್ಟೆ, ಸರ್ವಾರಿಷ್ಟಕರ, ರೌದ್ರಸ್ವಭಾವ. ವ್ಯತೀಪಾತವೆಂಬುದು ಭಾನುವಾರದಂದು ಅಮಾವಾಸ್ಯೆ ಒದಗಿಬಂದರೆ, ಅಥವಾ ಚಂದ್ರನು ಕೆಲವು ನಕ್ಷತ್ರಗಳಲ್ಲಿರುವಾಗ, ವಿಷ್ಕಂಭವೇ ಮೊದಲಾದ ಇಪ್ಪತ್ತೇಳು ಯೋಗಗಳಲ್ಲಿ ಒಂದು ಯೋಗ; ಕರ್ಮಕ್ಕೆ ವಿಹಿತವಾದುದಲ್ಲ. ಇದರ ಮೂರ್ತಿಲಕ್ಷಣ ನೀಲವರ್ಣ; ಕತ್ತಿನ ಕೊನೆಯಲ್ಲಿ ಕೆಂಪು ಛಾಯೆ, ಕತ್ತು ಬಿಳಿಬಣ್ಣದ್ದು. ಹುಬ್ಬುಗಂಟಿಕ್ಕಿ ಘೋರವಾದ ಮುಖ. ಹದಿನೆಂಟು ಕೈಗಳು; ಪಾತ್ರೆ, ಸುತ್ತಿಗೆ, ಜಪಮಾಲೆ, ಗದೆ, ಸರಪಳಿ, ಗುರಾಣಿ, ಮುದ್ಗರ, ತಾವರೆಹೂ, ಗುದ್ದಲಿ ಇತ್ಯಾದಿ ಆಯುಧಗಳು, ವೈರಿವಿಧ್ವಂಸನಕ್ಕಾಗಿ, ಮೃತ್ಯುವಿಗಾಗಿ. ಚಂದ್ರಸೂರ್ಯರ ನೋಟದಿಂದ ಹುಟ್ಟಿದ ಮೂರ್ತಿ ವ್ಯಪ್ರಪಾತವೆಂಬುದು; ಕಾಲಾಗ್ನಿಸದೃಶವಾದ ಘೋರರೂಪ. ಮೇಲಿನಿಂದ ಭೂಮಿಗೆ ಬಿದ್ದು ಕರ್ಮದಲ್ಲಿ ತೊಡಗಿದವರನ್ನು ನೋಡುವನೆಂದು ಕಲ್ಪನೆ. ವೈಪ್ರಪಾತವೆಂಬ ರೂಪಕ್ಕೆ ಉದ್ದವಾದ ತೋಳುಗಳು, ರೌದ್ರರೂಪ, ಹರಿತವಾದ ಕೋರೆದಾಡೆಗಳು, ಮಹೋತ್ಕಟವಾದ ಆಕಾರ. ಒಡನೆಯೆ ಸಾವಿಗೆ ಅಟ್ಟುವ ತ್ಯಾಜ್ಯಸ್ವರೂಪ ಇದು.

ಕಾಲಗಣನೆಯಲ್ಲಿ ಸೂರ್ಯಸಿದ್ಧಾಂತವು (ಮಾನಾಧ್ಯಾಯ) ಒಂಬತ್ತು ಬೇರೆ ಬೇರೆ ಮಾನಗಳನ್ನು ಹೇಳಿದೆ. ಅವು ಬ್ರಾಹ್ಮ, ದೈವ, ಪಿತ್ರ್ಯ, ಪ್ರಾಜಾಪತ್ಯ, ಬಾರ್ಹಸ್ಪತ್ಯ, ಸೌರ, ನಕ್ಷತ್ರ, ಸಾವನ ಮತ್ತು ಚಾಂದ್ರಮಾನ ಎಂಬುವು. ಮಕರಸಂಕ್ರಾಂತಿಯಂದು ಸೂರ್ಯನ ಉತ್ತರಾಯಣವನ್ನು ಗಮನಿಸಿ ಎಣಿಸುವುದು ಬ್ರಾಹ್ಮಮಾನ. ದಕ್ಷಿಣಾಯನದಲ್ಲಿ ದೇವತೆಗಳ ಮತ್ತು ದೈತ್ಯರ ಅನ್ಯೋನ್ಯವಾಗಿರುವ ಹಗಲು ರಾತ್ರಿಗಳ ವಿಪರ್ಯಯವನ್ನು ಗಮನಿಸುವುದು ದೈವಮಾನ. ಮೂವತ್ತು ತಿಥಿಗಳ ಮಾಸವು ಪಿತೃಗಳಿಗೆ ಒಂದು ಹಗಲು ಎಂದು ಭಾವಿಸಿ ಎಣಿಕೆ ಮಾಡುವುದು ಪಿತ್ರ್ಯಯಾನ. ಮನ್ವಂತರಗಳ ವ್ಯವಸ್ಥೆಯು ಪ್ರಾಜಾಪತ್ಯಮಾನ. ಕಾರ್ತಿಕಮಾಸದಿಂದ ಸಂವತ್ಸರವು ಮೊದಲಾಗುವುದು ಬಾರ್ಹಸ್ಪತ್ಯಮಾನ. ಈ ಐದು ಧರ್ಮಶಾಸ್ತ್ರವಿಧಿಗಳಲ್ಲಿ ಉಪಯೋಗಕ್ಕೆ ಬರುವ ಮಾನಗಳು. ಮುಂದಿನ ನಾಲ್ಕು ವ್ಯವಹಾರೋಪಯಾಗಿಯಾದುವು. ಅವು ಯಾವುವೆಂದರೆ ಸಂಕ್ರಾಂತಿಯನ್ನು ಪ್ರಧಾನವಾಗಿ ಎಣಿಸುವ ಸೌರಮಾನ, ಚಂದ್ರನು ನಕ್ಷತ್ರಗಳಲ್ಲಿ ಸಂಚರಿಸುವುದನ್ನು ಗಮನಿಸುವ ನಕ್ಷತ್ರಮಾನ, ಮೂವತ್ತು ದಿನಗಳನ್ನು ಮಾಸವೆಂದು ಬಗೆಯುವ ಸಾವನಮಾನ ಮತ್ತು ಶುಕ್ಲ ಪಾಡ್ಯದಿಂದ ಅಮಾವಾಸ್ಯೆಯವರೆಗೆ ಎಣಿಸುವ ಚಾಂದ್ರಮಾನ.

ಇಲ್ಲಿಂದ ಮುಂದೆ ದ್ವಾದಶರಾಶಿಗಳು (ಮೇಷ, ವೃಷಭ, ಮಿಥುನ, ಕರ್ಕಟಕ, ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಧನುಸ್ಸು, ಮಕರ, ಕುಂಭ, ಮೀನ), ಅವುಗಳ ಸ್ವರೂಪ, ದ್ರೇಕ್ಕಾಣರೂಪ, ಮೂರ್ತಿಲಕ್ಷಣ ಮುಂತಾದುವನ್ನು ವಿಸ್ತಾರವಾಗಿ ತಿಳಿಸಲಾಗಿದೆ. ಅನಂತರ ಹಗಲು-ಇರುಳುಗಳನ್ನು ಕುರಿತಂತೆ 'ಅಹೋರಾತ್ರಸ್ವರೂಪ'ವೆಂಬ ಭಾಗ ಬರುತ್ತದೆ. ಅಹೋರಾತ್ರವೆಂಬುದನ್ನು ಒಂದೇ ರೂಪವಾಗಿ ಬಗೆದಿರುವುದು ನೃಸಿಂಹಪ್ರಾಸಾದವೆಂಬ ಗ್ರಂಥದಲ್ಲಿದೆ -

'ಅಹೋರಾತ್ರಾಭಿಧಶ್ಚಾತ್ರ ಕೃಷ್ಣಗ್ರೀವೋ ದ್ವಿಮೂರ್ಧಕಃ।
ಆಕಂಠಪಾದಾಂತಕಚೋ ದ್ವಿಭುಜೋ ದೀರ್ಘಗೋಧಿಕಃ॥
ಸಾಮಿಚಂದ್ರಜಟಾಮೌಳಿಃ ಪಿಂಗಳಸ್ತು ಸುಲೋಚನಃ।
ಭ್ರೂಮಂಡಲಾಲಕೋಪೇತಃ ಕೃಷ್ಣಃ ಶುಭ್ರಾಂಶುಕಾನ್ವಿತಃ॥
ಅರ್ಕಂ ದಕ್ಷೇ ದಧಾನೋ(s)ಯಂ ವಾಮೇ ಚೈವ ವಿಧುಂ ತಥಾ।
ಇಷ್ಟಾಪೂರ್ತಸ್ಯ ಸಿದ್ಧ್ಯರ್ಥಂ ಪೂಜನೀಯೋ ಮನೀಷಿಭಿಃ॥
ಕನಕವರ್ಣಃ॥ '

ಅಹೋರಾತ್ರಪುರುಷನು ಬಂಗಾರದ ಮೈಬಣ್ಣದವನು; ಆದರೆ ಅವನ ಕುತ್ತಿಗೆಯು ಕಪ್ಪು ಬಣ್ಣದ್ದು. ಎರಡು ತಲೆಗಳು; ತಲೆಗೂದಲು ಕತ್ತಿನಿಂದ ಕಾಲಿನವರೆಗೂ ಹರಡಿದೆ. ಎರಡು ತೋಳುಗಳು. ಉದ್ದನೆಯ ಮೈ (ಹಲ್ಲಿಯಂತೆ). ಜಟೆಯಲ್ಲಿ ಅರ್ಧಚಂದ್ರ; ಕಣ್ಣುಗಳು ಸೊಗಸಾಗಿವೆ. ಹುಬ್ಬುಗಳವರೆಗೆ ಮುಂಗುರುಳು. ತೊಟ್ಟಿರುವ ಬಟ್ಟೆ ಬಿಳಿಯದೂ ಹೌದು, ಕರಿಯದೂ ಹೌದು. ಬಲಭಾಗದಲ್ಲಿ ಸೂರ್ಯನನ್ನೂ ಎಡಭಾಗದಲ್ಲಿ ಚಂದ್ರನನ್ನೂ ಧರಿಸಿದ್ದಾನೆ.

ಮುಂದೆ ಹಗಲನ್ನು ಗಂಡುಸೆಂದೂ, ಇರುಳನ್ನು ಹೆಂಗುಸೆಂದೂ ಬಗೆದಿರುವುದು ಮದನರತ್ನ ಮೊದಲಾದ ಗ್ರಂಥಗಳಲ್ಲಿದೆ. ಹಗಲಮೂರ್ತಿಲಕ್ಷಣ (ದಿವಾಸ್ವರೂಪ)ದಲ್ಲಿ ಈ ದೇವತೆ ಬಿಳಿಬಣ್ಣದವನು, ತಾವರೆಹೂವೇ ಮುಖವಾಗಿ ಉಳ್ಳವನು, ಸರ್ವಾಭರಣಭೂಷಿತ; ಪಾರಿವಾಳವನ್ನು ಏರಿ ಬರುವವನು, ಬಿಳಿಬಟ್ಟೆಯನ್ನುಟ್ಟವನು, ಜಟೆಯನ್ನು ಧರಿಸಿದವನು. ಪದ್ಮಾಸನದಲ್ಲಿ ಕುಳಿತವನು. ಅವನಿಗೆ ಎರಡು ಕೈಗಳು; ಒಂದರಲ್ಲಿ ಅಭಯಮುದ್ರೆ, ಇನ್ನೊಂದರಲ್ಲಿ ವರದಮುದ್ರೆ. ಹಗಲಿನ ಅಭಿಮಾನಿದೇವತೆ ಸೂರ್ಯ. ಚಂದ್ರನನ್ನು ಅಭಿಮಾನಿದೇವತೆಯಾಗಿ ಉಳ್ಳ ರಾತ್ರಿಯ ಸ್ವರೂಪ ಸರ್ವಾಭರಣಭೂಷಿತೆಯಾದ ಹೆಂಗುಸಿನದು; ಮುಕ್ಕಣ್ಣೆ, ಭೇರುಂಡ ಅವಳ ವಾಹನ. ಅವಳಿಗೆ ನಾಲ್ಕು ಕೈಗಳು; ಕೈಗಳಲ್ಲಿ ಪಾಶ, ಅಂಕುಶ, ಬಿಲ್ಲು, ಬಾಣಗಳನ್ನು ಹಿಡಿದಿದ್ದಾಳೆ. ಹಗಲಿನಲ್ಲಿ ರಾತ್ರಿಯಲ್ಲಿ ಮಾಡಬಹುದಾದ ಧಾರ್ಮಿಕವಿಧಿಗಳನ್ನು ಸ್ಮೃತಿಮುಕ್ತಾಫಲ ಮೊಲಾದ ಧರ್ಮಶಾಸ್ತ್ರಗ್ರಂಥಗಳು ಹೇಳಿವೆ.

ಇನ್ನು ಸಂಧ್ಯೆಯ ವಿಚಾರ. ಸಂಧ್ಯೆಯೆಂದರೆ ಹಗಲು-ರಾತ್ರಿ ಎರಡೂ ಕೂಡುವ ಕಾಲ. ಇದರಲ್ಲಿ ನಾಲ್ಕು ತೆರನಾದ ಸಂಧ್ಯೆಯನ್ನು ಎಣಿಸುವುದುಂಟು. ರಾತ್ರಿ ಕಳೆದು ಹಗಲು ಮೊದಲಾಗುವುದು ಪ್ರಾಕ್‌ಸಂಧ್ಯೆ (ಪ್ರಾತಃಸಂಧ್ಯೆ); ಇದನ್ನು ರೌದ್ರಿಕಾ ಎಂದು ಕರೆಯುತ್ತಾರೆ. ಹಗಲು ಕಳೆದು ರಾತ್ರಿ ಮೊದಲಾಗುವುದು ಪಶ್ಚಿಮಾಸಂಧ್ಯೆ (ಸಾಯಂಸಂಧ್ಯೆ); ಇದನ್ನು ಪೈಶಾಚಿಯೆಂದು ಕರೆಯುತ್ತಾರೆ. ಇವೆರಡಲ್ಲದೆ ನಡುಹಗಲು (ಮಧ್ಯಾಹ್ನ) ಕೂಡ ಸಂಧ್ಯೆಯೆಂದೇ ಎಣಿಕೆ; ಇದಕ್ಕೆ ಬ್ರಾಹ್ಮೀ ಎಂದು ಹೆಸರು. ಹಾಗೆಯೇ ಅರ್ಧರಾತ್ರಿಯೂ ರಾಕ್ಷಸಿಯೆಂಬ ಒಂದು ಸಂಧ್ಯೆ. ಈ ಸಂಧ್ಯಾಕಾಲಗಳಲ್ಲಿ ಆಹಾರ, ಮೈಥುನ, ನಿದ್ರಾ ಮತ್ತು ಸ್ವಾಧ್ಯಾಯ ಎಂಬ ನಾಲ್ಕು ಕರ್ಮಗಳು ವರ್ಜ್ಯವಾದುವು. ಸಂಧ್ಯೆಯರೆಲ್ಲರ ಮೂರ್ತಿಲಕ್ಷಣವೂ ಹೆಂಗುಸರೆಂದೇ.

ಪ್ರಾತಃಸಂಧ್ಯೆಯದು ಪಾಟಲವರ್ಣ; ಶ್ವೇತಾರುಣ ಪ್ರಕಾಶ; ರವಿಬಿಂಬವನ್ನುಂಟುಮಾಡುವವಳು. ಸಾಯಂಸಂಧ್ಯೆಯದು ಸಿಂಧೂರವರ್ಣ;

ಕುಂಕುಮಾರುಣ ಪ್ರಕಾಶ; ಚಂದ್ರಬಿಂಬವನ್ನುಂಟುಮಾಡುವವಳು. ಹಗಲು-ರಾತ್ರಿಗಳಲ್ಲಿ ಬರುವ ಮುಹೂರ್ತಗಳ ಸ್ವರೂಪವನ್ನೂ ಪಟ್ಟಿಮಾಡಲಾಗಿದೆ. ಹಗಲಿನಲ್ಲಿ ರೌದ್ರ, ಶ್ವೇತ, ಜಯ, ಆರ್ಯಭಟ, ಸಾವಿತ್ರ, ವಿರಾಜ, ಗಂಧರ್ವ, ಅಭಿಜಿತ್, ರೌಹಿಣೇಯ, ಗದಾಧರ, ವಿಜಯ, ನೈಋತ್ಯ, ಶತಮುಖ, ತರುಣ ಎಂಬ ಹದಿನೈದು ಮುಹೂರ್ತಗಳ, ಮತ್ತು ರಾತ್ರಿಯಲ್ಲಿ ಅತಿರೌದ್ರ, ಮಹಾಗಂಧರ್ವ, ದ್ರವಿಣಪರಿವೃಢ, ಶ್ರಾವಣ, ವಾಯು, ಅಗ್ನಿ, ರಾಕ್ಷಸ, ಧಾತೃ, ಸೌಮ್ಯ, ಬ್ರಹ್ಮ, ವಾಕ್ಪತಿ, ಪೈಲ, ವೈಕುಂಠ, ಸಮೀರಣ, ನಿಋತಿ ಎಂಬ ಹದಿನೈದು ಮುಹೂರ್ತಗಳ ಸ್ವರೂಪ ನಿರ್ದೇಶನವಿದೆ.

ಈ ನಿಧಿಯಲ್ಲಿ ಜ್ಯೋತಿಷಕ್ಕೆ ಸಂಬಂಧಪಟ್ಟ ಕೆಲವು ದೇವತೆಗಳ ಸ್ವರೂಪವನ್ನೂ ಪ್ರಸಂಗವಶದಿಂದ ಹೇಳಲಾಗಿದೆ. ಕೃಷ್ಣವರ್ಣದ, ವಿಕೀರ್ಣವದನನಾದ, ಭಯಾನಕಸ್ವರೂಪದ ಮಹಾಕಾಲನು ಪಾಶವನ್ನು ಹಿಡಿದು ನಿಂತವನು. ಉಗ್ರದೇವತೆಯದು ಕೆಂಪು ಮೈಬಣ್ಣ; ಕರಾಳವಾದ ಮುಖ, ವಿರೂಪಾಕ್ಷಿ, ಹುಲಿಯ ಮೇಲೆ ಕುಳಿತವಳು; ಕೈಗಳಲ್ಲಿ ಶೂಲ ಮತ್ತು ಡಮರುಗಗಳನ್ನು ಹಿಡಿದವಳು. ಮೃತ್ಯುದೇವತೆಯದು ನೀಲವರ್ಣದ ರೂಪ, ಎಮ್ಮೆಯ ಮೇಲೆ ಕುಳಿತದ್ದು. ನಾಲ್ಕು ಕೈಗಳು, ಕೈಗಳಲ್ಲಿ ಪಾಶ, ಕತ್ತಿ, ಅಂಕುಶ, ಗದೆಗಳು. ಕುಹೂ ಎಂಬ ವಿಷಯೋಗದೇವತೆಯದೂ ನೀಲವರ್ಣವೇ, ಯಮನ ಮಗಳು, ಭಯಾನಕವಾದ ರೂಪ. ಉರಿಯುವ ಬೆಂಕಿಯೇ ತಲೆಗೂದಲು, ಕಾರ್ಮೋಡದಂತೆ ಕಾಂತಿ, ಕಬ್ಬಿಣದ ಒಡವೆಗಳು, ಕೋರೆದಾಡೆಗಳು, ಎಮ್ಮೆಯನ್ನೇರಿ ಬರುವವಳು. ಮುಕ್ಕಣ್ಣೆ; ಎಂಟು ಕೈಗಳು, ಕೈಗಳಲ್ಲಿ ಕತ್ತಿ, ಶೂಲ, ಅಂಕುಶ, ಗುರಾಣಿ, ಬೆಂಕಿ, ಹಾವು, ವರದ ಅಭಯಮುದ್ರೆಗಳು. ಹುಬ್ಬುಗಂಟಿಕ್ಕಿದ ಮೋರೆ. ಕುಹೂ ಎಂಬ ವಿಷದಿಂದಲೇ ಹುಟ್ಟಿದವಳಂತೆ ಇವಳು.

(೫) ಕೆಲವು ತಾಂತ್ರಿಕದೇವತೆಗಳು

ಮಾಟ-ಮದ್ದು ಮೊದಲಾದ ಅಭಿಚಾರಿಕ ಕ್ರಿಯೆಗಳಲ್ಲಿ ಬಳಸುವ ಒಂದು ಕ್ರೂರತಾಂತ್ರಿಕ ದೇವತಾಮೂರ್ತಿ ಕೃತ್ಯಾ ಎನಿಸಿಕೊಳ್ಳುತ್ತದೆ. ಮಾಟಗಾರನು ಮಂತ್ರಶಕ್ತಿಯಿಂದ ಈ ದೇವತೆಯನ್ನು ಆಹ್ವಾನಿಸಿ, ತನ್ನ ಹಗೆಯ ಮೇಲೆ ಪ್ರಯೋಗಮಾಡಿದಾಗ, ಕೃತ್ಯೆಯು ಆ ಹಗೆಯನ್ನು ತರಿದು ಹಿಂದಿರುಗಿಬರುವುದೆಂದು ನಂಬಿಕೆ. ಇಂಥ ಕೃತ್ಯೆ ಜ್ಯೋತಿಷಕ್ಕೆ ನೇರವಾಗಿ ಸಂಬಂಧಿಸಿದುದಲ್ಲ. ಆದರೂ ಮಹಾಕಾಲ, ಮೃತ್ಯುಗಳೊಡನೆ ಇದನ್ನೂ ಮುಮ್ಮಡಿಯವರು ಉಲ್ಲೇಖಿಸಿದ್ದಾರೆ. ಕೃತ್ಯೆಯೆಂಬ ದೇವತೆಯ ಸ್ವರೂಪ ಇದು -

'ತ್ರಿಶೂಲಭೀಷಣಾಂ ಹಸ್ತೈಸ್ಸಪ್ತಭಿಸ್ತ್ರಿಭರಂಘ್ರಿಭಿಃ।
ಜಿಹ್ವರಕ್ತಯಾ ದೀಪಂ ಲೇಲಿಹಾನಾ ನಿಜಂ ಮುಖಂ॥
ಉದ್ಗಿರಂತೀವ ನೇತ್ರಾಭ್ಯಾಮಾಜ್ಯಸಿಕ್ತಂ ಹವಿರ್ಭುಜಂ।
ನರಾಸ್ಥಿಮಾಲಾಂ ಬಿಭ್ರಾಣಾಮುರಗೀಕೃತ ಮೇಖಲಾಂ॥
ಕಪಾಲಕುಂಡಲೋಪೇತಾಂ ಪ್ರಹಸಂತೀಂ ಭಯಾನಕಾಂ।
ದಂಡಂ ಘಂಟಾಂ ತಥಾ ಶೂಲಂ ಮಾರ್ಜನೀಂ ಪಾಶಕುಂಡಿಕೇ॥
ಬಿಭ್ರತೀಂ ಲಂಬಮಾನಾಭ್ಯಾಂ ಸ್ತನಾಭ್ಯಾಂ ಮುಕ್ತಮೂರ್ಧಜಾಂ।
ಅಧಿರೂಢಾಂ ನರಸ್ಕಂಧ ಅಂ(ಮಂ)ಧಕಾರಸಮಾಕೃತೀಂ॥
ಸ್ಫುಲಿಂಗಮಂಡಲಸ್ಥಾಂ ಚ ವಿಮುಕ್ತಾಟೋಪಭೀಷಣಾಂ।
ಎ(ಏ)ವಂ ರೂಪಧರಾಂ ಕೃತ್ಯಾಂ ನಮಾಮಿ ರಿಪುನಾಶಿನೀಂ॥
ಕೃಷ್ಣವರ್ಣಃ(ರ್ಣಾ)॥ '

ಕಾಡುಕಪ್ಪುಬಣ್ಣದ ಕೃತ್ಯೆಗೆ ಏಳು ಕೈಗಳು, ಮೂರು ಕಾಲುಗಳು. ರಕ್ತಸಿಕ್ತವಾದ ತನ್ನ ನಾಲಗೆಯಿಂದ ತನ್ನ ಮೋರೆಯನ್ನೇ ನೆಕ್ಕಿಕೊಳ್ಳುತ್ತಿದ್ದಾಳೆ; ಕಣ್ಣುಗಳಿಂದ ಉರಿ ಹೊರಬರುತ್ತಿದೆ. ಮನುಷ್ಯರ ಮೂಳೆಗಳಿಂದ ಮಾಡಿದ ಮಾಲೆಯನ್ನು ಧರಿಸಿದ್ದಾಳೆ; ಹಾವನ್ನೇ ಸೊಂಟಕ್ಕೆ ಸುತ್ತಿಕೊಂಡಿದ್ದಾಳೆ. ತಲೆಯೋಡೆಗಳದ್ದೇ ಕಿವಿಗೆ ಓಲೆಗಳು. ಭಯಂಕರವಾಗಿ, ಗಟ್ಟಿಯಾಗಿ ನಗುತ್ತಿದ್ದಾಳೆ. ಮಾಲೆಗಳು ಇಳಿಬಿದ್ದಿವೆ, ತಲೆಗೂದಲನ್ನು ಬಿರಿಬಿಟ್ಟಿದ್ದಾಳೆ. ಮನುಷ್ಯನ ಹೆಗಲನ್ನೇರಿ ಬರುವ ಈ ದೇವತೆ ಮೇಲಡರುವ ಇರುಳಂತೆ ತೋರಿಕೊಳ್ಳುತ್ತಾಳೆ. ಕೈಗಳಲ್ಲಿ ದಂಡ, ಘಂಟೆ, ಶೂಲ, ಕಸಪೊರಕೆ, ಪಾಶ ಮತ್ತು ಕುಂಡಿಕೆಗಳು. ಉರಿಕೆಂಡಗಳ ನಡುವೆ ನಿಂತಿದ್ದಾಳೆ.

ಈ ವರ್ಣನೆಯನ್ನು ಪಾಂಚರಾತ್ರಾಗಮದಿಂದ ಎತ್ತಿಕೊಂಡು ಶಾಬರತಂತ್ರದಿಂದ ಮಹಾಕೃತ್ಯಾ ಎಂಬ ಇನ್ನೊಂದು, ಇನ್ನಷ್ಟು ಕ್ರೂರವಾದ ದೇವತೆಯ ವರ್ಣನೆಯನ್ನು ಕೊಟ್ಟಿದ್ದಾರೆ-

'ಕೃಷ್ಣವರ್ಣಾಂ ಮಹಾಕಾಯಾಂ ಕೃಷ್ಣಕುಂಚಿತಮೂರ್ಧಜಾಂ।
ದಕ್ಷಿಣಾಧಃಕರೇ ದಂಡಂ ದಕ್ಷೋರ್ಧ್ವೇ ಪರಶುಂ ತಥಾ॥
ವಾಮೋರ್ಧ್ವೇಪ್ಯಂಕುಶಂ ಚೈವ ವಾಮಾಧಶ್ಚ ಗದಾಂ ಸದಾ।
ಬಿಭ್ರಾಣಂ(ಣಾಂ) ಚ ಮಹಾಕೃತ್ಯಾಮರ್ಚಯೇಚ್ಛತ್ರುನಾಶಿನೀಂ॥
ಕೃಷ್ಣವರ್ಣಃ (ರ್ಣಾ)॥ '

ಇಲ್ಲಿ ಕಾಣುವ ದೇವತೆಗೆ ನಾಲ್ಕು ಕೈಗಳು; ದಂಡ, ಪರಶು, ಅಂಕುಶ, ಗದೆಗಳನ್ನು ಹಿಡಿದಿವೆ. ದೇವನಾಗರಿಲಿಪಿಯ ಪ್ರಕಟಣೆಯಲ್ಲಿ ಮೊದಲಶ್ಲೋಕದ ಉತ್ತರಾರ್ಧದಲ್ಲಿ 'ದಂಡಂ' ಎನ್ನುವುದಕ್ಕೆ ಬದಲಾಗಿ 'ಖಡ್ಗಂ' ಎಂದಿದೆ.

ಮುಂದಿನ ದೇವತೆ ರಾಕಾ. ರುದ್ರಯಾಮಳದಲ್ಲಿ ಈ ದೇವತೆಯನ್ನು ಸ್ಫಟಿಕವರ್ಣದವಳೆಂದೂ ಮೊಲವನ್ನೇರಿದವಳೆಂದೂ, ನಾಲ್ಕು ಕೈಗಳವಳೆಂದೂ, ಮುಕ್ತಾಹಾರವಿಭೂಷಿತೆಯೆಂದೂ ಬಣ್ಣಿಸಲಾಗಿದೆ. ಇವಳು ಕೈಗಳಲ್ಲಿ ವರದ, ಅಭಯ, ಅಮೃತಕಲಾಮುದ್ರೆಗಳನ್ನೂ, ಅಮೃತಕಲಶವನ್ನೂ ಹಿಡಿದಿದ್ದಾಳಂತೆ. ಅವಳ ಒಡನಾಡಿಯಾದವಳು ಸಿನೀವಾಲೀ. ಇವಳು ಕಪ್ಪು ಮೈಬಣ್ಣದವಳು; ನಾಲ್ಕು ಕೈಗಳಲ್ಲಿ ಜಪಮಾಲೆ, ಕಮಂಡಲು, ಅಭಯವರದ ಮುದ್ರೆಗಳನ್ನು ಹಿಡಿದಿದ್ದಾಳೆ.

ಕಾಳರಾಹುವಿನದ್ದು ಹಾವಿನ ಮೈ, ಹುಲಿಯ ಮುಖ; ಮಹಾಕಾಯ. ಇವನಿಂದ ಸರ್ವಾನಿಷ್ಟನಿವೃತ್ತಿಯೆಂದು ಶೈವಾಗಮದ ಒಕ್ಕಣೆ.

ಅಪಸ್ಮಾರಪುರುಷನ ವರ್ಣನೆ ಸಿದ್ಧಾಂತಶೇಖರದಲ್ಲಿರುವುದು ಹೀಗೆ -

'ಶ್ಯಾಮಾಭೋ ರಕ್ತಕೇಶಶ್ಚ ಭೂತರೂಪಾಕೃತಿಸ್ತಥಾ।
ವಾಮಹಸ್ತೇ ತು ಫಣಿನಂ ದಕ್ಷಿಣೇ ಫಣಿಮುದ್ರಿಕಾಂ।

ವೇದಾಂಗುಷ್ಠೇನ ಷಟ್ತ್ರಿಂಶತ್ಪ್ರಮಾಣಂ ತಸ್ಯ ಚೋನ್ನತಂ(ತಿಃ)॥ ಶ್ಯಾಮವರ್ಣಃ॥ '

ಕಪ್ಪು ಮೈ, ಕೆಂಪುಬಣ್ಣದ ತಲೆಗೂದಲು, ಭೂತಾಕಾರ. ಎರಡು ಕೈಗಳು, ಎಡಗೈಯಲ್ಲಿ ಹಾವನ್ನು ಹಿಡಿದಿದ್ದಾನೆ, ಬಲಗೈಯಲ್ಲಿ ನಾಗಮುದ್ರೆಯನ್ನು ತೋರಿಸುತ್ತಿದ್ದಾನೆ. ಶ್ಲೋಕದ ಮೂರನೆಯ ಸಾಲು ಅವನ ಎತ್ತರವನ್ನು ಮೂವತ್ತಾರು ಅಂಗುಲ ಎಂದು ಕಾಣಿಸುತ್ತದೆ. ಇಲ್ಲಿರುವ 'ವೇದಾಂಗುಷ್ಠೇನ' ಎನ್ನುವುದರ ಬದಲು ದೇವನಾಗರೀಲಿಪಿಯ ಪ್ರಕಟಣೆಯಲ್ಲಿ 'ವೇದಾಂಗುಲೇನ' ಎಂದಿದೆ. 'ವೇದಾಂಗುಲ'ವೆಂದರೆ ನಾಲ್ಕು ಅಂಗುಲಗಳು. ಈ ಮೂರ್ತಿಯನ್ನು ನಾಲ್ಕು ಅಂಗುಲಗಳಿಂದ ಹಿಡಿದು ಮೂವತ್ತಾರು ಅಂಗುಲಗಳವರೆಗೆ ಯಾವುದಾದರೂ ಎತ್ತರದಲ್ಲಿ ಮಾಡಬಹುದೆಂಬ ಅರ್ಥ ತೋರಿಕೊಳ್ಳುತ್ತದೆ.

(೭) ಘಟಿಕಾಸ್ವರೂಪಗಳು -

ಘಟಿಕಾ ಎನ್ನುವುದು ಒಂದು ಕಾಲವಿಭಾಗ. ಘಟಿಕಾ ಎನ್ನುವ ಮಾತಿಗೆ ಜ್ಯೋತಿಷದಲ್ಲಿಯೂ ವ್ಯವಹಾರದಲ್ಲಿಯೂ ಕಾಲವಿಶೇಷವನ್ನು ಸೂಚಿಸುವುದು ಮುಖ್ಯವಾದುದರಿಂದ 'ಘಟಯತಿ ನಿರ್ದಿಶತಿ ಕಾಲವಿಶೇಷಂ (ಲೋಕಯಾತ್ರಾಸಂಪಾದನಾಯ)' ಎಂಬ ವ್ಯುತ್ಪತ್ತಿಯನ್ನು ಹೇಳಲಾಗಿದೆ. ಮುಹೂರ್ತ ಎನ್ನುವುದಕ್ಕೆ ಪರ್ಯಾಯಪದವಾಗಿಯೂ ಈ ಮಾತಿನ ಬಳಕೆಯಿದೆ. ಸಾಮಾನ್ಯವಾಗಿ ಇಪ್ಪತ್ತುನಾಲ್ಕು ನಿಮಿಷಗಳಿಗೆ (ಪಾಶ್ಚಾತ್ಯಪದ್ಧತಿಯ ಮಿನಿಟ್‌ಗಳಿಗೆ) ಒಂದು ಘಟಿಕೆ(ಗಳಿಗೆ)ಯೆಂದು ಹೇಳುತ್ತಾರೆ. ತಿಥ್ಯಾದಿತತ್ತ್ವದಲ್ಲಿ ಬೆಳಗ್ಗೆ ನಾಲ್ಕು ಘಟಿಕೆಗಳು ಅರುಣೋದಯವೆನಿಸಿಕೊಳ್ಳುತ್ತದೆ ('ಚತಸ್ರೋ ಘಟಿಕಾಃ ಪ್ರಾತರರುಣೋದಯ ಉಚ್ಯತೇ') ಎಂದು ಒಕ್ಕಣೆಯಿದೆ. ಈ ಘಟಿಕೆಗಳಲ್ಲಿ ಸಾತ್ತ್ವಿಕ, ರಾಜಸ, ತಾಮಸ ಎಂಬ ವಿಭಾಗವನ್ನು ಮಾಡಿಕೊಂಡಿರುವುದು ಕಾರಣಾಗಮ ಮೊದಲಾದ ಗ್ರಂಥಗಳಲ್ಲಿ ಕಾಣಬರುತ್ತದೆ; ಇವು ಆಯಾವಾರಗಳನ್ನನುಸರಿಸಿ ಬರುವುವೆಂದೂ ವಿವರವಿದೆ. ಇವನ್ನು ಕಾಲಯೋಗಿನಿಯರೆಂದು ಕರೆಯುವುದೂ ಉಂಟು.

ಸಾತ್ತ್ವಿಕಘಟಿಕೆಗಳು ಶುದ್ಧಸ್ಫಟಿಕವರ್ಣದವು, ಎರಡು ಕೈಗಳ ರೂಪದವು. ಒಂದು ಕೈಯಲ್ಲಿ ಜ್ಞಾನಮುದ್ರೆ, ಇನ್ನೊಂದರಲ್ಲಿ ಅಭಯಮುದ್ರೆ. ತಂತಮ್ಮ ಹೆಸರುಗಳಿಗೆ (ರಾಧಾ, ರಾಕಳಾ, ವಿಶ್ವಾ, ವಿದ್ಯಾ, ಶಕ್ತಿ, ಪ್ರಭಾ, ಶಾಂತಿ, ಜಯಾ, ಪ್ರಜ್ಞಾ, ಸೌಮ್ಯಾ, ಅಭಯಾ, ಶ್ರದ್ಧಾ, ಮೇಧಾ, ಧಾರಣಾ, ಪ್ರತಿಭಾ) ಅನುರೂಪವಾದ ಗೂಣಗಳುಳ್ಳವು, ಸರ್ವಾಭರಣಭೂಷಿತೆಯರು. ರಾಜಸಘಟಿಕೆಗಳು (ಮಾಯಾ, ಬಲಾ, ಪ್ರಮೋದಾ, ವಿಜಯಾ, ಮಂಗಳಾ, ಭದ್ರಕಾ, ಧನ್ಯಾ, ಸಮೃದ್ಧಿ, ಹರ್ಷಣಾ, ಧೃತಿ, ರಕ್ತಿ, ಆಸಕ್ತಿ, ಉತ್ಸಾಹ, ವಿರಕ್ತಿ, ಸುಮತಿ, ರತಿ, ಪುಷ್ಟಿ, ತುಷ್ಟಿ ಎಂಬ ಹೆಸರಿನವು) ರಕ್ತವರ್ಣದವು; ಎರಡು ಕೈಗಳು, ಒಂದರಲ್ಲಿ ಅಭಯಮುದ್ರೆ, ಇನ್ನೊಂದರಲ್ಲಿ ವರದಮುದ್ರೆ. ತಾಮಸ ಘಟಿಕೆಗಳು ಉಗ್ರಾ, ಜ್ಯೇಷ್ಠಾ, ರೌದ್ರೀ, ಶೇಷರೌದ್ರೀ, ಕಾಳೀ, ವಿಕರ್ಣೀ, ಕಾಲವಿಕರ್ಣಿಕಾ, ಬಲವಿಕರ್ಣಿಕಾ, ಬಲಪ್ರಮಥಿನೀ, ದಾರುಣಾ, ತೀಕ್ಷ್ಣಾ, ಮದಾ, ಅಸೂಯಾ, ಮತ್ಸರಾ, ಈರ್ಷ್ಯಾ, ದಂಭಾ, ಅಹಂಕೃತಿ, ಭ್ರಾಮರೀ, ಸಂಕಟಾ, ಉಲ್ಕಿಕಾ ಎಂಬುವು. ಇವುಗಳಲ್ಲಿ ಒಂದೊಂದಕ್ಕೂ ಮೂರ್ತಿಲಕ್ಷಣವನ್ನು ಹೇಳಲಾಗಿದೆ. ಸಾತ್ತ್ವಿಕ, ರಾಜಸಘಟಿಕೆಗಳಿಗಾದರೋ ಹೀಗೆ ಹೇಳಿಲ್ಲ.

(೮) ಕಾಲದ ಸೂಕ್ಷ್ಮವಿಭಾಗ

ಗ್ರಹನಿಧಿಯ ಮೊದಲಲ್ಲಿ ನಾಲ್ಕು ಯುಗಗಳನ್ನೂ, ಅನಂತರ ಅರವತ್ತು ಸಂವತ್ಸರಗಳನ್ನೂ, ಸಂವತ್ಸರದಲ್ಲಿ ಎರಡು ಅಯನಗಳು, ಹನ್ನೆರಡು ಮಾಸಗಳು, ಮಾಸದಲ್ಲಿ ಎರಡು ಪಕ್ಷಗಳು, ವಾರಗಳು, ದಿನಗಳು ಎಂದೆಲ್ಲ ಹೇಳಿರುವುದು ಕಾಲದ ಸ್ಥೂಲವಿಭಾಗ. ಕಡೆಯಲ್ಲಿ ಈಗ ಹೇಳಹೊರಟಿರುವ ಕಲಾ, ಕಾಷ್ಠಾ, ಮುಹೂರ್ತ, ನಿಮೇಷ, ಕ್ಷಣಗಳು ಕಾಲದ ಸೂಕ್ಷ್ಮವಿಭಾಗ. ನಿಮೇಷವೆಂದರೆ ಕಣ್ಣುರೆಪ್ಪೆ ಬಡಿಯುವಷ್ಟು ಕಾಲ ('ಅಕ್ಷಿಪಕ್ಷ್ಮಪರಿಕ್ಷೇಪೋ ನಿಮೇಷಃ ಪರಿಕೀರ್ತಿತಃ') ಅಮರಟೀಕಾಕಾರನು 'ಯಾವತ್ಕಾಲಂ ಅಕೃತ್ರಿಮನೇತ್ರವಿಕಾಶಾನಂತರಂ ಪಕ್ಷ್ಮಾಕುಂಚನಂ ಜಾಯತೇ' ಎಂದು ವಿವರಿಸಿದ್ದಾನೆ. ಪಾಶ್ಚಾತ್ಯರ 'ಮಿನಿಟ್' ಎನ್ನುವುದಕ್ಕಿಂತ ನಮ್ಮ ನಿಮಿಷ ಬೇರೆ. ಎರಡು ನಿಮೇಷಗಳು ಒಂದು ತ್ರುಟಿ, ಎರಡು ತ್ರುಟಿಗಳು ಒಂದು ಲವ. ಕ್ಷಣವೆಂದರೆ, ನಿಮೇಷದ ನಾಲ್ಕನೆಯ ಒಂದು ಭಾಗ('ನಿಮೇಷಕ್ರಿಯಾವಚ್ಛಿನ್ನಸ್ಯ ಕಾಲಸ್ಯ ಚತುರ್ಥಭಾಗಃ') (ಅಥವಾ ಮೂವತ್ತು ಕಲೆಗಳು, ಅಥವಾ ಹತ್ತು ಪಲಗಳು). ಕಾಷ್ಠಾ ಎಂಬ ವಿಭಾಗ ಹದಿನೆಂಟು ನಿಮೇಷಗಳೆಂದು ಅಮರಕೋಶಕಾರನ ಎಣಿಕೆ; ವಿಷ್ಣು ಪುರಾಣದ ಪ್ರಕಾರ ಹದಿನೈದು ನಿಮೇಷಗಳು('ಕಾಷ್ಠಾಪಂಚದಶ ಖ್ಯಾತಾ ನಿಮೇಷಾಃ, ೧, ೩, ೭); ಸುಶ್ರುತನ ಪ್ರಕಾರ ಹನ್ನೆರಡು ಕಲೆಗಳ ಒಂದು ಭಾಗ (೧/೧೨). ಇನ್ನು ಕಲೆಯೆಂದರೆ ಮೂವತ್ತು ಕಾಷ್ಠಗಳು. ಪಾಶ್ಚಾತ್ಯರ ಎಣಿಕೆಯಲ್ಲಿ ಎಂಟು ಸೆಕೆಂಡುಗಳು (ದಿನದ ೧/೯೦೦). ಮೂಹೂರ್ತವೆಂದರೆ ಹನ್ನೆರಡು ಕ್ಷಣಗಳು; ದಿನದ ೧/೩೦ ಭಾಗ, ೪೮ ಮಿನಿಟ್‌ಗಳು. ಈ ಎಣಿಕೆಗಳು ಜ್ಯೋತಿಷ್ಯದಲ್ಲಿ, ಹೋರಾಶಾಸ್ತ್ರದಲ್ಲಿ, ನಿಘಂಟಿನಲ್ಲಿ, ಆಯುರ್ವೇದಗ್ರಂಥಗಳಲ್ಲಿ, ಸ್ಮೃತಿಗ್ರಂಥಗಳಲ್ಲಿ ಬೇರೆಬೇರೆಯಾಗಿವೆ. ಹೀಗಾಗಿ ಸ್ವಲ್ಪ ಗೊಂದಲಕ್ಕೆ ಕಾರಣವಾಗಿದೆ. ಇದು ಹೇಗಾದರೂ ಇರಲಿ, ಮೂರ್ತಿಲಕ್ಷಣವೇ ಗ್ರಹನಿಧಿಯಲ್ಲಿ ಮುಖ್ಯವಾಗಿದೆ; ಕಾಲಮಾನದ ವಿಭಾಗಗಳನ್ನು ವಿಚಾರಮಾಡಿಲ್ಲ.

ಕಲಾದೇವತೆಯ ಮೈಬಣ್ಣ ಬಿಳಿ; ಉಟ್ಟಿರುವ ಬಟ್ಟೆ ನೀಲಿಬಣ್ಣದ್ದು. ಅವಳಿಗೆ ಮೂರು ಕಣ್ಣುಗಳು. ಮುತ್ತಿನ ಮಣಿಯ ಮಾಲೆಗಳನ್ನು ಧರಿಸಿದ್ದಾಳೆ. ಎಡಗೈಯಲ್ಲಿ, ತಾವರೆ ಹೂವನ್ನು ಹಿಡಿದಿದ್ದಾಳೆ. ಅವಳ ಧ್ಯಾನದಿಂದ ಜ್ಞಾನ-ವಿಜ್ಞಾನಗಳು ಸಿದ್ಧಿಸುತ್ತವೆ.

ಕಾಷ್ಠಾದೇವತೆಯದು ನೀಲಿಯ ಮೈ; ಹಳದಿಬಣ್ಣದ ಬಟ್ಟೆ. ಮೂರು ಕಣ್ಣುಗಳು. ಹದಿನೆಂಟು ಕೈಗಳು; ಜ್ಞಾನಮುದ್ರೆಯನ್ನು ಹಿಡಿದಿದ್ದಾಳೆ.

ನಿಮೇಷದೇವತೆಯು ಕಾಗೆಯಂತೆ ಕಪ್ಪುಬಣ್ಣದವಳು; ಕಣ್ಣುಗಳು ಅರ್ಧನೀಲಿ. ಬಲಗೈಯಲ್ಲಿ ಜಪಮಾಲೆ, ಇನ್ನೊಂದರಲ್ಲಿ ಜ್ಞಾನಮುದ್ರೆ. ಇವಳ ಧ್ಯಾನದಿಂದ ಯೋಗಸಂಸಿದ್ಧಿ.

ಕ್ಷಣದೇವತೆಯದು ಬಿಳಿಬಣ್ಣದ ಮೈಯುಳ್ಳ ಮುನಿಯ ರೂಪ; ತಲೆಯ ಮೇಲೆ ಜಟೆ, ಮೈಗೆಲ್ಲ ಚಂದನವನ್ನು ಪೂಸಿಕೊಂಡಿದ್ದಾನೆ. ಒಂದು ಕೈಯಲ್ಲಿ ಮುತ್ತಿನ ಜಪಸರ, ಇನ್ನೊಂದರಲ್ಲಿ ಕಮಂಡಲು.

ಇಲ್ಲಿಗೆ ಗ್ರಹನಿಧಿ ಮುಗಿಯುತ್ತದೆ. ಪುಷ್ಪಿಕೆಯಲ್ಲಿ 'ಯುಗಾದಿ ಕಾಲಭೇದ ತದ್ದೇವತಾನಿರೂಪಣಂ ನಾಮ ಪಂಚಮೋ ನಿಧಿಸ್ಸಂಪೂರ್ಣಃ॥' ಎಂಬ ನಿರ್ದೇಶನವು ಕಾಣುತ್ತದೆ. ಇದೇ ಕೃತಿಯ ದೇವನಾಗರೀಲಿಪಿಯ

ಪ್ರಕಟಣೆಯಲ್ಲಿ 'ನವಗ್ರಹ ಯುಗಾದಿಸ್ಥೂಲಸೂಕ್ಷ್ಮಕಾಲಭೇದ ತತ್ತದ್ದೇವತಾಸ್ವರೂಪನಿರೂಪಣಂ ನಾಮ ಪಂಚಮೋ ಗ್ರಹನಿಧಿಃ ಸಂಪೂರ್ಣಃ॥' ಎಂಬ ಒಕ್ಕಣೆಯಿದೆ.

-೨-

ಕೌತುಕನಿಧಿ

ಇದು ಕಡೆಯ ನಿಧಿ. ಮೊದಲ ಎಂಟು ನಿಧಿಗಳಂತಲ್ಲ ಇದು. ಅವುಗಳಲ್ಲಿ ಕಾಣಸಿಗುವ ವಿಷಯವ್ಯಾಪ್ತಿಯನ್ನಾಗಲಿ ನಿರೂಪಣಾಕ್ರಮವನ್ನಾಗಲಿ ಇಲ್ಲಿ ಕಾಣಲಾರೆವು. ಮೊದಲ ಎಂಟು ನಿಧಿಗಳು ಹಲವು ಆಕರಗ್ರಂಥಗಳಿಂದ ಪ್ರಸಕ್ತಭಾಗಗಳನ್ನು ಆಯ್ದುಕೊಂಡು ಸಿದ್ಧಪಡಿಸಿರುವ ಸಂಕಲನಗಳು. ಅವುಗಳಲ್ಲಿ ವಿಷಯಗಳ ಆಯ್ಕೆ, ವಿಂಗಡಣೆ, ಆನುಪೂರ್ವಿ, ಪ್ರಸ್ತಾವವಾಕ್ಯಗಳು ಮಾತ್ರ ಮುಮ್ಮಡಿಯವರವು; ಅವರದ್ದೇ ಎಂಬಂಥ ಸ್ವಂತವಿಚಾರವಾಗಲಿ ಸ್ವತಂತ್ರರಚನೆಯಾಗಲಿ ಏನೂ ಇರದು. ಲಿಪಿ ಕನ್ನಡವಾದರೂ ಭಾಷೆ ಸಂಸ್ಕೃತವೇ; ಎಲ್ಲೋ ಅಪೂರ್ವವಾಗಿ ಒಂದೆರಡು ಕಡೆ ಕನ್ನಡದ ಮಾತುಗಳು, ಟೀಕೆಗಳು ಬಂದಿವೆ ಅಷ್ಟೆ.

ಆದರೆ ಕೌತುಕನಿಧಿಯಲ್ಲಿ ಎಲ್ಲವೂ ಮುಮ್ಮಡಿಯವರ ರಚನೆಗಳೇ; ಸಂಸ್ಕೃತದ ಶ್ಲೋಕಗಳನ್ನೂ ಅವರೇ ರಚಿಸಿ, ಕನ್ನಡದಲ್ಲಿ ದೀರ್ಘವಾದ ವಿವರಣೆಗಳನ್ನೊದಗಿಸಿದ್ದಾರೆ. ಯಾವ ಆಕರಗ್ರಂಥವನ್ನೂ ಅವಲಂಬಿಸುವ ಗೋಜಿಗೆ ಹೋಗಿಲ್ಲ. ವಿಷಯದಲ್ಲಿ ಅಷ್ಟೇನು ವೈವಿಧ್ಯವಾಗಲಿ ವಿಸ್ತಾರವಾಗಲಿ ಇರದು. ಮನೆಯಲ್ಲಾಡುವ ಕೆಲವು ಆಟಗಳನ್ನು (ಪಗಡೆ, ಗಂಜೀಪು, ಚದುರಂಗ) ಕುರಿತಂತೆ ವಿವರಗಳಿವೆ ಅಷ್ಟೆ. ಉಳಿದ ಎಂಟು ನಿಧಿಗಳಲ್ಲಿ ಎದ್ದು ಕಾಣುವ ಸಂಪ್ರದಾಯಶ್ರದ್ಧೆ ಇಲ್ಲಿ ಮರೆಯಾಗಿದೆ. ಇಲ್ಲಿನ ಆಟಗಳೆಲ್ಲ ಹೊಸದಾಗಿ ಮುಮ್ಮಡಿಯವರೆ 'ವಿರಚಿಶಿ'ಯಿರುವುದು.

ಇವನ್ನೆಲ್ಲ ಗಮನಿಸಿದರೆ ಈ ನಿಧಿಯು ದಿಟವಾಗಿ ಶ್ರೀತತ್ತ್ವನಿಧಿಯ ಭಾಗವೆಂದು ಸಿದ್ಧವಾಗಿರಲಾರದೆನಿಸುತ್ತದೆ. ಅದೇ ಬೇರೆಯ ಗ್ರಂಥವಾಗಿದ್ದು, ಮೊದಲೇ ರಚಿತವಾಗಿದ್ದು ಅನಂತರ ಶ್ರೀತತ್ತ್ವನಿಧಿಯ ಕಡೆಯಲ್ಲಿ ಸೇರಿಸಿದರೆಂದು ತೋರುತ್ತದೆ, ಮತ್ತು ಈ ನಿಧಿಯು ಒಮ್ಮೆಗೆ ರಚಿತವಾದುದೆಂದೂ ಹೇಳಲಾಗದು. ಅಲ್ಲಿ ಶಾಲೀವಾಹನ ಶಕ ೧೭೪೩ (ಕ್ರಿ. ೧೮೨೧)ರಿಂದ ಮೊದಲುಮಾಡಿ ಶಾಲೀವಾಹನಶಕ ೧೭೬೦ (ಕ್ರಿ.೧೮೩೮)ರವರೆಗೆ ಮುಮ್ಮಡಿಯವರು ರಚಿಸಿದರೆನ್ನುವ ಹಲವು ಆಟಗಳ ಸೇರ್ಪಡೆಯಿದೆ; ದಿನಾಂಕಗಳನ್ನೂ ಕಾಣಿಸಿದ್ದಾರೆ. ಎಂಟನೆಯದಾದ ಆಗಮನಿಧಿಯ ಕಡೆಯಲ್ಲಿ 'ಸಂವತ್ಸರ ಮೊದಲುಗೊಂಡು ಗ್ರಹಪರ್ಯಂತವಾಗಿ ನಾಮಗಳಲ್ಲಿರುವ ವರ್ಣಸಂಖ್ಯೆಯಂನು ಚಮತ್ಕಾರದಿಂದಾ ರಚಿಶಿದ ಶ್ಲೋಕಾ॥ ' ಎಂಬ ಒಕ್ಕಣೆಯಿಂದ ಆರಂಭವಾಗುವ ಶ್ಲೋಕಗಳನ್ನು ಮುಮ್ಮಡಿಯವರು ಶಾಲಿವಾಹನ ಶಕ ೧೭೫೪ರಲ್ಲಿ (ಎಂದರೆ ಕ್ರಿ. ೧೮೩೨ರಲ್ಲಿ) ಖರನಾಮಸಂವತ್ಸರದ ಜ್ಯೇಷ್ಠ ಮಾಸದ ಶುಕ್ಲಪಕ್ಷದ ಸಪ್ತಮೀ ಗುರುವಾರ ರಚಿಸಿದರೆಂಬ ನಿರ್ದೇಶನವಿದೆ; ಇದನ್ನು ಆಗಲೇ ಪ್ರಸ್ತಾಪಿಸಿದ್ದೇನೆ. ಎಂದರೆ ಆ ವೇಳೆಗಾಗಲೆ ಎಂಟನೆಯದಾದ ಆಗಮನಿಧಿಯು ಸಂಪೂರ್ಣವಾಗಿದ್ದಿರಬೇಕು.

ಎಂಟನೆಯ ನಿಧಿಯಲ್ಲಿ ಶ್ರೀತತ್ತ್ವನಿಧಿಯು ಮುಗಿಯಿತೆನ್ನಲು ಇನ್ನೊಂದು ಕಾರಣವೂ ಇದೆ. ನನ್ನಲ್ಲಿರುವ ಈ ಗ್ರಂಥದ ಹಸ್ತಪ್ರತಿಯು ಮೂಲಮಾತೃಕೆಯಾಗಿರಬೇಕೆಂದು ಮೊದಲ ಸಂಪುಟದಲ್ಲೇ ಸೂಚಿಸಿದ್ದೇನಷ್ಟೆ; ಇದು ಚಿತ್ರಗಳನ್ನು ಬರೆಸುವ ಮೊದಲೇ ಸಿದ್ಧವಾದುದೆಂದು ನನ್ನ ಎಣಿಕೆ. ಇದರಲ್ಲಿ ಎಂಟನೆಯ ನಿಧಿಯಾದ ಮೇಲೆ '....ಅಷ್ಟಮೋ ನಿಧಿಃ ಸಂಪೂರ್ಣಃ ॥ಶ್ರೀ ರಾಮಾಯ ನಮಃ॥ ಶ್ರೀ ಶ್ರೀಶ್ರೀ...ಶ್ರೀ ॥' ಎಂಬ ಒಕ್ಕಣೆ ಬಂದು, ಪತ್ರದ ಎರಡೇ ಸಾಲುಗಳಲ್ಲಿ ಈ ಬರಹವಿದ್ದು ಉಳಿದ ಪತ್ರ ಭಾಗವನ್ನು ಖಾಲಿಬಿಡಲಾಗಿದೆ; ಮುಂದಿನ ಪತ್ರದಲ್ಲಿ ಕೌತುಕನಿಧಿ ಆರಂಭವಾಗುತ್ತದೆ. ಈ ಕ್ರಮ ಉಳಿದ ನಿಧಿಗಳಲ್ಲಿ ಕಾಣುವುದಿಲ್ಲ. ಅರ್ಧಪತ್ರಕ್ಕೆ ಒಂದು ನಿಧಿ ಮುಗಿದರೆ, ಅಲ್ಲಿಂದಲೇ ಮುಂದಿನ ನಿಧಿಯನ್ನು ಆರಂಭಿಸಿರುವುದು ಉಳಿದೆಡೆಗಳಲ್ಲಿ ಕಾಣುತ್ತದೆ. ಮತ್ತು ಉಳಿದ ನಿಧಿಗಳನ್ನು ಆರಂಭಿಸುವಾಗ 'ಶ್ರೀಗಣಾಧಿಪತಯೇ ನಮಃ।' ಎಂಬುದಷ್ಟೆ ನಮಸ್ಕ್ರಿಯೆ; ಕೆಲವು ನಿಧಿಗಳಲ್ಲಿ (ನಿದರ್ಶನಕ್ಕೆ ಶಿವನಿಧಿ, ವೈಷ್ಣವನಿಧಿಗಳಲ್ಲಿ) ಇದು ಕೂಡ ಇರದು. ಆದರೆ ಕೌತುಕನಿಧಿಯನ್ನು ಆರಂಭಿಸುವಾಗ ಮೊದಲಲ್ಲಿ 'ಶ್ರೀ ಗಣಾಧಿಪತಯೇ ನಮಃ ॥ ಶ್ರೀಮಚ್ಚಂಡಿಕಾಯೈ ನಮಃ॥' ಎಂಬ ಪ್ರಸ್ತಾವವಿದೆ.

ಎಂಟನೆಯ ನಿಧಿಯು ಆಗಮಗ್ರಂಥಗಳನ್ನು ಕುರಿತದ್ದು; ಪುಷ್ಪಿಕೆಯಲ್ಲಿ 'ಆಗಮತಂತ್ರೋಪನಿಷತ್ಭೇದ ತತ್ತತ್ಭೇದನಿರೂಪಣಂ ನಾಮ ಅಷ್ಟಮೋ ನಿಧಿಃ' ಎಂಬ ವಿವರಣೆಯೂ ಇದೆ. ಈ ನಿಧಿಯ ಕಡೆಯಲ್ಲಿ ಬಂದಿರುವ ಪಂಚಾಯತನಪೂಜೆಯ ವಿಚಾರವೂ ಅನಂತರದ ಸೇರ್ಪಡೆಯೇ ಎಂದು ಕಾಣುತ್ತದೆ. ಈ ಭಾಗದಲ್ಲೇ ಕನ್ನಡದ ವಿವರಣೆ ಮೊದಲಾಗಿರುವುದು; 'ಸ್ತ್ರೀಶೂದ್ರರುಗಳಿಗೆ ಉಪದೇಶ ಮಾಡತ್ಕ(ತಕ್ಕ) ಕ್ರಮ'ವನ್ನು ಹೇಳತೊಡಗಿ ಮುಂದೆ ನಾಲ್ಕು ಪತ್ರಗಳು ಬಹುಮಟ್ಟಿಗೆ ಕನ್ನಡ ಭಾಷೆಯಲ್ಲಿಯೇ ಇವೆ. ಇದರಿಂದಲೇ ಶ್ರೀತತ್ತ್ವನಿಧಿಯು ಹೇಳಲು ಹೊರಟ ವಿಷಯ ಆಗಲೇ ಮುಗಿಯಿತೆಂದು ಸ್ಪಷ್ಟವಾಗುತ್ತದೆ. ಪಂಚಾಯತನಪೂಜೆಯೇ ಇಡೀ ಗ್ರಂಥಕ್ಕೆ ಒಂದು ಪರಿಶಿಷ್ಟದಂತಿದೆ; ಅದಕ್ಕೆ ಈ ಕನ್ನಡಭಾಗ ಅನುಬಂಧದ ರೂಪದಲ್ಲಿದೆಯೆನ್ನಬಹುದು.

ಇಷ್ಟಾದಮೇಲೆ ಬಂದಿರುವ 'ಸಂವತ್ಸರ ಮೊದಲುಗೊಂಡು ಗ್ರಹಪರ್ಯಂತವಾಗಿ ನಾಮಗಳಲ್ಲಿರುವ ವರ್ಣ(ರ್ಣ) ಸಂಖ್ಯೆ'ಯನ್ನು ಕುರಿತ ಶ್ಲೋಕಗಳು ಆಗಮನಿಧಿಯಲ್ಲಿ ಈಗ ಕಾಣಿಸಿಕೊಳ್ಳುವುದಾದರೂ, ಈ ವಿಚಾರಕ್ಕೂ ಆಗಮನಿಧಿಯ ವಿಷಯವ್ಯಾಪ್ತಿಗೂ ಏನೂ ಸಂಬಂಧವಿರದು. ಬೇಕೆಂದರೆ ಇವು ಗ್ರಹನಿಧಿಗೆ ಸೇರಬಹುದು; ಮತ್ತು ಈ ಶ್ಲೋಕಗಳನ್ನು ಮುಮ್ಮಡಿಯವರೇ ರಚಿಸಿದರೆಂಬ ನಿರ್ದೇಶನವಿದೆ; ರಚನೆಮಾಡಿದ ದಿನವನ್ನೂ ಉಲ್ಲೇಖಿಸಲಾಗಿದೆ. ಇದೇನು ಪ್ರಾಚೀನ ಗ್ರಂಥದಿಂದ ಎತ್ತಿಕೊಂಡದ್ದಲ್ಲವೆಂಬುದನ್ನು ಸ್ಪಷ್ಟಪಡಿಸಲು ಕಡೆಯಲ್ಲಿ -

'ಗ್ರಹಾಣಾಂ ಕಥಿತಾ ವರ್ಣಾ ನವಾನಾಂ ಗ್ಣ(ಜ್ಞ)ಪ್ತಯೇ ಬುಧೈಃ।
ಶ್ರೀಮಚ್ಚಂಡಿಕೃಪಾದೃಷ್ಟ್ಯಾ ಕಥಿತಾ ಕೃಷ್ಣಭೂಭುಜಾ।
ಅಬ್ದಾದಿ ಗ್ರಹಪರ್ಯಂತಾ ವರ್ಣ(ರ್ಣ)ಸಂಖ್ಯಾ ಸತಾಂ ಮುದೇ ॥ '

ಎಂಬ ಒಕ್ಕಣೆಯಿದೆ. ಹೀಗೆ ಪಂಚಾಯತನಪೂಜೆಗೆ ಅನುಬಂಧವಾಗಿರುವ ಕನ್ನಡಭಾಗವೂ, ಮೇಲೆ ಹೇಳಿದ ವರ್ಣಸಂಖ್ಯಾಶ್ಲೋಕಗಳೂ ಶ್ರೀತತ್ತ್ವನಿಧಿಗ್ರಂಥ ಮುಗಿದ ಮೇಲೆ ಬರುವ ಮರುಮಾತುಗಳು; ನೇರವಾಗಿ ಸಂಕಲನಗ್ರಂಥಕ್ಕೆ ಸೇರತಕ್ಕವಲ್ಲ.

ಕೌತುಕನಿಧಿಯ ಆರಂಭದಲ್ಲಿ 'ಶ್ರೀ ಕೃಷ್ಣರಾಜಮಹಾರಾಜಕಂಠೀರವ ವಿರಚಿತ ಶ್ರೀತತ್ತ್ವನಿಧ್ಯಾಖ್ಯ ಗ್ರಂಥಾಂತರ್ವರ್ತಿ ನವಮೋ ಕೌತುಕನಿಧಿಃ ಪ್ರಾರಭ್ಯತೇ' ಎಂಬ ಪ್ರಸ್ತಾವವಿದೆ; ಆದರೆ ಕಡೆಯಲ್ಲಿ ಪುಷ್ಪಿಕೆಯೇನೂ ಇರದು. ಗ್ರಂಥದ ಮೊದಲಲ್ಲಿ ವಿಷಯಸೂಚಿಯಾಗಿರುವ ಶ್ಲೋಕಗಳಿವೆಯಷ್ಟೆ. ಇಲ್ಲಿ ಒಂದೊಂದು ನಿಧಿಯಲ್ಲೂ ಹೇಳಿರುವುದೇನು ಎಂಬ ನಿರ್ದೇಶನವಿದೆ. ಕೌತುಕನಿಧಿಯನ್ನು ಕುರಿತಂತೆ,

'ಪ್ರೋಕ್ತಂ ಚ ನವಮೇ ಸಂಖ್ಯಾಲಿಪಿಪ್ರಮುಖಕೌತುಕಂ॥ '

ಎಂಬ ಮಾತಿದೆ. ಆದರೆ ಕೌತುಕನಿಧಿಯಲ್ಲಿ ಸಂಖ್ಯಾಲಿಪಿಯನ್ನು ಹೇಳುವ ಭಾಗ ಕಡೆಯಲ್ಲಿ ಎಲ್ಲೋ ಕಂಡೂ ಕಾಣದಂತೆ ನುಸುಳಿಕೊಂಡಿದೆ; ಅದನ್ನು ಮುಂದೆ ಕಾಣಿಸುತ್ತೇನೆ. ಆದರೆ ಇಲ್ಲಿ ಪ್ರಮುಖವಾಗಿ ಬಂದಿರುವ ವಿಷಯ ಗಂಜೀಪು, ಪಗಡೆ ಇತ್ಯಾದಿ ಆಟಗಳನ್ನು ಕುರಿತದ್ದು, ಸಂಖ್ಯಾಲಿಪಿಯನ್ನಲ್ಲ.

ಮುಮ್ಮಡಿಯವರು ರಚಿಸಿರುವ ಸಂಖ್ಯಾರತ್ನಕೋಶವೆಂಬ ಇನ್ನೊಂದು ಸಂಸ್ಕೃತಗ್ರಂಥವಿದೆ. ಅದರ ಕಡೆಯಲ್ಲಿ 'ಜ್ಯೋತಿಷಾಗಮಶಾಸ್ತ್ರಾಣಿ ಸಮಾಲೋಕ್ಯ ಯಥಾಮತಿ' ಈ ಗ್ರಂಥವನ್ನು ಸಿದ್ಧಪಡಿಸಿದರೆಂಬ ಮಾತಿದೆ. ಈ ಗ್ರಂಥದಲ್ಲಿ ಸಂಖ್ಯೆಗಳಿಗೆ ಪದವರ್ಣಾನುಕ್ರಮಣಿಕೆಯನ್ನೂ ಸೇರಿಸಿದ್ದಾರೆ. ಮುಂದೆ 'ಚಾತುರಂಗಿಕಚಮತ್ಕೃತಿ ಚಕ್ರಮಂಜರಿ'ಯೆಂಬ ಸಂಖ್ಯಾಲಿಪಿ ಯುಕ್ತವಾದ ಚಿತ್ರಪಟಗಳನ್ನೂ ಕೊಟ್ಟಿದ್ದಾರೆ. ಈ ಕಲ್ಲಚ್ಚಿನ ಗ್ರಂಥದ ಪ್ರತಿಯೊಂದು ನನ್ನ ಬಳಿಯಿದೆ. ಇದರಲ್ಲಿನ ವಿಷಯ ಬಹುಮಟ್ಟಿಗೆ ಚದುರಂಗದಾಟವನ್ನು ಕುರಿತದ್ದು. ಬೇರೆ ಬೇರೆ ಗತಿಗಳಲ್ಲಿ, ಚಕ್ರಗಳಲ್ಲಿ ಆಡುವ ಕ್ರಮಗಳನ್ನು ತೋರಿಸಿದ್ದಾರೆ. ಇದರಲ್ಲಿ ಸಂಸ್ಕೃತಶ್ಲೋಕಗಳಿಗೆ ತೆಲುಗಿನ ವಿವರಣೆಗಳಿವೆ. ಈ ಕಲ್ಲಚ್ಚಿನ ಪುಸ್ತಕ ಹೊರಬಂದುದು ಚೆನ್ನಪುರಿಯೆನಿಸಿಕೊಳ್ಳುತ್ತಿದ್ದ ಮದ್ರಾಸಿನ ('ಚನ್ನಪೂರ್ಯಾಂ') ತರಂಗಿಣೀಮುದ್ರಾಕ್ಷರಶಾಲೆಯಲ್ಲಿ, ಶಕಾಬ್ದ ೧೭೭೮ ರಂದು (ಎಂದರೆ ೧೮೫೭ರಲ್ಲಿ). ಮುಮ್ಮಡಿಯವರ ಆಜ್ಞೆಯಿಂದ ಅವರ 'ಕುಲಮಂತ್ರಿ ಪ್ರವರ ಶ್ರೀಶೈಲಾರ್ಯದೌಹಿತ್ರ'ರಾದ ತಿರುಮಲಾಚಾರ್ಯರೆಂಬುವರು ಪ್ರಕಟಿಸಿದರೆಂದು ಮುಖಪುಟದಲ್ಲಿ ನಿರೂಪಣೆಯಿದೆ; ನನ್ನಲ್ಲಿರುವುದು ಈ ಗ್ರಂಥದ ಎರಡನೆಯ ಸಂಸ್ಕರಣ.

ಬಹುಶಃ ಕೌತುಕನಿಧಿಯ ಉದ್ದೇಶ ಈ ಬಗೆಯ ಗ್ರಂಥವಿದ್ದಿರಬೇಕು. ಮೇಲೆ ಹೇಳಿದ ಗ್ರಂಥವು 'ಚತುರಂಗಸರ್ವಸ್ವ'ವೆಂಬ ಇನ್ನಷ್ಟು ವಿಸ್ತೃತವಾದ ಗ್ರಂಥದ ಭಾಗವಂತೆ. ಚದುರಂಗದಾಟವನ್ನು ಆಡುವ ಹಲವಾರು ವಿಧಾನಗಳನ್ನು ಮುಮ್ಮಡಿಯವರೇ ಕಂಡುಹಿಡಿದು, ಇತರ ಆಸಕ್ತರಿಗೆ ಉಪಯೋಗವಾಗಲೆಂದು ಗ್ರಂಥಸ್ಥವನ್ನಾಗಿ ಮಾಡಿದರು; ಆಟಗಳಿಗೊಂದು ಸಾಹಿತ್ಯವನ್ನು ಸಿದ್ಧಮಾಡಿದರು. ಹಾಗೆಯೇ, ಅವರ ಕಾಲದಲ್ಲಿ ಹೆಚ್ಚು ಬಳಕೆಯಲ್ಲಿದ್ದ ಗಂಜೀಪು ಆಟದ ವಿಚಾರವಾಗಿಯೂ ಒಂದು 'ಸರ್ವಸ್ವ'ವನ್ನು ಸಿದ್ಧಪಡಿಸುವ ಆಸೆ ಅವರಿಗಿದ್ದಿರಬಹುದು. ಅದು ಸ್ವಲ್ಪಮಟ್ಟಿಗೆ ಕೌತುಕನಿಧಿಯಲ್ಲಿ ಕೈಗೂಡಿದೆ. ಆದರೆ ಇದಕ್ಕೂ ಶ್ರೀತತ್ತ್ವನಿಧಿಗೂ ಯಾವ ಬಗೆಯ ನಂಟೂ ಇರದು.

ಹಾಗಿದ್ದರೆ ಇದನ್ನು ಶ್ರೀತತ್ತ್ವನಿಧಿಯೊಂದಿಗೆ ತೆಕ್ಕೆಹಾಕಿದುದೇಕೆ? ಕಾರಣವೇನೋ ತಿಳಿಯದು. ನನ್ನ ಊಹೆಯಿದು. ಕೌತುಕನಿಧಿಯೆಂಬುದು ಹಲವು ಪ್ರಕರಣಗಳನ್ನು ಕೂಡಿಸಿದ ಒಂದು ಭಾಗ. ಈ ಪ್ರಕರಣಗಳು ಬೇರೆ ಬೇರೆ ದಿನಗಳಲ್ಲಿ ವರ್ಷಗಳಲ್ಲಿ ಬರೆಯಲ್ಪಟ್ಟುವೆಂಬ ಉಲ್ಲೇಖ ಆಯಾ ಪ್ರಕರಣಗಳ ಮೊದಲಲ್ಲೇ ಬಂದಿದೆ. ಕಡೆಯದಾದ 'ದೇವೀಸಾಯುಜ್ಯಮುಕ್ತಿ ಆಟ'ವನ್ನು ಗ್ರಂಥವೆಂದೇ ನಿರ್ದೇಶಿಸಲಾಗಿದೆ. ಉಳಿದ ನಿಧಿಗಳಂತೆ ಕ್ರಮವಿಡಿದು ವಿಷಯನಿರೂಪಣೆಯನ್ನು ಕೈಗೊಂಡಿದ್ದಲ್ಲ ಇದು ಎಂಬುದು ಯಾರಿಗಾದರೂ ಸ್ಪಷ್ಟವಾಗುತ್ತದೆ. ಅವನ್ನೆಲ್ಲ ಒಟ್ಟಿಗೆ ಸೇರಿಸಬಹುದೆಂಬ ಕಲ್ಪನೆ ಶ್ರೀತತ್ತ್ವನಿಧಿಯನ್ನು ಲಿಪಿಮಾಡಿದವರಿಗೋ, ಲಿಪಿಮಾಡುವುದನ್ನು ನೋಡಿಕೊಂಡ ಪಂಡಿತರಿಗೋ ಹೊಳೆದಿರಬೇಕು. ಮುಮ್ಮಡಿಯವರೂ ಒಪ್ಪಿರಬೇಕು. ಆ ವೇಳೆಗಾಗಲೆ ಶ್ರೀತತ್ತ್ವನಿಧಿಯ ಎಂಟು ಭಾಗಗಳನ್ನು ಲಿಪಿಮಾಡುವ ಕೆಲಸ ಮುಗಿದಿದ್ದಿತೆಂದು ತೋರುತ್ತದೆ. ಬೇರೆ ಬೇರೆಯಾಗಿ ಮುಮ್ಮಡಿಯವರು ಬರೆದಿದ್ದುದನ್ನು ತೇಪೆಹಾಕಿ ಇನ್ನೊಂದು ನಿಧಿಯೆಂದು ಸೇರಿಸಿದರು. ಶ್ರೀತತ್ತ್ವನಿಧಿಯ ಮುಖ್ಯಭಾಗ ಶಕ್ತಿಯೆಂಬುದನ್ನು ಆಗಲೆ ಕಾಣಿಸಿದ್ದೇನೆ. ಕೌತುಕನಿಧಿಯಲ್ಲಿ ಈಗ ಸೇರಿರುವ ಆಟಗಳಲ್ಲಿ ಮೊದಲನೆಯದು 'ಚಾಮುಂಡೇಶ್ವರಿ ಗಂಜೀಪು' ; ಕಡೆಯದು ದೇವೀ ಸಾಯುಜ್ಯಮುಕ್ತಿ ಆಟ'. ಶಕ್ತಿರೂಪಗಳಿಗೆ ನಂಟು ಇದ್ದವೇ ತಾನೆ ?

ಕೌತುಕವೆಂಬ ಮಾತಿಗೆ ಅಮರಕೋಶಕಾರನ ಪ್ರಕಾರ ಕುತುಕದ ಭಾವ ಎಂಬ ಅರ್ಥವಿದ್ದು ಕುತೂಹಲವೆಂದಾಗುತ್ತದೆ. ಭವಿಷ್ಯಪುರಾಣದಲ್ಲಿ (೧, ೧೭, ೨೬) ಮತ್ತು ನಿಘಂಟುಗಳಲ್ಲಿ ಮನಸ್ಸಿಗೆ ಹರ್ಷವನ್ನು ನೀಡುವ ಕ್ರೀಡೆ, ಉತ್ಸವ, ಆಟ ಎಂಬರ್ಥಗಳನ್ನು ಕಾಣಿಸಿದ್ದಾರೆ. ಆಟ ಮತ್ತು ಕುತೂಹಲ ಎಂಬೆರಡು ಅರ್ಥಗಳನ್ನು ಕೂಡಿಸಿಕೊಂಡು ಚಮತ್ಕಾರದ ಆಟ ಎಂಬರ್ಥದಲ್ಲಿ ಕೌತಕನಿಧಿ ಸಿದ್ಧವಾಗಿದೆ. ಗಂಜೀಪು, ಪಗಡೆ, ಚದುರಂಗಗಳಲ್ಲದೆ 'ಕುರಿತ ಅಕ್ಷರವನ್ನು ಹೇಳುವದಕ್ಕೆ ರಚಿಸಿಯಿರುವ ಶ್ಲೋಕಗಳು' ಮತ್ತು 'ಕೈಲಿ ಹಿಡಿದ ಪದಾರ್ಥವಂ ಪೇಳುವದಕ್ಕೆ ಪದ್ಯಗಳು' ಎಂಬ ಚಮತ್ಕಾರದ ಆಟಗಳೂ ಇಲ್ಲಿ ಸೇರಿವೆ. ಚಮತ್ಕಾರದ ಉದ್ದೇಶ ಸಂತೋಷ, ವಿನೋದ. ಕಡೆಯಲ್ಲಿನ ದೇವೀಸಾಯುಜ್ಯಮುಕ್ತಿ ಆಟ ಇವರು ರಚಿಸಿರುವ ೪೮ ಕಂದ ಪದ್ಯಗಳು (ಸೀಸಮಾಲಿಕೆಯು) -

'ಈಶದಯೆಯಿಂ ಸಾಧುಸಂತೋಷಕ್ಕೆ ರಸಮಾಗಿ'

ಮಾಡಿರುವ ಉಲ್ಲೇಖವಿದೆ. ನವಗ್ರಹಗಂಜೀಫನ್ನು ವಿರಚಿಸಿ -

'ಸರಸಾನಾಂ ವಿನೋದಾಯ
ಗ್ರಹಾಣಾಂ ಪೇಟಿಕಾ ಕೃತಾ॥ '

ಎಂದು ಮುಗಿಸಿದ್ದಾರೆ. ಹಾಗೆಯೇ ನವರತ್ನಗಂಜೀಫಿನ ವರ್ಣನೆಯ ಕೊನೆಯಲ್ಲಿ

'ಚತುರಾಣಾಂ ಮುದೇ
ಚಕ್ರೇ ನವರತ್ನಪೇಟಿಕಾ ॥ '

ಎಂಬ ಮಾತಿದೆ. ಮನೋಹರಗಂಜೀಪೂ 'ಕಲ್ಪಿತಾ ಚ ವಿನೋದಾಯ'. ಇದರಿಂದ ಕೌತುಕ ಎಂಬ ಮಾತಿನ ಅರ್ಥ ಸ್ಪಷ್ಟವಾಗುವುದಲ್ಲವೆ? ಕೌತುಕವೆಂಬ ಮಾತನ್ನೇ ಒಂದು ಸಂದರ್ಭದಲ್ಲಿ ಅವರು ಬಳಸಿರುವುದೂ ಉಂಟು. ದೇವೀದಶಾವತಾರಗಂಜೀಫಿನ ಪುಷ್ಪಿಕೆ ಇದು-

'ಶ್ರೀ ಚಾಮುಂಡಾಕೃಪಾಪಾತ್ರಚಾಮರಾಜಾಬ್ಧಿಜನ್ಮನಾ।
ಶ್ರೀಕೃಷ್ಣನೃಪಚಂದ್ರೇಣ ಶಕ್ತಿಕೌತುಕಪೇಟಿಕಾ।
ಜೀಯ್ಯಾದ್ವಿರಚಿತಾ ಭೂಮೌ ಯಾವಚ್ಚಂದ್ರಾರ್ಕತಾರಕಂ॥ '

ಸಾಧು ಸಂತೋಷವೂ ಅಪೇಕ್ಷಣೀಯವಾದದ್ದೇ ತಾನೆ? ಮುಮ್ಮಡಿಯವರು ವಿನೋದವನ್ನು ಲೋಕೋಪಕಾರವೆಂದೇ ಎಣಿಸಿದ್ದುದನ್ನು ಗಮನಿಸಬೇಕು. ರಾಮಪೀಟೆಂಬ ಹೊಸ ಆಟವನ್ನು ಅವರು ನಿರ್ಮಿಸಿದ್ದು ಈ ಉದ್ದೇಶದಿಂದಲೇ -

'ಕೃತಾ ಲೋಕೋಪಕಾರಾಯ ಪುಂಣ್ಯಾ ಶ್ರೀರಾಮಪೇಟಿಕಾ। '

(೧) ಸಂಖ್ಯಾಲಿಪಿ

ಇನ್ನು ಕಾತಕನಿಧಿಯನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಅವರು ಪ್ರಧಾನವೆಂದು ಎಣಿಸಿದುದು 'ಸಂಖ್ಯಾಲಿಪಿ'ಯನ್ನು ಹೇಳುವ ವಿನೋದವೆಂದು ಈಗಾಗಲೆ ಸೂಚಿಸಿದೆನಲ್ಲವೆ? ಗಂಜೀಪು, ಪಗಡೆ, ಪೀಟು ಇವೆಲ್ಲ ಬಂದಮೇಲೆ, ದೇವೀಸಾಯುಜ್ಯಮುಕ್ತಿ ಆಟಕ್ಕೆ ಮೊದಲು ಎರಡು ಚಮತ್ಕಾರದ, ವಿನೋದದ ಆಟಗಳನ್ನು ಹೇಳಿದ್ದಾರೆ; ಇವೆರಡನ್ನೂ ಅವರೇ ನಿರ್ಮಿಸಿದ್ದು. ಮೊದಲನೆಯದು 'ಸಂಖ್ಯಾಲಿಪಿ'; ಎರಡನೆಯದು 'ಕೈಲಿ ಹಿಡಿದ ಪದಾರ್ಥಗಳಂ ಪೇಳುವದು'. ಮೊದಲನೆಯದನ್ನು ವಿವರಿಸುವ ಮೊದಲು ಈ ಒಕ್ಕಣೆಯಿದೆ -

> 'ಶಾಲೀವಾಹನಶಕವರ್ಷಂಗಳು ೧೭೪೩ನೆ ವಿಕ್ರಮ ಸಂವತ್ಸರದ
> ಆಶ್ವೀಜ ಶುದ್ಧ ೧೧ ಭಾನುವಾರದಲ್ಲು। ಶ್ರೀ ಕೃಷ್ಣರಾಜಮಹಾರಾಜ
> ಕಂಠೀರವರು ವಿರಚಿಸಿಯಿರೂ(ರು)ವ ಸಂಖ್ಯಾಲಿಪಿಕ್ರಮದ ವಿವರಾ। '

ಮುಂದೆ ಕೆಲವು ಶ್ಲೋಕಗಳನ್ನು ಕೊಟ್ಟಿದ್ದಾರೆ; ಅದೂ ತಮ್ಮದೇ ರಚನೆ-

'ಪ್ರಥಮಂ ವರ್ನ(ರ್ಣ)ಸಂಖ್ಯಾನೇ ದ್ವಿತೀಯ್ಯಂ ವರ್ಗಸೂಚನೇ
ಎ(ಏ)ಕಾದಿಕಮಖಾಂ ಸ್ಥಾನೆ ದಶಕಂ ದೀರ್ಘಬೋಧನೇ । (II)
ಬಿಂದುಸ್ಥಾನೇ ಚ ನವಕಂ ವಿಸರ್ಗೇ ನವತಿಸ್ತಥಾ।
ಸಂಖ್ಯಾಯ್ಯಾಃ ಕಾದಿನವಕಂ ರೇಖಾಭೇದಸ್ಯ ಟೌದಿಕಂ। (II)
ಧಾನ್ಯಮಾನೇ ಪಕಾರಾದಿ ರಸಮಾನೇ ತು ಯಾದಿಕಂ।
ನಿಷ್ಕಾದಿ ತುಲನೇ ಶಾದಿ ಬಿಂದೋರ್ನೋ ವಿಶ್ರಮಸ್ಯ ಜ್ಞಃ। (II)
ಅರ್ಧಾಕ್ಷರಸ್ಯಾರ್ಧವೃತ್ತಮೇವಂ ಸಂಖ್ಯಾಲಿಪಿಕ್ರಮಃ।
ಯಂ ಪ್ರಸ್ತುವಂತಿ ವಿದ್ವಾಂಸೋ ಬ್ರ(ಬೃ)ಹಸ್ಪತಿ ಸಮಾ ಅಪಿ।
ಕೃಷ್ಣರಾಜಮಹಾರಾಜರಚಿತೋ ವರ್ಧತಾಂ ಚಿರಂ॥ '

ಇದರನಂತರ ಕನ್ನಡದಲ್ಲಿ ಟೀಕೆಯನ್ನೂ ಬರೆದುಕೊಂಡಿದ್ದಾರೆ -

> 'ಯೀ ಶ್ಲೋಕದ ಮೇರೆ ಅಕ್ಷರಕ್ಕೆ ಅಕಾರಾದಿ
> ಕ್ಷಕಾರಪರ್ಯಂತ ಸಂಖ್ಯಾಕ್ರಮ। ನವಸಂಖ್ಯೆಗೆ। ಅಕ್ಷರಕ್ರಮ।
> ಹಾಗ ಮೊದಲಾಗಿ ಕಾಣಿವರಿಗೂ - ಖಂಡಗ ಮೊದಲಾದಿ
> ಸೋಲಿಗೆವರಿಗೂ ಮಣುಮೊದಲಾಗಿ ಪಾವುವರಿಗೂ
> ವರಾಹತೂಕ ಮೊದಲಾಗಿ ಹಾಗತೂಕದವರಿಗೂ ಬಿಂದುಮಕಾರಿ
> ಸೂವದು ಅರ್ಧ ಅಕ್ಷರಕ್ಕೆ ಸಹ ಹಾಕಿಕೊಂಡು ಬುದ್ಧಿ -
> ವಂತರು ಕಾಗದ ಪತ್ರಗಳನೂ ಬರದು ಬಂದ ಪತ್ರಗಳನೂ
> ನೋಡಿಕೊಳ್ಳಬಹುದು ॥೦॥ಯಿದರಲ್ಲಿ ಸಂಖ್ಯೆಯಿಂದ ಅಕ್ಷರ
> (ಕ್ಷರಕ್ರಮi) ಅಕ್ಷರಗಳಿಂದಾ ಸಂಖ್ಯಾಕ್ರಮ ಸಹ ಯಿರೂವದ್ದರಿಂದಾ
> ಯಿದರಲ್ಲಿ ಸಂಖ್ಯೆಯಿಂದಾ ಅಕ್ಷರಗಳ ತಿಳಿಯುವ ಕ್ರಮ॥ - '

ಎಂದು ಹೇಳಿ ಮುಂದೆ ಪಥಕವೊಂದನ್ನು ಕೊಟ್ಟಿದ್ದಾರೆ. ಅದರ ಪಡಿಯಚ್ಚನ್ನು ಪಕ್ಕದ ಚಿತ್ರದಲ್ಲಿ ಕಾಣಿಸಲಾಗಿದೆ.

(೨) ಇನ್ನೊಂದು ಕೌತುಕ

> 'ಶಾಲೀವಾಹನ ಶಕವರ್ಷಂಗಳು ೧೭೪೩ನೆ ವರ್ತಮಾನವಾದ ವಿಕ್ರಮ
> ನಾಮಸಂವತ್ಸರದ ಆಶ್ವೀಜ ೧೩ ಶುಕ್ರವಾರದಲ್ಲು
> ಶ್ರೀಕೃಷ್ಣರಾಜಮಹಾರಾಜ
> ಕಂಠೀರವರು ನಿರ್ಮಿಶಿಯಿರೂವಂಥ್ಹಾದು ಕೈಲಿ ಹಿಡಿದ ಪದಾರ್ಥಗಳಂ
> ಪೇಳುವ ಪದ್ಯಗಳು(ಲಿ) ಪದ್ಯಗಳಲ್ಲಿ ಬಂದ ಲೆಖವಂ ನೋಡಿ
> ಕೊಂಡು ಯಿಂಥ್ಹಾ ಪದಾರ್ಥವೆಂದು ಗಣಿತ ಗುಣಿಶಿಕೊಂಡು
> ಹೇಳುವ ಶ್ಲೋಕಗಳು ಸಹಾ ಯರಡು ಪ್ರಕಾರ॥
> ಯೀ ಗಣಿತಕ್ಕೆ ಯರಡು ಪ್ರಕಾರದ ಸೂತ್ರ ಸಹಾ ಬರದುಯಿದೆ॥
> ಬುದ್ಧಿವಂತರಾದವರು ನೋಡಿಕೊಳತಕ್ಕದ್ದು॥ '

ಇವೆರಡು ಪ್ರಕಾರಗಳಲ್ಲಿ ಮೊದಲನೆಯದು ಹೀಗಿದೆ -

'ಚಿಂನವೂ।ನೀರು।ಬೆರ್ಪವಳ।ಶಿಪ್ಪೆ।ಶಿಲಾ।ಗುಡ।ಚರ್ಮ।
ಭಸ್ಮಗಳ್।ಮಂಣಿಲು।ಬೆಳ್ಳಿಯುಂ।ನಖವು।ಗೊಮಯ।ನೀರಸ-
ತಾಂಮ್ರವಾದಿಯೊಳ್। (II೧II) ಅನ್ನವು ಹತ್ತಿ।ಪೂ।ತೊಗಲ್ಲು।ಗುರ್ಪವಳಂ।
ತೃಣಶಿಪ್ಪೆ।ಕಪ್ಪುರಂ।ಚಂನ್ನೆಲ।ಬೆಳ್ಳಿ।ಬೆರ್ದವಸ।ಗೊಮಯಲೊಹವು
ಭಸ್ಮವಾದಿಯೊಳ್। (II೨II)ಕರ್ಪೂರ।ಬೆರು।ನೀರಡಿಕೆ।ಕಾಯಿ।ಕುರುಳ್।ಮಣಿ।
ಬೆಳಿ।ಹತ್ತಿ।ಮಂಣುಸೊಪ್ಪೆಲೆ।ಶಿಪ್ಪೆ।ತಾಂಮ್ರ।ತೊಗಲ್ಲು।ಪುಗಳಿ
ಪದಿನಾರು ಜಾತಿಯೊಳ್॥೩॥ ತುಪ್ಪವು।ಬೆಲ್ಲ।ಹುಲ್ಲಡಿಕೆಕಪ್ಪುರ।ಲೊಹವು।
ತಾಂಮ್ರ।ಭಸ್ಮ।ಮೆಲುಪ್ಪು।ಸಜೀವ।ಕೆಶ।ಯಲ್ಲು।ಶಿಪ್ಪೆಯು।ಗೊಮಯ।
ಶುಷ್ಕಚರ್ಮಗಳು॥೪॥ಬೆಳ್ಳಿಯು।ಕಪ್ಪುರಂ।ಪವಳ।ರತ್ನವು ಹತ್ತಿಯು।ಶಿಪ್ಪೆ।
ತುಪ್ಪಮುಂ।ಬೆಲ್ಲವು।ಕಾಳು।ಮಂಣಿಲುವು।ಕಲ್ಲು।ಕರುಳುಪ್ಪನು।
ಪುಷ್ಪಭೂತಿಗಳು॥೫॥

> ಯಲ್ಲಪದಾರ್ಥಭೇದಗಳ ಕೇಳಿದವೆಲ್ಲವ ಪೇಳ್ದೆ
> ಯಿಂದಿರಾವಲ್ಲಭಸೋದರೀಕರುಣದಿಂದಲಿ ಕೌತುಕಮಾದ ರೀತಿಯಿಂ।
> ಯೀ ಪದ್ಯಗಳಲ್ಲಿ ಹೇಳಿರುವ ಪದಾರ್ಥಗಳ ತಿಳಿಯೂಬಗ್ಯೆ ಗಣಿತ
> ಸಂಕೇತಶ್ಲೊಕ -

ಸುವರ್ಣಮನ್ನಂ ನಖರಃ ಫಲನೀರಫಲಾಶಕಂ।
ಕಂದಂ ಜೀವಂಚ (ಶ್ಚ) ಶುಷ್ಕಂ ಚ ತೃಣಂ
ಗೊಮಯಮೇವ ಚ । (II೧II)
ಕ್ರಮುಕಂ ತಾಂಮ್ರಲೋಹೇ(ಹೌ)ಚ ಸುಚರ್ಮಲವಣಂ ತಥಾ।
ಶಿಲಾಧಾನ್ಯಂ ಪ್ರವಾಳಂಚ(ಶ್ಚ) ಮಣಿ ಮತ್ಸ್ಯಾ ತಥೈವ ಚ। (II೨II)
ಕಾರ್ಪಾಸ ರಜತಾಜ್ಯಾನಿ ಗುಡಂ ಕುಸುಮಮೇವ ಚ।
ಭಸ್ಮರೋ ಮಾಷ್ಟಿಕರ್ಪೂರತ್ವಗ್ಬೇದಾದ್ಗಣಿತಕ್ರಮಃ॥ (೩II)
ಯಿ ಶ್ಲೋಕಕೆ ಸೂತ್ರ ॥ಪ। ದ್ಮ। ಮೆ। ವ। ಚ

(ಈ ಕೌತುಕದ ಅರ್ಥ ನನಗೆ ತಿಳಿಯಲಿಲ್ಲ)

(೩) ಗಂಜೀಫ, ಪಗಡೆ, ಚದುರಂಗ -

ಇಸ್ಪೀಟು ಆಟದಂತೆ ಬೇರೆ ಬೇರೆ ಮೌಲ್ಯಗಳುಳ್ಳ, ಬೇರೆ ಬೇರೆ ಚಿತ್ರಗಳಿರುವ ಎಲೆಗಳನ್ನು ಇಟ್ಟುಕೊಂಡು ಆಡುವ ಆಟ ಗಂಜೀಫು (ಸರಿಯಾದ ಹೆಸರು ಗಂಜೀಫ; ಆದರೆ ಈ ಮಾತಿನ ನಿಷ್ಪತ್ತಿ ತಿಳಿಯುವುದಿಲ್ಲ). ಅದು ನಮ್ಮ ದೇಶದ್ದಲ್ಲ. ಹದಿನಾರನೆಯ ಶತಮಾನದಲ್ಲಿ ಇದು ಇಲ್ಲಿಗೆ ಬಂದಿತಂತೆ. ಅದಕ್ಕೆ ಮೊದಲು ಇರಾನ್, ತುರ್ಕಿ, ಅರೇಬಿಯಗಳಲ್ಲಿ ಅದರ ಬಳಕೆಯಿದ್ದಿತು. ನಮ್ಮ ದೇಶದ ಮೊದಲ ಮುಗಲ್ ದೊರೆಯಾದ ಬಾಬರನು ೧೫೨೭ರ ಜೂನ್ ತಿಂಗಳಲ್ಲಿ ಕೆಲವು ಗಂಜೀಫ ಎಲೆಗಳನ್ನು ಸಿಂದ್ ದೇಶದಲ್ಲಿದ್ದ ತನ್ನ ಸ್ನೇಹಿತನೊಬ್ಬನಿಗೆ ಕಳುಹಿಸಿದನೆಂದೂ, ಅಂದಿನಿಂದ ಈ ಆಟ ಈ ದೇಶದಲ್ಲಿ ಹರಡಿಕೊಂಡಿತೆಂದೂ ಹೇಳುತ್ತಾರೆ. ಮುಗಲ್ ಅರಸ ಅಕ್ಬರನ ಮಂತ್ರಿಯಾಗಿದ್ದ ಅಬುಲ್ ಫಸ್ಲ್ ತನ್ನ 'ಐನಿ ಅಕ್ಬರಿ' ಎಂಬ ಪುಸ್ತಕದಲ್ಲಿ (ತನ್ನ ಒಡೆಯ ಅಕ್ಬರನನ್ನು ಕುರಿತದ್ದು) ಎರಡು ಗಂಜೀಫ ಎಲೆಗಳ ಕಟ್ಟುಗಳ ವರ್ಣನೆಯನ್ನು ಕೊಟ್ಟಿದ್ದಾನಂತೆ; ಹನ್ನೆರಡರದ್ದೊಂದು, ಎಂಟರದ್ದಿನ್ನೊಂದು. ಇವೆರಡೂ ಅರಸರ ಆಸ್ಥಾನಗಳಲ್ಲಿ, ಅಧಿಕಾರಿಗಳ ಮನೆಗಳಲ್ಲಿ, ಶ್ರೀಮಂತರ ಕೂಟಗಳಲ್ಲಿ ವಿಶೇಷವಾಗಿ ಬಳಕೆಗೆ ಬಂದಿತು. ಅಕ್ಬರನು ತಾನೇ ಹೊಸದೊಂದು ಗಂಜೀಫ ಆಟದ ಕ್ರಮವನ್ನು ಜಾರಿಗೆ ತಂದನಂತೆ (ಇದರಲ್ಲಿ ತೊಂಬತ್ತಾರು ಎಲೆಗಳಿದ್ದುವೆಂದೂ ಪ್ರತಿ ಎಂಟು ಕಟ್ಟುಗಳಲ್ಲಿ ಹನ್ನೆರಡು ಎಲೆಗಳಿದ್ದುವೆಂದೂ ವಿವರವಿದೆ). ಇದು ಮೊಗಲಾಯಿ ಗಂಜೀಫ ಎಂಬ ಹೆಸರಿನಿಂದ ದೇಶದಲ್ಲೆಲ್ಲ ಪ್ರಸಿದ್ಧವಾಯಿತಂತೆ.

ಈ ಆಟದ ಗೀಳು ಹಿಂದೂ ಅರಸರನ್ನೂ, ಶ್ರೀಮಂತರನ್ನೂ ಹಿಡಿದಾಗ, ಒಡಿಸ್ಸ, ಬಂಗಾಳ, ಮಧ್ಯಪ್ರದೇಶ, ಮಹಾರಾಷ್ಟ್ರ, ರಾಜಾಸ್ಥಾನ, ನೇಪಾಳ ಮೊದಲಾದ ಕಡೆಗಳಲ್ಲಿ ದಶಾವತಾರ ಗಂಜೀಫ, ರಾಮಾಯಣ ಗಂಜೀಫ, ರಾಶಿಗಂಜೀಫ, ನವಕುಂಜರಗಂಜೀಫ ಮೊದಲಾಗಿ ಹಿಂದೂ ಸಂಸ್ಕರಣಗಳು ತೋರಿಕೊಂಡುವು. ಆಂಧ್ರಪ್ರದೇಶ, ಕರ್ನಾಟಕ ಎರಡೂ ಪ್ರಾಂತ್ಯಗಳಲ್ಲಿ ಮುಸಲ್ಮಾನ ಅಧಿಕಾರಿಗಳು, ಆಳರಸರು, ಸೇನಾನಿಗಳು ಮೊಗಲಾಯಿಗಂಜಿಫವನ್ನು ಬಳಕೆಗೆ ತಂದರು. ಮುಮ್ಮಡಿಯವರ ಕಾಲದಲ್ಲಿ ಇದೇ ಪ್ರಚಲಿತವಾಗಿದ್ದುದು.

ಮುಮ್ಮಡಿಯವರು ಈ ಆಟದಲ್ಲಿ ನಿಪುಣರಾಗಿದ್ದರಂತೆ. ರಾಜ್ಯಾಧಿಕಾರ ಕೈಬಿಟ್ಟು ಹೋದಮೇಲಂತೂ ಇದಕ್ಕೆ ಅವಕಾಶ ಹೆಚ್ಚಾಗಿಯೇ ದೊರೆಯುತ್ತಿದ್ದಿರಬೇಕು! ಮೈಸೂರಿನಲ್ಲಿ ಗಂಜೀಫವನ್ನು ಛದ ಎಂಬ ಹೆಸರಿನಿಂದಲೂ ಕರೆಯುತ್ತಿದ್ದರೆಂದು ಹೇಳುತ್ತಾರೆ. ಮುಮ್ಮಡಿಯವರು ಹೊಸ ಹೊಸ ಛದಗಳನ್ನು ಆಡುತ್ತಿದ್ದರಂತೆ. ತಾವೇ ಹದಿಮೂರರಷ್ಟು ಹೊಸ ಆಟಗಳನ್ನು ನಿರ್ಮಿಸಿ ಅವನ್ನು ಹೊಸ ಹೆಸರುಗಳಿಂದ ಕರೆದು, ಎಲೆಗಳ ಮೇಲಣ ಚಿತ್ರಣಗಳನ್ನು ಸೊಗಸಾಗಿ ಮಾಡಿಸುತ್ತಿದ್ದದು ಕೌತುಕನಿಧಿಯಿಂದ ತಿಳಿದುಬರುತ್ತದೆ. ಅವರು ವಿರಚಿಸಿದ ಗಂಜೀಫ ಆಟದ ಪ್ರಕಾರಗಳಲ್ಲಿ, ಮೂನ್ನೂರ ಅರವತ್ತು ಎಲೆಗಳನ್ನು ಬಳಸುವುದ್ದಿತು. ಅವುಗಳ ಮೇಲೆಲ್ಲ ಶ್ರೀತತ್ತ್ವನಿಧಿಯಲ್ಲಿ ಬರುವ ದೇವತೆಗಳ ವರ್ಣಕಿರುಚಿತ್ರಗಳನ್ನು ತಮ್ಮ ಆಸ್ಥಾನದ ಚಿತ್ರಕಾರರಿಂದ ಬರೆಯಿಸುತ್ತಿದ್ದರು. ಗುಂಪಿನಲ್ಲಿ ಬರುವ ದೇವತಾಮೂರ್ತಿಗಳು (ಅವತಾರಗಳು, ಮಾತೃಕೆಯರು, ದಿಕ್ಪಾಲಕರು, ಭೈರವರು, ಗ್ರಹಗಳು ಇತ್ಯಾದಿ) ಆಟಕ್ಕೆ ತುಂಬ ಅನುಕೂಲವಾಗಿದ್ದುದು ಕಾರಣ. ಕೆಲವೊಮ್ಮೆ ಆಟಕ್ಕೆ ಹೊಸನಿಯಮಗಳನ್ನೇ ಏರ್ಪಡಿಸಿಕೊಂಡು ಆಟದ ವಿಧಾನವನ್ನೇ ಬದಲಾಯಿಸಿರುತ್ತಿದ್ದರಂತೆ. ಆದರೆ ಮೊಗಲಾಯಿ ಗಂಜೀಫದ ಸಂವಿಧಾನದಲ್ಲೇ ಬಹುಮಟ್ಟಿಗೆ ಆಟವಾಡುತ್ತಿದ್ದುದು 'ಮೊಗಲಾಯಿ ಗಂಜೀಫಿನ ಮೇರೆಗೆ ತಲಬಾತಲಬು ನಾತವಾನಿ ತೀತವಾನಿ ಮುಂತಾದ್ದು ಮಾಡುತ್ತಾ ಬರುವುದು' ಎಂಬಂಥ ಒಕ್ಕಣೆಗಳಿಂದ ತಿಳಿದುಬರುತ್ತದೆ.

ಕೌತುಕನಿಧಿ ಮೊದಲಾಗುವುದು ಅವರು 'ವಿರಚಿಶಿಯಿರುವ' ಚಾಮುಂಡೇಶ್ವರಿ ಗಂಜೀಫಿನ ವಿವರದಿಂದ. ಹಿಂದೆ ಹೇಳಿದಂತೆ ಅವರು 'ವಿರಚಿಶಿ'ದ ದಿನಾಂಕವನ್ನೂ ಮೊದಲಲ್ಲೇ ಕಾಣಿಸಿದ್ದಾರೆ: ಶಾಲೀವಾಹನ ಶಕೆ ೧೭೪೫ನೆ ಚಿತ್ರಭಾನುಸಂವತ್ಸರದ ಆಷಾಢ ಶುದ್ಧ ಏಕಾದಶಿ ಭಾನುವಾರದಂದು, ಎಂದರೆ ಕ್ರಿಸ್ತಾಬ್ದ ೧೮೨೨-೨೩ರಲ್ಲಿ. ಅವರು ರಾಜ್ಯವನ್ನು ಕಳೆದುಕೊಳ್ಳುವುದಕ್ಕೆ ಏಳೆಂಟು ವರ್ಷಗಳಿಗೆ ಮುಂಚೆ. ಅದೇ ವರ್ಷದ ಶ್ರಾವಣಮಾಸದಲ್ಲಿ ಬಹುಳ ಅಷ್ಟಮಿ ಶನಿವಾರದಂದು ಇನ್ನೊಂದು ಗಂಜೀಫಿನ ಆಟವನ್ನು ರಚಿಸಿದರು; ಅದು ಜಗನ್ಮೋಹನ ಗಂಜೀಫು; ಇದನ್ನು 'ಛದ' ಎಂದೂ ಕರೆದಿದ್ದಾರೆ. ಹಾಗೆಯೇ ನವಗ್ರಹಗಂಜೀಫು, ಪಂಚಪಾಂಡವ ಗಂಜೀಫು, ದೇವೀದಶಾವತಾರ ಗಂಜೀಫು, ದಿಕ್ಪಾಲಗಂಜೀಫು, ಮನೋಹರಗಂಜೀಫು, ಸರ್ವಮಂಗಳಾಗಂಜೀಫು, ನವರತ್ನಗಂಜೀಫು, ಕೃಷ್ಣರಾಜಪೀಟು, ಸದ್ಯೋಜಾತ ಪೀಟು, ಶ್ರೀರಾಮಪೀಟು, ಮೊದಲಾದ ಹೊಸ ಆಟಗಳ ವಿವರಗಳನ್ನು ಕೊಟ್ಟಿದ್ದಾರೆ. ಕೌತುಕನಿಧಿಯಲ್ಲಿ ಕೊಟ್ಟಿಲ್ಲದೆ ಇರುವ ಕೆಲವು ಗಂಜೀಫು ಆಟಗಳೂ ಇವೆಯಂತೆ (ಅಷ್ಟೈಶ್ವರ್ಯಗಂಜೀಫು, ಕಲ್ಯಾಣಗಂಜೀಫು, ಅಷ್ಟಸಿದ್ಧಿಛದ, ಸಾರಸಂಗ್ರಹ ಗಂಜೀಫು ಇತ್ಯಾದಿ)

ಗಂಜೀಫಿನನಂತರ ಈ ಕಡೆ ತುಂಬ ಬಳಕೆಯಲ್ಲಿದ್ದ ಪಗಡೆ ಆಟದ ಕೆಲವು ಹೊಸಪ್ರಕಾರಗಳನ್ನೂ ಕೌತುಕನಿಧಿಯಲ್ಲಿ ಕಾಣಿಸಿದ್ದಾರೆ. ಹದಿನಾರುಮುಖದ ಪಗಡೆ ಆಟ,('ಪೂರ್ವದ ಅಕ್ಷಕ್ರೀಡೆಯಂತೆ ಬುದ್ಧಿವಂತರು ನಿಷ್ಕರ್ಷೆಮಾಡಿಕೊಂಡು ಆಡುವುದು'), ಎಂಟುಮುಖದ ಪಗಡೆ ಆಟ (ಶಾಲಿವಾಹನಶಕ ೧೭೪೫ನೆಯ ಖರನಾಮ ಸಂವತ್ಸರದ ಫಾಲ್ಗುಣಶುದ್ಧ ಏಕಾದಶಿ ಸೋಮವಾರ ವಿರಚಿಸಿದ್ದು), ಷಣ್ಮುಖದ ಪಗಡೆ ಆಟ (ಅದೇ ವರ್ಷ ಅದೇ ಮಾಸ, ಅದೇ ಪಕ್ಷ ಹುಣ್ಣಿಮೆ ಶುಕ್ರವಾರ ವಿರಚಿಸಿದ್ದು), ಬುರುಜಿನ ಪಗಡೆ ಆಟ(ಶಾ.ಶ. ೧೭೫೬ನೇ ನಂದನನಾಮ ಸಂವತ್ಸರದ ಆಷಾಢಶುದ್ಧ ಏಕಾದಶಿ ಭಾನವಾರ ವಿರಚಿಸಿದ್ದು), ನವಗ್ರಹಪಗಡೆ ಆಟ (ಶಾ.ಶ. ೧೭೫೫, ಶ್ರಾವಣ ಬಹುಳ ಅಷ್ಟಮಿ ಭಾನುವಾರ), ಭೂಚಕ್ರದ ಪಗಡೆ (ಶಾ.ಶ. ೧೭೬೦, ವಿಳಂಬಿನಾಮ ಸಂವತ್ಸರದ ಆಷಾಢಶುದ್ಧ ಏಕಾದಶಿ ಮಂಗಳವಾರ), ಶ್ರೀಚಕ್ರದ ದಶದಳಪಗಡೆ (ಅದೇ ವರ್ಷದ ಆಶ್ವೀಜಶುದ್ಧ ಹುಣ್ಣಿಮೆ ಬುಧವಾರ ರಚಿಸಿದ ೨೮೬ ಮನೆಗಳ ಆಟ 'ಶ್ರೀ ಚಕ್ರದ ದಶದಳ ಪಗಡೆ ಆಟಕ್ಕೆ ಕಮಲಾಕಾರವಾಗಿ ಚಾರಿ ಮಾಡಿಕೊಂಡು ಅದರಲ್ಲಿ ಮೇಲೆ ವಂಭತ್ತು ಸಾಲು ಬೃಂದಾವನಾಕೃತಿಯಾಗಿ ಮಾಡಿ ಕೆಳಗೆ ದಶದಳಗಳ ಬರೆದುಯಿರಬೇಕು। ಯೀ ಆಟಕ್ಕೆ ವಟ್ಟು ೨೮೬ ಮನೆಗಳಿಗೆ ವಿವರಾ॥')

ಇವನ್ನು ಕ್ರಮವಾಗಿ ಕಾಣಿಸಿದ್ದಾರೆ. ಇಲ್ಲಿನ ವಿವರಗಳೆಲ್ಲ ಕನ್ನಡದಲ್ಲೇ ಇವೆ; ಇಲ್ಲಿ ಸಂಸ್ಕೃತವನ್ನೇನು ಬಳಸಿಲ್ಲ.

ಈ ವಿವರಗಳನಂತರ ಬರುವ ಎರಡು ಕೌತುಕಗಳ ವಿಚಾರ (ಸ್ವರಲಿಪಿ, ಮತ್ತೊಂದು) ಆಗಲೇ ಬಂದಿದೆ. ಇವೆರಡರನಂತರ ವಿಸ್ತಾರವಾಗಿ ಬಂದಿರುವುದು ದೇವೀ ಸಾಯುಜ್ಯಮುಕ್ತಿ ಆಟ. ಇದನ್ನು ೧೭೪೫ನೆಯ ಚಿತ್ರಭಾನು ಸಂವತ್ಸರದ (ಎಂತರೆ ಕ್ರಿ.೧೮೨೨-೨೩) ಚೈತ್ರಶುದ್ಧ ಪಂಚಮೀ ಸೌಮ್ಯವಾರ ರಚಿಸಿದರೆಂಬ ಒಕ್ಕಣೆಯಿದೆ. ಆಟವಾಡುವ ರೀತಿಯನ್ನು ತಿಳಿಸಲು ನಲವತ್ತೆಂಟು ಕಂದಪದ್ಯಗಳನ್ನು 'ಸೀಸಮಾಲಿಕೆ'ಯೆಂಬ ಹೆಸರಿನಿಂದ ಕನ್ನಡದಲ್ಲೇ ರಚಿಸಿದ್ದಾರೆ. ಇದನ್ನೊಂದು ಸ್ವತಂತ್ರಗ್ರಂಥವೆಂದೇ ನಿರ್ದೇಶಿಸಿದ್ದಾರೆ. ಸೀಸಮಾಲಿಕೆಯ ಕಡೆಯಲ್ಲಿ -

'. . . .
ಶುಭವಾದ ದಿವಸದಲ್ಲಿ ಸಭೆಯವರು ಮೆಚ್ಚುವಾ ಪರಿಯಿಂದ
ಧರೆಯಲ್ಲಿರುವ ನರರು ನಾರಿಯರು ಸನ್ಮಾರ್ಗವರಿವಂತೆ -
ಶ್ರೀಕೃಷ್ಣಧರಣೀಂದ್ರ ರಚಿಸಿರುವ ಸರಸಾವಾ ಶ್ರೀದೇವಿಯ
ಸಾಯುಜ್ಯವೆಂಬುವಾಟವಾ ಚಂದ್ರತಾರಮಾಗರಿತು ನೋಡಿ -
ಸತತಸಂತೋಷದಿಂದಾಡಿ ನೀವು -
ಸುಖದಲಾಡಿದ ಜನಕೆ ಶುಭವು ಬಹುದು -
ಸೀಸಮಾಲಿಕಾ ಸಂಪೂರ್ಣಾ - '

ಎಂಬ ಫಲಸ್ತುತಿ ಕಾಣುತ್ತದೆ. ಮುಂದೆ ಸಂಸ್ಕೃತದಲ್ಲಿ ಇದೇ ಆಟದ ವಿವರಗಳನ್ನು ಕೊಟ್ಟಿದ್ದಾರೆ. ಈ ಆಟಕ್ಕೆ ಬೇಕಾಗುವ ಚಿತ್ರಪಟವನ್ನು ರಚಿಸಿಕೊಳ್ಳಲು ನೆರವಾಗುವ ವಿವರಗಳನ್ನೂ ಒದಗಿಸಿದ್ದಾರೆ.

'ಯೀ ದೇವೀ ಸಾಯುಜ್ಯಮುಕ್ತಿ ಆಟದ ಪಠದಲ್ಲಿ ಕಾರಣದ
ಮನೆಗಳು ನೂರಾರಲ್ಲಿ ಯೀ ಕನಡ ಮಾತುಗಳ ಅಕ್ಷರಗಳ
ಬರಯತ್ಕ (ಬರೆಯತಕ್ಕ) ರೀತಿ ಸರ್ಪಗತಿ ಯೀ
ಕೆಳಗಣಿಂದ ಮೇಲಕ್ಕೆ ಲೆಖ(ಕ್ಕ) ॥ -

ಈ ಚತುರಶ್ರಪಟದಲ್ಲಿ ಎರಡು ಕಲಮುಗಳಿದ್ದು ಒಂದು ಕಾರಣದ ಲೆಕ್ಕವೆಂದೂ ಇನ್ನೊಂದು ಕಾರ್ಯದ ಲೆಕ್ಕವೆಂದೂ ಕಾಣಿಸಿ, ಅವೆರಡರ ಅಡಿಯಲ್ಲಿ ಕೆಲವು ಸುಭಾಷಿತಗಳನ್ನೂ, ನೀತಿಯ ಮಾತುಗಳನ್ನೂ ಸಾಧನೆಯ ಬಗೆಗಳನ್ನೂ ಬರೆದಿದ್ದಾರೆ. ಆಟದ ವಿವರಗಳೇನು ನನಗೆ ತಿಳಿಯದು. ಆದರೆ ಈ ಕನ್ನಡದ ಮಾತುಗಳು ಸ್ವಾರಸ್ಯವಾಗಿರುವುದರಿಂದ, ಪ್ರಾಯಶಃ ಹಳೆಯ ಕಲ್ಪನೆಗಳನ್ನು ಚಿತ್ರಿಸುವುದರಿಂದ ಅವನ್ನು ಯಥಾವತ್ತಾಗಿ ಇಲ್ಲಿ ಕೊಡಲಾಗಿದೆ.

ಈ ದೇವೀಸಾಯುಜ್ಯಮುಕ್ತಿ ಆಟದ ವಿವರಣೆಗಳು ಸುದೀರ್ಘವಾಗಿವೆ. ಇವಕ್ಕೆ ಮೊದಲೇ ಅವರು ಈ ಆಟದ ನಿರೂಪಣೆಯಲ್ಲಿ ತೊಡಗಿದ್ದು, ಅದರ ಬಗ್ಗೆ ಸಂಶೋಧನೆಗಳನ್ನು ನಡೆಯಿಸುತ್ತಿದ್ದಂತೆ ತೋರುತ್ತದೆ. 'ಪೂರ್ವದಲ್ಲಿ ತಂಮಿಂದಾ ರಚಿಸಲ್ಪಟ್ಟ, ಚತುರಶ್ರಾಕೃತಿಯಾದ ದೇವೀಸಾಯುಜ್ಯಮುಕ್ತಿ ಆಟದ ಪಠವನ್ನು' ಎಂಬ ಒಕ್ಕಣೆ ಮತ್ತೆ ಮತ್ತೆ ಕಾಣುತ್ತದೆ. ಮೊದಲು ಚತುರಶ್ರಾಕೃತಿಯ ಆಟದ ಪಟವನ್ನು ಸಿದ್ಧಪಡಿಸಿಕೊಂಡು ಅನಂತರ ಶಿವಲಿಂಗಾಕೃತಿ, ಸರ್ಪಾಕೃತಿ, ದೇವೀವಿಶ್ವರೂಪಾಕೃತಿ ಮತ್ತು ಬೃಂದಾವನಾಕೃತಿಗಳಾಗಿ ರಚಿಸಿದರು. ಈ ಪ್ರಕಾರಗಳ ವಿವರಗಳನ್ನು ಇಲ್ಲಿ ಒದಗಿಸಿದ್ದಾರೆ; 'ಯಾವತ್ತು ಚತುರಶ್ರಾಕೃತಿಪಠದಂತ್ತೆ(ತೆ) ಬುದ್ಧಿವಂತರು ನೋಡಿಕೊಂಡಾಡುವದು॥ ' ಎಂಬ ಸೂಚನೆಯೂ ಇದೆ.

ಈ ಭಾಗದ ಕಡೆಯಲ್ಲಿ ಒಂದು ಶ್ಲೋಕವಿದೆ; ನನ್ನಲ್ಲಿರುವ ಹಸ್ತಪ್ರತಿಯ ಈ ಪತ್ರವು ಕೊಂಚ ತ್ರುಟಿತವಾಗಿದ್ದು, ಅದನ್ನು ಹಾಗೆಯೇ ಇಲ್ಲಿ ಕಾಣಿಸಿದ್ದೇನೆ -

'. . . ಇದಂ . . . . ಣ್ಯಧ(ದ)ಮಿಮಂ ಪುರುಷಾರ್ಥಸಾರಂ(ಗಿ)
ಶ್ರೀಕೃಷ್ಣರಾಜ ಚರಿತಂ (ರಚಿತಂ) ಪಠತಾಂ ಧರಿತ್ರ್ಯಾಂ।
ನಶ್ಯೇಚ್ಚ ಪಾಪ ನಿಚಯಂ . . . . . ದೇವೀಕಟಾಕ್ಷಲವತಸ್ಸುಲಭಾ
ಭವೇಚ್ಚಃ(ಚ್ಚ) ॥ ॥

ಇದು ಈ ಗ್ರಂಥದ ದೇವನಾಗರೀಲಿಪಿಯ ಪ್ರಕಟಣೆಯಲ್ಲಿ ಇಲ್ಲ.

ಕೌತುಕನಿಧಿಯಲ್ಲಿ ನಿರೂಪಣೆಗೆ ಬಂದಿರುವ ಆಟಗಳ ಕೊನೆಯದೆಂದರೆ 'ಚತುರಂಗದ ಅಭೇದ್ಯವಾದ ಗಾರುಡವ್ಯೂಹ'. ಇದಕ್ಕೆ ಕನ್ನಡದಲ್ಲಿ ಪದ್ಯಗಳನ್ನು ರಚಿಸಿದ್ದಾರೆ. ಇವಕ್ಕೆ ಮೊದಲು ಗ್ರಂಥದ ದೇವನಾಗರೀಲಿಪಿಯ ಪ್ರಚುರಣದಲ್ಲಿ ಹತ್ತು ಸಂಸ್ಕೃತಶ್ಲೋಕಗಳೂ ಕಾಣುತ್ತವೆ; ಅಪೂರ್ವವಾದುವು. ಈ ಕಾರಣದಿಂದ ಅವನ್ನು ಇಲ್ಲಿ ಕೊಡಲಾಗಿದೆ -

'ಸರಸ ಚತುರಂಗದೊಳರಸು ನಿಂತೆಡೆಯಲ್ಲಿ
ರಸಿಗಾರನೇ ಕಡೆಯಿರುವ ಮಂತ್ರೀ।
ತನಗೆದುರಾಗಿ ನಾಲ್ಕನೆ ಮನೆಯೊಳ್
ವಂಟೆ ರಥ ನಾಲ್ಕರಲಿ ಐದರಲಿ ಪತಾಕೆ।
ನಾಥ ಮಂತ್ರೀಪದಕೆ ನಾಲ್ಕನೆ ಕಡೆ ವಾಜೀರಥ
ಬಲಸಮವಾಗಿ ರಚಿಪುದಾನೆ।
ಆರು ಮೊಹರು ಸಾಲಿಗಾರು ಕೆಳಗಡೆ ಪ್ಯಾದೆ
ಕರಿಮುಖದಳೊಂದು ಯರಡು ಸಮದಿ।
ಅಂತು ತಾರಾರ್ಕಶಶಿ ಸಂಖ್ಯೆ ಆಟಗಳಲಿ
ಉಚಿತ ಭವದೀಯ್ಯ ಗಾರುಡವ್ಯೂಹದೊಳಗೆ
ಕಮಲಂ ಭವ ಹೊಕ್ಕರು ಕಟ್ಟಲಹುದೇ
ಚತುರಗುಣಸಾಂದ(ದ್ರ) ಕೃಷ್ಣರಾಜಕ್ಷಿತೀಂದ್ರ ॥ '

ಇದಕ್ಕೆ ಟೀಕು ಈ ರೀತಿಯಾಗಿದೆ -

'ಈ ಆಟದಲಿ ರಂಗು ಯರಡರಿಂದಾ ಕಾಯಿಗಳು ೪೬ಕ್ಕೆ ಅರಸು ೨
ಪ್ರಧಾನೀ ೪ ವಂಟೆ ೪ ರಥ ೪ ಪತಾಕ ೪ ಕುದುರೆ ೪ ಆನೆ ೪
ಆಳು ೨೪ ಅಂತ್ತು ೪೮ಕಾಯಿಗಳು - ಯೀ ಆಟಕೆ ಸಾಲ್ಲು ೧೫ಕೆ
ಮನೆ(ಗಳು) ೧೭ಲ್ಲು
ಸಾಲು ೧೭ಕೆ ೧೪೪ ಮನೆ(ಗಳು) - ಯೀ ಕಾಯಿಗಳ ನಡಸುವ ಕ್ರಮ।
ಅರಸು ಪ್ರಧಾನೀ ವಂಟೆ ಕುದುರೆ ಆನೆ ಆಳುಗಳು ಸಹಾ ಮೊಗಲಾಯಿ
ಚತುರಂಗದಂತೆ ನಡಸೂವದು॥ ರಥವನ್ನು ಆನೆಯಂತೆ ನಾಲ್ಕು
ಬೀದಿಯಲ್ಲು

ತಾನುಯಿರುವ ಮನೆಯಲ್ಲದೆ ಯರಡು ಮನೆ ಬಿಟ್ಟು ಆಚೆ ಮನೆಗೆ ನಡಿಸೂವದೂ॥ ಪತಾಕವಂನ್ನು ಮೂಲೆ ಮೇಲೆ ತಾನು ಯಿರೂವ ಮನೆಯಲ್ಲದೆ
ಮಧ್ಯ ೧ ಮನೆ ಬಿಟ್ಟು ಆಚೆ ಮನೆಗೆ ನಡಸೂವದೂ॥ '

ಇದಾದಮೇಲೆ ಈ ಚದುರಂಗದಾಟದ ೧೪೪ ಮನೆಗಳಲ್ಲಿ ಇರುವ 'ಚತುರಂಗ ಗತಿಭೇದಕ್ರಮ'ವನ್ನು ಶ್ಲೋಕರೂಪವಾಗಿ ಹೇಳಿ ಮುಗಿಸಿದ್ದಾರೆ.

(೪) ಸಮಾಪ್ತಿ

ಇಲ್ಲಿಗೆ ಕೌತುಕನಿಧಿಯ ಭಾಗ ಮುಗಿದಂತೆ. ಆದರೆ, ಮೊದಲೆ ತಿಳಿಸಿದಂತೆ, ಚತುರಂಗದ ಶ್ಲೋಕಗಳು ಆದೊಡನೆ, 'ಅಥ ಶ್ರೀಚಕ್ರೋದ್ಧಾರಶ್ಲೋಕಃ॥ ' ಎಂದು ವಾಮಕೇಶ್ವರತಂತ್ರದಿಂದ ಶ್ರೀಚಕ್ರದ ಸ್ವರೂಪವನ್ನು ಕುರಿತಂತೆ ಶ್ಲೋಕಗಳನ್ನು ಉದ್ಧರಿಸಿದ್ದಾರೆ; ಇದಾದ ಮೇಲೆ 'ಶಂಕರಾಚಾರ್ಯಕೃತ ಸೌಂದರ್ಯಲಹರ್ಯಾಂ' ಎಂದು ಪ್ರಕಾರಾಂತರದಿಂದ ಶ್ರೀಚಕ್ರಲಕ್ಷಣವನ್ನು ಹೇಳಿದ್ದಾರೆ; ಮುಂದೆ ಶ್ರೀಚಕ್ರಸ್ಥ ಯೋಗಿನೀ ಸಂಕೇತನಾಮಗಳನ್ನು ಪಟ್ಟಿಮಾಡಿದ್ದಾರೆ. ಇವೆಲ್ಲ ಕೌತುಕನಿಧಿಗೆ ಅಪ್ರಸ್ತುತವಾದ ವಿವರಗಳು. ಲಿಪಿಕಾರರ ಪ್ರಮಾದದಿಂದಲೋ, ಬೇರೆ ಯಾವ ಕಾರಣದಿಂದಲೋ ಇವನ್ನು ಇಲ್ಲಿ ಸೇರಿಸಿದ್ದಾರೆ. ಕೌತುಕನಿಧಿ ಮುಗಿದದ್ದು ಯಾವ ಪುಷ್ಪಿಕೆಯಿಂದಲೂ ಸ್ಪಷ್ಟವಾಗುವುದಿಲ್ಲ. ದೇವನಾಗರೀಲಿಪಿಯ ಪ್ರಕಟಣೆಯಲ್ಲೇನೋ ಶ್ರೀಚಕ್ರವಿವರಗಳಾದಮೇಲೆ ಸಾಂಪ್ರದಾಯಿಕವಾದ ಪುಷ್ಪಿಕೆಯಿದ್ದು ಕಡೆಯಲ್ಲಿ 'ಶ್ರೀತತ್ತ್ವನಿಧ್ಯಾಖ್ಯಿ ಗ್ರಂಥೇ ಪತ್ರಿಕಾಕ್ಷಕ್ರೀಡಾದಿಮಹಾಕೌತುಕ ನಿರೂಪಣಂ ನಾಮ ನವಮೋ ನಿಧಿಃ ಸಂಪೂರ್ಣಃ' ಎಂದಿದೆ. ಇದು ನನ್ನಲ್ಲಿರುವ ಹಸ್ತಪ್ರತಿಯಲ್ಲಿಲ್ಲ.

ಇದರಲ್ಲಿ ಶ್ರೀಚಕ್ರವನ್ನು ಕುರಿತಂತೆ ದೇವತೆಗಳನ್ನು ಹೇಳಿದಮೇಲೆ ಗ್ರಂಥರಚನೆಗೆ ಬಳಸಿಕೊಂಡಿರುವ ಆಕರಗಳ ಪಟ್ಟಿ ಕಂಡುಬಂದು,

'ಪೂರ್ವೋಕ್ತಾನ್ ಕರಲಿಂಗೇಂದುಸಂಖ್ಯಾನ್ ಗ್ರಂಥಾನ್ ಯಥಾಮತಿ
ಸಮಾಲೋಕ್ಯ ಸಮಾ - ರಂ ಸರ್ವಹಿತೈಷಿಣಾ।
ಶ್ರೀ ಚಾಮುಂಡಾಕೃಪಾಪೂರ್ಣ ಕೃಷ್ಣರಾಜೇನ ಕಲ್ಪಿತಃ।
ಗ್ರಂಥ(ಃ) ಶ್ರೀತತ್ವನಿಧ್ಯಾಖ್ಯೋ ಜೀಯ್ಯಾದಾಚಂದ್ರತಾರಕಂ॥
ಶ್ರೀ - ಕೃಷ್ಣಾಯ ನಮಃ - ॥ ಶ್ರೀ ಶ್ರೀ ಶ್ರೀ '

ಎಂದು ಗ್ರಂಥಪರಿಸಮಾಪ್ತಿಯ ಸೂಚನೆಯಿದೆ. ಅನಂತರ '. . . ರಾಜಮಹಾರಾಜಕಂಠೀರವ ವಿರಚಿತ ಶ್ರೀತತ್ವನಿಧ್ಯಾಖ್ಯಿ ಗ್ರಂಥದ ನವನಿಧಿಗಳಲ್ಲಿರುವ ಪ್ರಮೇಯಗಳ ಸೂಚೀಪತ್ರ' ಎಂದು ಹಸ್ತಪ್ರತಿಯ ಒಂದೊಂದು ಪತ್ರದಲ್ಲೂ ಇರುವ ವಿಷಯಗಳ ಪರಿವಿಡಿಯನ್ನು ಪಟ್ಟಿಮಾಡಿದ್ದಾರೆ. ಈ ಪರಿವಡಿಯಂತೆ 'ದೇವೀಸಾಯುಜ್ಯ ಮುಕ್ತಿಕಾರ್ಯಕಾರಣದ ಲೆಕ್ಕ ೧೬೯ನೆ ಪತ್ರದವರಿಗೆ' ಎಂಬ ಒಕ್ಕಣೆಯಿದೆ. ಮುಂದಿನ ಭಾಗ ನನ್ನಲ್ಲಿರುವ ಹಸ್ತಪ್ರತಿಯಲ್ಲಿ ನಷ್ಟವಾಗಿದೆ; ಇರುವ ಪರಿವಿಡಿಯ ಪತ್ರಗಳೂ ತ್ರುಟಿತವಾಗಿವೆ.

ತಾವು ಬಳಸಿಕೊಂಡಿರುವ ಆಕರಗ್ರಂಥಗಳನ್ನು ಸಂಸ್ಕೃತಶ್ಲೋಕಗಳಲ್ಲಿಯೇ ಪಟ್ಟಿಮಾಡಿದ್ದಾರೆ. ಹಸ್ತಪ್ರತಿಯಲ್ಲಿ ಇವನ್ನು ಬರೆದಿರುವ ಎರಡು ಪತ್ರಗಳ ಬಲಭಾಗ ಸ್ವಲ್ಪಮಟ್ಟಿಗೆ ಹಾಳಾಗಿದೆ. ಉಳಿದಂತೆ ಗ್ರಂಥಗಳನ್ನು ಕೆಳಗೆ ಕಾಣಿಸಲಾಗಿದೆ -

(೧) ಕಲ್ಪಗಳು - ಚಂಡಿಕಾಕಲ್ಪ, ಷೋಢಾಕಲ್ಪ, ಷೋಡಶೀಕಲ್ಪ, . . . ದುರ್ಗಾಕಲ್ಪ, . . . ರಾಮತಾರಕಕಲ್ಪ, ಶೂಲಿನೀಕಲ್ಪ, ಪ್ರತ್ಯಂಗಿರಾಕಲ್ಪ, ಇಂದ್ರಾಕ್ಷೀಕಲ್ಪ, ... ದೇವೀಕಲ್ಪ, ಶೀತಳಾಕಲ್ಪ, ಸ್ವಪ್ನವಾರಾಹೀಕಲ್ಪ, ಸ್ತ್ರಿಚಕಲ್ಪ, ಲಕ್ಷ್ಮೀನೃಸಿಂಹಕಲ್ಪ, ಅನಂತಕಲ್ಪ, ತ್ರಿಪುರಸುಂದರೀಕಲ್ಪ, ಅಶ್ವತ್ಥಕಲ್ಪ, ತುಳಜಾಭವಾನೀಕಲ್ಪ, . . . ಆಸುರೀಕಲ್ಪ, ಬಗಳಾಕಲ್ಪ, ವಟುಕ ಭೈರವಕಲ್ಪ, ದಶಪಾಪಹರಾಕಲ್ಪ, ಸ್ವರ್ಣಾ . . . ಕಲ್ಪ, ಲಘುಶ್ಯಾಮಲಾಕಲ್ಪ, ಆಶ್ವಲಾಯನಕಲ್ಪ, ಆತ್ರೇಯಕಲ್ಪ, ಕಾರ್ತಿಕೇಯಕಲ್ಪ, . . . ಚಂದಿರಾಪರಮೇಶ್ವರೀಕಲ್ಪ, ಹನೂಮತ್ಕಲ್ಪ,

(ಇವನ್ನು 'ಏತೇ ಕಲ್ಪಾಃ ವೇದಮೂರ್ತಿಸಂಖ್ಯಾಕಾಃ' ಎಂದು ಎಣಿಸಿದ್ದಾರೆ. ವೇದವೆಂದರೆ ೪, ಮೂರ್ತಿಯೆಂದರೆ ೩; ಕಲ್ಪಗಳ ಸಂಖ್ಯೆ ೩೪ ಆದುವು).

(೨) ಆಗಮಗಳು - . . . . ಶೈವಾಗಮ, ಪಾಂಚರಾತ್ರಾಗಮ, ಕಾರಣಾಗಮ, ವೈಖಾನಸಾಗಮ, ... ಮಂತ್ರಾಗಮ,

(ಇವನ್ನು 'ಋತುಸಂಖ್ಯಾಸ್ತು ವಿಜ್ಞೇಯಾ ಆಗಮಾಃ' ಎಂದು ಎಣಿಸಿದ್ದಾರೆ. ಋತುವೆಂದರೆ ೬; ಆರು ಆಗಮಗಳು, ಮೊದಲು ಒಂದು ಆಗಮದ ಹೆಸರು ತಿಳಿಯುವುದಿಲ್ಲ, ಕಡೆಯದು ಅಸ್ಪಷ್ಟವಾಗಿದೆ)

(೩) ತಂತ್ರಗಳು - ಶಾಬರತಂತ್ರ, ... ಶರಭತಂತ್ರ, ಉಡ್ಡಾಮರತಂತ್ರ,ವಾಮಕೇಶ್ವರತಂತ್ರ, ಆಯುರ್ವೇದತಂತ್ರ,

(ಇವನ್ನು 'ತಂತ್ರಾಣಿ ರಸಸಂಖ್ಯಾನಿ ಪ್ರಖ್ಯಾತಾನಿ ಮಹೀತಲೆ' ಎಂದು ನಿರ್ದೇಶಿಸಿದ್ದಾರೆ. ರಸವೆಂದರೆ ೯. ಇಲ್ಲಿ ಐದು ಮಾತ್ರ ಕಾಣಸಿಗುತ್ತವೆ)

(೪) ಸಂಹಿತೆಗಳು - ಪಾದ್ಮಸಂಹಿತೆ, ನಾರದಸಂಹಿತೆ, ... , ಭೃಗು ಸಂಹಿತೆ, ತಂತ್ರಸಾರಸಂಹಿತೆ, ಜ್ಞಾನಾರ್ಣ(ವ), ... , ಶಂಕರಸಂಹಿತೆ, ಲಕ್ಷ್ಮೀನಾರಾಯಣಸಂಹಿತೆ,

(ಇವನ್ನು 'ಸಂಹಿತಾಃ ನವ . . . ರತ್ನಸಂಖ್ಯಾಕಾಃ ಕೀರ್ತಿತಾ ಧರ್ಮಬೋಧಕಾಃ' ಎಂದು ಎಣಿಸಲಾಗಿದೆ, ನವರತ್ನವೆಂದರೆ ೯. ಇಲ್ಲಿ ಎರಡು ಸಂಹಿತೆಗಳು ಯಾವುವೆಂದು ತಿಳಿಯುವುದಿಲ್ಲ; ಉಳಿದ ಏಳು ಇವೆ)

(೫) ಜ್ಯೋತಿಷ್ಯ ಗ್ರಂಥಗಳು - ಜ್ಯೋತಿಷರತ್ನಮಾಲಾ, ಜಾತಕಾಭರಣ, ... , . . . ಸೂರ್ಯಸಿದ್ಧಾಂತ, ಕಾಲಪ್ರಕಾಶಿಕಾ, ಜ್ಯೋತಿಷಸಂಗ್ರಹ, ಜ್ಯೋತಿಷಾರ್ಣವ, . . . , ಕಾಲಾಮೃತ, ವಿದ್ಯಾಮಾಧವೀಯ, ಬ್ರ(ಬೃ)ಹಜ್ಜಾತಕ, ದೈವಜ್ಞವಿಲಾಸ, ... ರತ್ನ, ಹೋರ, ಮುಹೂರ್ತಗಣಪತಿ, ನಕ್ಷತ್ರ-ಚೂಡಾಮಣಿ, ...,

(ಇವನ್ನು 'ಗ್ರಂಥಾಸ್ಯ(ಸ್ಯು) ಜ್ಯೌತಿಷಿ ಖ್ಯಾತಾಃ ಕ್ರೌಂಚಭೇದನಸಂಖ್ಯಕಾಃ' ಎಂದು ಕಾಣಿಸಿದ್ದಾರೆ. ಕ್ರೌಂಚಭೇದನನೆಂದರೆ ಸುಬ್ರಹ್ಮಣ್ಯ;

ಸುಬ್ರಹ್ಮಣ್ಯನ ರೂಪಗಳು ಸಪ್ತದಶ, ಎಂದರೆ ಹದಿನೇಳು, ಜ್ಯೋತಿಷಗ್ರಂಥಗಳ ಸಂಖ್ಯೆ ಇದು)

(೬) ಪುರಾಣಗಳು - ಸ್ಕಾಂದ, ಪಾದ್ಮ, ... ಆಗ್ನೇಯ, ನಾರಸಿಂಹ, ಭವಿಷ್ಯೋತ್ತರ, ಬ್ರಹ್ಮಾಂಡ, ಮುದ್ಗಲ, ಕೂರ್ಮ, ವಿಷ್ಣುಧರ್ಮೋತ್ತರ,...., ಭಾಗವತ, ಬ್ರಹ್ಮಕೈ(ವೈ)ವರ್ತ, ಮಾರ್ಕಂಡೇಯ, ವಿಷ್ಣು,....,

(ಇವುಗಳ ಸಂಖ್ಯೆಯನ್ನು ಹೇಳುವ ಸಾಲು ಕಲಸಿಹೋಗಿದೆ)

(೭) ಧರ್ಮಶಾಸ್ತ್ರಗ್ರಂಥಗಳು - ಧರ್ಮಾಬ್ಧಿಸಾರ, ಹೇಮಾದ್ರಿ, ಮುಯೂಖ, ಭಟ್ಟಭಾಸ್ಕರ, ಮಾಧವೀಯ,..., ... ಸಾರ, ವೈಕುಂಠ ದೀಕ್ಷಿತೀಯ,

(ಇವನ್ನು 'ಧರ್ಮಶಾಸ್ತ್ರಸ್ಥಿತಾ ಗ್ರಂಥಾಸ್ತಾಂಬೂಲಗುಣಸಂಖ್ಯಕಾಃ' ಎಂದು ಕಾಣಿಸಿದ್ದಾರೆ. ತಾಂಬೂಲ ಗುಣವೆಂದರೆ ೧೩ ಎಂದು ಮುಮ್ಮಡಿಯವರದ್ದೇ ಸಂಖ್ಯಾರತ್ನಕೋಶದಿಂದ ತಿಳಿಯುತ್ತದೆ. 'ವೀಥ್ಯಂಗಮಪಿ ತಾಂಬೂಲಗುಣೋತಿಜಗತೀ ತಥಾ (ಏತೇ ಚ ಸರ್ವೇ ತ್ರ್ಯಧಿಕದಶಸಂಖ್ಯಾ ಪ್ರಬೋಧಕಾಃ॥ ೩೬ ॥)

(೮) ಮಂತ್ರಶಾಸ್ತ್ರಗ್ರಂಥಗಳು - ..., ಸ್ಕಂದಯಾಮಳ, ಮಹಾಲಕ್ಷ್ಮೀ ರತ್ನಕೋಶ, ರುದ್ರಯಾಮಳ, ... ತಿಲಕ, ಅಥರ್ವಣರಹಸ್ಯ, ಮಂತ್ರಸಾರ, ಸೋಮನಾಥವಲ್ಲೀ, ಶಿಂಗಾಭಟ್ಟೀಯ, ನಾರಾಯಣಭಟ್ಟೀಯ, ಸಿದ್ಧಾಂತಶೇಖರ, ಪ್ರಯೋಗರತ್ನ, ಶೌನಕೀಯ, ಶೇಖರ, ಸೌಂದರ್ಯ (ಲಹರಿ) ..., (ಅ)ರ್ಚನಮಂಜರೀ.

(ಇವನ್ನು ಕುರಿತು ಮಂತ್ರಶಾಸ್ತ್ರಸ್ಥಿತಾ ಗ್ರಂಥಾಸ್ತತ್ತದ್ವೇವಾರ್ಚನೋಚಿತಾಃ' ಎಂದಷ್ಟೇ ಹೇಳಿದ್ದಾರೆ; ಗ್ರಂಥ ಸಂಖ್ಯೆಯನ್ನು ಸೂಚಿಸಿಲ್ಲ)

(೯) ಇತರಗ್ರಂಥಗಳು - ...ಮಲ್ಲಾರೀಮಾಹಾತ್ಮ್ಯ, ತುಳಸೀಮಾಹಾತ್ಮ್ಯ, ಶಾರೀರಕಭಾಷ್ಯ, ಹಯಗ್ರೀವಸ್ತುತಿ, ... ಶಿವತತ್ತ್ವರತ್ನಾಕರ, ರಾಮಾನುಜವಿಜಯ, ಭಕ್ತವಿಲಾಸ, ..., ಶ್ರೀಮದ್ವೇಶಿಕಸಂಪ್ರೋಕ್ತಮಂಗ...', ಲಕ್ಷ್ಮೀನಾರಾಯಣಸಂವಾದ, ರಾಮಾಯಣ, ಲಲಿತೋಪಾಖ್ಯಾನ, ವೈದ್ಯಶಾಸ್ತ್ರ, ...

(ಇವನ್ನು ಕುರಿತಂತೆ 'ಗ್ರಂಥಾಸ್ತ್ವಂಗೇಂದುಸಂಖ್ಯಕಾಃ' ಎಂದು ಹೇಳಿದ್ದಾರೆ. ಅಂಗ ಎಂದರೆ ೬, ಇಂದು ಎಂದರೆ ೧; ಗ್ರಂಥಸಂಖ್ಯೆ ೧೬ ಎಂದಾಯಿತು)

ಒಟ್ಟು ಆಕರಗ್ರಂಥಸಂಖ್ಯೆಯನ್ನು ಸಮಾಪ್ತಿಶ್ಲೋಕವು 'ಕರಲಿಂಗೇಂದು - ಸಂಖ್ಯಾನ್' ಎಂದು ನಿರ್ದೇಶಿಸಿದೆಯಷ್ಟೆ; ಈ ಶ್ಲೋಕದ ಪಾಠವನ್ನು ಮೇಲೆ ಕೊಡಲಾಗಿದೆ. ಕರ ಎಂದರೆ, ೨ (ಕೈಗಳು, ಅವರದ್ದೇ ಸಂಖ್ಯಾರತ್ನಕೋಶ, ಶ್ಲೋಕ ೨ 'ಪಾದದ್ವಂದ್ವಕರಭ್ರುವಃ'), ಲಿಂಗ ಎಂದರೆ ೩(ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗಗಳು; ಅದೇ ಗ್ರಂಥ, ಶ್ಲೋಕ ೩,'ಋಣದೋಷಲಿಂಗಾಗ್ನಿಮಂಡಲಾಃ'), ಇಂದು ಎಂದರೆ ೧ (ಚಂದ್ರ, ಅದೇ ಗ್ರಂಥ, ಶ್ಲೋಕ ೧, 'ಪ್ರಪಂಚಶ್ಚಂದ್ರಮಾಸ್ತಥಾ'). 'ಅಂಕಾನಾಂ ವಾಮತೋ ಗತಿಃ' ಎಂಬ ಸೂತ್ರದಿಂದ ಈ ಸಂಖ್ಯೆಯು ೧೩೨ ಎಂದಾಗುತ್ತದೆ. ಇಷ್ಟು ಮುಮ್ಮಡಿಯವರು ನೋಡಿರುವ ಗ್ರಂಥಗಳು. ಇವುಗಳ ಆಧಾರದ ಮೇಲೆ ಶ್ರೀತತ್ತ್ವನಿಧಿಯು ಸಿದ್ಧವಾಗಿದೆಯೆಂದು ಅವರ ಒಕ್ಕಣೆ.

'ಚಂದ್ರನೂ ನಕ್ಷತ್ರಗಳೂ ಇರುವವರೆಗೂ' ತಮ್ಮ ಈ ಶ್ರೀತತ್ತ್ವನಿಧಿಗ್ರಂಥವು ಇರಬೇಕೆಂಬುದು ಅವರ ಆಸೆಯಾಗಿದ್ದಿತು ('ಜೀಯಾದಾಚಂದ್ರತಾರಕಂ'). ಅವರು ಎಷ್ಟೋ ಶ್ರಮವಹಿಸಿ, ಉತ್ಸಾಹದಿಂದ, ಜಾಗರೂಕತೆಯಿಂದ ಈ ಗ್ರಂಥವನ್ನು ಸಿದ್ಧಪಡಿಸಿರುವುದು ಯಾರಿಗಾದರೂ ತಿಳಿದೀತು; ಗ್ರಂಥದಲ್ಲಿರುವ ವಿವರಗಳಿಗೆ ಸೊಗಸಾದ ಚಿತ್ರಗಳನ್ನೂ ತಮ್ಮ ಆಸ್ಥಾನದ ಕಲಾವಿದರಿಂದ ಬರೆಯಿಸಿರುವುದು ಅಪೂರ್ವವಾದ, ಅನ್ಯಾದೃಶವಾದ ಸಾಹಸ. ಇದು ಕನ್ನಡನಾಡಿಗೆ ಮಾತ್ರವಲ್ಲ, ಇಡೀ ಭಾರತಕ್ಕೆ ಗೌರವವನ್ನು ತರುವಂಥ ಗ್ರಂಥ.